REGISTERED No. B. 2891

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಾರಿಗೂ ಅಂಜುವವನಲ್ಲ|.

ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಲಿಸಿ ॥ ವ. ೨೨೪ ॥ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆ ೧೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೬ ನೆಯ ನವ್ಹೆಂಬರ ೧೯೩೩. | ಸಂಚಿಕೆ ೧೩.

ಜನಸೇವೆಯೇ ದೇವರಸೇವೆ.

ಪಂ. ಜವಾಹರಲಾಲರ ಅಭಿಪ್ರಾಯ.

ಒಕ್ಕಲಿಗರ ಸಂಘಟನೆ ಶಕ್ಯವಿಲ್ಲ.

ಇದು ಸಾಮಾಜಿಕ ಕ್ರಾಂತಿಯ ಕಾಲ.

ಪಂ. ಜವಾಹರಲಾಲರು

ಕೂಲಿಕಾರರ ಸಂಗಡದ ಪ್ರಮುಖರಾದ ಬ್ಯಾ. ಗಿ ಎಂಬುವವರು ಪಂ. ಜವಾಹರಲಾಲ ನೆಹರು ರವರಿಗೆ ಬರೆದ ಪತ್ರಕ್ಕೆ ಉತ್ತರವಾಗಿ ತಿಳಿಸಿದ್ದರಲ್ಲಿ ಈ ಕೆಳಗಿನ ಅಭಿಪ್ರಾಯವಿದೆ.

"ನಾವು ಈಗ ಸಾಮಾಜಿಕ ಕ್ರಾಂತಿಯ ಸಂಕ್ರಮಣಾವಸ್ಥೆಯಲ್ಲಿರುವುದರಿಂದ ನಿಶ್ಚಯಾತ್ಮಕವಾದ ಯಾವ ವಿಧಾಯಕ ಮತ್ತು ಸಂಘಟನೆಯ ಕಾರ್ಯಕ್ರಮಗಳನ್ನೂ ಗೊತ್ತುಪಡಿಸಲು ಬರುವಂತಿಲ್ಲ. ಒಕ್ಕಲಿಗರ ಸಂಘಟನೆಯ ಕಾರ್ಯವೂ ಕಠಿಣತರವಾದುದಾಗಿಯೇ ಇದೆ."

SANGAM CLOTH STORES
Prop: M. S. Hundekar & Sons,
P.O: TERDAL - [illegible]
Dt. Bijapur. (Deccan)

ದೇಹವೇ ದೇವಾಲಯ.

ಕಳಕೊಳ್ಳುವ ಮುದಲು

ಎಚ್ಚರಾಗಿರಿ!



ಗಂಡಾಂತರಕ್ಕೊಳಗಾಗಬೇಡಿರಿ!

ಎ. ಎಸ್. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಕೆ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟ
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ:-
ಆಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ದೆಕ್ಕನ)

ಸಿದ್ಧೇಶ್ವರ ತಿಜೂರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ತಿಂಗಡಿ ಹಚ್ಚುವವಿಲ್ಲೇನ?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ. ಈ ತಿಜೋರಿಯ ಪಣೆಗುಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಬಿಟ್ಟರೇ? ಕಳ್ಳರು ಕಳವು ಮಾಡಂಕ ಸುರಿದರೆ ಇಂಥ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳವಪಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆವ್ವಾ ರಾಮಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ [illegible] ಮಾರಾಕ ಹೆತ್ತಿ ಪಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ನೋಡಿ ಹೊಗಿ ಹೀಗಾತವ್ವಾ

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳುವರ ಕೇಳುವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾಬರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನತ್ಯ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಓಡ್ಯಾಡಿ ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮುಂ ನೋಡಿದ ನನ್ನ ಮ್ಯಾಲ ಸಿದ್ಧೇಶ್ವರ ಕಂಪನಿಯು ತಿಜೋರಿ ಕೊಂಡಾರ ಸುಖದಿಂ [illegible] ಇದನ್ನು ಕಣ್ಣಾಲೆ ನೋಡಿ [illegible] ನೀವ್ರ ಬಾಳ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಲೆತ್ತಿನು ನಾಕುನ [illegible] ನನ್ನ ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪ್ರಲಿಕೇಶಿಯ ಚರಿತ್ರೆ	೦-೧೨-೦
ವೀರಶೈವ ಮತಬೋಧೆ	೧-೩-೦	ಕಚದೇವನ ಕಥೆ	೦-೧೨-೦
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧೨-೦
ಉದ್ಯೋಗಾವಶ್ಯಕತೆಗಾಗಿ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧೨-೦
ಬಸವ ಜೋಧ್ಯಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧೨-೦
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧೨-೦
ಪ್ರಭುದೇವರ ಕಥೆ	೦-೧೨-೦	ದೇವಯಾನಿಯ ಕಥೆ	೦-೧೨-೦
ಏಲಕಲವ್ಯನ ಕಥೆ	೦-೧೨-೦	ಭಜನಾವಳಿ	೦-೧೨-೦
ಜಪತಪಾಯನ ಚರಿತ್ರೆ	೦-೧೨-೦	ಬಸವಾವತಾರ	೦-೦-೦
[illegible]ನುಹಾದೇವಿಯ ಚರಿತ್ರೆ	೦-೧೨-೦	ರಾಷ್ಟ್ರಗೀತೆ	೦-೦-೦

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ ಸ್ಟೇ ಆಲಮಟ್ಟಿ ಜಿ ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ನವ್ಹಂಬರ್ ತಾರೀಖು ೬ ನೆಯ ಸೋಮವಾರ | ಸಂಚಿಕೆ ೧೩.

ಪ್ರಜಾಸತ್ತಾತ್ಮಕ ಸ್ವರಾಜ್ಯ ಪಕ್ಷದ ಉದಯ!

ಶ್ರೀ. ನ. ಚಿ. ಕೇಳಕರರು ಬೆಳಿಗೆ ಬಂದರು!!

ಶಾಸನ ಸಭೆಗಳಿಲ್ಲದೆ ವಿಧಾಯಕ ಕಾರ್ಯವು ಹೇಗೆ?

ಹೋದ ತಿಂಗಳು ೩೦ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಮಹಾರಾಷ್ಟ್ರ ರಾಜಕೀಯ ಪರಿಷತ್ತಿನ ಅಧಿವೇಶನವು ಬ್ಯಾ. ರಾಮರಾವ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ನೆರೆಯಿತು. ರಾಷ್ಟ್ರೀಯ ಸಭೆಯು ಶಾಸನ ಸಭೆಗಳನ್ನು ಬಿಟ್ಟುಕೊಟ್ಟ ಇಲ್ಲಿಯವರೆಗೆ ಮಾಡಿದ ಚಟುವಟಿಕೆಗಳಿಂದ ಏನೂ ಪರಿಣಾಮವಾಗಲಿಲ್ಲೆಂದೂ ಮತ್ತು ಶಾಸನ ಸಭೆಗಳ ದ್ವಾರದಿಂದಲೇ ಏನಾದರೊಂದು ಲೋಕ ಹಿತಕಾರಕ ವಿಧಾಯಕ ಕಾರ್ಯಕ್ರಮವನ್ನು ಮಾಡಲು ಶಕ್ಯವೆಂದೂ ಈ ಹೊಸ ಪಕ್ಷದವರ ಅಭಿಪ್ರಾಯ. ಇದರ ಸ್ವಾಗತಾಧ್ಯಕ್ಷರಾದ ಶ್ರೀ. ಜಮನಾದಾಸ ಮೆಹತಾ ಇವರು ಈ ಪಕ್ಷ ಸ್ಥಾಪಿಸಬೇಕೆಂಬ ವಿಚಾರವುಂಟಾದ ಐದು ವಾರಗಳಲ್ಲಿಯೇ ಈ ಪಕ್ಷಕ್ಕೆ ಇಷ್ಟು ಜನ ಬೆಂಬಲವು ದೊರೆತುದರಿಂದ ಆನಂದವನ್ನು ವ್ಯಕ್ತಪಡಿಸಿದರು.

ಆ ಮೇಲೆ ಪೂರ್ಣ-ಸ್ವರಾಜ್ಯವೇ ತಮ್ಮ ಧ್ಯೇಯವೆಂದೂ ಆದರೆ ರಾಷ್ಟ್ರೀಯ ಸಭೆಯವರಂತೆ ಮನಬಂದಂತೆ ತಮ್ಮ ಧ್ಯೇಯವನ್ನು ಬದಲಿಸುವದಿಲ್ಲವೆಂದೂ ಹೇಳಿದರು. ಆ ಮೇಲೆ ಶ್ರೀ. ಕೇಳಕರರು ತಮ್ಮ ಭಾಷಣವನ್ನು ಪ್ರಾರಂಭಿಸುವ ಮೊದಲು ದಿವಂಗತ ಶ್ರೀ. ವಿಠ್ಠಲಭಾಯಿ ಪಟೇಲ ಇವರ ನಿಧನಕ್ಕಾಗಿ ನುಃಖೋದ್ಗಾರವನ್ನು ತೆಗೆದು ಅಂದದ್ದೇನಂದರೆ— "ತಿಸ್ತು, ತ್ಯಾಗ, ಐಹಿಕ ಭೋಗ. ವಿರಕ್ತಿ ಮೊದಲಾದ ಯೌಗಿಕ ಗುಣಗಳುಳ್ಳ ವ್ಯಕ್ತಿಯೇ ಮೈಯಕ್ತಿಕ ಶಾಸನೋಲ್ಲಂಘನೆಯನ್ನು ಮಾಡಬಲ್ಲನು. ಆದರೆ ಬಹುಜನ [illegible] ಜನವರು ಮಾಡಬೇಕೇನು? ಖಾದಿ, ಮತ್ತು ಅಸ್ಪೃಶ್ಯತಾ ನಿವಾರಣೆ, ಇಷ್ಟರಿಂದಲೇ ಸಾಲದು. ಜನರಿಗೆ ತಮ್ಮ ಪಾಲದಭಾರವು ಕಡಿಮೆಯಾಗಬೇಕಾಗಿದೆ. ಕೆಲವರಿಗೆ ಒತ್ತಾಯದ ಶಿಕ್ಷಣವೂ ಔದ್ಯೋಗಿಕ ಶಿಕ್ಷಣವೂ ಬೇಕಾಗಿವೆ. ಒಕ್ಕಲಿಗರ, ಮತ್ತು ಕೂಲಿಕಾರರ ಆರ್ಥಿಕ ಸ್ಥಿತಿಯು ಸುಧಾರಿಸಬೇಕಾಗಿದೆ. ಇಂಥ ಅನೇಕ ಸಂಗತಿಗಳ ಅವಶ್ಯಕತೆ ಇದೆ. ಜನರಿಗೆ ಕೇವಲ ಅಸಹಕಾರಿತೆಯ ಸಾಧನವನ್ನು ಹೇಳಿದರೆ ಇವೆಲ್ಲ ಸಾಧ್ಯವಾಗುವವೇ? ಶಾಸನ ಸಭೆಗಳಿಂದ ಇವುಗಳಲೆ ಹೋ ಸಾಧ್ಯವಾಗದೆಯೂ ಇರಬಹುದು. ಆದರೆ ಅವುಗಳ ಸಹಾಯದಿಂದ ರಾಷ್ಟ್ರವಿಘಾತಕ ಕಾರ್ಯಗಳಿಗೆ ಕಡಿವಾಣ ಶಕ್ಯವಿದೆ.

ರಾಷ್ಟ್ರೀಯ ಸಭೆಯವರು ಶಾಸನ ಸಭೆಯನ್ನು ಸೇರುವ ಧೋರಣವನ್ನಿಟ್ಟುಕೊಂಡಿದ್ದರೆ ಈ ಹೊಸ ಪಕ್ಷವನ್ನು ಸ್ಥಾಪಿಸುವ ಅಗತ್ಯವೇ ಇರುತ್ತಿರಲಿಲ್ಲ. ಆದರೆ ರಾಷ್ಟ್ರೀಯ ಸಭೆಯವರು ಶಾಸನ ಸಭೆಗಳನ್ನು ತಿರಸ್ಕರಿಸಿದರೂ ಅಸ್ಪೃಶ್ಯರು ದೇವಾಲಯವನ್ನು ಪ್ರವೇಶಿಸುವ ವಿಷಯದಲ್ಲಿ ಮಾತ್ರ ಶಾಸನ ಸಭೆಗಳನ್ನು ಅವಲಂಬಿಸುವರು. ಶಾಸನ ಸಭೆಯ ವಿಷಯವಾಗಿ ರಾಷ್ಟ್ರೀಯ ಸಭೆಯವರ ದುರಾಗ್ರಹವು ಯಾವ ದಿವಸ ತಡಗುವದೋ ಆ ದಿವಸವೇ ಸುದಿನವು!!

ಈ ಪ್ರಕಾರವಾಗಿ ಶ್ರೀ. ಕೇಳಕರರು ಭಾಷಣ ಮಾಡಿದ ನಂತರ ಅಧ್ಯಕ್ಷರಾದ ಶ್ರೀ. ರಾಮರಾವ ದೇಶಮುಖರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. "ಅಂಧ ಶ್ರದ್ಧೆ, ಗೂಢ ತತ್ವ ಜ್ಞಾನ ಇವುಗಳ ಉಪಯೋಗವು ಅನ್ಯತ್ರವಾಗುತ್ತಿದ್ದರೂ ಪ್ರಜಾ ಸತ್ತೆಯ ಪ್ರಾಣಹರಣವನ್ನೇ ಮಾಡುತ್ತವೆ. ಈ ಪಕ್ಷವು ಮಂದ ಗತಿಯಿಂದ ಸಾಗುವದಾದರೂ ಇದು ಯಾವ ಪಕ್ಷಕ್ಕೂ ವಿರೋಧವನ್ನು ಮಾಡದು.

ಶಾಸನ ಸಭೆಗಳಿಗೆ ಹೋದಕೂಡಲೆ ಸ್ವರಾಜ್ಯ ಸಿಗುವುದೆಂದು ಈ ಪಕ್ಷವು ಎಂದೂ ತಿಳಿಯುವುದಿಲ್ಲ. ಶಾಸನ ಸಭೆಯು ಪ್ರಜಾ ಸತ್ತಾತ್ಮಕ ಸ್ವರಾಜ್ಯದ ಕಲೆಯನ್ನು ಕಲಿಯುವ ಶಾಲೆಯು. ನಮ್ಮ ಪಕ್ಷಕ್ಕೆ ಬಹುಮತವಾಗುವದಿಲ್ಲೆಂದು ನಾವು ಅವುಗಳನ್ನು ಬಿಟ್ಟುಕೊಟ್ಟರೆ ನಾವು ಪ್ರಜಾ ಸತ್ತೆಯ ಸಂಸ್ಥೆಗಳನ್ನು ನಡೆಯಿಸಲು ಅಸಮರ್ಥರೆಂದು ಸಿದ್ಧವಾಗುವದಿಲ್ಲವೆ? ಆಯರ್ಲಂಡಿನ ಸದ್ಯ [illegible] ಅಧ್ಯಕ್ಷರಾಗಿರುವ ಡಿ ವ್ಹೆಲರಾ ಇವರು ರಾಜನಿಷ್ಠೆಯ ಶಪಥವನ್ನು ನಿರಾಕರಿಸಿದರು. ವ್ಯಾಪಾರೀ ಯುದ್ಧವನ್ನು ಪ್ರಾರಂಭಿಸಿದರು ಇಂಥ ಎಷ್ಟೋ ಸಂಗತಿಗಳನ್ನು ಅವರು ಶಾಸನ ಸಭೆಗಳನ್ನು ಸುಟ್ಟುಕೊಟ್ಟು ಮಾಡಿದ್ದು ಶಕ್ಯವಿದ್ದಿತೇ? ಉಳ್ಳವರು ಮತ್ತು ಇಲ್ಲದವರು ಇವರಿಬ್ಬರ ಕಲಹವು ಸದ್ಯಕ್ಕೆ ಮುಗಿದು ಅಮರ ನೆನಿಸಿಕೊಂಡುವ ಅವಕಾಶವು ಕೊಣಾಗಿದಾ ನೆ." ಎಂದು ಹೇಳಿದರು.

ಮಂಚಣ್ಣನ ಹೊಂಚು.

(ಬರೆದವ— ಕೊಂಡಿ ಮಂಚಣ್ಣ.)

ಶರಣಸಂದೇಶ, ಶರಣಸಂದೇಶ ಎಂದು ನಮ್ಮ ಪೂರ್ವದ ಮಿತ್ರರಾದ ಶರಣರ ಉದಯವಾಗಿಯೂ ಬಹಳ ದಿವಸಗಳಾದವು. ಅಂದಮೇಲೆ ನನ್ನದುದಯವಾಗಬೇಡವ? ಶರಣರಿದ್ದಲ್ಲಿ ನಾನಿರಬೇಕು. ಇಲ್ಲದಿದ್ದರೆ ಈ ಜನರು ಮುಂದೆ ಏನು ಮಾಡಿಯಾರು ಏನು ಮಾಡಲಿಕಿಲ್ಲ?

※ ※ ※ ※ ※

ಈಗ ನೋಡಿರಿ, ನಮ್ಮ ರಾಜ್ಯವಿಲ್ಲ. ನಮ್ಮ ಜನರೂ ಬಹಳವಾಗಿ ಗಿಲುಮಿದಿಲ್ಲ. ದೇಶದಶುಂಬೆಲ್ಲ ಅವರೇ ಅವರು. ಅಂದಮೇಲೆ ನಮ್ಮ ಜಟಾಯೇಗೆ ನಡೆಯಬೇಕು? ಆದರೆ ಅಮಾತ್ಯರಾಗಿದ್ದ ನಮ್ಮಲ್ಲಿ ಯುಕ್ತಿಗಳಿಗೇನು ಕಡಿಮೆಯೇ?

ನಮಾಜದಲ್ಲಿ ಒಡಕು. ಆದರೆ ತನಗೆ ತಾನೇ ಹಾಳಾಗುತ್ತಿದೆ ಇದನ್ನು ಯಾರು ಹೇಳಬೇಕು? ಇಂಥ ಎಷ್ಟೋ ಗಾರುಡೀ ಮಂತ್ರಗಳನ್ನು ನಮ್ಮ ಪುರಾಣದಲ್ಲಿ ಓದಿದ್ದೇವೆ. ಶರಣರ ಮೊದಲಿನ ಕಟ್ಟಾ ಈಗ ಉಳಿದಿಲ್ಲ. ಅಂದಮೇಲೆ ಹೊಟ್ಟೆ ಬಾಕ ಶಿಷ್ಯರು ನಮಗೇನು ಕಡಿಮೆಯೇ! ಅವರ ಪ್ರಯತ್ನದಿಂದಲೇ ನಮ್ಮ ಕೆಲಸ ಚನ್ನಾಗಿ ನಡೆದಿರುವದು. ಇರಲಿ ಮೊನ್ನೆ ನಮ್ಮ ಶಿಷ್ಯನಿಗಾದ ಒಂದು ಸಂಗತಿ ಹೇಳುತ್ತೇನೆ. ಯಾರಲ್ಲಿಯೂ ಈ ಸುದ್ದಿ ಒಡೆಯಬೇಡಿರಿ. ಆ? ನಮ್ಮ ಶಿಷ್ಯರು ಬಹಳವಾಡಿ ದುಡ್ಡಿನ ಸಂಪನ್ನ ಕೆಲಸ ಮಾಡುವವರೆ ಹೆಚ್ಚು, ಒಂದು ಗ್ರಾಮ, ಮಹಾ ಕುಗ್ರಾಮ. ಹೇಳಿದರೂ ಕೇಳರು. ಕೇಳಿದರೂ ಮಾಡರು. ಅಲ್ಲಿ ನಮ್ಮ ಶಿಷ್ಯನೊಬ್ಬ ಕೆಲ ಪೋಕರಿಗಳನ್ನು ಕೂಡಿಸಿಕೊಂಡು ವಿದ್ಯಾ ಹೇಳುತ್ತಿದ್ದ.

※ ※ ※ ※ ※

ಮಹಾ ಪೋಕರಿಗಳವು. ಶಿಖಾ ಬಿಡಿ, ಚಂಡಿಕೆ ಬಿಡಿ. ಜುಟ್ಟಾ ಬಿಡಿ. ಎಂದು ಹೇಳೇ ಹೇಳಿದನು ಶಿಷ್ಯ. ವೈದಿಕರಿಗೆ ಶಿಖಾ ಬೇಡವೇ? ಅದೇನೋ ಇರಲಿ. ನಮ್ಮ ಶಿಷ್ಯರಾದ ಮೇಲಂತೂ ಬೇಕೇ ಬೇಕು. ಆ ಪೋಕರಿಗಳಾದರೋ ನಮ್ಮ ಅಪ್ಪ ಬಯ್ಯುತ್ತಾನೆ ನಮ್ಮ ಮಾನ ನಗುತ್ತಾನೆ ಎಂದು ಹಾರಿಸಿಹಾಕ ಹತ್ತಿದವು. ನಮ್ಮ ಶಿಷ್ಯನು ಗಟ್ಟಿಯಾಗಿ ಬಿಡಲೇಬೇಕೆಂದು ಹಟ ಹಿಡಿದ ಮಹಾಗಟ್ಟಿ ಶಿಷ್ಯನವನು. ಮಹಾ ಬೊಟ್ಟಿ ಸೊಡುಗರವರು.

ನಾಲ್ಕು ಮಂದಿ ಮಾಡುವದೇನು? ಶಾಸ್ತ್ರಿಗಳನ್ನು ಕೇಳಿದರು. ಜುಟ್ಟು ಬೇಕೇಬೇಕೆಂದರು. ಹುಡುಗರು ಒಲ್ಲೆನೆಂದೇ ಹಟ ಹಿಡಿದರು. ಕೋಯಿತು ನ್ಯಾಯ ಸ್ವಾಮಿಗಳ ತನಕ. ಅಷ್ಟರಲ್ಲೊಬ್ಬ ಪೋಕರಿ ಮಂಕುಬೂದಿ ಹಾಕಿದ.....! ಶಾಸ್ತ್ರಿಗಳ ಕಡೆಗೆ ಓಡುತ್ತ ಬಂದ ಆಪ್ತನಂತೆ.

"ಶಾಸ್ತ್ರಿಗಳೇ ಶಾಸ್ತ್ರಿಗಳೇ, ವೈದಿಕ ಕ್ರಿಯೆಗೆ ಜುಟ್ಟು ಬೇಕಂತೀರಿ. ಆದರ ವೈದಿಕರಿಗೆ ಮೀಸೆ ಇರಬಹುದೇ? ಆದ್ದರಿಂದಲೇ ಹುಡುಗರು ಒಪ್ಪಲೊಲ್ಲರು ನೋಡಿರಿ" ಎಂದು ಹೇಳಿಬಿಟ್ಟ.

ಶಾಸ್ತ್ರಿ ತನ್ನ ತಪ್ಪು ಒಪ್ಪಿಕೊಂಡ. ಕೂಡಲೇ ಹೋಗಿ ಮೀಸೆ ಬೋಳಿಸಿಬಿಟ್ಟ. ಜನರ ಮುಂದೆ ಆದೊಂದು ಹೊಸ ಚರ್ಯೆ ಇನ್ನಾದರೂ ಜುಟ್ಟು ಬಿಡಿರಿಂದ ಪೋಕರಿಗಳಿಗೆ. ಪೋಕರಿಗಳಲ್ಲವೆ ಅವು? "ಜುಟ್ಟಾಯ ಮೀಸೀ ಸ್ವಾಹಾ" ಎಂದು ನಗಹತ್ತಿದವು.

ಶುದ್ಧಿಯು ಬೇಕೇ ಬೇಕು.

ಅಜಮೀರ ಶುದ್ಧಿ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ಶ್ರೀ. ಭಾಯಿ ಪರಮಾನಂದಜಿಯವರು ಬೇಳಿದುದೇನಂದರೆ— "ಹಿಂದೂ ಧರ್ಮವು ಈಗ ಎಡೂ ಕಡೆಯಿಂದಲೂ ಕೊಯ್ಯಲ್ಪಡುತ್ತಿದೆ. ಅಸಾಮು ಪ್ರಾಂತದಲ್ಲಿ ೫೦ ವರುಷಗಳ್ಳ ಹಿಂದೆ ಕೇವಲ ಹಿಂದುಗಳೇ ಇದ್ದರು. ಆದರೆ ಈಗ ಅಲ್ಲಿ ಪರ್ವತಗಳ ಓರೆಯಲ್ಲಿರುವವರು ಮುಸಲ್ಮಾನರೂ ಬೈಲು ಸೀಮೆಯಲ್ಲಿರುವವರು ಕ್ರೈಸ್ತರಾಗಿದ್ದಾರೆ. ಬೈಲು ಸೀಮೆಯಲ್ಲಿರುವ ಸ್ತ್ರೀಯರು ಒಳ್ಳೇ ಸುಂದರಿಯರಾಗಿರುವರು. ಅವರನ್ನು ಕ್ರೈಸ್ತಿಗಳು ತಮ್ಮ ಲೇಡಿಗಳನ್ನಾಗಿ ಮಾಡಿಕೊಳ್ಳುತ್ತಿರುವರು. ಮುಸಲ್ಮಾನರು ಪೂರ್ವ ಬಂಗಾಲದಿಂದ ಅಸಾಮದಲ್ಲಿ ಬಂದು ಸೇರಹತ್ತಿದ್ದಾರೆ. ಇವರೇನೂ ಲಗ್ನ ಮಾಡಿಕೊಂಡಿರುವದಿಲ್ಲ. ಆದರೆ ಅಲ್ಲಿ ಕೈಗೆ ಸಿಕ್ಕ ಸ್ತ್ರೀಯರನ್ನು ಮುಸಲ್ಮಾನರನ್ನಾಗಿ ಮಾಡುವರು. ಹಿಂದುಗಳಾದರೂ ಅಂಥವಳನ್ನು ಹೊರಗೆಹಾಕಿ ಬಿಡುತ್ತಾರೆ. ಜೇಮಸೇಟ ಪುರದಲ್ಲಿಯೂ ಇದೇ ಪ್ರಕಾರವಾಗಿ ಹಿಂದೂ ಸ್ತ್ರೀಯರನ್ನು ಮುಸಲ್ಮಾನರನ್ನಾಗಿ ಮಾಡುತ್ತಾರೆ.

ಪ್ರಿಯ ಮಿತ್ರರೆ, ಈ ಪ್ರಕಾರವಾಗಿ ನಮ್ಮ ಹಿಂದು ಧರ್ಮವು ನಾಶವಾಗುತ್ತಿರಲು ಇದರ ಮೊರೆಯನ್ನು ಕೇಳುವವರಾರು? ರಾಷ್ಟ್ರೀಯ ಸಭೆಯಲ್ಲಿ ಸೇರಿದ ಹಿಂದುಗಳು ಹೇಳುತ್ತಾರೆ " ಆ ಸ್ವಸಂಗದ ಮಾತೇ ಬೇಡ. ನಾವು ಮೊದಲು ಸ್ವರಾಜ್ಯ ಸಂಪಾದಿಸೋಣ." ಸ್ವರಾಜ್ಯವನ್ನು ದೊರಕಿಸಲು ನಮಗಿನ್ನೂ ನೂರು ವರುಷಗಳು ಬೇಕಾಗಬಹುದು. ಆದರೆ ಆ ಕಾಲದಲ್ಲಿ ನಮ್ಮ ಹಿಂದು ಧರ್ಮದ ಹೆಸರು ಸಹ ಉಳಿಯಲಿಕ್ಕಿಲ್ಲ. ಆ ಮೇಲೆ ನಾವು ಸ್ವರಾಜ್ಯ ಗಳಿಸಿಯಾದರೂ ಮಾಡುವದೇನು?

ಇನ್ನು ಕೆಲವರು—"ಅಂಥ ವರುಷಗಳೆಂದಲೂ ಮುಸಲ್ಮಾನರು ಮತ್ತು ಕ್ರೈಸ್ತರು ಕೂಡಿ ಹಿಂದು ಧರ್ಮವನ್ನು ನಾಶಮಾಡಲು ಶಕ್ತರಾಗಲಿಲ್ಲ. ಈಗಾದರೋ ಸಾವಿರಾರು ಹಿಂದು ಸ್ತ್ರೀ ಪುರುಷರನ್ನು ಕುಲಗೆಡಿಸಿ ಮಾಡುವದಾವರು ಎನ."

ಇಂಥ ಜನರು ಪಾರಿವಾಳದಂತಿರುವರು ಪಾರಿವಾಳಗಳು ಬೆಕ್ಕನ್ನು ಕಂಡಕೂಡಲೆ ರಕ್ಷಣೆಮಾಡಿಕೊಳ್ಳುವದನ್ನು ಬಿಟ್ಟು ಕಣ್ಣುಮುಚ್ಚಿಕೊಂಡು ಕುಳಿತುಬಿಡುತ್ತವೆ.

ಕಾಶ್ಮೀರದ ಹಿಂದುಗಳ ಅವಸ್ಥೆಯೇನಾಯಿತೆಂಬುದನ್ನು ನೀವು ಬಲ್ಲಿರಿ. ಕವುರ್ಥಾಲಾ ಸಂಸ್ಥಾನದಲ್ಲಿಯೂ ಹಿಂದುಗಳ ಹ್ರಾಸವು ನಡೆದಿದೆ. ಮುಸಲ್ಮಾನರಿಗೆ ಹೇಗಾದರೂ ತಮ್ಮ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಮಲಬಾರದಲ್ಲಿಯ ಹಿಂದುಗಳು ತಮ್ಮಲ್ಲಿ ಇನ್ನೂ ನೇದಪಾಠಿಗಳಿರುವರೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಮಾಪಿಳ್ಳಾ ಜನರು ದೊಂಬೆಯೆಬ್ಬಿಸಿ ಸಾವಿರಾರು ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡಿದಾಗ ಇವರಿಂದಲೇ ನಾಯಿತು? ಆದರೆ ಆರ್ಯಸಮಾಜಿಗಳು ಅವರನ್ನು ಶುದ್ಧಗೊಳಿಸಿ ಹಿಂದುಗಳನ್ನಾಗಿ ಮಾಡಿದರು. ಶುದ್ಧಿಯೇ ಈ ನಮ್ಮ ಮೃತಪ್ರಾಯವಾದ ಹಿಂದು ಧರ್ಮದ ಸಂಜೀವನವು. ಇದನ್ನೇ ಬೆಳೆಯಿಸವದಕ್ಕೆ ಸಿದ್ಧರಾಗಿರಿ.

※ ※ ※ ※ ※

ಪಾಪ! ಶಾಸ್ತ್ರಿ ಮೋರೆ ಮುಚ್ಚಿಕೊಂಡನು. ಜನ್ಮದಿಂದಲೇ ವೈದಿಕರಾಗಬೇಕಾದರೆ ಜನ್ಮದಿಂದಲೇ ಮೀಸೆ ಇರಬಾರದೆಂದು ಮತ್ತೊಂದು ಪೋಕರಿ ಹಾಸ್ಯ ಮಾಡಿದ. ಆದರೆ ನಾನಕೊಂಡಿಯನ್ನೆತ್ತಲು ಎಲ್ಲವೂ ಓಡಿಹೋದವು.

ಮಹಿಳೆಯರ ಆದರ್ಶ ಸಂಸ್ಥೆ.

"ಸೇವಾ ಸದನಕ್ಕೆ ಸರಿಹೋಲುವಂಥ ಕೆಲಸವಾಡುವ ಸಂಸ್ಥೆಯು ಮುಂಬಯಿ ಪ್ರಾಂತದಲ್ಲಿ ಮತ್ತೊಂದಿರುವುದಿಲ್ಲ. ಇಷ್ಟೇ ಅಲ್ಲ. ಭರತಖಂಡದಲ್ಲೆಲ್ಲ ಈ ಸಂಸ್ಥೆಯಂಥ ಸಂಸ್ಥೆಯು ಇನ್ನೊಂದಿರುವದಿಲ್ಲವೆಂಬುದನ್ನು ನಾನು ಕೇಳಿದ್ದೇನೆ."

ಸರ್. ಲೆಸ್ಲಿ ವಿಲ್ಸನ್.

೭ ವರುಷಗಳ ಹಿಂದೆ ಮೇಲಣ ಉದ್ಗಾರವನ್ನು ಆ ಕಾಲಕ್ಕೆ ಮುಂಬಯಿ ಗವ್ಹರ್ನರರಾಗಿದ್ದ ಸರ ಲೆಸ್ಲೆ ವಿಲ್ಸನ್‌ರವರು ತೆಗೆದಿದ್ದರು. ಇನು ಅಕ್ಷರಶಃ ಸತ್ಯವಾಗಿರುತ್ತದೆ. ಇಷ್ಟೇ ಅಲ್ಲದೆ ಈ ಸಂಸ್ಥೆಯ ಕಾರ್ಯಗಳಲ್ಲಿ ಈಗೀಗ ಎಷ್ಟೋ ರೀತಿಯಿಂದ ಬೆಳವಣಿಗೆಯುಂಟಾಗಿದೆ. ಆದರೆ ಪ್ರಸ್ತುತ ಕಾಲದಲ್ಲಿಯ ಆರ್ಥಿಕ ದುರವಸ್ಥೆಯಿಂದ ಈ ಉಪಯುಕ್ತ ಸಂಸ್ಥೆಗಳ ಕಾರ್ಯವು ಮಂದ ಗತಿಯಿಂದ ಸಾಗಿದೆ.

ಹಿಂದೀ ಮಹಿಳೆಯರಿಗೆ ಶೈಕ್ಷಣಿಕ, ವೈದ್ಯಕೀಯ, ಆರೋಗ್ಯ ಮತ್ತು ಕಲಾವಿಷಯಕ, ಕೌಟುಂಬಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಶಿಕ್ಷಣವನ್ನು ಕೊಟ್ಟು ಸಮಾಜದಲ್ಲಿ ಅವರು ಸ್ವಾವಲಂಬಿನಿಯರಾಗಿರುವಂತೆ ಮಾಡುವ ಉದ್ದೇಶದಿಂದ ಈ ಸೇವಾ ಸದನ ಸಂಸ್ಥೆಯು ಕಳೆದ ೨೫ ವರುಷಗಳಿಂದ ಲೋಕಸೇವೆಯನ್ನು ಮಾಡುತ್ತ ಬಂದಿದೆ. ಈ ಸಂಸ್ಥೆಯು ರಾಷ್ಟ್ರೀಯ ಸ್ವರೂಪವನ್ನು ತಳೆದಿದ್ದು ಎಲ್ಲ ಜಾತಿಯ ಸ್ತ್ರೀಯರ ಉದ್ಧಾರಾರ್ಥವಾಗಿ ಕೆಲಸ ಮಾಡುತ್ತಲಿದೆ. ಮತ್ತು ಕೇವಲ ಪುಣೆ ಪಟ್ಟಣಸ್ಥಕ್ಕೇನೇ ಅದರ ಕಾರ್ಯಕ್ಷೇತ್ರವು ಮರ್ಯಾದಿತವಾಗಿರುವುದಿಲ್ಲ. ಪುಣೆಯ ಹೊರಗಿನ ೧೪ ಸ್ಥಳಗಳಲ್ಲಿ ಈ ಸೇವಾಸದನದ ಶಾಖೆಗಳೂ ಉಪಶಾಖೆಗಳೂ ಇದ್ದು ಅವುಗಳಲ್ಲಿ ಭಿನ್ನ ಭಿನ್ನ ೧೧೫ ವರ್ಗಗಳು ನಡೆಯಿಸಲ್ಪಡುತ್ತವೆ. ಇವುಗಳಲ್ಲಿ ಒಟ್ಟಿಗೆ ೧೯೦೦ ಜನ ವಿದ್ಯಾರ್ಥಿನಿಯರು ಶಿಕ್ಷಣ ಲಾಭವನ್ನು ಹೊಂದುತ್ತಲಿದ್ದಾರೆ. ಇದು ಮಹಾರಾಷ್ಟ್ರದಲ್ಲೆಲ್ಲ ವ್ಯಾಪಿಸಿರುವದು. ಇಲ್ಲಿ ವಾಙ್ಮಯ ಶಿಕ್ಷಣಕ್ಕಿಂತ ವ್ಯಾವಸಾಯಿಕ ಶಿಕ್ಷಣಕ್ಕೆ ಪ್ರಾಧಾನ್ಯತೆ ಇರುವದು.

ಸೇವಾಸದನದಲ್ಲಿ ವಿವಿಧ ವರ್ಗದಲ್ಲಿ ಶಿಕ್ಷಣ ಹೊಂದುತ್ತಿರುವ ವಿದ್ಯಾರ್ಥಿನಿಯರ ವರ್ಗಪದ್ಧತಿಯು ಉದ್ಬೋಧಕವೂ, ಬೋಧಪ್ರದವೂ ಆಗಿರುವದು. ೧೯೦೦ ಸ್ತ್ರೀಯರಲ್ಲಿ ೧೩೦೦ ಸ್ತ್ರೀಯರು ಅವಿವಾಹಿತರಿರುವವರು. ಉಳಿದವರಲ್ಲಿ ೩೦೦ ಸ್ತ್ರೀಯರು ಪುನರ್ವಿವಾಹಿತೆಯರೂ ಮತ್ತು ೩೦೦ ಜನ ವಿಧವೆಯರೂ ಇರುವರು. ಅವಿವಾಹಿತ ೧೩೦೦ ಸ್ತ್ರೀಯರಲ್ಲಿ ೬೦೦ ವಿದ್ಯಾರ್ಥಿನಿಯರು ೧೪ ವರುಷದ ಕೆಳಗಿನವರಿರುವರು. ವಿವಾಹಿತ ೩೦೦ ವಿದ್ಯಾರ್ಥಿನಿಯರಲ್ಲಿ ೯೯ ಸ್ತ್ರೀಯರು ಪತಿಯಿಂದ ಬಿಡಲ್ಪಟ್ಟವರೂ ಮತ್ತು ೧೪ ಸ್ತ್ರೀಯರು ಪತಿಯ ಸಂಗಡ ಇರಲು ಒಪ್ಪಿಗೆಯಿಲ್ಲದವರೂ ಇರುವರು. ಉಳಿದ ೨೫೦ ಕ್ಕಿಂತ ಹೆಚ್ಚಿನ ವಿದ್ಯಾರ್ಥಿನಿಯರು ತಮ್ಮ ತಮ್ಮ ಪತಿಗಳ ಒಪ್ಪಿಗೆಯಿಂದಲೇ ವರ್ಗಗಳಿಗೆ ಉಪಸ್ಥಿತರಾಗಿರುತ್ತಾರೆ. ಇದು ಹಿಂದುಗಳ ಪ್ರಗಮನಶೀಲ ವಿಚಾರದ ನಿದರ್ಶಕವಾಗಿಲ್ಲವೇ? ಜಾತಿ ಮತ್ತು ಧರ್ಮಗಳ ಮೇರೆಗೆ ಈ ವಿದ್ಯಾರ್ಥಿನಿಯರ ವರ್ಗೀಕರಣವನ್ನು ಮಾಡಿದರೆ ಬ್ರಾಹ್ಮಣ ವಿದ್ಯಾರ್ಥಿನಿಯರ ಸಂಖ್ಯೆಯು ಎಲ್ಲಕ್ಕಿಂತ ಹೆಚ್ಚಿರುವದು. ಎಂದರೆ ಇವರ ಸಂಖ್ಯೆಯು ೧೩೦೦ ಇರುವದು. ಇವರ ತರುವಾಯ ೩೮೮ ಬ್ರಾಹ್ಮಣೇತರರ ೪೭ ಅಸ್ಪೃಶ್ಯ, ೧೪ ಯಹೂದಿ, ೧೭ ಕ್ರಿಸ್ತ ಮತ್ತು ೯ ಮುಸಲ್ಮಾನ ವಿದ್ಯಾರ್ಥಿನಿಯರಿರುವರು. ಸೇವಾ ಸದನದಲ್ಲಿ ೪೭ ಜನ ಅಸ್ಪೃಶ್ಯ ವಿದ್ಯಾರ್ಥಿನಿಯರನ್ನು ತೆಗೆಸಿಕೊಂಡಿರುವುದನ್ನು ನೋಡಿದರೆ ನಮ್ಮ ಭಗಿನೀ ಸಮಾಜದಲ್ಲಿಯೂ ಉದಾರ ಮತ ಯುಕ್ತ ಹೊಸ ವಿಚಾರವು ಎಷ್ಟು ತ್ವರೆಯಿಂದ ಪ್ರಸಾರವಾಗಿರುವುದೆಂಬುದು ಸ್ಪಷ್ಟವಾಗಿ ತೋರುವುದು. ಈ ೧೯೦೦ ವಿದ್ಯಾರ್ಥಿನಿಯರಲ್ಲಿ ೪೦೦ ವಿದ್ಯಾರ್ಥಿನಿಯರು ಸೇವಾಸದನದ ಭಿನ್ನ ಭಿನ್ನ ವಸತಿ ಗೃಹಗಳಲ್ಲಿ ವಾಸವಾಗಿರುವರು.

ಈ ಸಂಸ್ಥೆಯವರು ಸ್ತ್ರೀಯರಿಗಾಗಿ ೧೪ ವಸತಿ ಗೃಹಗಳನ್ನು ನಡಿಸುತ್ತಿರುವರು. ಅವರಲ್ಲಿ ೪೦೦ ವಿದ್ಯಾರ್ಥಿನಿಯರ ಭೋಜನ ವೆಚ್ಚವು ಅಂಶತಃ ಇಲ್ಲವೆ ಪೂರ್ಣವಾಗಿ ಸೇವಾಸದನದ ಪಾಲಿಯೇ ಇರುತ್ತದೆ.

ಇಂಥ ಅನಾಥವ್ಯ ಸಂಸ್ಥೆಯ ಯೋಗಕ್ಷೇಮವನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಹೋಗುವುದು ಸುಲಭಸಾಧ್ಯವಾದ ಮಾತಲ್ಲ. ಈ ಸಂಸ್ಥೆಗೆ ಗೋಪಾಳರಾವ ದೇವಧರರಂಥ ಉತ್ಸಾಹಿಗಳೂ, ಆಶಾವಾದಿಗಳೂ ಮತ್ತು ಸ್ವಾರ್ಥತ್ಯಾಗಿಗಳೂ ಆದಂಥ ಕಾರ್ಯಕರ್ತರು ದೊರೆತಿದ್ದರಿಂದಲೇ ಇಲ್ಲಿಯವರೆಗೆ ಈ ಸಂಸ್ಥೆಯು ಯಾವ ತೊಂದರೆಗಳನ್ನೂ ಲೆಕ್ಕಿಸದೆ ಪ್ರಗತಿಮಾರ್ಗವಾಗಿ ಯಥಾಕ್ರಮವಾಗಿ ತನ್ನ ಹೆಜ್ಜೆಗಳನ್ನು ಮುಂದೆ ಮುಂದೆ ಇಡುತ್ತಲಿದೆ.

ಸಂಸ್ಥೆಯ ಆಸ್ತಿಯು ಅಜಮಾಸು ೩೫ ಲಕ್ಷ ರೂ. ಬೆಲೆಯದಿರುತ್ತದೆ. ಮತ್ತು ಇದಕ್ಕೆ ೭೦ ಸಾವಿರ ರೂ. ಸಾಲವಿದೆ. ಸದ್ಯದ ವಾರ್ಷಿಕ ಉತ್ಪನ್ನವು ೧ ಲಕ್ಷ ೪೬ ಸಾವಿರ ರೂಪಾಯಿಗಳು ಇದ್ದು ವೆಚ್ಚವು ೧ ಲಕ್ಷ ೭೫ ಸಾವಿರ ರೂ. ಇದೆ. ವರುಷ ವರುಷಕ್ಕೆ ಕಡಿಮೆಯೇ ಬೀಳುವ ೨೯ ಸಾವಿರ ರೂ. ಹಣವನ್ನು ಪೂರೈಸುವದು ಸಮಾಜದ ಮತ್ತು ಸರಕಾರದ ಆದ್ಯ ಕರ್ತವ್ಯವಾಗಿದೆ.

ಈ ಸೇವಾಸದನ ಸಂಸ್ಥೆಯ ಪರವಾಗಿ ಸಾಂಗಲಿ ಶ್ರೀ. ರಾನಡೇ ಸಾಹೇಬರವರ ಅಧ್ಯಕ್ಷತೆಯಲ್ಲಿ ಒಂದು ಶಿಷ್ಟ ಮಂಡಲವು ಮುಂಬೈ ಗವ್ಹರ್ನರ್ ಸರ್. ಫ್ರೆಡರಿಕ್ ಸಾಯಿಕ್ಸ್ ಇವರ ಕಡೆಗೆ ಹೋಗಿದ್ದಿತು. ಈಗ ಸರಕಾರಕ್ಕೆ ದೊಡ್ಡಿನ ತೊಂದರೆಯಿದ್ದರೂ ಅವರು ಒಳ್ಳೇ ಆಶ್ವಾಸನವಿತ್ತಿರುವರು.

ಮಹಾರಾಷ್ಟ್ರದಲ್ಲಿ ಸ್ತ್ರೀಯರ ಉನ್ನತಿಗಾಗಿ ಪ್ರಯತ್ನಿಸುತ್ತಿರುವ ಇಂಥ ಹಲಕೆಲವು ಸಂಸ್ಥೆಗಳಿರುವವು. ಆದರೆ ಇಷ್ಟು ಜಾಗೃತಿಯು ನಮ್ಮ ಕರ್ನಾಟಕದಲ್ಲಿನ್ನೂ ಆಗಿರುವುದಿಲ್ಲ. ನಮ್ಮ ಸುದೈವದಿಂದ ಧಾರವಾಡದಲ್ಲಿ "ವನಿತಾ ಸೇವಾ ಸಮಾಜ" ವೊಂದು ಕರ್ನಾಟಕ ಸ್ತ್ರೀಯರ ಏಳ್ಗೆಗಾಗಿ ಪ್ರಯತ್ನಿಸುತ್ತಿರುವದು. ಆದರೆ ಮಹಾರಾಷ್ಟ್ರದ ಸಂಸ್ಥೆಗಳಿಗೆ ಒರೆ ಹಚ್ಚಿ ನೋಡಿದರೆ ಇದು ಅಲ್ಪ ಪ್ರಮಾಣವಾಗಿರುವದು. ಉದಾರ ಹೃದಯರಾದ ಕನ್ನಡಿಗರು ಇದೇ ಸಂಸ್ಥೆಗೆ ಉತ್ತೇಜನ ಕೊಟ್ಟು ನೆರೆಯ ಪ್ರಾಂತಗಳು ಯತ್ನಿಸುತ್ತಿರುವಂತೆಯೇ ಯತ್ನಿಸಿ ಕರ್ನಾಟಕದ ಅಬಲೆಯರನ್ನು ಸ್ವಾವಲಂಬಿನಿಯರನ್ನಾಗಿ ಮಾಡುವ ಪುಣ್ಯ ಕಟ್ಟಿಕೊಳ್ಳುವದು ಯುಕ್ತವಲ್ಲವೇ?

॥ಶ್ರೀ ಭುವನೇಶ್ವರೀ ಪ್ರಸನ್ನ॥

ವಿಜಯನಗರದ
ಸಾಮ್ರಾಜ್ಯ ಸ್ಥಾಪನೆಯ
ಸ್ಮಾರಕೋತ್ಸವ.

[ಲೇಖಕರು:- ಜಿ. ಎಸ್ ಪೊಪಾಸಿ ಬಿ. ಎ ಹುಬ್ಬಳ್ಳಿ]

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

ಇಷ್ಟೇ ಇಸವಿಗೆ ಜಗಪ್ರಸಿದ್ಧವಾದ ಸಾಮ್ರಾಜ್ಯ ಶ್ರೀಕೃಷ್ಣ ವಾದ ವಿಜಯ ನಗರದ ಸಾಮ್ರಾಜ್ಯವು ಸ್ಥಾಪನೆಯಾಗಿ ೬೦೦ ವರುಷಗಳಾಗುವವು. ಆ ವರುಷ ವಿಜಯನಗರವಲ್ಲಿಯೇ ಅದರ ಸ್ಮಾರಕೋತ್ಸವವನ್ನು ಅತಿ ದೊಡ್ಡ ಪ್ರಮಾಣದ ಮೇಲೆ ಸಾಮ್ರಾಜ್ಯದ ಹೆಸರಿಗೊಪ್ಪುವಂತೆ ಬಹು ವಿಜೃಂಭಣೆಯಿಂದ ಜರುಗಿಸ ಬೇಕೆಂದು ಮಾಡಿದೆ. ಕ್ಷೇತ್ರದಲ್ಲಿ ಬಹು ವಿಸ್ತಾರವಾಗಿ ಹಬ್ಬಿ ದಂತೆ ವಿಜಯನಗರವು ಕಾರ್ಯಕ್ಷೇತ್ರದಲ್ಲಿಯೂ ವಿವಿಧ ಮುಖ ವಾಗಿದ್ದಿತು. ಸರ್ವಾಂಗ ಸುಂದರವಾಗಿದ್ದೀ ಸಾಮ್ರಾಜ್ಯದ ನೆನವು ಪ್ರತಿಯೊಬ್ಬ ಕನ್ನಡಿಗನನ್ನು ಆ ದಿವಸ ಅಲ್ಲಿಗೆ ಬರಮಾಡುವುದೆಂಬದರಲ್ಲಿ ಸಂದೇಹವಿಲ್ಲ. ಕೆಲಸವು ಬಹು ವ್ಯಾಪಕವಿದ್ದ ಮೂಲಕ ಈಗಿನಿಂದಲೇ ನಾವು ಜೋರಿನಿಂದ ಸಾಗಬೇಕು. ಅಂದರೆ ಆ ವೇಳೆಗೆ (ಎರಡೂವರೆ ವರುಷಗಳಿಗೆ) ನಮ್ಮ ಸಿದ್ಧತೆಯಾಗ ಬಹುದು. ಇದು ಅಖಿಲ ಕರ್ನಾಟಕದ ವಿಷಯವಾದದ್ದರಿಂದ ಪ್ರತಿಯೊಬ್ಬ ಕನ್ನಡಿಗನು ಇದರಲ್ಲಿ ಮನಸ್ಸು ಹಾಕಿ ತನ್ನ ಶಕ್ತಿ ಮೀರಿ ತನುಮನಧನಗಳಿಂದ ಸಹಾಯಮಾಡಬೇಕೆಂದು ಆಶೆಯಿದೆ.

ಈ ವಿಷಯವಾಗಿ ಉತ್ತರ ಕರ್ನಾಟಕದಲ್ಲಿ ಈಗಾಗಲೇ ವಿಚಾರ ನಡೆದಿದ್ದು ಕೆಲಸವೂ ಸಣ್ಣಾಗಿ ಸುರುವಾಗಿರುವದು. ಹುಬ್ಬಳ್ಳಿಯ ಜನರು ಈ ವಿಷಯದಲ್ಲಿ ಬಹಳ ಮನಸ್ಸು ಹಾಕಿ ಹುರುಪಿನಿಂದ ಕೆಲಸವನ್ನು ನಡೆಯಿಸಿರುವರು. ಅವರು ವಿಜಯ ನಗರದ ಸ್ಮಾರಕ ಸಂಘವೊಂದನ್ನು ಸ್ಥಾಪಿಸಿ ಸಂಘದ ವತಿಯಿಂದ ಕಾರ್ಯದರ್ಶಿಯನ್ನೂ ಬೆಳಗಾವಿ ಗದಗುಗಳಿಗೆ ಇದೇ ಕೆಲಸದ ನಿಮಿತ್ಯ ಕಳಿಸಿದ್ದರು. ಬೆಳಗಾವಿ ಧಾರವಾಡ ಗದಗುಗಳಲ್ಲಿಯೂ ಸ್ಥಾನಿಕ ಸಂಘಗಳು ಸ್ಥಾಪಿತವಾಗಿವೆ. ದಕ್ಷಿಣ ಕರ್ನಾಟಕದ ವರು ವಿಶೇಷತಃ ಬಳ್ಳಾರಿ ಜಿಲ್ಲೆಯವರು, ಮೈಸೂರು ಕರ್ನಾಟಕ, ನಿಜಾಮ ಕರ್ನಾಟಕದವರೂ ತಮ್ಮತಮ್ಮಲ್ಲಿ ಇಂಥ ಸ್ಥಾನಿಕ ಸಂಸ್ಥೆ ಗಳನ್ನೂ ಶೀಘ್ರದಲ್ಲಿಯೇ ಸ್ಥಾಪಿಸಬೇಕೆಂದು ಅಗ್ರಹದ ವಿನಂತಿ. ಇದು ಕರ್ನಾಟಕದ ವಿಷಯವಾದ್ದರಿಂದ ಒಂದು ಪರಿ ಮಧ್ಯವರ್ತಿ ಸಂಘವಿಲ್ಲದೆ ಕೆಲಸವನ್ನು ಮುಂದುವರಿಸಲು ಬರದ ಕಾರಣ ತಿಳಿಸಿಕೊಡ್ಡಲಿನಸ್ಸಿಯೇ ಅಖಿಲ ಕರ್ನಾಟಕದ ಪ್ರತಿನಿಧಿ ಸಭೆ ಕೂಡಿ ಒಂದು ಮಧ್ಯವರ್ತಿ ಸಂಘವನ್ನು ಸ್ಥಾಪಿಸವ ಕಾರ್ಯಕ್ಕೆ ಎಷ್ಟು ಬಾಗದವರೂ ತಮ್ಮ ಪ್ರತಿನಿಧಿಗಳನ್ನು ಕಳಿಸಬೇ ಕೆಂದು ಪ್ರಾರ್ಥನೆ.

ಇನ್ನು ಮಾಡತಕ್ಕ ಕಾರ್ಯ ಈ ವಿಷಯವನ್ನು ಮಧ್ಯ ವರ್ತಿ ಸಂಘದವರೇ ವಿಚಾರಿಸತಕ್ಕದ್ದು. ಆದರೆ ಪದ್ಯಗಳ ಜನರಲ್ಲಿ ಸ್ಮಾರಕ ಎಂದ ಕೂಡಲೆ ಜನರು ಕೂಡಿಸಿದ ದುಡ್ಡನ್ನೆಲ್ಲ ಒಯ್ದು ಹಾಳು ಪಟ್ಟಣದಲ್ಲಿ ವತ್ತೊಂದು ಗೋಪುರ ಕಟ್ಟಿ ಇಲ್ಲವೇ ಯಾವುದೇ ರೀತಿಯಿಂದಾದರೂ ಕಲ್ಲು ಮಣ್ಣಲ್ಲಿ ಹಾಕಿ ಹಾಳು ಮಾಡುವರೆಂದು, ಕಲ್ಪನೆಯಾಗುವ ಸಂಭವವುಂಟು. ಹಾಗೆ ಕೇ ವರ ಕಲ್ಪನೆಯೂ ಆಗಿರುವದು. ಅದನ್ನು ದೂರ ಮಾಡುವುದರ ಸಲುವಾಗಿ ಸ್ಥೂಲವಾನದಿಂದ ಮಾಡತಕ್ಕ ಕಾರ್ಯವನ್ನೂ ಕುರಿತ ಒಂದೆರಡು ಮಾತುಗಳನ್ನು ಹೇಳುವೆನು.

ಈ ಸ್ಮಾರಕೋತ್ಸವವನ್ನು ಯಶಸ್ವಿಯಾಗಿ ಮಾಡಲು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗದಷ್ಟು ನಿಧಿಯನ್ನು ಕೂಡಿಸಬೇಕು. ಸಂಖ್ಯೆಯನ್ನು ನೋಡಿದೊಡನೆ ಯಾರಿಗಾದರೂ ಭಯವೆನಿಸಬಹುದು. ಆದರೆ ಯಾವತ್ತೂ ಕನ್ನಡಿಗರ ಮನಸ್ಸು ನೋಡಿದರೆ ಇದರ ಎರಡರಷ್ಟು ಹಣವನ್ನು ಒಂದೇ ವರುಷದಲ್ಲಿ ಕೂಡಿಸಬಹುದು. ನಮ್ಮಲ್ಲಿ ಸಣ್ಣ ದೊಡ್ಡ ಸಂಸ್ಥಾನಿಕರು ಇನಾಮದಾರ, ಜಹಗೀರದಾರ, ವ್ಯಾಪಾರಸ್ಥರು, ಶೆಟ್ಟಿ ಸಾವಕಾ ರ ಜನರು ಸರಕಾರಿ ಹಾಗೂ ಇತರ ದೊಡ್ಡ ಸಂಬಳದ ನೌಕರರೂ ಇರುವರು. ಇವರೆಲ್ಲರೂ ಈ ಕೆಲಸದಲ್ಲಿ ಬಿಡುಗೈಯಿಂದ ನೀಡಿದರೆ ಇಷ್ಟು ಹಣವನ್ನ ಸಹಜವಾಗಿ ಕೂಡಿಸಬಹುದು. ಈ ಹಣಸಂಚ ಯದ ಕೆಲಸವನ್ನು ಮಧ್ಯವರ್ತಿ ಸಂಘದವರೇ ಮಾಡಬೇಕು. ಇನ್ನಿ ತರರಿಗೆ ಈ ಅಧಿಕಾರವು ಇರಲಾರದು. ಈ ಹಣವನ್ನು ಅವರು ಜಿಲ್ಲಾವಾರ ಹಂಚಿಕೊಡಬೇಕು. ಮತ್ತು ಆ ಜಿಲ್ಲಾ ಕಮಿಟಿ ಯವರು ಮಧ್ಯವರ್ತಿ ಸಂಘದ ಪಾವತಿ ಕೊಟ್ಟು ಹಣವನ್ನು ಎತ್ತಬೇಕು. ಮಧ್ಯವರ್ತಿ ಸಂಘದವರು ಒಟ್ಟು ಕಾರ್ಯವನ್ನು ಬೇರೆಬೇರೆ ಭಾಗಗಳಾಗಿ ಹಂಚಿ ಒಂದಕ್ಕೆ ಒಂದೊಂದು ಪೋಟು ಕಮಿಟಿಗಳನ್ನು ನಿಯಮಿಸಬೇಕು. ಉದಾಹರಣೆಗಾಗಿ ೨-೩ ಕೊಡುವೆನು. ಮುಖ್ಯ ಕೆಲಸವೆಂದರೆ ಹಣ ಎತ್ತುವ ಕೆಲಸ. ಅದರ ಲಕ್ಷ್ಯಪ್ರಪಂಚವಿಡುವ ಕೆಲಸ, ಎರಡನೆಯದೆಂದರೆ ಉತ್ಸವ ಮಾಡುವ ಸ್ಥಳದ, ಮತ್ತು ಸ್ಥಳಕ್ಕೆ ಹೋಗುವ ದಾರಿಗಳ ದುರಸ್ತಿ ಕೆಲಸ. ಬಹು ದೊಡ್ಡ ಜಾತ್ರೆ ಸೇರುವದರಿಂದ ಬಂದವರಿಗೆ ಇಳಕೊಳ್ಳುವ ವ್ಯವಸ್ಥೆ, ನೀರಿನ ವ್ಯವಸ್ಥೆ ಮುಂತಾದ್ದು ಮಾಡು ವದು. ಇವಾರತಿಗಳ ಮುಂದೆ ಈಗಿದ್ದುದಕ್ಕಿಂತಲೂ ಹೆಚ್ಚಿಗೆ ಮಾಹಿತಿ ಕೊಡುವ ಬೋರ್ಡುಗಳನ್ನು ಹಚ್ಚುವದು, ಮುಂತಾದ ಕೆಲಸಗಳು. ಇದನ್ನು ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕು ಬೋರ್ಡಿನವರೂ ಅರ್ಕೇಲಾಜಿಕಲ್ ಡಿಪಾರ್ಟಮೆಂಟಿನವರೂ ಕೂಡಿ ಮಾಡಬೇಕು ಮೂರನೆಯದೆಂದರೆ ಕರ್ನಾಟಕದ ವಿಶೇ ಷತಃ ವಿಜಯನಗರ ಕಾಲದ ಇತಿಹಾಸ ಬರೆಯಿಸಬೇಕು. ಮತ್ತು ಇತರ ವಾಙ್ಮಯವನ್ನೂ ಬರೆಯಿಸಬೇಕು. ಅದಕ್ಕಾಗಿ ಇನಾಮು ಗಳನ್ನೂ, ಕರಾರುಗಳನ್ನೂ ಈಗಲೇ ಪ್ರಸಿದ್ಧಿಸಬೇಕು. ಬರೆ ಯಿಸುವ ವಿಷಯವನ್ನು ಕುರಿತು ಸಾಧಾರಣ ಕಲ್ಪನೆ ಬರಬೇ ಕೆಂದ ಕೆಲವು ಶೀರ್ಷಿಕೆಗಳನ್ನು ೧ ವಿಜಯನಗರದ ಇತಿಹಾಸ ೨ ಆಗಿನ ಕಾಲದ ಶಿಲ್ಪ ಶಾಸ್ತ್ರ ೩ ವಿಜಯನಗರದ ಅರಸರ ರಾಜ ನೀತಿ ೪ ಸೈನ್ಯ ವ್ಯವಸ್ಥೆ ೫ ವಾಙ್ಮಯ ೬ ಪ್ರಸಿದ್ಧ ಪುರುಷರ ಚರಿತ್ರೆ ೭ ವಿಜಯನಗರ ಸ್ಥಾಪನೆಯವರೆಗೆ ಕರ್ನಾಟಕದ ಇತಿ ಹಾಸ ಮುಂತಾದವುಗಳು. ಅದರಂತೆ ಇತರ ವಾಙ್ಮಯವೆಂದರೆ ಆ ಕಾಲದ ಸಂಗತಿಗಳನ್ನು ಕುರಿತು ೧ ನಾಟಕ, ೨ ಕಥೆ ಕಾದಂಬರಿಗಳು, ೩ ಕಾವ್ಯಗಳು, ಲಾವಣಿಗಳು ಮುಂತಾದವನ್ನು ಬರೆಯಿಸುವದು.

ನಾಲ್ಕನೆಯದೆಂದರೆ ಸಾಧ್ಯವಿದ್ದಲ್ಲಿ ವಿಜಯನಗರದ ಇತಿ ಹಾಸದೊಳಗಿನ ಸುಪ್ರಸಂಗಗಳನ್ನೂ ಶಕೊಂಡು ಮಾತಿನ ಚಲ ಚ್ಚಿತ್ರಪಠಗಳನ್ನೂ ತಯಾರಿಸುವದು. ಐದನೆಯದೆಂದರೆ ಕರ್ನಾಟಕ ದಲ್ಲಿಯ ನೋಡತಕ್ಕ ಸ್ಥಳಗಳ ಶಿಲ್ಪಗಳ ಚಿತ್ರಗಳನ್ನು ತಕ್ಕೊಂಡ ಅವುಗಳ ಮಾಹಿತಿಯನ್ನೊಳಗೊಂಡ ಆಲ್ಬಮ್ ತಯಾರಿಸುವದು.

(೧೧ ನೆಯ ಪುಟಕ್ಕೆ ಮುಂದುವರಿದಿದೆ.)

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ ಅನುಭವವೂ.

(ಲೇಖಕರು:— ಶ್ರೀ. ಪಾವಟೆ ಸಿದ್ಧರಾಮಪ್ಪನವರು ಬಿ. ಎ. ಎಲ್, ಎಲ್. ಬಿ ವಕೀಲ ಹುಬ್ಬಳ್ಳಿ.)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ತಾವು ಅನ್ನುವಂತೆ ಜಂಗಮವೆಂಬ ಕುಲದವರೆ ಗುರುಜಂಗಮತ್ವಾಧಿಕಾರಿಗಳಾದರೆ ಪೂರ್ವದಿಂದ ನಡೆದುಬಂದ ಶಿಷ್ಯವರ್ಗದ ಗುರುಪೀಠಗಳೂ ಅನೇಕ ಪ್ರಸಿದ್ಧ ವಿರಕ್ತ ಪೀಠಗಳೂ ಭಕ್ತರೆನಿಸಿಕೊಂಬರ ಹೊಟ್ಟೆಯಲ್ಲಿ ಜನಿಸಿದವುಂದ ಅಧಿಷ್ಠಿತವಾಗಿವೆ. ಅಂದ ಬಳಿಕ ಅಷ್ಟಾವರಣದಲ್ಲಿ ಕುಂದು ಆಗುವುದು. ಅದಕ್ಕೇನೆಂದರೆ ಶ್ರೀಗಳು ಈ ಪದ್ಧತಿಯು ಅನಾಚಾರ ಮೂಲಕನಾದುದೆನ್ನುವರು. ಈಗ ಸದ್ಯಕ್ಕೆ ವಿರಕ್ತರು ಭಕ್ತರ ಮಕ್ಕಳಿರುವರು. ಪಟ್ಟಾಧಿಕಾರಿಗಳಿರುವರು. ಅದಕ್ಕೇನೆಂದರೆ ಶ್ರೀಗಳು ಬಂದುದನ್ನು ನಿರ್ವಹಿಸಬೇಕು. ಮುಂದಿನದನ್ನು ತಪ್ಪಿಸಬೇಕೆನ್ನುವರು. ಇದಕ್ಕೆ ಗುರುದ್ರೋಹವೂ, ಜಂಗಮದ್ರೋಹವೂ ಆತ್ಮದ್ರೋಹವೂ ಎಂಬ ಮೂರು ದ್ರೋಹಗಳು ಎದುರಿಸುವವೆಂದರೆ ಶ್ರೀಗಳು ಸುಮ್ಮನಾಗುವರು. ಹೇಗಂದರೆ ಒಬ್ಬ ಗುರು ವಿರಕ್ತ ಮೂರ್ತಿಗಳು ಸನ್ನಿಹಿತರಾಗಿ ಕ್ರಿಯೆಯು ನಡೆದಿದೆ. ಅವರನ್ನು ಆ ಸ್ಥಾನಕ್ಕಿಟ್ಟುದು ಅನಾಚಾರವೆಂದೂ, ಅಶಾಸ್ತ್ರೀಯವೆಂದೂ ತಮ್ಮ ಒಳಯು ಕ್ರಿಯೆಗೆ ಅನುಕೂಲವಾದರೆ ಆತ್ಮಸಾಕ್ಷಿಕವಾಗಿ ಅನರ್ಹರಾದವರಲ್ಲಿ ಕ್ರಿಯೆಯನ್ನು ಬಳಸುವದು ಆತ್ಮದ್ರೋಹ. ಬಳಸದಿದ್ದರೆ ಗುರು ಜಂಗಮದ್ರೋಹ. ಜಂಗಮರ ಕುಲದವರಾದ ಮೂರ್ತಿಗಳ ಹಿಂದಿನವರು ಭಕ್ತ ಕುಲದವರಿದ್ದರೆ ಅವರನ್ನು ಗುರುತ್ವದಿಂದ ಭಾವಿಸಿದರೆ ಒಂದು ದ್ರೋಹವು ಭಾವಿಸದಿದ್ದರೆ ಮತ್ತೊಂದು ದ್ರೋಹವು. ಅಂತಹ ಪೀಠಗಳು ಒಂದಲ್ಲ ಎರಡಲ್ಲ ಸರ್ವತ್ರಿಕವಾಗಿವೆ. ಬಹಳವೇನು, ಬೇಕಾದ ಪೀಠದವರು ತಮ್ಮ ಗುರು ಪರಂಪರೆಯಲ್ಲಿ ಭಕ್ತರ ಸಂತತಿಯು ಪೀಠಾಧಿಕಾರಿಯಾಗಿಲ್ಲೆಂದು ತೋಳೆತ್ತಿ ಹೇಳುವ ಎದೆಗಾರಿಕೆಯನ್ನು ತೋರಿಸಲಿ.

ಇದನ್ನೆಲ್ಲ ಕಣ್ಣಿರಪಾಗಿ ತೋರಿಸಿದರೂ ಶ್ರೀಗಳು ತಮ್ಮ ಅಭಿಮಾನವನ್ನು ಬಿಡರು. ಹಾವೇರಿ ಕೋರ್ಟಿನಲ್ಲಿ ನಡೆದ ಪುರತಗೇರಿಯ ದಾವೆಯಲ್ಲಿ ನಾನೂ ಶ್ರೀಗಳೂ ಕೂಡಿ ಕೆಲಸ ಮಾಡಬೇಕಾಗಿದ್ದಿತು. ಅವರಲ್ಲಿ ಶ್ರೀಗಳವರ ಕುಲಾಭಿಮಾನವು ವ್ಯಕ್ತವಾಗಿ ತೋರಿಬಂದಿತು. ಮೊಟ್ಟಮೊದಲು ಪಂಚನು ಬಣಜಿಗರೊಡನೆ ಸಮರಸವಾಗಿದ್ದ ಜಂಗಮವ್ಯಸನವು ಕಾಲಕ್ರಮದಲ್ಲಿ ತಮ್ಮದೊಂದು ಕುಲವನ್ನು ಕಲ್ಪಿಸಿ ಈಗ ಅವರನ್ನು ಮುರಿಯಲು ಯತ್ನಿಸಿರುವರು. ಮೊದಲು ಸ್ವಲ್ಪವಾದರು ಧರ್ಮಭಾವನೆಯಿಂದ ಮಠಾಧಿಕಾರಿಗಳಾಗುವರು. ಅದು ಅಳಿದು ಕೇವಲ ಆಸ್ತಿಗಳ ದುರಾಶಾಬದ್ಧರಾಗಿ ಸ್ವಾಮಿಗಳಾಗಹತ್ತಲು ವಿರಕ್ತ ಪೀಠಗಳೂ ಗುರುಪೀಠಗಳೂ ಒಂದೊಂದು ವಂಶವನ್ನು ಬಳಿವಿಡಿದು ನಡೆಯಹತ್ತಿದುವು. ಇದಕ್ಕೆ ಜಂಗಮರೊಂದು ಜಾತಿಯಾಗುವುದು ಅವಶ್ಯವಾಯಿತು. ಅದನ್ನುಂಟುಮಾಡುವಲ್ಲಿ ಎಲ್ಲ ಅಯ್ಯಗಳು ಒಂದಾದರು. ವಿರಕ್ತ ಮಠಗಳು ಒಂದೊಂದು ಮನೆತನಕ್ಕೆ ಸೇರಿ ಹಾಳಾದುದನ್ನು ನಾವು ಆರು ನೋಡಿಲ್ಲ? ಗುರು ಪೀಠಗಳು ತಾಮ್ರಶೀತವಾಗಿ ಗೃಹಸ್ಥರು ಶಿಷ್ಯರನ್ನು ಹಂಚಿಕೊಂಡ ದುಃಸ್ಥಿತಿಯು ಆರ ಕಣ್ಣಿಗೆ ಬಿದ್ದಿಲ್ಲ? ಮೊದಲು ಮಠಪತಿಗಳಾಗಿದ್ದವರು ಮುರಾಧ್ಯಕ್ಷರಾಗುವುದನ್ನು ನಾವೆಲ್ಲಿ ಕಾಣಬಹುದಿಲ್ಲ? ಸಣ್ಣ ದೊಡ್ಡ ಊರುಗಳಲ್ಲಿ ಎಷ್ಟು ಮನೆತನದವರು ತಮ್ಮ ಅಡ್ಡ ಹೆಸರಿನ ಮಠವೆಂಬ ಶಬ್ದಗಳನ್ನಿಟ್ಟು ವಿಚಿತ್ರವಾದ ಮಠಗಳನ್ನು ಮಾಡಿಲ್ಲ?

ಬಣಜಿಗರಿಗೆ, ಉಳಿದವರು ಮಠಕ್ಕೆ ಹೋರಾಡುವರೆಂತಲೂ; ಉಳಿದವರಿಗೆ, ಪಂಚಮರೂ ಬಣಜಿಗರೂ ಅಧಿಕಾರಿಗಳಾಗುವರು ಅದು ನಿಮಗೆ ಹೀನತೆಯು- ಅದರಿಂದ ನಮಗಾದರಿಲಿ ಎಂದು ಬೋಧಿಸುತ್ತ ಆ ಅಯ್ಯಗಳ ಸಂಘಟನವು ನಡೆದಿತು.

ಶ್ರೀ. ವಾರದ ಮಲ್ಲಪ್ಪ ಅಣ್ಣನವರು ಸೆನ್ ರ್ಗಂಗನೇ ಇಸ್ವಿಯ ಜನಗಣತಿಯ ಸಮಿಪದಲ್ಲಿ ಪಂಚಮರು, ಬಣಜಿಗರು, ಅಯ್ಯಗಳು ಪೂರ್ಣ ವೀರಶೈವರು ಇತರರು ಏನೇನೂ ವೀರಶೈವರು- ಎಂಬುದೊಂದು ಪ್ರಕಟನೆಯನ್ನು ಮಾಡಿದರು. ಆದರಿಂದ ಕೆಲವರು- ಹೊನವಾಡ ತೇಜಪ್ಪನವರು, ಅಂಕಲಕೋಟೆ ಶರಣಪ್ಪನವರು ಮೊದಲಾದವರು- ಸಮಾಜದಲ್ಲಿ ಕ್ಷೋಭೆಯನ್ನೆಬ್ಬಿಸಿದರು. ಬಣಜಿಗ ಪಂಚಮರಷ್ಟೆ ನಮಗೆಲ್ಲ ಅಧಿಕಾರವಿದೆಯೆಂದು ಒಂದೊಂದು ಕುಲದಲ್ಲಿಯೂ ಚಳವಳಿಯನ್ನು ಎಬ್ಬಿಸಿದರು. ಇದರ ಬೆದರಿಕೆಯಿಂದ ಬಣಜಿಗರನ್ನೂ, ಪಂಚಮರನ್ನೂ ವಶಮಾಡಿಕೊಳ್ಳುವ ಸಂಧಿಯು ಅಯ್ಯಗಳ ಕುಲಸಂಘಟನೆಯವರಿಗೆ ಉಂಟಾಯಿತು. ಈ ಬೆದರಿಕೆಯಿಂದಲೆ ಶ್ರೀ ಮಲ್ಲಪ್ಪ ಅಣ್ಣನವರ ಅಧ್ಯಕ್ಷತೆಯಲ್ಲಿ ನಾನು ರಂಡೆಯಾಗಲಿ ಸವತಿಗೆ ಮುತ್ತೈದೆತನ ಬೇಡ ಎಂಬಂತಹ ಬಳ್ಳಾರಿಯ ಮಹಾಸಭೆಯ ನಿರ್ಣಯವು ಅಥವಾ ಉಳಿದವರನ್ನು ಹಿಂದೆ ಹಾಕಿದ ಅಂದಿನ ದ್ರೋಹವು ಇಂದು ತಮ್ಮನ್ನು ನುಂಗಿತು.

ಇಂತಹ ಕಷ್ಟಸಮಯ ಕಾಲದಲ್ಲಿಯು ಶ್ರೀ ಚಿತ್ರಕಲ್ಲ ಪೀಠವು ಇತರ ಪೀಠಗಳಿಗಿಂತ ಮಠಪ್ರಸಾದದಲ್ಲಿಯು ಸಾಮಾಜಿಕ ಸಮಾನ ಭಾವದಲ್ಲಿಯು ಉಳಿದವುಗಳಿಗಿಂತ ಪ್ರಶಸ್ಯವಾಗಿದ್ದಿತು. ಹಾವೇರಿಯಲ್ಲಿ ಶ್ರೀ ಬಾಳೆಹಳ್ಳಿಯವರಿಗು ಶ್ರೀ ಚಿತ್ರಕಲ್ಲದವರಿಗು ನಡೆದ ವ್ಯವಹಾರದಿಂದ ಶ್ರೀ ಚಿತ್ರಕಲ್ಲ ದುರ್ಗದ ಪ್ರಾಗತಿಕ ಕಾರ್ಯಗಳಿಗೆ ವಿಘ್ನಗಳುಂಟಾದವು. ಕೆಲಪೊಬ್ಬ ಶೆಟ್ಟರು ಬಾಳೆಹಳ್ಳಿಯವರ ಪಕ್ಷವನ್ನು ಕಟ್ಟಿ ದುರ್ಗದ ಪೀಠವನ್ನು ಮನ್ನಿಸೆನೆಂಬ ಪಂಥವನ್ನು ತೊಡುವರು. ಅವರಿಗೆ ಉಳಿದ ವಿರಕ್ತರು ಮಾನ್ಯರು. ಈ ವಿರಕ್ತರು ತಮ್ಮ ಆಶ್ರವದೆ ಹಂಗು ಹಿಡಿಯದೆ ಉಳಿದವರನ್ನು ಹೀಯಾಳಿಸುವ ಗುರುಸ್ಥಲ ಪಟ್ಟಾಧಿಕಾರಿಗಳೂ ಶೆಟ್ಟರೂ ತಮಗೆ ವಿಧೇಯರಾದರೆಂಬ ಹಿಗ್ಗಿನಲ್ಲಿ ನಲಿದಾಡುವರು. ಈ ಪರಿಯನ್ನು ನಾನು ಕಣ್ಣಾರೆ ಕಂಡಿಹೆನು. ಈ ವಿರಕ್ತರು ಮಠ ದೀಕ್ಷಾ ವಿಷಯದಲ್ಲಿ ದುರ್ಗದವರು ನಿಮಗೆ ಅನಾಜ್ಞೆಯನ್ನೀಯಲು ಆರು? ನಾವೂ ವಿರಕ್ತರು, ನೀವು ಪೂಜಿಸಿದರೆ ಪೂಜೆಯನ್ನು ಕೈಕೊಳ್ಳು

(೧೬ ನೆಯ ಪುಟದ ಮುಂದರಿದಿದೆ.)

ಶಾ. ಶ. ೧೮೮೯ ನೆಯ ಕಾರ್ತಿಕ ಬ. ೪ ಸೋಮವಾರ.

ಗಾಂಧೀಜಿಯವರ ದೇಶ ಸಂಚಾರ.

ಮಹಾತ್ಮಾ ಗಾಂಧಿಯವರು ಇಪ್ಪತ್ತರಲ್ಲೇ ಭರತಖಂಡದ ಎಲ್ಲ ಭಾಗಗಳಲ್ಲಿಯೂ ಸಂಚರಿಸಲುಪಕ್ರಮಿಸಿರುವರು. ಈ ಸಂಚಾರದಲ್ಲಿ ಕರ್ನಾಟಕಕ್ಕೂ ಆಗಮಿಸಬೇಕಾಗಿ ಕರ್ನಾಟಕದ ರಾಜಕೀಯ ಮುಂದಾಳುಗಳು ಪ್ರಾರ್ಥಿಸಿಕೊಂಡಿರುವುದು ಅತ್ಯಂತ ಯುಕ್ತವಾದುದೇ ಆಗಿದೆ.

ಗಾಂಧೀಜಿಯವರ ಈ ಸಂಚಾರವು ಮುಖ್ಯವಾಗಿ ಅದಿಜನಗಳ ಸುಧಾರಣೆಗಾಗಿಯೇ ಏರ್ಪಟ್ಟದ್ದಾಗಿದೆ. ಈ ಸಂಚಾರದಿಂದ ಖಾದಿ ಕಾರ್ಯಕ್ಕೂ ಪ್ರೋತ್ಸಾಹವುಂಟಾಗುವುದರಲ್ಲಿ ಸಂದೇಹವಿಲ್ಲ. ಆದಕಾರಣ ಗಾಂಧೀಜಿಯವರ ಆಗಮನವು ಅದಿಜನಗಳ ಸುಧಾರಣೆ ಮತ್ತು ಖಾದಿ ಪ್ರಸಾರಗಳ ಮೂಲಕ ಫಲಕಾರಿಯಾಗುವಂತೆ ಎಲ್ಲ ಭಾಗದವರೂ ಪ್ರಯತ್ನಿಸಬೇಕಾದುದೇ ವಿಹಿತವಾಗಿದೆ.

ಗಾಂಧೀಜಿಯವರ ಅಖಿಲಭಾರತ ಪರ್ಯಟನಗಳಲ್ಲಿ ಮೂರು ಮುಖ್ಯವಾದವುಗಳೆಂದು ಹೇಳಬಹುದು. ಮೊದಲು ಟಿಳಕ ಸ್ವರಾಜ್ಯ ನಿಧಿಗೆ ಒಂದು ಕೋಟಿ ರೂಪಾಯಿ ಕೂಡಿಸಲು ದೇಶದ ಎಲ್ಲ ಭಾಗಗಳಲ್ಲಿಯೂ ಸಂಚರಿಸಿದ್ದರು. ಅನಂತರ ಖಾದಿ ಪ್ರಸಾರಣೆಗಾಗಿ ಸಂಚರಿಸಿ ವಿಶೇಷ ಜಾಗೃತಿಯನ್ನುಂಟುಮಾಡಿ ಲಕ್ಷಾಂತರ ರೂ. ಗಳನ್ನೂ ಕೂಡಿಸಿದ್ದರು. ಈಗ ಅದಿ ಜನಗಳ ಸುಧಾರಣೆಗಾಗಿ ಸಂಚರಿಸಿಹವರಿದ್ದಾರೆ.

ಈ ಮುಂಜಿನ ಪರ್ಯಟನಗಳ ಉದ್ದೇಶಗಳು ಬಹುಜನ ಪ್ರಯೋಜನವಾಗಿದ್ದುವು. ಸ್ವರಾಜ್ಯವು ಸಕಲರಿಗೂ ಬೇಕಾದುದು. ಮತ್ತು ಖಾದಿಯು ಇತ್ಯಾದಿಯಾಗಿಯೇ ಇದ್ದಿತು. ಆದಕಾರಣ ಆ ಸಂಚಾರಗಳನ್ನು ಇನ್ನು ಪಿಡಿದಿಧಾಳಿಪ್ರಾಯಗಳೆಂದಾಗಿರಲಿಲ್ಲ.

ಆದರೆ ಈಗಿನ ಸಂಚಾರದ ಉದ್ದೇಶವು ಮುಖ್ಯವಾಗಿ ಅದಿ ಜನಗಳಿಗೇನೇ ಹೆಚ್ಚು ಸಂಬಂಧಿಸಿದೆ. ಸನಾತನಿಗಳೆಂದು ಹೇಳಿಕೊಳ್ಳುವವರು ತುಂಬಾ ವಿರೋಧಿಸಶಕ್ಯವಾಗಿದ್ದಾರೆ. ಅಸ್ಪೃಶ್ಯತಾ ನಿವಾರಣೆ, ಅದಿಜನಗಳ ಶಿಕ್ಷಣಾದಿ ಸುಧಾರಣೆಗಳು ಒಮ್ಮೆ ಜನಪ್ರಿಯವಾಗಿದ್ದರೂ ದೇವಾಲಯ ಪ್ರವೇಶವು ಮಾತ್ರ ಅಪ್ರಿಯವಾಗಿದೆಯೆಂದೇ ತೋರುತ್ತದೆ.

ಹಿಂದುಗಳಲ್ಲಿ ಬಹುಕಾಲದಿಂದ ಬೇರೂರಿದ ಈ ಧಾರ್ಮಿಕ ಅನ್ಯಾಯವನ್ನು ಒಮ್ಮೆಲೇ ನಿವಾರಣೆ ಮಾಡಲು ಮುಂದರಿಯುವ ಧೀರರು ವಿರಳವಾಗಿದ್ದಾರೆ. ಜನರಲ್ಲಿ ಸಾಂಪತ್ತಿಕ ಹೀನಾವಸ್ಥೆಯೂ ಈಗ ವಿಶೇಷವಾಗಿದೆ. ಈ ಎಲ್ಲ ಕಾರಣಗಳಿಂದ ಮೊದಲಿನ ಸಂಚಾರಗಳಂತೆ ಈ ಸಾರೆಯ ಸಂಚಾರವು ಅದ್ಭುತವಾಗಿ ತೋರದಿದ್ದರೂ, ಅದಿಜನಗಳ ಸುಧಾರಣೆಯ ನಾನಾ ಕಾರ್ಯಗಳು ಮಾತ್ರ ಅಪೂರ್ವವಾಗಿಯೇ ಜರುಗುವುದರಲ್ಲಿ ಸಂದೇಹವಿಲ್ಲ.

ಪರಮಾತ್ಮನು ಗಾಂಧೀಜಿಯವರ ಈ ಮಹಾ ಪ್ರಯಾಣವನ್ನು ಜಯಪ್ರದವಾಗಿ ನೆರವೇರಿಸಲೆಂದು ನಾವು ಹಾರೈಸುತ್ತೇವೆ.

ಸ್ಫುಟ ಸೂಚನೆ.

ಗವ್ಹರ್ನರ ಸಾಹೇಬರ ಅಭಿಪ್ರಾಯ.

ಮುಂಬಯಿ ಪ್ರಾಂತದ ಗವ್ಹರ್ನರ್ ಸಾಹೇಬರಾದ ಸರ್. ಫ್ರೆಡರಿಕ್ ಸಾಯಿಕ್ಸ್‌ರವರು ಈ ವಾರದಲ್ಲಿ ದಕ್ಷಿಣ ಭಾಗಕ್ಕೆ ಆಗಮಿಸಿದ್ದರು. ಕೊಲ್ಲಾಪುರಕ್ಕೆ ತಾ. ೩ನೆಯ ದಿವಸ ಹೋಗಿ ಅಲ್ಲಿಯ ಮಹಾರಾಜರಿಂದ ವಿಶೇಷವಾದ ಮನ್ನಣೆಯನ್ನು ಹೊಂದಿ ಸಾಯಿಕ್ಸ್ ಲಾ ಕಾಲೇಜ್ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಅನಂತರ ಧಾರವಾಡಕ್ಕೆ ತಾ. ೫ನೆಯ ದಿವಸ ಆಗಮಿಸಿ ಮುನಸಿಪಾಲಿಟಿ, ಲೋಕಲ್ ಬೋರ್ಡು ಮತ್ತು ಲಿಂಗಾಯತ ಎಜ್ಯುಕೇಶನಲ್ ಸೊಸೈಟಿಗಳ ಮಾನಪತ್ರಗಳನ್ನು ಸ್ವೀಕರಿಸಿದರು. ಮುನಸಿಪಾಲಿಟಿಯ ವಿಜ್ಞಾಪನಾ ಪತ್ರಿಕೆಗೆ ಉತ್ತರ ಹೇಳುವಾಗ ಕರ್ನಾಟಕ ಏಕೀಕರಣಕ್ಕೆ ಸರಕಾರದ ಒಪ್ಪಿಗೆಯಿಲ್ಲವೆಂದು ತಿಳಿಸಿದು ಅತ್ಯಂತ ದುಃಖದ ಸಂಗತಿಯಾಗಿದೆ.

ಇದು ಹೆಚ್ಚು ವೆಚ್ಚದ ಸಂಗತಿಯೆಂದು ಗವ್ಹರ್ನರ್ ಸಾಹೇಬರು ಹೇಳಿದರು. ಸಿಂಧ ಪ್ರಾಂತವನ್ನು ಬೇರೆ ಮಾಡಿ ಅದರ ವೆಚ್ಚವನ್ನು ಬೇರೆ ಪ್ರಾಂತಗಳಿಂದ ನಿರ್ವಹಿಸಲು ಸರಕಾರವು ಸಿದ್ಧವಾಗಿದೆಯಷ್ಟೆ. ಇಂಥ ಭಾರವೇನೂ ಕರ್ನಾಟಕ ಏಕೀಕರಣದಿಂದ ಸರಕಾರದ ಮೇಲೆ ಬೀಳುವಂತಿಲ್ಲ. ಈ ವಿಷಯದಲ್ಲಿ ವಿಧಾಯಕವಾದ ಚಟುವಟಿಕೆಗಳು ತೀವ್ರತರವಾಗಿ ನಡೆಯದಿದ್ದರೆ ಸರಕಾರವು ಇತ್ತ ಲಕ್ಷಿಸಲಾರದೆಂದೇ ಗವ್ಹರ್ನರ್ ಸಾಹೇಬರ ಅಭಿಪ್ರಾಯದಿಂದ ಸ್ಪಷ್ಟವಾಯಿತು.

ಯುದ್ಧದ ಸಿದ್ಧತೆಯೇ?

ಯುರೋಪಖಂಡವು ಪ್ರಪಂಚಕ್ಕೆ ಜ್ವಾಲಾಮುಖಿಯಂತಿದೆ. ಯಾವ ಕಾಲದಲ್ಲಿ ಜ್ವಾಲೆಯು ಹೊರಬೀಳುವದೋ ತಿಳಿಯದು. ಯುರೋಪದ ಮಹಾ ಯುದ್ಧವು ಅನೇಕ ಅನರ್ಥ ಪರಂಪರೆಗಳಿಗೆ ಕಾರಣವಾಯಿತಷ್ಟೆ. ಈಗ ಪುನಃ ಯುದ್ಧದ ಸಿದ್ಧತೆಯೇ ಆ ಖಂಡದಲ್ಲಿ ನಡೆದಂತೆ ತೋರುತ್ತದೆ.

ರಾಷ್ಟ್ರ ಸಂಘೆ ಮತ್ತು ಶಸ್ತ್ರ ಸನ್ಯಾಸ ಪರಿಷತ್ತುಗಳು ನೆವಮಾತ್ರವಾಗಿವೆಯೇ ವಿನಾ ದೀನ ರಾಷ್ಟ್ರಗಳ ರಕ್ಷಣೆಯಾಗಲಿ ಜಗತ್ತಿನ ಶಾಂತತೆಯಾಗಲಿ ಇವುಗಳಿಂದುಂಟಾಗುವುದು ಶಕ್ಯವಿಲ್ಲವೆಂದೇ ತೋರುತ್ತದೆ. ಅನ್ಯ ರಾಷ್ಟ್ರಗಳು ಮುಂದರಿಯ ಬಾರದೆಂದೇ ಪ್ರತಿಯೊಂದು ರಾಷ್ಟ್ರವೂ ಅನೇಕ ಕಪಟೋಪಾಯಗಳನ್ನು ಮಾಡುತ್ತಿರುತ್ತದೆ.

ಜರ್ಮನಿಯು ರಾಷ್ಟ್ರಸಂಸ್ಥೆಯಿಂದಲೂ ಶಸ್ತ್ರಸನ್ಯಾಸ ಪರಿಷತ್ತಿನಿಂದಲೂ ಬೇರೆಯಾಗಿರುವುದು ಯುದ್ಧದ ಸಿದ್ಧತೆಯೆಂದೇ ಕೆಲವರ ಯೋಚನೆ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿ ಈ ಮೂರು ರಾಷ್ಟ್ರಗಳೂ ಏಕಾಭಿಪ್ರಾಯದಿಂದ ಜರ್ಮನಿಗೆ ಪ್ರತ್ಯುತ್ತರವನ್ನು ಕೊಡಬೇಕೆಂತಲೂ ಹಾಗೆ ಮಾಡದಿದ್ದರೆ ಯುರೋಪ ಖಂಡಕ್ಕೇನೇ ತಾನು ಇನ್ನು ವಂದೆ ಬರುವುದಿಲ್ಲವೆಂತಲೂ ಅಮೇರಿಕೆಯ ಪ್ರತಿನಿಧಿಗಳು ಹೇಳಿರುವುದನ್ನು ನೋಡಿದರೆ ಯುರೋಪದ ವಾತಾವರಣವು ಪ್ರಕ್ಷುಬ್ಧವಾದಂತೆ ಕಾಣುತ್ತದೆ.

ನಿಮ್ಮ ಶರಣರ ಸೇವೆಯಲ್ಲಿರಿಸು.

ಲಿಂ. ಶ್ರೀ ಹಡೇ[illegible]ರು ಮಂಜಪ್ಪನವರು

ಪರತತ್ವದ ನಿಜಸಂಯುಕ್ತರ ಅನು ನೀನೆಂಬ ಶಬ್ದಸುಖಿಗಳ ತೋರಾ ಎನಗೆ | ಮಹಾನುಭಾವರ ತೋರಾ ಎನಗೆ | ಲಿಂಗೈಕ್ಯರ ಲಿಂಗಸುಖಿಗಳ ಲಿಂಗ ಗೂಡಾಗಿಪ್ಪವರ ಲಿಂಗಾಭಿಮಾನಿಗಳ ತೋರಾ ಎನಗೆ | ಅಹೋ ರಾತ್ರಿಯಲ್ಲಿ ನಿಮ್ಮ ಶರಣರ ಸೇವೆಯಲ್ಲಿರಿಸು ಕೂಡಲ ಸಂಗಮದೇವ||

ಪರಮಾತ್ಮನನ್ನು ಕಾಣಲು ಅನೇಕ ಮಹಿಮಾಶಾಲಿಗಳು ಅನೇಕ ಮಾರ್ಗಗಳನ್ನು ತೋರಿಸಿದ್ದಾರೆ. ಯಜ್ಞ ಯಾಗಾದಿ ಕರ್ಮಗಳ ಮೂಲಕವೇ ಪರಮಾತ್ಮನನ್ನು ಕಾಣಲು ಶಕ್ಯವೆಂದು ಕೆಲವರ ಮತವಿದ್ದರೆ ಕೆಲವರು ಜ್ಞಾನದಿಂದಲೇ ಪರತತ್ವ ಪ್ರಾಪ್ತಿಯೆಂದು ಪ್ರಸ್ತಾಪಿಸುತ್ತಾರೆ ಹಲವರಂತೆರೋ ನಿಸ್ಸೀಮ ಪ್ರಾರ್ಥನೆಯಿಂದಲೇ ಆ ಕರುಣಾಕರನ ಕಾರುಣ್ಯವನ್ನು ಸಂಪಾದಿಸಲು ಹವಣಿಸುತ್ತಿದ್ದರೆ ಕೆಲವರು ಅಹಿಂಸಾ ಧರ್ಮದಿಂದ ಆ ಪರಮಾರ್ಥವನ್ನು ಪಡೆಯಬಹುದೆಂದು ಹೇಳುತ್ತಾರೆ.| ಇಂಥ ಅನೇಕ ಮಾರ್ಗಗಳು ಈ ಕರ್ಮಭೂಮಿಯಲ್ಲಿ ಆಚರಿಸಲ್ಪಡುತ್ತಿದ್ದರೂ ಮಹಾನುಭಾವರಾದ ಶ್ರೀ ಬಸವಣ್ಣನವರು ಆಚರಿಸಿ ತೋರಿಸಿದ ಮಾರ್ಗವು ಪ್ರಿಯಕರವೂ, ಭಯಾನಕ ರಹಿತವೂ, ಸುಬದ್ಧವೂ, ಸರಲವೂ ಆಗಿದೆ. ಈ ವಚನದಲ್ಲಿ ಹೇಳಲ್ಪಟ್ಟಿರುವದು ಇದೇ ಮಾರ್ಗವು. ಇದು ಎಷ್ಟರಮಟ್ಟಿಗೆ ನಿಜಾಂಶಾನುಕೂಲವಾಗಿರುವದೆಂಬುದನ್ನು ನೋಡುವಾ.

ಪರಮಾತ್ಮನನ್ನು ಕಾಣಬೇಕಾದರೆ ಮಾಯಾಪಾಶ ನಶಿಸಬೇಕು. ಈ ಮಾಯಾಜಾಲವು ಕೇವಲ ಕರ್ಮ ಕಾರಿಣ್ಯದಿಂದ ಕೊರಗದು; ಇಲ್ಲವೆ ಸುಜ್ಞಾನಭಾನುವಿನಿಂದ ಛೇದಿಸದು. ಯಾಕಂದರೆ ಒಂದರಲ್ಲಿ ಕಳೆದು ಕೊಳ್ಳುವನನು ತಾನೆಂಬ ದ್ವೈತ ಭಾವನೆಯಿದ್ದರೆ ಮತ್ತೊಂದರಲ್ಲಿ ಮಾಯೆಯು ತನ್ನ ಅಂಶ ಮಾತ್ರವೆಂಬ ಅಹಂ ಮನ್ಯತೆ ಇರುವದು. ಇವೆರಡೂ ಅಹಂಕಾರಕ್ಕೆ ಒಳಗು. ಈ ಅಹಂಕಾರ ತೊಲಗಬೇಕಾದರೆ ಪರಮಾತ್ಮಾರ್ಪಣ ಬುದ್ಧಿಯಿಂದ ಕರ್ಮವನ್ನಾಗಲಿ ಜ್ಞಾನವನ್ನಾಗಲಿ ಆಚರಿಸದೆ ಗತ್ಯಂತರವಿಲ್ಲ. ಅರ್ಪಣದಿಂದಲೇ ಅಹಂಕಾರ ಕೆಡುವದು. ಲಿಂಗಾರ್ಪಿತ ವ್ಯವಹಾರವೇ ಅಂಗವಿಕಾರದ ಪರಿಹಾರ.

ಇದಲ್ಲದೆ ಲಿಂಗಾಯತನು ಲಿಂಗಪ್ರಾಣಿಗಳ ಹಂಬಲಿಗನು. ಮನುಷ್ಯನು ಸಮಾಜಪ್ರಿಯನಾಗಿರುವುದರಿಂದ ಸಮಾಜದಲ್ಲುಂಟಾಗುವ ಭಾವನೆಗಳು—ಅವು ಒಳ್ಳೆಯವೇ ಇರಲಿ, ಕೆಟ್ಟವೇ ಇರಲಿ—ಅವನಲ್ಲಿ ಅಂಕುರಿಸುವವು ಆದುದರಿಂದ ಶರಣರ ಸಂಗದ ಪ್ರಭಾವದಿಂದ ಅಂಗವಿಕಾರಗಳು ಏನೊಂದು ಪ್ರಯತ್ನವಿಲ್ಲದೆ ಅಡಗುವವು. ಲಿಂಗವನ್ನು ಕಾಣಬೇಕೆಂದಪೇಕ್ಷಿಸುವ ಲಿಂಗಧಾರಿಯು ಯಾವಾಗಲೂ ಲಿಂಗೈಸುಖಿಗಳ, ಲಿಂಗಿನೈಹಿಗಳ, ಲಿಂಗಾಶ್ರಿತ ಲಿಂಗಾಭಿಮಾನಿ ಶರಣರ ಸಂಗ ಮಾಡಬೇಕು.

ಶರಣರ ಆ ಸಂಗವಾದರೋ ಯಾವುದೊಂದು ಐಹಿಕ ಪದಾರ್ಥವನ್ನು ಕೊಟ್ಟು ಪಡೆಯತಕ್ಕುದಲ್ಲ ಲಿಂಗಭೋಗೋಪಭೋಗಿಗಳಾದ ಶರಣರು ಬೇರೆ ಯಾವ ಪದಾರ್ಥದಿಂದ ಒಲೆಯುವರು? ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಅಹೋರಾತ್ರಿಯಲ್ಲಿ ಶರಣರ ಸೇವೆಗಾಗಿ ಒಲಿದ ಬಂಟನೇ ಶರಣರನ್ನು ಒಲಿಸುವನು. ಆದುದರಿಂದ ಪರಮಾತ್ಮನನ್ನು ಕಾಣಬೇಕಾದರೆ ಮಾಯಾಜಾಲ ತೊಲಗಬೇಕು. ಮಾಯೆಯು ಹಿಂಗಬೇಕಾದರೆ ಶರಣರ ಸಂಗಬೇಕು. ಅದಾದರೊ ಸೇವೆಯಿಂದಲೇ ಸಾಧ್ಯ. ಆದುದರಿಂದ ಮಹಾನುಭಾವಿಗಳು "ಶಿವಶರಣರ ಮನೆಯ ತಪೆಸೇವೆಗಳ ಮಾಡಿ ಭವವೆಗೆದ್ದೆನು ಎನಗ ಪರಿಯವಾರು" ಎಂದು ಹೇಳಿದ್ದಾರೆ

ಶರಣರ ಸೇವೆಯು ಭಕ್ತಿಯ ಕುರುಹು. ಶರಣರ ಸೇವೆಯಲ್ಲಿ ಜ್ಞಾನವಿಜ್ಞಾನದ ಜಿಜ್ಞಾಸೆ ಇದ್ದರೂ ಅಜ್ಞಾನದ ಭ್ರಾಂತಿಗೆ ಇಲ್ಲಿ ಹಿಂಗಾಗಿ ಸೇವೆಯು ರಾಜಮಾರ್ಗ, ತಿರುಳ್ಗಾಮುರಿಗಳು, ಏರು ಬೀಳುಗಳೂ ಅದರಲ್ಲಿಲ್ಲ. ಅಹಂಕಾರವೆಂಬ ಭವದ ಭೀತಿ ಮೊದಲೇ ಇಲ್ಲ.

ಶರಣರ ಸೇವೆಯು ಎಲ್ಲರಿಗನುಕೂಲ. ಗಂಡಸರೇ ಆಚರಿಸಬೇಕು, ಹೆಣ್ಣುಮಕ್ಕಳು ಆಚರಿಸಕೂಡದು ಎಂಬ ತೊಡಕು ಅದರಲ್ಲಿಲ್ಲ. ಬಾಲರೇ ಸೇವೆ ಮಾಡಲು ಅರ್ಹರು ವೃದ್ಧರು ಅರ್ಹರಲ್ಲ ಎಂಬ ಗರ್ಹಣೀಯವಾದ ಮಾರ್ಗವದಲ್ಲ.

ಇಂಥ ಸುಲಲಿತ ಮಾರ್ಗವನ್ನು ಶ್ರೀ ಬಸವಣ್ಣನವರು ಯಾವ ರೀತಿಯಿಂದ ತೋರಿಸಿದರು? ಅಮಾತ್ಯರ ಅಧಿಕಾರವಾಣಿಯಿಂದಲೇ? ಇಲ್ಲ. ಅನುಭಾವಿಗಳ ಅಮೃತ ವಚನದಿಂದ. ಅನುಭಕ್ತನೆಂಬ ಉಬ್ಬಿನ ನುಡಿಯಿಂದಲೇ? ಇಲ್ಲ. ನಾನು ಕಿರಿಯನೆಂಬ ಸರಸವಾಗ್ಝರಿಯಿಂದ. ಮಾತಿನಂತೆ ಮನವಿಲ್ಲದ ಟೊಳ್ಳು ನುಡಿಯಿಂದಲೇ? ಅಲ್ಲವೇ ಅಲ್ಲ. ಹಿರಿಯಣ್ಣನು ಕಿರಿಯ ತಮ್ಮನಿಗೆ ಕಲಿಸುವಂತೆ ಹಿರಿದಾದ ದಾಸೋಹದಿಂದ.

ವೀರಶೈವ ವಿದ್ಯಾಲಯ.

ಪರಮಪೂಜ್ಯ ಶ್ರೀಮನ್ನಿರಂಜನ ಶ್ರೀ. ಮೃತ್ಯುಂಜಯ ಮಹಾಸ್ವಾಮಿಗಳವರು ಕಳೆದ ಬುಧವಾರ ಇಲ್ಲಿಗೆ ಆಗಮಿಸಿ ಪದ್ಧತಿಯಂತೆ ಗುರುವಾರ ದಿವಸ ವಚನ ಪ್ರವಚನವನ್ನು ನಡೆಯಿಸಲು ಅಪ್ಪಣೆ ಕೊಡಿಸಿದರು. ಶೂನ್ಯ ಸಂಪಾದನೆಯ ಪ್ರವಚನವು ಶ್ರೀ. ಹಡೇ[illegible]ರ ಮಂಜಪ್ಪನವರಿಂದ ಪ್ರತಿನಿತ್ಯ ಪ್ರಾತಃಕಾಲ ನಡೆಯುತ್ತಲಿದೆ. ಬಾಗೇವಾಡಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರೂ ವಿದ್ಯಾರ್ಥಿಗಳೂ ಬಂದಿದ್ದಾರೆ.

ಗಜೇಂದ್ರಗಡದಿಂದ ಶ್ರೀ ಚನ್ನಬಸವಪ್ಪನವರು ನಂದಿಹಾಳ, ಶ್ರೀ. ವೀರಪ್ಪನವರು ಕುಂದರಗಿ, ಶ್ರೀ. ಅಂದಾನಪ್ಪನವರು ಕುಂದರಗಿ ಮೊದಲಾದವರು ಪೌರ್ಣಿಮೆ ದಿವಸ ಒಂದು ವಿದ್ಯಾಲಯದ ಕಾರ್ಯಗಳನ್ನು ನೋಡಿ ಸಂತೋಷಪಟ್ಟ ಶ್ರೀ. ನಂದಿಹಾಳ ಚನ್ನಬಸಪ್ಪನವರು ಕಟ್ಟಡಕ್ಕಾಗಿ ೧೫೫ ರೂ. ಗಳನ್ನೂ, ಶ್ರೀ. ಕುಂದರಗಿ ಅಂದಾನಪ್ಪನವರು ಅಸ್ಪೃಶ್ಯತಾ ನಿವಾರಣೆ ಪುಸ್ತಕ ಪ್ರಕಟನೆಗೆ ೫೦ ರೂ. ಗಳನ್ನೂ ಕೊಡುವುದಾಗಿ ವಾಗ್ದಾನ ಮಾಡಿದರು.

ವ.ವಸಾ.ಪಕ.

ವಿವಿಧ ವಿಷಯ.

ಮಾತೃಭೂಮಿಯ ಮಹತ್ವ.

ಪ್ಯಾಲೆಸ್ಟೈನವು ಯಹೂದಿ ಜನರ ಮಾತೃಭೂಮಿಯು. ಜೆರೂಸಲೇಮವು ಅದರ ಮುಖ್ಯ ಪಟ್ಟಣ. ಇದು ಯಹೂದಿಗಳಿಗೂ, ಕ್ರೈಸ್ತರಿಗೂ, ಅರಬರಿಗೂ ಪವಿತ್ರವಾದ ಸ್ಥಾನವಾಗಿದೆ. ಯಹೂದಿಗಳು ಈ ತಮ್ಮ ಮಾತೃಭೂಮಿಯನ್ನು ಬಿಟ್ಟು ಜಗತ್ತಿನ ಎಲ್ಲ ದೇಶಗಳಲ್ಲಿ ಅಲ್ಪ ಸಂಖ್ಯಾಕರಾಗಿ ವಾಸಿಸುತ್ತಿರುವರು. ಅದರೆ ಜರ್ಮನ್ ನಾಯಿಗಳು ಇವರನ್ನು ದೇಶದ್ರೋಹಿಗಳೆಂದು ಹೊರಗಟ್ಟುತ್ತಿರುವರು. ಈ ಸ್ಥಾನ ಭ್ರಷ್ಟರಾದ ಜನರೆಲ್ಲ ಪುನಃ ತಮ್ಮ ಮಾತೃಭೂಮಿಗೆ ಬರುತ್ತಿರುವರು. ಅದರೆ ಅಲ್ಲಿ ಮೊದಲೇ ಅರಬರು ವಾಸಿಸುತ್ತಿದ್ದುದರಿಂದ ಈ ಯಹೂದಿಗಳನ್ನು ಅವರು ಕಾಲಿಡಗೊಡರು. ಇದಕ್ಕಾಗಿ ಜೆರೂಸಲೇಮದಲ್ಲಿ ಅರಬರ ದೊಂಬಿಗಳಾಗಹತ್ತಿವೆ, "ಇತೋ ಭ್ರಷ್ಟಸ್ತತೋ ಭ್ರಷ್ಟಃ" ಎಂಬುವಂತೆ ಯಹೂದಿಗಳ ಸ್ಥಿತಿಯಾಗಿದೆ.

ಈ ಉದಾಹರಣೆಯಿಂದ ಉಳಿದ ದೇಶದವರು ತಮ್ಮ ಮಾತೃಭೂಮಿಯ ಮಹತ್ವವನ್ನು ತಿಳಿದುಕೊಳ್ಳಬಹುದಲ್ಲವೇ?

ಮನವಾಡದಲ್ಲಿ ಲಿಂಗಧಾರಣೆ.

ಜಗದಾಚಾರ್ಯ ಶ್ರೀ. ಸ್ವಾಮಿ ವಿರೂಪಾಕ್ಷ ವಡೆಯರ ಇವರು ಧುಳೆಯಿಂದ ಮನವಾಡಕ್ಕೆ ಬಿಜಯಂಗೈಸಿ ಅಲ್ಲಿ ಸಕಲ ಮತೀಯರೂ ಒಕ್ಕೋ ಉತ್ಸಾಹದಿಂದ ಶ್ರೀಗಳವರ ಉತ್ಸವನನ್ನು ಮಾಡಿದ ನಂತರ ಶ್ರೀಗಳವರು ಸುತ್ತುಮುತ್ತಲಿನ ಊರುಗಳಿಂದ ಉತ್ಸವಕ್ಕೆ ಬಂದ ಸಾವಿರಾರು ಜನರಿಗೆ ವೀರಶೈವ ಮತದೀಕ್ಷೆಯನ್ನು ಮಾಡಿ ಮರು ದಿವಸ ತೋಪರಗಾವ, ಮನವಾತ, ವಿಂಚೂರ, ಚಾಂದವಾಡ, ವೈಜಾಪೂರ, ಯವಲೇ ಮೊದಲಾದವುಗಳಿಂದ ಲಿಂಗಧಾರಣಾಪೇಕ್ಷೆಗಳಾಗಿ ಕಾಯ್ದುಕೊಂಡಿದ್ದ ೩೦೦ ಜನ ಬಾರುಡ (ವ್ಯಾಪಾರ) ಜಾತಿಯ ಜನರಿಗೆ ವಿಧಿವತ್ತಾಗಿ ಲಿಂಗಧಾರಣೆ ಮಾಡಿದರು. ಮಹಾತ್ಮಾ ಗಾಂಧಿಯವರ ಪರಮ ಶಿಷ್ಯರಾದ ಶ್ರೀ ಅಮೃತಲಾಲ ಶಕ್ಕರರು ಶ್ರೀಗಳವರು ಧುಳೆಯಲ್ಲಿ ಲಿಂಗಧಾರಿಗಳನ್ನಾಗಿ ಮಾಡಿದ ವಿಷಯವನ್ನು ಕೇಳಿ ಆನಂದಿತರಾಗಿ ಅಲ್ಲಿಯ ಟಳಕ ಪಾರ್ಕಿನಲ್ಲಿ ಭಾಷಣ ಮಾಡುತ್ತಿರುವಾಗ "ಇನ್ನು ಮೇಲೆ ಮ್ಯಾದರು ಅಸ್ಪೃಶ್ಯರೆಂದು ಹೇಳಲು ಯಾರಿಗಾದರೂ ಧೈರ್ಯವುಂಟೋ ಹೇಳಿರಿ. ಸ್ವಾಮಿಗಳು ಲಿಂಗಧಾರಣೆ ಮಾಡಿ ಜನರನ್ನು ಪವಿತ್ರರನ್ನಾಗಿ ಮಾಡಿರುವರು." ಇಂತೆಂದು ಶ್ಲಾಘಿಸಿದರು. ಮಹಾಸ್ವಾಮಿಗಳು ಶೀಘ್ರದಲ್ಲಿಯೇ ನಾಶಿಕ, ಅಹಮ್ಮದನಗರಗಳಿಗೆ ಹೋಗುವವರಿದ್ದು ಅಲ್ಲಿಯೂ ಇದೇ ಪ್ರಕಾರ ಲಿಂಗಧಾರಣಾ ಕಾರ್ಯ ಪಡೆಯುವದು. ಹೊಡೆಯಲಿ ಶರಣರ ಜಯಭೇರಿ!!

ಮೈಸೂರ ಸ್ವಾರ.

ಹಿಂದು ಮುಸಲ್ಮಾನರ ಐಕ್ಯವು ಹೇಗಾಗುವುದು?

ಡಾ. ಬಾಲಕೃಷ್ಣ ಎಮ್. ಎ. ಪಿ. ಎಚ್. ಡಿ. ಇವರು 'ಅರ್ಜುನ' ಎಂಬ ಪತ್ರಿಕೆಯಲ್ಲಿ ಈ ಪ್ರಕಾರವಾಗಿ ಪ್ರಸಿದ್ಧಿಸಿರುವರು.

೧. ದೇಶದ ಎಲ್ಲ ಜಾತಿಯವರೂ, ಎಲ್ಲ ಕ್ರಾಂತಿಪರರೂ ಹಿಂದು ಮುಸಲ್ಮಾನರೂ ಕೂಡಿಯೇ ದಾರಣ ಮಾಡುವಂಥ ಒಂದು ರಾಷ್ಟ್ರೀಯ ಉಡುಪನ್ನುಂಟುಮಾಡಬೇಕು.

೨. ಧರ್ಮಾಂಧತೆಯ ಸ್ಥಾನದಲ್ಲಿ ಸಹಿಷ್ಣುತೆಯುಂಟಾಗುವಂತೆ ಎಲ್ಲ ಸಂಸ್ಥೆಯವರೂ ಪ್ರಯತ್ನಿಸಬೇಕು.

೩. ಗುಪ್ತರೀತಿಯಿಂದ ಧರ್ಮ ಪರಿವರ್ತನೆ ಮಾಡುವದನ್ನು ನಿಲ್ಲಿಸಬೇಕು. ಧರ್ಮಪರಿವರ್ತನೆ ಮಾಡುವವರು ಮೊದಲೇ ಪ್ರಕಟ ಪಡಿಸಿ ಶುದ್ಧಿ ರಜಿಸ್ಟರ ದ್ವಾರಾ ರಜಿಸ್ಟರ ಮಾಡಿಸಬೇಕು.

೪. ಹಿಂದು ಮುಸಲ್ಮಾನರು ಪರಸ್ಪರ ಅನುಕರಣೀಯವಾದ ಸಂಗತಿಗಳನ್ನು ಪರಸ್ಪರ ಬಾಲಕರಿಗೆ ಕಲಿಸಬೇಕು.

೫. ಮುಸಲ್ಮಾನರು ಅರಬಸ್ಥಾನ ಮತ್ತು ಇರಾಣ ದೇಶಗಳನ್ನು ತಮ್ಮ ಆದರ್ಶವಾಗಿಟ್ಟುಕೊಳ್ಳದೆ ಹಿಂದುಸ್ಥಾನವನ್ನು ತಮ್ಮ ಮಾತೃಭೂಮಿಯೆಂದೂ ಆದರ್ಶ ಭೂಮಿಯೆಂದೂ ತಿಳಿದು ತಾವು ನಡೆಯಬೇಕು. ಈ ಭಾವವು ರುಜಿಸಿದರೆ ಪರಸ್ಪರರ ಕಲ್ಯಾಣವಾಗದಿರುವದೇ?

ಹಿಂದು ಮಹಾಸಭೆಯಲ್ಲಿ ವಿನೋದ.

ಜಗತ್ ನಾರಾಯಣರಾಯರು— "ಭಾಯಿಜಿ, ನೀವು ಹಿಂದಿಯಲ್ಲಿ ಸಹಿಮಾಡಿರಿ. ಈ ಕಾರ್ಯದರ್ಶಿಗಳಿಗಂತೂ ನಾವು ಹೇಳಿ ಹೇಳಿ ಸಾಕಾಯಿತು" ಚಾಂದ ಕೆರನ್ ಶಾರದಾ (ಕಾರ್ಯದರ್ಶಿ)— "ಜಗತ್‌ಭಾಯಿ, ತಾವು ಭಾಯಿಜಿಯವರ ಮೇಲೆ ದೋಷ ಹೊರಿಸಬೇಡಿರಿ. ಈ ವರದಿಯು ಇಂಗ್ಲಿಷಿನಲ್ಲಿದೆ. ನಾನು ಹಿಂದಿಯಲ್ಲಿ ಪತ್ರ ಬರೆದಾಗ್ಗೆ ಅವರೂ ಹಿಂದಿಯಲ್ಲೇ ಉತ್ತರ ಕೊಟ್ಟಿದ್ದಾರೆ." ಸಾವರಕರ—"ಇರಲಿ ಭಾಯಿಜಿ, ತಾವು ಈಗ ಹಿಂದಿಯಲ್ಲೇ ಸಹಿ ಮಾಡಿರಿ."

ಜಗತ್ ಬಾಬು—ಮುಗುಳನಗೆಯಿಂದ "ಹೋಗಲಿ ಬಿಡಿರಿ. ಇದಲ್ಲದೆ ಭಾಯಿಜಿಯವರ ಕೈಗಳು ಬೇರೆ ನಡುಗುತ್ತವೆ."

ಸಾವರಕರ— "ಯಾಕೆ ಭಾಯಿಜಿ, ಇದು ಹೇಗಾಯಿತು? ಭಾಯಿ ಪರಮಾನಂದಜಿ— "ಇದೆಲ್ಲವೂ ತಮ್ಮ ಕೃಪೆಯಲ್ಲವೆ? ಮೊದಲು ತಾವು ಅಂದಮಾನಕ್ಕೆ ಹೋಗಿರಿ. ಆ ಮೇಲೆ ನಮ್ಮನ್ನ ಕರೆಯಿಸಿಕೊಂಡಿರಿ. ಅಲ್ಲಿಗೆ ಹೋದಂದಿನಿಂದ ನನ್ನ ಕೈಗಳು ನಡುಗುತ್ತಿವೆ."

ಜಗತ್ ಬಾಬು—"ಹಾಗಾದರೆ ಬಾಬಾ ಸಾವರಕರರ ಉಪಕಾರವನ್ನು ತೀರಿಸುವವನ್ನು ನೀವು ಒಕ್ಕೋ ಕಳೆದುಕೊಂಡು ಬಿಟ್ಟಿರಿ ಯಾಕಂದರೆ ಮೊದಲು ನೀವು ಹೊರಗೆ ಬಂದಿರಿ ಆ ಮೇಲೆ ಇವರನ್ನು ಕರೆಯಿಸಿಕೊಂಡಿರಿ." ಎಲ್ಲರೂ ಗೊಳ್ಳನೇ ನಗಹತ್ತಿದರು.

ಮರುಭೂಮಿಯಲ್ಲಿ ನೀರಿನ ಕಾಲುವೆ.

ಸಹರಾ ಮರುಭೂಮಿಯನ್ನು ಯಾರು ಬಲ್ಲವರಿಲ್ಲ? ಎತ್ತ ನೋಡಿದತ್ತ ಉಸುಕಿನ ಬೈಲು. ಅದೊಂದು ಉಸುಕಿನ ಸಮುದ್ರವೆಂದರೂ ಅನ್ನಬಹುದು. ಮಳೆಯಂತೂ ಅಲ್ಲಿ ಎಂದೂ ಬೀಳುವದಿಲ್ಲ. ಜನವಸತಿಯೇನೂ ಇರುವದಿಲ್ಲ. ಇಂಥ ಭೀಷಣ ಅರಣ್ಯವನ್ನು ಫಲವತ್ತಾಗಿ ಮಾಡುವ ಯೋಜನೆಯನ್ನು ಒಬ್ಬ ಜರ್ಮನ್ ಶಾಸ್ತ್ರಜ್ಞನು ಮಾಡಿರುವನು. ಇದಕ್ಕಾಗಿ ಭೂಮಧ್ಯ ಸಮುದ್ರದಲ್ಲಿರುವ ಜಿಬ್ರಾಲ್ಟರ ಸಾಮುದ್ರ ಧುನಿಯ ಮುಖಕ್ಕೆ ಆಣೆಕಟ್ಟು ಕಟ್ಟಿ ಅಲ್ಲಿಂದ ಸಂಚಯವಾದ ನೀರನ್ನು ಕಾಲುವೆಯ ಮಾರ್ಗವಾಗಿ ತಂದು ಸಹರಾ ಅರಣ್ಯದ ಮಧ್ಯ ಭಾಗದಲ್ಲಿ ಒಂದು ಸರೋವರವನ್ನು ನಿರ್ಮಾಣ ಮಾಡಿದರೆ ಆ ಸರೋವರದ ನೀರು ಉಗಿಯಾಗಿ ಸುತ್ತಲಿನ ಪ್ರದೇಶದಲ್ಲೆಲ್ಲ ಮಳೆಯನ್ನು ಸುರಿಸುವದೆಂದೂ ಅದರಿಂದ ಆ ಪ್ರದೇಶವೆಲ್ಲ ಫಲವತ್ತಾಗುವದೆಂದೂ

ಆ ಶಾಸ್ತ್ರಜ್ಞನ ಅಭಿಪ್ರಾಯ. ಇದು ಎಷ್ಟರ ಮಟ್ಟಿಗೆ ಸುಸಿದ್ಧಿಸುವದೋ ನೋಡಬೇಕು.

ಪಾಶ್ಚಾತ್ಯರು ತಮ್ಮ ಬುದ್ಧಿ ಸ್ಪಯತ್ನಗಳಿಂದ "ಲಘೀತ ಏಕತಾಸು ತೈಲಮಪಿ ಯತ್ನತಃ ಪೀಡಯನ್" ಎಂಬ ವಾಕ್ಯವನ್ನು ದೃಢೀಕರಿಸುತ್ತಿದ್ದಾರಲ್ಲವೇ?

ಆರು ಆನೆಗೆ ಏಳು ದಿವಸ.

ಮೊನ್ನೆ ಮುಂಬಯಿಯಲ್ಲಿ ಇಬ್ಬರು ಸಮುದ್ರ ದಂಡೆಯ ಮೇಲೆ ಮಧ್ಯರಾತ್ರಿಯವರೆಗೆ ಮಾತಾಡುತ್ತ ಕುಳಿತಿದ್ದರು. ಅಷ್ಟರಲ್ಲಿ ಒಬ್ಬ ಮುಸಲ್ಮಾನನು ಸಿ. ಐ. ಡಿ. ವೇಷವನ್ನು ಹಾಕಿ ಆ ಇಬ್ಬರ ಹತ್ತಿರ ಬಂದು— "ನೀವು ಯಾರು? ಇಷ್ಟು ರಾತ್ರಿಯಲ್ಲಿ ನೀವು ಕೂತಿರುವುದನ್ನು ನೋಡಿದರೆ ನನಗೆ ಸಂಶಯ ಬರುತ್ತದೆ. ನಾನು ಸಿ. ಐ. ಡಿ. ಇರುವೆನು ಅದುದರಿಂದ ನಿಮ್ಮನ್ನು ಪರೀಕ್ಷೆ ಮಾಡುವೆನು." ಹೀಗೆಂದು ಅವನು ಅವರಿಬ್ಬರ ಕೆಸೆಗಳನ್ನು ಪರೀಕ್ಷಿಸಿ ಜೇಬಿನಲ್ಲಿದ್ದ ೬ ಆನೆಗಳನ್ನು ತೆಗೆದುಕೊಂಡು "ಇಲ್ಲಿಂದ ಹೊರಟು ಹೋಗರಿ ಇಲ್ಲದಿದ್ದರೆ ಬಂಧಿಸುವೆನು" ಎಂದು ಕಳಿಸಿದನು. ಅವರಿಬ್ಬರಿಗೆ ಇವನ ವಿಷಯವಾಗಿ ಸಂಶಯ ಬಂದು ಪೋಲೀಸರಿಗೆ ತಿಳಿಸಲು ಆ ಮುಸಲ್ಮಾನನು ಕೂಡಲೇ ಬಂಧಿಸಲ್ಪಟ್ಟನು. ಮ್ಯಾಜಿಸ್ಟ್ರೇಟರು ಅವನಿಗೆ ೬ ದಿವಸಗಳ ಶಿಕ್ಷೆಯನ್ನು ಕೊಟ್ಟರು.

ಕಳ್ಳರು ಈಗೀಗ ಪೋಲೀಸರ ಇಲ್ಲವೆ ಸಿ. ಐ. ಡಿ. ಗಳ ವೇಷದಿಂದ ಕದಿಯಲು ಪ್ರಾರಂಭಿಸಿರುವರು. ಅಂದಮೇಲೆ ಸಿ. ಐ. ಡಿ. ಗಳು ಕಳ್ಳರ ವೇಷವನ್ನು ಧರಿಸಿ ಅವರನ್ನು ಹಿಡಿಯಬೇಕಾಗುವದಲ್ಲವೇ?

ಗಗನ ಚುಂಬಿತ ಸ್ತಂಭ.

೧೯೩೭ನೆಯ ಇಸವಿಯಲ್ಲಿ ಫ್ರಾನ್ಸದಲ್ಲಿ ನೆರೆಯುವ ಪ್ರಚಂಡ ಜಾಗತಿಕ ಪ್ರದರ್ಶನದಲ್ಲಿ ೩೫೦ ಫೂಟು ಎತ್ತರವಾದ ಒಂದು ಸ್ತಂಭವನ್ನು ತಯಾರಿಸಲು ಫ್ರಾನ್ಸವು ಟೊಂಕಾ ಕಟ್ಟಿದೆ. ಈ ಸ್ತಂಭದ ಮೇಲೆ ಮೋಟಾರುಗಳು ಹೋಗುವದಕ್ಕೆ ಮಾರ್ಗ ಮಾಡುವರು ಮತ್ತು ೧೬೦೦ ಫೂಟು ಎತ್ತರದ ಮೇಲೆ ೪೦೦ ಮೋಟಾರುಗಳು ನಿಲ್ಲ ಸಹುವ ಪ್ರಶಸ್ತ ಸ್ಥಳ ಮಾಡುವರು. ಮೇಲಿನ ೭೦೦ ಫೂಟು ಎತ್ತರಿಕ್ಕೆ ವಿದ್ಯುತ್ತಿನ ತೊಟ್ಟಿಲುಗಳನ್ನು ಮಾಡುವರು. ಈ ಸ್ತಂಭದ ಶಿಖರದಲ್ಲಿ ಒಂದು ವೇಧ ಶಾಲೆಯನ್ನೂ ಮತ್ತು ಅದರ ಕೆಳಗೇ ಒಂದು ದೀಪಗೃಹವನ್ನೂ ಮಾಡುವರು. ಈ ದೀಪದ ಪ್ರಕಾಶವು ೧೩೦ ಮೈಲುಗಳವರೆಗೆ ಬೀಳುವದು. ದೀಪಗೃಹದ ಕೆಳಗೆ ಶಾಸ್ತ್ರೀಯ ಸಂಶೋಧನ ಶಾಲೆಯೂ ಅದರ ಕೆಳಗೆ ಒಂದು ದೊಡ್ಡ ಉಪಹಾರಗೃಹವೂ ಮಾಡಲ್ಪಡುವವು. ಇವುಗಳ ಕೆಳಗೆ ಕೆಳಗಿನ ಕಟ್ಟಡಗಳಲ್ಲಿ ಭಿನ್ನ ಭಿನ್ನ ಚಟುವಟಿಕೆಯ ಗೃಹಗಳೂ ಮತ್ತು ಜಾಗತಿಕ ಪ್ರದರ್ಶನ ಸಭೆಗಳೂ ಆಗುವವು. ಸದ್ಯಕ್ಕೆ ಅಮೇರಿಕೆಯಲ್ಲಿರುವ ಸ್ತೂಭವು ೧೮೫೦ ಫೂಟು ಇದೆ. ಅದಕ್ಕಿಂತಲೂ ಇದು ಎರಡರಷ್ಟು ಎತ್ತರವಾಗುವುದು. ಮನುಷ್ಯನ ಬುದ್ಧಿಗೆ ಬೆಲೆಯುಂಟು!

ಕರ್ಪೂರವು ಎಲ್ಲಿ ಹುಟ್ಟುತ್ತದೆ?

ಕರ್ಪೂರವನ್ನು ಪ್ರತಿಯೊಬ್ಬರೂ ಬಲ್ಲರು. ಆದರೆ ಅದು ಎಲ್ಲಿ ದೊರೆಯುತ್ತದೆ ಎಂಬುದು ಬಹು ಜನರಿಗೆ ಗೊತ್ತಿರುವುದಿಲ್ಲ. ನಮ್ಮ ದೇಶದಲ್ಲಿ ದೊರೆಯುವ ಕರ್ಪೂರವು ಅಲ್ಪ ಪ್ರಮಾಣದಲ್ಲಿರುತ್ತದೆ. ಆದರೆ ಜಗತ್ತಿಗೆಲ್ಲ ಪೂರೈಕೆಯಾಗುವ ಕರ್ಪೂರವು ಫೋರ್ಮೋಸಾ ಎಂಬ ದ್ವೀಪದಲ್ಲಿ ದೊರೆಯುತ್ತದೆ. ಇದು ಈಗ ಜಪಾನಿಗಳ ವಶದಲ್ಲುಂಟು. ಈ ದ್ವೀಪದಲ್ಲಿ ನರಮಾಂಸ ಭಕ್ಷಕ ಮೂಲನಿವಾಸಿಗಳು ಮೊದಲು ಜಪಾನಿಗಳಿಗೆ ಬಹಳ ತೊಂದರೆಯನ್ನು ಕೊಟ್ಟರು. ಆದರೆ ಜಪಾನಿಗಳು ಅವರ ಸಂಗಡ ಯೋಗಾಡಿ ಅಲ್ಲಿ ಕರ್ಪೂರ ತೆಗೆಯಲು ಯಂತ್ರಗಳನ್ನು ಹಾಕಿದರು. ಕರ್ಪೂರ ಕಟ್ಟಿಗೆಗಳ ಸಣ್ಣ ಸಣ್ಣ ತುಂಡುಮಾಡಿ ನೀರುಹಾಕಿ ಕುದಿಸಿ ಕರ್ಪೂರದ ಅಕ್ಕಿನ್ನೂ ಕರ್ಪೂರವನ್ನೂ ತಯಾರಿಸುತ್ತಾರೆ. ಈ ಕಟ್ಟಿಗೆಗೆ ಹುಳ ಹತ್ತುವದಿಲ್ಲವಾದುದರಿಂದ ಇವುಗಳ ಪೆಟ್ಟಿಗೆ ಮಾಡುತ್ತಾರೆ. ಕರ್ಪೂರವನ್ನು ಸುಗಂಧ ದ್ರವ್ಯಗಳನ್ನು ತಯಾರಿಸುವುದಕ್ಕೂ, ಮಲವನ್ನು ಕಳೆಯುವುದಕ್ಕೂ, ಬಣ್ಣವನ್ನು ತಿಳುವು ಮಾಡುವುದಕ್ಕೂ ಪಾಶ್ಚಾತ್ಯರು ಉಪಯೋಗಿಸುತ್ತಾರೆ. ಇದಲ್ಲದೆ ಪದಾರ್ಥಗಳನ್ನು ಶುದ್ಧಗೊಳಿಸುವದಕ್ಕೂ, ಇನ್ ಫ್ಲೂಯೆಂಝಾ ಬೇನೆಗೆ ಔಷಧ ಮಾಡಲಿಕ್ಕೂ, ಸೆಲ್ಯೂಲಾಯಿಡಕ್ಕೂ ಇದು ಬೇಕಾಗುತ್ತದೆ. ಜಪಾನಿಗಳು ಈ ಗಿಡಗಳನ್ನು ಕಡಿವ ಸ್ಥಳಗಳಲ್ಲಿ ಮತ್ತೆ ಗಿಡಗಳನ್ನು ಹಚ್ಚುತ್ತಾರೆ. ಹೀಗೆ ಅವರು ಇಸವಿ ೧೯೦೦ರಿಂದ ೧೯೧೯ನೆಯ ವರೆಗೆ ೧೫ ಕೋಟಿ ಕರ್ಪೂರ ಗಿಡಗಳನ್ನು ಹಚ್ಚಿದರು ಮತ್ತು ಪ್ರತಿವರ್ಷ ೭½ ಲಕ್ಷ ಗಿಡಗಳನ್ನು ಹಚ್ಚುತ್ತಾರೆ. ಜಗತ್ತಿಗೆ ೧೫ ಸಾವಿರ ಟನ್ನ ಕರ್ಪೂರ ಬೇಕು. ನಮ್ಮ ದೇಶಬಾಂಧವರು ಈ ಉತ್ತಮ ವ್ಯವಸಾಯವನ್ನು ವೃದ್ಧಿಪಡಿಸುವದಲ್ಲದೆ ಅದನ್ನು ಪಾಶ್ಚಾತ್ಯರಂತೆ ನಾನಾ ತರದ ಉಪಯೋಗ ಮಾಡಿಕೊಳ್ಳುವದು ಯುಕ್ತವಲ್ಲವೇ?

(೬ನೆಯ ಪುಟದಿಂದ ಒಂದುದು)

ಆರನೆಯದು ಕನ್ನಡ ಟೈಪರೈಟರನ್ನು ಸಿದ್ಧಪಡಿಸಲು ಬಹು ಮಾನವನ್ನು ಇಡುವದು ಮುಂತಾದವುಗಳು.

ಇಷ್ಟಲ್ಲದೆ ಆ ಹೊತ್ತಿಗೆ ಎಲ್ಲ ಪರಿಷತ್ತುಗಳನ್ನು ಅಲ್ಲಿಯೇ ಕರೆಯುಬೇಕು. ಉದಾಹರಣಕ್ಕೆ ಸಾಹಿತ್ಯ ಸಮ್ಮೇಲನ ೨ ಕವಿ ಸಮ್ಮೇಲನ ೩ ನಾಟ್ಯ ಪರಿಷತ್ತು ೪ ಕರ್ನಾಟಕ ಏಕೀಕರಣ ಪರಿಷತ್ತು, ೫ ಐತಿಹಾಸಿಕ ಪರಿಷತ್ತು, ೬ ಆರ್ಥಿಕ ಪರಿಷತ್ತು, ೭ ಸ್ವಯಂಸೇವಕರ ಪರಿಷತ್ತು, ೮ ಸೌಂದರ್ಯಲಹರಿ ೯ ಮಹಿಳಾ ಪರಿಷತ್ತು, ೧೦ ಸಂಗೀತ ಪರಿಷತ್ತು, ೧೧ ಪಂಡ್ಯಾಟಗಳು ಇತ್ಯಾದಿ ಮತ್ತು ೧ ಕಲಾಪ್ರದರ್ಶನ, ೨ ಐತಿಹಾಸಿಕ ವಸ್ತು ಪ್ರದರ್ಶನ ೩ ಕರ್ನಾಟಕದಲ್ಲಿಯ ವೃತ್ತಪತ್ರಗಳ ಪ್ರದರ್ಶನ, ೪ ಔದ್ಯೋಗಿಕ ಪ್ರದರ್ಶನ ಇತ್ಯಾದಿಗಳನ್ನು ಏರ್ಪಡಿಸಬೇಕು.

ಸಾಹಿತ್ಯ ವಿಷಯಕ ಪರಿಷತ್ತುಗಳನ್ನು ಮಾತ್ರ ಬಿಟ್ಟು ಉಳಿದವು ಅಖಿಲಭಾರತ ಸ್ವರೂಪದವು. ಆದ್ದರಿಂದ ಈ ಉತ್ಸವಕ್ಕೆ ಕೇವಲ ಪ್ರಾಂತಿಕ ಸ್ವರೂಪ ಬಾರದೆ ಅಖಿಲಭಾರತ ಸ್ವರೂಪವು ಬರುವದು. ಮತ್ತು ಶ್ರೀ ಜಗದ್ಗುರು ಶಂಕರಾಚಾರ್ಯ (ಡಾ. ಕರ್ಪೂರಕೋಟಿ) ಇವರಿಗೆ ಜಾಗತಿಕ ಅಖಿಲ ಧರ್ಮ ಪರಿಷತ್ತನ್ನು ಇಲ್ಲಿಯೇ ಆ ಕಾಲಕ್ಕೆ ಕರೆಯಬೇಕೆಂದು ಪ್ರಾರ್ಥಿಸುವದರಲ್ಲಿ ಬಂದಿದೆ ಶ್ರೀಗಳು ಅಂತಃಕರಣ ಮಾಡಿದರೆ ಈ ಉತ್ಸವಕ್ಕೆ ಅಂತರರಾಷ್ಟ್ರೀಯ ಸ್ವರೂಪ ಬರುವದೆಂಬುದರಲ್ಲಿ ಸಂಶಯವಿಲ್ಲ.

ಆದ್ದರಿಂದ ಕನ್ನಡ ಬಂಧುಗಳೇ ಈ ಕೆಲಸವನ್ನು ಮನಸ್ಸಿನ ಮೇಲೆ ತಕ್ಕೊಂಡು ಮಾಡಬೇಕು. ಇಂಥ ಅಪೂರ್ವ ಸುಸಂಧಿಯನ್ನು ಕಳಕೊಳ್ಳದೆ ಕರ್ನಾಟಕದ ಏಳ್ಗೆಗೆ ಪ್ರಯತ್ನ ಮಾಡಬೇಕು. ಇದು ಒಬ್ಬರಿಂದ ನೂರಿನ್ನೂರು ಜನರಿಂದ ಆಗುವ ಕೆಲಸವಲ್ಲ. ಮತ್ತು ನಾಲ್ಕೈದು ತಿಂಗಳಲ್ಲಿಯೂ ಆಗಲಾರದು ಕಾರಣ ಈಗಿನಿಂದಲೇ ತಾವೆಲ್ಲರೂ ಕೆಲಸಕ್ಕೆ ಪೂರ್ಣ ಉತ್ಸಾಹದಿಂದ ಪ್ರಾರಂಭ ಮಾಡಬೇಕು. ಮತ್ತು ಮಾಡುವವರಿಗೆ ನಿಮ್ಮ ಶಕ್ತಿ ಮೀರಿ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ, ಅನುಭವವೂ.

(೭ ನೆಯ ಪುಟದಿಂದ ಮುಂದುವರಿದದ್ದು.)

ತ್ತೇನೆ. ಅವರೂ ಹಾಗೆಯೇ. ನೀವೇ ಪಂಚ ಆಚಾರ್ಯರು. ಅಧಿಕಾರಿಗಳು. ನಿಮ್ಮ ದುರ್ಬಲತೆಯಿಂದ ಹಿಂದೆ ಬಿದ್ದಿರುವಿರಿ. ನಿಮ್ಮ ದೊಂದು ಸಭೆಗೂಡಿಸಿರಿ ಸ್ವತಂತ್ರರಾಗಿರಿ. ಎಂದು ಗುರುಸ್ಥಲದ ವರನ್ನು ಬೋಧಿಸುವರು. ಈ ಬೋಧೆಯಿಂದಲೆ ಕಾಶಿಯಲ್ಲಿ ಪಂಚಾಚಾರ್ಯರ ಸಭೆಯು ಸೇರಿತು. ಹಾನಗಲ್ಲ ಶ್ರೀ ಆರಳೆಲೆ ಮಠದ ಚನಮೂರ್ತಿಗಳು ಈ ಕಾರ್ಯದಲ್ಲಿ ಬಹಳ ದಕ್ಷತೆಯಿಂದ ಕೆಲಸವನ್ನು ಮಾಡಿದರು. ಅವರು ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳ ಪ್ರಿಯಭಕ್ತರು.

ಭಾವಿಕರು ಅನೇಕರು ಶ್ರೀ ಹಾನಗಲ್ಲ ಸ್ವಾಮಿಗಳಲ್ಲಿ ನಿಸ್ಸೀಮ ಭಕ್ತರಾಗಿದ್ದರು. "ವಿಷಮುಷ್ಯಮೃತಂತ್ಯಚಿದ್ಯ ವೇದಮೃತಂ ವಾ ಕ್ವಚಿದೀಶ್ವರೇಚ್ಛಯಾ" ಎಂಬಂತೆ ಶ್ರೀ ಬಸವೇಶನು ಕಲಿಸಿದ ಜಂಗಮಭಕ್ತಿಯೂ, ಲಾಂಛನಭಕ್ತಿಯೂ, ಅಮೃತವು ವಿಷವಾವಂತೆ ನನಗೆ ವಿಷವಾಯಿತು. ಜಂಗಮತ್ವಕ್ಕೂ ಲಾಂಛನಕ್ಕೂ ಇದ್ದ ಗೌರವವು ಅಯ್ಯನವರ ಜಾತಿಗೆ ಸೇರಿದ ಬಳಿಕ ಅದರ ಲಾಭವನ್ನು ಅವರು ಕೂಡಲೆ ಮಾಡಿಕೊಂಡರು ಅದರಿಂದ ಉಭಯತರ ಅಧಃಪತನವಾಯಿತು. ಧರ್ಮದೃಷ್ಟಿಯಿಂದ ಉಭಯತರಿಗೂ ಹಾನಿಯಾಯಿತೆಂಬುದರಲ್ಲಿ ಸಂಶಯವಿಲ್ಲ. ಆದರೆ ಚರ್ಮದೃಷ್ಟಿಯಿಂದ ಅಯ್ಯಗಳ ಉನ್ನತಿಯಾಯಿತೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿವಯೋಗ ಮಂದಿರಕ್ಕಾಗಿ ಭಕ್ತರಲ್ಲಿ ಶ್ರೀ ಕುಮಾರ ಸ್ವಾಮಿಗಳವರಿಗೆ ಹೇರಳವಾದ ಧನವು ದೊರಕಿತು. ಅದರಲ್ಲಿ ಅವರು ಅಯ್ಯಗಳು ಹೆಚ್ಚು ಭಕ್ತರು ಇಂದು ಎಂದು ಸಾಧಿಸುವಲ್ಲಿ ಬಹಳಷ್ಟು ಶಾಸ್ತ್ರಿಗಳನ್ನು ಪೋಷಿಸುವರು. ಕೆಲವರು ಭಕ್ತರಿಂದ ಇವರು ದೇಣಿಕರು, ವಿರಕ್ತರು, ಗುರುಪದವರು ಮುಂತಾದವರು ನಾವು ಶಿವಯೋಗ ಮಂದಿರದ ಉಪ್ಪು ಉಂಡಿರುವೆವು. ಭಕ್ತರು, ಜಂಗಮರು ಒಂದೆ ಅನ್ನುವರು ಆರು ನೋಡುತ್ತೇವೆ ! ಎನ್ನುವರು. ಈ ಸಂಸ್ಥೆಯಲ್ಲಿ ಶಿಕ್ಷಿತರಾದ ಜಂಗಮಯ್ಯನವರನ್ನೆ ಗ್ರಾಮಗ್ರಾಮಗಳಲ್ಲಿಯ ಮಠಗಳಿಗೆ ನಿಯೋಜಿಸುವುದೊಂದು ಪರಿಪಾಟಿಯು ಬೀಳುತ್ತಲಿದೆ. ಅಂದರೆ ಭಕ್ತರ ಧನದಿಂದ ಭಕ್ತರು ಕಡಿಮೆಯೆಂಬ ಶಿಕ್ಷಣವನ್ನು ಹೊಂದಿದ ಅಯ್ಯನವರು ಗುರುಗಳಾಗಹತ್ತುವರು. ಅಂದಬಳಿಕ ಭಕ್ತರು ಶೂದ್ರರೆಂಬ ಕೀಳುತನಕ್ಕಿಳಿವುದು ದೂರವಿಲ್ಲ.

ಶ್ರೀ ಕುಮಾರ ಸ್ವಾಮಿಗಳು ಅಯ್ಯಕುಲದ ಅಭಿಮಾನಿಗಳೆಂಬುದು ಅವರ ಲಿಂಗೈಕ್ಯದ ಕೆಲವು ಕಾಲ ಹಿಂದೆ ನನಗೆ ಮೊದಲಿಂದಲು ಮನವಂಕೆಯಾದಂತೆ ಇತರರಿಗೂ ಆಯಿತು. ಮತ್ತು ಅದರದೊಂದು ಸ್ಮಾರಕವೂ ಉಳಿದಿತು. ಶ್ರೀ ಗುರು ಹುಬ್ಬಳ್ಳಿಯ ಕಲಬುರಗೆಯ ಮಠದಲ್ಲಿ ಉಳಿದಿದ್ದರು. ಆಗ ಕೆಲವು ಭಕ್ತರು ಅವರ ಸಂದರ್ಶನಕ್ಕಾಗಿ ಹೋದರು, ಮಾತಿಗೆ ಮಾತಿನಲ್ಲಿ ಶ್ರೀಗಳು ಪಾವಟಿಯವರು ಅಯ್ಯಗಳೂ, ಭಕ್ತರೂ, ಎಂಬ ಜಾತಿಗಳಿಲ್ಲವೆಂದು ಸಿದ್ಧಮಾಡುವದಾದರೆ ೧೦,೦೦೦ ರೂಪಾಯಿಗಳನ್ನು ಕಟ್ಟುತ್ತೇನೆ ಅವರು ಕಟ್ಟಲಿ ಅಂದರು. ಆಗ ಆ ಭಕ್ತರು ಸನ್ನಿಧಿಯು ಭಿಕ್ಷಾಪತಿಯಾದುದರಿಂದ ಅನಾಯಾಸವಾಗಿ ಆ ಮೊತ್ತನ್ನು ಈಡಾಡಬಹುದು ವಕೀಲರು ಸ್ವಾರ್ಜನಾ ಜೇಬಿಗಳು ಅವರೆಲ್ಲಿಂದ ಕಟ್ಟುವರು? ಆದರೆ ಅವರಿಗೆ ತಮ್ಮ ಆಜ್ಞೆಯನ್ನು ತಿಳಿಸುತ್ತೇವೆಂದರು. ನವಗೆ ಆ ಗೃಹಸ್ಥರು ಯಥಾವಕಾಶದಲ್ಲಿ ಶ್ರೀಗಳವರ ಸಂದೇಶವನ್ನು ತಿಳಿಸಿದರು. ಆಗ ನಾನು ಅರ್ಧ ರಾತ್ರಿಯಲ್ಲಿ ಹಾಸಿಗೆಯಿಂದೆದ್ದು ವಾದಿಸಲು ಸಿದ್ಧನಿರುವೆನು. ಆದರೆ ಈ ನಿರೂಪವನ್ನು ಬೆಸಸಿದ ಶ್ರೀಗಳು ಕಾಶಿನಾಥ ಶಾಸ್ತ್ರಿಯ ಶಿಷ್ಯರಲ್ಲದೆ ಶ್ರೀಮದಲ್ಲಮ ಪ್ರಭುವಿನ ಸಂತತಿಯವರಾಗಲಾರದೆಂದು ಬರೆದು ಕಳುಹಿಸಿದೆನು. ಆ ನನ್ನ ಬರವಣಿಗೆಯನ್ನು ಓದಿ ಕೆಡಿಕೆಡಿಯಾದರು. ಅವರು ಶ್ರೀ ಜಗದ್ಗುರು ಮೂರುಸಾವಿರ ಮಠದವರಲ್ಲಿಟ್ಟಿರುವರೆಂದು ಕೇಳುತ್ತೇನೆ.

ಪಂಚಾಚಾರ್ಯರ ಸಭೆಯು ಸೇರಿತು. ಆದ ನಿರ್ಣಯವೇನು! ಶ್ರೀ ಬಸವಾದಿ ಪ್ರಮಥರ ನಿಂದೆ, ಶ್ರೀಮದಲ್ಲಮ ಪ್ರಭುವಿನ ನಿಂದೆ. ಭಕ್ತರ ಹೀಯಾಳಿಕೆ, ಕೊನೆಗೆ ವಿರಕ್ತರ ಹೀಯಾಳಿಕೆ ಅದರಲ್ಲಿ ಶ್ರೀ ಹಾನಗಲ್ಲ ಸ್ವಾಮಿಗಳಗೂ ಬಿಡುವಿಲ್ಲ.

ಈ ಜಾತಿ ಶ್ರೇಷ್ಠತೆಯ ಇತಿಹಾಸವನ್ನು ನೋಡಿದರೆ ಆರಿಗು ಸುಖವಿಲ್ಲವೆಂಬುದನ್ನು ನಾವು ಕಂಡೆವು. ಇದಕ್ಕೆ ವೀರಶೈವ ತತ್ವಗಳ ಅನಭ್ಯಾಸವೂ ಅರ್ಧ ಅಭ್ಯಾಸವೂ ತತ್ವಗಳನ್ನರಿಯದ ಪಾಂಡಿತ್ಯವೂ ಕಾರಣವೆಂಬುದನ್ನು ತಿಳಿದೆವು.

ಇನ್ನಿದಕ್ಕೆ ಪರಿಹಾರವೇನು? ನಿಜವಾದ ವೀರಶೈವ ತತ್ವಗಳ ಪರಿಚಯವು ಮತ್ತು ಬಳಕೆಯು. ಸರ್ವರಿಗು ಸಮಾನವಾದ ಸಂಸ್ಕಾರಾಧಿಕಾರವು. ಮಠಗಳೂ ಧಾರ್ಮಿಕ ಮಂದಿರಗಳೂ ಎಂಬದನ್ನು ಒಂದೊಂದು ಗಜ್ಜಿಯವರಿಂದ ತಪ್ಪಿಸಿ ಸಾರ್ವಜನಿಕವಾಗಿ ಮಾಡುವುದು. ತಾವಾಗಿಯೂ ಧರ್ಮಪ್ರಸಾರ ಮಾಡಲುಳ್ಳವರನ್ನು ಮಠಾಧಿಕಾರಕ್ಕೆ ನೇಮಿಸುವುದು. ಸದಾಚಾರ ಸದಭ್ಯಾಸಗಳು ಬೆಳೆವಂತೆ ಸಾಮಾಜಿಕ ನಿರ್ಬಂಧನೆಗಳನ್ನು ರಚಿಸುವುದು. ಲಿಂಗಾಯತ ಧರ್ಮವು ಕಲಿಸುವ ತತ್ವಗಳಿವು.

೧. ಈಶಭಕ್ತಿ ಸದಾಚಾರ ಸುವಿನಯಗಳೆ ಮನುಷ್ಯನ ಉತ್ಕರ್ಷ ಹೇತುವಾಗಿವೆ.

೨. ಆತ್ಮನು ಸದಾಶಿವಲಿಂಗನ ಸಮರಸ ಚಿಂತನದಿಂದ ಕೂಡಿ ಸರ್ವ ವ್ಯವಹಾರಗಳನ್ನು ನಡಿಸತಕ್ಕುದು.

೩. ನೀತಿ ನಿಯಮಗಳೂ ಪ್ರಾಮಾಣಿಕತೆಯೂ ಧರ್ಮದ ಅಂಗವಾಗಿವೆ.

೪. ಅವ ಕಾಯಕವಾದರೂ ಶಿವಸಮಾಜದ ಸೇವೆಗಾಗಿ ಮಾಡತಕ್ಕುದ್ದು. ಅವ ಕಾಯಕದಿಂದಲು ಭಕ್ತನು ಕೀಳನಾಗನು.

೫. ಲಿಂಗಧಾರಣ ವಿರೋಧವೆನಿಸುವ ಭವಿಸೇವೆಯನ್ನು ಅಂದರೆ ಲಿಂಗ ಹೀನರ ಕಾಯ ಸೇವೆಯನ್ನು ಮಾಡಬಾರದು.

೬. ಲಿಂಗಾಯತರು ಶಿವ ಸಹೋದರರಾಗಿ ವರ್ತಿಸತಕ್ಕುದ್ದು.

ಎಂಬ ತತ್ವಗಳನ್ನು ಪ್ರಚಾರಿಸಿ ಜಾತಿಭೇದ ಕಾರಣವಾದ ವಿಷಮತೆಗಳನ್ನು ಕಿತ್ತೊಗೆಯತಕ್ಕುದು.

—ವಳಲಿ ಪಟ್ಟಣದಲ್ಲಿ ಶ್ರೀ. ಪಟ್ಟಾಭಿ ಸೀತರಾಮಯ್ಯನವರು ಬಂಧಿಸಲ್ಪಟ್ಟರು.

—ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಅಜದಿನರಿಗಾಗಿ ಒಂದು ಶಾಲೆಯನ್ನು ತೆರೆದಿದ್ದಾರೆ.

—ರಾ. ಶಂಕರ ರಾಮಚಂದ್ರ ಘೋಡಕೆ ಎಂಬ ಉತ್ಸಾಹಿ ತರುಣನು ಕರಾಚಿ ವೈಮಾನಿಕ ಶಾಲೆಯಿಂದ (ಅ) ಪದವಿಯನ್ನು ದೊರಕಿಸಿದನು. ಇವನೇ ಕೊಲ್ಲಾಪುರದ ಮೊದಲನೇ ವೈಮಾನಿಕನು.

ದಾವಣಗೆರೆಯಲ್ಲಿ ಅಂತ್ಯಜೋದ್ಧಾರ ನಾಟಕ.

ಮಾನವ ಜನಾಂಗದಲ್ಲಿ ನರಿ, ನಾಯಿಗಿಂತಲೂ ಕೀಳಾಗಿ ಕಾಣುತ್ತಿರುವ ಅಂತ್ಯಜರನ್ನು ಉದ್ಧಾರಮಾಡಲು **ಮ. ಗಾಂಧಿ ಜಿಯವ**ರಂತಹ ಜಗತ್ಪೂಜ್ಯರು ತಮ್ಮ ಪ್ರಾಣವನ್ನೇ ಅರ್ಪಿಸಲು ಸಿದ್ಧರಾಗಿರುವದೂ, ಅನೇಕ ದೇಶಭಕ್ತರೂ ಮತ್ತು ಸರಕಾರದ ವರೂ ಅಧೋಗತಿಗೆ ಹೋಗಿರುವ ಈ ಜನಗಳ ಏಳಿಗೆಗಾಗಿ ನಾನಾ ವಿಧವಾಗಿ ಪ್ರಯತ್ನಿಸುತ್ತಿರುವದೂ ಸಹಜವಾದ ಸಂಗತಿಯಷ್ಟೆ. ಆದರೆ ಯಾರೆಷ್ಟು ಪ್ರಯತ್ನಿಸಿದರೂ ಜನಸಾಮಾನ್ಯರಿಗೆಲ್ಲ ಈ ಜನಗಳನ್ನು ಉದ್ಧಾರ ಮಾಡಬೇಕೆಂಬ ಯೋಜನೆಯು ಬಾರದಿದ್ದಲ್ಲಿ ಈ ಜನಗಳ ಅಭಿವೃದ್ಧಿಗೆ ಬಹಳ ತಡೆಯುಂಟಾಗುತ್ತದೆ. ಆದುದರಿಂದ ಅವಿದ್ಯಾವಂತರಾದಿಯಾಗಿಯೂ ಸರ್ವರಲ್ಲಿಯೂ ಈ ವಿಷಯವಾಗಿ ಜಾಗೃತೆಯನ್ನುಂಟುಮಾಡಲು ಈ ನಾಟಕವು ಬಹುಮಟ್ಟಿಗೆ ಸಹಕಾರಿಯಾಗಿದೆ.

ಈ ವಿಧವಾದ ನಾಟಕಗಳಿಂದ ಬಹು ಬೇಗನೇ ಜನ ಜಾಗೃತೆಯುಂಟಾಗಿ ಅತ್ಯಂತ ಹೀನಾವಸ್ಥೆಯಲ್ಲಿರುವ ಅಂತ್ಯಜರ ಅಭಿವೃದ್ಧಿಯು ಬಹು ಚೆನ್ನಾಗಿ ನಡೆಯುವದೆಂಬುವದರಲ್ಲಿ ಸಂಶಯವಿಲ್ಲ. ಇದನ್ನರಿತೇ ಈ ಜನಗಳ ಅಭಿವೃದ್ಧಿ ವಿಷಯದಲ್ಲಿ ಬಹು ಕಾತುರರಾಗಿರುವ ದಾವಣಗೆರೆ ಶ್ರೀ. ಟಕಣಿ ಕೋಲ ಶಾಂತಪ್ಪನವರು 'ಅಂತ್ಯಜೋದ್ಧಾರ' ಎಂಬ ನಾಟಕವನ್ನು ಬರೆಯುವವರಾದರು. ಈ ನಾಟಕವು ರಂಗಭೂಮಿಯ ಮೇಲೆ ಬರುವದಕ್ಕೆ ಮುಂಚೆಯೇ ಅನೇಕ ವರ್ತಮಾನ ಪತ್ರಿಕಾಕರ್ತರೂ ವಿದ್ಯಾವಂತರೂ ಈ ನಾಟಕದ ಶ್ರೇಷ್ಠತೆಯನ್ನು ಬಹಳವಾಗಿ ಕೊಂಡಾಡಿರುವದು ಸರ್ವರಿಗೂ ಗೊತ್ತಿದೆಯಷ್ಟೆ. ಶ್ರೀ. ಕೋಲ ಶಾಂತಪ್ಪನವರು ಸ್ತ್ರೀ, ಬಿ.ಎ. ಮೊದಲಾದ ನಾಟಕಗಳನ್ನು ಬರೆದು ಎಲ್ಲರ ಮೆಚ್ಚುಗೆಗೂ ಸನ್ಮಾನಕ್ಕೂ ಪಾತ್ರರಾಗಿರುವರು. ಆದರೆ ಇವರಿಂದ ಬರೆಯಲ್ಪಟ್ಟಿರುವ 'ಅಂತ್ಯಜೋದ್ಧಾರ' ಎಂಬ ನಾಟಕದಿಂದ ಇವರ ಕೀರ್ತಿಯು ಇನ್ನೂ ಹೆಚ್ಚುವದಲ್ಲದೆ ಈ ನಾಟಕದಿಂದ ಅಸ್ಪೃಶ್ಯತಾ ನಿವಾರಣಾ ಚಳವಳಿಗೆ ಬಹಳ ಮಟ್ಟಿಗೆ ಸಹಾಯವಾದಂತಾಯಿತು. ಈ ನಾಟಕವು ಪ್ರಾರಂಭದಿಂದ ಅಂತ್ಯದ ವರೆಗೆ ನಕ್ಕಲಿ, ಶೃಂಗಾರ, ಶಿಟ್ಟು, ದುಃಖಗಳಿಂದ ಕೂಡಿ ಬಹು ವಿನೋದಕರವಾಗಿರುವದಲ್ಲದೆ ಅಂತ್ಯಜರ ಕೀಳು ಸ್ಥಿತಿಯನ್ನು, ಮೇಲ್ಜಾತಿಯವರ ಧರ್ಮ ಮೌಢ್ಯವನ್ನು, ಸುಧಾರಕರ ಪರಿತಾಪವನ್ನು ಹೃದಯಂಗಮವಾಗಿ ವರ್ಣಿಸಶಕ್ಯವಾಗಿದೆ. ಈ ನಾಟಕವಲೋಕನದಿಂದ ಎಂತಹ ಕಲ್ಲೆದೆಯ ಮನುಷ್ಯನಿಗಾದರೂ ಮನಸ್ಸು ಕರಗಿ ದಯವಂತನಾಗಿ ಅಂತ್ಯಜರನ್ನು ಮಮತೆಯಿಂದ ಕಾಣುವ ಬುದ್ಧಿ ಉತ್ಪನ್ನವಾಗುವದಲ್ಲದೆ ಅವರ ಉದ್ಧಾರಕ್ಕಾಗಿ ಕೈಲಾದ ಪ್ರಯತ್ನಕ್ಕೆ ಸಹಾಯಮಾಡಲು ಪ್ರಯತ್ನಿಸುವನು.

ಆದರಂತೆ ಎಂತಹ ಹೀನ ನಡತೆಯಲ್ಲಿರುವ ಅಂತ್ಯಜನಾದರೂ ಸುಧಾರಿಸಿ ಒಳ್ಳೇ ನಡತೆಯುಳ್ಳವನಾಗುವನು. ಅಸ್ಪೃಶ್ಯತಾ ನಿವಾರಣಾ ಚಳವಳಿಯು ಬಹು ಜೋರಿನಿಂದ ನಡೆದಿರುವ ಈಗಿನ ಕಾಲದಲ್ಲಿ ಮೇಲ್ಕಂಡ ನಾಟಕದಿಂದ ಜನಜಾಗ್ರತಿಯಾಗಲು ಬಹಳ ಅನುಕೂಲವಾಯಿತು. ಮೇಲ್ಕಂಡ ನಾಟಕವನ್ನು ಶ್ರೀ ಕೋಲ ಶ್ಯಾಂತಪ್ಪನವರು ಈಗ ದಾವಣಗೆರೆಯಲ್ಲಿಯೇ ನಾಟಕಗಳ ನ್ನಾಡುತ್ತಿರುವ ನಾಟ್ಯಕಲೆಯಲ್ಲಿ ಮೇಲ್ಪರದ ಕೀರ್ತಿಯನ್ನು ಸಂಪಾದಿಸಿರುವ **ಗುರುಸಮರ್ಥ ನಾಟಕ** ಮಂಡಲಿಯವರಿಗೆ ಕೊಟ್ಟಿರುತ್ತಾರೆ. ಅವರು ಅದನ್ನು ಇಷ್ಟರಲ್ಲಿಯೇ ದಾವಣಗೆರೆಯಲ್ಲಿ ರಂಗಭೂಮಿಯ ಮೇಲೆ ತರಲು ತಕ್ಕ ಸನ್ನಾಹವನ್ನು ಮಾಡುತ್ತಿರುವರು. ಪ್ರತಿಯೊಬ್ಬ ಹರಿಜನೋದ್ಧಾರಕನೂ ಹರಿಜನೋದ್ಧಾರ ಸಂಸ್ಥೆಯವರೂ ಈ ನಾಟಕವು ರಂಗಭೂಮಿಗೆ ಬಂದೊಡನೆಯೇ ಸಾಮಾನ್ಯ ಜನರೆಲ್ಲರೂ ಇದರ ಪ್ರಯೋಜನವನ್ನು ಪಡೆಯುವರೆತೆ ಪ್ರಯತ್ನಿಸಬೇಕು. ಮತ್ತು ಸದರಿ ನಾಟಕ ಕಂಪನಿಯವರು ಅತಿ ಜಾಗ್ರತೆಯಾಗಿ ಮೇಲ್ಕಂಡ ನಾಟಕವನ್ನು ರಂಗಸ್ಥಳಕ್ಕೆ ತಂದು ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ಕೆ ಸಹಾಯಕರಾಗಿ ಈ ನಾಟಕಾಭಿನಯದಿಂದ ತಮಗೂ ಮತ್ತು ನಾಟಕದ ಕರ್ತರಿಗೂ ಕೀರ್ತಿಯನ್ನು ತರುವವರಾಗಲೆಂದು ಅಪೇಕ್ಷಿಸುವೆನು.

ಅನೆಕೊಂಡದ ಮುಪ್ಪಣ್ಣ,
ಸಹಾಯಕ ಕಾರ್ಯದರ್ಶಿ,
ಪ್ರಾಣಿದಯಾಜ್ಞಾನ ಪ್ರಸಾರಕ ಸಂಘ
ದಾವಣಗೆರೆ.

ಸಮಾಚಾರ ಸಂಗ್ರಹ.

—ಮದರಾಸು ಸರಕಾರದವರು ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಸಂಚರಿ ವೆಚ್ಚದಿಂದ ಕಟ್ಟಲ್ಪಟ್ಟ ಕೆರೆ ಭಾವಿಗಳನ್ನು ಸರ್ವ ಜಾತಿಯವರು ಉಪಯೋಗಿಸಬಹುದೆಂದು ಅಪ್ಪಣೆ ಮಾಡಿದ್ದಾರೆ.

—ರ್ಯಾಲಿ ಕಂಪನಿಯು ದಿವಾಳಿ ತೆಗೆದದ್ದರಿಂದ ಅದರ ನೌಕರವು ನಿಂತು ಬಿಟ್ಟಿತು.

—ಮಿದನಾಪುರ ಜಿಲ್ಲೆಯಲ್ಲಿಯು ಎಲ್ಲ ರಾಷ್ಟ್ರೀಯ ಶಾಲೆಗಳನ್ನು ಶಾಸನ ವಿರೋಧವಾದವುಗಳೆಂದು ನಿರ್ಣಯಿಸಿದ್ದಾರೆ.

—ಸೌ. ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಮಳಲಿ ಪಟ್ಟಣದ ನ್ಯಾಯಾಧೀಶರ ಕಡೆಗೆ ಮಾಡಿದ ಜಾಮೀನು ಅರ್ಜಿಯು ಸ್ವೀಕರಿಸಲ್ಪಟ್ಟಿದ್ದರಿಂದ ಬಿಡುಗಡೆ ಹೊಂದಿದರು.

—ಶ್ರೀ. ಭಾಯಿ ಪರಮಾನಂದಜಿಯವರು ನಾಗಪುರಕ್ಕೆ ಬಂದು ಅಲ್ಲಿಯ ೧ ಸಾವಿರ ಸ್ವಯಂಸೇವಕರ ಕವಾಯಿತನ್ನು ನೋಡಿ ಪ್ರಶಂಸಿಸಿದರು.

—ಶ್ರೀ. ನರೀಮನ್ನರು ಮಹಾತ್ಮಾಜಿಯವರ ಸಂಗಡ ವರ್ಧಾದಲ್ಲಿ ಬಹಳ ಹೊತ್ತು ಮಾತುಕಥೆಯಾಡಿದರು. ಮಹಾತ್ಮಾಜಿಯ ಪ್ರಕೃತಿಯು ನೆಟ್ಟಗಿದೆ.

—ಸಾಂಗಲಿ ವಿಲಿಂಗ್ಡನ್ ಕಾಲೇಜಿನ ಪ್ರೊಫೆಸರ ಮುಗಳ ರಂಗರಾಯರು ವೀರಶೈವ ವಚನಕಾರರ ಸಾಹಿತ್ಯ ಎಂಬ ವಿಷಯದ ಮೇಲೆ ಭಾಷಣ ಮಾಡುವಾಗ ಉಪನಿಷತ್ತುಗಳ ಸಾರಾಂಶವನ್ನು ಉತ್ತಮ ರೀತಿಯಿಂದ ಕನ್ನಡಕ್ಕಿಳಿಸಿದ ಯಶಸ್ಸು ವೀರಶೈವರಿಗೇ ಸಲ್ಲುತ್ತದೆ. ಎಂದು ಹೇಳಿದರು

—ಶ್ರೀ. ದಿವಾಕರರು ಕಾರಾಗೃಹದಲ್ಲಿ ವಚನಶಾಸ್ತ್ರ ರಹಸ್ಯವೆಂಬ ಉದ್ಗ್ರಂಥವನ್ನು ಬರೆದು ಈಗ ಬಸವೇಶ್ವರನ ಚರಿತ್ರೆಯನ್ನು ಹೊಸ ಪದ್ಧತಿಯಿಂದ ಬರೆಯುತ್ತಿದ್ದಾರೆ.

—ಮುಂದಿನ ಡಿಸೆಂಬರ ತಿಂಗಳಿನಲ್ಲಿ ಹುಬ್ಬಳ್ಳಿಯೊಳಗೆ ಸಾಹಿತ್ಯ ಪರಿಷತ್ತು ನೆರೆಯುವದು. ಅದಕ್ಕೆ ಶ್ರೀ. ಪಾವಟೆಯವರು ಅಧ್ಯಕ್ಷರೂ ಮತ್ತು ಶ್ರೀ. ಚಂದ್ರಶೇಖರ ಶಾಸ್ತ್ರಿಗಳು ಕಾರ್ಯದರ್ಶಿಗಳೂ ಆಗಿರುವರು.

—ಹುಬ್ಬಳ್ಳಿಯಲ್ಲಿ ಒಬ್ಬ ಮುದುಕನು ದಾಜೀಬಾನ ಪೇಟೆಯಲ್ಲಿ ಹೋಗುತ್ತಿರುವಾಗ ಎಡವಿಬಿದ್ದ ಕೂಡಲೇ ಪ್ರಾಣ ಬಿಟ್ಟನು.

—ಬಳ್ಳಾರಿಯಲ್ಲಿ ಜಿಲ್ಲಾ ಭಾರತ ವಸ್ತು ಪ್ರದರ್ಶನದ ಸಿದ್ಧತೆಯು ತ್ವರೆಯಿಂದ ಸಾಗಿದೆ.

ಪತ್ರಗಳ ಸಾರಾಂಶ.

ಪ್ರಕಟಣೆ.

ಶ್ರೀಮನ್ ಮಹಾ ಸುಕ್ಷೇತ್ರ ಉಳಿವೆಯ ಶ್ರೀ ಚನ್ನಬಸವೇಶ್ವರ ಸ್ವಾಮಿಯ ಸೇವಾತತ್ಪರ ಮುಖ್ಯ ಮುಕ್ತೇಸರ ಮಹಾಬಳೇಶ್ವರಪ್ಪ ಗುರಪ್ಪ ಪಾಟೀಲ ಇವರಿಂದ ಸಮಸ್ತ ವೀರಶೈವ ಮತ್ತು ವೀರಶೈವ ಧರ್ಮಾನುಯಾಯಿಗಳಾದ ಸದ್ಭಕ್ತ ಮಂಡಳಿಯವರಿಗೆ ಸವಿನಯಪೂರ್ವಕ ಪ್ರಾರ್ಥನೆ—

ಭರತಖಂಡದ ಪ್ರಾಮುಖ್ಯ ಕ್ಷೇತ್ರಗಳಲ್ಲಿ ವೀರಶೈವರ ಪುಣ್ಯ ಕ್ಷೇತ್ರವಾಗಿರುವ ಉಳಿವೆಯು ಕಾರವಾರ ಜಿಲ್ಲಾ ಸುಪಾ ತಾಲೂಕಾದಲ್ಲಿ ಇರುವದು. ಇಲ್ಲಿ ಮಹಾಮಹಿಮ ಜಗತ್ಪಾವನ ಕಶ್ಯಪಾದ ಗುರುಕುಲ ಸಾರ್ವಭೌಮ ಶ್ರೀ ಚನ್ನಬಸವೇಶ್ವರ ಸ್ವಾಮಿಯ ಸ್ಥಾನವಿರುವದು. ಪ್ರತಿವರುಷ ಮಾಘ ಶುದ್ಧ ೧೫ಕ್ಕೆ ಸುಪಾ ರಥೋತ್ಸವ ಕಾಲಕ್ಕೆ ೧೦ ಸಾವಿರ ಮೇಲ್ಪಟ್ಟು ಭಕ್ತಮಂಡಳಿಯು ಕೂಡುತ್ತಿರುವದರಿಂದ ಮಹಾ ವೈಭವದಿಂದ ಯಾತ್ರಾ ಸಮಾರಂಭವು ನಡೆಯುವದು. ಈ ಸುಕ್ಷೇತ್ರಕ್ಕೆ ಕಾಯಂ ಆಗಿ ಯೋಗ್ಯ ಚರಮೂರ್ತಿಗಳನ್ನು ನಿಯಮಿಸೋಣಾಗಬೇಕೆಂದು ಬಹು ಜನ ಭಕ್ತಾದಿಗಳೂ ಕಮಿಟಿಯ ಮೆಂಬರರೂ ಮೊಕ್ತೇಸರರೂ ಪ್ರಾರ್ಥಿಸಿಕೊಂಡ ಮೇರೆಗೆ ಚಿತ್ರದುರ್ಗದ ಶ್ರೀಮಾನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾ ಸ್ವಾಮಿಗಳವರು ಪರಮ ವೈರಾಗ್ಯ ಶಾಲಿಗಳೂ ಪೂಜಾನಿಷ್ಠರೂ ಭಕ್ತಿ ತತ್ಪರರೂ ಭಕ್ತಪ್ರೇಮಿಗಳೂ ಭಕ್ತೋದ್ಧಾರಕ ಕಾರ್ಯ ನಿರತರೂ ಆದ ಕೊಡಗು ಸೋಮವಾರ ಪೇಟೆಯ ಚರಮೂರ್ತಿಗಳು ಶ್ರೀಮನ್ನಿರಂಜನ ಪ್ರಣವಸ್ವರೂಪ ಶಾಂತದೇವ ಮಹಾ ಸ್ವಾಮಿಗಳವರನ್ನು ಉಳಿವೆಯ ಮಹಾ ಕ್ಷೇತ್ರದ ಕಾಯಂ ಚರಮೂರ್ತಿಗಳಾಗಿ ನಿಯಮಿಸಿ ಸಮಸ್ತ ವೀರಶೈವ ಮತ್ತು ವೀರಶೈವ ಮತಾನುಯಾಯಿಗಳಾದ ಭಕ್ತ ಮಂಡಳಿಯವರಿಗೆ ಗೆ. ನಾ. $\frac{\text{ಳರ್ಚತಿ}}{\text{ತಿಶ-೬-೩೩}}$ ನೇ ನಿರೂಪದಯಪಾಲಿಸಿರುವದು ಸಮಸ್ತ ಭಕ್ತ ಮಂಡಳಿಯವರ ಪುಣ್ಯೋದಯವೆಂದೂ, ಶ್ರೀ. ಮಹಾ ಕ್ಷೇತ್ರದ ಪೂರ್ವೋಭವೃದ್ಧಿಯ ಸುಸಮಯವೆಂದೂ ಭಾವಿಸಬೇಕಾಗಿದೆ. ಶ್ರೀ ಉಳಿವೆ ಕ್ಷೇತ್ರದ ಚರಮೂರ್ತಿಗಳಾದ ಶ್ರೀ ಶಾಂತದೇವ ಸ್ವಾಮಿಗಳವರು ಸದ್ಯದಲ್ಲಿ ದೇಶ ಸಂಚಾರ ಮಾಡುತ್ತ ಸದ್ಭಕ್ತಾದಿಗಳ ಭಕ್ತಿ ಕಾಣಿಕೆಯನ್ನು ಕೈಕೊಂಡು ಶ್ರೀಕ್ಷೇತ್ರದಲ್ಲಿ ಅತ್ಯವಶ್ಯವಾಗಿ ಬೇಕಾಗುವ ಜೀರ್ಣೋದ್ಧಾರ ಕಾರ್ಯಗಳಲ್ಲಿ ತತ್ಪರರಾಗಿರುವರು. ಈ ಮಹಾ ಕಾರ್ಯದಲ್ಲಿ ಸರ್ವರೂ ಭಾಗಿಗಳಾಗಿ ಶಕ್ತ್ಯಾನುಸಾರ ಸೇವಾ ವಪ್ಪಿಸಿ ಪುಣ್ಯಾರ್ಜಿತರಾಗಬೇಕೆಂದು ಬೇಡುತ್ತೇನೆ

ತಾ. ೨-೧೧-೧೯೩೩. } ಮಾಬಳೇಶ್ವರ ಗುರುಸಾದಪ್ಪ ಪಾಟೀಲ,
ಮುಖ್ಯ ಮುಕ್ತೇಸರ ಶ್ರೀ ಮಹಾ ಕ್ಷೇತ್ರ,
ಉಳಿವೆ.

ಸ್ತುತ್ಯ ದಾನ.

ಮುಧೋಳ ವೀರಶೈವ ತರುಣ ಸಂಘದವರು ನಾಡ ಹಬ್ಬವನ್ನು ಬಹು ಉತ್ಸಾಹದಿಂದ ಸಾಗಿಸಿದರು. ಆ ಕಾಲಕ್ಕೆ ಶ್ರೀ. ಚನ್ನಬಸಪ್ಪಣ್ಣ ನಾವಲಗಿ ಇವರು ತರುಣ ಸಂಘದಿಂದ ಸ್ಥಾಪನೆಯಾಗಿರುವ ಲಾಯಬ್ರರಿಯ ವರ್ಧನೆಯನ್ನು ಓವಿ ಹೇಳಿ ಇಲ್ಲಿಯ ವ್ಯಾಪಾರಸ್ಥರು ಇದಕ್ಕೆ ಏನಾದರೂ ಸಹಾಯಮಾಡಬೇಕೆಂದು ವಿನಂತಿ ಮಾಡಿಕೊಂಡರು.

ಸಮಾಚಾರ ಸಂಗ್ರಹ.

—ದಿಲ್ಲಿಯಲ್ಲಿ ವ್ಹಾಯಿಸರಾಯರು ಸಪತ್ನೀಕರಾಗಿ ಸಿನೇಮಾ ನೋಡಲಿಕ್ಕೆ ಕುಳಿತಿರಲು ಇಬ್ಬರು ಬಂಗಾಲಿ ತರುಣರು ಹೊಟ್ಟೆ ತಿಕೀಟು ತೋರಿಸಿ ಅವರ ಹತ್ತಿರವೇ ಕುಳಿತುಕೊಂಡರು, ಪೋಲೀಸರಿಗೆ ಸಂಶಯ ಬಂದು ಕೂಡಲೇ ಅವರನ್ನು ಬಂಧಿಸಿದರು.

—ಉಗಿಬಂಡಿಯು ಓಡುತ್ತಿರಲು ನಾಲ್ವರು ಬಂಗಾಲಿ ತರುಣರು ಸಶಸ್ತ್ರರಾಗಿ ಅದನ್ನು ಏರಿ ಪ್ರವಾಸಿಕರನ್ನು ಹೊಡೆದು ೫೦೦ ರೂ. ಸುಲಿಗೆ ಮಾಡಿದರು.

—ಒಬ್ಬ ರಶಿಯನ್ ವೈಮಾನಿಕನು ಕೊಡೆಯನ್ನು ಹಿಡಿದು ಕೊಂಡು ೪॥ ಮೈಲು ಮೇಲಿಂದ ವಿಮಾನದಿಂದ ಭೂಮಿಗೆ ಹಾರಿದನು, ಭೂಮಿಯು ಇನ್ನೂ ೫೦೦ ಫೂಟು ಇರುವಾಗಲೇ ಕೊಡೆಯನ್ನು ಏರಿಸಿದನು.

—ಜಪಾನಿಗಳು ೭೦೦೦ ಸಾವಿರ ಟನ್ನ ಅಕ್ಕಿಯನ್ನು ಕಡಿಮೆ ದರದಿಂದ ಇಲ್ಲಿ ಮಾರುವವರಿರುವರು. ಆ ಅಕ್ಕಿ ಬರಬಾರದಂತೆ ಮಾಡಬೇಕೆಂದು ಕರಾಚಿ ಹಿಂದೀ ವರ್ತಕ ಸಂಘದವರು ಸೂಚಿಸಿದ್ದಾರೆ.

—ಮುಂಬಯಿ ಇಲಾಖೆಯ ಮಂತ್ರಿಗಳಾದ ಸರ್. ರುಸ್ತುಮ ವಕೀಲ ಇವರು ತೀರಿಕೊಂಡರು.

—ಈಶ್ವರಗೌಡಾ ಪಾಟೀಲ ಇವರ ತೀರವಾದ ಸ್ಥಳದಲ್ಲಿ ಶ್ರೀ. ಬಸವಂತರಾವ ದೇಸಾಯಿ ಕೊಣ್ಣೂರ ಇವರು ಯಾರ ವಿರೋಧ ವಿಲ್ಲದೆ ಆರಿಸಿಬಂದರು

—ಮಿ ಸಿ ಪಿ. ಹಳಕಟ್ಟಿ ಇವರು ೧೦ನೇ ಅಕ್ಟೋಬರ ದಿವಸ ಮ್ಯಾಂಚೆಸ್ಟರಕ್ಕೆ ಹೋಗಿ ಅಲ್ಲಿಯ ಔದ್ಯೋಗಿಕ ಕಾಲೇಜಿಗೆ ಹೆಸರು ಹಚ್ಚಿಸಿದರು.

—ಪ್ರೊ ಸಿ. ಎಸ್. ಬಾಗಿ ಎಂ ಎ. ಬಿ. ಟಿ. ಲಿಂಗರಾಜ ಆರ್ಟ್ಸ ಕಾಲೇಜ ಬೆಳಗಾಂವ ಇವರು ಪುನಃ ಬಸವೇಶ್ವರ ಹಾಯಸ್ಕೂಲಿಗೆ ಅಧ್ಯಾಪಕರಾಗಿ ತೀವ್ರವೇ ಬರುವರು.

—ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯವರು ನಿಜಾಮ ಸರಕಾರದ ಬ್ಯಾಂಕಿಗೆ ಮಾಡಿಕೊಟ್ಟ ಹೆಬ್ಬಾಗಿಲನ್ನು ನೋಡಿ ಆನಂದಿತರಾಗಿ ಹಿಂದುಸ್ಥಾನದ ಮಧ್ಯವರ್ತಿ ಬ್ಯಾಂಕಿನವರು ತಮ್ಮ ಬ್ಯಾಂಕಿನ ನಾಲ್ಕು ಬಾಗಿಲುಗಳನ್ನು ಮಾಡಲು ತಿಳಿಸಿದ್ದಾರೆ.

—ವ್ಹಾಯಿಸ್‌ರಾಯ್ ಲಾರ್ಡ ವಿಲಿಂಗಡನ್ನರ ಮಗನನ್ನು ಕೊಲ್ಲುವ ಉದ್ದೇಶದಿಂದ ಲಂಡನ್ನಿನಲ್ಲಿ ಒಬ್ಬನು ಅವರ ಸ್ನಾನಗೃಹದಲ್ಲಿ ಅಡಗಿ ಕೊಂಡಿದ್ದನು. ಆದರೆ ಒಬ್ಬ ಮುದುಕಿಯು ಅವನನ್ನು ನೋಡಲು ಅವನು ಅಲ್ಲಿಂದ ಓಡಿಹೋದನು.

—ಅಮೇರಿಕೆಯ ಕಾನಡಾ ದೇಶದಲ್ಲಿ ಸೆಂಟ ಜೋಸೆಫ ವಿಶ್ವವಿದ್ಯಾಲಯಕ್ಕೆ ಬೆಂಕಿ ಹತ್ತಿ ೫೫ ಲಕ್ಷ ರೂ. ಗಳ ಹಾನಿಯಾಗಿದೆ.

—ಆಸ್ಟ್ರೇಲಿಯದ ಟಿನ್ನಿಸ ಎಂಬ ೯ ವರುಷದ ಹುಡುಗನೊಬ್ಬನು ಈಗ ೭೦೦ ಓವರಗಳಿಂದ ಸಿಡ್ನಿ ಆಡುತ್ತಿರುವನು.

ಲಾಯಬ್ರರಿಯ ಕಾರ್ಯವನ್ನು ನೋಡಿ ಇಲ್ಲಿಯ ಅಡತಿ ಅಂಗಡಿಯವರು ಒಂದು ಗಾಡಿಗೆ ಅರ್ಧ ಆಣೆ ಪ್ರಕಾರ ಲಾಯಬ್ರರಿ ಫಂಡ್ ಕೊಡುವದಾಗಿ ವಾಗ್ದಾನ ಮಾಡಿದರು. ಈ ಪ್ರಕಾರ ಇಲ್ಲಿಯ ವರ್ತಕರು ಈ ಫಂಡ್ ಕೊಟ್ಟದ್ದು ಬಹಳ ಸ್ತುತ್ಯವಾದದ್ದಾಗಿದೆ.

ಕಾರ್ಯಕರ್ತರು.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಟಾಲ್‌ಕಾಜ್ ಕೊಂಪೆನಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ಪಂಥೆಗಳಿಗೆ ಕೇಂದ್ರಸ್ಥಾನ .....
ಅಂದಜನಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸಕ್ತಿಲೂ ಜೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ	೩-೦-೦ ತಿಂಗಳೊಂದಕ್ಕೆ	ಎರಡುಹೊತ್ತು ಭೋಜನ	೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ	೧-೮-೦ ದಿನ ಒಂದಕ್ಕೆ	ಊಟ ಒಂದಕ್ಕೆ	೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯ್ದು ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ದುರುಕು, ಗಜಕರ್ಣ ಆಯುರ್ವೇದದ ಎಂಥಾ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ
ಕಷ್ಟಪಡುತ್ತಿರುವಿರೋ?
ಹಾಗಾದರೆ ಈ ತರದ ರೋಗಗಳಿಗೆ ಪೂರ್ಣ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವೆ ಅವರಾತಿ ಸಾಧ್ಯ ಸತ್ಯ ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್ಸಿ, ಪಿಎಚ್. ಡಿ, ಇವರು ತಯಾರಿಸಿದ
" ಹೊಂಗೊಲ್ "
ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬರಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ವಸ್ತು ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು. ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು
ಯಾರಿಗೆ ಬೇಕಾಗಿಲ್ಲ?
ಹಾಗಾದರೆ ಒಸಡಿನಿಂದಾಗುವ ರಕ್ತ ಸುರಿಯುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಕಷಾಯ ಉಪಯೋಗ ಗಿರುವ ಮತ್ತು ಇತರ ಅಮೂಲ್ಯ ದ್ರವ್ಯಗಳಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್ಸಿ, ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ
" ಕಚ್ಯೂ "
ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು— ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ಪೇಕೆಸಿ ಪ್ರಾಪ್ತಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗನೇಶ್ವರ ಪ್ರಸನ್ನ ||

ತಾಲಿಚೆಯ ಬಟ್ಟೆಯಲ್ಲಿ ಉಳಿತಾಯವಾದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಕುಳಿನ, ಖಂಡಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಧಕಥಳ ಹೊಳವು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಟ್ಟಾದ ನಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸತ್,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳಿವೆ, ಇದರಲ್ಲಿ ನಾನಾ ವಿಧವಾದ ಅನೇಕ ಪ್ರಶ್ನೆಗಳಿಗೆ ಸಹಿತವಾಗಿ ಬಿಡಿಸಲ್ಪಟ್ಟಿವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಗೆ ಇಂಥಿಂಥದೆಂದು ಗೊತ್ತಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂಬುದು ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಷ್ಟು ರು. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ

ಎಲ್ಲ ನಮೂನೆಗಳು ಬರೀ ೧ ರೂಪಾಯಿ!

--೧೦೦--

ನೀಲೀ ಮಶಿಬೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗಂಗಾಡ ನಾಶಕ— ೧೧ ,,
ಜೇಳಿ ನಾಶ— ೧೧ ,,
ಎರಿ [illegible] ಬಾಟ್ಲಿ— ೭ ,,
[illegible] ವಿ. ಪಿ. ಯಿಂದ ಕಳಸುವೆನ

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಲಿ.
ತಾ. ರಾಯಬಾಗ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 289

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!

ಕೂಡಲಸಂಗನಪ್ಪುದೇಸರ ಬಡಬಡಿಸಲಿಕಾಗಿ ಬಂದೆ ! ಮಹಾನುಭಾವ ಬಸವಣ್ಣನವರು.

ಸಂಪಾದಕರು:- ಶ್ರೀ. ಹರ್ಡೇಕರ ಮಂಜಪ್ಪನವರು.

SANGAM CLOTH STORES
Prop. M. S. Hundek & Sons,
P.O: TERDAL – 587 315
Dt. Bijapur (Karnataka)

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ ಮುವಾರ ತಾರೀಖು ೧೩ ನೆಯ ನವ್ಹಂಬರ ೧೯೨೯ | ಸಂಚಿಕೆ ೧೪.

ಜನಸೇವೆಯೇ ದೇವರಸೇವೆ

ಅಫಗಾಣಿಸ್ಥಾನದಲ್ಲಿ

ಭಯಂಕರ ಅತ್ಯಾಚಾರ.

ರಾಜಾ ನಾದಿರಶಹಾರವರ ಕೊಲೆ!

ಕಳೆದ ೮ನೆಯ ತಾರೀಖಿನ ದಿವಸ ಮಧ್ಯಾನ್ಹ ೩ ಗಂಟಿಗೆ ಅಫಗಾಣಿಸ್ಥಾನದ ರಾಜಾ ಮಹಮ್ಮದ ನಾದಿರಶಹಾ ಗಾಜಿಯವರನ್ನು ಒಬ್ಬ ದೇಶದ್ರೋಹಿ ಮನುಷ್ಯನು ಕಾಬೂಲಿನಲ್ಲಿ ಕೊಲೆ ಮಾಡಿದನೆಂಬ ಅತ್ಯಂತ ವಿಷಾದಕರವಾದ ಸುದ್ದಿಯು ಪ್ರಕಟವಾಗಿದೆ. ರಾಜಾ ನಾದಿರಶಹಾರವರ ತರುವಾಯ ಅವರ ೨೧ ವರುಷ ವಯಸ್ಸಿನ ಮಗನಾದ ಯುವರಾಜ ಜಾಹೀರ ಶಹಾರವರಿಗೆ ಪಟ್ಟಗಟ್ಟಿದ್ದಾರೆ.

ದೇಶಸೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಸಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ನಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ** ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.
ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಬಿ. ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಹರ್ಡೀಕರ ಮುಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಳ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ನವ್ಹಂಬರ್ ತಾರೀಖು೧೩ನೆಯ ಸೋಮವಾರ | ಸಂಚಿಕೆ ೧೪.

ಶ್ರೀ. ವಿಠ್ಠಲಭಾಯಿ ಪಟೇಲರ ಶವದ ಪ್ರಚಂಡ ಮೆರವಣಿಗೆ.

ಐದು ಲಕ್ಷಕ್ಕಿಂತಲೂ ಹೆಚ್ಚಾದ ಜನಸಂದಣಿ.

ಪ. ಲೊ. ವಿಠ್ಠಲಭಾಯಿ ಪಟೇಲರವರ ಶವವು ತಾ. ೯ನೆಯ ದಿವಸ ಸಾಯಂಕಾಲ ೬ ಗಂಟೆಗೆ 'ನವಕುಂಡಾ' ಹಡಗಿನಿಂದ ಮುಂಬಯಿ ನಗರಕ್ಕೆ ಬಂದು ತಲ್ಪಿತು. ಮುನಸಿಪಲ್ ಕಾರ್ಪೋರೇಶನ್ನಿನ ಹೆಲ್ತ್ ಆಫೀಸರ, ಡಾ. ನೆರೂರಕರ್ ಮತ್ತು ಪೋರ್ಟ್ ಟ್ರಸ್ಟ ಆಫೀಸರ ಇವರು ಶವದ ನಿರೀಕ್ಷಣೆ ಮಾಡಿ ಅದು ಉತ್ಕೃಷ್ಟ ಸ್ಥಿತಿಯಲ್ಲಿದೆಯೆಂದು ಅಭಿಪ್ರಾಯ ಪಟ್ಟರು. 'ನವಕುಂಡಾ' ಹಡಗವು ಬಂದರಿನ ಮೇಲೆ ಬರುವ ಪೂರ್ವದಲ್ಲಿಯೇ ಡಾ. ಜಿ. ಎನ್. ದೇಶಮುಖ, ರೆ. ಸಿ. ಎಫ್. ಅಂಡ್ರೂಜ, ಲೇಡಿ ಪ್ರೇಮಲೀಲಾ ಠಾಕರಸಿ, ಮಿ. ನರಿಮನ್, ಮಿ. ಹಾರ್ನಿಮನ್, ಶ್ರೀ. ಸರೋಜಿನಿ ದೇವಿ ನಾಯಡು, ಶ್ರೀ. ಹಂಸಾ ಮೆಹತಾ ಮೊದಲಾದ ೩ ಸಾವಿರಕ್ಕಿಂತಲೂ ಹೆಚ್ಚಾಗಿ ಜನಗಳು ನೆರೆದಿದ್ದರು. ಶ್ರೀ. ಪಟೇಲರವರ ಶವಕ್ಕೆ ಮಿ. ಅಂಡ್ರೂಜರವರು ಹಾರವನ್ನರ್ಪಿಸಿದರು

ಮರುದಿವಸ (ತಾ. ೧೦-೧೧-೩೩) ಬೆಳಗಿನ ೭| ಗಂಟೆಗೆ ಶ್ರೀ. ಪಟೇಲರವರ ಶವದ ಪ್ರಚಂಡ ಮೆರವಣಿಗೆಯು ಮುಂಬಯಿಯ ಬಲಾರ್ಡ ಪೀಯರಿನಿಂದ ಹೊರಟಿತು ಶವದ ಪೆಟ್ಟಿಗೆಯನ್ನು ಮೋಟಾರಿನಲ್ಲಿಟ್ಟಿದ್ದರು. ಮೆರವಣಿಗೆಯು ಹೊರಡುವ ಪೂರ್ವದಲ್ಲಿ ಮುಂಬಯಿಯ ೧೩ ಸಂಸ್ಥೆಗಳ ಪರವಾಗಿ ಶ್ರೀ ಪಟೇಲರವರ ಶವಕ್ಕೆ ಪುಷ್ಪಹಾರಗಳನ್ನರ್ಪಿಸಿದರು. ೮| ಗಂಟೆಗೆ ಮೆರವಣಿಗೆಯು ಮುಂಬಯಿಯ ಕಾರ್ಪೋರೇಶನ್ನಿನ ಕಟ್ಟಡದ ಹತ್ತಿರ ಬರಲು ಅಲ್ಲಿ ಕಾರ್ಪೋರೇಶನ್ನಿನ ಪರವಾಗಿ ಶವಕ್ಕೆ ಪುಷ್ಪವನ್ನರ್ಪಿಸಿದರು. ಅಲ್ಲಿಂದ ಮೆರವಣಿಗೆಯು ಕ್ರಾಫರ್ಡ ಮಾರ್ಕೆಟಿನ ಹತ್ತಿರ ಹಾಯಿದು ಕಾಲ್ಬಾದೇವಿ ರೋಡಿನಲ್ಲಿ ಬರುವದರೊಳಗಾಗಿ ವಿಶೇಷ ಜನಸಂದಣಿಯು ಸೇರಿತು. ಹಾದಿಯ ಎಡಬಲಗಳಲ್ಲಿರುವ ಕಟ್ಟಡಗಳ ಕಿಡಿಕಿಗಳೊಳಗಿಂದ ಸಾವಿರಾರು ಜನರು ಅತ್ಯಂತ ಶ್ರದ್ಧೆಯಿಂದ ಮೆರವಣಿಗೆಯನ್ನು ನೋಡುತ್ತಿದ್ದರು. ಮಾರ್ಗದಲ್ಲೆಲ್ಲಾ ಜನರು ಶವದ ಮೇಲೆ ಪುಷ್ಪ ವೃಷ್ಟಿಗರೆಯುತ್ತಿದ್ದರು. ಅಲ್ಲಿಂದ ಮೆರವಣಿಗೆಯು ಗುಲೇಶ್ವರ, ಸಿ. ಐ. ಟ್ಯಾಂಕ್‌ಗಳ ಮಾರ್ಗವಾಗಿ ವ್ಯಾರ್ಥನಾ ಸಮಾಜದ ಹತ್ತಿರ ಬಂದಿತು. ಅಲ್ಲಿ ೩೦ ಸಂಸ್ಥೆಗಳ ಪರವಾಗಿ ಪಟೇಲರ ಶವಕ್ಕೆ ಪುಷ್ಪಹಾರವನ್ನು ಹಾಕಿದರು.

ಮೆರವಣಿಗೆಯಲ್ಲಿ ಗೊಂದಲವಾಗದಂತೆ ಸ್ವಯಂಸೇವಕರು ವಿಶೇಷ ಲಕ್ಷ ಕೊಟ್ಟು ಕೆಲಸ ಮಾಡುತ್ತಿದ್ದರು. ಮೆರವಣಿಗೆಯ ಮಾರ್ಗದ ಮೇಲೆ ಪೋಲೀಸರು ವಿಶೇಷವಾದ ಕಾವಲನ್ನಿಟ್ಟಿದ್ದರು. ಮೆರವಣಿಗೆಯ ಹಿಂದು ಮುಂದೆಯೂ ಪೋಲೀಸರಿಂದ ತುಂಬಿದ ಮೋಟಾರ ಗಾಡಿಗಳಿದ್ದವು.

ವ್ಯಾರ್ಥನಾ ಸಮಾಜದಿಂದ ಮೆರವಣಿಗೆಯು ನ್ಯೂ ಚರ್ನಿ ರೋಡ, ಗರಗಾಂವ, ಠಾಕುರದ್ವಾರ, ಕ್ವೀನ್ಸ್‌ರೋಡ್ ಮೊದಲಾದ ಭಾಗಗಳಲ್ಲಿ ಹಾಯ್ದು ಸೋನಾಪುರದ ಕಡೆಗೆ ಹೊರಳಿತು.

ಸೋನಾಪುರದ ಭಾಗಗಳೆಲ್ಲಾ ರಾಷ್ಟ್ರೀಯ ಧ್ವಜದಿಂದ ಶೃಂಗರಿಸಲ್ಪಟ್ಟಿದ್ದವು. ಬೈಲ ಪ್ರದೇಶದಲ್ಲಿ ಕಟ್ಟಿಗೆಯ ಒಂದು ಎತ್ತರವಾದ ಪ್ಲಾಟ ಫಾರಂ ಸಿದ್ಧಗೊಳಿಸಿದ್ದರು. ಮೆರವಣಿಗೆಯು ೭| ಗಂಟೆಗೆ ಹೊರಟು ಇಷ್ಟಿಗೆ ಬರಬೇಕಾದರೆ ಸಾಧಾರಣ ೪॥ ತಾಸು ಹಿಡಿಯಿತು. ಮೆರವಣಿಗೆಯು ಇಲ್ಲಿಗೆ ಬಂದು ತಲ್ಪಿದ ನಂತರ ಮಧ್ಯಾಹ್ನ ೧ ಗಂಟೆಗೆ ಪ್ಲಾಟಫಾರಂಮಿನ ಮೇಲೆ ಶವವನ್ನಿಟ್ಟು ಬೇಕಾದವರು ದರ್ಶನ ತೆಗೆದುಕೊಳ್ಳಬಹುದೆಂದು ಅಪ್ಪಣೆಯನ್ನಿತ್ತರು.

ಅಗ್ನಿ ಸಂಸ್ಕಾರಕ್ಕಾಗಿ ಜನರು ಚಂದನ, ಕರ್ಪೂರ, ತುಪ್ಪ ಮೊದಲಾದವುಗಳನ್ನು ಕೊಡಲು ಮೊದಲೇ ಒಪ್ಪಿಕೊಂಡಿದ್ದರು. ಸರಿಯಾಗಿ ೬ ಗಂಟೆಯ ಸುಮಾರಿಕ್ಕೆ ನೆರವಾದ ವಿಠ್ಠಲಭಾಯಿ ಪಟೇಲರವರ ಮಗನಾದ ಶ್ರೀ. ವಾಲ್ಯಾಭಾಯಿಯವರಿಂದ ಅಗ್ನಿಸಂಸ್ಕಾರ ಮಾಡಿಸಿದರು.

ಶ್ರೀ ವಿಠ್ಠಲಭಾಯಿ ಪಟೇಲರವರ ಸ್ಮರಣಾರ್ಥವಾಗಿ ಮುಂಬೈ ನಗರದಲ್ಲಿ ಕಡ್ಡಾತರವಾದ ಹರತಾಳವನ್ನಾಚರಿಸಿದ್ದರು. ೧೭ ಗಿರಣಿಗಳು ಕೂಡಾ ನಿಲ್ಲಿಸಲ್ಪಟ್ಟಿದ್ದವು.

ರಿಝರ್ವ ಬ್ಯಾಂಕ ಬಿಲ್ಲಿನ ರಹಸ್ಯ.

ರಾಷ್ಟ್ರದ ರಕ್ತವನ್ನೇ ಹೀರುತ್ತಿರುವ ರೂಪಾಯಿಯ ಕೃತ್ರಿಮ ದರಕ್ಕೆ ಚಿರಪಟ್ಟವನ್ನು ಕಟ್ಟುವ ಸಾಹಸ.

(ಬರೆದವರು:—ಶ್ರೀ. ಬಳ್ಳಾರಿ ವೀರಭದ್ರಪ್ಪನವರು, ಕರ್ನಾಟಕ ಚೇಂಬರ ಆಫ್ ಕಾಮರ್ಸದ ಗೌರವ ಕಾರ್ಯದರ್ಶಿಗಳು ಗದಗ.)

[ಕರ್ನಾಟಕ ವಣಿಕ ಸಂಘದ ೪ ನೆಯ ಪ್ರಕಟನೆ.]

ಪ್ರಪಂಚವೆಲ್ಲವೂ ಸದ್ಯಕ್ಕೆ ಅತ್ಯಂತ ಭಯಂಕರವಾದ ವ್ಯಾಪಾರ ಮಂದತೆಯನ್ನು ಅನುಭವಿಸುತ್ತಿರುವದೆಂಬದರಲ್ಲಿ ಭಿನ್ನಾಭಿಪ್ರಾಯವಿಲ್ಲವಷ್ಟೆ. ಈ ಮಂದತೆಯ ಕಾರಣಗಳನ್ನು ಅರ್ಥಶಾಸ್ತ್ರಜ್ಞರು ಅನೇಕ ವಿಧವಾಗಿ ಹೇಳುತ್ತಾರೆ. ಪ್ರಪಂಚದ ನಾನಾ ಭಾಗಗಳ ಕಚ್ಚಾ ಮಾಲು ಮತ್ತು ಸಿದ್ಧ ವಸ್ತುಗಳಿರಡರಲ್ಲಿಯೂ ಅಧಿಕ ಉತ್ಪತ್ತಿಯಾಗಿರುವುದೇ ಮುಖ್ಯ ಕಾರಣವೆಂದು ಕೆಲವರನ್ನುತ್ತಾರೆ. ಆದರೆ ಬೇರೆಬೇರೆ ರಾಷ್ಟ್ರಗಳಲ್ಲಿ ಸದ್ಯಕ್ಕೆ ಪ್ರಚಲಿತವಿದ್ದ ಹಣದ ಧೋರಣಗಳಲ್ಲಿರುವ ಅನುವಂಶಿಕ ದೋಷಗಳಲ್ಲಿಯೇ ಮೂಲಭೂತ ಕಾರಣವು ಅಡಗಿರುವುದೆಂದು ಇನ್ನುಳಿದವರನ್ನುತ್ತಾರೆ.

ಈ ಮಂದತೆಗೆ ಕಾರಣವು ಯಾವುದೇ ಇದ್ದರೂ ಪ್ರಪಂಚವು ಪ್ರಚಂಡವಾದ ಮಂದತೆಯ ಇರುಕಿನಲ್ಲಿ ಸಿಕ್ಕಿ ತೊಳಲಾಡುತ್ತಿದ್ದು, ಇಷ್ಟೊಂದು ಉಗ್ರ ಸ್ವರೂಪದ ವ್ಯಾಪಾರ ಮಂದತೆಗೆ ಸಾದೃಶ್ಯವಿಲ್ಲದಿರುವದು ಮಾತ್ರ ವಸ್ತು ಸ್ಥಿತಿಯಾಗಿದೆ. ಈ ಪರಿಸ್ಥಿತಿಗೆ ಹಿಂದುಸ್ಥಾನವೂ ಅಪವಾದವಾಗಿಲ್ಲವೆಂಬದು ಸ್ವಾಭಾವಿಕವಾಗಿದೆ. ಇಷ್ಟೇ ಅಲ್ಲ, ಈ ದುರ್ದೈವಿ ದೇಶಕ್ಕೆ ಉಳಿದ ದೇಶಗಳಿಗಿಂತ ಅಧಿಕವಾದ ಕೆಲವು ವಿಶಿಷ್ಟ ಸಂಕಟಗಳೂ ಪ್ರಾಪ್ತವಾಗಿವೆ. ರೂಪಾಯಿ ಹುಂಡಣಾವಳಿಯ ದರವನ್ನು ೧೪ ಪೆನ್ಸಿಂದು ಪ್ರಸ್ಥಾಪಿಸಿದಂದಿನಿಂದ ಹಿಂದುಸ್ಥಾನ ಸರಕಾರದವರು ವಹಿಸಿದ ಚಲನ ಮತ್ತು ಹುಂಡಣಾವಳಿಯ ಧೋರಣದ ಮೂಲಕ ದೇಶದಲ್ಲಿದ್ದ ಒಕ್ಕಲಿಗರು, ಕೈಗಾರಿಕೆಯವರು, ವರ್ತಕರು, ಪದಾರ್ಥೋತ್ಪಾದಕರು, ಕೂಲಿಕಾರರು ಹೆಚ್ಚೀನು ಹಿಂದುಸ್ಥಾನದಲ್ಲಿ ಜೀವಿಸಿಕೊಂಡಿದ್ದ ಪ್ರತಿಯೊಬ್ಬರಿಗೂ ಹೇಳಲಾರದಷ್ಟು ಹಣದ ಮತ್ತು ಪತ್ತಿನ ಹಾನಿಯುಂಟಾಗಿದೆ. ಅಸ್ವಾಭಾವಿಕವಾದ ಈ ಹುಂಡಣಾವಳಿಯ ದರದಿಂದ ಎಷ್ಟೊಂದು ಅನಾಹುತಗಳುಂಟಾಗಿರುವೆದೆಂಬದನ್ನು ಹೇಳುವದೊಂದು ವಿಷಾದಮಯವಾದ ಪ್ರಕರಣವೇ ಆಗಿದೆ. ನಿಜವಾದ ಬೆಲೆಗಿಂತ ವಿಪರೀತವಾಗಿ ಏರಿದ ರೂಪಾಯಿಯ ಕೃತ್ರಿಮ ಬೆಲೆಯಿಂದ ನಮ್ಮ ನಿರ್ಗತ ವ್ಯಾಪಾರಕ್ಕೆ ಪ್ರಚಂಡವಾದ ಧಕ್ಕೆ ತಗಲಿರುವದೆಂಬದು ಪ್ರತಿಯೊಬ್ಬ ವರ್ತಕನ ಕಹಿಯಾದ ಅನುಭವವಾಗಿದೆ. ಒಕ್ಕಲತನ ಬೆಲೆಗಳ ಧಾರಣೆಯು ೧೦೦ಕ್ಕೆ ೬೦ರಷ್ಟು ಬಿದ್ದು ಹೋಗಿ ಒಕ್ಕಲಿಗನಿಗೆ ಇಟ್ಟ ಖರ್ಚಿಗೂ ಪಟ್ಟ ಶ್ರಮಕ್ಕೂ ತಕ್ಕ ಪ್ರತಿಫಲವು ದೊರೆಯದಾಗಿದೆ. ಹೆಚ್ಚೀನು, ಹಿಂದುಸ್ಥಾನದ ರಕ್ತವಾಹಿನಿಗಳಂತಿರುವ ಹಳ್ಳಿಗಳಲ್ಲಿ ಸುಖಶಾಂತಿಗಳಿಲ್ಲದಾಗಿ ಅವುಗಳ ರೋದನ ಧ್ವನಿಯಿಂದ ನಾಡಿಗೆಲ್ಲ ಸಿಡಿಲು ಬಡಿದಂತಾಗಿದೆ.

ಮೇಲಿನ ಈ ಎಲ್ಲ ಅನರ್ಥಗಳು ನಿವಾರಣೆಯಾಗಬೇಕೆಂಬುದೇ ನಮ್ಮೆಲ್ಲರ ಇಂದಿನ ಹಾರೈಕೆಯಾಗಿದೆ. ಹಾಗಾಗಬೇಕಾದರೆ ದೇಶದ ಪದಾರ್ಥಗಳ ಬೆಲೆಯು ಏರಬೇಕು. ರೂಪಾಯಿಯ ಸದ್ಯದ ಕೃತ್ರಿಮವಾದ ಬೆಲೆಯನ್ನು ಇಳಿಸುವದರಿಂದ ಪದಾರ್ಥಗಳ ಪೇಟೆಯ ಧಾರಣೆಯು ಏರಿ ನಾಡಿನ ಒಕ್ಕಲಿಗರಿಗೂ ವರ್ತಕರಿಗೂ ಬೇಕಾದ ಸಮಾಧಾನವು ಸಿಗುವದೆಂಬದರಲ್ಲಿ ಯಾವ ಸಂಶಯವೂ ಇಲ್ಲವೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು.

ಆಚೆಯ ತಿಂಗಳಲ್ಲಿ ಅಸೆಂಬ್ಲಿಯ ಸಿಲೆಕ್ಟ ಕಮಿಟಿಗೆ ಒಪ್ಪಿಸಿದ ರಿಝರ್ವ ಬ್ಯಾಂಕ ಬಿಲ್ಲಿನ ಮೂಲಕ, ಹಿಂದುಸ್ಥಾನದ ರಕ್ತವನ್ನೇ ಹೀರುತ್ತಿರುವ ಈ ೧೪ ಪೆನ್ಸಿನ ಹುಂಡಣಾವಳಿಯ ದರಕ್ಕೇನೇ ಚಿರಪಟ್ಟವನ್ನು ಕಟ್ಟಲಿಕ್ಕೆ ಸರಕಾರದವರು ಸಾಹಸ ಪಡುತ್ತಿರುವ ದನ್ನು ಜನತೆಯು ಎಚ್ಚರಿಕೆಯಿಂದ ನೋಡಬೇಕಾಗಿದೆ. ಕಳೆದ ೧೩ ವರುಷಗಳಿಂದ ದೇಶದಲ್ಲಿ ನಡೆಯುತ್ತ ಬಂದ ಚಲನದ ಧೋರಣದ ಬಗ್ಗೆ ಹಿಂದುಸ್ಥಾನದ ಜನತೆಯು ತನ್ನ ಭೀತಿಗಳನ್ನೂ ನಿಶ್ಚಿತ ಅಭಿಪ್ರಾಯಗಳನ್ನೂ ಮುಚ್ಚು ಮರೆಯಿಲ್ಲದೆ ಬಿಚ್ಚಿ ಹೇಳುವ ಕಾಲವು ಇದೀಗ ಬಂದೊದಗಿದೆ. ಜನತೆಯು ತನ್ನ ಮೇಲಿನ ಈ ಹೊಣೆಗಾರಿಕೆಯ ಮಹತ್ವವನ್ನರಿತು ಕೆಲಸಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಈ ೧೪ ಪೆನ್ಸಿನ ಹುಂಡಣಾವಳಿಯ ದರದ ಅಲ್ಪ ಸ್ವಲ್ಪ ಪೂರ್ವೇತಿಹಾಸವನ್ನವಲೋಕಿಸುವದು ಅವಶ್ಯವಾಗಿದೆ. ೧೯೨೦ರಲ್ಲಿ ೨ ಶಿಲಿಂಗು ಬಂಗಾರವೆಂದು ಪ್ರಸ್ಥಾಪಿಸಲ್ಪಟ್ಟ ರೂಪಾಯಿಯ ಹುಂಡಣಾವಳಿಯ ದರವು ಹುಟ್ಟಿಬಂದ ಕೆಲವು ತಿಂಗಳುಗಳಲ್ಲಿಯೇ ಕುಸಿಬಿದ್ದು ನಾಚಿಕೆ ಗೇಡಾಯಿತು. ಆ ಮೇಲೆ ೧೯೩೪-೩೫ರಲ್ಲಿ ಮೊದಲಿಗಿಂತ ಸ್ವಲ್ಪ ಸೌಮ್ಯವಾದ ಪ್ರಯೋಗವು ನಡೆಯಬೇಕೆಂದು ವ್ಹಾಯಿಟ ಹಾಲ (White hall) ಆಪ್ಪಣೆಯಾಗಿ ೧೯೩೬ರಲ್ಲಿ ರಾಯಲ್ ಕಮಿಶನ್ನು ನೇಮಿಸಲ್ಪಟ್ಟಿತು. ಆ ಸಮಿತಿಯಲ್ಲಿದ್ದ ಭಾರತೀಯರಲ್ಲದ ಸದಸ್ಯರೊಬ್ಬರಿಗೂ ಹಿಂದುಸ್ಥಾನದ ಭವಿಷ್ಯವನ್ನು ಸ್ಪಷ್ಟವಾಗಿ ಮುಂಗಂಡು ನೋಡುವ ಸಾಮರ್ಥ್ಯವಿರಲಿಲ್ಲ. ಕಡೆಗೆ ೧೯೩೭ರಲ್ಲಿ ೧ ಶಿ. ೬ ಪೆನ್ಸಿನ ದರವು ವರಿಷ್ಠ ಮಂಡಲದ ಎರಡೇ ಮತಗಳ ಬಹುಮತದಿಂದ ಹಿಂದುಸ್ಥಾನದ ತಲೆಯಮೇಲೆ

(೧೨ ನೆಯ ಪುಟದ ಮುಂದರಿದಿದೆ.)

೫೦ ವರುಷಗಳ
ಮುಂದಣ ವೀರಶೈವ ಸಮಾಜ ಸ್ಥಿತಿ.

೫೦ ವರುಷಗಳ ಹಿಂದೆ ವೀರಶೈವ ಸಮಾಜವು ಧಾರ್ಮಿಕ, ಸಾಂಪತ್ತಿಕ ಮತ್ತು ವಿದ್ಯಾವಿಷಯಕಗಳಲ್ಲಿ ಹೇಗಿದ್ದಿತೆಂಬುದನ್ನೂ ಕಳೆದ ೫೦ ವರುಷಗಳಲ್ಲಿ ಧಾರ್ಮಿಕ ಮತ್ತು ಸಾಂಪತ್ತಿಕ ಹೀನಾವಸ್ಥೆಗಳುಂಟಾಗಿ ವಿದ್ಯಾವಿಷಯದಲ್ಲಿ ಮಾತ್ರ ಉನ್ನತಿಯಾಗಿದೆಯೆಂಬುದನ್ನೂ ಈ ಮುಂಚಿನ ಲೇಖನಗಳಲ್ಲಿ ವಿವರಿಸಿದ್ದಾಗಿದೆಯಷ್ಟೆ.

ಈ ವಿಷಯಗಳಲ್ಲಿ ಸಮಾಜವು ಈಗಲೇ ಲಕ್ಷಿಸಿ ಯೋಗ್ಯ ಸುಧಾರಣೆಗಳನ್ನು ಮಾಡದಿದ್ದರೆ ೫೦ ವರುಷಗಳ ನಂತರ ಈ ಸಮಾಜದ ಸ್ಥಿತಿಯು ಹೇಗಾಗಬಹುದೆಂಬುದನ್ನು ಸ್ವಲ್ಪ ಯೋಚಿಸೋಣ. ಧಾರ್ಮಿಕ ಸಾಂಪತ್ತಿಕ ಮೊದಲಾದ ಸಕಲ ವಿಷಯಗಳಲ್ಲಿಯೂ ಈಗ ವಿಶೇಷವಾದ ಸ್ಪರ್ಧೆಯುಂಟಾಗಿದೆ. ಒಂದು ರಾಷ್ಟ್ರದವರು ಇನ್ನೊಂದು ರಾಷ್ಟ್ರದವರಿಗಿಂತಲೂ, ಒಂದು ಧರ್ಮದವರು ಇನ್ನೊಂದು ಧರ್ಮದವರಿಗಿಂತಲೂ ಸಕಲ ವಿಷಯಗಳಲ್ಲಿಯೂ ಮುಂದರಿಯಬೇಕೆಂದು ತೀವ್ರತರವಾದ ಸ್ಪರ್ಧೆಯನ್ನು ನಡೆಸಿದ್ದಾರೆ. ಆದುದರಿಂದ ಇದಕ್ಕೆ ಸ್ಪರ್ಧೆಯ ಯುಗವೆಂದು ಹೇಳಿದರೂ ಹೇಳಬಹುದು.

ಈ ಸ್ಪರ್ಧೆಯಲ್ಲಿ ಯಾವ ರಾಷ್ಟ್ರ ಮತ್ತು ಸಮಾಜಗಳು ಹಿಂದುಳಿಯುವವೋ ಅವು ದಿನೇದಿನೇ ನಾಮಶೇಷವಾಗುವಂತಹ ಸ್ಥಿತಿಗೇನೇ ಈಡಾಗುವುವು. ಏಕೆಂದರೆ ಈಗಾಗತಕ್ಕ ಎಲ್ಲ ಸುಧಾರಣೆಗಳೂ ಕ್ರಾಂತಿ ಸ್ವರೂಪದವುಗಳೇ ಇರುತ್ತವೆ. ಜಗತ್ತಿನಲ್ಲಿ ಈಗ ಮಹತ್ತರವಾದ ಕ್ರಾಂತಿಯೇ ಪ್ರಾರಂಭವಾಗಿದೆ. ರಾಜಕೀಯ ಕ್ರಾಂತಿಯೊಂದೇ ಪ್ರಬಲವಾಗಿಲ್ಲ. ಧಾರ್ಮಿಕ ಮತ್ತು ಸಾಂಪತ್ತಿಕ ಮಹಾ ಕ್ರಾಂತಿಗಳೂ ಉಂಟಾಗಿವೆ.

ಈ ಕ್ರಾಂತಿಗಳಿಗೆ ಯಾವ ರಾಷ್ಟ್ರ ಅಥವಾ ಮತವು ಆಹುತಿಯಾಗುತ್ತದೆಯೋ ಅದು ನಾಮಶೇಷವಾಗುವುದೆಂದೇ ತಿಳಿಯಬೇಕು. ಆದಕಾರಣ ಮುಂದಣ ೫೦ ವರುಷಗಳಲ್ಲಿ ವೀರಶೈವ ಸಮಾಜವೂ ಭಿನ್ನ ಸ್ಥಿತಿಯಲ್ಲಿರುವುದೆಂದೇ ಧಾರಾಳವಾಗಿ ಹೇಳಬಹುದು. ಆದರೆ ಆ ಭಿನ್ನ ಸ್ಥಿತಿಯು ಉನ್ನತಿಪರವಾದುದಾಗಿರುವುದೇ ಅಥವಾ ಅವನತಿಗೀಡಾದುದಾಗಿರುವುದೇ ಎಂಬುದೇ ಮುಖ್ಯ ಪ್ರಶ್ನೆಯಾಗಿದೆ.

ಧಾರ್ಮಿಕ ಸ್ಥಿತಿ.

ಆ ಬಸವಾದಿ ಮಹಾ ಪ್ರವಾಹದಲ್ಲಿ ಹರಿದು ಬೋಧಿಸಿರುವ ವೀರಶೈವ ಧರ್ಮತತ್ವಗಳಲ್ಲಿ ಇತ್ತೀಚಿಗೆ ಅನೇಕರು ಸಂಕುಚಿತ ಭಾವನೆಗಳುಳ್ಳವರಾಗಿ ನಾನಾ ಭಿನ್ನ ಭೇದಗಳನ್ನು ಮಾಡಲುಪಕ್ರಮಿಸಿದ್ದಾರಷ್ಟೆ. ಈ ಶೋಚನೀಯ ಸ್ಥಿತಿಯು ನಿವಾರಣೆಯಾಗದಿದ್ದರೆ ಸಮಾಜವು ದಿನೇ ದಿನೇ ಭಿನ್ನವಿಚ್ಛಿನ್ನವಾಗುತ್ತ ಹೋಗುವುದು. ಏಕ ಮುಖವಾದ ಸಮಾಜೋನ್ನತಿಯ ಯಾವ ಮಹತ್ಕಾರ್ಯವೂ ನಡೆಯಲಾರದು.

ಧರ್ಮದ ಉದಾತ್ತ ತತ್ವಗಳ ಪ್ರಸಾರವಾಗದೆ ಜನಸಾಮಾನ್ಯರಿಗೆ ಮತಾಚಾರಗಳ ವಿಷಯದಲ್ಲಿ ಉಪೇಕ್ಷೆಯುಂಟಾಗುವುದು. ಆಗ ತಮ್ಮತಮ್ಮ ಧರ್ಮ ಪ್ರಸಾರ ಮಾಡಲು ಏರಿಬರುತ್ತಿರುವ ಮುಸಲ್ಮಾನ, ಆರ್ಯಸಮಾಜ ಮತ್ತು ಕ್ರೈಸ್ತರಿಗೆ ಈ ಸಮಾಜದ ಅನೇಕರು ಆಹುತಿಯಾಗುವರು. ಹೀಗಾಗಿ ಈ ಮತಕ್ಕಿರುವ ಈಗಿನ ಮಹತ್ವವು ಕೂಡಾ ಗಣತಿಯ ಇಸ್ಪಿಯಲ್ಲಿ ಇಲ್ಲದಂತಾಗುವುದೆಂದು ಹೇಳಲು ಯಾವ ಭವಿಷ್ಯವಾದಿಯಾಗಲಿ ಅಥವಾ ಕಾಲಜ್ಞಾನಿಯಾಗಲಿ ಬೇಕಾಗಿಲ್ಲ.

ಸಾಂಪತ್ತಿಕ ಸ್ಥಿತಿ.

ವ್ಯಾಪಾರ, ಕೈಗಾರಿಕೆ ಮೊದಲಾದ ಸಂಪದಭಿವೃದ್ಧಿಯ ಈಗಿನ ಮುಖ್ಯ ಉದ್ಯೋಗಗಳ ವಿಷಯದಲ್ಲಿ ಈ ವರೆಗೂ ಉಪೇಕ್ಷಿಸುತ್ತಾ ಬಂದಿದ್ದೇವೆ. ಇನ್ನು ಮುಂದೆಯೂ ಹೀಗೆಯೇ ಉಪೇಕ್ಷಿಸಿ ಈಗಿನ ನೌಕರಿಯ ಶಿಕ್ಷಣಕ್ಕಾಗಿಯೇ ಸಕಲರೂ ಲಕ್ಷಿಸಿ ಬುದ್ಧಿಶಾಲಿಗಳೆಲ್ಲಾ ಅದರಲ್ಲೇ ಮಗ್ನರಾದದ್ದಾದರೆ ಸಾಂಪತ್ತಿಕ ಶೋಚನೀಯ ಸ್ಥಿತಿಯುಂಟಾಗುವುದು.

ವೀರಶೈವ ಸಮಾಜವು ಕೇವಲ ಒಕ್ಕಲತನ ಮತ್ತು ಕೂಲಿಯ ಸಮಾಜವಾಗಿ ಪರಿಣಮಿಸುವುದು. ಕರ್ನಾಟಕದಲ್ಲಿ ಈಗಿರತಕ್ಕ ಸಾಂಪತ್ತಿಕ ಪ್ರಾಮುಖ್ಯತೆಯು ಕೂಡಾ ಆಗ ಈ ಸಮಾಜಕ್ಕುಳಿಯುವುದಿಲ್ಲ. ಅನ್ಯ ಸಮಾಜಗಳ ಸುಶಿಕ್ಷಿತರು ಈಗಾಗಲೇ ವ್ಯಾಪಾರಾದಿ ಸಾಂಪತ್ತಿಕ ಕ್ಷೇತ್ರದ ನಾನಾ ಭಾಗಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಜಾಗೃತಿಯಿಂದ ಮುಂದೆ ವ್ಯಾಪಾರ ಕೈಗಾರಿಕೆಗಳಿಗೆ ಸ್ವಾಭಾವಿಕವಾಗಿಯೇ ಪ್ರಾಮುಖ್ಯತೆಯುಂಟಾಗುವುದು. ಆಗ ವೀರಶೈವರು ಬಹುದೂರದಲ್ಲಿದ್ದು ನಿಲುಕದುದಕ್ಕೆ ಕೈನೀಡಬೇಕಾಗುವುದು.

ಸಂಪಾದಕ.

ರೂಪಾಯಿಯ ಬೆಲೆಯನ್ನು ಇಳಿಸಬೇಕು.

ಕಡ್ಡಿನ್ಸ್ ಲೀಗ್ ಆಫ್ ಇಂಡಿಯಾಕ್ಕೆ ಕರ್ನಾಟಕ ಚೇಂಬರ ಆಫ್ ಕಾಮರ್ಸದ ಬೆಂಬಲ.

ಗದಗ, ತಾ. ೫-೧೧-೩೩.

ಗದಗಿನ ಕರ್ನಾಟಕ ಚೇಂಬರ ಆಫ್ ಕಾಮರ್ಸದ ಗೌರವ ಕಾರ್ಯದರ್ಶಿಗಳಾದ ಶ್ರೀ. ಬಳ್ಳಾರಿ ವೀರಭದ್ರಪ್ಪನವರು ತಮ್ಮ ಕಮಿಟಿಯವರ ಕೆಳಗೆ ಕಾಣಿಸಿದ ಠರಾವನ್ನು ಹಿಂದುಸ್ಥಾನ ಸರಕಾರದ ಕೋಶಾಧಿಕಾರಿಗಳಿಗೆ ಕಳಿಸಿದ್ದಾರೆ.

"ಗಿಲ ಪೌಂಡಿನ ಹುಂಡಣಾವಳಿಯ ದರವನ್ನು (Sterling ratio) ಮುಂದೆಯೂ ಹಾಗೆಯೇ ಸಾಗಿಸಬೇಕೆಂಬ 'ರಿಝರ್ವ್ ಬ್ಯಾಂಕಿನ ಬಿಲ್ಲಿ'ನಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದನ್ನು ವಿರೋಧಿಸುವದಕ್ಕೂ ಹಾಗೂ ರೂಪಾಯಿಯು ತನ್ನ ಯೋಗ್ಯ ಮತ್ತು ಸ್ವಾಭಾವಿಕ ಬೆಲೆಯನ್ನು ಕಂಡುಕೊಳ್ಳುವಂತೆ ಅದಕ್ಕೆ ಮಾರ್ಗಮಾಡಿಕೊಡಲು ಸರಕಾರದವರನ್ನು ಆಗ್ರಹಪಡಿಸುವದಕ್ಕೂ ಸ್ಥಾಪಿತನಾದ 'ಕರೆನ್ಸಿ ಲೀಗ್ ಆಫ್ ಇಂಡಿಯಾ' ಸಂಸ್ಥೆಯ ಉದ್ದೇಶಗಳಿಗೆ ಈ ಚೇಂಬರದ ಕಮಿಟಿಯವರು ತಮ್ಮ ಪೂರ್ಣ ಒಪ್ಪಿಗೆಯನ್ನು ಕೊಡುತ್ತಾರೆ.

ಹೆಚ್ಚಾಗಿ, ಈ ವಿಷಯದಲ್ಲಿ ಸರಕಾರದವರು ಸುಮ್ಮನೆ ಕಾಲಹರಣ ಮಾಡಿದ್ದಾದರೆ, ದೇಶದ ಕೃಷಿ ಉದ್ಯೋಗ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ತೀವ್ರತರವಾದ ಅಸಂತೋಷವುಂಟಾಗುವದೆಂದೂ ತಾವು ಭಯಭೀತರಾಗಿರುವುದಾಗಿಯೂ ಹಾಗೂ ಈ ಅಸಂತೋಷವನ್ನು ಕಳೆಯಲು ಸರಕಾರದವರು ರೂಪಾಯಿಯ ಸದ್ಯದ ಅತ್ಯಂತ ಅಧಿಕವಾದ ಕೃತ್ರಿಮ ಬೆಲೆಯನ್ನು ಇಳಿಸಬೇಕೆಂಬುದಾಗಿಯೂ ಈ ಕಮಿಟಿಯವರು ಅಭಿಪ್ರಾಯ ಪಡುತ್ತಾರೆ."

ಮುಸಲ್ಮಾನರ ಅತ್ಯಾಚಾರ.

ಚಿಂತಾಮಣಿಯ ಬ್ರಾಹ್ಮಣ ಕನ್ಯಾಪಹಾರ.

ಅನೇಕ ಪುಂಡ ಮುಸಲ್ಮಾನರು ಸಿಂಧ, ಬಂಗಾಲ ಪ್ರಾಂತಗಳಲ್ಲಿಯೂ, ಕೆಲವು ಮುಸಲ್ಮಾನ ಸಂಸ್ಥಾನಗಳಲ್ಲಿಯೂ ಹಿಂದು ಯುವತಿಯರಿಗೆ ಬಲಾತ್ಕಾರವಾಗಿ ಅತ್ಯಂತ ಹಿಂಸೆಗಳನ್ನುಂಟುಮಾಡುವುದು ಸರಿಯಷ್ಟೆ. ಇಂಥ ಹಿಂಸೆಗಳನ್ನು ತಡೆಯುವದಕ್ಕಾಗಿಯೇ ಬಂಗಾಲದಲ್ಲಿಯ ಪ್ರತಿಷ್ಠಿತ ಮುಂದಾಳುಗಳು ಒಂದು ಪ್ರಕಟನೆಯನ್ನು ಕೂಡಾ ಪ್ರಕಟಿಸಿದ್ದರು. ಆದರೂ ಇಂಥ ಹಿಂಸೆ ಬಲಾತ್ಕಾರಗಳು ಭರತಖಂಡದಲ್ಲೆಲ್ಲಾ ನಡೆಯುತ್ತಿರುವದು ಹಿಂದುಗಳ ದೌರ್ಬಲ್ಯ ಸೂಚಕಗಳಾಗಿವೆಯೆಂದೇ ಸ್ಪಷ್ಟ ತೋರುತ್ತದೆ. ಇದೇ ಪ್ರಕಾರ ಒಂದು ಅತ್ಯಾಚಾರವು ಮೈಸೂರು ಪ್ರಾಂತದಲ್ಲಿರುವ ಚಿಂತಾಮಣಿ ಗ್ರಾಮದಲ್ಲಿ ಕೆಲ ಪುಂಡ ಮುಸಲ್ಮಾನರಿಂದ ನಡೆಸಲ್ಪಟ್ಟದೆ. ಇದನ್ನು ನೋಡಿದರೆ ಮೈಸೂರು ದೇಶಕ್ಕೆಯು ಕೂಡಾ ಮುಸಲ್ಮಾನರ ಉಪಟಳವು ಹೆಚ್ಚಾಗಿದೆಯೆಂದೇ ಕಂಡುಬರುತ್ತದೆ.

ಚಿಂತಾಮಣಿಯಲ್ಲಿ ಶ್ರೀ. ರಾಮಸ್ವಾಮಿ ಪಂಡಿತರೆಂಬುವ ಗೃಹಸ್ಥರಿರುವರು. ಅವರಿಗೆ ಮಹಾ ಲಕ್ಷ್ಮಮ್ಮನೆಂಬ ೧೬ ವರುಷದ ಮಗಳೊಬ್ಬಳು. ಬಾಲವಿಧವೆ. ತಂದೆಯ ಮನೆಯಲ್ಲಿಯೇ ವಾಸವಾಗಿದ್ದಳು. ಮನೆಯವರು ವಿಧನೆಯಂತೆ ಕಾಣುತ್ತಿರುವುದು ಇವಳಿಗೆ ಸೇರಲಿಲ್ಲ. ಅಂಶು ಮನೆಯನ್ನು ಬಿಟ್ಟು ಹೇಗಾದರೂ ಉಪಜೀವಿಸಬೇಕೆಂದು ಭಾದ್ರಪದ ಶುದ್ಧ ಪ್ರತಿಪದೆಯಂದು ಮಂಗಳವಾರ ರಾತ್ರೆ ೮ ಗಂಟೆ ಸುಮಾರಕ್ಕೆ ಮನೆಯನ್ನು ಬಿಟ್ಟು ಹೊರಟಳು. ಆಗ ಅವಳನ್ನು ಪುಂಡ ಮುಸಲ್ಮಾನರು ಅಡ್ಡಗಟ್ಟಿ ಸೆಳೆದೊಯ್ದುಕೊಂಡು ಬಲಾತ್ಕಾರವಾಗಿ ಯಾವ ಪ್ರಕಾರ ಹಿಂಸೆ ಪಡಿಸಿದರೆಂಬ ಹೃದಯದ್ರಾವಕ ಸಂಗತಿಯನ್ನು ಅವಳೇ ಕೋರ್ಟನಲ್ಲಿ ಈ ಪ್ರಕಾರ ಬೇಳಿದ್ದಾಳೆ—

"ನಮ್ಮ ಮನೆಯಲ್ಲಿ ಮಡಿ ಕೆಲಸ ಮಾಡುವವರಾರು ಇರಲಿಲ್ಲ. ನನ್ನ ಕೂದಲು ತೆಗೆಯಿಸಿ ಆ ಕೆಲಸಕ್ಕೆ ಹಾಕಬೇಕೆಂದು ಮಾಡಿದ್ದರು. ಇದರಿಂದ ನನ್ನ ಜೀವನವೇ ಹಾಳಾಗುವುದೆಂದು ಯೋಚಿಸಿ ಬೆಂಗಳೂರಿನ ಆರ್ಯಸಮಾಜಕ್ಕಾದರೂ ಸೇರಿ ವಿದ್ಯಾಭ್ಯಾಸ ಮಾಡಿ ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಬೇಕೆಂದು ಮಾಡಿದ್ದೆ. ಆಗ ರಾತ್ರೆ ೮-೪॥ ಗಂಟೆಗೆ ಟ್ರಂಕನ್ನು ತೆಗೆದುಕೊಂಡು ಮುಂಬಾಗಿಲಿನಿಂದ ಹೊರಬಿದ್ದೆ. ರಾಜಬೀದಿಯಲ್ಲಿ ಹೋಗದೆ ಎದುರು ಗಲ್ಲಿಯಲ್ಲಿ ಹೊರಟೆ. ನಮ್ಮ ಮನೆ ಎದುರಿನಲ್ಲಿ ಒಂದು ಉರ್ದು ಹೈಸ್ಕೂಲಿದೆ. ನಾ ಹೋಗುವ ಸಂದಿಯ ಕಡೆ ಬಾಗಿಲು ತೆಗೆದಿತ್ತು. ಒಳಗಡೆ ಏಳೆಂಟು ಜನರಿದ್ದರು. ನನ್ನನ್ನು ನೋಡಿ ಈಚೆಗೆ ಬಂದರು. ಯಾಕೋ ಓಡಿದ ಹಾಗಾಯಿತು. ಸುಮ್ಮನೆ ಮುಂದೆ ಹೋದೆ. ಒಂದು ಮನೆಯ ಹತ್ತಿರ ಹೋದಾಗ ಒಬ್ಬ ಮುಸಲ್ಮಾನನು ಅಡ್ಡಬಂದು 'ಕತ್ತಲಲ್ಲಿ ಎಲ್ಲಿ ಹೋಗುವೆ? ನಮ್ಮ ಮನೆಗೆ ಬಾ ಬೆಳಿಗ್ಗೆ ಹೋಗುವಿಯಂತೆ, ಎಂದ. ನಾನು ಒಪ್ಪಲಿಲ್ಲ. ಕೂಡಲೇ ಒಬ್ಬನು ಕತ್ತಿಗೆ ಕೈ ಹಾಕಿದ. ಟ್ರಂಕ್ ಇನ್ನೊಬ್ಬನ ಪಾಲಾಯಿತು. ಇನ್ನಿಬ್ಬರು ಬಂದು ನನ್ನ ಮುಖದ ಮೇಲೆಲ್ಲಾ ಉಗುಳಿದರು. ನನ್ನನ್ನು ಹೊತ್ತುಕೊಂಡು ಹೋಗಿ ಒಂದು ಹುಣಿಸೇ ಮರದ ಹತ್ತಿರ ಬಹುಕಾಲ ಬಂಧಿಸಿದ್ದು ಆನಂತರ ಹೈಸ್ಕೂಲು ಆಂಗಳದಲ್ಲಿ ತಂದು ಕುಳ್ಳಿರಿಸಿದರು. ನೀರು ಕುಡಿದು ಬರುತ್ತೇನೆಂದು ಹೇಳಿದೆ. ಅವರು ತಂದ ನೀರನ್ನು ನಿರಾಕರಿಸಲು ಇಬ್ರಾಹಿಮನು ಬಲಾತ್ಕಾರ ಮಾಡಿ ಬಾಯಿ ನೀರು ಸುರಿದ.

ಈ ಪ್ರಕಾರ ಮಹಾಲಕ್ಷ್ಮಮ್ಮನು ಕೋರ್ಟನಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಾ ತನ್ನ ಸಾಕ್ಷಿ ನುಡಿದಳು. ಮಹಾ ಲಕ್ಷ್ಮಮ್ಮನವರ ತಂದೆ ಶ್ರೀ. ರಾಮಸ್ವಾಮಿಯವರು ತಮ್ಮ ಸಾಕ್ಷಿಯಲ್ಲಿ ಈ ಪ್ರಕಾರ ಹೇಳಿದರು—

"ಆ ದಿನ ತಲೆನೋಯುತ್ತದೆಂದು ಅವಳು ಬೇಗ ಮಲಗಿಕೊಂಡಳು. ಅರಿಶಿಣ ಕುಂಕುಮಕ್ಕೆ ಹೋಗಿದ್ದ ಅವರ ಅಕ್ಕಂದಿರಬ್ಬರೂ ಮನೆಗೆ ಬಂದಮೇಲೆ ನೋಡಲಾಗಿ ಮಹಾಲಕ್ಷ್ಮಮ್ಮನ ಮನೆಯಲ್ಲಿರಲಿಲ್ಲ. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಸಬ್ ಇನ್ಸ್‌ಪೆಕ್ಟರಿಗೆ ತಿಳಿಸಿದೆವು. ಅವರು ಹುಡಿಕಿ ಸಿಕ್ಕದಿದ್ದರೆ ಹುಡಕಿಸೋಣ ಎಂದರು. ಆ ಮೇಲೆ ಮನೆಯಲ್ಲಿದ್ದ ಟ್ರಂಕು ಇಲ್ಲವೆಂದು ತಿಳಿಸಲು ಸಬ್ ಇನ್ಸ್‌ಪೆಕ್ಟರರು 'ಹೋಗಿರಿ! ಹೋಗಿರಿ!! ಮನೆ ಹೋಗಿ ಸುಮ್ಮನೆ ಮಲಗಿಕೊಳ್ಳಿ!!!' ಎಂದರು. ರಾತ್ರೆ ೩ ಗಂಟೆವರೆಗೆ ಅಲೆದರೂ ಸಿಕ್ಕಲಿಲ್ಲ. ಬೆಳಿಗ್ಗೆ ಪೋಲೀಸ ಇನ್ಸ್‌ಪೆಕ್ಟರ ಆಫೀಸಿಗೆ ಹೋದೆ. ಬಾಗಿಲಲ್ಲಿ ಮಹಾಲಕ್ಷ್ಮಮ್ಮ ನಿಂತಿದ್ದಳು ಆಕೆಯು ನನ್ನನ್ನು ಕಂಡೊಡನೆ ಅತ್ತಳು. ಇನ್ಸ್‌ಪೆಕ್ಟರರು 'ಹುಡಿಗಿ ಮುಸಲ್ಮಾನ ಮತಕ್ಕೆ ಸೇರುತ್ತೇನೆಂದು ಅರ್ಜಿಮಾಡಿದ್ದಾಳೆ ಮುಸಲ್ಮಾನರು ಅವಳ ಮುಖಕ್ಕೆ ಉಗುಳಿ ಕೆಡಿಸಿದ್ದಾರೆ. ನೀವು ಹೇಗೆ ಮನೆಗೆ ಕರೆದುಕೊಂಡು ಹೋಗುತ್ತೀರಿ' ಎಂದರು, ಉಗುಳಿದರೂ ಚಿಂತೆಯಿಲ್ಲ' ನಾನು ಅವಳನ್ನು ಶುದ್ಧ ಮಾಡಿ ಸ್ವೀಕರಿಸುತ್ತೇನೆಂದೆ. (ಪೋಲೀಸ ಇನ್ಸ್‌ಪೆಕ್ಟರರು ಮುಸಲ್ಮಾನ ಜಾತಿಯವರು) ಆನಂತರ ಸಬ್ ಇನ್ಸ್‌ಪೆಕ್ಟರ ಆಫೀಸಿಗೆ ಹೋದೆ ಸಬ್ ಇನ್ಸ್‌ಪೆಕ್ಟರರು ಟ್ರಂಕನ್ನು ತೆಗೆಯಿಸಿ 'ನೀನು ಮುಸಲ್ಮಾನ ಜಾತಿಗೆ ಸೇರುವೆ ನಿಮ್ಮ ಅಪ್ಪನಿಗೂ, ತಮ್ಮನಿಗೂ ಏನಾದರೂ ಕೊಡು.' ಎಂದು ಅವಳಿಂದ ತಮ್ಮನಿಗೆ ಡಾಬನ್ನೂ ಲಕ್ಷ್ಮಿ ಕಾಸುಗಳನ್ನೂ ಕೊಡಿಸಿದರು. ನನಗೆ ಬೆಳ್ಳಿ ವಿಗ್ರಹವನ್ನು ಕೊಡೆಂದರು. ನನಗೆ ತಡೆಯಲಾರದಷ್ಟು ದುಃಖವಾಯಿತು. ಏನು ಸ್ವಾಮೀ ನೀವು ಬ್ರಾಹ್ಮಣರಾಗಿ ಹೀಗೆ ಮಾಡಬಹುದೇ ಎಂದೆ. ಹಾಗಾದರೆ ಮಹಾಲಕ್ಷ್ಮಮ್ಮನನ್ನು ಕರೆದುಕೊಂಡು ಹೋಗ್ತೀರಾ ಎಂದುದಕ್ಕೆ ಒಪ್ಪಿದೆ. ಅವಳೂ ಒಪ್ಪಿದಳು.

ಸಬ್ ಇನ್ಸ್‌ಪೆಕ್ಟರರು ಹುಡುಗಿಯ ಹೇಳಿಕೆಯನ್ನು ತೆಗೆದುಕೊಳ್ಳಬೇಕೆಂದು ನಮ್ಮ ಲ್ಲರನ್ನು ಹೊರಗೆ ಅಟ್ಟಿದರು ಸ್ವಲ್ಪ ಹೊತ್ತಿನಮೇಲೆ ಅವರು ಬರೆದಿಟ್ಟ ಎರಡು ಕಾಗದಗಳಿ

ಗಾಂಧಿ ಮತ್ತು ಲೆನಿನ್.

ಪುಣೆಯಲ್ಲಿಯ 'ಯಂಗ್ ಸೋಸಿಯಾಲಿಸ್ಟ್ ಲೀಗ್' ಸಭಾ ಸದರು ಕಳೆದ ನವ್ಹಂಬರ್ ೭ನೆಯ ತಾರೀಖಿನ ದಿವಸ 'ರಶಿಯಾದ ರಾಜ್ಯಕ್ರಾಂತಿಯ ದಿವಸ' ವೆಂದು ಜರುಗಿಸಿದರು. ಆ ದಿವಸ ಟಿಳಕ ಸ್ಮಾರಕ ಮಂದಿರದಲ್ಲಿ ತರುಣರ ಒಂದು ಸಭೆಯು ನಡೆಯಿತು. ಈ ಸಭೆಗಾಗಿ ಮುಂಬಯಿಯಲ್ಲಿಯ ಸುಪ್ರಸಿದ್ಧ ಸ್ತ್ರೀ ಸೋಸಿಯಾಲಿಷ್ಟರಾದ ಕುಮಾರಿ ಮಣಿಬೆನ್ ಕಾರಾರವರು ಬರತಕ್ಕವರಿದ್ದರು. ಆದರೆ ಅವರು ಅಸ್ವಸ್ಥತೆಯ ಮೂಲಕ ಬರಲು ಶಕ್ಯವಾಗದಿದ್ದುದರಿಂದ ಡಾ. ಎಂ. ಆರ್. ಶೆಟ್ಟರವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು.

ಪುಣೆಯಲ್ಲಿಯ ಮುಂದಾಳುಗಳಾದ ಶ್ರೀ. ನ. ವಿ. ಗಾಡಗೀಳರವರು ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನೇ ಇದರಡಿಯಲ್ಲಿ ಕೊಟ್ಟಿದೆ—

'ರಶಿಯಾದ ರಾಜ್ಯಕ್ರಾಂತಿಯಾದ ೧೭ ವರುಷಗಳ ನಂತರ ನಾವು ಈ ಪುಣೆ ಪಟ್ಟಣದಲ್ಲಿ ಅದರ ಜನ್ಮ ದಿನೋತ್ಸವವನ್ನು ಆಚರಿಸುತ್ತಲಿದ್ದೇನೆ. ಈ ರಾಜ್ಯ ಕ್ರಾಂತಿಯ ಕಾಲಕ್ಕೆ ನಾವು ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದೆವು. ನಮ್ಮ ಇತಿಹಾಸದ ಅಧ್ಯಾಪಕರು ಬೇರೆ ರಾಷ್ಟ್ರಗಳ ಇತಿಹಾಸಗಳ ಜತೆಯಲ್ಲಿಯೇ ರಶಿಯಾದ ಇತಿಹಾಸವನ್ನು ಹೇಳಿಕೊಡುತ್ತಿದ್ದರು. ಅದೇ ಕಾಲಕ್ಕೆ ರಶಿಯಾದಲ್ಲಿ ಕ್ರಾಂತಿಯಾದುದು ತಿಳಿದೊಡನೆಯೇ ನಮ್ಮ ಅಧ್ಯಾಪಕರು 'Thank God! the Revolution has come' ಎಂದು ಹೇಳಿದ್ದರು. ಆಗ ನಾವು ಚಪ್ಪಾಳೆಯ ಪ್ರಚಂಡ ಧ್ವನಿಯಿಂದ ನಮ್ಮೆಲ್ಲರ ಆನಂದವನ್ನು ವ್ಯಕ್ತಗೊಳಿಸಿದ್ದೆವು. ನಾವೆಲ್ಲರೂ ಆಗ್ಗೆನೇ ಕಾರ್ಯಾವಾಚಾ ಮನಸ್ಸಿನಿಂದ ಪ್ರಯತ್ನಿಸಿ ಪ್ರಜಾ ಸತ್ತಾತ್ಮಕವನ್ನು ನಮ್ಮ ಕಣ್ಣೆನಿಂದಲೇ ನೋಡಬೇಕೆಂದು ನಿಶ್ಚಯಿಸಿದೆವು.

ರಶಿಯಾದ ರಾಜ್ಯಕ್ರಾಂತಿಯಿಂದ ನಾವೆಲ್ಲರೂ ಏನು ಕಲಿಯಬೇಕೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಅವರು ಮೊದಲು ವೈಯ್ಯಕ್ತಿಕ ಅತ್ಯಾಚಾರವನ್ನು ಬಿಟ್ಟುಕೊಟ್ಟು ೧೯೧೭ರಲ್ಲಿ ತಾ. ೭ನೆಯ ನವ್ಹಂಬರದಿಂದ ತಾ. ೧೭ ನವ್ಹಂಬರದವರೆಗಿನ ೧೦ ದಿವಸಗಳಲ್ಲಿ ರಕ್ತಪಾತವಿಲ್ಲದೇನೇ ಕ್ರಾಂತಿಯನ್ನುಂಟುಮಾಡಿ ಜಗತ್ತನ್ನೇ ಬೆರಗುಮಾಡಿಬಿಟ್ಟರು. ಆದುದರಿಂದಲೇ (Ten days that shook the world) ಎಂದು ಆ ಕಾಲದಲ್ಲಿ ಅತ್ಯಂತ ಅಭಿಮಾನದಿಂದ ಹೇಳುತ್ತಿದ್ದರು. ರಶಿಯಾದ ಕ್ರಾಂತಿಯೇನೂ ತನ್ನಿಂದ ತಾನೇ ಸಂಭವಿಸಲಿಲ್ಲ. ಆ ಕ್ರಾಂತಿಗೆ ಅನುಕೂಲವಾದ ಭೌತಿಕ ಪರಿಸ್ಥಿತಿಯನ್ನುಂಟುಮಾಡಿ ನಾಲ್ವತ್ತು ವರುಷಗಳವರೆಗೆ ಪರದೇಶಗಳಲ್ಲಿದ್ದು ಬಿಟ್ಟುಬಿಡದೆ ಪ್ರಯತ್ನ ಮಾಡಿ ಅದರ ಅನುಭವದ ಮೇಲಿಂದಲೇ ಲೆನಿನ್‌ನು ಸಮಾಜ ತತ್ವಗಳನ್ನು ಸ್ಥಿರಗೊಳಿಸಿದನು. ಒಂದು ವೇಳೆ ಚಿರ್ಚಿನ ಮೇಲಿರತಕ್ಕ ಕಪ್ಪು ಕಲೆಗಳು ವ್ಯತ್ಯಾಸ ಹೊಂದಬಹುದೇ ವಿನಾ ತನ್ನ ತತ್ವಗಳು ಮಾತ್ರ ಎಂದೂ ವ್ಯತ್ಯಾಸವಾಗಲಾರವೆಂದೇ ಲೆನಿನ್‌ನ ದೃಢ ವಿಶ್ವಾಸವಿದ್ದಿತು.

ಸನಾತನ ವಿಚಾರಗಳಿಲ್ಲದ ಪ್ರಗಮನ ಶೀಲ ತರುಣರ ಸಹಾಯದಿಂದ ಲೆನಿನ್‌ನು ತನ್ನ ತತ್ವಗಳನ್ನು ಸಮಾಜದಲ್ಲಿ ಪ್ರಚಾರಗೊಳಿಸಿದನು. ನೊದಲು ತರುಣರ ಮನಬುದ್ಧಿಗಳಲ್ಲಿರುವ ಗುಲಾಮಗಿರಿಯ ವಾಸನೆಯನ್ನೇ ಸಂಪೂರ್ಣವಾಗಿ ತೆಗೆದುಹಾಕಬೇಕು, ಬೌದ್ಧಿಕ ಕ್ರಾಂತಿ ಮತ್ತು ಅನತ್ಯಾಚಾರಗಳ ಅವಶ್ಯಕತೆಯು ಲೆನಿನ್‌ಗೆ ತೋರಿದ್ದಿತು. ಈ ಸಿದ್ಧಾಂತವನ್ನು ಲೆನಿನ್‌ನೂ ಬಿಟ್ಟದ್ದಿಲ್ಲ. ಮಹಾತ್ಮಾ ಗಾಂಧಿಯವರಾದರೂ ಬಿಟ್ಟಿಲ್ಲ. ಮತ್ತು ಕಾಂಗ್ರೆಸ್ಸವಾದರೂ ಬಿಡುವದಿಲ್ಲ.

ಅನಂತರ ಕೇಸರಿಯ ಉಪಸಂಪಾದಕರಾದ ಶ್ರೀ. ಪಾ. ವಾ. ಗಾಡಗೀಳರವರು ಶ್ರೀ. ನ. ವಿ. ಗಾಡಗೀಳರವರ ವಿಚಾರವನ್ನು ವಿರೋಧಿಸುತ್ತಾ ಗಾಂಧಿ ಮತ್ತು ಲೆನಿನ್ ಇವರನ್ನು ಹೋಲಿಸುವುದು ಸಯುಕ್ತಿಕವಲ್ಲವೆಂದೂ Ten days that shook the world ಎಂಬುದು ಕಾವ್ಯವೆಂದೂ, ರಶಿಯಾ ರಾಜ್ಯಕ್ರಾಂತಿಯು ರಕ್ತಪಾತವಿಲ್ಲದೆ ನಡೆದಿಲ್ಲವೆಂದೂ ಅದುದರಿಂದ ಗಾಂಧಿ ಮತ್ತು ಲೆನಿನ್‌ರ ಮಾರ್ಗವು ಭಿನ್ನವಾಗಿವೆಯೆಂದೂ ಹೇಳಿದರು.

ಸಹಿ ಮಾಡಿರೆಂದು ಹೇಳಿದರು. ಅದೇನೆಂದು ಕೇಳಿದೆ, ಅದಕ್ಕೆ ಅದನ್ನೆಲ್ಲ ಕಟ್ಟಿಕೊಂಡು ನಿಮಗೇನು? ನಿಮ್ಮ ಮಗಳು ಬೇಕಾದರೆ ರುಜು ಹಾಕಿ ಎಂದರು. ರುಜು ಹಾಕಿದ ಮೇಲೆ ಹುಡುಗಿಯನ್ನು ಕ್ರಾನ್‌ಸ್ಟೇಬಲನ ಜತಿಗೆ ಕಳಹಿಕೊಡುತ್ತೇನೆಂದರು. ಹುಡುಗಿಯು ಬರಲಿಲ್ಲ.

ಆ ಮೇಲೆ ಹುಡುಗಿಯನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋದರೆಂದು ತಿಳಿಯಿತು. ಹುಡುಗಿಯು ವೆಂಕಟಗಿರಿ ಕೋಟೆಯಲ್ಲಿ ಶೇಕದಾರರ ಮನೆಯಲ್ಲಿರುವಳೆಂದು ತಿಳಿಯಿತು. ಸಾಯಂಕಾಲ ಮುಸಲ್ಮಾನರು 'ಬ್ರಾಹ್ಮಣರ ಹುಡುಗಿ, ಮುಸಲ್ಮಾನ ಯುವಕನಿಗೂ ನಿಕಾ ಆಗುತ್ತೆ. ಎಲ್ಲರೂ ತಾಂಬೂಲಕ್ಕೆ ಬರಬೇಕು. ಎಂದು ಬೀದಿ ಬೀದಿಗಳಲ್ಲಿ ಸಾರ ತೊಡಗಿದರು. ವಿನಾದರೂ ವೆಂಕಟಗಿರಿ ಕೋಟೆಗೆ ಹೋಗಬೇಕೆಂದು ಹಳ್ಳಕೊಳ್ಳಗಳಲ್ಲಿ ಬಿದ್ದು ಮುಸಲ್ಮಾನರ ಭಯದಿಂದ ಅಡ್ಡದಾರಿ ಹಿಡಿದು ಹೋಗುತ್ತಿರಲು ಎದುರಿಗೆ ಒಬ್ಬ ಬಂದು ಮುಸಲ್ಮಾನರೆಲ್ಲ ಡೊಣ್ಣೆಗಳೊಡನೆ ಕಾದಿರುವುದರಿಂದ ನೀವು ಹೋಗಲಾರಿರೆಂದು ಹೇಳಿ ಹಿಂದಕ್ಕೆ ನನ್ನನ್ನು ಕಳುಹಿಸಿದ.

ಇವರ ಹೇಳಿಕೆಯಿಂದ ಅಲ್ಲಿ ಮುಸಲ್ಮಾನರ ಪ್ರಾಬಲ್ಯವು ಎಷ್ಟಿದೆಯೆಂದೂ ಮುಸಲ್ಮಾನ್ ಸರಕಾರಿ ಅಧಿಕಾರಿಗಳು ಕೂಡಾ ಯಾವ ಪ್ರಕಾರ ಇಂಥ ದುಷ್ಕರ್ಮಗಳಿಗೆ ಸಹಾಯವನ್ನೀಯುತ್ತಿರುವರೆಂದೂ ಗೊತ್ತಾಗುತ್ತದೆ. ಈ ವ್ಯಾಜ್ಯವು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ. ಪರಶಿವಯ್ಯನವರ ಮುಂದೆ ನಡೆದಾಗ ತಮ್ಮ ನಿರ್ಣಯದಲ್ಲಿಯೆ ಪೋಲೀಸ್ ಇನ್ಸ್‌ಪೆಕ್ಟರರ ನಡತೆಯು (ಮುಸಲ್ಮಾನ್) ಅಕ್ಷಮ್ಯವಾಗಿದೆಯೆಂದು ಹೇಳಿದ್ದಾರೆ. ಈಗ ವ್ಯಾಜ್ಯವು ಕೋಲಾರದ ಶೆಷನ್ ಜಡ್ಜ್ ಶ್ರೀ. ಶ್ರೀನಿವಾಸ ರಾಘವಾಚಾರ್ಯರ ಮುಂದೆ ನಡೆದಿದೆ. ಇಂಥ ಹಿಂಸೆ ಬಲಾತ್ಕಾರಗಳಿಗೆ ತಡೆಯನ್ನುಂಟುಮಾಡಬೇಕಾದರೆ ಅಪರಾಧಿಗಳಿಗೆ ಕಡುತರವಾದ ಶಿಕ್ಷೆಯನ್ನು ವಿಧಿಸುವುದೇ ಯೋಗ್ಯವಾಗಿದೆ.

ಶಾ. ಶ. ೧೮೫೫ ನೆಯ ಕಾರ್ತಿಕ ಬ. ೧೧ ಸೋಮವಾರ.

ವೀರಶೈವ ಮಹಾಸಭೆಯ ಮುಂದಣ ಕಾರ್ಯ.

ವೀರಶೈವ ಮಹಾಸಭೆಯು ವೀರಶೈವ ಸಮಾಜೋನ್ನತಿಗಾಗಿ ಏರ್ಪಟ್ಟ ಮುಖ್ಯ ಸಂಸ್ಥೆಯಾಗಿದೆ. ಇದರಿಂದ ಕಾಲ ಸ್ಥಿತಿಗನುಗುಣವಾದ ಪ್ರಯತ್ನಗಳು ಈ ವರೆಗೂ ವಿಶೇಷವಾಗಿ ಜರುಗಿಲ್ಲವೆಂಬುದು ಸಕಲರಿಗೂ ತಿಳಿದ ಸಂಗತಿಯೇ ಆಗಿದೆ. ಆದ್ದರಿಂದ ಮಹಾಸಭೆಯೇ ಪ್ರಯೋಜನವಿಲ್ಲವೆಂದು ಹೇಳುವವರೂ ಅನೇಕರುಂಟಾದರು.

ಮಹಾಸಭೆಯಿಂದ ಕಾರ್ಯವಾಗಿಲ್ಲವೆಂದು ಹೇಳುವುದು ಹೇಗೆ ಸುಲಭವಾಗಿದೆಯೋ ಹಾಗೆ ಅದರಿಂದ ಕಾರ್ಯವಾಗುವಂತೆ ಮಾಡಿ ತೋರಿಸುವುದು ಸುಲಭವಲ್ಲ. ಮಹಾಸಭೆಯೆಂಬುದೇನೂ ಒಂದು ವ್ಯಕ್ತಿಯಲ್ಲ. ಸಮಾಜೋನ್ನತಿಗಾಗಿ ಪ್ರಯತ್ನಿಸುವ ವ್ಯಕ್ತಿಗಳ ಸಂಖ್ಯಾಬಲ ಮತ್ತು ಸಂಘಟನೆಗಳ ಮೇಲೆಯೇ ಅದರ ಅಸ್ತಿತ್ವವುಂಟು. ಆದಕಾರಣ ಮಹಾಸಭೆಯಿಂದ ಕಾರ್ಯವಾಗಿಲ್ಲವೆಂದು ಹೇಳುವುದೆಂದರೆ ಸಮಾಜೋನ್ನತಿಗಾಗಿ ಪ್ರಯತ್ನಿಸುವವರಿಲ್ಲವೆಂದು ಹೇಳಿದಂತೆಯೇ ಸರಿ.

ರಾಷ್ಟ್ರವೀರ ಲಾಲಾ ಲಜಪತರಾಯರು ಹಿಂದುಗಳಲ್ಲಿಯ **ಉದಾಸೀನ ವೃತ್ತಿಯೇ** ಹಿಂದು ಜನಾಂಗದ ಶೋಚನೀಯ ಸ್ಥಿತಿಗೆ ಕಾರಣವಾಗುತ್ತಿದೆಯೆಂದು ಹೇಳುತ್ತಿದ್ದಂತೆ ವೀರಶೈವರಲ್ಲಿಯ ಸ್ವಸಮಾಜದ ವಿಷಯದಲ್ಲಿರುವ ಔದಾಸೀನ್ಯವೇ ಮಹಾಸಭೆಯು ನಾಮ **ಮಾತ್ರ**ದಲ್ಲುಳಿದಿರುವುದಕ್ಕೆ ಮುಖ್ಯ ಕಾರಣವು.

ಸಮಾಜದ ಸುದ್ದಿ ನಮಗೇಕೆ? ಅದಾತಾಗಲಿ. ಅದನ್ನು ಕಟ್ಟಿಕೊಂಡು ನಾವು ಮಾಡುವುದೇನು? ನಮ್ಮ ಮನೆಮಠಗಳ ಕೆಲಸವೇ ನಮಗೆ ತೀರದಷ್ಟಿವೆ ಎಂಬ ಸ್ವಾರ್ಥದ ಮತ್ತು ಸಮಾಜದ ವಿಷಯದಲ್ಲಿ ಔದಾಸೀನ್ಯ, ಸ್ವಾಭಿಮಾನ ಶೂನ್ಯತೆಗಳಿಂದ ಕೂಡಿದ ಹೇಡಿ ತನದ ವರ್ತನವೇ ಮಹಾಸಭೆಯು ಕಾರ್ಯದಕ್ಷ ಸಂಸ್ಥೆಯಾಗದಿರುವುದಕ್ಕೆ ಕಾರಣವಾಗಿದೆಯೆಂದು ತಿಳಿಯಬೇಕು.

ಈಗಲಾದರೂ ನಾವು ಎಚ್ಚತ್ತು ನಮ್ಮ ಔದಾಸೀನ್ಯವನ್ನು ತೆಗೆದುಹಾಕಿ ಮಹಾಸಭೆಯ ಸಂಸ್ಥೆಯಲ್ಲಿ ಸೇರಿ ಕೆಲಸಮಾಡಲು ತತ್ಪರರಾಗಬೇಕು. ಕಳೆದ ತಿಂಗಳು ಶಿವಮೊಗ್ಗೆಯ ತಾರೀಖಿನಲ್ಲಿ ಸೇರಿದ ಮಧ್ಯವರ್ತಿ ಮಂಡಲದವರು ಗೊತ್ತುಪಡಿಸಿದಂತೆ ಆಯಾಯ ಪ್ರಾಂತಗಳ ವೀರಶೈವ ಸಮಾಜಸೇವಕರು ಈ ಸಮಯದಲ್ಲಿ ಮುಂದೆ ಬಂದು ಪ್ರಾಂತಿಕ ಮಂಡಲಗಳನ್ನು ಏರ್ಪಡಿಸಬೇಕು. ಮಹಾಸಭೆಯಿಂದ ಕೆಲಸವಾಗುವದಿಲ್ಲವೆಂದು ಹೇಳುವವರೂ ಮಹಾಸಭೆಯು ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಸೂಚಿಸುವವರೂ ಈಗ ಮುಂದೆ ಬಂದು ತಮ್ಮ ಕರ್ತವ್ಯವನ್ನು ನೆರವೇರಿಸಬೇಕು.

ಪ್ರಾಂತಿಕ ಮಂಡಲಗಳೇ ಏರ್ಪಡದಿದ್ದರೆ ಮಹಾಸಭೆಯ ನಿರ್ಣಯಗಳನ್ನು ಪ್ರಸಾರಗೊಳಿಸುವವರಾರು? ಅವುಗಳನ್ನು ಆಚರಿಸಲು ಜನರು ಮುಂದು ಬರುವಂತೆ ಮಾರ್ಗದರ್ಶಿಗಳಾಗುವವರಾರು? ಮಹಾಸಭೆಯ ನಿರ್ಣಯವು ಹಳ್ಳಿಯ ಗುಡಿಸಲಿನ ವರೆಗೆ ಹೋಗಿ ಮುಟ್ಟುವ ಒಗೆ ಹೇಗೆ? ಆದಕಾರಣ ಪ್ರಾಂತಿಕ ಮತ್ತು ಜಿಲ್ಲಾ ಮಂಡಲಗಳು ಮೊದಲು ಏರ್ಪಡಬೇಕು.

ವಾರ್ಷಿಕ ಚಂದಾ ಒಂದು ರೂಪಾಯಿಯನ್ನು ಕೊಡುವವರು ಮಹಾಸಭೆಯ ಸಾಮಾನ್ಯ ಸದಸ್ಯರಾಗುತ್ತಾರೆ. ಇವರೇ ಪ್ರಾಂತಿಕ ಮಂಡಲವನ್ನುಂಟುಮಾಡಲಿಕ್ಕೂ ಮಹಾಸಭೆಗೆ ಪ್ರತಿನಿಧಿಗಳನ್ನಾರಿಸಲಿಕ್ಕೂ ಸಮರ್ಥರಾಗುತ್ತಾರೆ. ಮಹಾ ಸಭೆಯು ಕಾರ್ಯತತ್ಪರರಾದ ಜನ ಸಾಮಾನ್ಯರ ಆಧೀನವಾಗಲು ಈ ಅನುಕೂಲವು ಇದ್ದರು ಕೂಡಾ ಸಮಾಜ ಕಾರ್ಯಾಪೇಕ್ಷೆಗಳು ಮುಂದೆ ಬಂದು ಪ್ರಾಂತಿಕ ಮತ್ತು ಜಿಲ್ಲಾ ಮಂಡಲಗಳನ್ನೇರ್ಪಡಿಸಿಕೊಂಡು ತಮ್ಮ ತಮ್ಮ ಪಲ್ಲಿಯ ಸಾಮಾಜಿಕ ಕೊರತೆಗಳನ್ನು ನಿವಾರಣೆಮಾಡಿಕೊಳ್ಳಲು ಸಿದ್ಧರಾಗಬಾರದೇ?

ಈ ಸಾಮಾನ್ಯ ಸದಸ್ಯರು ಕೊಡುವ ಒಂದು ರೂಪಾಯಿ ಚಂದಾ ಹಣದಲ್ಲಿ ೧೫ ಆಣೆಗಳು ಅವರ ಆಧೀನದಲ್ಲಿಯೇ ಉಳಿವುದು ಅವರು ತಮ್ಮ ಭಾಗದಲ್ಲಿಯೇ ಬೇಕಾದ ಸಮಾಜ ಕಾರ್ಯ ಮಾಡಲು ಅಧಿಕಾರವುಳ್ಳವರು ಕೂಡಾ ಆಗಿದ್ದಾರೆ. ಆದುದರಿಂದ ಚಂದಾ ಹಣವು ಕೂಡಾ ಎಲ್ಲಿಯೋ ಹೋಗಿಬಿಡುತ್ತದೆಂದು ಕೂಡಾ ತಿಳಿಯುವ ಕಾರಣವಿಲ್ಲ.

ಇದೇ ಡಿಶಂಬರ್ ತಿಂಗಳ ಕೊನೆಯೊಳಗಾಗಿ ಎಲ್ಲ ಪ್ರಾಂತ ಮತ್ತು ಜಿಲ್ಲಾ ಮಂಡಲಗಳು ಏರ್ಪಡುವಂತೆ ಮಧ್ಯವರ್ತಿ ಮಂಡಲದ ಸದಸ್ಯರು ತಮ್ಮತಮ್ಮ ಪ್ರಾಂತ ಅಥವಾ ಜಿಲ್ಲೆಗಳಲ್ಲಿ ತುಂಬಾ ಪ್ರಯತ್ನಿಸಿ ೩೫ ಸದಸ್ಯರನ್ನಾದರೂ ಮಾಡಬೇಕೆಂಬ ನಿರ್ಣಯವನ್ನು ತಪ್ಪದೇ ಆಚರಣೆಯಲ್ಲಿ ತರುವರೆಂದು ನಾವು ತುಂಬಾ ನಂಬಿದ್ದೇವೆ. ಇದೇ ಮಹಾಸಭೆಯ ಮುಂದಣ ಪ್ರಥಮ ಕಾರ್ಯವಾಗಿದೆ.

ಸ್ಫುಟ ಸೂಚನೆ.

ಅಫಗಾಣಿಸ್ಥಾನಿನಲ್ಲಿ ಅತ್ಯಾಚಾರ!

ಅಫಗಾಣಿ ಸ್ಥಾನದ ಅಮೀರ ನಾದಿರಶಹರವರನ್ನು ಕೊಲೆ ಮಾಡಿದ ವಾರ್ತೆಯು ಎಲ್ಲ ಕಡೆಗೂ ಖೇದವನ್ನುಂಟುಮಾಡಿದೆ. ಇವರು ಅಫಗಾಣಿಸ್ಥಾನವನ್ನು ಸುಧಾರಿಸುವ ಎಲ್ಲ ವಿಹಿತ ಏರ್ಪಾಡುಗಳನ್ನೂ ಪ್ರಾರಂಭಿಸಿದ್ದರು. ಅಮಾನುಲ್ಲರಂತೆ ಭಾವನಾ ಪ್ರಧಾನರೂ ಆಗಿರಲಿಲ್ಲ. ಬಚ್ಚಾ ಇ ಸಾಕುನಂತೆ ಕರ್ಮಠರೂ ಆಗಿರಲಿಲ್ಲ. ಇವರ ಪದ್ಧತಿಯಿಂದ ಅಫಗಾಣಿಸ್ಥಾನವು ಸುಧಾರಿಸಿದ ರಾಷ್ಟ್ರವಾಗಿ ಪರಿಣಮಿಸುತ್ತಿದ್ದಿತು. ಅಂಥ ಸುದೈವವು ಇದಕ್ಕೆ ತಪ್ಪಿದುದು ದುಃಖದ ಸಂಗತಿಯೇ ಸರಿ.

ಇನ್ನು ಮೇಲೆ ಮತ್ತೆ ಕೊಲೆಸುಲಿಗೆಗಳಾಗಬಹುದೆಂದೂ ಅಮಾನುಲ್ಲಾರವರು ಪುನಃ ಬರಬಹುದೆಂದೂ ಅನೇಕರು ತರ್ಕಿಸುತ್ತಾರೆ. ಖೈಬರ ಗಟ್ಟಿದ ಮಾರ್ಗವನ್ನು ಈಗ ತಡೆಮಾಡಿದ್ದಾರೆ. ನಾದಿರಶಹರನ್ನು ಒಬ್ಬ ವಿದ್ಯಾರ್ಥಿ ಮೂರುಸಾರೆ ಗುಂಡುಹಾಕಿ ಕೊನೆಗೆ ಬರ್ಚಿಯಿಂದ ಇರಿದುಕೊಂದನೆಂದು ತಿಳಿದಿದೆ.

ಶರಣರು ನೊಂದರೆ ಬೆಂದೆನಯ್ಯ.

ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖ ವೆನ್ನ ಸುಖ | ಅವರ ದುಃಖವೆನ್ನ ದುಃಖ | ಕೂಡಲ ಸಂಗನ ಶರಣರ ಮನನೊಂದರೆ ಬೆಂದೆನಯ್ಯ.

ವೀರಶೈವ ಮತದಲ್ಲಿ ನಡೆನುಡಿಗಳಿಗೆ ಬಹು ಪ್ರಾಮುಖ್ಯತೆ ಇದೆ. ನಡೆದಂತೆಯೇ ನುಡಿಯುವದೂ, ಹಾಗೆಯೇ ನುಡಿದಂತೆಯೇ ನಡೆಯುವದೂ ಮನುಷ್ಯನ ಮನಃಶುದ್ಧಿಗೆ ಕಾರಣಗಳಾಗಿವೆ. ಮನವಂಚನೆಯಿಂದ ಅವ ಕೃತ್ಯವನ್ನು ಮಾಡಿದರೆಯೂ ನಿಷ್ಫಲ. ಮನವಂಚನೆಯಿಂದ ಅವ ವಚನವನ್ನು ನುಡಿದರೆಯೂ ನಿಷ್ಫಲ. ಮನವಂಚಿತವಾದರೆ ಭಾವ ಶುದ್ಧವಾಗದು. ಭಾವ ಶುದ್ಧಿಗಾಗಿಯೇ ನಡೆನುಡಿಗಳ ಏಕರೂಪತೆಯು ಬೇಕು. ಆದುದರಿಂದ ನಡೆಯಲು ಆರಿಯದೆ ಮತ್ತು ನುಡಿಯಲು ಅರಿಯದೆ ಲಿಂಗವಪೂಜಿಸಿ ಫಲ ವೇನು? ಯಾಕೆ? ಭಾವ ಶುದ್ಧಿಯಿಂದ ಮಾಡಿದರೇನೇ ಲಿಂಗಪೂಜೆ ಯಾಗುವದು. ಇಲ್ಲದಿದ್ದರೆ ಇಲ್ಲ. ಆ ಭಾವಶುದ್ಧಿಯಾಗಬೇಕಾದರೆ ನಡೆನುಡಿಗಳನ್ನು ಅರಿತಿರಬೇಕು. ಅವುಗಳ ಅನ್ಯೋನ್ಯ ಸಂಬಂಧ ಶಕ್ತಿಯನ್ನು ಕಂಡಿರಬೇಕು.

ಇನ್ನು ಭಾವಶುದ್ಧಿಯಾಗಬೇಕಾದರೆ ಅರ್ಥಾತ್ ನಿಜವಾಗಿ ಲಿಂಗಪೂಜೆಯಾಗಬೇಕಾದರೆ ನಮ್ಮ ನಡೆನುಡಿಗಳು ಹೇಗಿರಬೇಕು? ಲಿಂಗಮುಖ ಜಂಗಮವಾಗಿರುವನಾಗಿ ಜಂಗಮ ತೃಪ್ತಿ ಪಡಿಸದೆ ಲಿಂಗಪೂಜೆಯಿಂದೇನು ಫಲ? ಜಂಗಮ ತೃಪ್ತಿಯೇ ಲಿಂಗ ಪೂಜೆಯ ಪರಿಣಾಮವಾಗಿರುವದು. ಜಂಗಮ ದರ್ಶನ ಸಕಲ ಪ್ರಾಣಿಗಳಗನ್ವಯಿಸುತ್ತದೆ. ಅವುಗಳನ್ನೆಲ್ಲ ತೃಪ್ತಿಪಡಿಸಬೇಕಾದರೆ ಅವುಗಳ ಸುಖವೇ ನಮ್ಮ ಸುಖ ಅವುಗಳ ದುಃಖವೇ ನಮ್ಮ ದುಃಖ ಎಂಬುದನ್ನು ನಾವು ತಿಳಿಯಬೇಕು.

ಈ ಜಂಗಮ ತೃಪ್ತಿಯ ರೀತಿಯನ್ನರಿಯುವುದೇ ಲಿಂಗಪೂಜೆಯ ಧ್ಯೇಯವು. ನಡೆನುಡಿಗಳ ಸಾಮರಸ್ಯದ ಗುರಿಯು. ಆದರೆ ನಾವಾದರೋ ಜೀವವುಳ್ಳ ಪ್ರಾಣಿಗಳನ್ನು ಕಲ್ಲುಮಣ್ಣುಗಳಿಗೆ ಸಮಾನವಾಗಿ ತಿಳಿದು ಕೇವಲ ಕಲ್ಲುಮಣ್ಣುಗಳಾದಂಥವನ್ನೇ ಜೀವವುಳ್ಳ ಪ್ರಾಣಿಗಳಂತೆ ಉಪಚರಿಸುವೆವಲ್ಲವೇ? ಕಲ್ಲು ನಾಗರ ಕಂಡರೆ ಹಾಲನೆರೆಯೆಂಬುವರು ದಿಟ ನಾಗರ ಕಂಡರೆ ಕೊಲ್ಲೆಂಬುವರೇ ಅಧಿಕವಲ್ಲವೇ?

ಆದುದರಿಂದ ಯಾವುದೊಂದು ಧರ್ಮದಲ್ಲಿ ಜೈತನ್ಯವಿದೆಯೆಂದು ತಿಳಿಯಬೇಕಾದರೆ ಆ ಧರ್ಮದವರಿಗೆ ಹಿಂಸೆಯಾದಾಗ್ಗೆ ಆ ಹಿಂಸೆಯ ಆಘಾತವು ಆ ಧರ್ಮದ ಪ್ರತಿಯೊಂದು ವ್ಯಕ್ತಿಗೂ ತಗಲಬೇಕು. ಆವನೊಬ್ಬ ಶರಣನ ಮನ ನೊಂದರೆಯೂ ನಮ್ಮ ಮನವೂ ಬೆಂದುಹೋಗಬೇಕು. ನಮ್ಮ ಮನ ನೋವನ್ನು ನಾವು ಯಾವ ಪ್ರಕಾರವಾಗಿ ನಿವಾರಣೆ ಮಾಡಿಕೊಳ್ಳಲು ಪ್ರಯತ್ನಿಸುವೆವೋ ಅದೇ ಪ್ರಕಾರವಾಗಿ ಅವರ ಮನಶ್ಶಾಂತಿಗಾಗಿ ಪ್ರಯತ್ನಿಸಬೇಕು. ಆಂದರೇನೇ ನಮ್ಮ ಮೇಲೆ ಪರಮಾತ್ಮನ ಕರುಣೆಯಾಗುವುದು. ಲಿಂಗಪೂಜೆಯ ಸಾರ್ಥಕ್ಯವಾಗುವುದು ಮತ್ತು ನಡೆನುಡಿಗಳ ರೀತಿಯನ್ನು ತಿಳಿದಂತಾಗುವುದು. (ಪಾಟೀಲ ಲಿಂಗನಗೌಡ)

ಶ್ರೀಮತಿ ಸರೋಜಿನಿದೇವಿ ನಾಯಿಡುರವರ ದುಃಖೋದ್ಗಾರ.

ಶ್ರೀ. ಸರೋಜಿನಿ ದೇವಿ ನಾಯಿಡುರವರು ಶ್ರೀ. ವಿಠ್ಠಲಭಾಯಿ ಪಟೇಲರವರ ಅಂತ್ಯ ಸಂಸ್ಕಾರದ ದಿವಸ ಚಿತೆಯ ಹತ್ತಿರ ಬಂದು ಚಿತೆಗೆ ಭಕ್ತಿ ಪೂರ್ವಕ ವಂದಿಸಿ ಗದ್ಗದ ಕಂಠದಿಂದ ಹಿಂದೀ ಯಲ್ಲಿ ಈ ಪ್ರಕಾರ ಭಾಷಣ ಮಾಡಿದರು—

"ಕೇವಲ ನನ್ನ ಕರ್ತವ್ಯವೆಂದೇ ನಾನು ಇಲ್ಲಿ ಒಂದೆರಡು ಮಾತುಗಳನ್ನಾಡಬೇಕಾಗಿದೆ. ಭಾರತೀಯರ ಗೌರವದ ಧ್ವಜವು ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನಮ್ಮೆದುರಿನಲ್ಲಿಯೇ ಇಳಿದಂತಾಗುವುದು. ನಮ್ಮೆಲ್ಲರ ಅಂತಃಕರಣದಲ್ಲಿ ಅವರ ಆಧಿಪತ್ಯವೆಷ್ಟಿದೆಯೆಂಬುದು ಬೆಳಗಿನಿಂದಲೂ ಸರ್ವರಿಗೂ ಗೊತ್ತಾಗಿದೆ. ಅವರು ನಮ್ಮೆಲ್ಲರ ಏಕಮೇವ ಮುಂದಾಳುಗಳೂ ಶೂರ ಸರದಾರರೂ ಆಗಿದ್ದರು. ಇಂಥವರು ಪರದೇಶದಲ್ಲಿ ತಮ್ಮ ಜಡದೇಹವನ್ನು ಬಿಡುವುದು ನಮ್ಮೆಲ್ಲರ ದುರ್ದೈವವೇ ಸರಿ. ಆದರೂ ಅಂತ್ಯ ವಿಧಿಯನ್ನು ಇಲ್ಲಿ ಜರುಗಿಸಲು ಸಮಯ ದೊರೆತುದು ನಮ್ಮೆಲ್ಲರ ಭಾಗ್ಯವೆಂದೇ ತಿಳಿಯಬೇಕು. ಅವರ ಜಡದೇಹದಲ್ಲಿರುವ ಎಲುಬು ಮಾಂಸವು ಇನ್ನು ಅಲ್ಪಾವಧಿಯಲ್ಲಿಯೇ ಬೂದಿಯಾಗಿ ಬಿಡುವುದು. ನಮ್ಮ ಗಳೆಲ್ಲರ ನಿಜವಾದ ವಿಠ್ಠಲಭಾಯಿಯು ಆ ಬೂದಿಯಲ್ಲಿರದೆ ಪ್ರತಿಯೊಬ್ಬನ ಅಂತಃಕರಣದಲ್ಲಿದ್ದಾನೆ. ಅವರು ತಮ್ಮ ಪರಾಕ್ರಮದ ಕಾರ್ಯಗಳಿಂದ ಅಮರರಾಗಿದ್ದಾರೆ. ವಿಠ್ಠಲಭಾಯಿಯವರು ಸ್ವಾತಂತ್ರ್ಯ ಯುದ್ಧದಲ್ಲಿಯೂ ಆ ಯುದ್ಧದಲ್ಲಿ ಭಾಗವಹಿಸುವ ಪ್ರತಿಯೊಂದು ವ್ಯಕ್ತಿಯ ಹೃದಯದಲ್ಲಿಯೂ ವಾಸವಾಗಿದ್ದಾರೆ. ಈ ಬೆಂಕಿಯು ಅವರ ನಿರ್ಜೀವ ಶರೀರವನ್ನು ಬೂದಿಯನ್ನಾಗಿ ಮಾಡಿದರೂ ಅವರು ನಮ್ಮೆಲ್ಲರ ಅಂತಃಕರಣದಲ್ಲುಂಟುಮಾಡಿದ ಅಗ್ನಿಯು ಮಾತ್ರ ಅಖಂಡವಾಗಿ ಜೀವಿಸಬಲ್ಲದು. ಮತ್ತು ಅದು ಚಿರಕಾಲ ಬಾಳಲಿ. ಈಗ ನನ್ನ ಹೃದಯವು ಯಾವ ಪ್ರಕಾರ ದುಃಖದಿಂದ ತುಂಬಿ ಬಂದಿದೆಯೆಂದು ನಾನೇನೂ ಬೇರೆ ಹೇಳಬೇಕಾಗಿಲ್ಲ. ಕೊನೆಗೆ, ತಮ್ಮ ಅಸ್ವಸ್ಥತೆಯನ್ನು ಲೆಕ್ಕಿಸದೆ ಶ್ರೀ. ವಿಠ್ಠಲ ಭಾಯಿಯವರ ಆರೈಕೆಯನ್ನು ಮಾಡಿದ ಶ್ರೀ. ಸುಭಾಷ ಚಂದ್ರ ಬೋಸರಿಗೂ ಮತ್ತು ಶವವನ್ನು ಅತ್ಯಂತ ಲಕ್ಷ್ಯ ಪೂರ್ವಕ ತೆಗೆದು ಕೊಂಡು ಬಂದ ಶ್ರೀ. ಗೋವರ್ಧನಭಾಯಿಯವರಿಗೂ ನಾನು ಸರ್ವರ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ."

ಮತ್ತೆ ಕನ್ಯಾಪಹಾರ!

ಮೈಸೂರ ಪ್ರಾಂತದಲ್ಲಿಯ ಡೆಂಕಣಕೋಟೆಯ ಡಿ, ಎಂ. ಬ್ಯಾದರಾಯ ಶೆಟ್ಟಿಗ ಹೆಂಡತಿಯಾದ ೧೬ ವರುಷದ ಧನಮ್ಮ ಎಂಬುವವಳನ್ನು ಮಹಮ್ಮದ ಇಶಾಕನೆಂಬುವವನೂ, ಮತ್ತು ಅದೇ ಊರಿನ ಬ್ಯಾದರಾಯ ನಾಯಿಡು ಇವರ ೧೫ ವರುಷದ ಕನ್ಯೆ ಮುನಿಯಮ್ಮ ಎಂಬುವಳನ್ನು ಅದೇ ಊರಿನ ಬುರಂಗದೀನ ಎಂಬುವವನೂ ಎತ್ತಿಕೊಂಡು ಹೋಗಿದ್ದರೆಂದೂ ಈಗ ಈ ವಿಷಯ ಪೊಲೀಸರಿಗೆ ತಿಳಿದಿದೆಯೆಂದೂ ಇದೇ ತಿಂಗಳು ೧೭ ನೆಯ ತಾರೀಖಿನ ದಿವಸ ವಿಚಾರಣೆ ನಡೆಯುವದೆಂದೂ ತಿಳಿಯುತ್ತದೆ.

ವಿ ವಿ ಧ ವಿ ಷ ಯ .

ವಿದೇಶಗಳಲ್ಲಿಯ ಹಿಂದುಗಳು.

ಪರದೇಶದಲ್ಲಿ ಈ ಪ್ರಕಾರ ಹಿಂದೂ ಜನರು ಇದ್ದಾರೆ ಬ್ರಿಟಿಶ ಸಾಮ್ರಾಜ್ಯ (ಹಿಂದುಸ್ಥಾನವ ಹೊರಗೆ) ೨೩ ಲಕ್ಷ, ಸಿಲೋನ ೬೭೮೧೭, ಮಲಾಯಾ ೬೫೪೧೯, ಮಾರಿಶಸ್ ೨೬೬೭೭, ದಕ್ಷಿಣ ಆಫ್ರಿಕಾ ೧೬೫೫೦, ತ್ರಿನಿದಾದ ೧೫೮೬೬, ಬ್ರಿ. ಗ್ವಾಯನಾ ೧೫೦೫೪, ಫಿಜಿ ೭೫೧೧೭, ಕೆನಿಯಾ ೨೬೭೫೯, ಟಾಂಗಾನಿಕಾ ೨೫೮೨೨, ಜಮೇಕಾ ೧೭೫೯, ಯೂಗಾಂಡಾ ೧೧೬೧೩, ಇಂಗ್ಲಂಡ ವೇಲ್ಸ ೭೧೫೮, ಬ್ರಿಟಿಶ್ ಆಯಿಲ್ಸ ೨೧೧೫ ಹಾಂಗಕಾಂಗ ೪೭೪೫, ಡಚ್ ಈಸ್ಟ ಇಂಡೀಜ ೭೫೦೦, ಡಚ್ಚ ಗ್ವಾಯನಾ ೩೫೦೦, ಮಾದಾಗಾಸ್ಕರ ೭೫೦, ಪೋರ್ಚುಗೀಜ ಸ್ಟೇವ್ ಆಫ್ರಿಕಾ ೫೦೦೦ ಯುನಾಯಿಟೆಡ್ ಸ್ಟೇಟ್ಸ ೫೦೦೦, ಇರಾಣ ೩೯೦೦, ಇರಾಕ ೨೩೬೨ ಬೇರೆ ಕಡೆಯಲ್ಲಿ ೧೫೪೭೪.

ದೂರದೃಷ್ಟಿ.

ರೇಡಿಯೋ ಯಂತ್ರ ಸಹಾಯದಿಂದ ದೂರಶ್ರವಣವು ಈಗೀಗ ಪ್ರಚಾರದಲ್ಲಿ ಬಂದಿದೆಯಷ್ಟೆ, ಆದರೆ ಈಗ ರೇಡಿಯೋ ದ್ವಾರದಿಂದ ದೂರದೃಷ್ಟಿಯೂ ಸಹ ಪ್ರಾಪ್ತವಾಗಿದೆ. ಇದರಿಂದ ಒಂದು ದೇಶದಲ್ಲಿ ನಡೆವ ಕ್ರಿಕೆಟ್ ಆಟದ ಛಾಯಾಚಿತ್ರವನ್ನು ಮತ್ತೊಂದು ದೇಶದವರು ನೋಡಬಹುದು. ಈ ರೆಡಿಯೋ ಛಾಯಾ- ಚಿತ್ರಗಳಲ್ಲಿಯೇ ಕೆಳಗೆ ಅಕ್ಷರಗಳ ಮತ್ತು ಮುದ್ರೆಗಳ ಚಿತ್ರವನ್ನೂ ಸಹ ನೋಡಲಿಕ್ಕೆ ಶಕ್ಯವಿದೆ. ದೂರದೃಷ್ಟಿಯಿಂದ ಭೂಮಂಡಲವನ್ನು ಸಹ ಇಲ್ಲಿಯೇ ನೋಡಬಹುದಲ್ಲವೇ?

ನಾಗ ಮೂಲಾ.

ಢಾಕಾ ಜಿಲ್ಲೆಯ ಸಟಗ್ರಾಮ ಎಂಬಲ್ಲಿ ಶ್ರೀ. ಎಂತಕುಮಾರ ಸ್ವಾಮಿಕ ಎಂಬ ಒಬ್ಬ ಬಂಗಾಲಿ ಗೃಹಸ್ಥನ ಮಗಳು ಒಂದು ನೀರಿನ ಕಿತ್ತಿಯನ್ನು ಹಿಡಿದುಕೊಂಡು ತನ್ನ ಕೋಣೆಯ ಹೊರಗೆ ಬರುತ್ತಿರುವಾಗ ಬಾಗಿಲ ಚೌಕಟ್ಟಿನ ಮೇಲಿಂದ ಒಂದು ದೊಡ್ಡ ನಾಗರ ಹಾವು ಅವಳ ಭುಜಗಳ ಮೇಲೆ ಬಿತ್ತು. ಕೂಡಲೆ ಅವಳ ಕುತ್ತಿಗೆಯನ್ನು ಸುತ್ತಿಕೊಂಡಿತು. ಆ ಸಾಹಸದಿಂದ ಆ ಹುಡಿಗೆಯು ಮೂರ್ಛೆತಳ್ಳಾದಳು. ಕೆಲವು ನಿಮಿಷಗಳವರೆಗೆ ಅವಳ ತಲೆಯ ಮೇಲೆ ತನ್ನ ಹೆಡೆಯನ್ನು ಪಸರಿಸಿ ಆ ಸರ್ಪವು ಆ ಮೇಲೆ ಬಿಟ್ಟು ಸಮೀಪದಲ್ಲಿರುವ ಒಂದು ಹೋರನ್ನು ಹೊಕ್ಕಿತು. ಆ ಹುಡಿಗೆ ಕೆಲವು ವೇಳೆಯ ನಂತರ ಸ್ಮೃತಿ ಬಂದಿತು. ಸರ್ಪವು ಅವಳನ್ನು ಕಚ್ಚಿಲ್ಲವೆಂಬುದನ್ನು ಕಂಡು ಜನರೆಲ್ಲ ಆಶ್ಚರ್ಯಚಕಿತರಾಗಿದ್ದಾರೆ.

ಮಲಗಿದಾಗ, ಶಿಶುವಿರುವಾಗ ಇಲ್ಲವೆ ಮೂರ್ಛೆ ಹೋದಾಗ ನಾಗರ ಹಾವು ಕಚ್ಚದೆ ತನ್ನ ಹಡೆಯನ್ನು ತಲೆಯಮೇಲೆ ಎಬ್ಬಿಸಿ ನಿಡಿದರೆ ಆ ಮನುಷ್ಯನು ಇಲ್ಲವೆ ಸ್ತ್ರೀಯು ಮಹಿಮಾಶಾಲಿಗಳಾಗುವರೆಂದು ನಾವು ತಿಳಿಯುವದಿಲ್ಲವೆ?

ಸ್ತುತ್ಯ ಸಾಹಸ.

ನಮ್ಮಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚು. ಉಳಿದವರ ಸಂಖ್ಯೆ ಕಡಿಮೆ. ಆದರೆ ಪಂಜಾಬ ಪ್ರಾಂತದಲ್ಲಿ ಹಿಂದುಗಳು ಅಲ್ಪ ಸಂಖ್ಯಾಕರಾಗಿದ್ದಾರೆ. ಆದರೂ ಅವರು ತಮ್ಮ ಮೇಲೆ ಆಗಿಂದಾಗ್ಗೆ ಒದಗುವ ನೀಚರ ಆಕ್ರಮಣಗಳನ್ನು ತಡೆದುಕೊಳ್ಳುವಂಥ ದಿಟ್ಟರೂ ಗಟ್ಟಿಗರೂ ಇರುತ್ತಾರೆ. ಪುರುಷರೇ ಏಕೆ? ಸ್ತ್ರೀಯರೂ ಸಹ ಮಹಾ ಧೈರ್ಯಶಾಲಿಗಳಾಗಿರುವರು.

ಲಾಹೋರದ ಹತ್ತಿರುವ ಅಲಮಂಡಿ ಎಂಬ ಗ್ರಾಮದಲ್ಲಿ ಒಂದು ಸಂದಿಯೊಳಗಿಂದ ರಾತ್ರಿ ೮ ಘಂಟೆಯ ಸಮಯಕ್ಕೆ ಒಬ್ಬ ಹಿಂದೂ ಸ್ತ್ರೀಯು ಹೋಗುತ್ತಿರಲು ಅವಳ ಎದುರಿಗೆ ಒಬ್ಬ ಟೊಣಪನು ಬಂದನು. ಸರಿದುಹೋಗಬೇಕೆಂದು ಅವಳು ಒಂದು ಕಡೆಗೆ ಸರಿಯಲು ಅವನೂ ಅದೇ ಕಡೆಗೆ ಸರಿದನು. ಇತ್ತ ಕಡೆ ಸರಿದರೂ ಹಾದಿ ಬಿಡಲಿಲ್ಲ. ಕಡೆಗೆ ಅವನು ಮುಂದೆ ಬಂದು ಹಿಡಿಯಲು ಪ್ರಯತ್ನಿಸಿದನು. ಅಷ್ಟರಲ್ಲಿ ಅವಳು ತನ್ನ ಕಾಲೊಳಗಿನ ಜೋಡು ತೆಗೆದು ಜೋರಿನಿಂದ ಅವನ ಮೋರೆಗೆ ಹೊಡೆದಳು. ಹಾಗೇ ನಟಸಟ ಹೊಡೆಯುತ್ತ ಅವನನ್ನು ಬೈಲಿಗೆ ತಂದು ನೆರೆಯವರೆಲ್ಲ ನೆರೆದು ಅವನನ್ನು ಬಿಡಿಸಿಕೊಂಡರು.

ಇಂಥ ಪ್ರಸಂಗಗಳು ಅಲ್ಲಿ ಪ್ರತಿ ದಿವಸ ಜರುಗುತ್ತಿವೆ. ಆದರೆ ನಮ್ಮ ದಕ್ಷಿಣ ಸ್ತ್ರೀಯರಲ್ಲದೆ ಪುರುಷರು ಸಹ ಧೈರ್ಯಶಾಲಿಗಳಾಗಬೇಡವೆ?

ಉಪಯುಕ್ತ ಶೋಧ.

ಜರ್ಮನಿಯಲ್ಲಿ ಮನೆಕಟ್ಟುವ ಕಟ್ಟಿಗೆ ಇಲ್ಲವೆ ತಾರಾ ಯಂತ್ರಗಳು ಮೊದಲಾದವುಗಳಿಗೆ ಹುಳ ಹತ್ತದಂತೆ ಮಾಡುವ ಒಂದು ಔಷಧವನ್ನು ತಯಾರಿಸಿದ್ದಾರೆ. ಆದು ಎರಡು ಔಷಧಗಳ ಮಿಶ್ರಣವಾಗಿರುತ್ತದೆ. ಒಂದು ಸಂಘಟೀಕರಣ ಮಾಡುವ ದ್ರವ್ಯವುಳ್ಳದ್ದು (Binding agent) ಮತ್ತೊಂದು ಸಂರಕ್ಷಕ ದ್ರವ್ಯವುಳ್ಳದ್ದು (Protective agent) ಈ ಮಿಶ್ರಣವನ್ನು ಕಟ್ಟಿಗೆಗೆ ಲೇಪಿಸಬೇಕು. ಈ ಔಷಧವೆಲ್ಲ ಕಟ್ಟಿಗೆಯಲ್ಲಿ ಇಂಗಬೇಕಾಗಿರುವುದರಿಂದ ಆ ಕಟ್ಟಿಗೆಯನ್ನು ಮುಚ್ಚಿಡಬೇಕು. ಈಗೀಗ ಈ ಔಷಧವನ್ನು ಜೀವಂತ ವೃಕ್ಷಗಳಿಗೂ ಉಪಯೋಗಿಸುತ್ತಾರೆ. ಅದರಿಂದ ಅವಕ್ಕೆ ಮುಂದೆ ಎಂದೂ ಹುಳ ಹತ್ತುವ ಸಂಭವವೇ ಇಲ್ಲ. ಆದರೆ ಆ ವೃಕ್ಷದ ಬೇರುಗಳಿಗೆ ಅಪಾಯವಾಗ ಬಾರದೆಂದು ಸ್ವಲ್ಪ ಅಂತರದ ಮೇಲೆ ಔಷಧ ಸವರುತ್ತಾರೆ.

ದೊಡ್ಡದೊಡ್ಡ ಕಟ್ಟಡಗಳ ಕಟ್ಟಿಗೆಗಳಿಗೆ ಹುಳಹತ್ತುವದಾದ್ದರಿಂದ ಆಗಾಗ್ಗೆ ಆ ಕಟ್ಟಡವನ್ನು ಬಿಚ್ಚಬೇಕಾಗುತ್ತದೆ. ಆದುದರಿಂದ ಈ ಔಷಧವು ಪ್ರಸಾರವಾದಲ್ಲಿ ಬಹಳ ವೆಚ್ಚವುಳಿಯುವದು.

ಕಲ್ಲಿದ್ದಲಿಯಿಂದ ಪೆಟ್ರೋಲವೇ?

ಕಲಕತ್ತೆಯಲ್ಲಿ ಭೂಗರ್ಭ ಶಾಸ್ತ್ರ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನು ವಹಿಸಿ ಶ್ರೀ. ಕೆ. ದತ್ತ ಇವರು ಹೇಳಿದುನೇನೆಂದರೆ— "ಸದ್ಯಕ್ಕೆ ಹಿಂದುಸ್ಥಾನದಲ್ಲಿ ೨೧೦೦೦ ಮೋಟಾರುಗಳು ಓಡಾಡುತ್ತಿರುತ್ತವೆ. ಅವುಗಳಲ್ಲಿ ೨೧ ಸಾವಿರ ಮೋಟಾರುಗಳು ಕೇವಲ ಬ್ರಹ್ಮದೇಶದಲ್ಲಿಯೇ ಉಪಯೋಗಿಸಲ್ಪಡುತ್ತವೆ. ಪ್ರತಿಯೊಂದು ಮೋಟಾರಕ್ಕೆ ಸರ್ವಸಾಧಾರಣವಾಗಿ ಪ್ರತಿವರ್ಷ ೪೦೦ ಗ್ಯಾಲನ ಪೆಟ್ರೋಲ ಎಣ್ಣೆ ಬೇಕಾಗುತ್ತದೆ. ಆದುದರಿಂದ ಹಿಂದುಸ್ಥಾನಕ್ಕೆ ೭ ಕೋಟಿ ೬೦ ಲಕ್ಷ ಗ್ಯಾಲನ್ ಪೆಟ್ರೋಲ ಬೇಕು. ಈ ಪ್ರಮಾಣವು ಇನ್ನೂ ಹೆಚ್ಚುತ್ತಲೇ ಇದೆ, ಆದುದರಿಂದ ನಾವು ಖನಿಗಳಲ್ಲಿಯ ಪೆಟ್ರೋಲವನ್ನು ಅವಲಂಬಿಸದೆ ಜ್ವಲ ಸವಿಚಾರಣಾ ಸಮಿತಿಯವರು ಕಲ್ಲಿದ್ದಲಿಯಿಂದ ಪೆಟ್ರೋಲ ತೆಗೆಯಬೇಕು." ನೋಡಬೇಕು. ಈ ಸಾವಲಂಬನವನು!

ಮಹಾಯುದ್ಧಕ್ಕೆ ಹೊಣೆಗಾರರು ಯಾರು?

ಈಗಿನ ವಿದ್ಯಾಪೀಠ ಸಂಬಂಧ ಭಾಷಣ ಮಾಡುವಾಗ್ಗೆ ಬರ್ನಾರ್ಡ ಶಾ ರವರು ಅಂದದ್ದೇನಂದರೆ:— "ಪೃಥ್ವಿಯ ಮೇಲಿನ ಪ್ರತಿಯೊಂದು ವಿದ್ಯಾಪೀಠವನ್ನು ನೆಲಸಮ ಮಾಡಬೇಕೆಂದು, ನನ್ನ ನಿಶ್ಚಯವಾದ ಮತವಿದೆ. ಮತ್ತು ವಿದ್ಯಾ ಪೀಠಗಳ ವಾತಾವರಣ ದಿಂದ ದೂಷಿಸಲ್ಪಟ್ಟ ಇಮಾರತುಗಳ ನೆಲಗಟ್ಟುಗಳಲ್ಲಿ ತುಂಬಾ ಉಪ್ಪು ತುಂಬಬೇಕು. ಉತ್ತಮವಾದ ಶಿಕ್ಷಣದಿಂದ ಜಗತ್ತಿನ ಸಂಸ್ಕೃತಿಯು ಹೆಚ್ಚಿತೆಂಬ ವಿಷಯದಲ್ಲಿ ತಿಲಮಾತ್ರವಾದರೂ ನನಗೆ ನಂಬಿಗೆ ಇಲ್ಲ. ಕಳೆದ ಮಹಾ ಯುದ್ಧಕ್ಕೆ ಒಂದು ವೇಳೆ ಹೊಣೆಗಾರರಾದ ಮುಖಂಡರು ಯಾರಾದರೂ ಇದ್ದರೆ, ಅವರು ಸುಶಿಕ್ಷಿತ ಜನರೇ ಹೌದು. ಜಗತ್ತಿನ ಕೆಲಕೆಲವು ಜನರು ಶಿಕ್ಷಣದಲ್ಲಿ ಪೂರ್ಣತೆಯನ್ನು ಹೊಂದದವರು ಇರುವರು. ಈ ಅರ್ಧ ಶಿಕ್ಷಣ ಹೊಂದಿದವರು ಅರ್ಧ ಸುಧಾರಣೆಯ ನಿರ್ಮೂಲ ಮಾಡಿರುವೆರಲ್ಲದೆ ನಾವು ಸುಶಿಕ್ಷಿತರೆಂದೆನ್ನಬಹುದಾದ ಜನರಂತೂ ಜಗತ್ತಿನ ನೀತಿಯನ್ನು ಮಣ್ಣುಪಾಲು ಮಾಡಿದ ಮೇಲೆ ಸಂಸ್ಕೃತಿಯನ್ನು ಕಾಯುವ ಮನುಷ್ಯರು ಯಾರು?

ಗ್ರೀಸ ಮತ್ತು ರೋಮು ಇವೆರಡು ದೇಶಗಳ ಹೊರತಾಗಿ ಉಳಿದ ದೇಶಗಳ ಸಂಸ್ಕೃತಿಯ ಸಂಬಂಧ ನಮಗೆ ಏನೂ ಕಲ್ಪನೆ ಇದ್ದಿಲ್ಲ. ಇತ್ತೀಚ್ಚಲಾಗಿ ಪ್ರೊಫೆಸರ ಫ್ಲಿಂಡರ್ಸ ಪೆಟ್ರಿ ಇವರು ಹಚ್ಚಿದ ಶೋಧದಿಂದ ಗ್ರೀಸ ಮತ್ತು ರೋಮು ದೇಶಗಳ ಸಂಸ್ಕೃತಿಯ ಕುರುಹುಗಳು ಮಾತ್ರ ಹೇಗೆ ಉಳಿದಿವೆಯೋ ಅದರಂತೆಯೇ ಉಳಿದ ರಾಷ್ಟ್ರಗಳ ಸಂಸ್ಕೃತಿಯು ನೆನಪಿಗೆ ಮಾತ್ರ ಉಳಿದಿದೆಯೆಂದು ತಿಳಿಯುತ್ತದೆ. ಈ ಸಂಸ್ಕೃತಿಯ ಸತ್ತೆಯು ಹೇಗೆ ನಾಶವಾಯಿತೆಂದು ನನಗೆ ನೀವು ಕೇಳುವುದಾದರೆ ಶಿಕ್ಷಣವೇ ಈ ಸಂಸ್ಕೃತಿಗೆ ಮೂಲ ಕಾರಣವೆಂದು ಉತ್ತರ ಹೇಳುವೆನು. ಶಿಕ್ಷಣ ದಿಂದ ಜನರ ಮನಸ್ಸು ವಿಚಿತ್ರವಾಗುತ್ತದೆ. ಇಂಥ ವಿಚಿತ್ರ ಮನಸ್ಸಿನ ಜನರು ಸಂಸ್ಕೃತಿಯೊಳಗಿನ ಮುಖ್ಯ ಗುಟ್ಟನ್ನು ಕಾಯಲಿಕ್ಕೆ ಹೇಗೆ ಸಮರ್ಥರಾದಾರು? ಈ ಕಾರ್ಯಕ್ಕೆ ಸ್ವತಂತ್ರ ಮನಸ್ಸಿನ ಜನರೇ ಬೇಕಾಗುತ್ತಾರೆ. ಮನುಷ್ಯರು ವಿದ್ಯಾ ಪೀಠದಲ್ಲಿ ಕಾಲಿಡುವದೊಂದೇ ತಡ. ಅವರ ಮನಸ್ಸಿನ ಸ್ವಾತಂತ್ರ್ಯಕ್ಕೆ ಲೋಪ ಬರಹತ್ತುವದು. ಮತ್ತು ಅವನು ವಿದ್ಯಾಪೀಠಕ್ಕೆ ಶರಣು ಹೊಡೆಯುವ ತನಕ ಅವನ ಮನಸ್ಸು ಸಂಪೂರ್ಣವಾಗಿ ಒಂದು ತರಹದ ಮೋಸದಿಂದ ಕೂಡಿದ್ದಾಗುತ್ತದೆ.

ಕ್ರಾಂತಿಕಾರಕ ಉಪನ್ಯಾಸವನ್ನು ಓದಿರಿ. ವಿದ್ಯಾಪೀಠದಲ್ಲಿರುವಾಗ್ಗೆ ಕ್ರಮಿಕ ಪುಸ್ತಕಗಳನ್ನು ಓದದ ವಿನಹ ಗತ್ಯಂತರವಿಲ್ಲದಿದ್ದರೆ, ನಪಾಸ ಆಗುವ ಲಾಂಛನಾಸ್ಪದವಾದ ಮಾತು ನಿಮಗೆ ಬರದಿದ್ದರೆ ಸಾಕು. ಹಾಗೆ ಪದ್ಯ ಪುಸ್ತಕಗಳನ್ನು ಓದಿರಿ.

ನಾನು ವಿದ್ಯಾಪೀಠದಲ್ಲಿದ್ದೆನು. ಆವಾಗ್ಗೆ ನಾನು ಕ್ರಮಿಕ ಪುಸ್ತಕಗಳನ್ನು ಅಭ್ಯಸಿಸುವುದರಲ್ಲಿ ಮಗ್ನನಾಗಿರುತ್ತಿದ್ದೆನೆಂದು ಜನರು ತಿಳಿಯುತ್ತಿದ್ದರು. ನಾನು ಆ ಕಾಲದಲ್ಲಿ ಅತಿಶಯವಾಗಿ ಓದುತ್ತಿದ್ದೆನು. ಆದರೆ ನಾನು ಓದುವ ಪುಸ್ತಕಗಳು ಕ್ರಮಿಕ ಪುಸ್ತಕಗಳಲ್ಲದೆ ಶ್ರೇಷ್ಠರಾದ ಗ್ರಂಥಕಾರರಿಂದ ಬರೆದ ಸ್ಫೂರ್ತಿಗೊಳಿಸಿ, ಸ್ಫೂರ್ತಿಯನ್ನು ಹುಟ್ಟಿಸುವ ಪುಸ್ತಕಗಳಿದ್ದವು. ನಿಮಗೆ ಇದೇ ಫನ್ನ ನಿರ್ಧಾರವಾದ ಅಂಬೋಣವಿದೆ. (ಏನೆಂದರೆ) ಎಲ್ಲ ಕ್ರಾಂತಿಕಾರಕ ವಾಙ್ಮಯವನ್ನು ವಿಸ್ತಾರವಾಗಿ ಓದಿರಿ. ಸಮಾಜ ಸತ್ತೆಯ ಚರ್ಚೆಯ ಮತ್ತು ಇತರ ವಾಗ್ವಾದದ ರುಚಿಯು ನಿಮಗೆ ಹತ್ತಲಿ. ಮಹತ್ವದ ವೇಳೆಯಲ್ಲಿದ್ದ ನಿಮ್ಮಂಥ ತರುಣರ ಮನಸ್ಸು ಈ ವಯಸ್ಸಿನಲ್ಲಿ ಒಂದು ವೇಳೆ ಕ್ರಾಂತಿಯ ವಿಷಯದ ಬಗ್ಗೆ ಉತ್ಸಾಹ ಬಿಡದಿದ್ದರೆ ೫೦ ವರುಷಗಳ ತರುವಾಯ ನಿಮ್ಮ ಅವಸ್ಥೆಯು ಏನಾಗಬಹುದು? ಯಾವ ಮನುಷ್ಯನು ತರುಣಾವಸ್ಥೆಯಲ್ಲಿ ಚುರುಕು ಮತ್ತು ಉತ್ಸಾಹ ಹಾಗೂ ಧೈರ್ಯವುಳ್ಳವನಿರುವನೋ ಅವನೇ ೫೦ ವರ್ಷಗಳ ಸುಮಾರಿಗೆ ವಯಸ್ಸಿನಲ್ಲಿಯಾದರೂ ಸಾಹಸಿಯಿರಬಹುದು.

ಮಹಾತ್ಮರ ಹೇಳಿಕೆ.

"ಪ್ರವಾಸದಲ್ಲಿ ಕೂಡಿಸಿದ ಧನವನ್ನು ಹೇಗೆ ಹಂಚುವರು? ಎಂಬುದೊಂದು ಪ್ರಶ್ನೆಯನ್ನು ಅನೇಕ ಕೆಲಸಗಾರರು ಕೇಳುತ್ತಾರೆ. ಆ ಧನವು ಮಧ್ಯವರ್ತಿ ಮಂಡಲದ ಕಡೆಗೆ ಒಪ್ಪಿಸಲ್ಪಟ್ಟು ಅವರು ಅದನ್ನು ಅಯಾ ಪ್ರಾಂತ, ಜಿಲ್ಲೆ, ತಾಲೂಕು, ಇಲ್ಲವೆ ಪಟ್ಟಣಗಳಲ್ಲಿ ಉಪಯೋಗಿಸುವರು. ಇದು ಸರ್ವಸಾಧಾರಣ ನಿಯಮವಾಗಿದ್ದರೂ ಕೆಲವು ಸ್ಥಾನಗಳಲ್ಲಿ ದೊಡ್ಡ ದಾನಗಳಾದರೆ ಅವು ಅತ್ಯಂತಾವಶ್ಯಕವಾದ ಹರಿಜನೋದ್ಧಾರದ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವವು. ಯಾವ ಸ್ಥಾನದಿಂದ ಹಣವು ಕೂಡಿಸಲ್ಪಡುವದೋ ಅಲ್ಲಿಯೇ ಅದರ ಉಪಯೋಗವಾಗಬೇಕೆಂದರೆ ಧನ ಸಂಗ್ರಹದ ಮುಖ್ಯ ಉದ್ದೇಶವೇ ಕೊನೆಗಾಣದು. ಒಂದು ವೇಳೆ ಅಲ್ಲಲ್ಲಿ ಸಂಗ್ರಹಿತವಾದ ಧನವನ್ನು ಯಾವ ಕಾರ್ಯಕ್ಕಾಗಿ ಉಪಯೋಗಿಸಬೇಕೆಂಬುದನ್ನು ಸ್ಥಳೀಯ ಕಾರ್ಯವಾಹಕರು ಸೂಚಿಸಿದಲ್ಲಿ ಬಹಳೇ ಹಿತವಾಗುವದು.

ಆದುದರಿಂದ ಕಾಯಕವಾಹಕರಾಗಲಿ ಧನ ದಾನಿಗಳಾಗಲಿ ತಮ್ಮ ಜಿಲ್ಲೆಗಳಲ್ಲಿ ಸಂಚಿಯವಾದ ಧನವು ಯೋಗ್ಯ ರೀತಿಯಿಂದ ವಿನಿಯೋಗಿಸಲ್ಪಡುವದಿಲ್ಲೆಂದು ಎಂದೂ ಅನುಮಾನಿಸಕೂಡದು. ಮಧ್ಯವರ್ತಿ ಮಂಡಲದವರು ಸರಿಯಾಗಿ ಲೆಖ್ಖಪತ್ರಗಳನ್ನಿಟ್ಟರುವರೆಂದೂ ಮತ್ತು ಆ ಲೆಖ್ಖಗಳು ನಿಯಮಿತವಾಗಿ ಪರೀಕ್ಷಿಸಲ್ಪಡುವದಲ್ಲದೆ ಪ್ರಕಟಪಡಿಸಲ್ಪಡುವವೆಂಬುದನ್ನೂ ಅವರು ತಿಳಿಯತಕ್ಕದ್ದು."

ಅದಿಜನ ಪ್ರೇಮ.

ಮಹಾತ್ಮಾಜಿಯವರು ಶ್ರೀ ವಿಠ್ಠಲಭಾಯಿಯವರ ಹರಿಜನರ ಪ್ರೇಮದ ವಿಷಯವಾಗಿ ಹೀಗೆ ಬರೆದಿರುತ್ತಾರೆ—"ಗಂಗಾಟನೆಯ ಇಸವಿಯಲ್ಲಿ ಗೋಧ್ರದಲ್ಲಿ ಒಂದು ಹರಿಜನ ಸಮ್ಮೇಲನವು ಸೇರಿದ್ದಿತು. ಆ ಕಾಲಕ್ಕೆ ನಾನು ಸಭಿಕರಿಗೆ ತಾವು ಆ ಕೆಲಸದಲ್ಲಿ ನಿಷ್ಠಾಪರರಾಗಿದ್ದಲ್ಲಿ ಹರಿಜನರ ವಸತಿ ಸ್ಥಾನದಲ್ಲಿಯೇ ನೆರೆದು ಸಭೆಮಾಡಬೇಕೆಂದು ಆಮಂತ್ರಿಸಿದೆನು. ನಾನು ಆ ಕಾಲಕ್ಕೆ ಅಲ್ಲಿಯ ಪ್ರಾಂತಿಕ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿಯವರನ್ನಲ್ಲದೆ ಮತ್ತಾರನ್ನು ಕಾಣಬಲ್ಲೆನು? ಒಕ್ಕುಲಿಗರ ಅಂಗಿಯನ್ನು ತೊಟ್ಟು ಸಾಧುವಿನ ಟೊಪ್ಪಿಗೆಯನ್ನು ಹಾಕಿಕೊಂಡು ಸ್ವತಂತ್ರವಾಗಿ ಅವರು ಹರಿಜನರೊಡನೆ ವಿಹರಿಸುತ್ತ ತಮ್ಮ ಹರಿಜನೋದ್ಧಾರದ ತೀವ್ರತರ ಭಾವನೆಯನ್ನು ವ್ಯಕ್ತಗೊಳಿಸಿದರು. ಅವರಿಗೆ ಹರಿಜನರು ಅಸ್ಪೃ. ಮತ್ತೊಬ್ಬರು ಅಸ್ಪೃ. ಜಾತಿಯೆಂಬುದನ್ನು ಲಕ್ಷ್ಯಕ್ಕೆ ತಾರರು. ಸನಾತನಿಗಳನ್ನು ಸಂತೈಸುವದಕ್ಕಾಗಿ ಸ್ವಂತ ಆಚಾರವಿಚಾರಗಳನ್ನವರು ಎಂದೂ ಹುದುಗಿಸಲಿಲ್ಲ. ಆದುದರಿಂದ ಈ ದಿವಂಗತ ದೇಶಾಭಿಮಾನಿಯ ನೆನಹಿನಿಂದ ಕೋಟ್ಯಾವಧಿ ಜನರು ಕಣ್ಣೀರು ಸುರಿಸುವಲ್ಲಿ ಹರಿಜನರೂ ಭಾಗಿಗಳಾಗಲಿ."

"ಹರಿಜನ"

ರಿಝರ್ವ್ ಬ್ಯಾಂಕ ಬಿಲ್ಲಿನ ರಹಸ್ಯ.

(೪ ನೆಯ ಪುಟದಿಂದ ಮುಂದರಿದುದು.)

ಹೇರಲ್ಪಟ್ಟಿತ್ತು. ಈ ೧೮ ಪೆನ್ಸಿನ ದರವು ಕಾಯಿದೆ ಪುಸ್ತಕಗಳಲ್ಲಿ ಸೇರ್ಪಡೆಯಾಗುವುದಕ್ಕಿಂತ ಮೊದಲೇ ತದರ ಅಪಸ್ವರಗಳು ಕೇಳ ಬರಹತ್ತಿದವು. ೧೯೩೧ನೇ ಸಪ್ಟೆಂಬರ ೨೧ನೇ ತಾರೀಖಿನೊಳಗಾಗಿಯೇ ಚಲನದಲ್ಲಿ ಹೇರಳವಾಗಿ ಹೆಚ್ಚುಕಡಿಮೆ ಮಾಡಬೇಕಾಯಿತು.

ಪಾಶ್ಚಾತ್ಯ ಪ್ರಪಂಚದ ಅನೇಕ ಧನಾಢ್ಯ ಹಾಗೂ ಪ್ರಮುಖ ರಾಷ್ಟ್ರಗಳು ಮಹಾಯುದ್ಧದ ಪೂರ್ವದಲ್ಲಿದ್ದ ತಮ್ಮ ಪಡತಲ (Parities) ಗಳನ್ನು ಬಿಟ್ಟುಕೊಟ್ಟು ತಮ್ಮ ಒಕ್ಕಲತನ ಮತ್ತು ಉದ್ಯೋಗಗಳನ್ನು ಕಾಪಾಡಿಕೊಂಡರು. ಆದರೆ ಹಿಂದುಸ್ಥಾನ ಸರಕಾರದವರು ಮಾತ್ರ ಪ್ರಶಾಂತ ಗಂಭೀರರಾಗಿ ನಿಶ್ಚಿಂತರಂತೆ ಕುಳಿತುಬಿಟ್ಟಿದ್ದಾರೆ.

ಸರಕಾರದವರು ಇದೀಗ ತಂದೊಡ್ಡಿದ ರಿಝರ್ವ್ ಬ್ಯಾಂಕಿನ ಬಿಲ್ಲಿನಲ್ಲಿ ರೂಪಾಯಿಯ ಬೆಲೆಯನ್ನು ಅತ್ಯಧಿಕವಾದ ೧ ಶಿ. ೬ ಪೆನ್ಸ ಗಳ ದರದ ಬೆಲೆಯನ್ನಾಗಿ ಶಾಶ್ವತವಾಗಿ ಮಾಡಿಬಿಡುವಂತೆ ಸೂಚಿಸಿದ್ದಾರೆ. ಬ್ರಿಟಿಶ ಪಾರ್ಲಿಮೆಂಟಿನ ಒಪ್ಪಿಗೆಯಿಲ್ಲದೆ ಚಲನದ ಧೋರಣದಲ್ಲಿ ಬದಲಾವಣೆಯಾಗಕೂಡದೆಂಬ ಒಂದು ಭಯಂಕರವಾದ ಕಂಠಾಕೊಂದನ್ನು ಅದರಲ್ಲಿ ಸೇರಿಸಿಬಿಟ್ಟಿದ್ದಾರೆ. ಹುಂಡಣಾವಳಿಯ ದರದ ಪ್ರಶ್ನೆಯನ್ನೇ ಇಂದಾಗಲಿ ಅಥವಾ ಇನ್ನು ಮುಂದೆ ಎಂದೇ ಆಗಲಿ ಕಾಯಿದೆ ಮಂಡಲಗಳೆದುರಿಗೆ ತರುವ ಮಾತನ್ನೇ ತಪ್ಪಿಸಿ ಬಿಡುವದಕ್ಕೋಸ್ಕರ ಸರಕಾರದವರು ಈ ಹಿಂಬಾಗಿಲ ಪದ್ಧತಿ (Back door Method) ಯನ್ನು ಸ್ವೀಕರಿಸುತ್ತಿದ್ದಾರೆ. ಹುಂಡಣಾವಳಿಯ ದರದ ಸಂಬಂಧವಾಗಿ ಯಾವ ನಿರ್ಣಯವನ್ನೂ ಮಾಡದೆ ಈಗಿದ್ದಂತೆ ರಿಝರ್ವ್ ಬ್ಯಾಂಕ ಬಿಲ್ಲು ಪಾಸಾದದ್ದೇ ಆದರೆ ಚಲನದ ವಿಷಯವಾಗಿ ಭಾವೀ ಕಾಯಿದೇ ಮಂಡಲಗಳಿಗೆ ಇರಬಹುದಾದ ಒಂದು ಮಹತ್ವದ ಅಧಿಕಾರವೇ ಶ್ವೇತಪತ್ರದ ಪ್ರಕಾರ ಕಳೆದುಹೋಗುವದು. ಈ ಕಾರಣದಿಂದಲೇ ಹಿಂದುಸ್ಥಾನಕ್ಕೆ ಯಾವದೇಬಗೆಯ ರಾಜಕೀಯ ಸುಧಾರಣೆಗಳು ಸಿಗುವ ಪೂರ್ವದಲ್ಲಿ ರಿಝರ್ವ್ ಬ್ಯಾಂಕ ಸ್ಥಾಪನೆಯಾಗಲೇಬೇಕೆಂಬ ಶರ್ತನ್ನು ಹಾಕಿದಂತೆ ಕಾಣುತ್ತದೆ.

"ರೂಪಾಯಿಯ ಅಂತರರಾಷ್ಟ್ರೀಯ ಬೆಲೆಯನ್ನು ನೆಲೆಗೊಳಿಸುವದೂ ಮತ್ತು ಹಿಂದುಸ್ಥಾನದೊಳಗಿನ ಅಪ್ರತ್ಯಕ್ಷ ಧನ (Credit) ವನ್ನು ನಿಯಮನಗೊಳಿಸುವುದೂ" ಇವೇ ಮುಂತಾದವು ರಿಝರ್ವ್ ಬ್ಯಾಂಕಿನ ಕಾರ್ಯಗಳೆಂದು ನಮಗೆ ಮೇಲಿಂದಮೇಲೆ ಸರಕಾರದವರು ಹೇಳುತ್ತ ಬಂದಿದ್ದಾರೆ. ಮಧ್ಯವರ್ತಿ ಬ್ಯಾಂಕಿಂಗ ಸಮಿತಿಯವರಾದರೂ ಇದೇ ವ್ಯಾಖ್ಯೆಯನ್ನೇ ಹೇಳಿದ್ದಾರೆ. ಅಂದಮೇಲೆ ರಿಝರ್ವ್ ಬ್ಯಾಂಕು ಸ್ಥಾಪಿತನಾದ ನಂತರವೂ ೧ ಶಿ. ೬ ಪೆನ್ಸಿನ ದರನೇ ಸಾಗಬೇಕೆಂದು ರಿಝರ್ವ್ ಬ್ಯಾಂಕಿನ ಮಧ್ಯವರ್ತಿ ಮಂಡಲದವರ ಕೈಗಳನ್ನು ವ್ಯರ್ಥವಾಗಿ ಕಟ್ಟಿಡುವ ಕಾರಣವಿಲ್ಲ. ಮುಂದೆ ರೂಪಾಯಿಯು ಸರಿಯಾದ ಬೆಲೆಯು ಎಷ್ಟಾದೀತೆಂಬ ವಿಷಯದಲ್ಲಿ ಸರಕಾರದವರಿಗೆ ಸಂಶಯವಿದ್ದ ಪಕ್ಷದಲ್ಲಿ ಹಾಗೂ ೧ ಶಿ. ೬ ಪೆನ್ಸುಗಳೇ ಸರಿಯಾದ ಬೆಲೆಯೆಂದು ವಾದಿಸಲು ತಾವು ಸಿದ್ಧರಿದ್ದ ಪಕ್ಷದಲ್ಲಿ ರಿಝರ್ವ್ ಬ್ಯಾಂಕಿನ ಅಧಿಕಾರಿಗಳಿಗೂ ತಜ್ಞರಿಗೂ ಸಮಾಲೋಚನೆಯ ಕಾರ್ಯವನ್ನು ಒಪ್ಪಿಸಿಬಿಡುವುದು ವಿಹಿತವಾದುದಲ್ಲವೆ? ಆದರೆ ಈ ಮಾರ್ಗವನ್ನು ಬಿಟ್ಟು, ಅತ್ಯಧಿಕವಾದದ್ದೆಂದೂ ದೇಶದ ಹಿತಸಂಬಂಧಗಳಿಗೆ ಅತ್ಯಂತ ಬಾಧಕವಾದದ್ದೆಂದೂ ಸಾರ್ವತ್ರಿಕವಾಗಿ ನಿಷಿದ್ಧವಾದ ಈ ೧ಶಿ ಪೆನ್ಸಿನ ದರವನ್ನು ಈಗಲೇ ಹೇರಿಬಿಡಬೇಕೆಂದು ಯೋಚಿಸುವುದು ಭಯಪ್ರದವಾಗಿದೆ.

ರಿಝರ್ವ್ ಬ್ಯಾಂಕಿನ ಪೀಠಿಕೆಯಲ್ಲಿ "ಪ್ರಪಂಚದ ಸದ್ಯದ ಅವ್ಯವಸ್ಥಿತ ಹಣದ ಪದ್ಧತಿಯನ್ನು ನೋಡುತ್ತಿರಲಾಗಿ ಹಿಂದುಸ್ಥಾನದ ಹಣದ ಪದ್ಧತಿಗೆ ಸುಸ್ಥಿರವಾದುದೊಂದು ತಳಹದಿಯನ್ನು ನಿಶ್ಚಯಿಸುವದು ಅಸಂಭವನೀಯವಾಗಿದೆ" ಎಂದು ಸರಕಾರದವರು ಒಡನುಡಿದಿದ್ದಾರೆ. ಅದೇ ಬಾಯಿಯಿಂದ ಈಗ ೧ ಶಿ. ೬ ಪೆನ್ಸಿನ ಹುಂಡಣಾವಳಿಯ ದರವನ್ನು ಸ್ಥಿರಗೊಳಿಸುವ ನಿರಂಕುಶ ರೀತಿಯ ನಿಶ್ಚಯವನ್ನು ಈಗ ಉಚ್ಚರಿಸುತ್ತಿದ್ದಾರೆ. ಇದನ್ನು ನಿರ್ಣಯಿಸುವದು ರಿಝರ್ವ್ ಬ್ಯಾಂಕಿನವರಿಗೆ ಅಸಾಧ್ಯವಿದ್ದದ್ದೇ ಆದರೆ, ಸರಕಾರದ ಕೋಶಾಧಿಕಾರಿಗಳಿಗೂ ಅಷ್ಟೇ ಅಸಾಧ್ಯವಾದ ಮಾತಾಗಿದೆ. ವಸ್ತು ಸ್ಥಿತಿಯು ಮಾತ್ರ ತದ್ವಿರುದ್ಧವಾಗಿದೆ. ರಿಝರ್ವ್ ಬ್ಯಾಂಕಿನ ಆಡಳಿತದ ಮಂಡಲದಲ್ಲಿ ವ್ಯವಹಾರ ಕುಶಲರಾದ ವರ್ತಕರ ಜೊತೆಗೆ ಬ್ಯಾಂಕಿಂಗಿನ ಅನುಭವವಿದ್ದ ಅಧಿಕಾರಿಗಳೂ ಇರುತ್ತಿದ್ದು ಇವರೆಲ್ಲರಿಗೆ ಸ್ವಾಭಾವಿಕವಾಗಿಯೇ ದೇಶವಿದೇಶಗಳ ಬ್ಯಾಂಕುಗಳು ಕಂದಾಯ ಹುಂಡಣಾವಳಿ ನೊದಲಾದವುಗಳೊಡನೆ ನಿತ್ಯಸಂಬಂಧವುಂಟಾಗುತ್ತಿರುವುದರಿಂದ ರೂಪಾಯಿಯ ಬೆಲೆಯನ್ನು ಗೊತ್ತುಪಡಿಸಲು ಅವರೇ ನಿಜವಾದ ಅಧಿಕಾರವುಳ್ಳವರಾಗುವರು. ನಮ್ಮ ದೇಶದ ನಾಣ್ಯದ ನಿಜವಾದ ಬೆಲೆಯನ್ನರಿತುಕೊಂಡು ಕೇವಲ ಈ ದೇಶದ ಹಿತಸಂಬಂಧಗಳಿಗೇ ಪ್ರಥಮ ಮಹತ್ವವನ್ನು ಕೊಟ್ಟು ಅವರೇ ರೂಪಾಯಿಯ ಯೋಗ್ಯ ಬೆಲೆಯನ್ನು ನಿಶ್ಚಯಿಸಬಲ್ಲರು.

ಈ ಸಂದರ್ಭದಲ್ಲಿ ಗ್ರೇಟಬ್ರಿಟನ್ನಿನ ಅಂತರ್ಬಾಹ್ಯ ವ್ಯಾಪಾರೋದ್ಯೋಗಗಳ ಹಿತಸಂಬಂಧಗಳೂ ಹಿಂದುಸ್ಥಾನದ ಹಿತ ಸಂಬಂಧಗಳೂ ಒಂದೇ ಇರುತ್ತವೆಯೆಂದು ವಾದಿಸುವದಂತೂ ಅಶಕ್ಯ ಕೋಟಿಯ ಮಾತಾಗಿದೆ. ಅಂದಮೇಲೆ ಗ್ರೇಟ ಬ್ರಿಟನ್ನಿನ ಚಲನದೊಡನೆ ನಮ್ಮ ಚಲನವನ್ನು ಜೋಡಿಸುವದರಲ್ಲಿ ಯಾವ ತರ್ಕವಿದೆ? ಗ್ರೇಟ ಬ್ರಿಟನ್ನಿನ ಹಿತಗಳಿಗೇ ಮುಖ್ಯ ಸ್ಥಾನವನ್ನು ಕೊಡುವ ಸ್ವಾರ್ಥದ ಉದ್ದೇಶವಲ್ಲದೆ ಬೇರಾವ ಉದ್ದೇಶವಿದೆ?

"ಹಿಂದುಸ್ಥಾನದಲ್ಲಿಯ ಪ್ರತಿಯೊಬ್ಬನೂ ರೂಪಾಯಿಯನ್ನು ದಿನಾಲು ಉಪಯೋಗಿಸುವನಾದರೂ ಅದರೊಳಗಿನ ವಿಚಿತ್ರ ಘಟನಾ ಸಾಮರ್ಥ್ಯದ ರೀತಿಯನ್ನು ತರಿತುಕೊಂಡಿರುವದಿಲ್ಲ" ವೆಂದು ಸರಕಾರದ ಅರ್ಥ ಸಚಿವರೊಬ್ಬರು ಹಿಂದಕ್ಕೊಮ್ಮೆ ಅಂದು ತೋರಿಸಿದರು. ಆದಕಾರಣ ಬುದ್ಧಿಶಾಲಿಗಳೆಂದೆನಿಸಿಕೊಳ್ಳುವವರು ಈ ದೇಶಕ್ಕೆ ಈಗ ಮಾಡಬೇಕಾದ ಸೇವೆಯು ಅತ್ಯಂತ ಮಹತ್ವದ್ದಾಗಿದೆ. ಲೆಜಿಸ್ಲೇಟಿವ್ ಅಸೆಂಬ್ಲಿಯವರೂ ಅದರ ಸಿಲೆಕ್ಟ ಕಮಿಟಿಯವರೂ ರಿಝರ್ವ್ ಬ್ಯಾಂಕ ಬಿಲ್ಲನ್ನು ಪಾಸುಮಾಡುವದರೊಳಗಾಗಿ ದೇಶದ ಬೌದ್ಧಿಕ ವರ್ಗದ ತಜ್ಞರೆಲ್ಲರೂ ಇತ್ತಕಡೆಗೆ ಸಂಪೂರ್ಣ ಲಕ್ಷ್ಯವನ್ನು ಹಾಕಿ ಸಾಮಾನ್ಯ ಜನತೆಗೆ ಯೋಗ್ಯ ಮಾರ್ಗವನ್ನು ತೋರಿಸಬೇಕಾಗಿದೆ. ಭಾರತದೇಶದ ಸದ್ಯದ ವಿಶಿಷ್ಟ ವರ್ಗದವರಿಗೂ ಜನಸಮುದಾಯಕ್ಕೂ ಇಷ್ಟೇ ಏಕೆ ಭಾವೀ ಸಂತತಿಯವರಿಗು ಕೂಡ ಮಾಡಬೇಕಾದ ಅಮೋಘಸೇವೆಯ ಪ್ರಸಂಗವೊಂದು ಈಗ ಬಂದಿರುವದನ್ನು ಅಸೆಂಬ್ಲಿಯ ಪ್ರತಿಯೊಬ್ಬ ಮೆಂಬರರು ಅರಿತುಕೊಂಡು ಕೆಲಸಮಾಡಬೇಕಾಗಿದೆ.

ಪತ್ರಗಳ ಸಾರಾಂಶ.

ಲಿಂಗೈಕ್ಯರಾದರು.

ಶ್ರೀ ಮಡಿವಾಳ ಸ್ವಾಮಿ ಗುರುಪ್ರಭು ಸ್ವಾಮಿ ಗೊಂಬಿಮಠ ಶಹಾಪೂರ.

ಇವರು ತಾ. ೨೩-೧೦-೧೯೩೩ ಸೋಮವಾರ ರಾತ್ರಿ ೧೦॥ ಘಂಟೆಗೆ ತಮ್ಮ ೭೩ನೆಯ ವಯಸ್ಸಿನಲ್ಲಿ ಭೌತಿಕ ಶರೀರವನ್ನು ತ್ಯಜಿಸಿ ಲಿಂಗೈಕ್ಯರಾದರು. ಇವರು ರಮಲ ಜ್ಯೋತಿಷ್ಯ ಈ ವಿದ್ಯೆಯಲ್ಲಿ ಅದ್ವಿತೀಯ ಪಂಡಿತರಿದ್ದರು. ಇವರ ಪ್ರಖ್ಯಾತಿಯು ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಮಹಾರಾಷ್ಟ್ರದಲ್ಲಿಯೂ ಮಿತಿ ಮೀರಿತ್ತು. ಈ ವಿದ್ಯೆಯನ್ನು ಸಂಪಾದನೆ ಮಾಡಬೇಕಾದರೆ ಅನೇಕ ಕಷ್ಟ ನಷ್ಟಗಳನ್ನು ಸಹಿಸಿ ವೀರಶೈವ ಸಮಾಜದಲ್ಲಿ ಈ ವಿದ್ಯೆಯು ಪ್ರಸಾರವಾಗಲೆಂಬ ಸದುದ್ದೇಶದಿಂದ ಅಧ್ಯಯನ ಮಾಡಿದುದಲ್ಲದೇ ಎಷ್ಟೋ ಸ್ವಮತ ಪರಮತಸ್ಥರಿಗೆ ವಿದ್ಯಾದಾನ ಮಾಡಿ ಪರೋಪಕಾರಿಗಳಾಗಿದ್ದರು. ಇವರಿಗೆ ಕನ್ನಡವು ಜನ್ಮಭಾಷೆಯಾಗಿತ್ತು. ಇವರು ಸಂಸ್ಕೃತ, ಮಹಾರಾಷ್ಟ್ರ, ಉರ್ದು, ಹಿಂದಿ, ತಮಿಳು ಮೊದಲಾದ ಭಾಷೆಗಳನ್ನರಿತವರಾಗಿದ್ದರು.

ಮತ್ತು ರಮಲ ಜ್ಯೋತಿಷ್ಯವನ್ನು ಕೇಳುವದಕ್ಕಾಗಿ ದೂರ ದೂರ ದೇಶದಿಂದ ಯುರೋಪಿಯನ್ನರು ಸಹ ಬರುತ್ತಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ಇವರನ್ನು ಬಿಟ್ಟರೆ ನಮ್ಮ ಸಮಾಜದಲ್ಲಿ ರಮಲ ವಿದ್ಯಾ ಪಂಡಿತರು ಸಿಗುವದೇ ಇಲ್ಲಾ. ಆದ್ದರಿಂದ ಇಂಥ ಮಹನೀಯರು ಲಿಂಗೈಕ್ಯರಾದದ್ದರಿಂದ ಶಹಾಪೂರ ಮಹಾಜನಗಳಷ್ಟೇ ಏಕೆ ಇಡೀ ಕರ್ನಾಟಕಕ್ಕೆ ಮಹಾ ಹಾನಿಯಾಯಿತು. ಇವರು ಅಂತ್ಯ ಕಾಲದಲ್ಲಿ ತಮ್ಮ ತರುವಾಯ ಶ್ರೀ ಗುರುಶಾಂತದೇವರು ಶಹಾಪೂರ ಇವರನ್ನೇ ಅಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಗುರುಶಾಂತ ದೇವರು ಗೊಂಬೀ ಮಠದ ಇವರಾದರೂ ಸದ್ಯಕಾಶಿಯಲ್ಲಿ ಕಾವ್ಯತೀರ್ಥದ ಅಭ್ಯಾಸವನ್ನೇ ಮಾಡುತ್ತಿದ್ದು ರಮಲವಿದ್ಯೆಯಲ್ಲಿ ಸಾಕಷ್ಟು ಯೋಗ್ಯತೆಯನ್ನು ಪಡೆದುಕೊಂಡಿರುತ್ತಾರೆ. ಆದರೆ ಇವರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಲಿಂಗೈಕ್ಯರಾದ ಗುರುಗಳು ಮಾಡಿದ ಕಾರ್ಯಗಳನ್ನು ಪೂರ್ಣಮಾಡುವರೆಂಬದಾಗಿ ನಮ್ಮ ಆಶೆ ಇರುವದು. ಮತ್ತು ಲಿಂಗೈಕ್ಯರಾದ ಮಹಾಸ್ವಾಮಿಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಆ ಸತ್ಯಪಕ್ಷಪಾತಿಯಾದ ಪರಮಾತ್ಮನನ್ನು ಅನನ್ಯ ಭಾವನೆಯಿಂದ ಬೇಡಿಕೊಳ್ಳುವೆನು."

ಶ್ರೀ. ಗೊಡಚೀ ವೀರಭದ್ರೇಶ್ವರ ಕ್ಷೇತ್ರ ಸೇವಾಸಂಘದ ಪ್ರಕಟನೆ.

ಸದರ ಸಂಘದ ವ್ಯಾ. ಕವಿಗೋಷ್ಠಿಯು ಹೊಳಿ ಆಲೂರಲ್ಲಿ ಕೂಡಿ (೨೪-೧೦-೩೩) ಈ ಸಾರೆ ಮಾರ್ಗಶೀರ್ಷ ಶು. ೧೫ ದಿವಸಗಳಲ್ಲಿ ಜರುಗುವ ರಥೋತ್ಸವಕ್ಕೆ ಬರುವ ಯಾತ್ರಿಕರಿಗೆ ಆಗುತ್ತಿರುವ ತೊಂದರೆಗಳನ್ನು ನೀಗಿಸಿ, ಕೀರ್ತನ, ಭಜನ, ಪುರಾಣ, ವ್ಯಾಖ್ಯಾನಗಳಿಂದ ಜನರ ಮನಸ್ಸನ್ನು ಸಂಸ್ಕೃತಿಗೊಳಿಸಬೇಕೆಂದು ನಿರ್ಣಯಿಸಿದ್ದಾರೆ. ಅದರಿಂದ ಗದಗ, ಬಾಗಲಕೋಟೆಗಳಿಂದ ವಿದ್ವಾನ್ ಜನರೂ, ಗದಗಿನ ಜೀವದಯಾ ಸಂಘದವರೂ, ತತ್ವನಿಷ್ಠರಾದ ಶಾಸ್ತ್ರೀ ಜನರೂ ಅಲ್ಲಿಗೆ ಬರಲಿಕ್ಕೆ ಸಂಘದವರು ವಿನಂತಿ ಮಾಡಿಕೊಂಡಿದ್ದಾರೆ. ಮತ್ತು ಯಾತ್ರಿಕರಿಗಾಗುವ ಪರಂಗೀ ಮುಳ್ಳಿನ ಬಾಧೆಯನ್ನು ನೀಗಿಸುವದು, ಸ್ವಚ್ಛವಾದ ನೀರಿನ ಸಾಹಿತ್ಯವನ್ನೊದಗಿಸಿಕೊಡುವದು, ಮಲವಿಸರ್ಜನಕ್ಕಾಗಿ ಜನರನ್ನು ದೂರ ಹೋಗುವಂತೆ ವ್ಯವಸ್ಥೆ ಪಡಿಸುವದು, ಇತ್ಯಾದಿ ಜನಹಿತ ಕೆಲಸಗಳನ್ನು ಮುಂದಾಗಿಯೇ ಸಂಘದವರು ಮಾಡಿಸುತ್ತಾರೆ. ಈ ಸಾರೆ ಯಾತ್ರಿಕರಿಗೆ ದೇವ ದರ್ಶನದಿಂದ ಇಹಪರ ಸುಖ ಸಾಧನಗಳ ಸಂಯೋಗವು ಸದರ ಸಂಘದವರ ಸೇವಾಧರ್ಮದಿಂದ ಆಗುವದು. ಯಾವತ್ತು ಸುಧಾರಣಾಪೇಕ್ಷೆಗಳು ಸದರ ಯಾತ್ರೆಗೆ ಈ ಸಾರೆ ಬಂದು ತಾವಾದರೂ ಸಂಘದ ಹಿತಕ್ಕಾಗಿ ಸಹಾಯವನ್ನು ಇಹಪರಗಳಿಂದ ಮಾಡಿ ಧನ್ಯರಾಗಬೇಕೆಂದು ನಂಬಿದ್ದೇವೆ.

ಗದಗ.
ತಾ. ೪-೧೧-೩೩.

ಕೆ. ಬಿ. ಅಂಗಡಿ.
ಚೇರಮನ್.

ಶ್ರೀಮನ್ ನಿರಂಜನ ಮಹಾಂತ ಸ್ವಾಮಿಗಳವರ ಭಾಷಣ, ನಂದಗಡ.

ಕಳೆದ ೨೦ಗಳ ೩೦ನೆಯ ತಾರೀಖಿನ ದಿವಸ ನಂದಗಡ ಶ್ರೀಮನ್ ನಿರಂಜನ ಮಹಾಂತ ಸ್ವಾಮಿಗಳವರು 'ಗ್ರಾಮ ದೇವಿ ಯಾತ್ರಾ' ಎಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡಿದರು. ಅದರ ಸಾರಾಂಶವನ್ನೇ ಇದರಡಿಯಲ್ಲಿ ಕೊಟ್ಟಿದೆ—

"ಪ್ರತಿಯೊಬ್ಬ ಮನುಷ್ಯನೂ ಸುಖವನ್ನೇ ಅಪೇಕ್ಷಿಸುತ್ತಾನೆ. ಸುಖದ ಮೂಲಸ್ಥಾನವಾದರೋ ಧರ್ಮವಾಗಿದೆ. ಧರ್ಮದ ನಿಜ ತತ್ವಗಳನ್ನು ತಿಳಿದುಕೊಂಡು ಆ ಪ್ರಕಾರ ಆಚರಿಸುವುದು ಯೋಗ್ಯವಾಗಿದೆ. ದೇಶದಲ್ಲಿಯ ಕೋಟ್ಯಾವಧಿ ಜನರು ಅರ್ಧ ಹೊಟ್ಟೆಯುಂಡು ಬಟ್ಟೆಬರೆಗಳಲ್ಲದೆ ಕಷ್ಟಪಡುತ್ತಿರುವಾಗ ನಾವು ಧರ್ಮದ ಹೆಸರಿನಿಂದ ಜಾತ್ರೆಗಳನ್ನು ನೆರೆಯಿಸಿ ವ್ಯರ್ಥವಾಗಿ ದುಂದುಗಾರಿಕೆ ಮಾಡುವುದು ಯೋಗ್ಯನೇ? ಉಳಿತಾಯದಲ್ಲಿಯೇ ದೇವಿ ಜಾತ್ರೆಯನ್ನು ಜರಗಿಸುವುದಾದರೆ ದೇವಿ ಜಾತ್ರೆಯಲ್ಲಿ ಕೋಣ ಮೇದ ಲಾದ ಪ್ರಾಣಿಗಳನ್ನೇ ಕಡಿಯಬೇಕೆಂದು ಯಾವ ಪುರಾಣದಲ್ಲಿ ಹೇಳಿದೆಯೋ ನಾಕಾಣೆ. ಸರ್ವರೂ ದೇವಿಯ ಮಕ್ಕಳೆಂದು ನಂಬುವ ನಾವು ಆಕೆಯ ತೃಪ್ತಿಗಾಗಿ ಆಕೆಯ ಮಕ್ಕಳನ್ನೇ ಸಂಹರಿಸಿ ಆಕೆಯನ್ನು ತೃಪ್ತಿಪಡಿಸುವುದು ನ್ಯಾಯವೇ? ತಮ್ಮ ಮಕ್ಕಳ ಆಹುತಿಯೇ ತಮಗೆ ತೃಪ್ತಿಕರವಾದುದೆಂದು ಯಾರಾದರೂ ಬಯಸಬಹುದೇ? ಆದುದರಿಂದ ಇನ್ನಾದರೂ ಇಂಥ ಅಂಧ ಶ್ರದ್ಧೆಯ ದುಷ್ಟ ರೂಢಿಗೆ ಬಲಿಬೀಳದೆ ದೇಶ ಮತ್ತು ಧರ್ಮಪೋಷಕವಾದ ಕಾರ್ಯಗಳನ್ನೇ ಮಾಡುವುದು ಯೋಗ್ಯವಾಗಿದೆ."

—ಹುಬ್ಬಳ್ಳಿಯ ಆರ್ಯಸಮಾಜದವರು ಅನೇಕ ನಾಗರಿಕರ ಸಹಿಗಳಿಂದ ಕೂಡಿದ ಒಂದು ಪತ್ರವನ್ನು ಚಿಂತಾಮಣಿಯ ಮಹಾಲಕ್ಷ್ಮಮ್ಮನ ತಂದೆಗೆ ಬರೆದು ಅದರಲ್ಲಿ ಅವಳನ್ನು ಭ್ರಷ್ಟಳೆಂದು ತಿಳಿದು ಧರ್ಮಾಂತರ ಮಾಡಬೇಡಿರಿ. ಆರ್ಯ ಸಮಾಜಕ್ಕೆ ಒಪ್ಪಿಸಿದರೆ ವ್ಯವಸ್ಥೆ ಮಾಡುವೆನೆಂದು ಬರೆದಿರುವರು.

—ಅಲಾಹಾಬಾದಿನ ಈಸುವ ಮೇಲಾಟದಲ್ಲಿ ಜಯಂತಿದೇವಿಯೆಂಬ ೭ ವರ್ಷದ ಬಾಲಿಕೆಯು ಎರಡು ಸಾರೆ ಯಮುನಾ ನದಿಯ ಆಚೆಗೆ ಈಸಿದಳು.

ಸಮಾಚಾರ ಸಂಗ್ರಹ.

—ನ್ಯೂಯಾರ್ಕ್ ಪಟ್ಟಣದ ತೋಟವೊಂದರಲ್ಲಿ ೧೦೦ ವರುಷಕ್ಕೊಮ್ಮೆ ಮಾತ್ರ ಹೂ ಬಿಡುವ ವಿಚಿತ್ರ ಗಿಡವೊಂದಿರುವದು. ಹೂಬಿಡುವಾಗ ದೇಟಿನಲ್ಲಿ ೬೦೦ ಹೂಗಳಿರುವವು.

—ಬಾಲಾಘಾಟ ಜಿಲ್ಲೆಯ ಲಾಂಜಿ ಹಳ್ಳಿಯಲ್ಲಿ ಕೋಟೇಶ್ವರ ದೇವಸ್ಥಾನವು ಹರಿಜನರಿಗೆ ತೆರೆಯಲ್ಪಟ್ಟಿದೆ. ಮಹಾತ್ಮರು ಆ ದೇವದರ್ಶನ ಮಾಡಲು ಬರಬೇಕೆಂದು ಅಲ್ಲಿಯ ಪಟೇಲರು ಉಪವಾಸವ್ರತವನ್ನು ಕೈಕೊಂಡಿರುವರು.

—ನಂದಗಡದಲ್ಲಿ ಒಬ್ಬ ಹೆಣ್ಣುಮಗಳು ಹಡೆದ ಒಂದು ಕೂಸಿಗೆ ಹಣೆಯ ಮೇಲೆ ಎರಡು ಕಣ್ಣುಗಳುಂಟು. ಕವಿಗಳು ಕೋಡಿನಂತೆ ತಲೆಯಮೇಲಿರುವವು. ಆದರೆ ತಲೆ ಬುರುಡೆಯೇ ಇಲ್ಲವಂತೆ.

—ಧಾರವಾಡದಲ್ಲಿ ಕಿಲ್ಲೆಯ ಕಂದರದೊಳಗೆ ಬಿದ್ದ ಕೊಟ್ರಪ್ಪ ಎಂಬ ಹುಡುಗನನ್ನು ಪೋಲೀಸರು ಮೂರು ತಾಸುಗಳವರೆಗೆ ಒಳ್ಳೇ ಶ್ರಮಪಟ್ಟು ಹೊರಗೆ ತೆಗೆದರು.

—ಬಳ್ಳಾರಿಯಲ್ಲಿ 'ನವಸಂದೇಶ'ವೆಂಬ ಕ ಾ ವಾರಪತ್ರಿಕೆಯು ಹೊರಡುವದಂತೆ.

—ಕಲ್ಲೀಕೋಟೆಯಲ್ಲಿ ೧೮ ತಿಂಗಳ ಹಿಂದೆ ಇಸ್ಲಾಮಿ ಧರ್ಮವನ್ನು ಸ್ವೀಕರಿಸಿದ್ದ ಒಬ್ಬ ನಾಯರ್ ಯುವಕನು ಪುತಿಯಾರದ ಆರ್ಯ ಸಮಾಜದಲ್ಲಿ ಶುದ್ಧಿ ಪಡೆದು ಹಿಂದು ಧರ್ಮಿಯಾದನು.

—ಮುಂದಿನ ವರುಷದ ಏಪ್ರಿಲ್ ಆನೆಯ ತಾರೀಖಿಗೆ ಭಗವಾನ್ ಬುದ್ಧದೇವನ ತಿರೋಧಾನೆಯ ವರ್ಧಂತಿಯಾಗುವುದರಿಂದ ಆ ಕಾಲಕ್ಕೆ ಬೋಧಿಯೋದಲ್ಲಿ ಬಹು ವಿಜೃಂಭಣೆಯಿಂದ ಉತ್ಸವವು ಮಾಡಲ್ಪಡುವದು.

—ಮುಸಲ್ಮಾನರಿಗೆ ಸಂಬಂಧವಿದ್ದ ವ್ಯಾಜ್ಯಗಳು ಕೋರ್ಟಿನಲ್ಲಿ ನಡೆದಾಗ್ಗೆ ಶುಕ್ರವಾರದ ಅವರ ಪ್ರಾರ್ಥನೆಯ ಸಲುವಾಗಿ ಹಗಲು ೧೨ ಗಂಟೆಯಿಂದ ೧॥ ಗಂಟೆಯವರೆಗೆ ನ್ಯಾಯದ ಕೆಲಸವು ನಿಲ್ಲಿಸಲ್ಪಡಬೇಕೆಂದು ಮೈಸೂರು ಹೈಕೋರ್ಟಿನವರು ಆಜ್ಞೆ ಮಾಡಿದ್ದಾರೆ.

—೭ನೆಯ ತಾರೀಖಿನ ದಿವಸ ಮಹಾತ್ಮಾಜಿಯವರು ತಮ್ಮ ಪ್ರವಾಸನನ್ನು ಪ್ರಾರಂಭಿಸಿದ್ದು, ಅವರ ಸಂಗಡ ಶ್ರೀ. ಕಸ್ತೂರಿ ಬಾಯಿ, ಶೀರ ಬಜಾಜ, ಠಕ್ಕರ ಬಾಪಾ, ಗಂಗಾಧರರಾವ ದೇಶಪಾಂಡೆ ಇವರು ಇರುವರು.

—ಅಮೇರಿಕೆಯಲ್ಲಿಯ ೪೮ ಸಂಸ್ಥಾನಗಳಲ್ಲಿ ೩೬ ಸಂಸ್ಥಾನಗಳು ಮದ್ಯಪಾನ ನಿಲ್ಲಿಸುವ ಕಟ್ಟಳೆಯನ್ನು ತೆಗೆದುಹಾಕಬೇಕೆಂದು ತಿಳಿಸಿದ್ದಾರೆ.

—ಲಂಡನ್ನಿನಲ್ಲಿ ಮಹಾರಾಣಿ ಮೇರಿಯವರು ಮಿದ್ನಾಪುರದ ಹಿಂದಿನ ಕಲೆಕ್ಟರ ಬರ್ಜರ ಪತ್ನಿಯವರಿಗೆ ದರ್ಶನ ಕೊಟ್ಟು ಅರ್ಧ ತಾಸು ಸಂಭಾಷಣೆ ಮಾಡಿದರು.

—ಕ್ಯೂಬಾದಲ್ಲಿ ಪುನಃ ದೊಂಬಿಯೆದ್ದಿದೆ. ಅದರಲ್ಲಿ ೫೦ ಜನರ ಕೊಲೆಯಾಗಿರೆಯಲ್ಲದೆ ೧೫೫ ಜನರು ಗಾಯ ಹೊಂದಿದ್ದಾರೆ.

—ಭಾಯಿಪರಮಾನಂದರು ಮುಂಬಯಿಗೆ ಬಂದಿದ್ದು ವಿವಿಧ ಸ್ಥಾನಗಳಲ್ಲಿ ಹಿಂದು ಸಂಘಟನೆ ಮತ್ತು ಜಾತಿ ವಿಷಯಕ ನಿರ್ಣಯ ಇವುಗಳ ಮೇಲೆ ಅವರ ಭಾಷಣಗಳಾದವು.

—ಮಿದ್ನಾಪುರ ಕಲೆಕ್ಟರ ಮಿ. ಬರ್ಜರವರ ಕೊಲೆಮಾಡಿದ ಆರೋಪದಿಂದ ಹಿಡಿಯಲ್ಪಟ್ಟ ೩೯ ಜನರಲ್ಲಿ ೩೬ ಜನರನ್ನು ಬಿಟ್ಟು ಕೊಟ್ಟರು. ಆದರೆ ಕ್ರಾಂತಿಕಾರಕರ ಕಟ್ಟಳೆಯ ಮೇರೆಗೆ ಪುನಃ ಅವರನ್ನು ಬಂಧಿಸಿದರು.

—ಹೈದರಾಬಾದ ನಿಜಾಮ ಸಾಹೇಬರು ತಮ್ಮ ವರ್ಧಂತಿ ಮಹೋತ್ಸವದ ಕಾರಣವಾಗಿ ೪೩ ಲಕ್ಷ ರೂಪಾಯಿ ಹಣವನ್ನು ಬಿಟ್ಟು ಕೊಟ್ಟಿದ್ದಾರೆ.

—ಕಾಲೀ ಚರಣ ಕೃತ, ಕುರಾನಿನ ಹಿಂದೀ ಭಾಷಾಂತರವನ್ನು ನಿಜಾಮರು ತಮ್ಮ ಸಂಸ್ಥಾನದ ಸೀಮೆಯಲ್ಲಿ ಬರಕೂಡದೆಂದು ನಿರ್ಬಂಧಿಸಿದ್ದು ಅದು ರದ್ದಿನಲ್ಲಿ ಜಪ್ತು ಮಾಡಬೇಕೆಂದು ವಿಧಿಸಿದ್ದಾರೆ.

—ಸೈಜಾಮು ಸರಕಾರದವರು ತಮ್ಮ ಸಂಸ್ಥಾನದಲ್ಲಿ ಹೊರಗಿನಿಂದ ಬರುವ ಬೆಣ್ಣೆಯಮೇಲೆ ೧೦೦ಕ್ಕೆ ೫ರಂತೆ ಕರ ಕೂಡಿಸಿರುವರು.

—ಮಿ. ಬರ್ಜರವರ ಕೊಲೆಯ ಆರೋಪದಿಂದ ಮತ್ತೆ ಮೂರನ್ನು ಬಂಧಿಸಿದ್ದಾರೆ

—ವರ್ಧಾ ಆಶ್ರಮದಲ್ಲಿ ಒಬ್ಬ ಜರ್ಮನ್ ನಾಜೀಯ ಗಾಂಧೀ ತತ್ವವನ್ನು ಅಭ್ಯಾಸ ಮಾಡುವುದಕ್ಕಾಗಿ ಬಂದಿದ್ದಾನೆ.

—ಸೊಲ್ಲಾಪುರದಲ್ಲಿ ರೆ. ಸಿ. ಎಫ್. ಆಂಡ್ರೂಜರವರು ಒಂದು ಧರ್ಮಾರ್ಥ ಔಷಧಾಲಯದ ಶಂಕುಸ್ಥಾಪನೆ ಮಾಡಿದರು. ಈ ಕಾಲಕ್ಕೆ ಮುನಸಿವಾಲಿಟಿಯವರು ಅದಿಜನವಸತಿಗೆ ದುರ್ಲಕ್ಷ ಮಾಡಿದುದಕ್ಕಾಗಿ ಬಲವಾಗಿ ಟೀಕಿಸಿದರು.

—ಮಹಾತ್ಮಾ ಗಾಂಧಿ ಮತ್ತು ಪಂ. ಜವಾಹರಲಾಲರ ಭೇಟಿಯಾಗುವ ಕಾಲವನ್ನು ವೇಳೆಯ ಅಭಾವದ ಮೂಲಕ ಮುಂದೂಡಹಾಕಿದ್ದಾರೆ.

—ಮುಂಬಯಿ ಸರಕಾರದವರು ಶ್ರೀ. ನಿಥ್ಮಲಭಾಯಿ ಪಟೇರವರ ಅಂತ್ಯ ಸಂಸ್ಕಾರದ ದಿವಸ ಸರದಾರ ವಲ್ಲಭಭಾಯಿ ಪಟೇರವರನ್ನು ಏಕೆ ಬಿಡುಗಡೆ ಮಾಡಲಿಲ್ಲವೆಂಬುದರ ಸಲುವಾಗಿ ಪ್ರಕಾರ ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ—

ತಾ. ೯ ರಿಂದ ೧೫ನೆಯ ನವ್ಹೆಂಬರ್‌ದವರೆಗೆ ರಾಜಕೀಯ ಭಾಷಣ ಮಾಡಬಾರದು, ಅಥವಾ ರಾಜಕೀಯ ಚಳವಳಿಯ ಭಾಗವಹಿಸಕೂಡದು ಮತ್ತು ನಿಶ್ಚಯಿಸಿದ ಸ್ಥಳದಲ್ಲಿ ಪುನಃ ಇಳಿದುಕೊಂಡು ಹೋಗಲು ಕಾಯುತ್ತಿರಬೇಕು. ಈ ಪ್ರಕಾರ ಒಪ್ಪಿಗೆಯನ್ನು ಕೊಟ್ಟಿದ್ದಾದರೆ ಸರಕಾರದವರು ಶ್ರೀ. ವಲ್ಲಭಭಾಯಿಯವರನ್ನು ಬಿಡುವುದಾಗಿ ಅವರಿಗೆ ತಿಳಿಸಿದರು. ಆದರೆ ಸರದಾರ ವಲ್ಲಭಭಾಯಿಯವರು ಆ ಪ್ರಕಾರ ಆಶ್ವಾಸನವನ್ನೀಯಲು ಶಕ್ಯವಿಲ್ಲವೆಂದು ತಿಳಿಸಿದುದರಿಂದ ಸರಕಾರದವರು ಅವರನ್ನು ಬಿಡುಗಡೆ ಮಾಡಲಿಲ್ಲ.

—ರಾಜಾ ನಾದಿರಶಹಾರವರ ಸ್ಮರಣಾರ್ಥವಾಗಿ ಮುಂಬೈ ಕಾರ್ಪೋರೇಶನ್ನು ತಾ. ೯ನೆಯ ದಿವಸ ನಿಲ್ಲಿಸಲ್ಪಟ್ಟಿದ್ದಿತು.

—ದಿವಂಗತ ಡಾ. ಆನಿಬೇಸ್ಂಟ್ ಇವರ ಒಟ್ಟು ಆಸ್ತಿಯು ೬೦೦೦ ಪೌಂಡು ಇರುತ್ತದೆ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಪೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಸೈಪಾರ್ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಯೆ "

ಕ್ರಿಮಿನಾಶಕ ದಂತಮಂಜನವನ್ನೆ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮೌಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್
ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ರಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಧಳಧಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ರಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಪ್ಪಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು—	೪ ರೂಪಾಯಿ
ಭಾಸ್ಕರ ಪ್ರಕಾಶ—	೧೧ ,,
ಗುಂಗಾಡ ನಾಶಕ—	೧೧ ,,
ಬೇಳಿನ ನಾಶ—	೧೧ ,,
೧೨ ತಗಣಿ ಶತ್ರು ಬಾಟ್ಲಿ—	೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ದೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ದೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾಯಣಗೂ ಅಂಜುವವನಲ್ಲ।

ಕೂಡಲಸಂಗಮದೇವ ಬಿಜಾಪುರ ಜಿಲ್ಲೆ ತೇರದಾಳ ತಾಲೂಕಿನ ಮಹಾನುಭಾವಿ ಬಸವಣ್ಣನವರು.

SANGAM CLOTH STORES

Prop: M. S. Hundekar & Co.,

ಸಂಪಾದಕರು:-

ಶ್ರೀ ಹರ್ಡೀಕರ ಮುಂಜಪ್ಪನವರು, P.O: TERDAL-ತೇರದಾಳ

Dt. Bijapur, (Karnataka)

ಬಿಡಿಸಂಚಿಕೆಗೆ ೧ ಆಣೆ.

ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೪ ನೆಯ ಡಿಸಂಬರ ೧೯೩೩. | ಸಂಚಿಕೆ ೧

ಜನಸೇವೆಯೇ ದೇವರಸೇವೆ

ರಿಝರ್ವ ಬ್ಯಾಂಕಿನ ನಿಷ್ಠುರತೆ.

ಈ ಯೋಜನೆಯು ಸ್ವಾರ್ಥಪೂರಿತ ಧೂಮ್ರ ಪರದೆಯಾಗಿದೆ.

ಕೆ. ಸಿ ನಿಯೋಗಿ.

ಆರ್ಥಿಕ ಸಚಿವರು ಹೇಗೆಹೇಗೆ ಈ ೧೪ ಪೈಸೆಯ ಭಾವವನ್ನು ಸಮರ್ಥಿಸುವರೋ ಹಾಗೆಹಾಗೆ ನಾವು ಅದರ ವಿಷಯಕ್ಕೆ ಹೆಚ್ಚು ಸಂಶಯ ಪಡಹತ್ತಿದ್ದೇನೆ.

ಸರ್. ಕಾವಸಾಜಿ ಜಹಾಂಗೀರ.

ಸ್ವರಾಜ್ಯ ಪಕ್ಷದ ಮುಂದಾಳುಗಳಾದ ಮಿ. ಕೆ. ಸಿ. ನಿಯೋಗಿಯವರು ಕೇಂದ್ರ ಶಾಸನ ಸಭೆಯಲ್ಲಿ ರಿಝರ್ವ ಬ್ಯಾಂಕಿನ ಗೊತ್ತುವಳಿಯ ವಿಷಯವಾಗಿ ಟೀಕಿಸುತ್ತ "ಈ ಬ್ಯಾಂಕಿನ ಪಾಲುಗಳಲ್ಲಿ ೧೦೦ಕ್ಕೆ ೭೫ರಷ್ಟು ಪಾಲುಗಳು (SHARES) ಹಿಂದೀಯರಿಗೇ ಹೋಗುವವೆಂದು ಹೇಳುತ್ತಾರೆ. ಆದರೆ ಈ ಪಾಲುಗಳಲ್ಲಿ ಬಹು ಭಾಗವನ್ನು ವಿದೇಶೀಯರೇ ಆಕ್ರಮಿಸುವರು. ಈ ಯೋಜನೆಯು ಪಾಲುಗಾರರ ಸ್ವಾರ್ಥತೆಯನ್ನು ರಕ್ಷಿಸಲು ಒಂದು ಧೂಮ್ರ ಪರದೆಯಾಗಿದೆ." ಎಂದು ಹೇಳಿದರು.

ದೇಹವೇ ದೇವಾಲಯ

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಒಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಕೆ ಚೆನಬಸನಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ರಾಮಜಿ— ಯಾಕರೀ ಶೆಟ್ಟರೇ? ಹೀಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕ್ಯಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹೆತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಜೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷಪಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಪೂರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೆ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ದೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಿ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಜೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಡಿಶೆಂಬರ್ ತಾರೀಖು ೪ನೆಯ ಸೋಮವಾರ | ಸಂಚಿಕೆ ೧೭.

ವರ್ಹಾಡದ ಭವಿತವ್ಯತೆಯ ವಿಶದೀಕರಣ!

ಸ್ವಾಮಿತ್ವವು ನಿಝಾಮ ಸಾಹೇಬರದು.

ಆದರೆ ರಾಜ್ಯಕಾರಭಾರವು ಪೂರ್ವದಂತೆ.

ಕಳೆದ ೩ಂಗಳ ೨೯ನೆಯ ತಾರೀಖಿನ ದಿವಸ ನಿಝಾಮ ಸಾಹೇಬರು ಜೌಮಹಲ ರಾಜಭುವನದಲ್ಲಿ ವ್ಹಾಯಿಸರಾಯರ ಸನ್ಮಾನಕ್ಕಾಗಿ ಒಳ್ಳೇ ವೈಭವದ ಭೋಜನ ಸಮಾರಂಭವನ್ನು ಮಾಡಿಸಿದ್ದರು. ಆ ಕಾಲಕ್ಕೆ ೩ಳಂರ ಮೇಲೆ ದೊಡ್ಡ ದೊಡ್ಡ ಅಧಿಕಾರಸ್ಥರು ಸೇರಿದ್ದರು.

ಆ ಪ್ರಸಂಗದಲ್ಲಿ ನಿಝಾಮ ಸಾಹೇಬರು ಮುಖ್ಯ ಮಂತ್ರಿಗಳೂ ಕಾರ್ಯಕಾರಿ ಸಭೆಯ ಅಧ್ಯಕ್ಷರೂ ಆದ ಸರ. ಕೆಶನ ಪ್ರಸಾದರವರ ಮತ್ತು ಸಚಿವರಾದ ಸರ ಅಕಬರ ಹೈದರಿಯವರ ಕಾರ್ಯಕ್ಷಮತೆಯ ಗೌರವಪೂರ್ಣ ಉಲ್ಲೇಖವನ್ನು ಮಾಡಿ ಹೇಳಿದುದೇನಂದರೆ—"ಪ್ರಾಚೀನ ಕಾಲದಿಂದಲೂ ಹೈದರಾಬಾದ ಸಂಸ್ಥಾನವು ಬ್ರಿಟಿಶ ಸರಕಾರದ ಒಳ್ಳೇ ವಿಶ್ವಾಸದ ಮಿತ್ರನಾಗಿರುವುದಕ್ಕೆ ಸಂಸ್ಥಾನಕ್ಕೆ ಅಭಿಮಾನವೆನಿಸುತ್ತಿದೆ. ಸಂಸ್ಥಾನದ ಸರ್ವಾಂಗೋನ್ನತಿಯಾಗಲಿಕ್ಕೆ ಅದರ ಪೂರ್ಣ ಲಕ್ಷವಿದೆ. ಹಿಂದುಸ್ಥಾನದಲ್ಲಿಯೇ ದ್ವಿತೀಯ ಸ್ಥಾನವನ್ನು ಪಡೆದಿರುವ ನಿಝಾಮ ಸಾಗರವು ಒಕ್ಕಲತನದ ಅನುಕೂಲಕ್ಕಾಗಿ ಕಟ್ಟಿ ಪೂರ್ಣವಾಗಿದೆ. ಸದ್ಯಕ್ಕೆ ೯೦ ಮೈಲು ಉದ್ದವಾದ ಹೊಸ ರಾಜಮಾರ್ಗಗಳು ಮಾಡಲ್ಪಟ್ಟಿವೆ ಪದಾರ್ಥಗಳ ಬೆಲೆಯು ಇಳಿದದ್ದರಿಂದ ಹೊಲದ ಉತ್ಪನ್ನವು ಉಚಿತವಾಗಿ ಬಿಡಲ್ಪಟ್ಟಿದೆ. ಆದರೂ ಸಂಸಾರಿ ಲೆಖ್ಖವಲ್ಲಿ ಪ್ರತಿ ವರುಷ ಉಳಿತಾಯವಾಗಿದೆ." ಈ ರೀತಿ ಭಾಷಣವಾದ ಮೇಲೆ ವ್ಹಾಯಿಸ್ ರಾಯರು ತಮ್ಮ ಭಾಷಣದಲ್ಲಿ ಈ ಪ್ರಕಾರ ಹೇಳಿದರು—

"ಈ ಅತ್ಯಂತ ಮಹತ್ವದ ಕಾಲದಲ್ಲಿ ಹೈದರಾಬಾದ ಸಂಸ್ಥಾನದ ಸರ್ವಾಂಗೋನ್ನತಿಯಾಗುತ್ತಿರುವುದನ್ನು ನೋಡಿದರೆ ನನಗೆ ಆನಂದವೆನಿಸುತ್ತಿದೆ. ಇಂದಿನ ಈ ಸಂಸ್ಮರಣೀಯ ಪ್ರಸಂಗದಲ್ಲಿ ನಾನು ವರ್ಹಾಡದ ಭವಿತವ್ಯತೆಯನ್ನು ಸ್ಪಷ್ಟೀಕರಿಸುತ್ತೇನೆ ೧೯೦೩ನೆಯ ಇಸವಿಯಿಂದ ವರ್ಹಾಡದ ರಾಜ್ಯವ್ಯವಸ್ಥೆಯು ಬ್ರಿಟಿಶ ಸರಕಾರದ ಕಡೆಗೆ ಒಪ್ಪಿಸಲ್ಪಟ್ಟಿದೆ. ಆದರೂ ವರ್ಹಾಡದ ಸ್ವಾಮಿತ್ವವು ನಿಝಾಮ ಸಾಹೇಬರದೇ ಇರುತ್ತದೆ. ಸದ್ಯಕ್ಕೆ ಅದು ಅಬಾಧಿತವಾಗಿರುವಂತೆಯೇ ಮುಂದೆಯೂ ಇರುವದು. ಯಾವ ಪ್ರಕಾರ ಸ್ವಾಮಿತ್ವವು ನಿಝಾಮ ಸಾಹೇಬರದಿರುವುದೋ ಅದೇ ಪ್ರಕಾರ ವರ್ಹಾಡದ ಜಿಲ್ಲೆಗಳ ರಾಜ್ಯವ್ಯವಸ್ಥೆಯು ಮಧ್ಯ ಪ್ರಾಂತದ ರಾಜ್ಯ ವ್ಯವಸ್ಥೆಯ ಸಂಗಡವೇ ಮೊದಲಿನಂತೆಯೇ ನಡೆಯುವದು. ಮಧ್ಯ ಪ್ರಾಂತ ಮತ್ತು ವರ್ಹಾಡಗಳ ಸಂಯುಕ್ತ ಪ್ರಾಂತವನ್ನು ಸಂಯುಕ್ತ ಘಟನೆಯಲ್ಲಿ ಸೇರಿಸಲಿಕ್ಕೆ ನಿಝಾಮ ಸಾಹೇಬರು ಅನುಜ್ಞೆಯನ್ನು ಕೊಟ್ಟುದಕ್ಕಾಗಿ ಆನಂದವಾಗುತ್ತಿದೆ. ರಾಜ್ಯಕಾರಭಾರದ ವಿಶದೀಕರಣದ ವಿಷಯದಲ್ಲಿ ಇನ್ನು ಮುಂದೆ ಯಾವ ಯಾವ ವ್ಯವಸ್ಥೆ ಮಾಡಬೇಕೆಂಬುದನ್ನು ಈಗಲೇ ಹೇಳಲು ಬರುವಂತಿಲ್ಲ ಆ ಸಂಗತಿಗಳೆಲ್ಲ ಯಥಾವಕಾಶವಾಗಿ ಆಗೇ ಆಗುವವು.

—ಶ್ರೀ. ಕಸ್ತೂರಿಬಾಯಿ ಗಾಂಧಿಯವರು ೨೯ನೆಯ ತಾರೀಖಿನ ದಿವಸ ರಾಸ ಗ್ರಾವುಕ್ಕೆ ಹೊರಟ ಕಾರಣದಿಂದ ಬಂಧಿಸಲ್ಪಟ್ಟು ೧೫ನೆಯ ತಾರೀಖಿಗೆ ಬಿಡಲ್ಪಟ್ಟರು. ಪುನಃ ಇವರನ್ನು ಬಂಧಿಸಿ ೫ ತಿಂಗಳ ಶಿಕ್ಷೆ ವಿಧಿಸಿದರು.

—ಸೌ. ಸರೋಜಿನಿ ನಾಯಿಡು, ಪಂ. ಜವಾಹರಲಾಲ ನೆಹರು ಮೊದಲಾದ ರಾಷ್ಟ್ರ ಪ್ರಮುಖರು ಮಹಾತ್ಮಾಜಿಯವರನ್ನು ಜಬಲಪುರದಲ್ಲಿ ಕಾಣುವರು.

೧೯ ನೆಯ ಸಾಹಿತ್ಯ ಸಮ್ಮೇಲನದ ಸ್ವಾಗತ ಸಭೆಯು.

ಹುಬ್ಬಳ್ಳಿಯಲ್ಲಿ ಕೂಡತಕ್ಕ ಸಾಹಿತ್ಯ ಸಮ್ಮೇಲನದ ಸ್ವಾಗತ ಸಭೆಯು ತಾ ೧೮-೧೧-೧೯೩೬ರಲ್ಲಿ ರಾತ್ರಿ ಬಹಳೊಂದರ ಜನಬಸಪ್ಪ ಶಿರಹಟ್ಟಿ ಕಾಟನ್‌ಸೇಲ್ ಸೊಸಾಯಿಟಿ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಭೆಗೆ ೫೦-೬೦ ಸ್ವಾಗತ ಸಂಘದ ಸದಸ್ಯರು ಕೂಡಿದ್ದರು. ಮೊದಲು ಇದುವರೆಗೂ ತಾತ್ಕಾಲಿಕ ಕಮಿಟಿಯವರು ಮಾಡಿದ ಕೆಲಸಗಳ ವರದಿಯನ್ನು ಕಾರ್ಯದರ್ಶಿಗಳಾದ ವೇ|| ಚಂದ್ರಶೇಖರ ಶಾಸ್ತ್ರಿಗಳು ಓದಿ ಇನ್ನು ಮುಂದೆ ಸ್ವಾಗತ ಸಂಘದ ಸದಸ್ಯರು ಸಮ್ಮೇಲನದ ಕಾರ್ಯವನ್ನು ತಮ್ಮ ಕೈಯಲ್ಲಿ ತೆಗೆದು ಕೊಂಡು ಮಾಡಬೇಕೆಂದು ಸೂಚಿಸಿದರು. ಆ ಮೇಲೆ ಶ್ರೀ ಗಾಂವಕರ ಬಿ. ಎ. ಮುನಸಿಪಲ್ ಆಡ್ಮಿನಿಸ್ಟ್ರೇಟರ್ಸ್ ಆಫೀಸರ ಇವರು ಪಾವಟೆಯವರು ಸ್ವಾಗತ ಸಂಘಾಧ್ಯಕ್ಷರಾಗಬೇಕೆಂದು ತಂದ ಠರಾವಿಗೆ ಶ್ರೀ. ಅಸುಂಡಿ ವಕೀಲರು ಅನುಮೋದನ ಕೊಟ್ಟರು, ಸರ್ವಾನುಮತದಿಂದ ಪಾವಟೆಯವರು ಸ್ವಾಗತ ಸಂಘಾಧ್ಯಕ್ಷರಾಗಿ ಆರಿಸಲ್ಪಟ್ಟರು. ವೇ|| ಚಂದ್ರಶೇಖರ ಶಾಸ್ತ್ರಿಗಳು ಜನರಲ್ ಸೆಕ್ರೆಟರಿಗಳಾಗಿಯೂ ಶ್ರೀ. ಮಲ್ಲೇಶಪ್ಪನವರು ಸಾದರಹಳ್ಳಿ ಇವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಪರಿಷತ್ತಿನ ತಾರೀಖು.

ಡಿಸೆಂಬರ ೨೯-೩೦-೩೧ನೇ ತಾರೀಖುಗಳಲ್ಲಿ ಪರಿಷತ್ತು ನಡೆಯಬೇಕೆಂದು ನಿರ್ಣಯವಾಯಿತು.

ಕಾರ್ಯಕಾರೀ ಮಂಡಲ

ಪರಿಷತ್ತಿನ ಕಾರ್ಯಗಳನ್ನು ಮಾಡಲಿಕ್ಕೆ ೧೬ ಜನರಿಂದೊಂದು ಕಮಿಟಿಯು ನೇಮಿಸಲ್ಪಟ್ಟಿತು ೫ ಜನರು ಕೂಡಿದರೆ ಸಭೆಯನ್ನು ನಡೆಯಿಸಬಹುದು. ಇದಲ್ಲದೆ ಶ್ರೀ. ಗಾಂವಕರ ಇವರು ಕನಿಸಮ್ಮೇಲನದ ಸ್ವಾಗತ ಸಂಘಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಪ್ರಕಟನಾ ಶಾಖೆ.

೧ ಶ್ರೀ. ಗಾಂವಕರ ಬಿ. ಎ. ಮುನಿಸಿಪಲ್ ಆಡ್ಮಿನಿಸ್ಟ್ರೇಟರ್ಸ್ ಆಫೀಸರ, ೨ ಜಿ. ಎಮ್. ಮಿರ್ಜಿ ಬಿ. ಎ. ಎಲ್. ಎಲ್. ಬಿ. ಪ್ಲೀ. ಎಲ್. ಎಸ್. ವಕೀಲರು ಇವರು ನಿಯಮಿಸಲ್ಪಟ್ಟರು.

ಪ್ರದರ್ಶನದ ಕಾರ್ಯದರ್ಶಿಗಳು.

ಬಿ. ಜಿ. ಸರಾಫ ಶಿವಶಂಕರಪ್ಪ ದೇವಪುರ.

೧೯ ನೆಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು.

೧ ಶ್ರೀಮಾನ್ ರಾಜಕವಿಭೂಷಣ ಪೆಜ್. ಲಿಂಗರಾಜರು (ನಿವೃತ್ತ ಮುಜರಾಯಿ ಭಕ್ಷಿ) ಅರಮನೆಯ ವ್ಯವಸ್ಥಾಪಕರು ಮೈಸೂರ ಇವರು ಒಪ್ಪಿಕೊಂಡಿರುತ್ತಾರೆ. ಇವರು ರಾಮಾಯಣ ಯದುನಂದನವಿಜಯ ಮೊದಲಾದ ಕಾವ್ಯಗಳನ್ನು ಬರೆದು ಸಾಹಿತ್ಯ ಸೇವೆಯನ್ನು ಮಾಡಿದವರೂ ರಾಜಮನೆತನದವರೂ ಇದ್ದು ಒಳ್ಳೇ ಕನ್ನಡಾಭಿಮಾನಿಗಳಿರುತ್ತಾರೆ.

೨ ಕವಿ ಸಮ್ಮೇಲನಕ್ಕೆ ಕೆ. ಪುಟ್ಟಸ್ವಾ ಎಂ. ಎ. ಪ್ರೊಫೇಸರ ಮಹಾರಾಜ ಕಾಲೇಜ ಮೈಸೂರು ಇವರು ಒಪ್ಪಿಕೊಂಡಿರುತ್ತಾರೆ. ಶ್ರೀ. ಪುಟ್ಟಸ್ವಾನವರು ತರುಣರಿದ್ದು ಈಗಾಗಲೇ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ಚಿಕ್ಕ ವಯಸ್ಸಿನವರಿದ್ದರೂ ಅಖಿಲ ಕರ್ನಾಟಕಕ್ಕೆ ಪರಿಚಿತರಿರುತ್ತಾರೆ.

ಮಹಾತ್ಮಾಜಿಯವರ ಮಹಾ ಯಾತ್ರೆ.

ಮಹಾತ್ಮಾಜಿಯವರು ರಾಯಪುರವನ್ನು ಸಂದರ್ಶಿಸಿ ಅಲ್ಲಿಯ ಸ್ವದೇಶೀ ಪ್ರದರ್ಶನವನ್ನು ತೆರೆದರು. ನೂರಾರು ಮೈಲುಗಳ ಮೇಲಿಂದಲು ಸಹ ಜನರು ಅವರ ದರ್ಶನಕ್ಕೆ ಬಂದಿದ್ದರು. ಪ್ರದರ್ಶನಕ್ಕಾಗಿ ನೆರೆದ ಜನರನ್ನುದ್ದೇಶಿಸಿ ಮಹಾತ್ಮಾಜಿಯವರು ಅರ್ಧ ತಾಸಿನವರೆಗೆ ಭಾಷಣ ಮಾಡಿದರು. ಅಲ್ಲಿ ಅವರಿಗೆ ೬೬೦೦ ರೂ. ಗಳನ್ನು ಕೊಡಲಾಯಿತು. ಈ ಜಿಲ್ಲೆಯಲ್ಲಿ ಹರಿಜನ ಸೇವೆಗಾಗಿ ೧೦ ಸಾವಿರ ರೂ. ಕೂಡಿಸುವ ಸಂಭವವಿದೆ.

ರಾಯಪುರದಲ್ಲಿ ಖಾದಿ ಪ್ರದರ್ಶನ ಸಮಾರಂಭದ ಕಾಲದಲ್ಲಿ ಮಹಾತ್ಮಾಜಿಯವರು "ಖಾದಿಯು ಸ್ವದೇಶಿಯ ಮಧ್ಯ ಬಿಂದುವಾಗಿದೆ. ಯಾವ ದೇಶದಲ್ಲಿ ೧೦೦ಕ್ಕೆ ೯೫ ರಷ್ಟು ಜನರು ಭೂಮಿಯ ಮೇಲೆಯೇ ಉಪಜೀವಿಸುತ್ತಿರುವರೋ ಆ ಭೂಮಿಯಲ್ಲಿ ಎಲ್ಲಾ ಪ್ರದೇಶವು ಯಂತ್ರಗಳಿಂದಲೇ ಸಾಗುವಳಿ ಮಾಡಲ್ಪಟ್ಟರೂ ಮತ್ತೊಂದು ಮನೆಗೆಲಸವನ್ನು ಮಾಡಲು ಬೇಕಾಗುತ್ತದೆ. ಬಹು ಪ್ರಾಚೀನ ಕಾಲದಿಂದಲೂ ಹಿಂದೀ ಒಕ್ಕಲಿಗನು ರಾಟೆಯ ಉದ್ಯೋಗವನ್ನು ಕೈಕೊಂಡಿದ್ದಾನೆ. ನಾವು ಬೇರೆ ಅನೇಕ ಉದ್ಯೋಗಗಳನ್ನು ಮಾಡಿದರೂ ಖಾದಿಯನ್ನು ಮರೆಯಲಾಗದು." ಎಂದು ಹೇಳಿದರು.

ಮಹಾತ್ಮಾಜಿಯವರ ಪ್ರವಾಸದಲ್ಲಿ ಒಬ್ಬ ಸನ್ಯಾಸಿಯು ಸತ್ಯಾಗ್ರಹ ಹೊಟ್ಟಿದ್ದನು ಅವನು ಯಾವಾಗಲೂ ಅವರ ಮೋಟಾರಿನ ಮುಂದೆ ಅಡ್ಡಬೀಳುವನು. ಅಕೋಲಾದಲ್ಲಿ ಮಹಾತ್ಮರು ಅವನನ್ನು ಕರೆದು ಶಾಂತ ರೀತಿಯಿಂದ ವರ್ತಿಸಲಿಕ್ಕೆ ತಿಳಿಸಿದರು. ಅದಕ್ಕವನು ತಾವು ಪ್ರವಾಸವನ್ನು ಬಿಟ್ಟುಬಿಡಿರೆಂದನು. ಅದಕ್ಕವರು ಅವನನ್ನು ಪೋಲೀಸರ ಸ್ವಾಧೀನಕ್ಕೆ ಕೊಡುವೆವೆಂದರು. ಅವನು "ಬಹಳೇ ಒಳ್ಳೆಯದಾಯಿತು; ನನಗೆ ಪೋಲೀಸರಾಗಲಿ ಸ್ವಯಂಸೇವಕರಾಗಲಿ ಹೊಡೆಯಬೇಕಾಗಿದೆ. ಅಂದರೆ ಹಿಂಸೆಯು ಸಂಭವಿಸಿ ನೀವು ಪ್ರವಾಸವನ್ನು ಬಿಟ್ಟುಕೊಡುವಿರೆಂದನು." ಮಹಾತ್ಮಾಜಿಯವರು ತಾವು ಅಂಥ ಹಿಂಸೆ ಮಾಡುವದಿಲ್ಲೆಂದು ತಿಳಿಸಲು ಅವನು ತಾನೂ ಆಡ್ಡಿ ಮಾಡುವದನ್ನು ಬಿಡುವುದಿಲ್ಲೆಂದೂ ಬೇಕಾದರೆ ತಾವು ಯೋಗ್ಯ ಮಾರ್ಗವನ್ನು ತೋರಿಸಬೇಕೆಂದೂ ಹೇಳಿದನು. ಹಾಗಾದರೆ ನೀನು ಕಾಶಿಗೆ ಹೋಗಿ ನನ್ನ ಶಪ್ತಿನ ಸಲುವಾಗಿ ನಾನು ಮಾಡಿದಂತೆ ಉಪವಾಸವನ್ನಾಚರಿಸೆಂದು ಮಹಾತ್ಮಾಜಿಯವರು ಹೇಳಿದರು. ಅದು ತನ್ನಿಂದಾಗದೆಂದು ಅವನು ಉತ್ತರ ಕೊಟ್ಟನು. ಹಾಗಾದರೆ ನಿನ್ನನ್ನು ಕಳಿಸಿದವರಲ್ಲಿಗೆ ಹೋಗಿ ವಾದದಿಂದಾಗಲಿ ಪ್ರಾರ್ಥನೆಯಿಂದಾಗಲಿ ನನ್ನ ಮನಸ್ಸನ್ನು ತಿರುಗಿಸಬೇಕೆಂದು ಅವರಿಗೆ ತಿಳಿಸು. ಅವರಿಗೆ ಹೀಗೆ ಮಾಡುವದಾಗದಿದ್ದರೆ ನಾನು ಮಾಡುವದನ್ನು ಸಹಿಸಿಯೇ ತೀರುವರು. ಅವರು ಮಾಡುವದನ್ನು ನಾನು ಸಹಿಸಿಕೊಳುತ್ತಿರುವದಿಲ್ಲವೆ? ಎಂದು ಹೇಳಿ ಅವನನ್ನು ಸಮಾಧಾನ ಪಡಿಸಿ, ಕಳಿಸಿದರು.

ರಾಯಪುರದಿಂದ ಮಹಾತ್ಮಾಜಿಯವರು ದುರ್ಗಕ್ಕೆ ಹೋದರು. ಅಲ್ಲಿಯ ಜನರು ೨೭೦೦ ರೂ. ಕೊಟ್ಟರು. ಅಲ್ಲಿಂದ ಮೇಲಿಂದ ಮೇಲೆ ಪಯಣ ಮಾಡುತ್ತ ೪೪ ತಾಸುಗಳಲ್ಲಿ ೨೧೦ ಮೈಲು ಪ್ರವಾಸ ಮಾಡಿದರು. ಮಾರ್ಗದಲ್ಲಿ ೮ ಸಭೆಗಳಲ್ಲಿ ಭಾಷಣ ಮಾಡಿ ಕಡೆಗೆ ಸೇವಸಿಗೆ ಮುಟ್ಟಿದರು. ಸೇವನಿಯ ಜನರು ಒಳ್ಳೇ ವೈಭವದ ಸತ್ಕಾರ ಮಾಡಿದರು. ಅಲ್ಲಿಯ ಸನಾತನಿಗಳು ಸಹ ಉದಾರತನದಿಂದ ವರ್ತಿಸಿದರು.

ಮಹಾ ಶಿವಶರಣರಾದ

ನಾವದಿಗಿ ಶ್ರೀ. ರೇವಪ್ಪನವರು

ಭಗವಾನ್ ಬಸವೇಶ್ವರನ ಕಾಲದಲ್ಲಿ ಕಲ್ಯಾಣ ಪ್ರದೇಶವು ಶರಣ ತಿಂಥಿಣಿಯಿಂದ ಪರಿಶೋಭಿಸುತ್ತಿದ್ದಿತು. ರಜನಿ ದೇವಿಯು ಸನಾಥಳಾಗಿ ಅಸಂಖ್ಯ ಜ್ಯೋತಿರ್ಮಣಿಗಳೊಂದಿಗೆ ಭೂಮ್ಯಾಕಾಶವನ್ನು ಬೆಳಗುತ್ತಿರುವಂತೆ ಕಲ್ಯಾಣ ಸೀಮೆಯು ಆಂದು ಝಗಝಗಿಸುತ್ತಿದ್ದಿತು. ಶರಣರ ನೆಲೆಬೀಡಾದ ಆ ಭೂಮಿಯು ಇಂದಿಗೂ ಆ ಮಹಾತ್ಮರ ಅನುಪಮ ಕುರುಹುಗಳನ್ನೊಳಕೊಂಡು ವೀರಶೈವ ಜನಾಂಗಕ್ಕೆ ಪವಿತ್ರ ಸ್ಥಾನವಾಗಿತ್ತು. ಹೊಳೆಯುವ ನಕ್ಷತ್ರ ಸಮೂಹವು ಉಷಃಕಾಲ ಸಮೀಪಿಸಿದಂತೆ ಮತ್ಯ್ರಲೋಕಕ್ಕೆ ವಿರಳವಾಗುತ್ತಿದ್ದರೂ ಬೆಳಗಿನ ಜಾವದಲ್ಲಿ ಥಳ ಥಳಿಪ ಶುಕ್ರೋದಯವು ಪೂರ್ವದಿಕ್ಕಿನಲ್ಲುಂಟಾಗಿ ಹಿಂದಿನ ನಕ್ಷತ್ರಗಳ ಕಾಂತಿಯನ್ನು ಅರುಹುವಂತೆ ಅರ್ವಾಚೀನ ಕಾಲವಲ್ಲಿ ಶರಣ ಸಮೂಹವು ವಿರಳವಾಗುತ್ತಿದ್ದರೂ ಒಬ್ಬ ಶರಣರು ಮಾತ್ರ ಪೂರ್ವದ ವ್ರತ, ನಿಷ್ಠೆ, ಆಚಾರ, ವೀರಶೈವತ್ವಗಳನ್ನು ಕಲ್ಪನೆಗೆ ತಂದುಕೊಡುತ್ತಿದ್ದಾರೆ. ಇವರೇ ನಾವದಿಗಿಯ ಮಹಾ ಶರಣರಾದ ಶ್ರೀ ರೇವಪ್ಪನವರು.

ನಾವದಿಗಿಯು ಕಲ್ಯಾಣ ಪಟ್ಟಣದ ಈಶಾನ್ಯಕ್ಕೆ ೧೨-೧೩ ಮೈಲು ದೂರದಲ್ಲಿದೆ. ಇಲ್ಲಿಯ ಭೂಮಿಯು ಫಲವತ್ತಾಗಿರುವುದರಿಂದಲೂ ಮಳೆಯು ಪ್ರತಿವರುಷ ತಪ್ಪದೆ ಬೀಳುತ್ತಿರುವುದರಿಂದಲೂ ತೋಟಪಟ್ಟಿಗಳೂ, ಕೆರೆಕಾಲವೆಗಳೂ, ಗಿಡಬಳ್ಳಿಗಳೂ ಪ್ರತಿಯೊಂದು ಗ್ರಾಮದಲ್ಲಿ ರಮಣೀಯತೆಯಿಂದ ರಾರಾಜಿಸುವವು. ಜನರು ಪೂರ್ವದ ಸಾಂಪ್ರದಾಯದಂತೆ ನಡೆಯುವವರಾಗಿದ್ದು ಹೊಸ ಪುಧಾರಣೆಯನ್ನು ಎಳ್ಳಷ್ಟೂ ಅರಿಯರು. ಈಗೀಗ ಆ ಗ್ರಾಮದ ಕೆಲವು ಮೈಲು ಅಂತರದಲ್ಲಿಯೇ ಬೀದರದಿಂದ ಉದ್ಗೀರಕ್ಕೆ ಹೋಗುವ ಉಗಿಬಂಡಿಯ ಮಾರ್ಗವು ಮಾಡಲ್ಪಟ್ಟಿದೆ. ಇಲ್ಲದಿದ್ದರೆ ಉಗಿಬಂಡಿಯನ್ನು ನೋಡದವರೂ ಎಷ್ಟೋ ಜನರಿದ್ದರು.

ಇಂಥಗ್ರಾಮದಲ್ಲಿ ಒಂದು ಮಠವನ್ನು ಕಲ್ಪನೆಗೆ ತಂದುಕೊಳ್ಳಿರಿ. ಊರ ಹೊರಗೆ ಒಂದು ಮಠ. ಮಠದ ಸುತ್ತಲೂ ಕಬ್ಬಿನ ತೋಟಗಳು. ಬಲಭಾಗಕ್ಕೆ ಒಂದು ಭಾವಿ. ಭಾವಿಯ ಹತ್ತಿರವೇ ಆಗೋ ೮-೧೦ ಕಡಾಯಿಗಳು ಉರಿಯುತ್ತಲಿವೆ. ನೋಡಿರಿ ಹುಗ್ಗಿಯು ಸಿದ್ಧವಾಗುತ್ತಲಿದೆ. ಬದಿಯ ಬಾಗಿಲದಲ್ಲಿಯೇ ಹಾಯ್ದು ಮಠದೊಳಗೆ ಬನ್ನಿ. ನೂರಾರು ಜನರ ಪ್ರತಿದಿವಸದ ಅನ್ನಸಂತರ್ಪಣೆ ನಡೆದಿದೆ. ನಡೆಯಲಿ, ದಾಸೋಹವೇ ದಾಸೋಹ, ಇದೇ ಕಲ್ಯಾಣ ಸೀಮೆಯ ವೈಭವ.ಸುತ್ತಲಿನ ನೂರಾರು ಮೈಲುಗಳವರೆಗೆ ನಾವದಿಗಿ ರೇವಪ್ಪನವರ ದಾಸೋಹವನ್ನು ಅರಿಯದವರಿಲ್ಲ.

ಮಠದೊಂದು ಮೂಲೆಯಲ್ಲಿ ನಳನಳಿಸುವದೊಂದು ಅಶ್ವತ್ಥ ವೃಕ್ಷ. ನೆಲವೆಲ್ಲ ಸಾರಣೆಯಿಂದ ಶುದ್ಧವಾಗಿದೆ. ಸ್ವಚ್ಛವಾದ ಗದ್ದುಗೆ ಕಂಬಳಿಯ ಮೇಲೆ ಕುಳಿತಿರುವದೊಂದು ಮೂರ್ತಿ. ಮುಪ್ಪಿನ ವಯಸ್ಸು. ದೇಹವು ವೆಜ್ರದೇಹ. ಉಟ್ಟದ್ದೊಂದೇ ಧೋತರವು ಹೆಗಲಮೇಲೆ ಬಿದ್ದಿದೆ. ತೇಜಃಪುಂಜವಾದ ಕಣ್ಣುಗಳಿಂದ ತೀಕ್ಷ್ಣವಾದ ದೃಷ್ಟಿಯು ಎದುರಿಗೆ ಕುಳಿತ ಜನರ ಹೃದಯವನ್ನು ಭೇದಿಸಿ ನಡುಗಹಚ್ಚುತ್ತದೆ. ರಾಮಕೃಷ್ಣ ಪರಮಹಂಸರಂತೆ ಮಾತಿನಲ್ಲಿ ಹಳ್ಳಿಯ ಸಾಮ್ಯ. ವಾಣಿಯು ಬಹು ಸ್ಪಷ್ಟ. ಭೀತಿ ಭಿಡೆಗ ಳಿಷ್ಟೂ ಇಲ್ಲ. ಇವರೇ ಆ ಶರಣರು.

ಇವರು ಸಂಚಾರಕ್ಕೆ ಹೊರಟರೆ ಜನಸಮೂಹವೆಲ್ಲ ಇವರ ಹಿಂದೆ. ಬೆನ್ನಿಗೊಂದು ಬಸವ ಪುರಾಣ ಕಟ್ಟುವರು. ಯಾವಾಗಲೂ ಬಸವಪ್ಪ, ಬಸವಪ್ಪ ಎಂದು ಆ ಮಹಾನುಭಾವರ ನಾಮೋಚ್ಚಾರಣೆಯು ಬರಿಗಾಲು, ತಣ್ಣೀರಿನ ಸ್ನಾನ. ಇಂಥ ಕಠಿಣ ಆಚಾರಸ್ಥರನ್ನು ಎಲ್ಲಿಯೂ ಕಾಣಲಿಕ್ಕಿಲ್ಲ. ಅದನ್ನೆಲ್ಲ ವರ್ಣಿಸಲಿಕ್ಕೆ ಇಲ್ಲಿ ಸ್ಥಳವಲ್ಲ. ಬರೆದರೆ ಅದೊಂದು ಮಹಾ ಪುರಾಣವೇ ಆಗಬಹುದು. ಕ್ರಿಯಸ್ಥ ಜಂಗಮರೊಬ್ಬರು ಯಾವಾಗಲೂ ಇವರ ಸಂಗಡವಿರಬೇಕು.

ಗುರುಲಿಂಗ ಜಂಗಮರಲ್ಲಿ ಇವರ ಭಕ್ತಿಯು ಅಗಾಧವಾದುದು ವೀರಶೈವತ್ವಕ್ಕಾಗಿಯೇ ಜೀವಿಸುವರು. ಪರವಾದಿಗಳು ಇವರಲ್ಲಿ ಒಂದು ಕೈಸಿಕ್ಕಿಸಿಕೊಂಡರೆ ತೀರಿತ. ಬಿಡಿಸಿಕೊಂಡುಹೋಗಬೇಕಾದರೆ ಅವರ ಪೂರ್ವ ಪುಣ್ಯವಿರಬೇಕು. ವಾದ ಮುಗಿಯುವವರೆಗೆ ಆ ವಾದಿಗೂ ಇವರಿಗೂ ಪ್ರಸಾದವೂ ನಿದ್ರೆಯೂ ಇಲ್ಲವೆಂದೇ ತಿಳಿಯಬೇಕು. ಇವರ ಮುಂದೆ ಮಾತಾಡಿ ವಾರಾಗಿ ಹೋದವರಿಲ್ಲ. ಪರವಾದಿಗಳಿಗೆ ಇವರು ಉತ್ತರಕೊಟ್ಟ ಚಿತ್ರವಿಚಿತ್ರವಾದ ಸಂಗತಿಗಳನ್ನು ಈ ಪ್ರದೇಶದ ಪ್ರತಿಯೊಬ್ಬ ಮನುಷ್ಯನೂ ಬಲ್ಲನು. ವೀರಶೈವರ ವೀರತ್ವವನ್ನು ಕಾಣಬೇಕಾದರೆ ಇವರಲ್ಲಿಯೇ ಕಾಣಬೇಕು. ಭಾಷೆಯಲ್ಲಿ ವೀರತ್ವ ಭಕ್ತಿಯಲ್ಲಿ ವೀರತ್ವ. ನಾದದಲ್ಲಿ ವೀರತ್ವ.

ಈ ಮಹಿಮಾ ಪುರುಷರನ್ನು ನೋಡುವ ಸುಸಮಯವು ನನಗೂ ಮತ್ತು ವಿರಕ್ತ ಮಠದ ಶ್ರೀ. ಅನ್ನದಾನಯ್ಯನವರಿಗೂ ಒಮ್ಮೆ ಲಭಿಸಿತು. ಊಟೋಪಚಾರಗಳಾದನಂತರ ಮೂರು ತಾಸು ರಾತ್ರಿಗೆ ಅವರ ಸಂಗಡ ಸ್ವಲ್ಪ ಮಾತನಾಡುವ ಸಮಯವು ದೊರೆಯಿತು. ಅಲ್ಲಿ ನನ್ನ ಸಂಶಯಗಳನ್ನು ನಿವಾರಣೆ ಮಾಡಿಕೊಳ್ಳುವ ಉದ್ದೇಶದಿಂದ ಕೆಲವು ಪ್ರಶ್ನೆಗಳನ್ನು ಕೇಳಿದೆನು.

ನಾನು—ಸ್ವಾಮಿ, ಅನ್ಯರಿಗೆ ಲಿಂಗವನ್ನು ಕಟ್ಟ ನಮ್ಮ ಸಮಾಜನಲ್ಲಿ ಜೀಗೆದುಕೊಳ್ಳಲಿಕ್ಕೆ ಬರುವದೆ?

ಶರಣರು—ಎಂಥ ಮಾತಿದು? ಲಿಂಗ ಬೇಕಾದ ಬೇಕಾದ ಪ್ರಾಣಿಗೆಸ್ಥಲಿಂಗ ಕಟ್ಟಬಹುದು.

ನಾನು— ಲಿಂಗ ಕಟ್ಟಿದಮೇಲೆ ಅವರ ಸಂಗಡ ಊಟೋಪಚಾರ ಮಾಡಬಹುದೇ ಅಥವಾ ಹಾಗೇ ಬಿಡಬಹುದೇ?

ಶರಣರು— ಎಂಥ ಮಾತಿದು? ಲಿಂಗ ಕಟ್ಟಿದ ಮೇಲೆ ಊಟ ಮಾಡದಿದ್ದರೆ ಗುರುವೇ ಅವನು? ಆಚಾರನೋಡಿ ಊಟ ಮಾಡಬೇಕು.

ನಾನು—ಈ ಭಾಗದಲ್ಲಿ XXXXXನು ಬಸವಣ್ಣನ ನಿಂದೆಯನ್ನು ಮಾಡುತ್ತಾನಂತೆ ತಮ್ಮ ಕೇಳಿಕೆಯಲ್ಲಿ ಬಂದಿದೆಯೇ?

ಶರಣರು—ಹೌದು, ಅವನು ಇಲ್ಲಿಗೆ ಬರಲೆಂದೇ ನಾನು ಹೊಸ XXXXX ಗಳನ್ನು ಮಾಡಿಸಿಟ್ಟಿದ್ದೇನೆ. ಬಂದಾದರೂ ಬರಲಿ.

ಆ ಮೇಲೆ ಅವರು ಅನೇಕ ಧಾರ್ಮಿಕ ಮನೋರಂಜಕ ಸಂಗತಿಗಳನ್ನು ಹೇಳಿದರು. ತಾವು ಒಬ್ಬನಿಗೆ ಲಿಂಗಧಾರಣೆ ಮಾಡಿಸಿ ಪಂಕ್ತಿಗೆ ಕರಕೊಂಡರೆಂದೂ ಕೆಲವು ಜನರು ಇವರ ಮೇಲೆ ಸಿಟ್ಟಾಗಿ ಬಹಿಷ್ಕಾರ ಹಾಕಿದರೆಂದೂ ಪುನಃ ಕೆಲವು ದಿವಸಗಳಾದ ಮೇಲೆ ತಾವೇ ಆ ಬಹಿಷ್ಕಾರ ಹಿರುಗಿ ತೆಗೆದುಕೊಂಡರೆಂದೂ ಹೇಳಿದರು. ಬ್ರಾಹ್ಮಣ, ಮರಾಠಾ, ಕುರುಬ, ಮುಸಲ್ಮಾನ, ಮೊದಲಾದ ಎಲ್ಲ ಮತದವರಿಗೂ ಇವರ ವಿಷಯವಾಗಿ ಆದರಭಾವವಿರುವುದು. ಈ ಮಹಾ ಶಿವಶರಣರು ಧರ್ಮಸುಧಾರಕರಿಗೆ ಆದರ್ಶ ಪ್ರಾಯವಾಗಿಲ್ಲವೇ?

ಲಿಂಗನಗೌಡ ಪಾಟೀಲ.

ಮಹಾತ್ಮಾಜಿಯವರ ಸದುಪದೇಶ.

ಉಮರಾವತಿಯಲ್ಲಿ ಮಹಾತ್ಮಾಜಿಯವರು ೩೦ ಸಾವಿರ ಲೋಕ ಸಮುದಾಯದ ಮುಂದೆ ಮಾಡಿದ ಭಾಷಣವು ಮನನೀಯವಾಗಿದೆ. ಅವರು ಹೇಳಿದುದೇನೆಂದರೆ—

"ಹಿಂದುಸ್ಥಾನದಲ್ಲಿಯ ಪ್ರತಿಯೊಂದು ಮೂಲೆಮೂಲೆಯಲ್ಲಿಯು ಸಹ ನಾನು ಸಂಚರಿಸಿದ್ದೇನೆ. ಇಂಥ ಎಷ್ಟೋ ದೊಡ್ಡ ದೊಡ್ಡ ಸಭೆಗಳನ್ನು ನೋಡಿದ್ದೇನೆ. ಇಂಥ ದೊಡ್ಡದೊಡ್ಡ ಸಭೆಗಳಲ್ಲಿಯೂ ಜನರು ಶಾಂತ ರೀತಿಯಿಂದ ವರ್ತಿಸುವದನ್ನು ನೋಡಿದರೆ ಈ ದೊಂದು ಈಶ್ವರ ಕೃಪೆಯೇ ಸರಿ. ಆ ಕೃಪೆಯಿಂದಲೇ ನಾನು ಹರಿಜನೋದ್ಧಾರದ ಕಾರ್ಯವನ್ನು ಮಾಡಲಿಚ್ಛಿಸುತ್ತೇನೆ. ಅಸ್ಪೃಶ್ಯತಾ ನಿವಾರಣೆಯು ಧಾರ್ಮಿಕ ಕಾರ್ಯವಾಗಿರುವದರಿಂದ ಅದು ಸತ್ಯ ಶಾಂತಿ ಮತ್ತು ಸ್ವಾರ್ಥ ತ್ಯಾಗಗಳ ಮೇಲೆ ಅಧಿಷ್ಠಿತವಾಗಿರಬೇಕು. ತಾವು ಹರಿಜನರಿಗೆ ಮಾಡಿದ ಅನ್ಯಾಯವನ್ನು ದೂರಮಾಡಬೇಕೆಂದಪೇಕ್ಷಿಸುತ್ತಿದ್ದರೆ ನೊದಲು ಅವರ ಹೆಗಲ ಮೇಲಿನಿಂದ ಇಳಿಯಬೇಕು. ಉಳಿದ ಹಿಂದುಗಳ ನಂಗಡ ವ್ಯವಹಾರ ಮಾಡುವಂತೆಯೇ ಅವರ ಸಂಗಡಲೂ ಮಾಡಬೇಕು.

ಹಿಂದುಸ್ಥಾನದೊಳಗಿನ ಈ ದಲಿತ ವರ್ಗದ ಉದ್ಧಾರವಾಗದೆ ನಾ ಮಾನ್ಯ ಜನತೆಯ ಆರ್ಥಿಕ ಉನ್ನತಿಯಾಗುವುದು ಶಕ್ಯವಿಲ್ಲವೆಂಬ ತಜ್ಞರ ಅಭಿಪ್ರಾಯವಿದೆ. ೫೫ ವರ್ಷಗಳ ಅನುಭವದಿಂದ ಮತ್ತು ಅವಲೋಕನದಿಂದ ನನ್ನ ಅಭಿಪ್ರಾಯವೂ ಹಾಗೇ ಇದೆ. ನಿಜವಾಗಿ ನೋಡಿದರೆ ಧರ್ಮ ಮತ್ತು ಅರ್ಥಗಳಲ್ಲಿ ಸವರ್ಣಿಯರಿಲಿಕ್ಕೇ ಬೇಕು. ಅವೆರಡೂ ಕೈಗೆ ಕೈ ಜೋಡಣೆಯಾಗಿರಬೇಕು. ಯಾವನು ಧರ್ಮಕ್ಕಾಶ್ರಯಿಭೂತವಾದ ಅರ್ಥವನ್ನು ಸಂಪಾದನೆ ಮಾಡುವದರಲ್ಲಿ ಪ್ರಯತ್ನಿಸುವನೋ ಅವನಿಗೆ ಇವೆರಡೂ ಸಿದ್ಧಿಸುವವೆಂದು ನನ್ನ ಈ ಕಾರ್ಯಾನುಭವದಿಂದ ತಿಳಿದುಬಂದಿದೆ. ಹರಿಜನ ಕಾರ್ಯಕ್ಕಾಗಿ ವೆಚ್ಚ ಮಾಡುವಂಥ ಧನವೂ ಸತ್ಕಾರ್ಯ ಕಾರಣವಾಗಿರುವದರಿಂದ ಕೊಡುವವರ ಮತ್ತು ತೆಗೆದುಕೊಳ್ಳುವವರ ಇಬ್ಬರ ಕಲ್ಯಾಣವೂ ಸಿದ್ಧಿಸುತ್ತದೆ. ಪ್ರತಿಯೊಬ್ಬ ಸವರ್ಣ ಹಿಂದುವು ಹರಿಜನೋದ್ಧಾರದ ಕಾರ್ಯದಲ್ಲಿ ಭಾಗವಹಿಸಬೇಕೆಂದು ನನ್ನ ಮತವಿದೆ. ಹರಿಜನರನ್ನು ತಮ್ಮ ಕಡೆಗೆ ಬರಮಾಡಿಕೊಳ್ಳುವದನ್ನು ಸವರ್ಣ ಹಿಂದುಗಳು ನಡೆಸಿದರೆ ಅದರಿಂದ ಹಿಂದು, ಮುಸಲ್ಮಾನ್, ಕ್ರೈಸ್ತ, ಪಾರ್ಸಿ ಮೊದಲಾದ ಸರ್ವರ ಕಲ್ಯಾಣವಾಗುವುದು.

ಹರಿಜನ ಕಾರ್ಯವು ಒಂದು ಯಜ್ಞವಾಗಿದ್ದು ಅದರಲ್ಲಿ ಪ್ರತಿಯೊಬ್ಬನೂ ತನ್ನ ಹವಿರ್ಭಾಗವನ್ನು ಅರ್ಪಣಮಾಡಬೇಕು. ಬೇಗೆಂಬುದನ್ನು ನೋಡಿರಿ. ಕೆಲವರು ತಮ್ಮ ವೇಳೆಯನ್ನು ವೆಚ್ಚ ಮಾಡಿ ಅವರಿಗೆ ಶಿಕ್ಷಣ ಕೊಡುವ ಕೆಲಸವನ್ನು ಮಾಡಿದರೆ ಕೆಲವರು ಅವರಿಗೆ ಸ್ವಚ್ಛತೆಯಿಂದ ವಾಸಿಸುವದನ್ನು ಕಲಿಸಬಹುದು.

ಸದ್ಯದಲ್ಲಿ ರಾಷ್ಟ್ರೀಯ ಕೆಲಸಗಾರರು ಈ ಕಾರ್ಯವನ್ನು ಕೈಕೊಂಡಿರುತ್ತಾರೆ. ಆದರೆ ಈ ಕಾರ್ಯವು ಅವರದಷ್ಟೇ ಅಲ್ಲ. ಹಿಂದುಸ್ಥಾನದ ಸಮುಪ್ರದಂಥ ಅಘಾಟ ಜನ ಸಮುದಾಯವು ಈ ಕಾರ್ಯವನ್ನಂಗೀಕರಿಸಬೇಕು. ಅವರವರ ರಾಜಕೀಯ ಅಭಿಪ್ರಾಯಗಳು ಭಿನ್ನವಾಗಿದ್ದರೂ ಎಲ್ಲರೂ ಒಂದಾಗಿ ಈ ಕಾರ್ಯವನ್ನು ಮಾಡಬೇಕು. ಹರಿಜನ ಕಾರ್ಯಕ್ಕಿರುವಷ್ಟು ಮಹತ್ವವು ನಿಜವಾಗಿ ನೋಡಿದರೆ ರಾಜಕಾರಣಕ್ಕೂ ಸಹ ಇರುವದಿಲ್ಲ. ಧರ್ಮ ಶ್ರದ್ಧೆಯಿಂದ ಈ ಕಾರ್ಯವನ್ನು ಮಾಡಿದರೆ ಉಳಿದೆಲ್ಲವುಗಳು ತಾವೇ ಸಿದ್ಧಿಸುವವೆಂದು ನನ್ನ ವಿಶ್ವಾಸವಿದೆ. ನನ್ನ ಪ್ರವಾಸಕ್ಕೆ ಕಾರಣವೆಂದರೆ ಇದೊಂದೆ.

ಇಲ್ಲಿ ನೆರೆದ ಈ ಅಪಂಖ್ಯ ಜನರೆಲ್ಲ ನನ್ನ ಈ ಕಾರ್ಯಕ್ಕೆ ಸಹಾಯ ಮಾಡುವರೆಂದು ಆಶಿಸುತ್ತೇನೆ. ಕಳೆದ ಜುಲೈ ತಿಂಗಳಲ್ಲಿ ಹರಿಜನಸೇವಾಸಂಘವು ಸ್ಥಾಪನೆಯಾದಂದಿನಿಂದ ಈ ಕಾರ್ಯವು ಪ್ರಾರಂಭವಾಗಿದೆ. ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯಲ್ಲಿ ಹರಿಜನರು ಪ್ರವೇಶಿಸುವದು ಅವರ ಜನ್ಮಸಿದ್ಧ ಅಧಿಕಾರವಾಗಿದೆ. ಎಲ್ಲಿಯವರೆಗೆ ಒಬ್ಬನಾದರೂ ಮನುಷ್ಯನು ಅಸ್ಪೃಶ್ಯನೆಂದು ಬಹಿಷ್ಕೃತನಾಗುವನೋ ಅಲ್ಲಿಯವರೆಗೆ ಈ ಕಾರ್ಯವು ಕೊನೆಗೊಡಿತೆಂದು ನಾನು ತಿಳಿಯುವುದಿಲ್ಲ. ಆದುದರಿಂದ ನಿಮ್ಮ ಹೃದಯದಲ್ಲಿ ಪರಿವರ್ತನೆಯಾಗಬೇಕು.

ಹರಿಜನ ಕಾರ್ಯ ಮಾಡುವುದರಲ್ಲಿ ಪೈಮಾಸಿಕ ಆಕಾಂಕ್ಷೆಯು ಬೇಡ. ಇದು ರಾಜಕಾರಣದಿಂದ ಅಲಿಪ್ತವಾಗಿರಬೇಕು. ಇದು ಹಿಂದು ಧರ್ಮದ ಶುದ್ಧಿಯ ಕಾರ್ಯವಾಗಿದೆ. ಮತ್ತು ಈ ಶುದ್ಧಿಯಾಗುವದೆಂದೂ ನನಗೆ ಪೂರ್ಣ ನಂಬಿಗೆಯಿದೆ. ನಾನು ಜೀವದಿಂದಿರುವಷ್ಟರಲ್ಲಿ ಈ ಕಾರ್ಯಕ್ಕೆ ಯಶ ದೊರೆಯದಿದ್ದರೂ ಅದು ಸಾಗಿಯೇ ಇರುವದು. ಶುದ್ಧ ಭಾವನೆಯುಳ್ಳ ಜನರು ದೊರೆತರೆ ಈ ಕಾರ್ಯವು ನಡೆಯುವದು. ಇಂಥ ಜನರು ಈಗ ಬಹು ಸ್ವಲ್ಪ ಪ್ರಮಾಣದಲ್ಲಿ ದೊರೆತಿರುವರು.

ಸಾವಳಿ ಗ್ರಾಮದಲ್ಲಿ ಅದಿಜನರಿಗೆ ಈ ಪ್ರಕಾರ ಉಪದೇಶ ಮಾಡಿದರು.

"ಹರಿಜನ ಬಂಧು ಭಗಿನಿಯರಿಗೂ ಎರಡು ಶಬ್ದಗಳನ್ನು ಹೇಳಲು ನಾನು ಬಯಸುತ್ತೇನೆ. ಹರಿಜನ ವಸ್ತಿಯಲ್ಲಿ ಸಂಚರಿಸುವಾಗ ಒಬ್ಬ ಹರಿಜನ ಭಗಿನಿಯು ಚರಖಾ ಸಂಘದಿಂದ ದೊರೆಯುವ ಕೂಲಿಯು ಅತ್ಯಲ್ಪವಾಗಿರುವದೆಂದು ಹೇಳ್ತಿದ್ದಳು. ಆದರೆ ಅವಳು ಮೈಮೇಲೆ ಧರಿಸಿದ ಆಭರಣಗಳ ಕಡೆಗೆ ಬೊಟ್ಟುಮಾಡಿ ತೋರಿಸಲು ಅವಳಿಗೆ ನಾಚಿಕೆಯೆನಿಸಿ ಹೊರಟುಹೋದಳು. ಕೂಲಿಯನ್ನು ಹೆಚ್ಚು ಕೊಡಬೇಕೆಂದು ಚರಖಾ ಸಂಘದವರ ಅಪೇಕ್ಷೆ ಇಲ್ಲವೆಂತಲ್ಲ. ಆದರೆ ಹಾಗಾಗಲು ಹರಿಜನ ಬಂಧು ಭಗಿನಿಯರ ಸಹಾಯವು ಅನಿವಾರ್ಯವಾಗಿದೆ. ಅವರ ಮನೆಗಳ ಮುಂದೆ ಅಡ್ಡಾಡುತ್ತಿರುವಾಗ ನನಗೆ ಕಂಡುಬಂದುದೇನೆಂದರೆ ಅವರು ನೂಲು ತೆಗೆಯಲು ಉಪಯೋಗಿಸುತ್ತಿರುವ ರಾಟೆ, ಕದಿರು ಮೊದಲಾದವುಗಳು ಬಹಳ ಹಳೆಯಪದ್ಧತಿಯವಿರುತ್ತವೆ. ಅವುಗಳಲ್ಲಿ ಸುಧಾರಣೆಯಾಗಬೇಕು. ನಾನು ಸ್ವತಃ ನೂಲುವುದರಿಂದ ಮತ್ತು ಹಿಂಜುವುದರಿಂದ ಅನುಭವಪೂರ್ವಕವಾಗಿ ಹೇಳುತ್ತೇನೆ. ಈ ಸುಧಾರಣೆಯನ್ನು ಮಾಡಲಿಕ್ಕೆ ವಿಶೇಷ ಧನದ ಇಲ್ಲವೆ ಪ್ರಯತ್ನದ ಆವಶ್ಯಕತೆಯಿಲ್ಲ. ಆಲಸ್ಯ ಮತ್ತು ಅವಿಶ್ವಾಸಗಳನ್ನು ಬಿಟ್ಟುಕೊಡುವದು ಅವಶ್ಯವಿದೆ. ಯಾವ ಯಾವ ಸುಧಾರಣೆಯಾಗಬೇಕೆಂಬುದನ್ನು ಹೇಳುವದು ಚರಖಾ ಸಂಘದವರ ಕರ್ತವ್ಯವಾಗಿದೆ.

ಜಾತಿ ಸಂಸ್ಥೆಗಳು ಹೇಗಿರಬೇಕು?

ಜಾತಿ ವಿಶಿಷ್ಟವಾದ ಸಂಸ್ಥೆಗಳು ಕೆಲವರಿಗೆ ಅನಾವಶ್ಯಕವಾಗಿ ತೋರುತ್ತಿವೆ. ಕೆಲವರಿಗಾದರೋ ಅವಶ್ಯಕವಾಗಿ ತೋರುತ್ತಿವೆ. ಈ ಭಿನ್ನಾಭಿಪ್ರಾಯವುಳ್ಳ ಉಭಯರ ಉದ್ದೇಶವೂ ರಾಷ್ಟ್ರೋನ್ನತಿಯೇ ಆಗಿದೆ. ಉದ್ದೇಶವೊಂದೇಯಾಗಿದ್ದರೂ ಅಭಿಪ್ರಾಯ ಭಿನ್ನವಾಗಿರಲು ಆಯಾಯ ವಿಷಯಗಳಲ್ಲಿ ಅವರವರಿಗಿರತಕ್ಕ ಪ್ರೇಮಾದರಗಳ ವ್ಯತ್ಯಾಸಗಳೇ ಮುಖ್ಯಕಾರಣ.

ರಾಷ್ಟ್ರೋನ್ನತಿಗೆ ವಿಘಾತಕವಾಗಿರತಕ್ಕ ಅಥವಾ ಅಂತಹ ಕಾರ್ಯಕ್ರಮಗಳನ್ನನುಸರಿಸುವ ಯಾವ ಜಾತಿ ಸಂಸ್ಥೆಗಳೂ ಇರಬೇಕಾದುದು ವಿಹಿತವಲ್ಲ. ಅವುಗಳು ಎಷ್ಟು ಜಾಗ್ರತೆ ಲೋಪವಾಗುವವೋ ಅಷ್ಟು ರಾಷ್ಟ್ರಕ್ಕೂ ಮನುಷ್ಯ ಜಾತಿಗೂ ಕ್ಷೇಮವು ಜಾಗ್ರತೆ ಲಭಿಸುತ್ತದೆ. ಆದರೆ ಯಾವ ಜಾತಿ ವಿಶಿಷ್ಟ ಸಂಸ್ಥೆಗಳು ರಾಷ್ಟ್ರಕ್ಕೆ ಪೋಷಕವಾದ ಕಾರ್ಯಗಳನ್ನು ನಡೆಸುತ್ತವೆಯೋ ಅವೇಕೆ ಲೋಪವಾಗಬೇಕು? ಅವುಗಳ ಕಡೆಗೇಕೆ ಸುಶಿಕ್ಷಿತರೂ ರಾಷ್ಟ್ರಭಕ್ತರೂ ತಿರುಗಬಾರದು?

ಈ ದೇಶದಲ್ಲಿ ಹಿಂದು, ಮುಸಲ್ಮಾನ, ಪಾರ್ಸಿ, ಕ್ರೈಸ್ತ ಮೊದಲಾದ ಬೇರೆಬೇರೆ ಜಾತಿಗಳಿವೆಯಷ್ಟೆ. ಈ ಎಲ್ಲ ಜಾತಿಯವರೂ ತಮ್ಮ ತಮ್ಮ ಪ್ರತ್ಯೇಕ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳುವದು ವಿಹಿತವೇ ಸರಿ. ಏಕೆಂದರೆ ಆ ಪ್ರತಿಯೊಂದು ಜಾತಿಯವರಲ್ಲಿಯೂ ಅನೇಕ ಭೇದಗಳೂ ಧಾರ್ಮಿಕ ಮೌಢ್ಯ ನಂಬಿಕೆಗಳೂ ಅನೇಕ ಸಾಮಾಜಿಕ ದೋಷಗಳೂ ಇದ್ದೇ ಇವೆ. ಅವುಗಳನ್ನೆಲ್ಲಾ ತೆಗೆದುಹಾಕಲು ಆಯಾಯ ಜಾತಿಯವರೇ ಪ್ರಯತ್ನಿಸಬೇಕಾದುದು ವಿಹಿತವಲ್ಲವೆ?

ಒಂದು ಹಿಂದು ಜಾತಿಯಲ್ಲಿಯೇ ಸಾಧಾರಣ ನಾಲ್ಕು ಸಾವಿರ ಉಪಜಾತಿಗಳಿವೆ. ಇವೆಲ್ಲಾ ಹೀಗೆಯೇ ಇರಬೇಕಾದುದು ರಾಷ್ಟ್ರಕ್ಕೆ ಕ್ಷೇಮವೆ? ಅನಾವಶ್ಯಕವಾಗಿಯೂ ಅಹಿತಕರವಾಗಿಯೂ ಇರತಕ್ಕ ಎಷ್ಟೋ ರೂಢಿಗಳೂ ತಪ್ಪು ನಡತೆಗಳೂ ನಿವಾರಣೆಯಾಗಬೇಕಾಗಿಲ್ಲವೆ? ಎಂದಮೇಲೆ ಇವುಗಳನ್ನೆಲ್ಲಾ ತೆಗೆದುಹಾಕಿ ಹಿಂದುಸಂಘಟನೆಯನ್ನುಂಟುಮಾಡಲು ಹಿಂದು ಮಹಾಸಭೆಯು ಅವಶ್ಯಕವಲ್ಲವೆ?

ಇಂತಹ ಜಾತಿ ವಿಶಿಷ್ಟ ಸಂಸ್ಥೆಯಿಲ್ಲದಿದ್ದರೆ ಹಿಂದು ಸಮಾಜದಲ್ಲಿರುವ ನಾನಾ ಕೊಳೆಗಳೆಲ್ಲಾ ತೊಳೆದುಹೋಗುವುದೆಂತು? ರಾಷ್ಟ್ರೀಯ ಸಂಸ್ಥೆಗಳಲ್ಲಿ ಎಲ್ಲ ಜಾತಿಯವರೂ ಸೇರುವುದರಿಂದ ಅಲ್ಲಿ ಒಂದೇ ಒಂದು ಜಾತಿಯ ಸಂಘಟನೆಯ ಕಾರ್ಯವೆಂತು ನಡೆವುದು?

ಈ ಜಾತಿವಿಶಿಷ್ಟ ಸಂಸ್ಥೆಗಳು ರಾಜಕೀಯ ವಿಚಾರದಲ್ಲಿ ಪ್ರವೇಶಿಸಿ ಅನ್ಯ ಸಮಾಜಗಳ ಸಂಗಡ ಹೋರಾಡುವುದು ಮಾತ್ರ ಅನುಚಿತವೇ ಸರಿ. ಜಾತಿ ವಿಶಿಷ್ಟ ಸಂಸ್ಥೆಗಳು ಸ್ವಜಾತಿಯ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮೊದಲಾದ ವಿಷಯಗಳನ್ನು ಪ್ರತ್ಯೇಕವಾಗಿ ಸುಧಾರಿಸಲು ಪ್ರಯತ್ನಿಸಬೇಕೇ ವಿನಾ ರಾಜಕೀಯ ವಿಷಯದಲ್ಲಿ ಮಾತ್ರ ಪ್ರತ್ಯೇಕವಾಗಿರಬಾರದು. ಇದು ರಾಷ್ಟ್ರಕ್ಕೆ ಅಹಿತಕರವೇ ಸರಿ.

ರಾಜಕೀಯ ಮತ್ತು ಸಾಮಾಜಿಕ ಈ ಉಭಯ ಸುಧಾರಣೆಗಳೂ ಈಗ ರಾಷ್ಟ್ರಕ್ಕೆ ಅವಶ್ಯಕವಾಗಿಯೇ ಇವೆ. ಮತ್ತು ಇವುಗಳ ಕಾರ್ಯಕ್ಷೇತ್ರಗಳೂ ಭಿನ್ನಭಿನ್ನವಾಗಿರಬೇಕಾದುದೇ ವಿಹಿತವು. ಮುಸಲ್ಮಾನರೆಲ್ಲರೂ ಮುಸಲೀಮ ಲೀಗಿನ ಕಡೆ ತಿರುಗುವಂತೆ ಹಿಂದುಗಳೆಲ್ಲರೂ ಹಿಂದು ಮಹಾಸಭೆಯ ಕಡೆಗೆ ತಿರುಗಬೇಕಾದುದು ಅವಶ್ಯಕವು. ಆದರೆ ರಾಜಕೀಯ ವಿಷಯದಲ್ಲಿ ಪ್ರವೇಶಿಸಿ ರಾಷ್ಟ್ರಕ್ಕೆ ಅಹಿತಕರವಾಗುವಂತೆ ನಡೆಯುವುದು ಮಾತ್ರ ಅಯೋಗ್ಯವೇ ಸರಿ.

ನಾವು ಮೊದಲು ಭಾರತೀಯರು. ಆನಂತರ ಹಿಂದು ಮುಸಲ್ಮಾನ್ ಎಂಬ ಬೇರೆಬೇರೆ ಜಾತಿಯವರೆಂಬುದನ್ನು ಮರೆಯಬಾರದು. ಮೊದಲು ನಾವು ಈ ಭಾರತ ಭೂಮಿಯ ಮೇಲೆ ಬಂದು ಆ ಮೇಲೆ ಬೇರೆಬೇರೆ ಧರ್ಮ ಸಂಸ್ಕಾರಗಳನ್ನು ಹೊಂದುವುದಿಲ್ಲವೆ? ಆದಕಾರಣ ಮಾತೃಭೂಮಿಗೆ ವಿರೋಧವಾಗುವ ಯಾವ ಕಾರ್ಯವನ್ನೂ ಜಾತಿಯ ಅಭಿಮಾನದಿಂದ ಮಾಡುವುದು ವಿಹಿತವಲ್ಲ.

ಎಲ್ಲ ಧರ್ಮ ಮತ ಪಂಥದವರೂ ರಾಜಕೀಯ ಸಭೆಯೊಂದರಲ್ಲೇ ಸೇರಿ ರಾಜಕೀಯ ಸುಧಾರಣೆಯನ್ನು ಮಾಡಬೇಕು. ತಮ್ಮ ತಮ್ಮ ಮುಖ್ಯ ಜಾತಿ ಸಂಸ್ಥೆಗಳನ್ನು ಸ್ಥಾಪಿಸಿ ಆ ಮೂಲಕ ತಮ್ಮತಮ್ಮಲ್ಲಿಯ ಒಳಭೇದ ಸಾಮಾಜಿಕ ದೋಷಗಳನ್ನು ಕಳೆಯಬೇಕು. ಇದೇ ರಾಷ್ಟ್ರಕ್ಕೂ ಜಾತಿಗೂ ಕ್ಷೇಮಕರವಾದ ಮಾರ್ಗವು.

ಈಗ ಪಂಡಿತ ಜವಾಹರಲಾಲರಿಗೂ ಭಾಯಿ ಪರಮಾನಂದರಿಗೂ ನಡೆದಿರುವ ವಾದವು ರಾಷ್ಟ್ರದಲ್ಲಿ ಒಂದು ಮುಖ್ಯ ಸಂಗತಿಯಾಗಿದೆ. ಜಾತಿ ಸಂಸ್ಥೆಗಳ ಲೋಪವು ಹೇಗೆ ರಾಷ್ಟ್ರಕ್ಕೆ ಅನರ್ಥಕರವಾದುದೋ ಹಾಗೆಯೇ ರಾಷ್ಟ್ರದ ಅಕಾಂಕ್ಷೆಯನ್ನು ವಿರೋಧಿಸುವ ಜಾತಿ ಸಂಸ್ಥೆಗಳೂ ಅನರ್ಥಕಾರಿಗಳೇ ಸರಿ.

ಜಾತಿಯ ನೇಪವನ್ನು ಹಾಕಿಕೊಂಡು ರಾಜಕೀಯ ಸೌಲಭ್ಯಗಳಿಗಾಗಿ ಮುಂದೆರಿಯುವ ಜಾತಿ ವಿಶಿಷ್ಟ ಸಂಸ್ಥೆಗಳು ಈ ರಾಷ್ಟ್ರಕ್ಕೆ ಕೊನೆಗಾದರೂ ಘಾತಕವಾದವುಗಳಾಗಿಯೇ ಪರಿಣಮಿಸದಿರಲಾರವು. ಆದುದರಿಂದ ಅಂತಹ ಜಾತಿ ವಿಶಿಷ್ಟ ಸಂಸ್ಥೆಗಳಿರಲೇ ಬಾರದು. ಕೇವಲ ಸಾಮಾಜಿಕ ಮತ್ತು ಧಾರ್ಮಿಕ ಮೊದಲಾದ ಆಯಾಯ ಜಾತಿಗಳಿಗೆ ಸಂಬಂಧಿಸಿರುವ ಸಂಗತಿಗಳನ್ನು ಸುಧಾರಿಸುವ ಜಾತಿವಿಶಿಷ್ಟ ಸಂಸ್ಥೆಗಳು ರಾಷ್ಟ್ರಕ್ಕೆ ಅತ್ಯಾವಶ್ಯಕವಾಗಿ ಬೇಕು.

ಸಂಪಾದಕ.

ಮತ್ತು ಅವರು ತೋರಿಸಿಕೊಟ್ಟ ಸುಧಾರಣೆಯನ್ನು ಅನುಕರಿಸುವದು ನಿಮ್ಮ ಧರ್ಮವಾಗಿದೆ. ನೀವು ಕೂಲಿ ಕಡಿಮೆ ಸಿಗುತ್ತದೆಂದು ದೂರು ಹೇಳುತ್ತಿದ್ದರೂ ನಿಮ್ಮ ಲಗ್ನ ಮೊದಲಾದ ಸಮಾರಂಭದಲ್ಲಿ ದುಡ್ಡನ್ನು ಮನಬಂದಂತೆ ವೆಚ್ಚಮಾಡಿ ಮುಂದೆ ತೀರಿಸಲಿಕ್ಕೆ ಅಶಕ್ಯವಾಗುವಷ್ಟು ತೊಂದರೆ ಮಾಡಿಕೊಳ್ಳುತ್ತೀರಿ. ಈ ದುಂದುಗಾರಿಕೆಯು ನಿಮ್ಮ ಜೀವನವನ್ನು ರೂಪಾಂತರ ಮಾಡದೆ ಕೇವಲ ನಾಲ್ಕು ದುಡ್ಡು ಹೆಚ್ಚಿಗೆ ತೆಗೆದುಕೊಳ್ಳುವದರಿಂದ ನಿಮ್ಮ ಸುಧಾರಣೆಯಾಗುವದಿಲ್ಲ. ಈ ಪ್ರಕಾರ ನಾನು ಹೇಳಿದಂತೆ ನೀವು ನಡೆದುದಾದರೆ ಸುಖಿಗಳಾಗುವಿರಿ. ಮತ್ತು ನೀವು ಮಧ್ಯ ಮಾಂಸಗಳನ್ನು ಪೂರ್ಣ ಬಿಟ್ಟುಕೊಟ್ಟುದನ್ನು ಕೇಳಿ ನನಗೆ ಅತ್ಯಾನಂದವೆನಿಸುತ್ತದೆ. ಇದಕ್ಕಾಗಿ ನಾನು ತಮಗೆ ಧನ್ಯವಾದವನ್ನರ್ಪಿಸುತ್ತೇನೆ. ನನ್ನ ಹರಿಜನ ಕಾರ್ಯವು ಆತ್ಮಶುದ್ಧಿಯ ಕಾರ್ಯವಾಗಿದೆ. ಒಂಟು ವೇಳೆ ನೀವು ನಿಮ್ಮ ಹೃದಯವನ್ನು ಸ್ವಚ್ಛ ಮಾಡಿದುದಾದರೆ ಉಳಿದ ಧರ್ಮದವರಂತೆಯೇ ನೀವೂ ಸಮಭಾವದಿಂದಿರುವಿರಿ. ಈಶ್ವರನು ಹರಿಜನರ ಮತ್ತು ಉಳಿದ ಬಂಧುಗಳ ಹೃದಯವನ್ನು ಸ್ವಚ್ಛ ಮಾಡಲಿ!

ಶಾ. ಶ. ೧೭೫೫ ನೆಯ ಮಾರ್ಗಶಿರ ಬ. ೨ ಸೋಮವಾರ.

ಮಹಾಸಭೆಯ ಕಡೆಗೆ ತಿರುಗಿರಿ.

ವೀರಶೈವ ಮಹಾಸಭೆಯು ಸ್ಥಾಪನೆಯಾಗಿ ೩೦ ವರುಷಗಳಾಗುತ್ತಾ ಬಂದಿತು. ಇದೇ ಈ ಸಮಾಜದ ಮುಖ್ಯ ಸಂಸ್ಥೆಯಾಗಿದೆ. ಸಮಾಜದ ಪ್ರಮುಖರು ಅನಿಚ್ಛೆನ್ನವಾಗಿ ಈ ಮಹಾಸಭೆಯ ಮೂಲಕ ಸಮಾಜ ಕಾರ್ಯಗಳನ್ನ ಮಾಡುತ್ತಾ ಬಂದಿದ್ದರೆ ಇಷ್ಟರಲ್ಲಿ ಎಷ್ಟೋ ಅಭಿವೃದ್ಧಿಯಾಗುತ್ತಿದ್ದಿತು.

ನಮ್ಮ ಸಮಾಜದಲ್ಲಿ ಶಿಕ್ಷಣ ಪ್ರಸಾರವಾದಂತೆ ಸಮಾಜ ಸೇವಕರ ಸಂಖ್ಯೆಯು ಹೆಚ್ಚುತ್ತಾ ಮಹಾಸಭೆಯ ಮೂಲಕ ಸಮಾಜಕ್ಕೆ ಅವರು ವಿಶೇಷವಾದ ಪ್ರಯೋಜನವನ್ನು ಮಾಡುವರೆಂದೇ ಮೊದಲು ಬಹುಜನರು ಯೋಚಿಸಿದ್ದರು. ಆದರೆ ಅದು ಈಗ ತಪ್ಪಾವಂತೆ ತೋರುತ್ತದೆ. ಏಕೆಂದರೆ ನಮ್ಮ ಸಮಾಜದ ಸುಶಿಕ್ಷಿತರು ಮಹಾಸಭೆಯ ಕಡೆಗೆ ಎಷ್ಟು ಲಕ್ಷಿಸಬೇಕಾಗಿದೆಯೋ ಅಷ್ಟು ಲಕ್ಷಿಸಿಲ್ಲ.

ಹಿಂದುಸ್ಥಾನದ ಎಲ್ಲ ಸಮಾಜಗಳಲ್ಲಿಯೂ ಶಿಕ್ಷಣ ಪ್ರಸಾರವು ತೀವ್ರತರವಾಗಿ ನಡೆದಿದೆ. ಆಯಾಯ ಸಮಾಜಗಳ ಅನೇಕ ಸುಶಿಕ್ಷಿತರು ಸ್ವಸಮಾಜೋನ್ನತಿಗಾಗಿ ಮುಂದೆ ಬಂದು ಅನೇಕ ಮಹತ್ಕಾರ್ಯಗಳನ್ನು ಮಾಡಲುಸಕ್ರಮಿಸಿದ್ದಾರೆ. ಸಮಾಜವನ್ನೇ ತಮ್ಮ ಬೆಂಬಲವಾಗಿಟ್ಟುಕೊಂಡುದೇ ಇವರಿಗೆ ಒಂದು ಹೆಚ್ಚಿನ ಬಲವಾಗಿದೆ.

ಈ ನಮ್ಮ ವೀರಶೈವ ಸಮಾಜದಲ್ಲಿ ಮಾತ್ರ ಈ ಪ್ರಕಾರ ಪ್ರಯತ್ನಿಸುವ ಸುಶಿಕ್ಷಿತರ ಸಂಖ್ಯೆ ಬಹು ಕಡಿಮೆ. ಅವರಿಗೆ ಸಮಾಜದ ಕಡೆಗೆ ಲಕ್ಷಿಯೇ ಇಲ್ಲ. ರಾಷ್ಟ್ರಾಭಿಮಾನದಲ್ಲಿ ಸಮಾಜವನ್ನು ಕೆಲವರು ಮರೆತಿರಬಹುದು. ಕೆಲವರಿಗಾದರೋ ತಮ್ಮ ಉನ್ನತಿಯ ನುಂದೆ ಸಮಾಜವಾಗಲಿ ಅಥವಾ ರಾಷ್ಟ್ರವಾಗಲಿ ತೋರುವುದೇ ಇಲ್ಲ. ಇದೇ ಬಹು ಶೋಚನೀಯವಾದುದು.

ಮಹಾಸಭೆಯು ಬಹು ಉಪಯುಕ್ತವಾದ ಸಂಸ್ಥೆಯೆಂತಲೂ ಈ ಮೂಲಕ ಸಮಾಜದ ಅನೇಕ ಕೊರತೆಗಳನ್ನು ಕಳೆದು ಅಭಿವೃದ್ಧಿಯನ್ನು ಹೊಂದಬಹುದೆಂತಲೂ ದೃಢವಾಗಿ ನಂಬಿಯೇ ಮಹಾಸಭೆಯು ಅವಿಚ್ಛಿನ್ನವಾಗಿ ನಡೆಯಲು ಬೇಕಾಗುವಷ್ಟು ಧನವನ್ನು ಈ ಸಮಾಜದ ಧನಿಕ ಮಹಾಶಯರು ಕೂಡಿಟ್ಟಿದ್ದಾರೆ. ಅದರ ಸದುಪಯೋಗವನ್ನು ಸಮಾಜದ ಸುಶಿಕ್ಷಿತರು ಮಾಡಿಕೊಳ್ಳಬೇಕಾದುದು ಯುಕ್ತವಲ್ಲವೆ?

ಈ ಸಭೆಯ ಮುಂದಾಳುತನವು ಮುಖ್ಯವಾಗಿ ಸಮಾಜದ ಸುಶಿಕ್ಷಿತರಿಗೇನೇ ಸೇರಿದ್ದಾಗಿದೆ. ದೇಶ ಕಾಲ ಸ್ಥಿತಿಗಳನ್ನರಿತು ಸಮಾಜವನ್ನು ಮುಂದರಿಸುವ ಭಾರವು ಸಮಾಜದ ಸುಶಿಕ್ಷಿತರಿಗೆ ಸಂಬಂಧಿಸಿದುದಲ್ಲವೇ? ಅವರೇ ಮಹಾಸಭೆಯನ್ನು ಉಪೇಕ್ಷಿಸಿದ ಮೇಲೆ ಸಮಾಜೋನ್ನತಿಯ ಕಾರ್ಯಗಳಾಗುವುದೆಂತು? ಮಹಾಸಭೆಯಿಂದೇನು ಫಲ? ಆದೇನು ಮಾಡಿದೆ? ಅದೇಕೆ ಬೇಕು? ಎಂದು ಟೀಕಿಸುವವರು ಮುಸಲೀಮ್ ಲೀಗ ಮೊದಲಾದವುಗಳನ್ನು ನೋಡಲಿ

ಇದೇ ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಮಧ್ಯವರ್ತಿ ಮಂಡಲದ ಪ್ರತಿಯೊಬ್ಬ ಸದಸ್ಯರೂ ೨೫ ಸದಸ್ಯರನ್ನಾದರೂ ಕೂಡಿ ಸಬೇಕೆಂಬ ಮಧ್ಯವರ್ತಿ ಮಂಡಲದ ನಿರ್ಣಯವನ್ನು ಆಚರಣೆಯಲ್ಲಿ ತರಬೇಕಾಗಿಲ್ಲವೆ? ಈ ಸದಸ್ಯರಲ್ಲಿ ಬಹು ಸಂಖ್ಯಾಕರು ನಮ್ಮ ಸಮಾಜದ ಸುಶಿಕ್ಷಿತ ಮುಂದಾಳುಗಳಲ್ಲವೆ? ತಮ್ಮತಮ್ಮ ಭಾಗಗಳಲ್ಲಿ ಸದಸ್ಯರನ್ನು ಮಾಡಲು ಈ ವರೆಗೆ ಎಷ್ಟು ಪ್ರಯತ್ನ ಮಾಡಿದ್ದಾರೆಂಬುದನ್ನು ನೋಡಿದರೆ ಮಹಾಸಭೆಯ ಕಡೆಗೆ ಇವರು ಇನ್ನೂ ತಿರುಗಿಲ್ಲವೆಂದೇ ಹೇಳಬೇಕಾಗುತ್ತದೆ.

ಗ್ರಾಮ ಸುಧಾರಣೆ ಮೊದಲಾದ ಕಾರ್ಯಗಳನ್ನು ಗೊತ್ತು ಪಡಿಸಲು ಉಪ ಮಂಡಲಗಳು ಏರ್ಪಟ್ಟಿವೆ. ಡಿಸೆಂಬರ ತಿಂಗಳ ಅಂತ್ಯದಲ್ಲಿ ಆಯಾಯ ಮಂಡಲಗಳು ತಮ್ಮತಮ್ಮ ವರದಿಗಳನ್ನು ಸಿದ್ಧಪಡಿಸಬೇಕಾಗಿದೆ. ಈ ಕಾರ್ಯಗಳು ಕೂಡಾ ತೃಪ್ತಿಕರವಾಗಿ ಜರುಗಬೇಕಾದರೆ ಮಹಾಸಭೆಯ ಕಡೆಗೆ ತಿರುಗಬೇಕಲ್ಲವೆ?

ಧಾರ್ಮಿಕ, ಸಾಮಾಜಿಕ ಮೊದಲಾದ ಸುಧಾರಣೆಗಳಿಗಾಗಿ ಮಹಾಸಭೆಯ ಮೂಲಕವೇ ಅನೇಕ ಪ್ರಯತ್ನಗಳಾಗಬೇಕು. ಮಹಾಸಭೆಯು ಶಾಖೋಪಶಾಖೆಗಳು ಎಲ್ಲ ಕಡೆಗೂ ಏರ್ಪಡಬೇಕು. ಸಮಾಜಬಾಂಧವರ ನಾನಾ ದುಃಖ ನಿವಾರಣೆಗಾಗಿ ಸಂಘ ಮೂಲಕ ಪ್ರಯತ್ನಿಸಬೇಕು. ಬೇರೆ ಬೇರೆ ಭಾಗಗಳಲ್ಲಿರುವ ಸಮಾಜಬಾಂಧವರ ಅನೇಕ ಅನಾನುಕೂಲತೆಗಳನ್ನು ನಿವಾರಣೆ ಮಾಡಲು ಮಹಾಸಭೆಯಂತಹ ಮುಖ್ಯ ಸಂಸ್ಥೆಯೇ ಸಮರ್ಥವಾದುದು.

ಇಂತಹ ಮುಖ್ಯ ಸಂಸ್ಥೆಯು ಧಾರ್ಮಿಕ ವಿಷಯದಲ್ಲಿ ಲಕ್ಷಿಸಿ ಜನರಲ್ಲಿ ನಿಜವಾದ ಧಾರ್ಮಿಕ ಜಾಗೃತಿಯನ್ನುಂಟುಮಾಡದಿದ್ದುದರಿಂದ ಅನ್ಯ ಧರ್ಮದವರ ಬಲೆಯಲ್ಲಿ ಅನೇಕ ವೀರಶೈವರು ಬೀಳುತ್ತಿದ್ದಾರೆ. ಧಾರ್ಮಿಕ ನಿಜಜ್ಞಾನವಿಲ್ಲದಿದ್ದುದರಿಂದ ಸ್ವಸಮಾಜದಲ್ಲಿಯೇ ಅನೇಕ ಭಿನ್ನ ಭೇದಗಳನ್ನು ಮಾಡಿಕೊಂಡು ಭಿನ್ನಭಿನ್ನವಾಗಿ ಸಮಾಜದ ಗೌರವ ವೈಶಿಷ್ಟ್ಯಗಳನ್ನು ರಕ್ಷಿಸಲು ಅಸಮರ್ಥರಾಗಿದ್ದಾರೆ.

ಸ್ವಸಮಾಜದ ಜನ ಸಾಮಾನ್ಯರ ಕಡೆಗೆ ನಮ್ಮ ಲಕ್ಷಿಯಿಲ್ಲದಿದ್ದುದರಿಂದ ಅವರು ನಾನಾ ದುರಭ್ಯಾಸ ತಪ್ಪು ನಡತೆಗಳಿಂದ ನಡೆಯುತ್ತ ಸಾಂಪತ್ತಿಕ ವಿಷಯದಲ್ಲಿಯೂ ಹೀನದೀನ ಸ್ಥಿತಿಗಳಿಗೀಡಾಗುತ್ತಿದ್ದಾರೆ. ಈ ಪ್ರಕಾರ ಧಾರ್ಮಿಕ, ಸಾಮಾಜಿಕ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಸಮಾಜವು ದಿನೇದಿನೇ ಅಧೋಗತಿಗೀಡಾಗುತ್ತಿರುವಾಗ ಇದನ್ನು ಮೇಲಕ್ಕೆತ್ತಲು ಮಹಾಸಭೆಯಂತಹ ಮುಖ್ಯ ಸಂಸ್ಥೆಯೇ ಅತ್ಯಾವಶ್ಯಕವಾಗಿಲ್ಲವೆ?

ಸುಶಿಕ್ಷಿತರು ಮಹಾಸಭೆಯ ಕಡೆಗೆ ತಿರುಗಿದರೆ ಮಾತ್ರ ಇದರಿಂದ ಸಮಾಜೋನ್ನತಿಯ ಕಾರ್ಯಗಳಾಗುವುದು ಶಕ್ಯವು. ಹಾಗಿಲ್ಲದೆ ಮಹಾಸಭೆಯಿಂದೇನಾಯಿತೆಂದು ಟೀಕಿಸುತ್ತ ತಾವು ರಾಷ್ಟ್ರದ ಕಡೆಗೋ ಅಥವಾ ಮುನಿಸಿಪಾಲಿಟಿ, ಲೋಕಲಬೋರ್ಡ, ಕೌನ್ಸಿಲ್ಲುಗಳ ಕಡೆಗೇನೇ ತಿರುಗಿದ್ದರೆ ಮಹಾಸಭೆಯು ನಾಮಮಾತ್ರದಲ್ಲಿಯೇ ಉಳಿಯುವುದು. ಸಮಾಜಕ್ಕೆ ಬರುವ ಮುಂದಣ ಅನರ್ಥಗಳನ್ನು ಸುಶಿಕ್ಷಿತರು ಯೋಚಿಸಿ ಮಹಾಸಭೆಯ ಕಡೆಗೆ ಈಗಲಾದರೂ ತಿರುಗಿ ಸಮಾಜದ ಕಾರ್ಯ ಮಾಡಲು ಈ ಸಂಸ್ಥೆಯಲ್ಲಿಯೂ ಉತ್ಸಾಹದಿಂದ ಸೇರುವುದು ಅಗತ್ಯವಾಗಿಲ್ಲವೆ?

ನೀನೊಲಿದ ಶರಣಂಗಲ್ಲದಿಲ್ಲ.

ಧನದಲ್ಲಿ ಶುಚಿ | ಪ್ರಾಣದಲ್ಲಿ ನಿರ್ಭಯ | ಇದಾವಂಗೆ ಅಳವಡುವದಯ್ಯ? ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವವರಿಲ್ಲ | ಪ್ರಮಾದ ವಶ ಬಂದರೆ ಹುಸಿಯೆನೆಂಬುವರಿಲ್ಲ | ನಿರಾಶೆ ನಿರ್ಭಯ ಕೂಡಲಸಂಗಮದೇವ ನೀನೊಲಿದ ಶರಣಂಗಲ್ಲದಿಲ್ಲ||

ಈ ಜಗತ್ತಿನಲ್ಲಿ ಮನುಷ್ಯನು ಧನವನ್ನು ತನ್ನ ಸುಖಕ್ಕೆ ಸಾಧನವೆಂದು ಶೇಖರಿಸುತ್ತಿದ್ದಾನಷ್ಟೆ. ಧನವೇ ಅವನ ಸುಖದ ನಿಧಿಯು. ಇಷ್ಟೇ ಏಕೆ? ಧನವೇ ಅವನ ಪ್ರಾಣವಾಗಿರುತ್ತದೆ. ಧನ ಸಂಗ್ರಹಕ್ಕಾಗಿ ಅನೇಕ ಕಷ್ಟಪಟ್ಟು ಅತ್ತಿತ್ತ ಅಲೆದಾಡಿ ಸಂಗ್ರಹಿಸುತ್ತಾನೆ. ಸಂಗ್ರಹಿಸಿದ ಮೇಲೆ ಅದನ್ನು ಕಾಯಲು ಸಹ ಒಳ್ಳೇ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಾನೆ. ಆ ಧನಕ್ಕಾಗಿ ತಾನು ಪಡುತ್ತಿರುವ ನೂರಾರು ಕಷ್ಟಗಳನ್ನು ಅದು ಸುಖ ಕೊಡುವುದಲ್ಲಾ ಎಂಬ ಒಂದೇ ಒಂದು ಭಾವನೆಯಿಂದ ಸಹಿಸಿಕೊಳ್ಳುತ್ತಾನೆ.

ಹೀಗಾಗಿ ಅವನು ಸ್ವಲ್ಪ ದಿವಸಗಳಲ್ಲಿಯೇ ಅದಕ್ಕಾಧೀನವಾಗುತ್ತಾನೆ. ಅದು ಅವನ ಮನಸ್ಸನ್ನು ಹರಣ ಮಾಡುವುದರಿಂದ ಧನ ಸಂಗ್ರಹದ ಕಾರ್ಯದಲ್ಲಿ ಅದರ ಹೊರತು ಮತ್ತಾವುದೂ ಮಹತ್ವವಾದುದು ಅವನಿಗೆ ಗೋಚರವಾಗುವುದಿಲ್ಲ. ಸತ್ಯ, ನಂಬುಗೆ, ದಾನ ಮೊದಲಾದವುಗಳು ಧನದ ಮುಂದೆ ತುಚ್ಛವೆಂದು ಕಾಣುತ್ತವೆ. ಆ ಮೇಲೆ ಧನವು ಯಾವ ಪರಿಯಿಂದ ದೊರೆತರೂ ಅಡ್ಡಿಯೇನು? ಅದಕ್ಕೆ ಒಲ್ಲೆನೆಂದೆನ್ನುವುದೇಕೆ? ಎಂಬ ವಿಚಾರಗಳು ನಲಿದಾಡಹತ್ತುತ್ತವೆ.

ಈ ಪ್ರಕಾರ ಧನವು ಮನುಷ್ಯನ ಶಕ್ತಿಯನ್ನಾಕರ್ಷಿಸಿ ತನ್ನ ಪರಿಣಾಮಕ್ಕನುಗುಣವಾಗಿ ಮಾಯವಾಯಿತೆಂದರೆ ಆ ಮನುಷ್ಯನ ಸರ್ವಸ್ವವೇ ನಾಶವಾಗುವದು. ಧನವನ್ನೇ ನಂಬಿಕೊಂಡಿದ್ದ ಅವನ ಮನವು ಮತ್ತೊಂದು ಯೋಚಿಸಲಿಕ್ಕೆ ಶಕ್ತಿಯಿಲ್ಲದೆ ಭಗ್ನವಾಗುವದು. ಧನದ ಸಲುವಾಗಿಯೇ ನುಡಿಯುತ್ತಿದ್ದ ಅವನ ಕೈಕಾಲುಗಳು ಆ ಮೇಲೆ ಮತ್ತೊಂದು ಕಾರ್ಯವನ್ನು ಮಾಡಲಾರವು. ಹೀಗಾಗಿ ಆ ಮನುಷ್ಯನು ಯಾವ ಕೆಲಸವನ್ನೂ ಮಾಡದೆ ಭೂಲೋಕವಲ್ಲಿಯೇ ನರಕವನ್ನನುಭವಿಸುವನು.

ಧನದ ಸೆಳೆತವು ಇಷ್ಟು ಬಲಿಷ್ಠವಾಗಿರುವುದರಿಂದಲೇ ಭಕ್ತನು ಧನವನ್ನು ಜಂಗಮಕ್ಕರ್ಪಿಸಿ ತನ್ನ ಮಾಯೆಯನ್ನು ಪರಿಹರಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಧನದ ಎಳತವನ್ನು ಸೈರಿಸಿಕೊಳ್ಳುವುದು ಅಲ್ಪರ ಕೆಲಸವಲ್ಲ. ಧನಪ್ರೊಂದು ಬೇತಾಳನಂತೆ ಎಂದರೂ ಅಡ್ಡಿಯಿಲ್ಲ. ತನ್ನಕಿಂತ ಶಕ್ತಿಯುತರಾದವರಲ್ಲಿಯೇ ಅದು ಹೇಳಿದ ಹಾಗೆ ಕೆಲಸ ಮಾಡುವುದಲ್ಲದೆ ಅಶಕ್ತರಾದವರು ದೊರೆತರೆ ಅವರನ್ನು ಪರಿಪರಿ ಕಷ್ಟಕ್ಕೀಡುಮಾಡುವುದು.

ವಸ್ತು ಸ್ಥಿತಿಯು ಹೀಗಿದ್ದರೂ ಭಕ್ತರ ಸ್ಥಿತಿಯನ್ನೇ ಹಾರೈಸಿಕೊಂಡಿರುವ ಕೆಲವು ಅಯ್ಯನವರು ಭಿಕ್ಷ ಎಂದರೆ ಲಕ್ಷ ಎಂದೆನ್ನುತ್ತ ಹಿಗ್ಗಿಕೊಂಡಿರುವರಲ್ಲ! ಶಿವ ಶಿವ! ಅವರ ಈ ಹಿಗ್ಗನ್ನು ಕಂಡು ಕನಿಕರಪಡಬೇಕಾಗುತ್ತದಲ್ಲವೆ? ಭಕ್ತರ ಅಲ್ಪ ಧನಕ್ಕಾಗಿ ತಮ್ಮ ತನುಮನ ಶಕ್ತಿಗಳನ್ನು ಮರೆತು ವಿನೇಕ ಶೂನ್ಯರಾಗಿ ಸರ್ವಸ್ವವನ್ನು ಸೂರೆ ಮಾಡಿ ಬಾರದ ಅಶುಚಿತ್ವವನ್ನು ಕರೆದು ತಮ್ಮ ಮೈಮೇಲೆ ಹಾಕಿಕೊಳ್ಳುತ್ತಾರಲ್ಲವೆ? ಜೋಳಿಗೆ ಸಿಕ್ಕಿಗೊಂಡು ಪೂರ್ವದ ಪುಣ್ಯವೆಂತೆ ಆ ಜೋಳಿಗೆಯೆಂದರೆ ಸರ್ವ ಅವರು ತಿಳಿದಿರುತ್ತಾರೆ. ಅವರ ತಲೆವಳಿಕೆಯೇ ಅನು ನಿತ್ಯ ಕೆಳಕ್ಕೆ ಎಳೆಯುತ್ತದೆ.

ಯಾಕಂದರೆ ಜೋಳಿಗೆಯನ್ನು ಹಿಡಿಯುವದು ಅಕಿಂಚನರ ಅನ್ನಸಂಜಯಕ್ಕಾಗಿಯಲ್ಲ. ಅಥವಾ ಅಭಾಗ್ಯರ ಭಾಗ್ಯಕ್ಕೇನು ವೆಂದೂ ಅಲ್ಲ. ಜೋಳಿಗೆಯನ್ನು ಹಿಡಿಯುವದೆಂದರೆ ಮಹಾ ಶಕ್ತಿವಂತರ ಕಾರ್ಯ. ಅದೊಂದು ತನ ಸುನಧನಾಲಿಪ್ತರಾದವರಲೀಲೆ. ಧನದ ಎಳತದಿಂದ ಸಿಕ್ಕು ಒದ್ದಾಡುತ್ತಿರುವ ಭಕ್ತರ ಮೋಕ್ಷಕ್ಕಾಗಿಯೇ ಜಂಗಮನು ಜೋಳಿಗೆಯನ್ನು ಧರಿಸಬೇಕಾಯಿತು.

ಪರಮಾತ್ಮನ ಇರವನ್ನರಿತು ಮಾಯಾಮೋಹವನ್ನು ಹೊದ್ದದೆ ನಿರ್ಮುಕ್ತರಾದವರಿಗೇನೇ ಧನದಲ್ಲಿ ಶುಚಿತ್ವವು ಲಭಿಸುವದಲ್ಲದೆ ಅನ್ಯರು ಅದಕ್ಕೆ ಕೈಹಾಕಿದರೆ ವ್ಯರ್ಥವಾಗಿ ತಾವು ಸಹ ಕೇಳು ಸ್ಥಿತಿಗಿಳಿಯಬೇಕಾಗುವದೆಂಬುದು ಸ್ಪಷ್ಟವಾಗುವದಿಲ್ಲವೇ? ಆದುದರಿಂದಲೇ ಮಹಾನುಭಾವರು ನೀನೊಲಿದವಂಗಲ್ಲದೆ ಧನದಲ್ಲಿ ಶುಚಿತ್ವವು ಯಾರಿಗೆ ಅಳವಡುವದಯ್ಯಾ? ಎಂದು ಹೇಳಿದ್ದಾರೆ.

ಇನ್ನು ತನಮನ ಧನ ಶುಚಿಯಿದ್ದವರೇ ಅಂದರೆ ಅವುಗಳ ಜಾಲದಿಂದ ದೂರಾಗಿದ್ದವರೇ ನಿರ್ಭಯರಾಗಿರಬಲ್ಲರು. ತನವಂಚಕ ಮನವಂಚಕ, ಧನವಂಚಕರಾದವರಿಗೆ ನಿರ್ಭಯವು ಸಿದ್ಧಿಸುವದೆಂತು? ಯಾಕಂದರೆ ಆಶೆಯೇ ಪಾಪಕ್ಕೆ ಮೂಲ. ಪಾಪವೇ ಭೀತಿಗೆ ಮೂಲ. ಭೀತಿಯುಳ್ಳವನು ಪಾಪಿಷ್ಠನೆಂದೇ ತಿಳಿಯಬೇಕು. ಅನೇಕ ಕೋಟಿ ಕೊತ್ತಳಗಳ ಮಧ್ಯದಲ್ಲಿ ಪಾಪಿಷ್ಠನು ಚತುರಂಗಬಲದಿಂದ ರಕ್ಷಿಸಲ್ಪಡುತ್ತಿದ್ದರೂ ಭೀತಿಯು ಅವನನ್ನು ಅವರಿಸದೆ ಬಿಟ್ಟೀತೆ? ಅವುದೊಂದು ಪದಾರ್ಥವು ಅಕಸ್ಮಾತ್ ಸುಳ್ಳು ಹೇಳಿದರೆ ದೊರೆಯುವಂತಿದ್ದರೆ ಅರೂ ಒಲ್ಲೆನೆನ್ನಲಿಕ್ಕಿಲ್ಲ. ಆದರೆ ಪರಮಾತ್ಮನನ್ನು ಒಲಿಸಿಕೊಂಡವರು ಮಾತ್ರ ಈ ಆಶೆಗೆ ಸೊಪ್ಪು ಹಾಕರು. ಯಾಕಂದರೆ ಅದು ಭಯ ತರುತ್ತದೆಂಬುದು ಅವರಿಗೆ ಗೊತ್ತಿದೆ. ಆತ್ಮಾನುಭಾವಿಗಳು ಭಯರಹಿತರು. ಭಯರಹಿತನಾಗುವದೇ ಮುಕ್ತಿಯು. ಇದೇ ಮಾನವ ಜನ್ಮದ ಗುರಿಯು. **ಪಾಟೀಲ ಲಿಂಗನಗೌಡ.**

—ರಾಯಚೂರ ಜಿಲ್ಲೆಯ ಗಂಗಾವತಿಯ ಹತ್ತರ ಅಂಜನೆಯ ತಾರೀಖಿನ ದಿವಸ ಒಂದು ಭಯಂಕರ ಸಪ್ಪಳವು ಕೇಳಿಸಿತು. ಮರು ದಿವಸ ನೋಡಲು ಎಮ್ಮಾಗುಡ್ಡವು ಇಬ್ಭಾಗವಾಗಿ ದೊಡ್ಡ ದೊಡ್ಡ ಬಂಡೆಗಲ್ಲುಗಳು ಉರುಳಿ ಬಿದ್ದಿದ್ದವು! ಜನರು ಭೂಕಂಪದಿಂದಾಗಿದೆಯೆಂದು ತಿಳಿದಿರುವರು.

—ಮುಂಬಯಿಯಲ್ಲಿ ರವೀಂದ್ರನಾಥರು ಪಾಶ್ಚಾತ್ಯ ಶಿಕ್ಷಣದ ಸೊಳ್ಳುತನದ ಬಗ್ಗೆ ಭಾಷಣ ಮಾಡಿದರು.

ವಿವಿಧ ವಿಷಯ.

ಸಂತತಿಯು ಬೇಕೋ ಬೇಡವೊ?

ಜಗತ್ತಿನ ಜನಸಂಖ್ಯೆಯು ವಿಪರೀತವಾಗಿ ಬೆಳೆಯುತ್ತಿರುವುದರಿಂದ ಸಂತತಿ ನಿರೋಧವು ಆವಶ್ಯವೆಂದು ಕೆಲವರ ಮತ. ಹಿಂದುಸ್ಥಾನದಲ್ಲಿಯೂ ಈ ಸಂತತಿನಿರೋಧವಾಗಬೇಕೆಂದು ಪುಮುಖ ಮುಂದಾಳುಗಳ ಮತವ್ಯಂಟು. ಯಾಕಂದರೆ ಇದರಿಂದ ರಾಷ್ಟ್ರದ ಶಕ್ತಿಯು ಕುಂದುವದಲ್ಲದೆ ನೂತನ ಸಂತತಿಗೆ ಅನ್ನವನ್ನು ದೊರಕಿಸುವದೂ ಸಹ ಕಠಿಣವಾಗುವದು. ಎಲ್ಲ ದೇಶಗಳಿಗಿಂತ ಜಪಾನ ದೇಶದಲ್ಲಿ ಈ ಪ್ರಶ್ನೆಯು ವಿಶೇಷವಾಗಿ ವಿಚಾರಿಸಲ್ಪಡಹತ್ತಿದೆ. ಹೋದ ವರುಷದಲ್ಲಿ ಒಟ್ಟಾರೆ ೨೫೯೭೭೩೩ ಕೂಸುಗಳು ಹುಟ್ಟಿದವು. ಸಧ್ಯಕ್ಕೆ ಆ ದೇಶದಲ್ಲಿ ನಿವಿಸೋಂದಕ್ಕೆ ೫ ಕೂಸುಗಳು ಹುಟ್ಟುತ್ತಿವೆ. ಈ ಪ್ರಜಾವೃದ್ಧಿಯನ್ನು ಹೇಗೆ ತಡೆಯಬೇಕೆಂದು ಅಲ್ಲಿಯ ವರ್ತಮಾನ ಪತ್ರಗಳು ತೊಡಗಿವೆ.

ಆದರೆ ಜರ್ಮನಿಯಲ್ಲಿ ಹಿಟ್ಲರನೂ ಮತ್ತು ಇಟಲಿಯಲ್ಲಿ ಮುಸೋಲಿನಿಯೂ ಜನಸಂಖ್ಯೆಯನ್ನು ಬೆಳೆಯಿಸವ ಪ್ರಯತ್ನ ಮಾಡುತ್ತಿದ್ದಾರೆ. ಫ್ರಾನ್ಸದಲ್ಲಿಯೂ ಕೂಡಾ ಕೂಲಿಕಾರರು ಮಕ್ಕಳ ಸಂರಕ್ಷಣೆ ಮಾಡಿಕೊಂಡು ವಂಶವೃದ್ಧಿಯನ್ನು ಮಾಡಬೇಕೆಂದು ಕೂಲಿಕಾರರು ಮಕ್ಕಳನ್ನು ಹಡೆದರೆ ಪ್ರತಿಯೊಬ್ಬ ಮಗುವಿನ ವೆಚ್ಚಕ್ಕಾಗಿ ತಿಂಗಳಿಗೆ ೭ ಶಿ. ೬ ಪೇ. ಕೊಡಲಾಗುವದು. ಆದುದರಿಂದ ಸಂತತಿ ವೃದ್ಧಿಯು ಆಗಬೇಕೋ ಬೇಡವೋ?

ಹೇರ ಹಿಟ್ಲರರ ದಿನಚರ್ಯೆ.

ಜರ್ಮನಿಯ ಸೂತ್ರಧಾರಕರಾದ ಹೇರ ಹಿಟ್ಲರರು ಇರುವದೆಲ್ಲಿ? ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳ ಮಧ್ಯಸೀಮೆಯಲ್ಲಿ ಪ್ರಾಕೃತಿಕ ಸೌಂದರ್ಯಪೂರ್ಣವಾದ ಕೋಟೆಯಲ್ಲಿ. ಸುತ್ತಲೂ ಬರ್ಫಾಚ್ಛಾದಿತ ಪರ್ವತಗಳೂ, ಎಳೆಹುಲ್ಲಿನಿಂದ ಹಸುರು ಮುರಿಯುತ್ತಿರುವ ಕೊಳ್ಳಗಳೂ ಇರುವವು. ಇವರಿಗೆ ಒಬ್ಬಳೇ ಒಬ್ಬ ಭಗಿನಿ. ಹೆಂಡತಿಯಿಲ್ಲ. ಮಕ್ಕಳಿಲ್ಲ. ತಾವಿಲ್ಲದ ಕಾಲದಲ್ಲಿ ಕೋಟೆಯೊಳಗೆ ಯಾರನ್ನೂ ಬರಿಸಿಕೊಡಬಾರದೆಂದು ಇವರ ಕಟ್ಟಪ್ಪಣೆ. ಹಿಟ್ಲರರು ಈಗೆರಡು ವರುಷಗಳ ಹಿಂದೆಯೇ ಮಾಂಸ ಭಕ್ಷಣವನ್ನು ತ್ಯಜಿಸಿದ್ದಾರೆ. ಇದನ್ನು ಬಿಡುವ ಮೊದಲು ಅವರ ಮೈ ಕೈ ನೋವಾಗುತ್ತಿದ್ದವು. ಆದರೆ ಈಗ ಒಳ್ಳೇ ಶತ್ಪರರಾಗಿರುತ್ತಾರೆ. ಶರೆಯನ್ನಂತೂ ಕುಡಿಯುವದೇ ಇಲ್ಲ. 'ಶರೆಕುಡಿದು ನನ್ನ ನರಗಳನ್ನು ವಿಷಮಯ ಮಾಡಲಾರೆನು' ಎಂದು ಹೇಳುತ್ತಾರೆ. ದಣಿದು ಸಪ್ಪಗಾಗಿ ಮನೆಗೆ ಬಂದು ಒಂದು ತಾಸಿನಲ್ಲಿಯೇ ವಿಶ್ರಮಿಸಿಕೊಂಡು ಉತ್ಸಾಹಭರಿತರಾಗಿ ಹಾಡುತ್ತಾರೆ ಕೆಂಗೂದಲಿನ ಹಸು ಮಕ್ಕಳನ್ನು ಕಂಡು 'ನನಗೂ ಮಕ್ಕಳಿದ್ದರೆ ನೆಟ್ಟಗಿದ್ದಿತಲ್ಲ' ಎಂದು ಉದ್ಗಾರ ತೆಗೆದು ಮರುಕ್ಷಣದಲ್ಲಿಯೇ "ನಾನು ರಾಜನೀತಿಯನ್ನೇ ಲಗ್ನವಾಗಿದ್ದೇನೆ. ಮತ್ತೊಬ್ಬ ಹೆಂಡತಿಯ ಬೇಡ" ಎಂದೆನ್ನುವರು.

ಮುದ್ದುಮಕ್ಕಳನ್ನು ಕಂಡರೆ ಯಾರು ಬಾಯಿತೆರೆಯಲಿಕ್ಕಿಲ್ಲ?

ಭಾಷಾ ಮಹತ್ವ.

ಪಂ. ಜವಾಹರಲಾಲ ನೆಹರು ಇವರು ಕಾಶಿಗೆ ಹೋದ ಕಾಲದಲ್ಲಿ ಅವರಿಗೆ ಅಲ್ಲಿಯ ವಿದ್ವಾನ್ ಸಾಹಿತ್ಯಕಾರರು ನಡೆಯಿಸುತ್ತಲಿರುವ 'ರತ್ನಾಕರ ರಸಿಕ ಮಂಡಳ' ಸಂಸ್ಥೆಯ ಪರವಾಗಿ ಮಾನಪತ್ರವು ಅರ್ಪಿಸಲ್ಪಟ್ಟಿತು. ಈ ಮಾನಪತ್ರಕ್ಕೆ ಉತ್ತರವಾಗಿ ಪಂ ಜವಾಹರಲಾಲರು ಹೇಳಿದುದೇನಂದರೆ "ಇಂದೇ ಒಂದು ವೇಳೆ ಸ್ವರಾಜ್ಯ ಸಿಕ್ಕರೆ ಮತ್ತು ನನ್ನ ಕೈಯಲ್ಲಿ ರಾಜ್ಯಸೂತ್ರವು ಬಂದಿದ್ದಾದರೆ ನಾನು ಎಲ್ಲಕ್ಕೂ ಮೊದಲು ಜಗತ್ತಿನ ಉತ್ತಮ ಭಾಷೆಯಲ್ಲಿ ೫-೬ ನೂರು ಪುಸ್ತಕಗಳನ್ನು ಹಿಂದಿಯಲ್ಲಿ ಭಾಷಾಂತರ ಮಾಡಿ ಹಿಂದಿಯನ್ನು ಉತ್ಕೃಷ್ಟ ವಾಙ್ಮಯವುಳ್ಳ ಭಾಷೆಯನ್ನಾಗಿ ಮಾಡುವೆನು. ಇದರಿಂದ ಹಿಂದೀಯನ್ನು ಕಲಿಯುವವರಿಗೆ ಉಳಿದ ಭಾಷೆಗಳ ಕಡೆಗೆ ನೋಡುವ ಪ್ರಸಂಗವು ಬರಲಿಕ್ಕಿಲ್ಲ ಮತ್ತು ಜಗತ್ತಿನಲ್ಲಿ ಯಾವಯಾವ ವಿಚಾರಗಳುಂಟಾಗುತ್ತಿರುವನೆಂಬುವನ್ನು ಕಂಡು ಹಿಂದೀ ವಾಚಕರ ದೃಷ್ಟಿಯು ವಿಶಾಲವಾಗುವದು."

ಯಾವುದೊಂದು ಭಾಷೆಯು ಸರ್ವಗ್ರಾಹ್ಯವಾಗಬೇಕಾದರೆ ಅದರಲ್ಲಿ ಜ್ಞಾನದ ಕೊರತೆಯಿರಬಾರದು. ಸ್ವತಂತ್ರ ಭಾಷೆಯ ವಾಙ್ಮಯದಲ್ಲಿ ಪ್ರತಿಯೊಂದು ವಿಚಾರದ ಸಮಾವೇಶವಾಗಿರಬೇಕು. ಆದುದರಿಂದ ನಮ್ಮ ಕನ್ನಡ ವಾಚಕರಾದರೂ ಅನ್ಯಭಾಷೆಗಳನ್ನು ಕಲಿತು ಆ ಭಾಷೆಗಳಿಂದ ವಿವಿಧ ವಿಷಯಗಳನ್ನು ಕನ್ನಡಕ್ಕೆಳೆದು ನಮ್ಮ ಭಾಷೆಯನ್ನು ವೃದ್ಧಿಗೊಳಿಸುವದು ಎಷ್ಟು ಅವಶ್ಯಕವಿದೆ ನೋಡಿರಿ!

ಆಡಂಬರದ ಪರಿಣಾಮ.

ಇಂಗ್ಲೆಂಡದಲ್ಲಿ ಸ್ತ್ರೀಪುರುಷರ ಆಡಂಬರಕ್ಕಾಗಿಯೇ ಪ್ರತಿವರುಷ ೨೦ ಕೋಟಿ ಪೌಂಡುಗಳು ವೆಚ್ಚವಾಗುತ್ತಲಿವೆ: ಮತ್ತು ಈ ಆಡಂಬರಗಳನ್ನು ಪೂರೈಸಲು ೧೦ ಲಕ್ಷ ಜನರು ಕೆಲಸನಿರ್ವಹಿಸುತ್ತಿದ್ದಾರೆ ಆದರೆ ಈ ಆಡಂಬರ ಪರಂಪರೆಯು ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದುದರಿಂದ ಕ್ಷಣಕ್ಷಣಕ್ಕೆ ಅವನ್ನನುಸರಿಸುವ ಕಾರ್ಯಾಲಯಗಳೂ ಉದ್ಯೋಗಗಳೂ ನಾಶವಾಗುತ್ತಿವೆ. ಇದರಿಂದ ಕಂಪನಿಗಳಿಗೆ ಭಯಂಕರ ಹಾನಿಯಾಗಿ ನಿರುದ್ಯೋಗವು ಹೆಚ್ಚುವದು. ಗಿಡ್ಡಂಗಿಯ ಆಡಂಬರವು ಹೊರಟು ಕೂಡಲೆ ದೇಶದ ತುಂಬೆಲ್ಲಾ ಗಿಡ್ಡಂಗಿಗಳೇ ಆಗುವವು. ಈ ಆವಶ್ಯಕತೆಯನ್ನು ಕೊನೆಗಾಣಿಸಲು ಲ್ಯಾಂಕಶಾಯರ ಗಿರಣಿಯವರು ಆ ಅರಿವೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಿದ್ಧಪಡಿಸಿದರು. ಸ್ವಲ್ಪ ದಿವಸಗಳಲ್ಲಿಯೆ ಈ ಲವಲವಿಕೆಯು ನಿಂತುಹೋದದ್ದರಿಂದ ಲ್ಯಾಂಕಶಾಯರದ ೨೯ ಕೋಟಿ ಗಜ ಅರಿವೆಯು ಮಾರಾಟವಾಗದೆ ಉಳಿಯಿತು. ಶರೀರ ಗೂದಲು ಕತ್ತರಿಸಿಕೊಳ್ಳುವದು ಸಭ್ಯ ಸ್ತ್ರೀಯರ ಲಕ್ಷಣವಾಯಿತು ಆದರೆ ಅದರಲ್ಲೆಷ್ಟೋ ಬದಲಾವಣೆಯಾದುದರಿಂದ ಆ ಉದ್ಯೋಗದಿಂದ ಹೊಟ್ಟೆ ತುಂಬಿಸಿಕೊಳ್ಳುವ ಅನೇಕರಿಗೆ ಅನ್ನ ಸಿಗದಂತಾಯಿತು. ಈಗ ಆಡಂಬರವು ಸುಧಾರಣೆಯ ಲಕ್ಷಣವೆನ್ನಿಸಿಕೊಳ್ಳಹತ್ತಿದೆ. ಆದರೆ ಇದರಿಂದ ಅನರ್ಥವೆಷ್ಟು ನೋಡಿರಿ.

ದೈವಲೀಲೆ.

ಜಪಾನದಲ್ಲೊಬ್ಬ ೫೭ ವರುಷದ ವ್ಯಾಪಾರಿಯಿರುವನು. ಅವನ ಹೆಸರು ಕೆಂಗರೋ ಕೋಯಾವಾ. ಅವನು ಟೋಮಾಕೊ ಕಾಟೋ ಎಂಬ ಸ್ತ್ರೀಯೆಳನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಆ ವ್ಯಾಪಾರಿಗೆ ತನ್ನ ವ್ಯಾಪಾರದಲ್ಲಿ ಬಹು ನಷ್ಟವಾದುದರಿಂದ ಅವನು ಆತ್ಮಹತ್ಯ ಮಾಡಿಕೊಳ್ಳಲು ಸಿದ್ಧನಾದನು. ಆವನ ಪ್ರಿಯೆಯು ತಾನೂ ಅವನ ಸಂಗಡ ಸಾಯಲು ಸಿದ್ಧಳಾದಳು.

ಒಂದು ದಿನ ಅವರು ಸಾಯುವದನ್ನು ನಿಶ್ಚಯಿಸಿ ರಾತ್ರಿಯಲ್ಲಿ ವಿಷ ಕುಡಿದು ಮಲಗಿಕೊಂಡರು. ಆದರೆ ಮರುದಿವಸ ವಿಷವೇರಿ ತಾವು ಸಾಯದಿದ್ದುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಆ ವೇಳೆ ಅವರು ಕೊರಳಿಗೆ ಪಾಶ ಹಾಕಿಕೊಂಡು ಸಾಯಲು ಒಂದು ಆಡವಿಗೆ ಹೋದರು. ಅಲ್ಲಿ ಆ ವ್ಯಾಪಾರಿಯು ತನ್ನ ತಲೆಗೆ ಕಟ್ಟುವ ವಸ್ತ್ರದಿಂದ ಅವರಿಗೆ ಉರ್ಲು ಹಾಕಿ ಸತ್ತಳೆಂದು ತಿಳಿದು ಮತ್ತೊಂದು ಗಿಡಕ್ಕೆ ಬಂದು ತಾನು ನೇಣು ಹಾಕಿಕೊಳ್ಳಲು ಕಾಲುಗಳು ನೆಲಕ್ಕೆ ಮುಟ್ಟಿದ್ದರಿಂದ ಸಾಯಲಿಲ್ಲ. ಇದೇನೋ ವಿಧಿಘಟನೆಯಿರುವದೆಂದು ತಿಳಿದು ಅವನು ಮತ್ತೊಂದು ಎತ್ತರವಾದ ಗಿಡವನ್ನು ಹುಡುಕುತ್ತಿರಲು ಅವನ ಪ್ರಿಯೆಯು ಉರ್ಲು ಹಾಕಿಕೊಂಡ ಸ್ಥಳದಲ್ಲಿ ಇಲ್ಲದ್ದು ಕಂಡು ಬೇರಾದನು, ಅವನು ಉರ್ಲು ಹಾಕಿಕೊಳ್ಳದೆ ಟೋಕಿಯೋ ಪಟ್ಟಣಕ್ಕೆ ಹೋಗಲು ಅವಳು ಪುನಃ ಅವನಿಗೆ ಭೆಟ್ಟಿಯಾದಳು, ನೋಡಿರಿ ದೈವಲೀಲೆಯನ್ನು. ಕಾಲನು ಕಾಲಕ್ಕೆ ಸರಿಯಾಗಿಯೇ ಬರುವನಲ್ಲವೇ?

ಇದು ನಿಂದೆಯೋ? ಸ್ತುತಿಯೋ?

ಲಾರ್ಡ ರಾಗಲಾನ ಇವರು ಶಾಸ್ತ್ರೀಯ ವಿಷಯದಲ್ಲಿ ತಜ್ಞರೂ ಸೇನಾಧಿಕಾರಿಗಳೂ ಮತ್ತು ಸುರಿತ ರಾಜಕಾರಣ ವಟುಗಳೂ ಇರುವರು. ಇವರು ತಮ್ಮ ಶಾಂತತಾ ಶಾಸ್ತ್ರವೆಂಬ ಪುಸ್ತಕದಲ್ಲಿ ಹೀಗೆ ಬರೆದಿದುವರು—"ಸ್ತ್ರೀಯರು ಪುರುಷರಕಿಂತಲೂ ಹಲ ಕೆಲವು ವಿಷಯಗಳಲ್ಲಿ ಬಹಳೇ ಭಯಂಕರರಿರುತ್ತಾರೆ. ಅವರಿಗೆ ಯಾವಾಗಲೂ ಯಾವುದೊಂದು ಪುರೈಷ್ಯ ಒಂದೇ ಪಕ್ಷವನ್ನು ನೋಡುವ ಅದರಲ್ಲಿಯೂ ಸ್ವಪಕ್ಷವನ್ನೇ ನೋಡುವ ರೂಢಿಯಿರುತ್ತದೆ. ಅವರಿಂದ ಅವರಿಗೆ ಅಪಕ್ಷಕ್ಕಾಗಿ ಭಯಂಕರ ಆವೇಶವುಂಟಾಗುತ್ತದೆ, ಯಾವದಾದರೂ ವಾದವಿವಾದವಾಗಲಿ, ನೆರೆಯ ಜಗಳವಾಗಲಿ ಬಂದರೆ ತಮ್ಮ ಮನೆತನದ ಪಕ್ಷವನ್ನೇ ಹಿಡಿಯುವದರಲ್ಲಿ ಅವರು ತತ್ಪರರಿರುತ್ತಾರೆ. ಹಾಗೆಯೇ ಅವರ ಅಭಿಮಾನವು ತಮ್ಮ ಜಾತಿ ದೇಶ ಮತ್ತು ತಮ್ಮ ರಾಜಕೀಯ ಪಕ್ಷದ ವಿಷಯದಲ್ಲಿ ಹೆಚ್ಚಾಗಿರುತ್ತದೆ. ಯಾವನಾದರೂ ಮುತ್ಸದ್ದಿಗೆ ಮತ್ತೊಬ್ಬನ ವಿಷಯವಾಗಿ ರಾಜ್ಯದಲ್ಲಿ ದ್ವೇಷವನ್ನು ಹುಟ್ಟಿಸಬೇಕಾದರೆ ಅವನು ತನ್ನ ಸಹಾಯಕ್ಕೆ ಸ್ತ್ರೀಯರನ್ನೇ ಆರಿಸಿಕೊಳ್ಳಬೇಕು.

ಇದು ಸ್ತ್ರೀ ಸ್ವಭಾವದ ನಿಂದೆಯೋ ಸ್ತುತಿಯೋ ಎಂಬುದನ್ನು ಸ್ತ್ರೀಯರೇ ವಿಚಾರಿಸಲಿ.

ಪೊಸ ಮಿತ್ರತ್ವ.

ಅಮೇರಿಕೆಯಲ್ಲಿ ನಿರುದ್ಯೋಗವು ಹೆಚ್ಚಿದ್ದುದರಿಂದ ಅಧ್ಯಕ್ಷರಾದ ಮಿ. ರೂಝುವೆಲ್ಟರು ಕೆಲಸವಾಡುವ ವೇಳೆ ಮತ್ತು ಆದಕ್ಕನುಗುಣವಾದ ಸಂಬಳ ಇವುಗಳನ್ನು ನೆರಪಡಿಸಿ ಪ್ರಜೆಗಳು ತಮ್ಮ ದೇಶದಲ್ಲಿ ಸಿದ್ಧವಾದ ಒಡವೆಗಳನ್ನೇ ಉಪಯೋಗಿಸಿ ಉದ್ಯೋಗವನ್ನು ಹೆಚ್ಚಿಸಲು ಎಷ್ಟೋ ಪ್ರಯತ್ನ ಮಾಡಿದರು. ಆದರೆ ಅಮೇರಿಕೆಯ ಉತ್ಪಾದನೆಯು ವಿಶೇಷವಾಗಿದ್ದುದರಿಂದ ಸಿದ್ಧಪಡಿಸಿದ ಪದಾರ್ಥಗಳು ದೇಶದಲ್ಲಿಯೇ ವ್ಯಾಪಾರವಾಗಲು ಹೇಗೆ ತಾನೇ ಶಕ್ಯವು? ಅದಕ್ಕಾಗಿ ಅಧ್ಯಕ್ಷರು ರಶಿಯದ ಸಂಗಡ ಮೈತ್ರಿಯನ್ನು ಬೆಳೆಸಿದರು. ಇವರು ರಶಿಯದ ಪರರಾಷ್ಟ್ರ ಮಂತ್ರಿಯಾದ ಮಿ. ಲಿಟವಿನೋಫ ಇವರೊಡನೆ ವಿಚಾರವಿನಿಮಯ ಮಾಡಿ ರಶಿಯಾ ದೇಶವು ಅಮೇರಿಕೆಯ ೩೫೦ ಕೋಟಿ ಡಾಲರ ಬೆಲೆಯ ಪದಾರ್ಥವನ್ನು ಕೊಂಡುಕೊಳ್ಳಬೇಕೆಂದೂ ಮತ್ತು ಅದರ ಬಹ್ವಂಶವನ್ನು ಅಮೇರಿಕೆಯು ಉದ್ಧರಿಯಾಗಿ ಕೊಟ್ಟು ಹಿಂದುಗಡೆ ಬೆಲೆಯನ್ನು ತೆಗೆದುಕೊಳ್ಳಬೇಕೆಂದೂ ನಿರ್ಣಯವಾಯಿತು. ಇದರ ವ್ಯವಸ್ಥೆಗಾಗಿ ಮಿ. ಮಿಲ್ಯಮ ಬುಲಿಟ ಎಂಬ ಅಮೇರಿಕೆಯ ವಕೀಲರು ರಶಿಯಾದಲ್ಲಿರಬೇಕೆಂದೂ ಗೊತ್ತಾಯಿತು. ಪ್ರೆ. ರೂಝುವೆಲ್ಟರ ಮೇಲೆ ಅನೇಕ ಟೀಕೆಗಳು ನಡೆದಿವೆ. ಆದರೆ ಅವರ ಯೋಜನೆಯನ್ನು ಕುರಿತು ಅಮೇರಿಕನ್ನರು ಬಹಳವಾಗಿ ಪ್ರಶಂಸಿಸಿರುತ್ತಾರೆ.

ಹಿಂದು ಸ್ತ್ರೀಯರ ದುರ್ದೆಸೆ.

ಕೆಲವು ದಿವಸಗಳ ಹಿಂದೆ ಕಾನಪುರದಲ್ಲಿ ರಾತ್ರಿ ೧೦ ಗಂಟೆಗೆ ಒಬ್ಬ ಮುಸಲ್ಮಾನನು ಒಬ್ಬ ಹಿಂದು ತರುಣಿಯನ್ನು ಕರೆದುಕೊಂಡು ಹೋಗುತ್ತಿರುವಾಗ ಜನರಿಗೆ ಅವನ ಮೇಲೆ ಸಂಶಯ ಬಂದು ಸತ್ತುಗಟ್ಟಿ ಗುಲ್ಲೆಬ್ಬಿಸಿದರು. ಆಗ್ಗೆ ಹತ್ತಿರದ ಮನೆಯಲ್ಲಿರುವ ಶ್ರೀ. ಗಂಗಾಪ್ರಸಾದ ದುಬೆ ಎಂಬ ವಕೀಲರು ಜನರನ್ನು ಶಾಂತಪಡಿಸಿ ಆ ಸ್ತ್ರೀಯನ್ನು ಕೇಳಲು, ಅವಳು 'ನಾನೊಬ್ಬ ಇಂದೂರ ಸಂಸ್ಥಾನದ ರಜಪೂತ ಸ್ತ್ರೀಯು ಗಂಡನ ಹೆಸರು ಮೂಲಚಂದ. ನನ್ನನ್ನು ಗಂಗಾಪ್ರಸಾದನೆಂಬ ಹೆಸರಿನವನು ಎತ್ತಿಕೊಂಡು ಕಾನಪುರಕ್ಕೆ ತಂದನು. ನಾನು ಇಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರರ ಕೈಯಲ್ಲಿ ಸಿಗಲು ಅವರು ಒಬ್ಬ ಪೋಲೀಸನನ್ನು ಕೊಟ್ಟು ಅನಾಥಾಲಯಕ್ಕೆ ಕಳಿಸಿರುವರು' ಎಂದು ಹೇಳಿದಳು. ಪ್ರೀ ದುಬೆ ವಕೀಲರಿಗೆ ಆ ಮುಸಲ್ಮಾನನ ವಿಷಯಕ್ಕೆ ಸಂಶಯ ಬಂದು— "ನೀನು ನಿಜವಾಗಿ ಪೋಲೀಸನೊ? ಹಾಗಾದರೆ ನಿನ್ನ ಮೈಮೇಲೆ ಸರಕಾರಿ ಉಡುಪು ನಂಬರು ಇಲ್ಲವಲ್ಲ? ಎಂದು ಅವರು ಆ ಸ್ತ್ರೀಯನ್ನೂ ಮುಸಲ್ಮಾನನನ್ನೂ ಜಾವಡಿಗೆ ಕರೆದುಕೊಂಡು ಬಂದು ಪೋಲೀಸ ಸಬ್ ಇನ್ಸ್‌ಪೆಕ್ಟರರ ಸ್ವಾಧೀನ ಮಾಡಿದರು ಅವರು ಅವನನ್ನು ಅನಾಥಾಲಯಕ್ಕೆ ನಿಶ್ಚಯವಾಗಿ ಮುಟ್ಟಿಸುವೆವೆಂದು ತಿಳಿಸಲು ವಕೀಲರು ಹಿಂತಿರುಗಿದರು. ಮರುದಿವಸ ವಕೀಲರು ಅನಾಥಾಲಯದಲ್ಲಿ ಕೇಳಲು ಆ ಸ್ತ್ರೀಯು ಬಂದೇ ಇಲ್ಲವೆಂದು ತಿಳಿಯಿತು. ಆ ಮೇಲೆ ಅವರು ಪ್ರಮುಖ ಕೊತವಾಲರಿಗೆ ಪತ್ರ ಬರೆದು ತಿಳಿಸಲು ಅವರು ಇಲ್ಲಿಯವರೆಗೆ ಶೋಧಿಸುತ್ತಿದ್ದರೂ ಅವಳ ಸುಳಿವೇ ಇಲ್ಲ. ಸಂಶಯ ಬಂದ ಪೋಲೀಸನೂ ಇನ್ಸ್‌ಪೆಕ್ಟರನೂ ಹಾಗೆಯೇ ಇದ್ದಾರೆ. ನೋಡಿರಿ ಹಿಂದುಗಳ ದುರ್ದೆಸೆಯನ್ನು!

ಯದ್ಧದ ಸಿದ್ಧತೆಯೇ?

ಮತ್ತೊಂದು ಮಹಾಯುದ್ಧವು ತೀವ್ರವೇ ಪ್ರಾರಂಭವಾಗುವದಿದ್ದು ಅದರ ಸಲುವಾಗಿ ಇಂಗ್ಲೆಂಡ ದೇಶವು ಸಿದ್ಧತೆ ನಡೆಸಿರುವುದಾಗಿ ತಿಳಿಯುತ್ತದೆ. ರಾಷ್ಟ್ರೀಯ ಸರಕಾರವು ಈ ಮಾತನ್ನು ಅಲ್ಲಗಳೆಯುತ್ತಿದ್ದರೂ ಅಧಿಕಾರಾರೂಢರಾದವರಲ್ಲಿ ಯುದ್ಧದ ಉತ್ಸುಕತೆಯು ಕಂಡುಬರುತ್ತಿದೆ. ಆದುದರಿಂದಲೇ ಮಿ. ಜಾರ್ಜ ಲ್ಯಾನ್ಸಬರಿಯವರು ತರುಣರಿಗೆ ಸೈನ್ಯ ವಿಭಾಗದಲ್ಲಿ ಸೇರಬೇಡಿರೆಂದು ಹೇಳುತ್ತಿದ್ದಾರೆ. ಯುದ್ಧದ ಮಂತ್ರಿಗಳಾದ ಲಾರ್ಡ ಹೆಲ್ಶಮ್ ಇವರು ಸರಕಾರವು ಯುದ್ಧದ ಸಿದ್ಧತೆ ಮಾಡುತ್ತಿರುವುದೆಂಬ ವಾರ್ತೆಯನ್ನು ನಿರಾಕರಿಸುತ್ತಿದ್ದಾರೆ. ಆದರೆ ಸರ್. ಹರ್ಬರ್ಟ ಸ್ಯಾಮುಯೇಲರಂತಹ ಮುಂದಾಳುಗಳು ಸಹ ಸರಕಾರಕ್ಕೆ ದೋಷಾರೋಪಣೆ ಮಾಡುತ್ತಾರೆಂದ ಮೇಲೆ ಏನೋ ಗದ್ದಲ ನಡೆದಿದೆಯೆಂಬುದು ನಿಜವು. ಸ್ಕಾಫೋರ್ಡ ಪರಗಣಿಯಲ್ಲಿಯ ಕಬ್ಬಿಣ ಕಾರ್ಯಾಲಯದ ನಿತ್ಯದ ಕೆಲಸಗಳನ್ನು ನಿಲ್ಲಿಸಿ ಮದ್ದುಗುಂಡುಗಳನ್ನು ಸಿದ್ಧಪಡಿಸುತ್ತಿರುವದನ್ನು ವರ್ತಮಾನ ಪತ್ರಗಳೆಲ್ಲಾ ಕೂಗಿಕೊಳ್ಳುತ್ತಲಿವೆ. ಯುದ್ಧವಾಗಲಿ, ಆಗದಿರಲಿ, ಇಂಗ್ಲಂಡವು ಮಾತ್ರ ಗುಪ್ತವಾಗಿ ಯುದ್ಧದ ಸಿದ್ಧತೆಯಲ್ಲಿರುವಂತೆ ಕಾಣುತ್ತಿದೆ.

ಪುರಾಣ ಹೇಳುವದೂ ಬದನೇಕಾಯಿ ತಿನ್ನುವದೂ ರಾಜನೀತಿಯು ಒಂದು ಅಂಗವಾಗಿಯೇ ಇರುವದಿಲ್ಲವೇ?

ಸಮಾಚಾರ ಸಂಗ್ರಹ.

—ಜರ್ಮನಿಯ ಲ್ಲಿ ಒಂದು ಕ್ರಿಸ್ತೀ ದೇವಾಲಯದ ಶಿಖರದಲ್ಲಿ ಕ್ರಿಸ್ತನ ಗುರುತಾದ ಶಿಲುಬೆಯನ್ನು ಕೂಡ್ರಿಸದೆ ಸ್ವಸ್ತಿಕ ಚಿಹ್ನೆಯನ್ನು ಕೂಡ್ರಿಸಿರುವರು.

—ಬೆಂಗಳೂರಿಗೆ ಮಹಾತ್ಮರು ಆಗಮಿಸಿದಾಗ್ಗೆ ಅವರಿಗೆ ಸೌಕರ್ಯಗಳನ್ನುಂಟುಮಾಡಿಕೊಡುವ ವಿಚಾರ ಮಾಡಲು ಸರ್. ಕೆ ಪಿ ಪುಟ್ಟಣಶೆಟ್ಟರ ಅಧ್ಯಕ್ಷತೆಯಲ್ಲಿ ಮಹಾಜನರ ಒಂದು ಸಭೆಸೇರಿ ಸ್ವಾಗತ ಸಮಿತಿಯುಂಟಾಯಿತು.

—ಡನ್‌ಲೋಪ್ ಕಂಪನಿಯವರು ಚಕ್ಕಡಿಗೆ ಹಾಕಲು ರಬ್ಬರಿನ ಗಾಲಿಗಳನ್ನು ಮಾಡಿರುವರು. ಇವು ಮೋಟಾರು ಗಾಲಿಗಳಂತೆಯೇ ಇದ್ದು ಇವುಗಳಿಗಿಂತ ಗಟ್ಟಿ ಇರುತ್ತವೆ. ಇದರಿಂದ ಎತ್ತುಗಳಿಗೆ ಚಕ್ಕಡಿಯ ಭಾರವು ಕಡಿಮೆಯಾಗಿ ಎಳೆಯುವದು ಅನುಕೂಲವಾಗುವುದು.

—ಬಳ್ಳಾರಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ವೈ. ಮಹಾಬಲೇಶ್ವರಪ್ಪನವರಿಗೆ ಬಳ್ಳಾರಿ ಮುನಸಿಪಲ್ ಚೇರಮನ್ನರು ನಗರ ಪರವಾಗಿ ಮಾನಪತ್ರವನ್ನರ್ಪಿಸಿದರು. ಅಧ್ಯಕ್ಷರ ಗುಣಗಾನ ಪದಪದ್ಯಗಳು ಸಂಸ್ಕೃತ, ಕನ್ನಡ ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಮಾಡಲ್ಪಟ್ಟಿದ್ದವು

—ಬೆಂಗಳೂರಿನ ವಲ್ಲೇಶ್ವರ ಓಣಿಯಲ್ಲಿಯ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಳೆದ ೧೦ ವರುಷಗಳಿಂದಲೂ ಪೂಜಾರಿಯಾಗಿದ್ದ ಶ್ರೀ ವೆಂಕಟಕೃಷ್ಣಾಚಾರ್ಯರು ಅನ್ಯರ ೫೦೦೦ ರೂ. ಗಳನ್ನು ತೆಗೆದುಕೊಂಡು ಹೋಗಿರುವರು.

—ತುಮಕೂರಿನ ಪ್ರಸಿದ್ಧ ವಕೀಲರೂ, ತರುಣ ಸಂಘದ ಅಧ್ಯಕ್ಷರೂ ಆದ ಶ್ರೀ ಟಿ ಗುರುನಂಜಯ್ಯ ಇವರು ತಿಪಟೂರಿನ 'ವೀರಶೈವ ಆನಂದಾಶ್ರಮ'ದಲ್ಲಿ ಡಿ. ಎಸ್. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ 'ವೀರಶೈವ ವಚನ ವಾಙ್ಮಯ ಎಂಬ ವಿಷಯದಲ್ಲಿ ಭಾಷಣ ಮಾಡಿದರು.

—ಬೆಂಗಳೂರಿನಲ್ಲಿ ಸಿಂಗಯ್ಯನೆಂಬವನ ಪತ್ನಿಯಾದ ದೇವೀರಮ್ಮ ಎಂಬಾಕೆ ಇರುವದರ ಬಗ್ಗೆ ಒಂದು ಚೀಟಿಯನ್ನು ಯಾರೋ ಎತ್ತಿಕೊಂಡು ಹೋಗಿರುವುದಾಗಿ ತಿಳಿಯುತ್ತಿದೆ

—ಕಮಲಾಬಾಯಿ ಉರ್ಫ ಅಲಿಮಾಬಿ ಎಂಬ ಹಿಂದು ತರುಣಿಯನ್ನು ಮುಸ್ತಾಕ ಅಲಿ ಎಂಬುವವನು ಎತ್ತಿಕೊಂಡು ಹೋದ ವ್ಯಾಜ್ಯವು ಹೈದರಾಬಾದದಲ್ಲಿ ನಡೆದಿರುವದು.

—ಹೈದರಾಬಾದ ಸಂಸ್ಥಾನದ ಸಿರಪುರ ತಾಲೂಕಿನ ಗಂಜಿಗುಡ್ಡ ಎಂಬ ಗ್ರಾಮದಲ್ಲಿ ಶಿಡ್ಲು ಬಡಿದು ನಾಲ್ವರು ನಿಂತಸ್ಥಳದಲ್ಲಿಯೇ ಸತ್ತರು. ಮೂವರಿಗೆ ಭಯಂಕರ ಗಾಯಗಳಾಗಿವೆ.

—ನಿಝಾಮ ರಾಜ್ಯದ ಚಿಟಗುಪ್ಪಿ ಜಹಗೀರಿನ ಸರ್ಕಲ ಇನ್ಸ್‌ಪೆಕ್ಟರ ಮೌಲಾನಾ ಸಯ್ಯದ ಫತ್ತೇ ಅಲ್ಲಿ ಇವರು ಸಂಚಾರದಲ್ಲಿದ್ದಾಗ ಸುಲಿಗೆಗಾರರು ಅವರ ಗುಡಾರವನ್ನು ಮುತ್ತಿ ೨೦೦೦ ರೂ. ಬೆಲೆಯ ಆಭರಣಗಳನ್ನು ಅಪಹರಿಸಿದರು.

—ಜಮಖಂಡಿ ನಗರ ವಾಸಿಗಳಾದ ಶ್ರೀ. ವಿಠ್ಠಲ ರಾಮಜಿ ಸಿಂದೆ ಈವರು ಅಲ್ಲಿಯ ಉದ್ದೇಶ ಮೆಥದ ಶ್ರೀ ಉದ್ದೇಶ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ 'ರಾಜಾರಾಮ ಮೋಹನರಾಯ, ಈ ವಿಷಯದ ಮೇಲೆ ಭಾಷಣ ಮಾಡಿದರು.

—ಜರ್ಮನಿಯಲ್ಲಿ ನಿರುದ್ಯೋಗವನ್ನು ಹೋಗಲಾಡಿಸುವ ದಕ್ಕಾಗಿ ಹೇರ ಹಿಟ್ಲರ ಇವರು ಒಂದು ಧನನಿಧಿಯನ್ನು ಕೂಡಿಸಿರುವರು; ಈಗ ೭॥ ಕೋಟಿ ಮಾರ್ಕುಗಳು ಕೂಡಿಸಲ್ಪಟ್ಟಿವೆ.

—ದಕ್ಷಿಣ ಹೈದರಾಬಾದದ ಹುಸೇನಸಾಗರದಲ್ಲಿ ಒಂದು ನೌಕಾ ವಿಹಾರ ಸಂಸ್ಥೆ (Boat club) ಯನ್ನು ಸ್ಥಾಪಿಸುವ ಕುರಿತು ಒಂದು ಸಮಿತಿಯು ಉಂಟಾಗಿದೆ. ಈ ಸಂಸ್ಥೆಯ ಮುಂದಿರವು ತೀವ್ರವೇ ಕಟ್ಟಲ್ಪಡುವದು.

—ಮಹಾತ್ಮಾಜಿಯವರಿಗೆ ನಾಗಪುರ ಮಧ್ಯಪ್ರಾಂತ ಮತ್ತು ವ್ಹಾಡಗಳ ಪ್ರವಾಸದಲ್ಲಿ ಹರಿಜನರ ತಾರೀಫಿನವರಿಗೆ ಅದಿಜನ ಕಾರ್ಯಾರ್ಥವಾಗಿ ಒಟ್ಟಿಗೆ ೪೪೦೦೦ ಸಾವಿರ ರೂಪಾಯಿಗಳು ದೊರೆತಿವೆ.

—ಮುಂಬಯಿ ನಾಗರಿಕರ ಇಚ್ಛೆಯನ್ನು ಮನ್ನಿಸಿ ರವೀಂದ್ರನಾಥ ಟಾಗೋರರವರು ಅಹಮದಾಬಾದಕ್ಕೆ ಹೋಗುವ ತನ್ನ ಕಾರ್ಯವನ್ನು ನಿಲ್ಲಿಸಿ ಇನ್ನೂ ಕೆಲವು ದಿವಸ ಮುಂಬಯಿಯಲ್ಲಿರುವರು.

—ಕನ್ಯಾ ಕುಮಾರಿ ಭೂಶಿರದಲ್ಲಿ ಒಂದು ಕ್ರೈಸ್ತರ ಗುಡಿಯಲ್ಲಿ ಪ್ರಾರ್ಥನೆ ನಡೆದಾಗ್ಗೆ ಕ್ರೈಸ್ತರ ಎರಡು ಬಣಗಳಲ್ಲಿ ಹೊಡೆದಾಟವಾಯಿತು. ಧರ್ಮೋಪದೇಶಕರ ಕಡೆಯ ೩-೪ ಜನರಿಗೆ ಗಾಯಗಳಾಗಿವೆ.

—ಹಾಂಗಕಾಂಗದ ಹೆತ್ತರ ಸುಲಿಗೆಗಾರರು ಒಂದು ಫ್ರೆಂಚ ಉಗಿಹಡಗವನ್ನು ಏರಿ ಪ್ರವಾಸಿಕರ ೧ ಸಾವಿರ ಪೌಂಡುಗಳನ್ನು ಸುಲಿದುಕೊಂಡುದಲ್ಲದೆ ನಾಲ್ಕು ಜನ ಚೀನಿ ಶ್ರೀಮಂತರನ್ನು ಎತ್ತಿಕೊಂಡು ಹೋಗಿದ್ದಾರೆ.

—ನಾದಿರಶಹರ ಕೊಲೆಯ ವಿಷಯವಾಗಿ ದುಃಖ ಪ್ರದರ್ಶನದ ತಂತಿಯನ್ನು ವ್ಹಾಯಿಸರಾಯರು ಜಹೀರ ಶಹ ಇವರಿಗೆ ಕಳಿಸಿದ್ದು ಅವರಿಂದ ಆಭಾರ ಪ್ರದರ್ಶಕ ತಂತಿಯು ಬಂದಿದೆ.

—ಡಿಸೆಂಬರ ೧೧ನೆಯ ತಾರೀಖಿನಿಂದ ೧೭ನೆಯ ತಾರೀಖಿನವರೆಗೆ ನಡೆಯುವ ಅಹಮ್ಮದ ನಗರದ ಸ್ವದೇಶೀ ಪ್ರದರ್ಶನವು ಸೌ. ಸರೋಜಿನಿ ನಾಯಿಡು ಇವರ ಹಸ್ತದಿಂದ ತೆರೆಯಲ್ಪಡುವದು.

—ಸ್ಥಾನಬದ್ಧತೆಯ ಪ್ರತಿಬಂಧವನ್ನು ಮುರಿದು ಅನೇಕ ಕ್ರಾಂತಿಕಾರರು ಪಲಾಯನ ಮಾಡಿದ್ದಾರೆ. ಅವರನ್ನು ಹಿಡಿದು ಕೊಟ್ಟವರಿಗೆ ೫೦೦೦ ರೂಪಾಯಿ ಕೊಡುವದನ್ನು ಸರಕಾರದವರು ಪ್ರಕಟಪಡಿಸಿದ್ದಾರೆ.

—ಕಲಕತ್ತೆಯಲ್ಲಿ ದಕ್ಷಿಣೇಶ್ವರದಲ್ಲಿರುವ ಕಾಲೀ ದೇವಾಲಯವನ್ನು ನುಗ್ಗಿ ಸುಲಿಗೆಗಾರರು ಒಂದು ಲಕ್ಷ ರೂ. ಬೆಲೆಯ ಮುತ್ತು ರತ್ನಾಭರಣಗಳನ್ನು ಅಪಹರಿಸಿದ್ದಾರೆ.

—ಅಮೃತಸರದಲ್ಲಿ ಕೆಲವು ಮುಸಲ್ಮಾನರು ಪೈಗಂಬರ ದಿನವನ್ನಾಚರಿಸುತ್ತಿದ್ದಾಗ ವಿರುದ್ಧ ಪಕ್ಷದ ಮುಸಲ್ಮಾನರು ಅವರ ಮೇಲೆ ಬಿದ್ದು ೧೪ ಜನರಿಗೆ ಗಾಯಪಡಿಸಿದರು.

—ಪಂಢರಪೂರ ತಾಲೂಕಿನ ವಡೂಜ ಗ್ರಾಮದ ಭಾನೂದಾಸ ರಾಮಾ ಎಂಬವನು ಇಂಗ್ಲೆಂಡದಲ್ಲಿ ಕುದುರೆ ಜೂಜಿನಲ್ಲಿ ೫೧೦೦೦ ರೂ. ಗೆದ್ದಿರುವನಂತೆ.

—ಕಲಕತ್ತೆಯಲ್ಲಿ ಸಿಡಿಮದ್ದು ಸಿದ್ಧಪಡಿಸುವ ಕಾರ್ಖಾನೆಯೊಂದನ್ನು ಪೋಲೀಸರು ಶೋಧ ಮಾಡಿದ್ದಾರೆ. ೬ ಬಂದೂಕುಗಳು ಎರಡು ಹವೆಯ ಪಿಸ್ತೂಲುಗಳು, ಮಳಿಗಳು, ರಾಸಾಯನಿಕ ದ್ರವ್ಯಗಳು, ಸಿಡಿಮದ್ದಿಗೆ ಬೇಕಾಗುವ ಬೇರೆ ಸಾಧನಗಳು ಸಿಕ್ಕಿವೆ.

ಪತ್ರಗಳ ಸಾರಾಂಶ.

ಶ್ರೀಮಂತರ ಮನೆಯ ವಿವಾಹ ಮತ್ತು ಸುತ್ಯದಾನ.

ಬೆಂಗಳೂರಿನ ವೀರಶೈವ ಪ್ರಸಿದ್ಧ ವರ್ತಕರಾದ ಮ ರಾ. ಗರಡಿ ಗುರುಬಸಪ್ಪನವರು ವಿಶ್ವೇಶ್ವರ ಪುರದಲ್ಲಿ ಕಟ್ಟಿಸಿರುವ 'ಅಂಬಿಕಾ ವಿಲಾಸ'ವೆಂಬ ದಿವ್ಯ ಭವನದಲ್ಲಿ ತಮ್ಮ ಕುಮಾರ್ತಿಯ ಲಗ್ನವನ್ನು ಬಹಳ ವಿಜೃಂಭಣೆಯಿಂದ ನಡೆಸಿದರು. ಆಗ್ಗೆ ಮೈಸೂರ ಸೀನೆಯ ದಿವಾನರಾದ ಅಮಿನ್ ಉಲ್‌ಮುಲ್ಕ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಸಾಹೇಬರೂ, ರಾಜ ಸಭಾ ಭೂಷಣ ದಿವಾನ ಬಹದ್ದೂರ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು, ಒಂದನೇ ಸಚಿವರಾದ ರಾಜಮಂತ್ರ ಪ್ರವೀಣ ಕೆ. ವ್ಯಾಥನ್‌ರವರೂ, ರಾಜ ಧರ್ಮ ಪ್ರವೀಣ ಜೇಥ ಜಸ್ಟಿನ್ ಪಿ. ಮಹದೇವಯ್ಯನವರೂ, ರಾಜ ಸೇವಾಸಕ್ತ ಎಸ್. ಹಿರಿಯಣ್ಣಯ್ಯನವರೂ, ರಾಜಚರಿತ್ರ ವಿಶಾರದ ರಾದ ರಾವಬಹದ್ದೂರ್ ಸಿ. ಹಯವದನರಾಯರು ಮುಂತಾದ ಇನ್ನೂ ಅನೇಕ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು. ಕಳೆದ ೧೨ನೆಯ ತಾರೀಖು ಭಾನುವಾರ ದಿನ ಮ. ರಾ. ಗರಡಿ ಗುರುಬಸಪ್ಪನವರು ಭಾರಿ ಔತಣವನ್ನು ಏರ್ಪಡಿಸಿದ್ದರು. ಸರ್. ಕೆ. ಪಿ ಪುಟ್ಟಣ್ಣಶೆಟ್ಟರವರು ಮ. ರಾ. ಗಳಾದ ಜಿ. ಮಲ್ಲಿಕಾರ್ಜುನಯ್ಯನವರು, ಜಿ. ಶಾಂತವೀರಪ್ಪನವರು, ಸಿ. ಎಂ. ಬಸಪ್ಪನವರು, ಕ್ಯಾಪ್ಟನ್ ವೈ. ವಿ. ಅಯ್ಯನವರು, ಎಂ. ನಾಗಪ್ಪ ಅಂಡಸನ್ಸ್‌ರವರು, ಲಿಂಗಪ್ಪ ಶೆಟ್ರು, ಯು. ಕೆ. ಷಣ್ಮುಖಪ್ಪನವರು, ಹೊಸಕೋಟೆ ಭದ್ರಪ್ಪನವರು, ತೂಬಿನೆರೆ ಶಂಕರಪ್ಪನವರು, ಮೈಸೂರು ಟಿ. ಮಹಲಿಂಗಪ್ಪನವರು, ಕಂಬಿ ಸಿದ್ಧರಾಮಣ್ಣನವರು, ಕೆ. ಸದಾಶಿವಪ್ಪನವರು, ಕೆ. ಗುಬ್ಬಯ್ಯನವರು, ಜಿ. ಹೆಚ್. ಚೆನ್ನಬಸಪ್ಪನವರು, ವಿ. ಶಿವಶಂಕರ್‌ರವರು, ರೇವಣಬಸಪ್ಪ ದೊಡ್ಡಮಠ ಮುಂತಾದ ಇನ್ನೂ ಅನೇಕ ದೊಡ್ಡ ಮನುಷ್ಯರುಗಳೂ, ಅನೇಕ ಮಹಿಳೆಯರುಗಳೂ ಸಹಾ ದಯಮಾಡಿ ಸಿದ್ದರು. ರಾ. ಗರಡಿ ಗುರುಬಸಪ್ಪನವರು ತಮ್ಮ ತಂದೆಯವರಾದ ಕೈ. ಯಜಮಾನ್ ಚಿಕ್ಕ ವೀರಪ್ಪನವರ ಸ್ಮಾರಕಾರ್ಥವಾಗಿ ವೀರ ಶೈವ ಬಡ ವಿದ್ಯಾರ್ಥಿಗಳಿಗೆ ವೇತನ ಕೊಡುವುದಕ್ಕೋಸ್ಕರವಾಗಿ ಒಂದು ಸಾವಿರ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟರು. ಇವರ ಉದಾರವಾದ ಈ ದಾನವು ಅತ್ಯಂತ ಸ್ತುತ್ಯವಾದುದಾಗಿದೆ. ಮೈಸೂರು ಲಿಂಗಾಯತ ಎಜ್ಯುಕೇಶನ್ ಫಂಡಿನ ಪ್ರೆಸಿಡೆಂಟರಾದ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಅದನ್ನು ಸ್ವೀಕರಿಸಿ ಯುಕ್ತವಾದ ಭಾಷಣದಿಂದ ಚಿಕ್ಕ ವೀರಪ್ಪನವರ ಗುಣ ಕಥನ ಮಾಡಿದ ನಂತರ ಸರ್ವರೂ ತಾಂಬೂಲಾದಿಗಳನ್ನು ಸ್ವೀಕರಿಸಿ ತೆರಳಿದರು.

ಪ್ರತ್ಯಕ್ಷ ದರ್ಶಿ.

ದೀಕ್ಷಾ ಸಮಾರಂಭ.

ಮಹಾಶಿವಶರಣರಾದ ನಾವದಿಗಿ ಶ್ರೀ. ರೇವಪ್ಪನವರು ಕಲಬು ರ್ಗಿಗೆ ಮೊನ್ನೆ ಆಗಮಿಸಿದ ಕಾಲದಲ್ಲಿ ಕಲಬುರ್ಗಿಯ ಬ್ರಹ್ಮಪುರ ದಲ್ಲಿ ಮೂರು ಮನೆತನದವರಿಗೆ ದೀಕ್ಷಾವಿಧಿಯು ಮಾಡಲ್ಪಟ್ಟಿತು. ಆ ಮೂರು ಮನೆತನದವರೆಂದರೆ ೧ ಶರಣಪ್ಪ ವೀರಪ್ಪ ಕೆರೂರಕರ ಬ್ರಹ್ಮಪುರ, ೨ ಸಿದ್ಧಪ್ಪ ಅಳ್ಳೊಳ್ಳಿ ಬ್ರಹ್ಮಪುರ, ೩ ಸಿದ್ಧಪ್ಪ ಕೊಟ್ರಿಕಿ ನಾಗನಳ್ಳಿ ಇವರು ಸಹ ಕುಟುಂಬ ಒಟ್ಟು ೧೪ ಜನರು. ಇವರಿಗೆ ಮೂರು ವರುಷಗಳ ಹಿಂದೆ ಶ್ರೀ. ಶಾಂತವೀರ ಸ್ವಾಮಿಗಳು ಹಿರೇ ಮಠ ಕಲಬುರ್ಗಿ ಇವರು ಲಿಂಗಧಾರಣೆ ಮಾಡಿದ್ದರು. ದೀಕ್ಷಾ ವಿಧಿಯ ಕಾಲದಲ್ಲಿ ಮತ್ತು ಸಹಕ್ಕೈಯ ಕಾಲದಲ್ಲಿ ಶ್ರೀ. ನಾವದಿಗಿ ಶರಣರು, ಶ್ರೀ. ಶಾಂತವೀರ ಸ್ವಾಮಿ ದೇಶಿಕೇಂದ್ರು ಉದ್ಗಿರಿ. ಶ್ರೀ. ಮಹಾಲಿಂಗಯ್ಯ ಮಠ ಕೊಟ್ರಿಕಿ, ಶ್ರೀ. ನೂರಂ ದಯ್ಯ ಸ್ವಾಮಿ ತಡ್ಲಿಗಿ ಮುಂತಾದ್ಯರ್ಷ್ಟ. ಶ್ರೀ. ನಂದಿವನದ ರೇವಣ ಸಿದ್ಧಯ್ಯ ಬ್ರಹ್ಮಪುರ ಮತ್ತು ದೋದನದ ಶ್ರೀ. ಭೀಮರಾಯ ಗೌಡರು, ಬೋದನದ ಶೀಲವಂತ ಶಿದ್ಧರಾಮಪ್ಪನವರು, ಝಳ ಕೋಟಿ ವಿರಪ ವೀರಯ್ಯನವರು ಇವಲ್ಲದೆ ಇನ್ನೂ ಅನೇಕ ಭಕ್ತ ಮಾಹೇಶ್ವರರು ಆಗಮಿಸಿದ್ದರು.

ಪ್ರತ್ಯಕ್ಷದರ್ಶಿ.

ಮಾದರಿಯ ರಥೋತ್ಸವ.

ಕಳೆದವಾರ ಹೊಸಪೇಟೆ ಹತ್ತಿರಿರುವ ಚಿತ್ತವಾಡಿಗಿ ಗ್ರಾಮದಲ್ಲಿ ಶ್ರೀ ಕಲ್ಮಂಟೇಶ್ವರನ ರಥೋತ್ಸವವು ಕಾಲ, ದೇಶ ಪರಿಸ್ಥಿತಿಗಳಿಗನುಸರಿಸಿ ಅತ್ಯಂತ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ. ಆಲ್ಲಿಯ ಪ್ರಸಿದ್ಧ ವ್ಯಾಪಾರಿಗಳಾದ ಕಲ್ಲಮಂಟಪ್ಪಣ್ಣ ಉಳ್ಳಾಗಡ್ಡಿ ಇವರ ಆಳಿಯಂದಿರಾದ ಶ್ರೀ. ಬೆಲ್ಲದ ಚನ್ನಪ್ಪನವರೇ ರಥೋತ್ಸವದ ಸಂಚಾಲಕರು. ಪ್ರತಿವರುಷ ಸಾವಿರಾರು ರೂ. ಗಳನ್ನು ಸ್ವತಃ ವೆಚ್ಚ ಮಾಡುತ್ತಿದ್ದಾರೆ. ಇತರ ಜಾತ್ರೆ, ರಥೋತ್ಸವಗಳಲ್ಲಿ ನಡೆಯುವ ವ್ಯರ್ಥ ದುಂದುಗಾರಿಕೆಯು ಮಾತ್ರ ಇಲ್ಲಿಲ್ಲ. ಪರಸ್ಥಳದವರು ಬಂದು ಈ ರಥೋತ್ಸವವನ್ನು ನೋಡಿದ್ದಾರೆ. ಇದೊಂದು ಮಾದರಿಯ ರಥೋತ್ಸವವೆಂದು ಸ್ಪಷ್ಟ ಎಲ್ಲರಿಗೂ ಗೊತ್ತಾಗುವಂತಿದ್ದಿತು. ಏಕೆಂದರೆ ಎಲ್ಲಿ ನೋಡಿದರೂ (Buy Indian Goods) 'ಹಿಂದುಸ್ಥಾನದ ಪದಾರ್ಥಗಳನ್ನೇ ಉಪಯೋಗಿಸಿರಿ' 'ಖಾದಿಯೇ ಸ್ವರ್ಗದ ಸೋಪಾನ' ಮೊದಲಾದ ರಾಷ್ಟ್ರೀಯ ವಾಕ್ಯಗಳೇ ಕಣ್ಣಿಗೆ ಬೀಳುತ್ತಿದ್ದವು. ಬಂದ ಜನಗಳಿಗೆ ಸದ್ಬೋಧ ವಾಗಲೆಂದು ಆಲಮಟ್ಟಿಯಿಂದ ಶ್ರೀ. ಪಡೆಕರ ಮಂಜಪ್ಪನವರನ್ನು ಕರೆಯಿಸಿಕೊಂಡು ಎರಡು ದಿವಸ ಜನಗಳ ದುಶ್ಚಟ ನಿವಾರಣೆ ಮತ್ತು ಆರ್ಥಿಕ ಸುಧಾರಣೆಗಳನ್ನು ಕುರಿತು ವ್ಯಾಖ್ಯಾನ ಮಾಡಿಸಿದರು.

ಬಂದವರಿಗೆ ರಸವತ್ತಾದ ಸಂಗೀತದಿಂದ ಭಕ್ತಿಯು ಉದ್ರೇಕವಾಗಲೆಂದು ಗಜೇಂದ್ರಗಡದಿಂದ ಸುಪ್ರಸಿದ್ಧ ಶ್ರೀ ಪಂಚಾಕ್ಷರ ಗವಾಯಿಗಳನ್ನು ಕರೆಸಿ ಸಂಗೀತ ಜರಗುವಂತೆ ಮಾಡಿದ್ದರು. ಅಂತು ಇಲ್ಲಿಯ ಪ್ರತಿಯೊಂದು ಕಾರ್ಯವೂ ಅತ್ಯಂತ ಆಕರ್ಷಣೀಯವಾಗಿದ್ದಿತೆಂದು ಹೇಳಬಹುದು.

ಜಾತ್ರೆ ರಥೋತ್ಸವಗಳಲ್ಲಿ ಕಲಿತ ಜನರು ಸೇರುವದು ಕಡಿಮೆಯಷ್ಟೆ. ಇಂಥ ಜನಗಳಿಗೂ ಕೂಡ ದೇವರ ದರ್ಶನಾಶೀರ್ವಾದಗಳು ದೊರೆತು ಅವರು ಸದ್ಭಕ್ತಿಪರರಾಗಬೇಕೆಂಬ ಉದ್ದೇಶದಿಂದ ಜಾತ್ರೆಯ ಸಂಚಾಲಕರು ವ್ಯಾಖ್ಯಾನ ಸಂಗೀತಗಳನ್ನು ಏರ್ಪಡಿಸಿ ಅವರೂ ರಥೋತ್ಸವಕ್ಕೆ ಬರುವಂತೆ ಮಾಡಿದ್ದರು. ಅನೇಕ ಜಾತ್ರೆ ರಥೋತ್ಸವಗಳಲ್ಲಿ ಸ್ವಾಭಾವಿಕವಾಗಿ ಸಾವಿರಾರು ಜನಗಳು ಕೂಡುವರು. ಆಲ್ಲಿಯ ಕಾರ್ಯಕ್ರಮಗಳನ್ನೇ ಸ್ವಲ್ಪ ವ್ಯತ್ಯಾಸಗೊಳಿಸಿ ಈಗಿನ ಪರಿಸ್ಥಿತಿಗನುಕೂಲವಾಗುವಂತೆ ಜರುಗಿಸಿದರೆ ಜನಗಳಿಗೆ ಎಷ್ಟೋ ಹಿತವಾಗುವುದರಲ್ಲಿ ಸಂಶಯವಿಲ.

ಓರ್ವ ಪ್ರವಾಸಿ.

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! **ಮಹತ್ವದ ಪುಸ್ತಕ!!**

ಖಾದೀ ಶಾಸ್ತ್ರ.

ಲೇಖಕರು:—**ಶ್ರೀ. ಹರ್ಡೀಕರ ಮಂಜಪ್ಪನವರು,**
ಪ್ರಕಾಶಕರು ಮತ್ತು ಸಂವಾದಕರು:— **ಶ್ರೀ. ಆಲೂರು ವೆಂಕಟರಾಯರು.**

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅವನ್ನು ಬಿಟ್ಟಿದ್ದರಿಂದಲೇ ನಾವು ಹೇಗೆ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಆಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿದೆ.

ಈ ಪ್ರಕಾರ ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣದಿಂದ ಬರೆದುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತೆ ತರಿಸಿಕೊಂಡು ಖಾದಿಯ ವಿಷಯವನ್ನು ಜೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ. ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. } **ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.**

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! **ಬರೇ ೬ ತಾಸುಗಳಲ್ಲಿಯೇ ಗುಣ!!**

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಿ ಜನರು ಸಾಯುತ್ತಿರುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವು. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು. ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಬರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ. ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಮಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತ ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುಭಯದಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಆದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಿಬ್ಬರಿಗೆ ಸಾಲುವಷ್ಟು ಔಷಧವನ್ನು ಮುಂಜಾಗ್ರತೆಯಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹೆಣದ ಅಡಚಣೆಯು ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇದಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೪-೦ ಮಾತ್ರ ಇಡಲಾಗಿದೆ, ವ್ಹೀ. ಪಿ. ಚಾರ್ಜ ಬೇರೆ.

ಅನುಮಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಗಿಂದ ಪಾರಾಗಿರಿ.

ವಿಳಾಸ:— **ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವ್ಯ ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಪಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ನಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಸೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಯೆ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನೂಲು. ಬಹು ತಾಳಿಕೆ. ಹೀಗಿದ್ದರೂ ಬಹು ಅಗ್ಗ.

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕರಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ' ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮುಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಲಿ.
ಜಿ. ರತ್ನಾಗಿರಿ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 289

ಶರಣ ಸಂದೇಶ

The
Sharana Sandesh

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಾರಿಗೂ ಅಂಜುವವನಲ್ಲ|
ಕೂಡಲಸಂಗನುದೇವರ ರಾಜತೇಜದಲ್ಲಿಪ್ಪನಾಗಿ ॥ ವ ೨೨೪ ॥ ಮಹಾನುಭಾವಿ ಬಸವಣ್ಣನವರು

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಲನಹಳ್ಳಿ- ಸೋಮವಾರ ತಾರೀಖು ೧ ನೆಯ ಜಾನೇವರಿ ೧೯೩೪ ಇಸ್ವಿ. | ಸಂಚಿಕೆ ೫೧.

ಜನಸೇವೆಯೇ ದೇವರಸೇವೆ

ಅಖಿಲ ಕರ್ನಾಟಕ
೧೯ ನೆಯ ಸಾಹಿತ್ಯ ಸಮ್ಮೇಲನ
ಹುಬ್ಬಳ್ಳಿ.

ಈ ಸಮ್ಮೇಲನದ ಅಧ್ಯಕ್ಷ ಭಾಷಣದಲ್ಲಿ
ನಾ. ದಿ. ಬ. ಕಂಬಳಿಯವರು
ಈ ಪ್ರಕಾರ ಹೇಳಿದರು:—

"ಮನುಷ್ಯನಲ್ಲಿ ಸುಪ್ತಾವಸ್ಥೆಯಲ್ಲಿದ್ದ ಉತ್ತಮ ಗುಣಗಳ ವಿಕಾಸಕ್ಕೆ ಅನುಕೂಲತೆಯನ್ನು ಒದಗಿಸಿಕೊಡುವದೇ ಸಾಹಿತ್ಯದ ಕಾರ್ಯ."

"ಯಾವಾಗ ನವ ದೃಷ್ಟಿಯ ಸಾಹಿತ್ಯವು ಜನಸಾಮಾನ್ಯರಲ್ಲಿ ಹೆಚ್ಚಾಗಿ ಪ್ರಚುರವಾಗುವುದೋ ಆಗ ದೇಶದಲ್ಲಿ ನವಜೀವನದ ಸಂಚಾರವಾಗುವುದು."



ದಿ. ಬ. ಕಂಬಳಿಯವರು.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL – 587 315
Dt. Bija... (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಸೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಓಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯು** ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ದಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಆಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ಬಿ. ಎನ್. ದಿವಾಕರ
ನರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರಾದರ್ಸ, ಡಾವಣಗೇರಿ.
ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. ೪ ಆಲಮಟ್ಟಿ ಜಾನೇವರಿ ತಾರೀಖು ೧೧ನೆಯ ಸೋಮವಾರ ೪ ಸಂಚಿಕೆ ೨೧

ಅಖಿಲ ಕರ್ನಾಟಕ

೧೯ನೆಯ ಸಾಹಿತ್ಯ ಸಮ್ಮೇಲನ ಹುಬ್ಬಳ್ಳಿ

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಅಖಿಲ ಕರ್ನಾಟಕ ೧೯ನೆಯ ಸಾಹಿತ್ಯ ಸಮ್ಮೇಲನವು ಕಳೆದ ಡಿಸೆಂಬರ್ ತಾ. ೨೯, ೩೦ ಮತ್ತು ೩೧ ಗಳಲ್ಲಿ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ಪ್ರೆಸ್ಸಿನ ಭವ್ಯವಾದ ಹಾಲಿನಲ್ಲಿ ಬಳ್ಳಾರಿಯ ಶ್ರೀಮಾನ್ ವೈ. ನಾಗೇಶ ಶಾಸ್ತ್ರಿಗಳು ವಿದ್ವಾನ್ (ಮದರಾಸ್) ಸರ್ವದರ್ಶನಸೇರ್ಥ (ಕಲಕತ್ತಾ) ಅಸ್ಥಾನ ವಿದ್ವಾನ್ (ಮೈಸೂರು) ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ತಾ. ೨೯-೧೨-೩೫ನೆಯ ರಾತ್ರೆ ೭ ಗಂಟೆಯ ಸುಮಾರಿಕ್ಕೆ ಅಧ್ಯಕ್ಷರ ಮತ್ತು ದಿವಾನಬಹದ್ದೂರ ಕಂಬಳಿಯವರ ಮೆರವಣಿಗೆಯು ಹೊರಟು ಪ್ರಮುಖ ಬೀದಿಗಳಲ್ಲೆಲ್ಲ ಹಾಯ್ದು ೯-೧೦ ಗಂಟೆಯ ಸುಮಾರಿಕ್ಕೆ ಸ್ವಾಗತ ಸ್ಥಳವನ್ನು ಮುಟ್ಟಿತು. ಮರುದಿವಸ ೯ ಗಂಟೆಯ ಸುಮಾರಿಕ್ಕೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು.

ಸಭೆಗೆ ಸಾವಿರಾರು ಜನರು ಬೇರೆ-ಬೇರೆ ಭಾಗಗಳಿಂದ ಬಂದಿದ್ದರು. ಬೆಂಗಳೂರಿನ ಶ್ರೀ ಡಿ. ವಿ. ಗುಂಡಪ್ಪನವರು, ಮಾಸ್ತಿ ವೆಂಕಟೇಶ ಆಯ್ಯಂಗಾರರು, ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು, ಶ್ರೀ. ವಿ. ಸೀತಾರಾಮಯ್ಯನವರು, ಶ್ರೀ. ಎಂ. ಆರ್. ಶ್ರೀನಿವಾಸ ಮೂರ್ತಿಗಳು, ಶ್ರೀ. ಟಿ. ಟಿ. ಶರ್ಮಾರವರು ಶ್ರೀ. ಕೆ ವಿ ಪುಟ್ಟಪ್ಪನವರು, ಶ್ರೀ. ಬೆಳ್ಳಾವೆ ವೆಂಕಟನಾರಾಯಣಪ್ಪನವರು ಶ್ರೀ. ಸಿ ಕೆ. ವೆಂಕಟರಾಮಯ್ಯನವರೇ ಮೊದಲಾದವರೂ, ದಾವಣಗೇರಿಯಿಂದ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರೂ, ಬಳ್ಳಾರಿಯ ಶ್ರೀಮಾನ್ ಮಹಾಬಲೇಶ್ವರಪ್ಪನವರೂ, ಹಿರಿಯ ಬಳ್ಳಾರಿ ವೀರಭದ್ರಪ್ಪನವರೂ, ಬಾಗಿಲುಕೋಟೆಯ ಮುನಿಸಿಂಗಪ್ಪನ ಮುರಿಗೆಯ್ಯನವರೂ, ವಿಜಾಪುರ ಕೌಜಲಗಿ ಶ್ರೀನಿವಾಸರಾಯರೂ, ಆಲಮಟ್ಟಿಯ ಹರ್ಡೇಕರ ಮಂಜಪ್ಪನವರೂ, ಬೆಳಗಾವಿಯಿಂದ ಡಾ. ನಂದಿಮಠರವರು, ಕೌಜಲಗಿ ಹನುಮಂತರಾಯರು, ಧಾರವಾಡದಿಂದ ಮುದವೀಡ ಕೃಷ್ಣರಾಯರೂ, ಆಲೂರು ವೆಂಕಟರಾಯರೂ, ರಾ. ಬ. ಬಿ. ಎಲ್. ಪಾಟೀಲರೇ ಮೊದಲಾದವರೂ, ಕೊಪ್ಪಳದ ಜಯರಾಮಾಚಾರ್ಯರೂ, ಕೊಡಗಿನ ಪದಾವತಿ ಬಾಯಿಯವರೂ, ಮಡಿಕೇರಿ, ಕಾರವಾರ, ಜಮಖಂಡಿ ಭಾಗಗಳಿಂದ ಅನೇಕ ಪ್ರತಿನಿಧಿಗಳೂ ಆಗಮಿಸಿದ್ದರು.

ಮೊದಲು ಚಿಕ್ಕ ಬಾಲಕರು ಸ್ವಾಗತಪದ ಪದ್ಯಗಳನ್ನು ಹೇಳಿದ ನಂತರ ಶ್ರೀ. ಮು. ನಿ ಜಗದ್ಗುರು ಮೂರುಸಾವಿರ ಮ. ಶ್ರೀಗಳವರ ಮತ್ತು ಚಿತ್ರಕಲ್‌ದುರ್ಗದ ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳವರ ಆಶೀರ್ವಾದವರ ಸಂದೇಶಗಳನ್ನು ಓದಿ ಹೇಳಿದರು ಅನಂತರ ಮುಂಬೈ ಸರಕಾರದ ಶಿಕ್ಷಣ ಮಂತ್ರಿಗಳಾದ ನಾ ದಿ ಬ. ಸಿದ್ದಪ್ಪ ತೋಟಪ್ಪ ಕಂಬಳಿ ಬಿ. ಎ. ಎಲ್. ಎಲ್ ಬಿ. ಎಂ. ಎಲ್. ಸಿ. ಜೇ. ಪಿ. ಇವರು ಸಾಹಿತ್ಯ ಸಮ್ಮೇಲನವನ್ನು ಉಪಕ್ರಮಿಸಿದರು. ಅವರ ಭಾಷಣದ ಮುಖ್ಯಾಂಶವನ್ನು ಬೇರೆ ಕಡೆಗೆ ಕೊಟ್ಟಿದೆ. ದಿ. ಬ. ಕಂಬಳಿಯವರ ಆಭಾರ ಮನ್ನಿಸಿದ ನಂತರ ಇವರು ತೆರಳಿದರು.

ಆ ಮೇಲೆ ಸಾಹಿತ್ಯ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಪಾವಟಿ ಸಿದ್ಧರಾಮಪ್ಪನವರು ತಮ್ಮ ಭಾಷಣವನ್ನು ಓದಿದರು. ಅದರ ಮುಖ್ಯಾಂಶದ ಕೆಲವು ಭಾಗವನ್ನು ಬೇರೆ ಕಡೆಗೆ ಕೊಟ್ಟಿದ್ದಾಗಿದೆ ಅನಂತರ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರು ಅಧ್ಯಕ್ಷರನ್ನಾರಿಸುವ ಸೂಚನೆಯನ್ನು ತಂದು ಶ್ರೀ. ವೈ. ನಾಗೇಶ ಶಾಸ್ತ್ರಿಗಳವರ ಪರಿಚಯವನ್ನು ಮಾಡಿಕೊಟ್ಟರು.

ಆ ಮೇಲೆ ಕರ್ನಾಟಕದ ಭಿನ್ನ ಭಿನ್ನ ಭಾಗಗಳ ಪರವಾಗಿ ಅಧ್ಯಕ್ಷರನ್ನಾರಿಸಿದ ನಂತರ ಅಧ್ಯಕ್ಷರು ಅಗ್ರಸ್ಥಾನವನ್ನು ವಹಿಸಿದರು. ಸಭೆಯು ಜಯಪ್ರದವಾಗಲೆಂದು ಈಚಲಕರಂಜಿಯ ಸಂಸ್ಥಾನಿಕರು, ಮುಖ್ಯ ನ್ಯಾಯಾಧೀಶ ಪಿ. ಮಹಾದೇವಯ್ಯನವರು, ಮೈಸೂರ ದಿವಾನ ಸಾಹೇಬರು ಮೊದಲಾದವರು ಶುಭಸಂದೇಶವನ್ನು ಕಳಿಸಿದ್ದರು.

ನಾ. ದಿ. ಬ. ಕಂಬಳಿಯವರ ಭಾಷಣ.

ಕನ್ನಡ ವಾಗ್ದೇವಿ ಸೇವಾನಿರತರಾದ ನನ್ನ ಸಹೋದರ ಸಹೋದರಿಯರೇ—

ಜ್ಞಾನ ಪ್ರಸಾರದ ಕಾರ್ಯಕ್ಕಿಂತಲೂ ಮಹತ್ತರವಾದ ಪವಿತ್ರ ಕಾರ್ಯವು ಇನ್ನೊಂದಿಲ್ಲವೆಂದು ನನ್ನ ಮನವರಿಕೆ. ಈ ಕಾರ್ಯವು ಸಾಹಿತ್ಯದಿಂದಲೇ ಆಗಬೇಕಾದುದರಿಂದ ಸಾಹಿತ್ಯ ಸೇವೆಯೆಂದರೆ ಜನಸೇವೆಯೆಂಬುದಾಗಿ ನನ್ನ ನಂಬಿಗೆ. ಈ ಪುಣ್ಯ ಕ್ಷೇತ್ರದಲ್ಲಿ ಜಾತಿ ಧರ್ಮಗಳ ತಿಕ್ಕಾಟ ಇಲ್ಲವೆ ರಾಜಕೀಯ ಪಂಗಡಗಳ ತೀಕ್ಷ್ಣ ಕಾರ್ಯಕ್ಕೆ ಅನುವು ಇರುವದಿಲ್ಲ. ಈ ಕಾರಣದೇ ಪಾಪನೆಯ ಮಂಗಳ ಕಾರ್ಯದಲ್ಲಿ ಎಲ್ಲ ಪಂಗಡದವರೂ ಎಲ್ಲ ಜಾತಿಯವರೂ ಒಮ್ಮನಸ್ಸಿನಿಂದ ಇಷ್ಟು ದಿವಸಗಳವರೆಗೆ ಸೇವೆ ಮಾಡಿದ್ದೇ ಇದಕ್ಕೆ ಬಲವಾದ ಸಾಕ್ಷಿಯು.

ಜೈನರು, ವೀರಶೈವರು, ಬ್ರಾಹ್ಮಣರು, ಕ್ರಿಸ್ತಿಯನ್ನರು ಇವರೇ ಮೊದಲಾದವರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಕನ್ನಡ ವಾಗ್ದೇವಿಯ ಆರಾಧನೆಯನ್ನು ಮಾಡಿರುವ ಸಂಗತಿಯು ಎಲ್ಲರಿಗೂ ವಿದಿತವಾಗಿದೆ. ಸಾಹಿತ್ಯ ಸೇವೆಯಿಂದಲೇ ಜನಸೇವೆಯು ಪರಿಣಮಿಸುವದರಿಂದ ಕನ್ನಡಿಗರೆಲ್ಲರೂ ಈ ಪುಣ್ಯ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹುರುಪಿನಿಂದ ಕೆಲಸ ಮಾಡುವರೆಂದು ನನ್ನ ಕೋರಿಕೆ.

ದೇಶದ ಅಭ್ಯುದಯಕ್ಕೆ ಅವಶ್ಯವಾದ ಅನೇಕ ಸಾಧನಗಳಲ್ಲಿ ಸಾಹಿತ್ಯವು ಮುಖ್ಯವಾಗಿರುವದು. ಯಾವಾಗ ನವದೃಷ್ಟಿಯ ಸಾಹಿತ್ಯವು ಜನ ಸಾಮಾನ್ಯರಲ್ಲಿ ಹೆಚ್ಚಾಗಿ ಪ್ರಚುರವಾಗುವುದೋ ಆಗ ದೇಶದಲ್ಲಿ ನವಜೀವನದ ಸಂಚಾರವಾಗುವದು. ಉತ್ಕರ್ಷದ ಶಿಖರಕ್ಕೆ ಹೋದ ದೇಶಗಳ ಸಾಹಿತ್ಯವನ್ನು ಪರೀಕ್ಷಿಸಿದರೆ ಇದರ ಬಗ್ಗೆ ಎಲ್ಲರಿಗೂ ಮನವರಿಕೆಯಾಗುವುದು. ಒಳ್ಳೇ ಸಾಹಿತ್ಯವನ್ನು ಪಡೆದ ಜನಾಂಗದಲ್ಲಿ ಕರ್ತವ್ಯಜ್ಞಾನ, ಕರ್ತವ್ಯ ಕ್ಷಮತೆ, ಎಲ್ಲ ವಿಷಯಗಳ ಸಾಂಗೋಪಾಂಗ ಜ್ಞಾನ, ಸಾಮಾಜಿಕ ಪುನರ್ಘಟನೆಯ ಕಾರ್ಯದಲ್ಲಿ ಐಕ್ಯಮತ್ಯ ಇವು ದೃಷ್ಟಿಗೆ ಬೀಳುತ್ತವೆ. ಈಗ್ಗೆ ಸಾಹಿತ್ಯದ ಬಗ್ಗೆ ಜನರ ಕಲ್ಪನೆಯೇ ಬೇರೆ ಬೇರೆಯಾಗಿದೆ. ಮನುಷ್ಯನಲ್ಲಿ ಸುಪ್ತಾವಸ್ಥೆಯಲ್ಲಿದ್ದ ಉತ್ತಮ ಗುಣಗಳ ವಿಕಾಸಕ್ಕೆ ಅನುಕೂಲತೆಯನ್ನು ಒದಗಿಸಿಕೊಡುವದೇ ಸಾಹಿತ್ಯದ ಕಾರ್ಯ ಕ್ಷೇತ್ರದಲ್ಲಿ ಮುಖ್ಯವಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಸ್ಫೂರ್ತಿದಾಯವಾದ ವಿಚಾರೋದ್ಬೋಧಕವಾದ ಸಮಾಜಕ್ಕೆ ಯೋಗ್ಯ ಮಾರ್ಗವನ್ನು ತೋರಿಸುವಂಥ ಸಮಾಜವನ್ನು ಉನ್ನತಿಗೆ ಒಯ್ಯುವಂಥ ಹೊಸ ಶರದ ಹೊಸ ಹುರುಪಿನ ಗ್ರಂಥಗಳ ನಿರ್ಮಾಣವಾಗುವುದಕ್ಕೆ ಸಾಹಿತ್ಯ ಸೇವೆಯಿಂದಲೇ ಉಪಜೀವಿಸುವಂಥ ಸಾಹಿತಿಗಳ ಒಂದು ವರ್ಗವು ಉತ್ಪನ್ನವಾಗಬೇಕು. ಈ ಧೈರ್ಯವನ್ನು ಮುಂದಿಟ್ಟುಕೊಂಡು ನಿಜವಾಗಿ ವಾಚನೀಯವಾದ ಪುಸ್ತಕಗಳ ಲೇಖನ ಮತ್ತು ಪ್ರಕಾಶನದ ಕೆಲಸವನ್ನು ಕನ್ನಡಿಗರು ಕೈಕೊಳ್ಳಬೇಕು. ಈ ಕಾರ್ಯವು ದೊಡ್ಡದಿದೆ. ಸಾಹಿತ್ಯದೇವಿಗೆ ಎಷ್ಟು ಉಪಾಸಕರಾದರೂ ಸಾಲದು.

ಸ್ವಾಗತಾಧ್ಯಕ್ಷರಾದ

ಶ್ರೀ. ಪಾವಟೆ ಸಿದ್ಧರಾಮಪ್ಪನವರ ಭಾಷಣ.

ಪಂಪನೆ ಪೆಂಪು ಪೊನ್ನ ಮಿರುಪೊಂಬರಿಜಾ ಗಜಗಂ ಗಜಾಯನಂ।
ಹಂಪೆ ಹರೀಶ್ವರಂ ನುಡಿಯ ಜೇನು ಪಡಕ್ಷರ ನಕ್ಷರಾತ್ಮನಾ॥
ಲಂಪಿನ ಜೈಮಿನಂ ಕರವಿಪಂಚಿಕೆಯಾ ನೃಪತುಂಗನಚ್ಚನೇ।
ತ್ರಿಂಪಿಲಿದಾಗೆ ನಾಡಿಸೆವ ಕನ್ನಡ ಸರಸತಿ ಪಾಲಿಕೊಚ್ಚತಂ॥

ಚೆನ್ನಬರವು.

ಚೆನ್ನಾಯ್ತು ನಿಮ್ಮ ಬರವಿದು।
ನನ್ನಿಯಿನವಗೊಗೆದುದಿಂದು ಪಿರಿದುಚ್ಚವ ದಲ್॥
ಕನ್ನೆಯ್ದಿಲ ಬಳಗೇರಿ ತನಿ।
ಜೊನ್ನದೆ ಪೇಳೊಂದದಿಹುದೆ ಸಮ್ಮದೋದವಂ॥

ನುನ್ನಣೆವೆತ್ತರೆ, ನಮ್ಮ ಕನ್ನಡವು ಕನ್ನ ಇಂಪನ್ನೂ ಸಂಸ್ಕೃತ ಪದಲಾವಣ್ಯವನ್ನೂ ತಳೆದಿದೆ. ಆಚ್ಚ ಕನ್ನಡವು ನಮ್ಮ ಆಚ್ಚ ಭಾವಗಳ ಬಾಳಿಕೆಗೆ ದರೆ ಸಂಸ್ಕೃತವು ಬುದ್ಧಿ ವಿಕಾಸಕ್ಕಾಗಿದೆ. ಜೀವೇಶರ ಜತೆಯನ್ನು ಕನ್ನಡದಲ್ಲಿ ಬಗೆದೋರಿ ಹೇಳಬಲ್ಲೆವಾದರೆ ಜೀವೇಶ ವಿವಮಾಂಸವನ್ನು ಸಂಸ್ಕೃತ ಪದಗಳಿಂದಲೆ ಮಾಡಲರಿವೆವು. ಸಂಸ್ಕೃತವನ್ನು ತದ್ಭವೀಕರಿಸಿ ಕನ್ನಡಿಸಬಲ್ಲೆವು. ಒಮ್ಮೊಮ್ಮೆ ಕನ್ನಡವನ್ನು ಜಜ್ಜಿ ಸಂಸ್ಕೃತಂಗೆಯ್ವೆವು. ಕರ್ನಾಟಕ ಸಂಸ್ಕೃತ ಶಬ್ದ ಭಾಂಡಾರವು ನಮ್ಮ ಪದ ಸಾಂಪದಿಕವು.

ಸಂದ ಕಾಲದಲ್ಲಿ ನಮ್ಮ ಕರುನಾಡು ತನ್ನ ಶಾಂತ ಗಂಭೀರ ನದಿಗಳಿಂದಲೂ ಗಾಢಾರಣ್ಯ ನಂದನಗಳಿಂದಲೂ ತನ್ನ ಮಕ್ಕಳ ಉದಾರಾಚರಿತಗಳಿಂದಲೂ ಕವಿಗಳ ಪ್ರತಿಭಾ ಪ್ರಸರಕ್ಕೆ ಹೇತುವಾಗಿದ್ದಿತು. ನಮ್ಮ ಕೃಷಿಯೂ ಪಶುಸಂಪತ್ತೂ ಹೆಚ್ಚಳವಾಗಿದ್ದುವು. ನಮ್ಮ ಅರಸರೂ ವೀರರೂ ಬಾಹುಬಲಿಗಳಾಗಿದ್ದರು. ನಮ್ಮ ನೈತಿಕಾಧ್ಯಾತ್ಮಿಕ ಧ್ಯೇಯಗಳೂ ಆಕಾಂಕ್ಷೆಗಳೂ ದಿವ್ಯವಾಗಿದ್ದವು. ಉಚ್ಚತಮವಾಗಿದ್ದುವು. ಮಹಾತ್ಮರೂ ಮಹಾನುಭಾವರೂ ನಮಗೆ ಆದರ್ಶವಾಗಿದ್ದರು.

ಜೈನ ಕವಿಗಳು ನಮ್ಮ ಅರಸರ ಏಸಿರಿಯನ್ನೂ ವೀರರ ತೋಳೆಕ್ಕತುಳಬಲವನ್ನೂ ನಾಡಿನ ಸೊಬಗನ್ನೂ ಬಣ್ಣಿಸುವುದರೊಡನೆ ಜಿನ ಧರ್ಮದ ಪುರಾಣವನ್ನು ಬರೆದು ಕನ್ನಡಿಗರ ಸಾಹಿತ್ಯವನ್ನು ಪೋಷಿಸಿದ್ದರು.

(೧೪ ನೆಯ ಪುಟಕ್ಕೆ ಮುಂದರಿದಿದೆ.)

ಕುಮಾರಿ

ಸೋಫಿಯಾ ಸೋಮಜಿಯವರ ಭಾಷಣವೂ

ಕರ್ನಾಟಕ ಚೇಂಬರ ಆಫ್ ಕಾಮರ್ಸವೂ.

(ಕರ್ನಾಟಕ ವಣಿಕ ಸಂಘದ ೬ನೆಯ ಪ್ರಕಟನೆ.)

ಇದೇ ತಿಂಗಳ ಬಳ್ಳಾರಿಯಲ್ಲಿ ಏನೇ ತಾರೀಖಿನ ದಿವಸ ಮುಂಬಯಿಯ **ಕುಮಾರಿ ಸೋಫಿಯಾ ಸೋಮಜಿಯವರ** ಹಸ್ತದಿಂದ 'ಅಖಿಲಭಾರತ ಸ್ವದೇಶಿ ವಸ್ತು ಪ್ರದರ್ಶನ'ದ ಉದ್ಘಾಟನವಾಯಿತಷ್ಟೆ. ಆ ಕಾಲಕ್ಕೆ ಅವರು ಅಪ್ಪಣೆ ಕೊಡಿಸಿದ ಭಾಷಣವು ಚಿಕ್ಕದಾದರೂ ಒಟ್ಟನಲ್ಲಿ ಚೆನ್ನಾಗಿದೆಯೆಂಬುದನ್ನು ಕೇಳಿದವರೂ ಓದಿದವರೂ ಬಲ್ಲರು. ಸ್ವದೇಶಿ, ಖಾದಿ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ನಿಸರ್ಗ ಶಕ್ತಿಗಳನ್ನು ಉಪಯೋಗಿಸಿಕೊಂಡು ಕರ್ನಾಟಕವು ಹೇಗೆ ಮುಂದೆ ಬಂದೀತು. ಎಂಬೀ ವಿಷಯಗಳನ್ನು ಕುರಿತು ಅವರು ಹೇಳಿದ ಮಾತುಗಳು ಯುಕ್ತವೇ ಆಗಿವೆ. ಆದರೆ, ಸಂದರ್ಭಾನುಸಾರವಾಗಿ ಅವರು **ಕರ್ನಾಟಕ ಚೇಂಬರ್ ಆಫ್ ಕಾಮರ್ಸದ** ಬಗ್ಗೆ ನುಡಿದ ಕೆಲವು ಮಾತುಗಳು **ಈ** ಸಂಸ್ಥೆಯ ಸಂಬಂಧವಾಗಿ ಜನತೆಯಲ್ಲಿ ಅನ್ಯಾಯವಾಗಿ ತಪ್ಪು ತಿಳುವಳಿಕೆಯನ್ನುಂಟುಮಾಡುವಂಥವುಗಳಾದ್ದರಿಂದ ನಮ್ಮ ಕಮಿಟಿಯವರು ಈ ಪ್ರಕಟನೆಯನ್ನು ಹೊರಡಿಸಬೇಕಾಯಿತು.

ಈ ಚೇಂಬರದ ವಿಷಯವಾಗಿ ಕುಮಾರಿಯವರು ಹೇಳಿದ ಮಾತುಗಳು ಅವರ ಸ್ವಂತ ಅಭಿಪ್ರಾಯಗಳೆಂದು ನಮ್ಮ ಕಮಿಟಿಯವರಿಗೆ ಕಂಡು ಬರುವದಿಲ್ಲ. ಯಾಕಂದರೆ ಅವರೇ ತಮ್ಮ ಭಾಷಣದ ಪ್ರಾರಂಭದಲ್ಲಿ, ತನಗೆ ದೊರೆತ ಅತ್ಯಲ್ಪ ಅವಕಾಶದಲ್ಲಿ ಇಲ್ಲಿಯ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಸಂಪೂರ್ಣವಾಗಿ ಓದಿಕೊಳ್ಳುವದಾಗಲಿಲ್ಲವಾದ್ದರಿಂದ ತಮ್ಮ "ಕರ್ನಾಟಕ ಮಿತ್ರರ ಕಡೆಯಿಂದ ದೊರೆತ ವಸ್ತು ಅಲ್ಲಲ್ಲಿ ಕೂಡಿಸಿಕೊಂಡ ತುಣುಕು ಮಿಣುಕು ಮಾಹಿತಿಯಿಂದಲೇ" ತಾವು ಸಂತುಷ್ಟರಾಗಿ ಬಂದೆ. ಮಾತಾಡ ಬೇಕಾಯಿತೆಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಸ್ವಾಭಾವಿಕವಾಗಿ ಕರ್ನಾಟಕ ಚೇಂಬರವನ್ನು ಕುರಿತು ಅವರು ಹೇಳಿದ ಮಾತುಗಳಾದರೂ ಅವರ ಆ 'ಕರ್ನಾಟಕ ಮಿತ್ರ'ರು ಹೇಳಿದ ಆ ಮಾಹಿತಿಯನ್ನು ನಂಬಿ ಆಡಿದವುಗಳೆಂಬದು ಎಲ್ಲರಿಗೂ ಒಡೆದು ಕಾಣುವಂತಿದೆ. ಕಾರಣ ಈ ವಿಷಯಕವಾದ ಅವರ ಅಭಿಪ್ರಾಯಗಳು ಅವರ ಆ ಕರ್ನಾಟಕ ಮಿತ್ರರ ಅಭಿಪ್ರಾಯಗಳಿಂದು ತಿಳಿದು ಕೊಳ್ಳಲು ಯಾವ ಅಭ್ಯಂತರವೂ ಇಲ್ಲ. ಕುಮಾರಿ ಸೋಫಿಯಾ ಸೋಮಜಿಯವರಿಗೆ ಮಾಹಿತಿಯನ್ನು ಕೊಟ್ಟವರು ನಮ್ಮ ಸಂಘದ ನಾಲ್ಕೂ ನರುಷದ ವರದಿಗಳನ್ನು ಕೂಡ ಓದಿರಲಿಕ್ಕಿಲ್ಲವೆಂದು ನಮ್ಮ ಕಮಿಟಿಯವರು ವಿಷಾದದಿಂದ ಹೇಳಬೇಕಾಗಿದೆ. ಹಾಗಿದ್ದರಿ ಹೊರಗಿನಿಂದ ಬಂದ ಈ ಕುಮಾರಿಯವರ ಬಾಯಿಂದ ಈ ಸಂಸ್ಥೆಯ ಬಗ್ಗೆ ಅನ್ಯಾಯವಾಗಿ ಯುಕ್ತವಲ್ಲದ ನಿಮ್ಮರ ವಚನಗಳನ್ನು ಆಡಿಸುವ ಪ್ರಸಂಗನೇ ಉಂಟಾಗುತ್ತಿರಲಿಲ್ಲ

ಪ್ರದರ್ಶನದ ಉಪಯುಕ್ತತೆಯು ಸಫಲವಾಗುವಂತೆ ಬಳ್ಳಾರಿಯ 'ಅಖಿಲಭಾರತ' ಸ್ವದೇಶಿ ಪ್ರದರ್ಶನವನ್ನು ಅತ್ಯಂತ ಯಶಸ್ವಿ (?) ಯಾಗಿ ಜರುಗಿಸಲು ಪ್ರಯಾಸಪಟ್ಟ ಕುಮಾರಿ ಸೋಮಜಿಯವರ ಕರ್ನಾಟಕ ಮಿತ್ರರಲ್ಲೊಬ್ಬರು, ಈಗ ಕೆಲವು ದಿವಸಗಳ ಹಿಂದೆ ಗ್ರಾಮ ಸಂಘಟನೆಯನ್ನು ಪ್ರತ್ಯಕ್ಷವಾಗಿ ಕೂಡಲೆ ಕೈಕೊಳ್ಳಬೇಕೆಂದು ಸೂಚಿಸುವ ಕಾಗದವೊಂದನ್ನು ನಮ್ಮ ಸಂಘಕ್ಕೆ ಬರೆದಿದ್ದರು, ಅದರೊಳಗಿನ ಸೂಚನೆಗಳು ನಮ್ಮ ಕಮಿಟಿಯವರ ದೃಷ್ಟಿಯಲ್ಲಿ ಈ ಸಂಘದ ಕಾರ್ಯಕ್ಷೇತ್ರಕ್ಕೆ ಒಳಪಟ್ಟದ್ದಿಲ್ಲವಾದ್ದರಿಂದ ಆ ವಿಷಯದಲ್ಲಿ ಏನನ್ನೂ ಮಾತಲಾಗಲಿಲ್ಲ. ಆ 'ಕರ್ನಾಟಕ ಮಿತ್ರರ' ಆ ಸೂಚನೆಗಳೇ **ಈ** ಕುಮಾರಿಯವರ **ಈ** ಭಾಷಣದಲ್ಲಿ ಪ್ರತಿಬಿಂಬಿತವಾಗಿವೆ.

ನಮ್ಮ ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಉಗ್ರಾಭಿಪ್ರಾಯವುಳ್ಳ ಕೆಲವರು **ಈ** ಚೇಂಬರವು ತಮ್ಮ ದೃಷ್ಟಿಯಿಂದ ಸಾಕಷ್ಟು ಸಮಾಧಾನಕರವಾಗಿ ಕಾರ್ಯ ಮಾಡುತ್ತಿಲ್ಲವೆಂದು ಆಗಾಗ್ಗೆ ಮೂಗು ಮುರಿಯುತ್ತಿರುವದು ನಮ್ಮ ಕಮಿಟಿಯವರ ನಿದರ್ಶನಕ್ಕೆ ಬಂದಿದೆ ಕಾರಣ **ಈ** ಸಂದರ್ಭದಲ್ಲಿ ಒಂದು ಮಾತನ್ನು ಅತ್ಯಂತವಾಗಿ ಸ್ಪಷ್ಟಗೊಳಿಸಬೇಕೆಂದು ನಮ್ಮ ಕಮಿಟಿಯವರಿಗೆ ಅನಿಸಹತ್ತಿದೆ. ಗ್ರಾಮಸಂಘಟನೆ, ಸ್ವರಾಜ್ಯ ಸಿದ್ಧಿ, ಸ್ವಾತಂತ್ರ್ಯ ಸಂಪಾದನೆ **ಈ** ಮಾತುಗಳು ಬಹು ಸಂದಿಗ್ಧವಿದ್ದು, ಆಯಾ ವಿಷಯಗಳಲ್ಲಿ ಆಯಾ ಸಂಸ್ಥೆಯವರು ವಹಿಸುವ ಧೋರಣವು ಅವರವರ ಕಾರ್ಯಕ್ಷೇತ್ರವನ್ನು ಅವಲಂಬಿಸಿರುತ್ತದೆ. ಅದರಲ್ಲಿಯೂ ವ್ಯಾಪಾರಸ್ಥರು ಉಗ್ರವಾದ ಕಾರ್ಯಪದ್ಧತಿಯನ್ನು ಸ್ವೀಕರಿಸಿ ರಾಜಕೀಯ ರಂಗದಲ್ಲಿ ಪ್ರತ್ಯಕ್ಷವಾಗಿ ಇಳಿಯುವದು ಶಕ್ಯನೇ ಇಲ್ಲವೆಂದು ನಮ್ಮ ಕಮಿಟಿಯವರ ಸ್ಪಷ್ಟಾಭಿಪ್ರಾಯವಿದೆ. ನಮ್ಮನ್ನು ಟೀಕಿಸುವ ಮಿತ್ರರು ತಾವು ಕೈಕೊಳ್ಳಬೇಕೆನ್ನುವ ಕಾರ್ಯ ಪದ್ಧತಿಯನ್ನೇ ನಾವು ಅವಲಂಬಿಸುತ್ತಿಲ್ಲವೆಂದು ಕೋಪಿಸಬಹುದು ಆದರೆ, ಅವರಷ್ಟೇ ದೇಶಾಭಿಮಾನದಿಂದ ಕಾರ್ಯಮಾಡುತ್ತಿದ್ದ ಈ ಸಂಘವು ತನ್ನ ನಿರ್ಣಯ ಬುದ್ಧಿಗೆ ಯೋಗ್ಯ ಕಂಡಂತೆ ಯಾವಯಾವ ಕಾರ್ಯಗಳನ್ನು ಯಾವಯಾವ ಕಾಲಕ್ಕೆ ತಾನು ಮಾಡಬೇಕೆಂಬವನ್ನು ಅದು ಚೆನ್ನಾಗಿ ತಿಳಿದು ಕೊಳ್ಳಬಲ್ಲದೆಂಬದನ್ನು ನಮ್ಮ ಕಮಿಟಿಯವರು ಸ್ವಚ್ಛವಾಗಿ ಹೇಳಬಯಸುತ್ತಾರೆ.

ಇನ್ನು ಕುಮಾರಿ ಸೋಮಜಿಯವರ ಬಾಯಿಂದ **ಈ** ಚೇಂಬರದ ಬಗ್ಗೆ ಒಡಮೂಡಿಸಿದ ಮಾತುಗಳನ್ನು ಒಂದೊಂದಾಗಿ ಪರಾಮರ್ಶಿಸೋಣ. ಉಳಿದ ಎಲ್ಲ ಪ್ರಾಂತಿಕ ಚೇಂಬರಗಳಂತೆ ಸರಕಾರಕ್ಕೆ ವರ್ತಕರ ಬೇಡಿಕೆಗಳನ್ನು ನಿವೇದಿಸುವದರಲ್ಲಿ **ಈ** ಚೇಂಬರದ ಧ್ವನಿಯು ಅತ್ಯಂತ ಕ್ಷೀಣವಾಗಿದೆಯೆಂದೂ, ತ್ರೈಮಾಸಿಕ ಸಭೆಗಳನ್ನು ನಾವು ನೆರೆಯಿಸುವದಿಲ್ಲವೆಂದೂ ಪ್ರಕಟನೆಗಳ ಮೂಲಕ 'ವಾಚಾಳತ್ವ'ವನ್ನು ತೋರಿಸುವದಿಲ್ಲವೆಂದೂ, ಬರಿಮಾತಿನಿಂದ ಕಾರ್ಯವು ಮುಂದರಿಯದೆ ಉತ್ಕಟ ಹಾಗು ಅವ್ಯಾಹತ ಕಾರ್ಯವು ಅವಶ್ಯವಿದೆಯೆಂದೂ ಮತ್ತು ಗುಜರಾಥ, ಪಂಡಾಬ, ಬಂಗಾಲ, ಮಹಾರಾಷ್ಟ್ರಗಳ ಚೇಂಬರಗಳಂತೆ **ಈ** ಚೇಂಬರವಾದರೂ ಹಳ್ಳಿಗಳ 'ಆರ್ಥಿಕ ನೋಜಣಿ'ಯ ಮೂಲಕ ಗ್ರಾಮಸಂಘಟನೆಯ ಕಾರ್ಯಗಳನ್ನು ಯಾಕೆ ಕೈಕೊಳ್ಳಬಾರದೆಂದೂ ಅವರು **ತಮ್ಮ** ಸಂಸ್ಥೆಯ ಮೇಲೆ ಆರೋಪನೆ ಮಾಡಿದಾರೆ.

ಸರಕಾರಕ್ಕೆ ವರ್ತಕರ ಬೇಡಿಕೆಗಳನ್ನು ನಿವೇದಿಸುವದರಲ್ಲಿ ಈ ಸಂಘದ ಧ್ವನಿಯು ಕ್ಷೀಣವಾಗಿದೆಯೆಂದು ಅವರನ್ನುವದು ಯಥಾರ್ಥವಾಗಿಲ್ಲ. ನಮ್ಮ ನಾಲ್ಕು ವರುಷದ ವರದಿಗಳನ್ನೋದಿದ ವರಿಗೆ ಈ ವಿಷಯದಲ್ಲಿ ನಾವು ಮಾಡಿದ ಕಾರ್ಯದ ಸಂಪೂರ್ಣ ಮನವರಿಕೆಯಾಗುವಂತಿದೆ. ಯಾಕಂದರೆ ಕಳೆದ ೪ ವರುಷಗಳಲ್ಲಿ ಕಾಟನ್ ಮಾರ್ಕೆಟ್ ಆ್ಯಕ್ಟ, ಕಾಟನ್ ಟ್ರಾನ್ಸ್‌ಪೋರ್ಟ ಆ್ಯಕ್ಟ, ದಿ ನ್ಯೂ ಕಾಟನ್ ಬಿಲ್, ಇನ್‌ಕಮ್ ಟ್ಯಾಕ್ಸ ಆ್ಯಕ್ಟಿನಲ್ಲಿ ಸುಧಾರಣೆ, ಕೋಸ್ಟಲ್ ಟ್ರಾಫಿಕ್ ಬಿಲ್, ಭಟ್ಟಿಳಿಕ ಕಾರವಾರಗಳ ಬಂಧರಗಳು ಮತ್ತು ಕರ್ನಾಟಕ ಏಕೀಕರಣ ಬಂಗಾರ ರಫ್ತು, ಒಟಾವಾ ಒಪ್ಪಂದ, ಆರ್ಡಿನನ್ಸುಗಳು, ಅಂತರ ರಾಷ್ಟ್ರೀಯ ಕೂಲಿಕಾರ ಪರಿಷತ್ತು, ಭಡೋಡಾ ಹೆಚ್ ಕಾಂಟ್ರ್ಯಾಕ್ಟ ಮತ್ತು ೧೪ ಪೆನ್ಸಿನ ಹುಂಡಣಾವಳಿಯ ದರ ಇವೇ ಮುಂತಾದ ಮಹತ್ವದ ವಿಷಯಗಳ ಬಗ್ಗೆ ಪ್ರಾಂತಿಕ ಮತ್ತು ಕೇಂದ್ರ ಸರಕಾರಗಳಿಗೆ ಕರ್ನಾಟಕ ವರ್ತಕ ಸಮಾಜದ ಅಭಿಪ್ರಾಯಗಳನ್ನು ಸಾಕಷ್ಟು ಬಲವಾಗಿ ತಿಳಿಸಿದ್ದಲ್ಲದೆ ಆ ವಿಷಯದಲ್ಲಿ ಅವ್ಯಾಹತವಾಗಿ ಕಾರ್ಯ ಮಾಡಲಾಗಿದೆ. ಈ ವರುಷವಾದರೂ ತಾಳೀಕೋಟೆಯ ಹತ್ತರ ಡೋಣ ನದಿಗೆ ಪೂಲು, ಹೆಸರೂರು ಹತ್ತರ ತುಂಗಭದ್ರಾ ನದಿಗೆ ಪೂಲು, ಬಳ್ಳಾರಿ ಜಿಲ್ಲೆಯ ಕೋರ್ಟು ಕಚೇರಿಗಳಲ್ಲಿ ಕನ್ನಡ ಫಾರ್ಮುಗಳ ಸಂಗ್ರಹ, ಸ್ಟ್ಯಾಂಪ್ ಆಕ್ಟಿನಲ್ಲಿ ತಿದ್ದುಪಡೆ, ಮುಂಬಯಿ ಪದಾರ್ಥ ಮಿಶ್ರಣ ಪ್ರತಿಬಂಧಕ ಆ್ಯಕ್ಟ (೧೯೩೫), ಮುಂಬಯಿ ತಂಬಾಕದ ಆ್ಯಕ್ಟ (೧೯೩೫) ಮುಂಬಯಿ ತೂಕ ಮತ್ತು ಪರಿಮಾಣಗಳ ಆ್ಯಕ್ಟ (೧೯೩೫) ಇಂಡಿಯನ್ ಕಂಪನೀಸ್ ಆ್ಯಕ್ಟಿನ ಸಂಬಂಧವಾದ ವರದಿಗಳನ್ನು ನಿಲ್ಲಿಸುವ ವಿಚಾರ, ಇಂಡಿಯನ್ ಟ್ರೇಡ್ ಜರ್ನಲದಲ್ಲಿ ಕರ್ನಾಟಕ ಜಿಲ್ಲೆಗಳ ಪ್ರಕಾರವಾಗಿ ಆಯಾ ವಾರದಲ್ಲಿ ಕಟ್ಟಿದ ಅರಳೆಯ ಗಂಟುಗಳ ಲೆಕ್ಕವನ್ನು ತೋರಿಸುವ ವಿಚಾರ, ಹಿಂದುಸ್ಥಾನ ಜವಾನಗಳ ವ್ಯಾಪಾರದ ಒಪ್ಪಂದ, ಕರನ್ಸಿ ಲೀಗ್ ಆಫ್ ಇಂಡಿಯಾಕ್ಕೆ ಬೆಂಬಲ, ರಿಝರ್ವ ಬ್ಯಾಂಕ್ ಆಫ್ ಇಂಡಿಯಾ ಬಿಲ್ (೧೯೩೪), ೫-೧೦ ರೂಪಾಯಿಗಳ ಹೊಸ ನೋಟುಗಳು, ಟ್ಯಾರಿಫ್ ಆ್ಯಕ್ಟ ಅಮೆಂಡಮೆಂಟ್ ಬಿಲ್, ಗರ್ವರ್ನರ ಇಂಡಿಯನ್ ಪೆಟ್ರೋಲಿಯಮ್ ಆ್ಯಕ್ಟಿನ ತಿದ್ದುಪಡೆ, ಹಿಂದುಸ್ಥಾನದ ಕಬ್ಬಿಣ ಮತ್ತು ಉಕ್ಕಿನ ಉದ್ಯೋಗದ ಸಂರಕ್ಷಣದಲ್ಲಿ ಭದ್ರಾವತಿ ಕಬ್ಬಿಣದ ಕಾರಖಾನೆಗೆ ಪ್ರತ್ಯೇಕ ಸೌಕರ್ಯಗಳು ಇವೇ ಮೊದಲಾದ ಅತ್ಯಂತ ಮಹತ್ವದ ಪ್ರಜಲಿತ ವಿಷಯಗಳ ಬಗ್ಗೆ ಅಂಕಿ ವಿವರ-ಕೋಷ್ಟಕ ಮುಂತಾದ ಸಕಲ ಆಧಾರಗಳೊಡನೆ ಆಯಾ ಸರಕಾರದವರ ಕೂಡ ಸಮರ್ಪಕವಾದ ಪತ್ರವ್ಯವಹಾರವು ನಡೆದಿದೆ.

ಇವಲ್ಲದೆ ಅಂಚೆ, ತಂತಿ, ರೇಲ್ವೆ, ಇನ್‌ಕಮ್ ಟ್ಯಾಕ್ಸ ಮುಂತಾದ ಖಾತೆಗಳಿಗೆ ಸಂಬಂಧಿಸಿದ ವ್ಯಾಪಾರಸ್ಥರ ನೂರಾರು ವೈಯಕ್ತಿಕ ಹಾಗು ಸಾಂಘಿಕ ದೂರುಗಳನ್ನು ನಿವಾರಿಸುವ ಕಾರ್ಯವೂ ಮತ್ತು ಅವರಿಗೆ ಬೇಕಾದ ದೇಶವಿದೇಶಗಳ ವ್ಯಾಪಾರ ಮಾಹಿತಿಯನ್ನು ಪೂರೈಸುವ ಕಾರ್ಯವೂ ಸತತವಾಗಿ ನಿತ್ಯಶಃ ನಡೆದೇ ಇವೆ. ಹೋದ ವರುಷ ಕಾನಪುರದಿಂದ ಕೊಪ್ಪಳಕ್ಕೆ ಬರುವ ಕಡಲೆ ತೊಗರಿ ಮೊದಲಾದ ಮಾಲಿನ ಮೇಲೆ ರೇಲ್ವೆ ಸವಲತ್ತಿನ ದರಗಳನ್ನು ಒದಗಿಸಿಕೊಟ್ಟು ಸಹಸ್ರಾರು ರೂಪಾಯಿಗಳ ಉಳಿತಾಯವಾಗುವಂತೆ ಪ್ರಯತ್ನಿಸಿದ್ದಲ್ಲದೆ, ಈ ವರುಷ ಹೊಸ ಪೇಟೆಯಿಂದ ಹೋಗುವ ಬೆಲ್ಲದ ಮೇಲೆ ಕರ್ನಾಟಕದ ಎಲ್ಲ ಮುಖ್ಯ ಸ್ಟೇಶನ್ನುಗಳಿಗೂ ಸವಲತ್ತಿನ ದರವು ಸಿಗಬೇಕೆಂದು ಕಳೆದ ೫ ತಿಂಗಳುಗಳಿಂದಲೂ ಸತತವಾಗಿ ಪತ್ರವ್ಯವಹಾರವು ನಡೆಯುತ್ತಿದ್ದು ಆ ಸವಲತ್ತು ಸಿದ್ಧಿಸಬಹುದಾದ ಲಕ್ಷಣಗಳೂ ಕಾಣ ಹತ್ತಿವೆ. ಈ ದೊಡ್ಡ ಕಾರ್ಯವು ಪೂರೈಸಿದರೆ ಕರ್ನಾಟಕಕ್ಕೆ ಪ್ರತಿವರುಷ ಒಂದು ಲಕ್ಷಕ್ಕಿಂತಲೂ ಹೆಚ್ಚು ಉಳಿತಾಯವಾಗುವದೆಂದು ನನ್ನ ಕಮಿಟಿಯವರ ನಿರೀಕ್ಷಣೆಯಿದೆ. ಇದಲ್ಲದೆ ಮೊನ್ನಿನ ಮೇ ತಿಂಗಳಲ್ಲಿ ಅವಸರದ ಕರ್ನಾಟಕ ಏಕೀಕರಣ ಪರಿಷತ್ತು ನೆರೆದು ಏಕೀಕರಣದ ಕಾರ್ಯವು ಸ್ವಲ್ಪಾದರೂ ಮುಂದುವರಿಯುವ ದರಲ್ಲಿ ಈ ಸಂಸ್ಥೆಯವರೂ ಶ್ರಮಪಟ್ಟಿದ್ದಾರೆ. ಇನ್ನು ಖೈತರ ತೊಂದರೆಗಳನ್ನೂ ನಮ್ಮ ಕಮಿಟಿಯವರು ದುರ್ಲಕ್ಷಿಸಿಲ್ಲ. ಉದಾಹರಣಾರ್ಥವಾಗಿ ರೇಲ್ವೆ ಮಾರ್ಗದ ಮೇಲಿರುವ ಹೊಲಗಳಲ್ಲಿ ರೇಲ್ವೆಯವರು ಹಚ್ಚಿಸಿದ ಕಲ್ಲಾರಿನ ಗಿಡಗಳ ಸಾಲಿನಿಂದ ಸುತ್ತು ಮುತ್ತಲಿನ ಭೂಮಿಯು ೨೦-೩೫ ಪೂಟುಗಳವರೆಗೆ ಪಡಬಿದ್ದು ಒಕ್ಕಲಿಗರಿಗೆ ಆಗುತ್ತಿದ್ದ ವಿಶೇಷವಾದ ಹಾನಿಯನ್ನು ನಿಲ್ಲಿಸುವ ದಕ್ಕೋಸ್ಕರ ಮುಂಬಯಿ ಒಕ್ಕಲತನ ಶಾಖೆಯವರೊಡನೆ ಪತ್ರವ್ಯವಹಾರ ಮಾಡಿ, ಆಯಾ ಸ್ಥಳಗಳನ್ನು ಸಂದರ್ಶಿಸಿ ಪರೀಕ್ಷಿಸಲು ಆ ಶಾಖೆಯ ಮತ್ತು ರೇಲ್ವೆ ಕಂಪನಿಯ ಅಧಿಕಾರಿಗಳನ್ನು ಕರೆಯಿಸಿಕೊಂಡು ಅವರಿಗೆ ಸಂಪೂರ್ಣವಾಗಿ ಹಾನಿಯು ಮನವರಿಕೆ ಮಾಡಿಕೊಟ್ಟಿದ್ದಲ್ಲದೆ, ಆ ಗಿಡದ ಬೇರುಗಳು ವಿಷಮಯ ಬೇರುಗಳೆಂಬ ಸಿದ್ಧಾಂತವನ್ನು ಡೆಹರಾಡೂನಿನ ಇಂಪೀರಿಯಲ್ ಅಗ್ರಿಕಲ್ಚರಲ್ ರಿಸರ್ಚ ಇನ್‌ಸ್ಟಿಟ್ಯೂಟಿನ ಸಂಶೋಧಕರಿಂದ ತರಿಸಿದ್ದು ಈ ವಿಷಯದಲ್ಲಿ ಅವಶ್ಯವಿರುವ ಮುಂದಿನ ಕಾರ್ಯಗಳನ್ನು ಕೈಕೊಳ್ಳಲಾಗಿದೆ. ಈ ಎಲ್ಲ ಕಾರ್ಯಗಳನ್ನು ಅವಲೋಕಿಸುವ ಸ್ತುತಿಯೋಬ್ಬರೂ ಕುಮಾರಿಯವರು ಈ ವಿಷಯದಲ್ಲಿ ನಮ್ಮ ಮೇಲೆ ಮಾಡಿದ ಆರೋಪವು ಹೇಗೆ ನಿರಾಧಾರವೂ ನಿಸ್ಸಾರವೂ ಆಗಿದೆಯೆಂಬದನ್ನು ಸಹಜವಾಗಿ ಅರಿತುಕೊಳ್ಳಬಹುದು. ಒಟ್ಟಿನಲ್ಲಿ ಕರ್ನಾಟಕ ವರ್ತಕರ ಕಷ್ಟನಷ್ಟಗಳ ನಿವಾರಣೆಗೋಸ್ಕರ ಸರಕಾರದವರೊಡನೆ ಸಹಕರಿಸುವದರಲ್ಲಿ ಈ ಸಂಸ್ಥೆಯ ವಿಷಯವಾಗಿ ಈ ಕುಮಾರಿಯವರಿಗಿತ್ತ ತುಣುಕು ಮಿಣುಕಿನ ತಪ್ಪು ಮಾಹಿತಿಯ ಮೂಲ ಪುರುಷರಾದ ಆ ಕರ್ನಾಟಕ ಮಿತ್ರರಿಗಿಂತಲೂ ತಮಗೆ ಹೆಚ್ಚಿನ ಜ್ಞಾನಾನುಭವಗಳುಂಟೆಂದು ನಮ್ಮ ಕಮಿಟಿಯವರು ಇಲ್ಲಿ ಧೈರ್ಯವಾಗಿ ಹೇಳಬಯಸುತ್ತಾರೆ.

ನಿಯಮಾನುಸಾರವಾಗಿ ಈ ಸಂಸ್ಥೆಯ ತ್ರೈಮಾಸಿಕ ಸಭೆಗಳು ಕೂಡಿ ಉಳಿದ ಚೇಂಬರಗಳಂತೆಯೇ ಆದ ಕಾರ್ಯದ ಅವಲೋಕನ ಮಾಡಿ ಮುಂದಿನ ಮಾರ್ಗದ ರೂಪರೇಷೆಯನ್ನು ಗೊತ್ತು ಪಡಿಸುವ ಕಾರ್ಯವೂ ಈ ಚೇಂಬರದಿಂದ ಜರುಗುತ್ತಿರುವದರಿಂದ ಕುಮಾರಿಯವರ ಈ ವಿಷಯಕವಾದ ಆರೋಪವಾದರೂ ಮೇಲಣ ಅವರ ಆರೋಪದಷ್ಟೇ ಅಸಂಗತವಾಗಿದೆ.

ಸಂಸ್ಥೆಯ ಕಾರ್ಯಕ್ಷೇತ್ರವು ಕರ್ನಾಟಕವೇ ಆಗಿರುವದರಿಂದ ನಮ್ಮ ಪ್ರಕಟನೆಗಳು ವಿಶೇಷವಾಗಿ ಕನ್ನಡ ಪತ್ರಿಕೆಗಳಲ್ಲಿಯೇ ಪ್ರಸಿದ್ಧವಾಗುತ್ತಿವೆಯೆಂಬದನ್ನು ನಾವು ಇಲ್ಲಿ ಹೇಳಬೇಕಾಗಿದೆ.

ಈ ಸಂದರ್ಭದಲ್ಲಿ ಉಳಿದ ಯಾವ ಪ್ರಮುಖ ಚೇಂಬರದ ಅಧ್ಯಕ್ಷರನ್ನೂ ಹೆಸರುಗೊಳ್ಳದೆ ಮಹಾರಾಷ್ಟ್ರ ಚೇಂಬರದ ಅಧ್ಯಕ್ಷರ ಮಾತುಗಳಗಷ್ಟೇ ಮರ್ಯಾದೆ ಸಿಗುತ್ತದೆಯೆಂದು ಕುಮಾರಿಯವರು ನುಡಿದದ್ದು ಅತಿ ವಿಚಿತ್ರವಾಗಿಯೇ ತೋರುತ್ತದೆ.

ಮೇಲೆ ಕಾಣಿಸಿದ ಈ ವರೆಗೆ ಆದ ನಮ್ಮ ಕಾರ್ಯವು ಸಂಕುಚಿತವಾಗಿರದೆ ಉಳಿದೆಲ್ಲ ಚೇಂಬರಗಳಂತೆ ಸಾಕಷ್ಟು ವಿಸ್ತೃತವಾಗಿಯೇ ಇದೆಯೆಂದೂ ಈ ಚೇಂಬರದವರು ಬರಿಮಾತಿನ ವಾಚಾಳಿಗಳಾಗದೆ ಕುಮಾರಿಯವರು ಉಪದೇಶಿಸಿದ ಕಾರ್ಯ ತತ್ಪರತೆಗಿಂತ ಅಧಿಕವಾದ ಕೇವಲ ಕಾರ್ಯ ತತ್ಪರತೆಯುಳ್ಳವರೇ ಆಗಿರುವರೆಂದೂ, ಇಲ್ಲಿ ನಮ್ಮ ಕಮಿಟಿಯವರು ನಿರ್ದೇಶಿಸುತ್ತಾರಲ್ಲದೆ

ಸಾಮಾನ್ಯವಾಗಿ ಎಲ್ಲ ಚೇಂಬರಗಳ ಮೇಲೂ ಅವರು ಹೊರಿಸಿದ ವಾಚಾಳತ್ವದ ವೃಥಾರೋಪವನ್ನೂ ಅತಿ ಬಲವಾಗಿ ಅಲ್ಲಗಳೆಯುತ್ತಾರೆ.

ಪಂಜಾಬದೊಂದಿಗೆ ಗುಜರಾಥ ಬಂಗಾಲ ಮಹಾರಾಷ್ಟ್ರಗಳ ಚೇಂಬರಗಳೂ ಗ್ರಾಮ ಸಂಘಟನೆಯ ಕಾರ್ಯದಲ್ಲಿ ಮಾರ್ಗದರ್ಶಿಗಳಾಗಿವೆಯೆಂದು ಕುಮಾರಿಯವರು ಕೊನೆಗೆ ಹೇಳಿದ ಮಾತಿನಲ್ಲಿ ಯಾದರೂ ಸಾರವಿದ್ದು ಯಥಾರ್ಥತೆಯಿಲ್ಲ. ಲಾಹೋರಿನ ಇಂಡಿಯನ್ ಚೇಂಬರವೊಂದನ್ನು ಬಿಟ್ಟು ಅವರು ಉಲ್ಲೇಖಿಸುವ ಉಳಿದ ಯಾವ ಪ್ರಾಂತೀಯ ಚೇಂಬರವೂ ಈ ಕೆಲಸವನ್ನು ಕೈಕೊಂಡಿಲ್ಲ. ಪಂಜಾಬದ ಮಾರ್ಗದರ್ಶಿತ್ವವಾದರೂ, ಅಲ್ಲಿಯ ಗವ್ಹರ್ನರರ ಕಡೆಗೆ ಹೋದ ಶಿಷ್ಟ ಮಂಡಲದವರು ಅನೇಕ ನಿವೇದನಗಳೊಂದಿಗೆ ಭೀತರ ಆರ್ಥಿಕ ಪರಿಸ್ಥಿತಿಯೂ ಕೆಟ್ಟಿದೆಯೆಂಬೊಂದು ಮಾತನ್ನು ಹೇಳಿದ್ದಕ್ಕಿಂತ ಹೆಚ್ಚಿನದಾಗಿಲ್ಲ.

ಆದುದರಿಂದ ವಸ್ತು ಸ್ಥಿತಿಯು ವಿಪರ್ಯಾಸ ಮಾಡಿ ಈ ಸಂಸ್ಥೆಯ ಬಗ್ಗೆ ಸಾಧುವಲ್ಲದ ಮಾತುಗಳನ್ನು ಸಾರ್ವಜನಿಕವಾಗಿ ಕುಮಾರಿ ಸೋಮಜಿಯವರ ಬಾಯಿಂದ ಹೀಗೆ ಒಡನುಡಿಸಿರುವದು ಅವರ ಆ ಕರ್ನಾಟಕ ಮಿತ್ರರಿಗೆ ಎಷ್ಟೂ ಶೋಭಿಸತಕ್ಕ ಮಾತಲ್ಲ ವೆಂಬುದನ್ನು ನಮ್ಮ ಕಮಿಟಿಯವರು ವಿಷಾದದಿಂದ ಹೇಳಬೇಕಾಗಿದೆ. ವರ್ತಕರ ನಿತ್ಯ ತೊಂದರೆಗಳನ್ನು ನಿವಾರಿಸುವ ಮುಖ್ಯ ಕೆಲಸವನ್ನು ನಾವು ಬದಿಗೆ ಸರಿಸಿ ಆ ಮಿತ್ರರ ಮನಸ್ಸಿನಲ್ಲಿರಬಹುದಾದ ಕೆಲವು ವಿಶಿಷ್ಟ ಕಾರ್ಯಗಳನ್ನು ಈ ಸಂಘವು ಕೂಡಲೆ ಕೈಕೊಂಡು ವಿಶೇಷತಃ ಇಂಗ್ಲೀಷ ಪತ್ರಿಕೆಗಳಲ್ಲಿ ಘಂಟಾಘೋಷವಾಗಿ ಸಾರಿಕೊಂಡಿದ್ದರೆ ಇದೇ ಮಿತ್ರರು ಕರ್ನಾಟಕ ಚೇಂಬರವು ಬಹಳ ಸಮಾಧಾನಕಾರಕವಾಗಿ ಕಾರ್ಯ ಮಾಡುತ್ತಿದೆಯೆಂಬ ಮೆಚ್ಚೋಲೆಯನ್ನು ಇದೇ ಕುಮಾರಿಯವರಿಂದ ಕೊಡಿಸುತ್ತಿದ್ದರೆಂಬುದನ್ನು ನಮ್ಮ ಕಮಿಟಿಯವರು ಜೆನ್ನಾಗಿ ಬಲ್ಲವರಾಗಿದ್ದಾರೆ. ತೂಕವನ್ನೇ ಕೈಯಲ್ಲಿ ಹಿಡಿದು ಕಾರ್ಯವನ್ನು ಮಾಡುವ ವರ್ತಕರ ಈ ಸಂಸ್ಥೆಯು ತನ್ನ ನಿರ್ಣಯ ಬುದ್ಧಿಗೆ ಯೋಗ್ಯ ಕಂಡ ಕಾರ್ಯಗಳನ್ನು ಕಾಲಕಾಲಕ್ಕೆ ಮಾಡುತ್ತಿದೆಯೆಂದೂ ಆ ಕಾರ್ಯದಿಂದಲೂ ದೇಶಾಭಿವೃದ್ಧಿಯು ಧೈರ್ಯವು ಸಾಧಿಸುವದೆಂದೂ ಕರ್ನಾಟಕದ ಜನತೆಯಲ್ಲಿ ಕೊನೆಗೊಮ್ಮೆ ನಮ್ಮ ಕಮಿಟಿಯವರು ಅರಿಕೆ ಮಾಡಿಕೊಳ್ಳುತ್ತಾರೆ.

ಕಮಿಟಿಯವರ ಆಜ್ಞಾನುಸಾರವಾಗಿ,

ಗದಗ
೨೫-೧೨-೧೯೩೩

ವೀರಭದ್ರಪ್ಪ ಬಸವಪ್ಪ ಬಳ್ಳಾರಿ.
ಮುರಿಗೆಪ್ಪ ಸೋಮಪ್ಪ ಜಂಗಿನ.
ಕರ್ನಾಟಕ ಚೇಂಬರ ಆಫ್ ಕಾಮರ್ಸದ
ಗೌ: ಕಾರ್ಯದರ್ಶಿಗಳು.

ಕೋ-ಆಪರೇಟಿವ್ಹ ಕಾನ್ಫರನ್ಸ

ತಾ. ೨೫-೧೨-೩೩ನೇ ಶರಣಸಂದೇಶದ ಸಂಚಿಕೆಯಲ್ಲಿ "ಬಾಗಲಕೋಟೆಯಲ್ಲಿ ಕೋ-ಆಪರೇಟಿವ್ಹ ಕಾನ್ಫರನ್ಸ ಈ ಶಿರೋಲೇಖದಿಂದ ಒಂದು ಲೇಖನವನ್ನು ಪ್ರಸಿದ್ಧ ಮಾಡಿತ್ತು." ಮೆ. ರಜಿಸ್ಟ್ರಾರರ ಸಾಹೇಬರವರು ಸಹಕಾರಿ ಸಂಘಗಳ ಸಾಲಗಾರರಿಗೆ ಯಾವ ಸವಲತ್ತುಗಳನ್ನು ಕೊಡಬಹುದು ಎಂಬ ವಿಷಯದ ಮೇಲೆ ಚರ್ಚೆ ಮಾಡಿದ್ದರ ಸಾರಾಂಶವನ್ನು ಪ್ರಮುಖ ಸಹಕಾರಿಗಳಿಗೂ ಸಹಕಾರ ಹಿತಚಿಂತಕರಿಗೂ ಅವಲೋಕನವಾಗಬೇಕೆಂಬ ಉದ್ದೇಶದಿಂದ ಕೊಟ್ಟಿರುತ್ತದೆ. ಮೆ. ರಜಿಸ್ಟ್ರಾರ ಸಾಹೇಬರವರು ಬೇರೆಬೇರೆ ಕಡೆಗೆ ಇಂಥ ಸಭೆಗಳನ್ನು ಕೂಡಿಸುತ್ತಿರುವರು. ಯಾವ ಸವಲತ್ತುಗಳನ್ನು ಕೊಡಬೇಕೆಂಬುದನ್ನು ನಿರ್ಣಯಿಸಿ ಮೆ ರಜಿಸ್ಟ್ರಾರರ ಸಾಹೇಬರವರು ಸರಕ್ಯೂಲರ ಹೊರಡಿಸುವರು. ಸಂಘದವರು ಅವಶ್ಯ ಬಿದ್ದ ಪೋಟ ನಿಯಮಗಳನ್ನು ತಿದ್ದುಪಡೆ ಮಾಡಬೇಕಾಗುವದು.

ತಪ್ಪು ತಿದ್ದುವಿಕೆ.

ತಾ. ೨೫-೧೨-೩೩ನೇ ತಾರೀಖಿನ ಶರಣಸಂದೇಶದ ೬ನೇ ಪುಟದಲ್ಲಿದ್ದ ೬ನೇ ಕಲಮಿನಲ್ಲಿ 'ನಡೆದರೆ, ಎಂದು ಆಗಬೇಕಾಗಿತ್ತು. ಆದರೆ 'ನಡೆಯದಿದ್ದರೆ' ಎಂದು ತಪ್ಪು ಬಿದ್ದಿರುವದು. ಆದ್ದರಿಂದ ಓದುವ ಕಾಲಕ್ಕೆ ನಡೆದರೆ ಎಂದು ಓದಬೇಕು.

ಗುರುಪಾದಪ್ಪ ಸಜ್ಜನ ಬಿ. ಎ.

ವೀರಶೈವ ತರುಣಸಂಘ ಲಿಂಗಸೂಗೂರು.

ಇದೇ ತಾ. ೧೪-೧೨-೧೯೩೩ನೇ ಸೋಮವಾರ ದಿವಸ ಇಲ್ಲಿಯ ಉತ್ಸಾಹಿ ತರುಣರು ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಭೆ ಸೇರಿ ಮೇಲ್ಕಂಡ ಹೆಸರಿನ ಸಂಘವೊಂದನ್ನು ಸ್ಥಾಪಿಸಿದರು. ಸಂಘದಲ್ಲಿ ಚಿಕ್ಕ ಬಾಲಕರ ಸಂಖ್ಯೆಯು ಹೆಚ್ಚಾಗಿದೆ. ಈ ಸಂಘದ ಉದ್ದೇಶವು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಪತ್ತಿಕ ಮೊದಲಾದ ವಿಷಯಗಳನ್ನು ಕುರಿತು ನೀತಿಪರವಾದ ಭಾಷಣ ಮಾಡಿ, ಚಿಕ್ಕ ಬಾಲಕರಲ್ಲಿ ವಾಕ್ಪಟುತ್ವ, ವಾಚನಾಭಿರುಚಿಯನ್ನು ಹುಟ್ಟಿಸುವದು, ಸತ್ಯ, ಅಹಿಂಸೆ, ಬ್ರಹ್ಮಚರ್ಯ ಪಾಲನ, ಲಿಂಗಸಾಧನೆ ಮೊದಲಾದ ವಿಷಯಗಳ ಮಹತ್ವವನ್ನು ತಿಳಿಸಿ ಅದರಂತೆ ಆಚರಿಸಲು ಅವರನ್ನು ಪ್ರೇರೇಪಿಸುವದು, ಇದಲ್ಲದೆ ಸಂಘವು ಹೆಚ್ಚು ಸುಧಾರಣೆ ಹೊಂದಿದ ಹಾಗೆ ಪ್ರಕೃತ ವೀರಶೈವ ಸಮಾಜದಲ್ಲಿರುವ ಜಾತಿ ಕಲ್ಪನೆಗಳನ್ನು ನಿವಾರಣೆ ಮಾಡಿ ಸಮಾಜದಲ್ಲಿ ಸಂಘಟನೆಯನ್ನುಂಟುಮಾಡುವದು, ಸಮಾಜದ ಮೌಢ್ಯ ನಿವಾರಣೆ, ವಿವಾಹ ಮೊದಲಾದ ಸಮಾರಂಭಗಳಲ್ಲಿ ನಡೆಯುವ ದುಂದುಗಾರಿಕೆಗಳನ್ನು ನಿಲ್ಲಿಸುವದು, ಶಿಕ್ಷಣದ ಆವಶ್ಯಕತೆ, ಮತ್ತು ಸುಶಿಕ್ಷಿತರ ಅಭಾವದಿಂದ ಸಮಾಜಕ್ಕೊದಗಿದ ದುಸ್ಥಿತಿ ನಿವಾರಣೆ ಮಾಡುವದು, ಮೊದಲಾದ ಉದಾತ್ತ ಉದ್ದೇಶಗಳನ್ನು ಕೈಕೊಂಡಿದೆ. ಪಂಚಾಕ್ಷರಿ ಮಠದ ಶ್ರೀ. ಬಸವಲಿಂಗಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಊರ ಪ್ರಮುಖ ಜನರೆಲ್ಲರೂ ದಯಮಾಡಿಸಿದ್ದರು. ಅಮರೇಶ್ವರ ರಾವ, ಸನಾತಿವಪ್ಪ, ನಾಗಪ್ಪ, ದೊಡ್ಡಪ್ಪ ಮೊದಲಾದ ವಿದ್ಯಾರ್ಥಿಗಳು ಶಿಕ್ಷಣದ ಅವಶ್ಯಕತೆಯನ್ನು ಕುರಿತು ಸ್ವಾರಸ್ಯವಾಗಿ ಭಾಷಣವನ್ನು ಮಾಡಿದರು. ಅಧ್ಯಕ್ಷ ಸ್ಥಾನ ವಹಿಸಿದ್ದ ಶ್ರೀ ಬಸವಲಿಂಗಯ್ಯನವರು ತಮ್ಮ ಭಾಷಣದಲ್ಲಿ 'ಪ್ರಯತ್ನಿಸುವಾಗ ಎಡವಿ ಬಿದ್ದರೂ ಮತ್ತೆದ್ದು ಕಾರ್ಯವನ್ನು ಕೈಕೊಳ್ಳಿರಿ, ಸಾಮಾಜಿಕ ಕಾರ್ಯಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಿ ನಿಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡಿ ಮುಂದರಿದು ಕೆಲಸ ಮಾಡುವ ತರುಣರಿಗೆ ಪ್ರೋತ್ಸಾಹ ಕೊಟ್ಟು ಸಮಾಜದ ಅಲ್ಪಸೇವೆಯನ್ನಾದರೂ ಮಾಡುವದು ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆಯೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ಸಭೆಯು ಮುಕ್ತಾಯವಾಯಿತು.

ಅಮರಪ್ಪ ವಿದ್ಯಾರ್ಥಿ
ಶ್ರೀ ತರುಣ ಕರ್ನಾಟಕ ಲಿಂಗಸೂಗೂರು.

೨೦. ಶ. ಗಲಭಾ ನೆಯ ಪುಷ್ಯ ಬ. ೧೦ ಸೋಮವಾರ.

ಯಾವುದು ಮೊದಲು?

ಹಿಂದು ಸಮಾಜದ ಉನ್ನತಿಗಾಗಿ ಶುದ್ಧಿ ಮತ್ತು ಸಂಘಟನೆಗಳು ಅನೇಕ ಕಡೆ ನಡೆದಿವೆಯಷ್ಟೆ. ಇವುಗಳಲ್ಲಿ ಯಾವುದು ಮೊದಲನೆಯ ಕಾರ್ಯವಾಗಿದೆ? ಶುದ್ಧಿಯು ವಿಷಯದಲ್ಲಿ ಮೊದಲು ಹೆಚ್ಚು ಪ್ರಯತ್ನಿಸಬೇಕಾಗಿದೆಯೋ ಅಥವಾ ಸಂಘಟನೆಯ ವಿಷಯದಲ್ಲಿಯೋ? ಸಂಘಟನೆಯಿಲ್ಲದ ಶುದ್ಧಿಯು ಸಾಧಕವಾದುದೇ? ಬಾಧಕವಾದ [illegible] ಸಂಘಟನೆಯು ವಿಚಾರದಿಂದಲೇ? ಅಥವಾ ಆಚಾರದಿಂದಲೇ? ಈ ಮೊದಲಾದ ಪ್ರಶ್ನೆಗಳು ಹಿಂದು ಸಮಾಜ ಸುಧಾರಕರ ಮುಂದಿವೆ.

ಈ ಮಹತ್ವದ ಪ್ರಶ್ನೆಗಳ ವಿಷಯದಲ್ಲಿ ಅನೇಕ ಮಹಾಶಯರು ಯೋಚಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತ ಆ ಪ್ರಕಾರ ಆಚರಿಸುತ್ತಿದ್ದಾರೆ. ಹಿಂದು ಸಮಾಜದಲ್ಲಿ ನಡೆದಿರುವ ಈ ಸಂಘಟನೆ ಮತ್ತು ಶುದ್ಧಿಗಳೆಂ ಅಲ್ಪ ಪ್ರಮಾಣದಲ್ಲಿ ವೀರಶೈವ ಸಮಾಜಕ್ಕೂ ಸಂಬಂಧಿಸಿದವುಗಳಾಗಿವೆ. ಏಕೀಕರಣದ ವಿಷಯದಲ್ಲಿ ಮೊದಲು ಪ್ರಯತ್ನಿಸಬೇಕಾಗಿದೆಯೇ? ಅಥವಾ ಲಿಂಗಧಾರಣೆಗಾಗಿ ಮೊದಲು ಪ್ರಯತ್ನಿಸಬೇಕಾಗಿದೆಯೇ? ಇವುಗಳಲ್ಲಿ ಮೊದಲು ಯಾವುದು?

ಈಗ ಅಲ್ಲಲ್ಲಿ ಅನೇಕ ಮಹಾಶಯರು ವೀರಶೈವ ಸಮಾಜೋನ್ನತಿಗಾಗಿ ಲಿಂಗಧಾರಣೆಯ ಕಾರ್ಯವನ್ನು ನಡೆಯಿಸಿದ್ದಾರಷ್ಟೆ. ಆದುದರಿಂದ ಈ ಕಾರ್ಯದ ಪರಿಣಾಮವು ಏಕೀಕರಣವೇ ಇಲ್ಲದಿರುವ ಈ ಸಮಾಜದ ಮೇಲೆ ಯಾವ ವಿಧವಾಗಿ ಪರಿಣಮಿಸಬಹುದು? ಸಮಾಜದ ಈಗಿನ ಸ್ಥಿತಿಯಲ್ಲಿ ಯಾವ ಕಾರ್ಯವನ್ನು ಮೊದಲು ಮಾಡುವುದು ಅತ್ಯಗತ್ಯವಾಗಿದೆ? ಈ ಮೊದಲಾದ ಸಂಗತಿಗಳನ್ನು ಯೋಚಿಸುವುದು ಅಗತ್ಯವಾಗಿಲ್ಲವೆ?

ಮನುಷ್ಯನು ಆರೋಗ್ಯದೇಹಿಯೂ ಸಶಕ್ತನೂ ಆಗಬೇಕಾದರೆ ಒಳ್ಳೆಯ ಆಹಾರವು ಅತ್ಯವಶ್ಯಕವಾಗಿಯೇ ಇದೆ. ಆಹಾರವಿಲ್ಲದಿದ್ದರೆ ಹೇಗೆ ಅನಾರೋಗ್ಯ ಅಶಕ್ತತೆಗಳುಂಟಾಗುತ್ತವೆಯೋ ಹಾಗೆಯೇ ಆಹಾರವು ಜೀರ್ಣವಾಗದಿದ್ದಾಗ ತೆಗೆದುಕೊಳ್ಳಲ್ಪಟ್ಟರೂ ರೋಗ ನಿರ್ಬಲತೆಗಳುಂಟಾಗುವುದಿಲ್ಲವೇ? ಎಂದಮೇಲೆ ದೇಹಪೋಷಣೆಗೆ ಆಹಾರವೇ ಮುಖ್ಯವಾಗಿಲ್ಲ; ಅದು ಜೀರ್ಣವಾಗುವುದೂ ಅವಶ್ಯಕವಾಗಿಯೇ ಇದೆ ಆಹಾರವೇ ಇಲ್ಲದಿದ್ದರೆ ಸಾಯುವಂತೆ ಆಹಾರವು ಅತ್ಯಧಿಕವಾಗುವುದರಿಂದಲೂ ಮರಣ ಸಂಭವಿಸುತ್ತದೆ.

ಒಂದು ಸಮಾಜದ ಉನ್ನತಾವನತಿಗಳಿಗೆ ಶುದ್ಧಿ ಸಂಘಟನೆಗಳಾಗಲಿ ಅಥವಾ ಲಿಂಗಧಾರಣೆ ಏಕೀಕರಣಗಳಾಗಲಿ ಮನುಷ್ಯನ ಜೀವಿತಕ್ಕೆ ಆಹಾರ ಸೇವನೆಯಂತೆಯೇ ಸಂಬಂಧಿಸಿದವುಗಳಾಗಿವೆ. ಮುಸಲ್ಮಾನ್, ಕ್ರೈಸ್ತ ಧರ್ಮದವರ ಈ ಸಂಬಂಧವಾದ ಕಾರ್ಯಗಳನ್ನು ನೋಡಿ ನಾವೂ ಶುದ್ಧಿ ಅಥವಾ ಲಿಂಗಧಾರಣೆಯ ಕಡೆಗಷ್ಟೇ ಲಕ್ಷಿಸಿ ಅವರ ಅನುಕರಣ ಮಾಡಿಬ್ಬಾದರೆ, ಕಾರ್ಯವು ವಿಫಲವಾಗುವುದಲ್ಲದೆ ಅನರ್ಥವೂ ಸಂಭವಿಸುವುದು.

ಈಗ ಲಿಂಗಾಯತ ಸಮಾಜದಲ್ಲಿ ನೂರಾರು ಒಳಪಂಗಡಗಳಿವೆ. ಮೇಲು ಕೀಳುಗಳೆಂಬ ಅನೇಕ ಕುಕಲ್ಪನೆಗಳ ಅಜೀರ್ಣದಿಂದ ಈ ಸಮಾಜವು ಬಳಲುತ್ತಲಿದೆ. ಹೇಗೆ ಮನುಷ್ಯನ ಎಲ್ಲ ರೋಗಗಳಿಗೂ ಅಜೀರ್ಣವೇ ಪ್ರಾಯಶಃ ಮುಖ್ಯ ಕಾರಣವಾಗಿದೆಯೋ ಹಾಗೆಯೇ ವೀರಶೈವ ಸಮಾಜದ ಅನೈಕಮತ್ಯ, ಕಲಹ, ದ್ವೇಷಾಸೂಯೆಗಳಿಗೆ ಈ ಒಳಪಂಗಡಗಳ ಮೇಲು ಕೀಳುತನವೇ ಕಾರಣವಾಗಿದೆ. ಹೀಗಿರುವಾಗ ಈ ಒಳಪಂಗಡಗಳ ಏಕೀಕರಣದ ಕಾರ್ಯವೇ ನಡೆಯದೆ ಮತ್ತೆ ಹೊಸ ಪಂಗಡಗಳನ್ನುಂಟುಮಾಡುವುದು ಸಮಾಜಕ್ಕೆ ಕ್ಷೇಮಕರವೆ?

ಲಿಂಗಧಾರಣೆ ಮತ್ತು ದೀಕ್ಷೆಗಳಲ್ಲಿ ಮಹದಂತರವಿದೆ. ಕೇವಲ ಲಿಂಗಧಾರಣೆಯು ಪಂಗಡಗಳಿಗೆ ಕಾರಣವಾಗಿದೆ ದೀಕ್ಷೆಯಾದರೋ ಪಂಗಡಗಳ ಏಕೀಕರಣವನ್ನು ಮಾಡತಕ್ಕುದಾಗಿದೆ. ಎಲ್ಲಿ ಏಕೀಕರಣದ ಕಾರ್ಯಗಳೇ ನಡೆದಿಲ್ಲವೋ ಅಲ್ಲಿ ಪಂಗಡಗಳನ್ನುಂಟುಮಾಡುವುದರಿಂದ ಫಲವೇನು? ಮುಸಲ್ಮಾನ್ ಮತ್ತು ಕ್ರೈಸ್ತ ಮತೀಯರಲ್ಲಿ ಈ ತಾರತಮ್ಯವಿಲ್ಲ. ಈ ದಿನ ಒಬ್ಬ ಅನ್ಯ ಧರ್ಮದವನನ್ನು ತಮ್ಮ ಧರ್ಮದಲ್ಲಿ ತೆಗೆದುಕೊಂಡರೆ ಅತನ ಸಂಗಡ ಆಗಲೇ ಊಟ ಉಡಿಗೆಗಳು ಪ್ರಾರಂಭವಾಗಿ ಏಕೀಕರಣದ ಕಾರ್ಯ ನಡೆಯುತ್ತದೆ. ಹಾಗೆ ವೀರಶೈವರು ಮಾಂಸಾಹಾರಿಯನ್ನು ಒಂದೇ ದಿನದಲ್ಲಿ ಲಿಂಗಧಾರಣೆ ಮತ್ತು ದೀಕ್ಷೆಗಳಿಂದ ಸಾಮರಸ್ಯ ನಡೆಯಿಸಲಿಕ್ಕಾಗುವುದೆ?

ಶೂದ್ರನನ್ನು ೧೫ ವರುಷ, ವೈಶ್ಯನನ್ನು ೯ ವರುಷ, ಕ್ಷತ್ರಿಯನನ್ನು ೬ ವರುಷ, ಬ್ರಾಹ್ಮಣನನ್ನು ೩ ವರುಷ ನೋಡಿ ಅನಂತರ ಅತನಿಗೆ ಶಿವದೀಕ್ಷೆಯನ್ನು ಕೊಡಬೇಕೆಂಬ ಕ್ರಮವನ್ನು ಶಿವಶರಣರು ಹೇಳಿರುವುದೇಕೆ? ಅವರಲ್ಲಿ ಶುದ್ಧಾಚಾರವುಂಟಾಗಬೇಕೆಂದಲ್ಲವೇ?

ಎಂದಮೇಲೆ ಈಗ ಎಷ್ಟೋ ವರುಷಗಳಿಂದ ಲಿಂಗಾಂಗಿಗಳಾಗಿ ಶುದ್ಧಾಚಾರಶೀಲರಾಗಿರತಕ್ಕ ಅನೇಕ ಒಳ ಪಂಗಡದವರಿಗೆ ಮೊದಲು ದೀಕ್ಷೆ ಮಾಡಿ ಅವರನ್ನು ಬಳಕೆಯಲ್ಲಿ ತಂದುಕೊಳ್ಳುವುದು ಅಗತ್ಯವಾಗಿಲ್ಲವೆ? ಈಗ ಬಳಕೆಯಲ್ಲಿರುವ ಒಳಪಂಗಡದವರಲ್ಲಿ ಪರಸ್ಪರ ಊಟೋಪಚಾರ ವಿವಾಹ ಸಂಬಂಧಗಳನ್ನುಂಟುಮಾಡಲು ಪ್ರಯತ್ನಿಸಬಾರದೆ? ಇವೇ ವೀರಶೈವ ಸಮಾಜದಲ್ಲಿ ಮೊದಲು ಮಾಡತಕ್ಕ ಕಾರ್ಯಗಳಲ್ಲವೆ?

—ಕಾನಪುರದಲ್ಲಿ ಮಾನಸಿಂಗ ಎಂಬ ಫೌಜದಾರರು ತೀರ್ಥಯಾತ್ರೆಗೆ ಹೋಗಿದ್ದಾಗ್ಗೆ ಅವರ ಮನೆಯನ್ನು ಒಡೆದು ೬ ಸಾವಿರ ರೂ. ಗಳನ್ನೂ ೨೫ ಸಾವಿರ ರೂ. ಗ್ಗಳ ಮುತ್ತು ರತ್ನಾಭರಣಗಳನ್ನೂ ಕಳ್ಳರು ಅಪಹರಿಸಿದ್ದಾರೆ.

—ಫ್ರಾನ್ಸ್‌ನಲ್ಲಿ ಉಗಿಬಂಡಿಯ ಭಯಂಕರ ಅಪಘಾತದಿಂದ ೧೯೯ ಜನರು ಸತ್ತರು. ೩೦೦ ಜನರಿಗೆ ಗಾಯಗಳಾಗಿವೆ.

ಘನಮಹಿಮ ನೀನಲ್ಲದೆ ಮತ್ತೊಂದನರಿಯೆ.

ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ನಿಮ್ಮ ಶರಣರಿಗೆ. ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ ಘನಮಹಿಮ, ನಿಮ್ಮ ಶರಣರ ಪಾದದಾಣೆ. ಮನವಚನ ಕಾಯದಲ್ಲಿ ನೀನಲ್ಲದೆ ಮತ್ತೊಂದನರಿದಡೆ ಕೂಡಲಸಂಗಮದೇವ, ಮತ್ತೆ ಮರುಳಿ ಭವವೆಂಬ ಘೋರದಲ್ಲಿಕ್ಕಯ್ಯ.

ಪರಮಾತ್ಮನೆ, ನಿಮ್ಮ ಶರಣರ ಸೇವೆಗಾಗಿ ಶರೀರವನ್ನೇ ಸಲ್ಲಿಸುವೆನು. ಅಹೋರಾತ್ರಿಯಲ್ಲಿಯೂ ನಿಮ್ಮ ಶರಣರ ಚಿಂತನೆಯೇ ಚಿಂತನೆ ಎನಗೆ. ನಿಮ್ಮ ಶರಣರ ಸಹಾಯಾರ್ಥವಾಗಿಯೇ ನಾನು ಧನವನ್ನು ವೆಚ್ಚ ಮಾಡುವೆನು. ನನ್ನ ತನುಮನ ಧನವೆಲ್ಲವೂ ನಿಮ್ಮ ಶರಣರ ಸೇವೆಗಾಗಿಯೇ ಸಮರ್ಪಿಸಲ್ಪಡುವವು. ಇವುಗಳಲ್ಲಿ ಒಂದು ಎಳ್ಳು ಮೊನೆಯಷ್ಟಾದರೂ ನನಗೆ ಬೇಕೆಂದು ಇಟ್ಟುಕೊಳ್ಳೆನು. ಮನದಲ್ಲಿಯೂ, ಮಾತಿನಲ್ಲಿಯೂ, ಮತ್ತು ಕೃತಿಯಲ್ಲಿಯೂ ನಿಮ್ಮ ಸೇವೆಯನ್ನೇ ಮಾಡುವೆನು. ನಿಮಗೆ ನಾನು ತನುವಂಚಕ, ಮನವಂಚಕ, ಇಲ್ಲವೆ ಧನವಂಚಕನಾದರೆ ನಾನು ಭವಕ್ಕೆ ಬಾರದಿಪ್ಪೆನೆ? ಸರ್ವಥಾ ಅಂಥ ವಂಚಕತನವನ್ನು ಮಾಡಲಾರೆನೆಂದು ಮಹಾನುಭಾವರಾದ ಶ್ರೀ ಬಸವಣ್ಣನವರು ಹೇಳಿದ್ದಾರೆ.

ಅರ್ಪಿಸಿದಲ್ಲದೆ ನಿಸ್ಸಂಗಿಯಾಗಬಾರದೆಂಬುದೇ ವೀರಶೈವರ ತತ್ವ. ಶರೀರದಿಂದ ಆವುದೊಂದು ಪರೋಪಕಾರದ ಕೃತಿಯನ್ನು ಮಾಡದೆ ಶರೀರ ವ್ಯಾಮೋಹವನ್ನು ಕಳೆದುಕೊಳ್ಳಬೇಕೆಂಬವರಿಗೆ ಎಂದಿಗಾದರೂ ಸಾಧ್ಯವಾಗಬಹುದೇ? ಎಲ್ಲಿಯವರೆಗೆ ನಾವು ಶರೀರ ಮೋಹವನ್ನು ಬಿಡುವುದಿಲ್ಲವೋ, ಎಲ್ಲಿಯವರೆಗೆ ನಮ್ಮ ಶರೀರವನ್ನು ಪರರಿಗೆ ಸಮರ್ಪಿಸುವದಿಲ್ಲವೋ ಅಲ್ಲಿಯವರೆಗೆ ನಮಗೆ ಭವಬಾಧೆ ತಪ್ಪದು. ಇದನ್ನೇ ಶಿವಶರಣರು, ತ್ರಿವಿಧ ಸಂಪತ್ತನ್ನು ದಾಸೋಹ ಮಾಡದೆ ಸಂಗ್ರಹಿಸುವವರು ಅನರ್ಪಿತವಾದ ಭವಿಯ ಕಾರ್ಯವನ್ನು ಮಾಡುವುದರಿಂದ ಭವಕ್ಕೆ ಬಾರದೇ ತೀರರೆಂದು ಹೇಳಿದ್ದಾರೆ. ಶರೀರದಂತೆಯೇ ಮನ ಧನಗಳು ನಮ್ಮನ್ನು ಮೋಹಕ್ಕೆ ಶಿಲ್ಕಿಸಿ ವಿಪತ್ಪರಂಪರೆಗೆ ಗುರಿಪಡಿಸುತ್ತವೆ.

ಈ ತ್ರಿವಿಧ ಮೋಹಗಳು ನಮ್ಮನ್ನೆಸ್ಟೇ ಪೀಡಿಸುತ್ತವೆಂತಲ್ಲ. ನಮ್ಮ ಆವರಣದಲ್ಲಿಯ ಸರ್ವರೂ ಈ ದುಃಖಕ್ಕೆ ಭಾಗಿಗಳಾಗಬೇಕಾಗುತ್ತದೆ. ಆವುದೊಂದು ಕೃತ್ರಿಮ ರೀತಿಯಿಂದ ಇಲ್ಲವೆ ಪಾಶವೀ ಶಕ್ತಿಯಿಂದ ಹೆರವರ ದ್ರವ್ಯವನ್ನು ಸೆಳೆದುಕೊಂಡು ಯಾವನು ಶೇಖರಿಸಿಟ್ಟುಕೊಳ್ಳುತ್ತಾನೆಯೋ ಅವನು ಲಕ್ಷಾವಧಿ ಜನರನ್ನು ಅನ್ನಾನ್ನಗತಿಕರನ್ನಾಗಿ ಮಾಡುತ್ತಾನೆ ಇದರಿಂದಲೇ ಕೊಲೆಸುಲಿಗೆಗಳೂ, ದೊಂಬೆ ಅತ್ಯಾಚಾರಗಳೂ ದಿನೇ ದಿನೇ ಹೆಚ್ಚುತ್ತಲಿವೆ. ಅದೇ ಅವನು ತನ್ನಲ್ಲಿರುವ ಧನವನ್ನು ಪರೋಪಕಾರ ಮಾಡಿ ಬಿಟ್ಟರೆ ಲಕ್ಷಾವಧಿ ಬಡಜನರ ಹೊಟ್ಟೆ ತುಂಬಲು ಅವಕಾಶವಾಗಿ ಅವರ ಜೀವನ ಮಾರ್ಗವು ತೃಪ್ತಿಕರವಾಗಿ ಸಾಗುವುದು.

ತನಗೇಬೇಕೆಂಬ ಭಾವನೆಯಿಂದಲೇ ಬಹು ಅನರ್ಥವುಂಟಾಗುತ್ತದೆ. ರಾಜ ಪ್ರಜೆಗಳಲ್ಲಿಯೂ, ಸೇವ್ಯ ಸೇವಕರಲ್ಲಿಯೂ, ಸಾಕ್ಷರ ನಿರಕ್ಷರರಲ್ಲಿಯೂ ವೈಮನಸ್ಸುಂಟಾಗಿ ಅವರು ತಮ್ಮೊಳಗೆಯೇ ಹೊಡೆದಾಡಹತ್ತುವರು. ಸದ್ಯದ ಜಗತ್ತಿನ ಅಶಾಂತಿಗೆ ಬಹ್ವಂಶವಾಗಿ ಈ ಭಾವನೆಯೇ ಕಾರಣವಿದೆ. ಇಂಥ ಕಾಲದಲ್ಲಿ ಲೋಕಸೇವೆಯೇ ಈಶಸೇವೆಯೆಂದು ಸರ್ವಸ್ವವನ್ನು ಸಮರ್ಪಿಸಬೇಕಾಗಿದೆ. ಹೀಗೆ ಮಾಡಿದರೆ ತಾವೂ ಉದ್ಧಾರವಾಗುವರಲ್ಲದೆ ಅನ್ಯರನ್ನೂ ಉದ್ಧರ ಮಾಡುವರು.

ತನುಮನಧನವನ್ನು ಸಮಾಜಕ್ಕರ್ಪಿಸುವ ಸಮಾಜಸೇವಕರು ಮುಂದೆ ಬರಲಿ. ಆದು ಮನುಷ್ಯನ ಆತ್ಯಂತಿಕ ಗುರಿಯಾಗಿದೆ. ಶಾರೀರಿಕ ಸೌಷ್ಠವವುಳ್ಳವರು ಸ್ವಯಂಸೇವಕರಾಗಿ ಕೆಲಸ ಮಾಡಬೇಕಾಗಿದೆ. ಐಪುಲ ಧನವುಳ್ಳವರು ಸಮಾಜಕ್ಕೆ ಧನವನ್ನರ್ಪಿಸುವದೇ ಧನ ಶುದ್ಧಿಯಾಗುವ ರೀತಿಯೆಂದು ತಿಳಿದು ಸೇವಾ ಕಾರ್ಯಕ್ಕೆ ಪ್ರವೃತ್ತರಾಗಬೇಕಾಗಿದೆ. ಇವೆರಡೂ ಇಲ್ಲದವರು ಲೋಕ ಕಲ್ಯಾಣಾರ್ಥವಾಗಿ ಸದಾ ಚಿಂತನೆಯನ್ನು ಮಾಡುತ್ತಿರಬೇಕಾಗಿದೆ.

ಈ ಪ್ರಕಾರ ಈ ಅರ್ಪಣ ಮಾರ್ಗವು ಅನ್ಯರಿಗೆ ಸುಖದಾಯಕವಾಗುವದಲ್ಲದೆ ಅರ್ಪಿಸುವವರು ಸಹ ಅವುಗಳ ಜಂಜಾಟವನ್ನು ಕಳೆದುಕೊಳ್ಳುವರು. ಆದುದರಿಂದಲೇ ಮಹಾನುಭಾವರು ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ ಘನ ಮಹಿಮ, ನಿಮ್ಮ ಶರಣರ ಪಾದದಾಣೆಯೆಂದು ಶಪಥಪೂರ್ವಕವಾಗಿ ಹೇಳಿರುವರು. ಅರ್ಪಣೆ ಮಾಡದಿದ್ದರೆ ಪರಮಾತ್ಮನೇ ಭವದಲ್ಲಿ ಇಡುವದೊತ್ತಟ್ಟಿಗಿರಲಿ, ನಮ್ಮ ಸಂಗ್ರಹ ಪ್ರವೃತ್ತಿಯೇ ನಮ್ಮನ್ನು ಭವಕ್ಕೆ ತರುತ್ತದೆ. ಆದುದರಿಂದ ಸರ್ವವನ್ನು ಪರಮಾತ್ಮನಿಗೂ ಅವನ ಶರಣರಿಗೂ ಅರ್ಪಿಸುವದನ್ನು ನಾವು ಕಲಿಯಲೇಬೇಕು.

ಪಾಟೀಲ ಲಿಂಗನಗೌಡ.

—ತಿರುಪುರದ ಹತ್ತಿರದಲ್ಲಿ ಒಂದು ಪ್ರಾಚೀನ ದೇವಾಲಯದಲ್ಲಿಯ ಶಿವನ ಮೂರ್ತಿಯನ್ನು ಯಾರೋ ಅಪಹರಿಸಿದ್ದಾರೆ.

—ವ್ಹಾಯಿಸ್‌ರಾಯರ ಕಪ್ಪಿನ ಜೂಜಿನಲ್ಲಿ ವಿಜಯಶಾಲಿಯಾದ ೩೨೮ ನಂಬರಿನ ಕುದುರೆಯು ಕಲಕತ್ತೆಯಲ್ಲಿ ಜೂಜು ಮುಗಿದ ಕೂಡಲೆ ಸತ್ತಿತು. ಅದರ ಯಜಮಾನನು ಶವ್ಯತ್ತು ನೋಡಲಿಕ್ಕೆ ಲಂಡನ್ನಿನಿಂದ ಬಂದಿದ್ದನು.

—ಧಾರವಾಡದಿಂದ ಬೆಳಗಾವಿಗೆ ಹೋಗುವಾಗ ದೇಸೂರ ಎಂಬ ನಿಲ್ದಾಣವಿದೆ. ಅಲ್ಲಿಯ ಮಾಸ್ತರರು ಗಾಡಿಯಿಂದಿಳಿಯುವಾಗ ಕೆಳಗೆ ಬಿದ್ದು ಎರಡು ತುಂಡಾಗಿ ಸತ್ತರು.

—ಮಹಾತ್ಮರು ಜನವರಿ ೧೯ನೆಯ ವಾರದಲ್ಲಿ ಮೈಸೂರು ನಾಡನ್ನು ಸಂಚರಿಸಿ ಮಂಗಳೂರಿಗೆ ಹೋಗುವರು.

ವಿ ವಿ ಧ ವಿ ಷ ಯ .

ವಿಷವಿಲ್ಲದ ವಿಷ!

ನೀರಿನಲ್ಲಿ ಭಯಂಕರವಾದ ವಿಷಯುಕ್ತ ಅಣುಗಳಿರುವವೆಂದು ಇಬ್ಬರು ಶಾಸ್ತ್ರಜ್ಞರು ಶೋಧಿಸಿದ್ದಾರೆ. ನೀರನ್ನು ಉಗಿರೂಪ ಮಾಡಿ ಅದನ್ನು ಹೊರಗೆ ಹಾಕಿ ವಿಷವನ್ನು ತೆಗೆಯುತ್ತಾರೆ. ಈ ನೀರಿನಿಂದ ಹುಟ್ಟಿದ ಈ ವಿಷವು ಎಲ್ಲ ವಿಷಗಳಲ್ಲಿ ಮಿಗಿಲಾದದ್ದು. ಇವರ ಒಂದು ಹನಿಯನ್ನು ಒಂದು ಬಟ್ಟಲು ನೀರಿನಲ್ಲಿ ಹಾಕಿ ತೆಗೆದುಕೊಂಡರೆ ತಕ್ಷಣವೇ ಮನುಷ್ಯನು ಸಾಯುತ್ತಾನೆ. ಇದು ನೀರಿನಕಿಂತಲೂ ಭಾರವಿರುವದರಿಂದ ಇದಕ್ಕೆ ಘನವಾದ ನೀರು (Heavy water) ಎಂಬ ಹೆಸರು. ನೀರಿನಂತೆಯೇ ಇದರಲ್ಲಿಯೂ ೨ ಪಾಲು ಹೈಡ್ರೋಜನ್ ವಾಯುವು ಮತ್ತು ಒಂದು ಪಾಲು ಆಕ್ಸಿಜನ ವಾಯುವೂ ಕೂಡಿರುತ್ತವೆ ಆದರೆ ಇದರ ಕುದಿಯ ಉಷ್ಣತೆಯ ಅಂಶವು ಹೆಚ್ಚಿರುತ್ತದೆ. ಮತ್ತು ತೀವ್ರವೇ ಹೆಪ್ಪುಗಟ್ಟುತ್ತದೆ.

ಇದಕ್ಕೆ ಯಾವ ತರದ ರುಚಿಯೂ ಇಲ್ಲ. ವಾಸನೆಯೂ ಇಲ್ಲ. ಮತ್ತು ಯಾವ ಚಿಹ್ನವೂ ಇರುವುದಿಲ್ಲ. ಇದು ಭೂಮಿಯೊಳಗಿನ ಸರೋವರಗಳಲ್ಲಿ ಬಹ್ವಂಶವಾಗಿ ಸಿಗುತ್ತದೆ. ಮೃತ ಸಮುದ್ರ (Dead Sea) ದಲ್ಲಿ ಇದು ಬಹಳವಿರುತ್ತದೆ. ಮನುಷ್ಯನು ಕುಡಿಯುವ ನೀರಿನಿಂದ ಈ ವಿಷವು ದೇಹದಲ್ಲಿ ಶೀಘ್ರವಾಗಿ ಕ್ಯಾನ್ಸರ ರೋಗವು ಉಂಟಾಗುತ್ತದೆಯೇನೋ ಎಂದು ಅನುಮಾನಿಸಲಾಗಿದೆ. ಹುಳಗಳನ್ನು ಕೊಲ್ಲುವದು, ಬಣ್ಣ ಕೊಡುವದು, ಧಾತುಗಳ ಮೇಲೆ ಪರಿಣಾಮ ಇಂಥಿವುಗಳಲ್ಲಿ ಇದರ ಉಪಯೋಗವಾಗುವದು.

ಇದರ ಶೋಧವು ಭರದಿಂದ ನಡೆದಿದೆ. ಸದ್ಯಕ್ಕೆ ೫-೬ ಘನ ಸೆಂಟಿ ಮೀಟರ ವಿಷವು ಶೀಘ್ರವಾಗಿದ್ದು ಇದರ ಪೂರ್ಣ ಶೋಧವಾದರೆ ಜಗತ್ತಿನಲ್ಲಿಯೇ ವಿಶೇಷ ಕ್ರಾಂತಿಯಾಗುವದು.

ದೇವಾಸುರರು ಕೂಡಿ ನೀರಿನಿಂದ ಅಮೃತ ತೆಗೆದಿದ್ದರಂತೆ; ಸದ್ಯಕ್ಕೆ ನೀರಿನಿಂದ ವಿಷವು ಹೊರಟಿದೆ.

ಸವೆಯದ ಧಾತುಗಳ ಶೋಧ.

ಯುದ್ಧದ ಕಾಲದಲ್ಲಿ ಮತ್ತು ಶಾಂತಿಯ ಕಾಲದಲ್ಲಿ ಬೇಕಾಗುವ ಸಾಮಾನುಗಳನ್ನು ಸಿದ್ಧಪಡಿಸುವದರಲ್ಲಿ ಈ ಹೊಸ ಧಾತುಗಳು ಕ್ರಾಂತಿಯನ್ನೇ ಮಾಡುತ್ತಿವೆ. ಇವೆರಡರಲ್ಲಿಯೂ ಕ್ರೋಮಿಯಮ್, ಅಲ್ಯುಮಿನಮ್, ಮತ್ತು ಉಕ್ಕು ಇವುಗಳ ಸಮಾವೇಶವಾಗಿರುತ್ತದೆ. ಇವಕ್ಕೆ ಹೆಸರೇ ಇಲ್ಲ ಮತ್ತು ಇವುಗಳನ್ನು ಒಳ್ಳೇ ಗುಪ್ತವಾಗಿ ಸಿದ್ಧಪಡಿಸುತ್ತಲಿರುವರು.

ಯುದ್ಧದಲ್ಲಿ ತಗ್ಗು ದಿನ್ನೆಗಳಲ್ಲಿ ಸಹ ಓಡಾಡುವ ಟ್ಯಾಂಕ ಎಂಬ ಸೈನಿಕರು ಕೂಡ್ರುವ ವಾಹನಗಳನ್ನು ಮಾಡುವುದರಲ್ಲಿ ಇದನ್ನು ಉಪಯೋಗಿಸುತ್ತಾರೆ. ಈ ಧಾತುವಿನಿಂದ ಮಾಡಿದ ಟ್ಯಾಂಕುಗಳು ಯಾವ ತೋಪಿನ ಹೊಡತಕ್ಕೂ ಛಿದ್ರಿಸಲ್ಪಡಲಾರವು. ಈ ಧಾತುವು ಸವೆಯುವುದಿಲ್ಲವಾದದರಿಂದ ಕಲ್ಲುಗಳಲ್ಲಿ, ಧಾತುಗಳಲ್ಲಿ ತೂತು ಸರೆಯಲು ಒಳ್ಳೇ ಅನುಕೂಲವಾಗಿದೆ. ಭೂಮಿಛೇದಕ ಯಂತ್ರದ (Boring machine) ಮೊನೆಗೆ ಈ ಧಾತುವನ್ನು ಪಯೋಗಿಸಿದರೆ ತೀವ್ರವಾಗಿ ಅದು ಭೂಮಿಯೊಳಗೆ ಹೋಗುವದು. ಇದರ ಗುಂಡುಗಳನ್ನು ಪಿಸ್ತೂಲಿನಲ್ಲಿ ಹಾಕಿ ಹೊಡೆದರೆ ಮನುಷ್ಯನಿಗೆ ಅಪಾಯವಾಗದೆ ತೂತು ಬೀಳುವುದು ಮತ್ತು ಅದು ತೀವ್ರವೇ ಮಾಯುವದು. ಇನ್ನೊಂದು ಧಾತುವು ಅಲ್ಯುಮಿನಮ್‌ದಕಿಂತ ಹಗುರಿರುವುದರಿಂದ ವಿಮಾನಗಳಿಗೆ ಉಪಯೋಗಿಸುತ್ತಾರೆ. ಇದರಿಂದ ವಿಮಾನಿನ ಶಕ್ತಿಯಲ್ಲಿ ಉಳಿತಾಯವಾಗಿ ಅದು ಅಪಾಯವಿಲ್ಲದೆ ಹಾರುವದು. ಇವುಗಳಿಂದ ಕಲಾಯಿ ಮಾಡಿದರೆ ಅದು ಎಂದೂ ಸವೆಯುವುದಿಲ್ಲ. ಸದ್ಯಕ್ಕೆ ಅವುಗಳ ಪ್ರಯೋಗವು ನಡೆದಿದ್ದು ಇನ್ನೆರಡು ತಿಂಗಳುಗಳಲ್ಲಿ ಇದು ಸಾರ್ವತ್ರಿಕವಾಗುವದು.

ಮಕ್ಕಳಿಗೆ ಆಟಗೆ ಏಕೆ?

ಮಕ್ಕಳಿಗೆ ಆಟಗೆ ಏಕೆ ಬೇಕೆಂಬ ಪ್ರಶ್ನೆಗೆ ಮುಖ್ಯವಾಗಿ ಮಕ್ಕಳು ಅಳುವುದನ್ನು ಬಿಟ್ಟು ಆನಂದದಿಂದಿರಲಿಕ್ಕೆ ಸಾಧನವೆಂದು ಹೇಳುತ್ತಾರೆ. ಆಟಗೆಯ ಉದ್ದೇಶವು ಇಷ್ಟೇ ಇರುವುದಿಲ್ಲ. ಅದು ಕೂಸಿನ ಹುದುಗಿರುವ ಶಕ್ತಿಗಳನ್ನು ಪ್ರಕಟಪಡಿಸಲು ಸಹಕಾರಿಯಾಗಿದೆ. ಈ ಸಾಧನಗಳಿಂದ ಆಟವನ್ನಾಡುತ್ತಾಡುತ್ತ ಮಕ್ಕಳು ಜಗತ್ತಿನ ಸಂಬಂಧವನ್ನು ಬೆಳೆಯಿಸಿಕೊಳ್ಳುತ್ತವೆ.

ಮಕ್ಕಳ ಆಟಗೆಯಲ್ಲಿ ಶ್ರಮವಿರಬೇಕು. ಸೇತುವೆ ಕಟ್ಟುವದು, ವಿಮಾನ ಹಾರಿಸುವದು, ಬಾಯಿಸಿಕಲ್ಲು, ಮನೆಕಟ್ಟುವದು ಮೊದಲಾದವುಗಳು ದೇಹಕ್ಕೂ ಮನಸ್ಸಿಗೂ ಪೋಷಕವಾಗಿರುವವು. ನೋಡಿದ ಕೂಡಲೆ ಮನಸ್ಸನ್ನು ಸೆಳೆಯುವ ಆಟಗೆಗಳು ಕೂಸಿಗೆ ಆನಂದವನ್ನುಂಟುಮಾಡಿದರೂ ಕೊನೆಗೆ ಅದನ್ನು ಬಿಟ್ಟುಕೊಡುವದು. ಹೆಣ್ಣು ಹುಡಿಗೆಯರಿಗೆ ಗೊಂಬೆಗಳು ಒಳ್ಳೇ ಸಹಕಾರಿಯಾಗಿವೆ. ಗೊಂಬೆಗೆ ಶೀರೆ ಉಡಿಸುವದರಲ್ಲಿ ಹುಡಿಗೆಯ ಚಾತುರ್ಯಕಲೆಯು ವ್ಯಕ್ತವಾಗುತ್ತದೆ. ಒಂದು ಗೊಂಬೆಯನ್ನು ತಾಯಿಯೆಂದು ಮಾಡಿ ಆಡುವಾಗ್ಗೆ ನಿಜವಾಗಿಯೇ ಅವಳಲ್ಲಿ ತಾಯಿಯ ಅಂತಃಕರಣ ಸ್ವಭಾವಗಳುಂಟಾಗಿರುತ್ತವೆ.

ಆಟಗೆಗಳು ಬೆಲೆಯುಳ್ಳವೇ ಇರಬೇಕೆಂಬ ನಿಯಮವಿಲ್ಲ. ಆದರೆ ಅವು ಪೋಷಕವಾಗಿರಬೇಕು. ಆಟಗೆಗಳಿಲ್ಲದ ಮಕ್ಕಳ ಶಕ್ತಿಯು ಬೆಳೆಯಬೇಕಾದರೆ ಬಹಳ ದಿನಗಳು ಬೇಕು. ಸಶ್ರಮ ಆಟಗೆಗಳೇ ಉಪಯುಕ್ತವಾದವುಗಳು.

ಸೈನ್ಯದ ಅಗಣಿತ ವೆಚ್ಚ.

ಶಾಂತಿಮಂತ್ರವನ್ನು ಜಗತ್ತಿನ ಪ್ರಮುಖ ರಾಷ್ಟ್ರಗಳೆಲ್ಲ ಉಚ್ಚರಿಸುತ್ತಿವೆ. ಆದರೆ ದಿನೇ ದಿನೇ ತಮ್ಮ ಯುದ್ಧಬಲವನ್ನು ಹೆಚ್ಚಿಸುತ್ತಲೇ ಇವೆ. ಶಸ್ತ್ರಸನ್ಯಾಸ ಪರಿಷತ್ತಿನಿಂದ ಸದ್ಯಕ್ಕೆ ಒಂದೊಂದೇ ರಾಷ್ಟ್ರವು ದೂರಾಗಹತ್ತಿದೆ. ಪ್ರಮುಖ ರಾಷ್ಟ್ರಗಳ ಸೈನ್ಯದ ವೆಚ್ಚವನ್ನು ನೋಡಿದರೆ ಪುನಃ ಯುದ್ಧವು ಪ್ರಾರಂಭವಾಗುವದೇನೋ ಎಂಬ ಸಂಶಯವುಂಟಾಗುತ್ತಿದೆ. ಸೈನ್ಯದಲ್ಲಿ ಸೇನಾ, ವಾಹನ, ಕಟ್ಟಡಗಳು ಮದ್ದು ಗುಂಡು ಮೊದಲಾದವು, ಹೀಗೆ ಚತುರಂಗಗಳು ಕೂಡಿವೆ. ಪ್ರಮುಖ ರಾಷ್ಟ್ರಗಳ ಸೈನ್ಯ ವೆಚ್ಚವು ಈ ಪ್ರಕಾರ ಇದೆ.

ಬ್ರಿಟಿಶ್ ಸಾಮ್ರಾಜ್ಯ ೧೯ ಅಬ್ಜ ೬೦ ಕೋಟಿ ೫೦ ಲಕ್ಷ ಫ್ರಾಂಕುಗಳು (ಫ್ರಾಂಕ - ೧೦ ಆಣೆ) ಗ್ರೇಟ್‌ಬ್ರಿಟನ್ ಮತ್ತು ಹಿಂದುಸ್ಥಾನ ೧೪ ಅಬ್ಜ, ಅಮೇರಿಕಾ (ಸಂಯುಕ್ತ ಸಂಸ್ಥಾನ) ೧೭॥ ಅಬ್ಜ ರಶಿಯಾ ೧೬ ಅಬ್ಜ ೯೩ ಕೋಟಿ ೬೦ ಲಕ್ಷ, ಫ್ರಾನ್ಸ

೧೩ ಕೋಟಿ ೮೦ ಲಕ್ಷ ಇಟಲಿಯ ೪೬ ಕೋಟಿ ೭೦ ಲಕ್ಷ ಜಪಾನ ೬ ೪೬ ೬೬ ಕೋಟಿ ೯೦ ಲಕ್ಷ ಜರ್ಮನಿಯ ೪೬ ಕೋಟಿ ೪೦ ಲಕ್ಷ ಫ್ರಾಂಕುಗಳಿರುತ್ತವೆ. ಈ ರಾಷ್ಟ್ರಗಳು ಮಹಾಯುದ್ಧ ದಕಾಲದಕ್ಕಿಂತಲೂ ಈಗ ಹೆಚ್ಚು ವೆಚ್ಚ ಮಾಡುತ್ತಿವೆ. ಈ ಪ್ರಕಾರ ವೆಚ್ಚಮಾಡುತ್ತಿದ್ದ ಮೇಲೆ ಇವು ಶಾಂತತೆಯಿಂದಿರುವದು ಹೇಗೆ?

ಕಡ್ಡಿಯಿಂದ ಗುಡ್ಡದಷ್ಟು ಹಾನಿ.

ಅಮೇರಿಕೆಯಲ್ಲಿ ಚಿಕಾಗೋ ಪಟ್ಟಣವು ಬಹು ಪ್ರಸಿದ್ಧವಾದುದಾಗಿದೆ. ಅದು ಹುಟ್ಟಿ ಸ್ವಲ್ಪೇ ವರ್ಷಗಳಾಗಿದ್ದರೂ ಜಗತ್ತಿನ ಹು ದೊಡ್ಡ ಪಟ್ಟಣಗಳಲ್ಲಿ ಒಂದಾಗಿದೆ. ಇಲ್ಲಿಯ ತಳ ಭೂಮಿಯಲ್ಲಿಯ ಒಂದು ಅವಾಢವ್ಯ ವಾಯು ಸಂಗ್ರಹ ಭಂಡಾರಕ್ಕೆ ಬೆಂಕಿ ಬಿದ್ದಿತು. ಕೂಡಲೇ ಜ್ವಾಲಾಮುಖಿಯಂತೆ ಭಯಂಕರ ಸ್ಫೋಟವಾಯಿತು. ಕುರ್ಚಿಯ ಮೇಲೆ ಕುಳಿತ ಇಲ್ಲನೆ ಪಲ್ಲಂಗದ ಮೇಲೆ ಮಲಗಿದ ಜನರೆಲ್ಲ ತೂರಿ ಒಗೆಯಲ್ಪಟ್ಟರು. ಹಾಯ್ದು ಹೋಗುತ್ತಿರುವ ಮೋಟಾರು ಬಂಡಿಗಳೆಲ್ಲ ಹವೆಯಲ್ಲಿ ತೂರಿ ಒಗೆಯಲ್ಪಟ್ಟವು. ತಳ ಭೂಮಿಗೆ ಮುಚ್ಚಿದ ಮುಚ್ಚಳಿಕೆಗಳು ಹಾರಿ ಬೀದಿಯಲ್ಲಿ ಬಿದ್ದವು. ಒಂದು ಚೌರಸ ವೈಲಿನ ಕ್ಷೇತ್ರದಲ್ಲಿರುವ ಕಟ್ಟಡಗಳೆಲ್ಲ ನಾಶವಾಗಿವೆ. ಅಲ್ಲಲ್ಲಿ ಹವೆಯು ನುಗ್ಗಿ ದೊಡ್ಡದೊಡ್ಡ ತೂತುಗಳನ್ನು ಕೆಡವಿದ್ದರಿಂದ ಬೆಂಕಿ ನೊಂದಿಸುವ ವಾಹನಗಳು ಓಡಾಡಲಿಕ್ಕೆ ಬಹಳೇ ತೊಂದರೆಯಾಯಿತು.

ಇದರಿಂದ ಒಟ್ಟು ಹಾನಿಯು ೩೦ ಲಕ್ಷ ರೂ. ಆಗಿದೆ. ಈ ಸ್ಫೋಟದಲ್ಲಿ ಅಲ್ಲಲ್ಲಿ ಬೆಂಕಿಯೂ ಹತ್ತಿತು. ಆದರೆ ಅದನ್ನು ನೊಂದಿಸಲಾಯಿತು.

ಇಷ್ಟೆಲ್ಲ ಅನರ್ಥಕ್ಕೆ ಕಾರಣವೇನೆಂದು ವಿಚಾರಿಸಲಾಗಿ ಒಬ್ಬನೇ ಮನುಷ್ಯನ ಕಾರಣನೆಂಬುದು ಕಂಡು ಬಂತು. ಅವನು ಆರಿಯದವನ್ನಿತ್ತ ಕಾರಣ ದೀಪದ ಕಡ್ಡಿಯನ್ನು ಕೊರೆದು ಆ ಭಂಡಾರದ ಹತ್ತಿರ ಒಗೆದನಂತೆ ಕೂಡಲೆ ಸ್ಫೋಟವಾದದ್ದರಿಂದ ಅವನಿಗೂ ಇನ್ನಿಬ್ಬರಿಗೂ ಬಹಳ ಗಾಯಗಳಾಗಿವೆ.

ಅಂತು ಒಂದು ದೀಪದ ಕಡ್ಡಿಯು ೩೦ ಲಕ್ಷ ರೂ. ಹಾನಿ ಮಾಡಿತಲ್ಲವೆ!

'ಹರಿಜನ' ಶಬ್ದವೇಕೆ?

ಮಹಾತ್ಮಾಜಿಯವರಿಗೆ ದಿಲ್ಲಿಯಲ್ಲಿ ಕೆಲವು ಆದಿಜನರು ತಮಗೆ 'ಹರಿಜನ' ಎಂಬ ಹೆಸರನ್ನಿಡುವದಕ್ಕೆ ಕಾರಣವೇನೆಂದೂ ಒಂದು ವೇಳೆ ಇದೇ 'ಹರಿಜನ'ಶಬ್ದವು ಪುನಃ ಉಳಿದ ಹಿಂದುಗಳಿಂದ ನಮ್ಮನ್ನು ಭಿನ್ನವಾಗಿ ತೋರಿಸಲು ಕಾರಣವಾಗಲಿಕ್ಕಿಲ್ಲವೇನೆಂದೂ ಕೇಳಲು ಮಹಾತ್ಮಾಜಿಯವರು ಹೀಗೆ ಹೇಳಿದರು— 'ಹರಿಜನ' ಎಂಬ ಶಬ್ದವನ್ನು ನಿಮ್ಮ ವರ್ಗದಲ್ಲೊಬ್ಬರೇ ನನಗೆ ಸೂಚಿಸಿದರು; 'ಅಸ್ಪೃಶ್ಯ' ಇಲ್ಲವೆ 'ಅವರ್ಣ' ಎಂಬ ಹೆಸರಿರುವದಕ್ಕಿಂತ ಇಂಥ ಹೆಸರಿರುವದು ಯೋಗ್ಯವೆಂದು ಸಾವಿರಾರು ಜನರು ಅಂಗೀಕರಿಸಿರುವರು. ಎಲ್ಲಿಯವರೆಗೆ ಅಸ್ಪೃಶ್ಯತೆಯು ನಿರ್ಮೂಲವಾಗಿಲ್ಲವೋ ಅಲ್ಲಿಯವರೆಗೆ ನಿಮ್ಮನ್ನು ಉಳಿದವರಿಂದ ಭಿನ್ನಪಡಿಸುವ ಒಂದು ಹೆಸರು ಬೇಕು. ಅಸ್ಪೃಶ್ಯತೆಯು ಅಳಿದು ಹೋದಮೇಲೆ ಯಾವಾಗ್ಗೆ ನೀವು ಹಿಂದುಗಳಲ್ಲಿ ಸಮಾವೇಶವಾಗಿ ಹೋಗುವಿರೋ ಆವಾಗ್ಗೆ ಬೇಕಾದರೆ ಹರಿಜನರೇ ಆಗಿರಿ ಹಿಂದುಗಳೇ ಆಗಿರಿ, ನಿಮ್ಮ ಧರ್ಮವೇ ನಿಮಗೊಂದು ಹೆಸರನ್ನು ಅರಿಸುವದು. ಅದರೆ ಆ ದಿನವು ಬರುವವರೆಗೆ ಮಾತ್ರ ಯಾವುದಾದರೊಂದು ನಿರುಪದ್ರವಿ ಹೆಸರು ನಿಮಗಿರಬೇಕು."

ಸನಾತನವೆಂದರೇನು?

ದಿಲ್ಲಿಯಲ್ಲಿ ಕೆಲವು ಸನಾತನಿಗಳು ಅಸ್ಪೃಶ್ಯತೆಯು ಸನಾತನ ಸಿದ್ಧವೆಂದೂ ಅದನ್ನು ನಂಬದವನು ಸನಾತನಿಯೇ ಇಲ್ಲವೆಂದೂ ವಾದಿಸಿದರು. ಅದಕ್ಕೆ ಮಹಾತ್ಮಾಜಿಯವರು— "ನಾನು ಸನಾತನಿಯೇ ಇದ್ದೇನೆ. ಇದನ್ನು ನೀವು ನಿರಾಕರಿಸಿದರೂ ಚಿಂತೆಯಿಲ್ಲ. ನನಗೆ ಶಕ್ಯವಿದ್ದಷ್ಟು ಹಿಂದು ಶಾಸ್ತ್ರಗಳನ್ನು ಅಭ್ಯಾಸ ಮಾಡಿದ್ದೇನೆ. ಮತ್ತು ಹಿಂದುತ್ವದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲವೆಂದೇ ನಿರ್ಣಯಿಸಿರುವೆನು." ದೇವಾಲಯ ಪ್ರವೇಶ ಮಾಡಿದರೆ ರಕ್ತಪಾತವಾಗುವದೆಂದು ಅವರು ಹೇಳಲು ಗಾಂಧೀಜಿಯವರು— "ಹಾಗಾಗುವದು ಶಕ್ಯವಿಲ್ಲ. ದೇವಾಲಯ ಪ್ರವೇಶಕ್ಕೆ ಬಹು ಜನರು ವಿರೋಧವಿದ್ದರೆ ಆ ದೇವಾಲಯ ಪ್ರವೇಶ ಮಾಡುವದೇ ಇಲ್ಲ. ಈ ವಿಷಯದಲ್ಲಿ ಬಲುಮೆಯಿಲ್ಲ." ಬಿಡುವಾಡಕ್ಕೆ ಹೋಗುವಾಗ ಒಬ್ಬ ಶಾಸ್ತ್ರಿಯು ವಾದ ಮಾಡಲು ಮಹಾತ್ಮರು "ಸನಾತನ ಧರ್ಮದ ಎಷ್ಟೋ ಶಾಸ್ತ್ರಗಳು ಅಸ್ಪೃಶ್ಯತಾ ನಿವಾರಣೆಗೆ ಬೆಂಬಲವಾಗಿದ್ದಾವೆ ನಾನು ವೇದೋಪನಿಷತ್ತುಗಳನ್ನೂ ಸ್ಮೃತಿಪುರಾಣಾದಿಗಳನ್ನೂ ನಂಬುತ್ತೇನೆ. ವೇದಗಳಿಂದರೆ ಈಗಿರುವ ನಾಲ್ಕೇ ಪುಸ್ತಕಗಳಲ್ಲ ಇವು ಮೂಲ ಗ್ರಂಥಗಳ ಕೆಲವು ತುಣುಕುಗಳಾಗಿವೆ ಮಾತ್ರ. ಶಾಶ್ವತ ಸತ್ಯವು ಹುಡುಗಿಸಲ್ಪಡಲಾರದು. ಇಲ್ಲವೆ ಆಚ್ಚು ಹಾಕಿದ ಪುಸ್ತಕಗಳಲ್ಲಿಯಷ್ಟೇ ಇರಲಾರದು. ವೇದಗಳ ವಿವರವನ್ನು ಹೇಳಲಿಕ್ಕೆ ಅಥವಾ ಬರೆದಿಡಲಿಕ್ಕೆ ಬರಲಾರದು. ಅವು ಹೃದಯದಲ್ಲಿ ವಾಸ ಮಾಡುತ್ತವೆ. ಈ ಸತ್ಯವನ್ನು ಕಂಡುಕೊಳ್ಳಲು ಹೃದಯವು ಅರಳಬೇಕಾದರೆ ಅಭ್ಯಾಸ ಮತ್ತು ಶಿಸ್ತು ಬೇಕು. ಅನುಭವವೇ ಕೊನೆಯ ಮಾರ್ಗದರ್ಶಕವಾಗಿದೆ. ಬರೀ ದಿಟ್ಟ ಶಬ್ದವೂ ಸಹಾಯ ಮಾಡುತ್ತದೆ. ಆದರೆ ಅದರರ್ಥ ಮಾಡಿಕೊಳ್ಳಬೇಕು. ಅಲ್ಲಿ ಮತಭೇದ ಬಂದರೆ ಸಾಧಕನೇ ನಿರ್ಣಯಿಸಬೇಕು." ಎಂದು ಹೇಳಿದರು.

ಸಾದರ ಸ್ವೀಕಾರ.

ನವ ಸಂದೇಶ—ಬಳ್ಳಾರಿಯಲ್ಲಿ ಪಂ. ಹೊಳಿ ಬಸವ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುವ ನವಸಂದೇಶ ಪತ್ರಿಕೆಯ ೨ ಸಂಚಿಕೆಗಳು ಕೈಸೇರಿವೆ. ಬಳ್ಳಾರಿಯಲ್ಲಿ ಕನ್ನಡ ಪತ್ರವೇ ಇಲ್ಲವೆಂಬ ಅಪವಾದವನ್ನು ಹೋಗಲಾಡಿಸಿದುದರಿಂದ ಶಾಸ್ತ್ರಿಗಳನ್ನು ಅಭಿನಂದಿಸಿ ಈ ಪತ್ರಿಕೆಯು ಕರ್ನಾಟಕ ಸೇವೆಯನ್ನು ಮಾಡಲೆಂದು ಹಾರೈಸುತ್ತೇವೆ.

ಗಣಿತ ಸಂಗ್ರಹ— ಈ ಗಣಿತ ಪುಸ್ತಕವನ್ನು ಹಿರೇಬಾಗೇವಾಡಿಯ (ಬೆಳಗಾಂವಿ ತಾಲೂಕು) ಶ್ರೀ. ಚಿದಂಬರ ಶ್ರೀಪಾದರಾವ ಕುಲಕರ್ಣಿ ಇವರು ಬರೆದಿರುವರು. ಇದು ಕೇವಲ ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ ಎಂದು ಬರೆದಿದ್ದರೂ ಮ್ಯಾಟ್ರಿಕ್ ಕ್ಲಾಸಿನ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಉಪಯುಕ್ತವಾಗಿರುವುದು. ಅಭ್ಯಾಸಕ್ಕೆ ಉದಾಹರಣೆಗಳನ್ನು ಕೊಟ್ಟದ್ದಲ್ಲದೆ ಕೆಲವು ಸವಯೇಚಿತ ಉದಾಹರಣೆಗಳನ್ನು ಬಿಡಿಸಿ ತೋರಿಸಿರುವರು ಮ್ಯಾಟ್ರಿಕ್ ಮತ್ತು ಮುಲಕಿ ಪರೀಕ್ಷಾ ಪ್ರಶ್ನೆಗಳಲ್ಲಿ ಕೆಲವನ್ನು ಬಿಡಿಸಿರುವುದರಿಂದಲೂ ಕ್ಯಾಲೆಂಡರ ಸಿದ್ಧಪಡಿಸುವದನ್ನು ತೋರಿಸಿರುವುದರಿಂದಲೂ ಒಳ್ಳೇ ಉಪಯುಕ್ತವಾಗಿದೆ. ಬೆಲೆ ೧೫ ಆಣೆ ಮಾತ್ರ.

ವೀರಶೈವರಲ್ಲಿ ಯಾರು ಯಾವ ವರ್ಣದವರು?

ಸಂ. ಕಾಶೀನಾಥ ಶಾಸ್ತ್ರಿ ನಾಗನೂರು ಇವರು ದಾರು ಕಾಚಾರ್ಯರ ಜಯಂತಿಯ ಕಾಲಕ್ಕೆ ಮೈಸೂರಲ್ಲಿ ಮಾಡಿದ ವ್ಯಾಖ್ಯಾನವು ಪಂಚಾಚಾರ್ಯ ಪ್ರಸಾದಿಕ ಗ್ರಂಥಮಾಲೆಯ ಏಳನೆಯ ಪುಷ್ಪದಲ್ಲಿ ಪ್ರಕಟನವಾಗಿವೆ ಅದರಲ್ಲಿ ಶಾಸ್ತ್ರಿಗಳು ಈ ಪ್ರಕಾರ ಹೇಳಿದ್ದಾರೆ.

"ವೀರಶೈವ ಮತೀಯ ತ್ರೈವರ್ಣಿಕ ಸಜಾತೀಯ ದ್ವಿಜರು ಸಜಾತೀಯ ದ್ವಿಜರ ಮನೆಯಲ್ಲಿಯೇ ಊಟಮಾಡಬೇಕೇ ವಿನಾ ಇತರರ ಮನೆಯಲ್ಲಿ ಊಟಮಾಡಬಾರದು."

ಇದೇ ಶಾಸ್ತ್ರಿಗಳ ಪಂಥಕ್ಕೆ ಸೇರಿದ ಹುಟಗಿ ಶ್ರೀ ಪಟ್ಟದ ಸ್ವಾಮಿಗಳು ತಾವು ಬರೆದ ವೀರಶೈವ ಆಚರಣ ಅಥವಾ ಅಷ್ಟಾವರಣ ಮಹತ್ವ ಎಂಬ ಪುಸ್ತಕದಲ್ಲಿ ಈ ಪ್ರಕಾರ ಬರೆದಿದ್ದಾರೆ.

"ಶಿಖಾ, ಯಜ್ಞೋಪವೀತ, ಇಷ್ಟಲಿಂಗ, ವಿಭೂತಿ, ರುದ್ರಾಕ್ಷಿ ಧಾರಣ ಮಾಡುವ ಬ್ರಾಹ್ಮಕರ್ಮ ವಿಶಿಷ್ಟರೇ ವೀರಶೈವ ಬ್ರಾಹ್ಮಣರು"

ಈ ಪ್ರಕಾರ ಪ್ರತಿಪಾದಿಸುವವರು ಯಾರೋ ಕೆಲವರಿದ್ದಾರೆಂದಲ್ಲ. ಇವರ ಪಂಥವು ದಿನೇದಿನೇ ಪ್ರಬಲವಾಗುತ್ತಲೇ ಇದೆ. ಮತ್ತು ಸಮಾಜದಲ್ಲಿ ಘನತೆ ಅಧಿಕಾರಗಳುಳ್ಳವರೂ ಆಗಿದ್ದಾರೆ. ಆದುದರಿಂದ ದಿನೇದಿನೇ ಬೆಳೆಯುತ್ತಿರುವ ಈ ಪಂಥದ ಅಭಿಪ್ರಾಯವು ಸತ್ಯವಾದುದೇ? ಇವರ ವಿಚಾರದಂತೆ ಆಚರಣೆಯೂ ಇದೆಯೇ? ಎಂಬಂಶಗಳನ್ನು ವಿಚಾರಪರರು ಈಗಲಾದರೂ ಯೋಚಿಸಬಾರದೇ? ಶ್ರೀ ಬಸವಾದಿ ಪ್ರಮಥರ ವಿಷಯದಲ್ಲಿ ಅದರಾಭಿಮಾನಗಳುಳ್ಳ ವೀರಶೈವರು ಈಗಲಾದರೂ ಈ ಸಂಗತಿಗಳ ಕಡೆಗೆ ಲಕ್ಷಿಸುವುದು ಯುಕ್ತವಲ್ಲವೇ?

ವೀರಶೈವರಲ್ಲಿ ಗುರು ಜಂಗಮ ಭಕ್ತರೆಂಬ ಮೂರೇ ವರ್ಗಗಳು ಈಗ ಇವೆ. ಶಾಸ್ತ್ರಗಳಲ್ಲಿ ಕೂಡಾ ಸಾಮಾನ್ಯ ವಿಶೇಷ ನಿರಾಭಾರಿಗಳೆಂದು ಈ ಭಕ್ತ ಗುರು ಜಂಗಮರಿಗೇನೇ ಹೇಳಿದ್ದಾರೆ. ಇವರಲ್ಲಿ ಯಾರಿಗೂ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂದು ಹೇಳಿಲ್ಲ. ಆ ಮೂರೂ ವರ್ಣಗಳ ವೀರಶೈವರು ಅಳಿದು ಹೋಗಿದ್ದಾರೆಯೇ ಅಥವಾ ಇವರಲ್ಲಿಯೇ ಅಡಕವಾಗಿದ್ದಾರೆಯೇ? ಇಲ್ಲವೆ ಇವರಿಂದ ಬೇರೆಯಾಗಿದ್ದಾರೆಯೆ?

ವೀರಶೈವರಲ್ಲಿ ಶಿಖಾ ಉಳ್ಳವರು ಅಲ್ಲಲ್ಲಿ ಇದ್ದಾರೆ. ಈಗ ಹೆಚ್ಚಾಗುತ್ತಲೂ ಇದ್ದಾರೆ. ಆದರೆ ಯಜ್ಞೋಪವೀತವುಳ್ಳವರು ಮಾತ್ರ ಈಗಿನ ವೀರಶೈವರಲ್ಲಿ ಯಾರೂ ಕಾಣುವುದಿಲ್ಲ. ಆರಾಧ್ಯ ಬ್ರಾಹ್ಮಣರೆಂಬುವವರಲ್ಲಿ ಮಾತ್ರ ಶಿಖಾ, ಯಜ್ಞೋಪವೀತ, ಇಷ್ಟಲಿಂಗಗಳಿರುತ್ತವೆ. ಅವರೇ ವೀರಶೈವ ಬ್ರಾಹ್ಮಣರಾಗಿದ್ದರೆ ಈಗಿರತಕ್ಕ ವೀರಶೈವರೆಲ್ಲರೂ ಎಂದರೆ ಪಂಚಾಚಾರ್ಯಾದಿ ಗುರುಗಳೂ ನಿರಂಜನ ಮೂರ್ತಿಗಳಾದ ಜಂಗಮರು ಸಹ ಬ್ರಾಹ್ಮಣರಲ್ಲವೆಂದೇ ಸಿದ್ಧವಾಯಿತು. ಏಕೆಂದರೆ ಇವರಿಗೆ ಯಜ್ಞೋಪವೀತವಂತೂ ಈಗ ಇಲ್ಲವಷ್ಟೆ.

ಎಂದಮೇಲೆ ಇವರು ಕ್ಷತ್ರಿಯ ಅಥವಾ ವೈಶ್ಯ ವರ್ಣದವರೇ? ಅಥವಾ ದ್ವಿಜರೇ ಅಲ್ಲವೆ? ಕ್ಷತ್ರಿಯ ಅಥವಾ ವೈಶ್ಯ ವರ್ಣದವರಾಗಿದ್ದರೆ ಯಜ್ಞೋಪವೀತ ಇಷ್ಟಲಿಂಗಗಳುಳ್ಳ ಆರಾಧ್ಯ ಬ್ರಾಹ್ಮಣರೇ ಈ ಪಂಚಾಚಾರ್ಯರೇ ಮೊದಲಾದವರಿಗೆ ಗುರುಗಳಾಗುವುದಿಲ್ಲವೆ? ಇಲ್ಲದಿದ್ದರೆ ಇವರೇ ವೀರಶೈವ ಬ್ರಾಹ್ಮಣರಾಗಲು ಪಂಚಾಚಾರ್ಯರೇ ಮೊದಲಾದವರು ಇಷ್ಟಲಿಂಗದೊಂದಿಗೆ ಯಜ್ಞೋಪವೀತವನ್ನೂ ಧಾರಣ ಮಾಡಬೇಕಾಗಿಲ್ಲವೇ? ಆರಾಧ್ಯ ಬ್ರಾಹ್ಮಣರು ಇವರ ಗುರುಗಳೋ? ಅಥವಾ ಇವರೂ ಯಜ್ಞೋಪವೀತ ಧಾರಿಗಳೋ? ಎಂಬುದೇ ಇವರಿಗೆ ಮೊದಲನೆಯ ಪ್ರಶ್ನೆಯಾಗಿದೆ.

ಈಗಿದ್ದ ವೀರಶೈವರಲ್ಲಿಯೇ ಬ್ರಾಹ್ಮಣಾದಿ ಚಾತುರ್ವರ್ಣಗಳಿದ್ದರೆ ಇವರಲ್ಲಿ ಯಾರು ಯಾವ ವರ್ಣದವರು? ಪಟ್ಟದ ಸ್ವಾಮಿಗಳು ಅಥವಾ ಗುರುಗಳೆಂಬುವವರು ಬ್ರಾಹ್ಮಣರಾಗಿದ್ದರೆ ಅವರು ಯಜ್ಞೋಪವೀತವನ್ನೇಕೆ ಧಾರಣ ಮಾಡಬಾರದು? ಮತ್ತು ತಮ್ಮ ವರ್ಣದವರಲ್ಲಿಯೇ ಊಟೋಪಚಾರ ಮಾಡದೆ ಶಿಷ್ಯರ ಮನೆಯಲ್ಲಿ ಊಟ ಮಾಡುವುದೇಕೆ? ಇವರ ನುಡಿಯು ಸತ್ಯವಾದುದೆ? ಅಥವಾ ನಡೆಯು ಸತ್ಯವಾದುದೆ? ಇದು ಎರಡನೆಯ ಪ್ರಶ್ನೆಯಾಗಿದೆ.

ನಿರಾಭಾರಿ, ಪಂಚಾಚಾರ್ಯ, ಹಿರೇ ಮಹಾಧ್ಯಕ್ಷ, ಮಹಪತ್ತಿ, ಗಣಾಚಾರಿ, ಸ್ಥಾವರ, ಗಣಕುಮಾರ, ಭಂಡಾರಿ, ಮೊದಲಾದ ಗಣ ಭೇದಗಳು ತಯ್ಯನವರಲ್ಲಿವೆ. ಇವರೆಲ್ಲರೂ ಬ್ರಾಹ್ಮಣರೇ? ಇವರಲ್ಲಿ ತಾರತಮ್ಯವುಂಟೆ? ಯಾರು ಯಾವ ಬ್ರಾಹ್ಮಣರು? ಎಂಬುದು ಮೂರನೆಯ ಪ್ರಶ್ನೆಯಾಗಿದೆ.

ಪಂಚಮಸಾಲಿ, ಬಣಜಿಗ, ಲೋಕಬಳಕಿ, ಶೀಲಬಳಕಿ, ಶೀಲವಂತ, ದೀಕ್ಷಾವಂತ, ಧೂಳಪಾವಡ, ಆದಿಬಣಜಿಗ, ಕುಡಒಕ್ಕಲಿಗ ಶಿವಚಿಂಪಿಗ, ನೇಕಾರ, ಗಾಣಿಗ, ಸಾದ ವಲವ, ಮೊದಲಾದ ನೂರಾರು ಪಂಗಡದವರು ಭಕ್ತರಲ್ಲಿದ್ದಾರೆ. ಇವರಲ್ಲಿ ಕ್ಷತ್ರಿಯರಾರು? ವೈಶ್ಯರಾರು? ಮತ್ತು ವೀರಶೈವ ಶೂದ್ರರು ಇವರಲ್ಲಿಯೇ ಇದ್ದಾರೆಯೇ? ಬೇರೆ ಇದ್ದಾರೆಯೇ? ಇದು ನಾಲ್ಕನೆಯ ಪ್ರಶ್ನೆಯಾಗಿದೆ.

ಶ್ರೀ ರೇವಣಸಿದ್ಧ ಶಿವಶರಣ ಮಹಾಸ್ವಾಮಿ ಆಕ್ಕಲಕೋಟೆ ಇವರು ನಮ್ಮ ಕಡೆಗೆ ಕಳಿಸಿದ ಪ್ರಕಟನೆಯ ಮೇಲಿಂದ ವೀರಶೈವ ವರ್ಣವಾದಿಗಳಿಗೆ ಈ ನಾಲ್ಕು ಪ್ರಶ್ನೆಗಳನ್ನು ಮಾಡಿದ್ದಾಗಿದೆ. ಇವುಗಳಿಗೆ ಸಮಂಜಸವಾದ ಉತ್ತರಗಳನ್ನು ಬೇಕಾದವರು ಬರೆದು ಕಳುಹಿಸಬೇಕು. ಆ ಲೇಖನವನ್ನು ನಾವು ಇದೇ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಹಾಗೆ ನಮ್ಮ ಕಡೆಗೆ ಲೇಖನವನ್ನು ಬರೆದು ಕಳಿಸದೆ ಅನ್ಯರನ್ನು ಮನಬಂದಂತೆ ದೂಷಿಸಿ ತಮ್ಮ ಪಂಥದ ಪತ್ರಿಕೆಯಲ್ಲಿಯೇ ಪ್ರಕಟಿಸಿಕೊಂಡದ್ದಾದರೆ ಈ ಪ್ರಶ್ನೆಗಳಿಗೆ ಅದು ಉತ್ತರವಲ್ಲವೆಂದೇ ನಾವು ತಿಳಿಯುತ್ತೇವೆ.

[ಸಂಪಾದಕ]

—ಧಾರವಾಡ ಜಿಲ್ಲಾ ಹರಿಜನ ಸೇವಾಸಂಘದ ಸದಸ್ಯರನ್ನು ಮಾಡಿಕೊಳ್ಳುವದು ಗದಗಿನಲ್ಲಿ ಭರದಿಂದ ನಡೆದಿದೆ.

—ಮಹಾತ್ಮಾಜಿಯವರು ಎಲ್ಲೋರಕ್ಕೆ ಹೋಗಲು ಅಲ್ಲಿ ಮಾನಪತ್ರವೂ ೫೦೦೦ ರೂ. ಗಳೂ ಅರ್ಪಿಸಲ್ಪಟ್ಟವು. ಅಲ್ಲಿ ಭಾಷಣ ಮಾಡುವಾಗ ಅದಿಜನ ವಿದ್ಯಾರ್ಥಿಗಳಿಗೆ ತೊಗಲಿನ ವ್ಯಾಪಾರವನ್ನು ಕೈವಶಮಾಡಿಕೊಳ್ಳಿರೆಂದು ಉಪದೇಶಿಸಿದರು.

ಅಧ್ಯಕ್ಷರಾದ

ಶ್ರೀ ವೈ. ನಾಗೇಶ ಶಾಸ್ತ್ರಿಗಳವರ ಭಾಷಣ.

ಕರ್ನಾಟಕ ವಾಗ್ದೇವಿ ಪ್ರತಿಷ್ಠಾಕ್ಷರಾದ ನನ್ನ ಪ್ರಿಯ ಸೋದರಿ ಸೋದರರೇ,

—ಕರ್ನಾಟಕ ವೈಶಿಷ್ಟ್ಯವನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ, ಮೊದಲು ಕನ್ನಡಿಗರ ಪ್ರಾಚೀನತೆ ಮೊದಲಾದುವರ ತಿಳಿವಾಗಬೇಕು. ಕನ್ನಡವು ದ್ರಾವಿಡ ಭಾಷಾವರ್ಗಕ್ಕೆ ಸೇರಿದುದೆಂಬುದು ಕನ್ನಡ ಭಾಷಾ ಚರಿತ್ರಜ್ಞರಿಂದ ತನ್ನಿಮ್ಮಲ್ಲರಿಗೆ ತಿಳಿದಿರುವದಷ್ಟೆ. ದ್ರಾವಿಡರ ವಿಷಯಕ್ಕೆ ನಮ್ಮಲ್ಲಿ ಅನೇಕ ಕಲ್ಪನೆಗಳು ರೂಢಿವಾಗಿರುವವು. "ದ್ರಾವಿಡರೆಂದರೆ ದಕ್ಷಿಣದ ಮೂಲ ನಿವಾಸಿಗಳು. ನಾಗರಿಕತೆಯ ಕಲ್ಪನೆಯಿಲ್ಲದ ಕಾಡುಜನರು, ಭೂತ-ಪಿಶಾಚಾದಿಗಳನ್ನು ಪೂಜಿಸುವವರು. ಇವರ ವಿಚಾರಗಳು ಕಾಡು, ಆಚಾರಗಳು ಕ್ರೂರ ಇತ್ಯಾದಿ ಕಲ್ಪನೆಗಳನ್ನು ವಿದೇಶೀಯ ಚರಿತ್ರಕಾರರು ನಮಗೆ ಕಲಿಸಿರುವರು. ಆದರೆ ಪ್ರಾಚೀನ ದ್ರಾವಿಡ ವಾಙ್ಮಯವನ್ನು ಪರಿಶೀಲಿಸಿದರೆ ದ್ರಾವಿಡರ ಸಂಸ್ಕೃತಿಯ ವಿಷಯವಾಗಿ ಅನೇಕ ನಿಜವಾದ ಸಂಗತಿಗಳು ತಿಳಿದು ಬರುವವು.

ವೇದಕಾಲದಲ್ಲಿ ಆರ್ಯರು ಈ ದ್ರಾವಿಡರನ್ನು ಮೂಲೆಗೊತ್ತಿ ಅವರ ಸಂಸ್ಕೃತಿಯನ್ನು ನಿರ್ಮೂಲ ಮಾಡಿ ತಮ್ಮ ಸಂಸ್ಕೃತಿಯನ್ನು ಮುಂದುವರಿಸಿದರೆಂದು ದೇಶೀಯ ವಿದೇಶೀಯ ಪಂಡಿತರ ಊಹೆಯಾಗಿದೆ. ಆದರೆ, ದ್ರಾವಿಡರ ಸಂಸ್ಕೃತಿಯ ಕುರುಹುಗಳನ್ನು ಎಂಗಡಿಸಿ ಗುರುತಿಸಲು ಅನೇಕರು ಸಾಹಸ ಪಡುತ್ತಿರುವರು. ದ್ರಾವಿಡರ ಮತ್ತು ಆರ್ಯರ ಸಂಸ್ಕೃತಿಗಳ ಸಖ್ಯಪ್ರಾಯವಾದ ಚಿತ್ರವನ್ನು ತೆಗೆಯುವ ಈ ಕಾರ್ಯವು ಅಷ್ಟು ಸುಗಮವಲ್ಲವು. ಅಪರೂ ದ್ರಾವಿಡ ವಾಙ್ಮಯಾಭ್ಯಾಸಿಗಳಲ್ಲಿ ಅನೇಕರು ಹೀಗೆ ಹೇಳುವರು— ವೇದ ಕಾಲದ ಆರ್ಯರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿ ದ್ರಾವಿಡರೊಳಗೆ ಶೈವ, ವೈಷ್ಣವಗಳೆಂಬೆರಡು ಮುಖ್ಯ ಪಂಗಡಗಳಿದ್ದವು.

ಇವೆರಡು ಪಂಗಡಗಳೂ ಕೂಡಿ ನಡೆಯುತ್ತಿರಲಿಲ್ಲ. ಆಚಾರ ಸಂಪ್ರದಾಯಗಳಲ್ಲಿ ಮಾತ್ರ ಹೋಲಿಕೆಯಿದ್ದಿತು. ಎರಡೂ ಪಂಗಡಗಳೂ ಸಂಪೂರ್ಣವಾಗಿ ಸಗುಣ ಮೂರ್ತಿಯನ್ನು ಪೂಜಿಸತಕ್ಕವುಗಳಾಗಿದ್ದವು. ಅವರಿಗೊಂದು ವಿಶಿಷ್ಟವಾದ ಧಾರ್ಮಿಕ ವಾಙ್ಮಯವಿತ್ತು. ಅವರ ಆರಾಧ್ಯ ದೈವತಗಳಾದ ಶಿವ-ವಿಷ್ಣುಗಳ ವಿಷಯವಾಗಿ ಅನೇಕ ಕಥೆಗಳು ಅವರಲ್ಲಿ ನೆಲೆಗೊಂಡಿದ್ದವು. ಅವರ ಅನೇಕ ರಾಜರು ಪ್ರಬಲ ಸೇನಾಯುತರಾಗಿ ಪ್ರಚಂಡ ಸಾಮ್ರಾಜ್ಯವನ್ನು ನಡೆಸುತ್ತಿದ್ದರು. ಉತ್ತರದಿಂದ ಬರುವ ಆರ್ಯರ ಅನೇಕ ದಾಳಿಗಳನ್ನು ಅವರು ಕಡೆದು ಹಿಂದಕ್ಕಟ್ಟಿದರು. ಅಶೋಕನ ಪ್ರಬಲ ಸೇನೆಗೂ ಕೂಡ ತೆಲಗು, ಕನ್ನಡ ನಾಡುಗಳ ಪ್ರಾಂತವನ್ನು ದಾಟಿ ಮುಂದುವರಿಯಲಾಗಲಿಲ್ಲ. ತಮಿಳುಚೇರರ ಪ್ರಾಂತಗಳಂತೂ ಅಜೇಯಗಳಾಗಿದ್ದವು. ಬೌದ್ಧ ದೀಕ್ಷೆಯನ್ನು ವಹಿಸಿದ ಮೇಲೆ ಅಶೋಕನು ರಾಜ್ಯ ವಿಸ್ತಾರದ ಹಂಗುದೊರೆದನು. ಆದರೆ, ಇದೇ ಸಮಯಕ್ಕೆ ಬೌದ್ಧ- ಜೈನ ಭಿಕ್ಷುಗಳು ವಿಂಧ್ಯೆಯನ್ನು ಳಿದು ದಕ್ಷಿಣದಲ್ಲಿ ತಮ್ಮ ಧರ್ಮ ಪ್ರಸಾರವನ್ನು ಬಲವಾಗಿ ನಡಿಸಿದರು. ಇದಕ್ಕೆ ಮೊದಲೇ ಅಧ್ಯಾಪಕ ವೃತ್ತಿಗಾಗಿ ಆರ್ಯರನೇಕರು ದಕ್ಷಿಣಕ್ಕಿಳಿದು ಬಂದಿದ್ದರು. ಅವರು ತಮ್ಮ ಪ್ರತಿಪಕ್ಷಿಗಳಾದ ಜೈನ ಬೌದ್ಧರನ್ನು ಎದುರಿಸಲು ದ್ರಾವಿಡರಲ್ಲಿಯ ಶೈವ ವೈಷ್ಣವ ಪಂಥಗಳಲ್ಲಿ ಸೇರಿಕೊಂಡು ತಸ್ಮಗುರಾದರು.

ದ್ರಾವಿಡರ ಸಂಸ್ಕಾರದಿಂದ ವೈದಿಕ ತತ್ವಗಳಲ್ಲಿಯೂ ಕೆಲವು ಮಾರ್ಪಾಡುಗಳಾದವು. ಕಂಡುಬರುತ್ತವೆ. ವೈದಿಕ ಋಷಿಗಳೂ ಅವರ ದೇವತೆಗಳಿಗೂ ಇದ್ದ ಸಂಬಂಧವಲ್ಲಿ ಕೆಲವು ಮಟ್ಟಿಗೆ ವಾಣಿಜ್ಯ ವೃತ್ತಿಯ ಛಾಯೆಯು ತೋರುವುದು. "ನೀನು ನಿನಗೆ ಇಂತಹ ಇಂತಿಷ್ಟು ತಿಮ್ಮಿಗೆಗಳನ್ನು ಕೊಡುವೆನು. ನೀನು ನನಗೆ ಇಂತಿಷ್ಟು ಸಹಾಯಕಾರ್ಯವನ್ನು ಕೊಡು" ಎಂದು ಅವರು ಕೇಳುವುದುಂಟು. ದ್ರಾವಿಡರ ದೇವಭಕ್ತಿ ಸಂಬಂಧವು ಸೇವ್ಯ ಸೇವಕ ಭಾವವಾಗಿರುವುದು. ತಾನು ದಾಸನು, ತನ್ನ ದೇವರು ತನಗೆ ಸಂಪೂರ್ಣವಾದ ಸ್ವಾಮಿಯು ಎಂಬುದು ಅವರ ಭಾವನೆ. ಕರ್ಮ ಫಲತ್ಯಾಗಿಗಳಾಗಿ ಭಕ್ತಿಯಿಂದ ಪರಮಾತ್ಮನನ್ನು ಪೂಜಿಸುವ ಕಲ್ಪನೆಯನ್ನು ದ್ರಾವಿಡರಿಂದ ಆರ್ಯರು ಕಲಿತುಕೊಂಡರು. ಭಕ್ತತತ್ವವಂತೂ ಕೇವಲ ದ್ರಾವಿಡರದು. ಈ ಭಕ್ತಿಲತೆಯು ದ್ರಾವಿಡ ಪ್ರಾಚೀನ ಧಾರ್ಮಿಕ ವಾಙ್ಮಯದಲ್ಲಿ ಅಂಕುರಿಸಿ, ಸಂಸ್ಕೃತದ ಆಗಮೋಪನಿಷತ್ತುಗಳಲ್ಲಿ ಪಲ್ಲವಿಸಿ, ಬಸವಾದಿ ಪ್ರಮಥರ ವಚನ ವಾಙ್ಮಯದಲ್ಲಿಯೂ ವೈಷ್ಣವ ದಾಸರ ಕೀರ್ತನೆಗಳಲ್ಲಿಯೂ ಹೂಬಿಟ್ಟು ತನ್ನ ಸುಗಂಧವನ್ನು ದಶ ದಿಕ್ಕುಗಳಲ್ಲಿಯೂ ತುಂಬಿಬಿಟ್ಟಿತು. ಆದುದರಿಂದಲೇ ಕರ್ನಾಟಕವು ಭಕ್ತಿಯ ಜನ್ಮ ಭೂಮಿಯೆಂದು ಕೀರ್ತಿಗೊಂಡುದು. ತೀರ್ಥ ಕ್ಷೇತ್ರ ಯಾತ್ರೆಗಳೂ, ದೇವಾಲಯಾದಿ ನಿರ್ಮಾಣವೂ, ಅನೇಕ ಹಬ್ಬಗಳೂ, ದೇವತೋತ್ಸವಾದಿಗಳೂ, ದ್ರಾವಿಡರ ವಾಗಿರುವವೆ ಇಷ್ಟೇ ಅಲ್ಲ; ಸಮಾಜದ ಐತಿಹಿತಗಳನ್ನನುಲಕ್ಷಿಸಿ ವಿಧಿನಿಷೇಧಗಳನ್ನು ಕಂಡುಹಿಡಿದು ಸಮಾಜದ ಶ್ರೇಷ್ಠರು ಹಾಕಿಕೊಟ್ಟ ಕರ್ಮಗಳನ್ನು ಮಾಡಬೇಕೆಂದು ಶೈವ ವೈಷ್ಣವ ಪಂಥಗಳ ಅನೇಕ ಗ್ರಂಥಗಳಲ್ಲಿ ಕಂಡುಬರುವದು. ಧರ್ಮದಲ್ಲಿ ಸೇರಿದ ಈ ಸಮಾಜ ಹಿತವ ಕಲ್ಪನೆಯು ಮುಂದೆ ಸಮಾಜದ ಸುಸಂಘಟನೆಗೂ ಸುಸ್ಥಿತಿಗೂ ಸಹಕಾರಿಯಾಯಿತು. ಬರಬರುತ್ತ ಆರ್ಯದ್ರಾವಿಡರ ಸಂಸ್ಕೃತಿಗಳ ಸಮ್ಮೇಳನವಾಗಿ ಈಗಿನ ಹಿಂದೂ ಸಂಸ್ಕೃತಿಯುಂಟಾಗಿರುವದು.

ದ್ರಾವಿಡ ವಾಙ್ಮಯಾಭ್ಯಾಸಿಗಳ ಈ ವಿಷಯದ ನಿರ್ಣಯವು ಪ್ರೌಢತವಲ್ಲ. ದ್ರಾವಿಡರ ಪ್ರಾಚೀನ ಸಂಸ್ಕೃತಿಯ ಪೂರ್ಣ ಪರಿಚಯಕ್ಕೆ ಸಾಕಾದಷ್ಟು ಚರಿತ್ರ ಸಾಮಗ್ರಿಯು ನಮ್ಮಲ್ಲಿ ಇನ್ನೂ ಸಿದ್ಧವಾಗಿಲ್ಲ. ನಮಗೆ ಬೇಕಾದುದು ಆರ್ಯರು ದಕ್ಷಿಣಕ್ಕಿಳಿದು ಬರುವದಕ್ಕೆ ಮುಂಚೆ ದ್ರಾವಿಡ ಸಂಸ್ಕೃತಿಯೊಂದಿದ್ದಿತು, ಆ ಸಂಸ್ಕೃತಿಗೆ ತಕ್ಕ ವಾಙ್ಮಯವೂ ಇದ್ದಿತು. ಆ ವಾಙ್ಮಯದಲ್ಲಿ ಧಾರ್ಮಿಕಾದಿ ಗ್ರಂಥಗಳೂ ಬರೆಯಲ್ಪಟ್ಟಿದ್ದವು. ಎಂದರೆ ಸಂಸ್ಕೃತದ ಸಹಾಯವನ್ನು ಪಡೆಯದೆ ದ್ರಾವಿಡ ವಾಙ್ಮಯವು ತನ್ನ ವೈಶಿಷ್ಟ್ಯವನ್ನು ಪಡೆದಿದ್ದಿತೆಂಬುದಿಷ್ಟೇ.

ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಕನ್ನಡದ ಸಂಸ್ಕೃತಿಗೆ ದ್ರಾವಿಡರ ಸಂಸ್ಕೃತಿಯೇ ಮೂಲವಲ್ಲದೆ ಆರ್ಯರ ಸಂಸ್ಕೃತವು

ಮೂಲವಲ್ಲವು. ನಮ್ಮ ಭಾಷೆಗೆ ಹೆಸರು ಕನ್ನಡವೆಂಬುದೇ ಮೊದಲಿದ್ದು ಸಂಸ್ಕೃತದ ಸಹವಾಸದಿಂದ ಕರ್ನಾಟ ಅಥವಾ ಕರ್ನಾಟಕ ಎಂಬ ಹೆಸರು ಅನಂತರ ಬಂದುದೆಂದು ವಾಙ್ಮಯಶೋಧನೆಯಿಂದ ಗೊತ್ತಾಗುತ್ತದೆ. ಕನ್ನಡವನ್ನು ಮಾತನಾಡುವುದರಿಂದ ನಮಗೆ ಕನ್ನಡಿಗರೆಂತಲೂ ನಮ್ಮ ನಾಡಿಗೆ ಕನ್ನಡ ನಾಡೆಂತಲೂ ಹೆಸರು ಬಂದಿರಬೇಕು. ಎರಡನೆಯ ಶತಮಾನದಲ್ಲಿ ಬರೆದಂತಾದ ''ಶಿಲಪ್ಪದಿಗಾರಂ'' ಎಂಬ ತಮಿಳು ಕೃತಿಯಲ್ಲಿ ನಮ್ಮನ್ನು 'ಕನ್ನಡರ್' ಎಂದು ಉಲ್ಲೇಖಿಸಲಾಗಿದೆಯೆಂದು ಕನ್ನಡ ಕವಿಚರಿತಕಾರರಾದ ಆರ್. ನರಸಿಂಹಾಚಾರ್ಯರು ಹೇಳಿರುವರು. 'ಕನ್ನಡಿಗ' ಎಂಬುದು ಮುಂದೆ ಜಾತಿವಾಚಕವಾಗಿಯೂ, ಕುಲವಾಚಕವಾಗಿಯೂ, ವ್ಯವಹಾರದಲ್ಲಿ ಬಂದಂತೆ ಕಾಣುವುದು. ಶ್ರೀ ಚನ್ನಬಸವೇಶ್ವರರು ತಮ್ಮ 'ಕರಣಹಸುಗೆ'ಯಲ್ಲಿ ಕನ್ನಡ, ಕನ್ನೆ, ವಾಣಿಜ್ಯ, ತಿಗಳ ಎಂದು ತೆಂಕಣ ನಾಡಿನಲ್ಲಿ ನಾಲ್ಕು ಕುಲಗಳಿರುವವೆಂದೂ, ಶ್ರೀ ನಿಜಗುಣ ಶಿವಯೋಗಿಗಳು ತಮ್ಮ ವಿವೇಕ ಚಿಂತಾಮಣಿಯಲ್ಲಿ ತಮ್ಮ ನಾಡಿನ ಜಾತಿಗಳನ್ನು ಹೇಳುವಾಗ ''ಕನ್ನಡ, ಕನ್ನೆ, ತೆಲುಗು, ತಿಗುಳ'' ಎಂದು ಹೇಳಿರುವರು. ಹದಿಮೂರನೆಯ ಶತಮಾನದ ಜೊಂಡರಸ ಕವಿಯು ತಾನು ಕನ್ನಡಿಗ ಕುಲದವನೆಂದು ಹೇಳಿಕೊಂಡಿರುವನು ವಿಜಯನಗರದ ಅಮಾತ್ಯವರನಾದ ಲಕ್ಕಣ್ಣ ಧರನು ಕನ್ನಡಿಗ ಕುಲದವನೆಂಬ ಉಲ್ಲೇಖವಿದೆ. ಶಾಸನಗಳಲ್ಲಿ ಅನೇಕ ಬ್ರಾಹ್ಮಣರ ಮನೆಯ ಹೆಸರುಗಳು 'ಕನ್ನಡ' ಎಂದಿರುವುವೆಂದು ಶಾಸನ ಶೋಧಕರು ಹೇಳುತ್ತಾರೆ. ಇಷ್ಟೇ ಅಲ್ಲ, ಸರ್ವ ವಿದ್ಯಾ ಪಾರಂಗತರಾದ ವಿದ್ಯಾರಣ್ಯರ ಕುಲವು ಕನ್ನಡ ಕುಲವೆಂದು ಪ್ರತೀತಿಯನ್ನು ಪಡೆದಿದೆ. ಈ ಮಾತುಗಳಿಂದ ಕನ್ನಡಿಗರು ಪೂರ್ವ ಕಾಲದಿಂದಲೂ ತಮ್ಮ ಜನಾಂಗವನ್ನು ಕಟ್ಟಿಕೊಂಡು ತಮ್ಮದೇ ಒಂದು ವೈಶಿಷ್ಟ್ಯವನ್ನು ಕಾಪಾಡಿಕೊಂಡಿದ್ದರೆಂಬುದು ವಿದಿತವಾಗುತ್ತದೆ. ಒಳಭೇದಗಳು ಎಷ್ಟೇ ಇದ್ದರೂ ತಾವೆಲ್ಲರೂ ಕನ್ನಡ ಕುಲದವರು, ಒಂದೇ ನೆತ್ತರಿನವರು ಎಂದು ಹೇಳಿಕೊಳ್ಳುತ್ತಾ ಒಕ್ಕಟ್ಟಾಗಿದ್ದು ತಮ್ಮ ವೈಶಿಷ್ಟ್ಯದ ಹೆಮ್ಮೆಯಿಂದ ಹಿಗ್ಗುತ್ತಿರಬೇಕೆಂದು ಊಹಿಸಲವಕಾಶವಿದೆ. ಪೂರ್ವಿಕರ ಆ ತರದ ಹೆಮ್ಮೆಯು ಈಗ ನಮಗೆ ಬೇಕಾಗಿರುವುದಲ್ಲವೆ?

ಕನ್ನಡದ ಚರಿತ್ರೆವನ್ನು ನೋಡಿದರೆ ಕನ್ನಡ ನಾಡಿನ ವೈಶಿಷ್ಟ್ಯದ ಚಿತ್ರವು ಕಣ್ಣಿಗೆ ಕಟ್ಟಿದಂತಾಗುವದು—ಕನ್ನಡದ ವರ್ತಕರು ಕಡಲಬೇಹಾರವನ್ನು ಮಾಡಿ ನಾಡಿನ ಸಿರಿಯನ್ನು ಬೆಳೆಯಿಸಿದ್ದರು. ಕ್ಷತ್ರಿಯರು ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಕನ್ನಡ ನಾಡಿನ ಹೆಸರನ್ನು ಮೆರೆಯಿಸಿದರು. ಕನ್ನಡ ವೀರರ ಸೇವೆಯು ತೆಂಕಣದಲ್ಲಿ ಸಿಂಹಳ ದ್ವೀಪದವರೆಗೂ ಬಡಗಣಕ್ಕೆ ನರ್ಮದೆಯವರೆಗೂ ಸಾಗಿಹೋಗಿದ್ದಿತು. ಕನ್ನಡದ ಬ್ರಹ್ಮ ಕ್ಷತ್ರಿಯವೆಂಬ ಕುಲವು ಬಂಗಾಳದಲ್ಲಿ ಆಳುತ್ತಿದ್ದಿತೆಂದು ಚರಿತ್ರೆಯು ಹೇಳುವದಿಲ್ಲವೆ? ಉತ್ತರದಲ್ಲಿ ಬೌದ್ಧ ಧರ್ಮದ ಪ್ರಚಾರವು ಅತಿಶಯವಿದ್ದಾಗ ತಮ್ಮ ಧರ್ಮ ಸಂರಕ್ಷಣೆಯನ್ನು ಮಾಡಿಕೊಳ್ಳಲು ಹೆಣಗಾಡಿದ ಕನ್ನಡ ದೊರೆಗಳು ಚರಿತ್ರೆಯಲ್ಲಿ ಸಿಗುವದಿಲ್ಲವೆ? ಧರ್ಮನೀತಿಗಳ ಕಾವೇರಿಗೆ ಬ್ರಹ್ಮಗಿರಿಯಾದ ಕನ್ನಡಿಗರು ಇತಿಹಾಸದಲ್ಲಿ ದೊರೆಯುವರು. ''ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' ಎಂಬ ಗೀತೋಕ್ತಿಯ ಭಕ್ತಿ ಮಾರ್ಗವನ್ನು ಪೋಷಿಸಿ ಅವರ ಫಲವನ್ನುಂಡವರು ಕನ್ನಡಿಗರು. ವೇದೋಪನಿಷತ್ತುಗಳ ತಿರುಳನ್ನು ತಿಳಿಗನ್ನಡದಲ್ಲಿ ತಿಳುಹಿಸಲು ತಿರುಗಾಡಿದವರು ನಮ್ಮ ಹಿರಿಯರು. ಕನ್ನಡಿಗರ ವೈಶಿಷ್ಟ್ಯವ ಹೆಗ್ಗುರುತಾದ ಶಿಲ್ಪ ನೈಪುಣ್ಯದಿಂದ ಬಂಡೆಗಳಿಗೆ ಜೀವತಸವನ್ನಿತ್ತವರು ನಮ್ಮವರೇ. ಇವರು ಸಂಗೀತ ಶಾಸ್ತ್ರದಲ್ಲಿ ತಮ್ಮದೊಂದು ವೈಶಿಷ್ಟ್ಯವನ್ನು ಜಗತ್ತಿಗೆ ತೋರಿಸಿ ತಣಿಸಿಲ್ಲವೆ? ಕನ್ನಡಿಗರು ಗ್ರೀಕರಂತೆ ದೇಶ, ಭಾಷೆ, ವೀರ್ಯ, ಧೈರ್ಯ, ಶಿಲ್ಪ, ಸಂಗೀತ, ಸಾಹಿತ್ಯ ಮೊದಲಾದ ಪ್ರತಿಯೊಂದರಲ್ಲಿಯೂ ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡು ನೆರೆದಿರುವರು. ಸಾಹಿತ್ಯವಂತೂ ಕನ್ನಡಿಗರ ಪಂಚ ಪ್ರಾಣ. ಅವರ ಜೀವನದ ಸಾರ ವಸ್ತುವೇ ಸಾಹಿತ್ಯವು.

ಈ ರೀತಿಯಾಗಿ ನಮ್ಮ ನಾಡು ಬಹು ಪುರಾತನ ಕಾಲದಿಂದಲೂ ತನ್ನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಭಾಷಾವಿಷಯಕಾದಿಗಳ ಸಂಸ್ಕೃತಿಯನ್ನು ಸ್ವತಂತ್ರ ರೀತಿಯಿಂದ ಕಾಪಾಡಿಕೊಂಡು, ತನ್ಮೂಲಕವಾಗಿ ತನ್ನದೊಂದು ವೈಶಿಷ್ಟ್ಯವನ್ನೇ ಜಗತ್ತಿಗೆ ತೋರಿಸಿರುವದು. ಈಗ ಆಂಗ್ಲೇಯರ ಸಹವಾಸದಿಂದ ವೈಜ್ಞಾನಿಕಾದಿ ವಿಷಯಗಳನ್ನು ತನ್ನ ಜ್ಞಾನ ಭಾಂಡಾರದಲ್ಲಿ ತುಂಬಿಕೊಳ್ಳುವಂತೆ ಪೂರ್ವದಲ್ಲಿ ಆರ್ಯರೊಡನೆ ಬೆರೆತು ಧಾರ್ಮಿಕಾದಿ ತತ್ವಗಳನ್ನು ತುಂಬಿಕೊಂಡಿದ್ದರೂ, ಆರ್ಯರಿಗಿಂತಲೂ ಪೂರ್ವದಲ್ಲಿಯೇ ತಾನು ಪಡೆದ ವೈಶಿಷ್ಟ್ಯವನ್ನು ಇದುವರೆಗೂ ಉಳಿಸಿಕೊಂಡಿರುವುದೆಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದು. ಆ ವೈಶಿಷ್ಟ್ಯವನ್ನು ಇನ್ನು ಮುಂದೆ ಬೆಳೆಯಿಸಿಕೊಳ್ಳುವುದೇ ಕನ್ನಡಿಗರಾದ ನಮ್ಮ ಮುಖ್ಯ ಕರ್ತವ್ಯವಿರುವುದು.

ಸಶೇಷ.

ಸ್ವಾಗತಾಧ್ಯಕ್ಷರ ಭಾಷಣ.

(ಳನೇ ಪುಟದಿಂದ ಬಂದುದು.)

ವೀರಶೈವ ಕವಿಗಳು ಶ್ರೀ ಬಸವಾದಿ ಪ್ರಮಥರ ನಿಚ್ಚಳ ಬಾಳ ಬಿಚ್ಚಳಿಕೆಗಳಿಂದ ಈಶಭಕ್ತಿಯನ್ನು ನೆಲೆಗೊಳಿಸಿ ಮಾನವರ ಅಗಾಧ ಹೃದಯದಲ್ಲಿ ಮಾದೇವನನ್ನು ನಿಲುಕಿಸಿದರು. ಪುರಾಣಗಳ ಬಣ್ಣನೆಗಿಂಬಾದ ಶರಣರು ಅವಾವ ಹೋರೆಯಿಂದ ಮೇಣು ಅವಾವ ಹುಟ್ಟಿನಿಂದ ಮೇಣು ಸಾಮಾಜಿಕ ಕೀಳುಮೇಲುಗಳಿಂದ ಮಾನವನ ಒರೆಗಾಣಬಾರದು. ಈಶಭಕ್ತಿಯು ಅಚ್ಚೊತ್ತಿ ಸದಾಚಾರದ ಕೆಚ್ಚೊತ್ತಿ ಅವನವನ ಒಪ್ಪುತಪ್ಪುಗಳ ಗುರುತು. ಮಾನವೋತ್ತಮ ನಲ್ಲಿ ಈಶನು ಅಚ್ಚೊತ್ತಿ ಒಚ್ಚತವಾಗಿಹನು. ಅದನ್ನು ಗುರುತಿಸಿ ಸಾಮಾಜಿಕ ಘಟನೆಯಾಗುವುದು ಚಿತವು. ಅದುವೆ ಮಾನವ ಕುಟುಂಬದ ಸಾಮುದಾಯಿಕೋನ್ನತಿಯು. ಅದುವೆ ಇಹಪರ ಸಾಧನವು. ಎಂಬ ಒಪ್ಪಿನ ತತ್ವಗಳನ್ನು ಅಚ್ಚ ಶೀಲದಿಂದ ಬೀರಿದರು.

ಶರಣರಿಂದಲೂ, ವೀರಶೈವ ಕವಿಗಳಿಂದಲೂ ನಮಗೊಂದು ಪೊಚ್ಚಪೊಸದಾದ ಹಾದಿಯ ಕಣ್ಣೆರವಿಯಾಯ್ತು. ಈ ಕಣ್ಣೆರವಿಯು ನವೀನ ವಾಙ್ಮಯದಲ್ಲಿ ಪರಿಣಮಿಸಿತು. ಶಿವಶರಣರ ವಚನಗಳು, ಬುದ್ಧನ ಸರಲಬೋಧವನ್ನೂ, ಆಗಮೋಪನಿಷತ್ತುಗಳಗ ಭೀರೋದಾತ್ತ ತತ್ವಗಳನ್ನೂ ಹೆಣೆ ಹಾಕಿದುವು. ಪ್ರಾಚೀನದಲ್ಲಿಯು ಕಾಣದ ಸ್ತ್ರೀಪುರುಷರ ಆಧ್ಯಾತ್ಮಿಕ ವಿಕಾಸವು ಕಂಗೊಳಿಸಿತು. ನವೀನ ಗುಣಾಕಲಿತ ಸಮಾಜವಾಯಿತು. ಹಿರಜೀವಿಯಾಗಲಿಲ್ಲವಾದರು ಸದ್ಯದ ವೀರಶೈವ ಸಮಾಜದಲ್ಲಿ ಕೆಲಮಟ್ಟಿಗುಳಿದಿದೆ.

ಬ್ರಾಹ್ಮಣ ವಾಙ್ಮಯವು ಭಾರತ ರಾಮಾಯಣಾದಿ ವೀರರ ಚರಿತಾದಿ ಪವಿತ್ರತಾ ರತ್ನಗಳ ಉಚ್ಚವಾದ ಬಾಳನ್ನು ಮುಂದಿಟ್ಟು ಪೂರ್ವ ಪರಂಪರೆಯ ಸಾರವಿದ್ದೆಸ್ತುಗಳನ್ನು ತೋರಿಸಿತು. ಸ್ಮಾರ್ತ ಮಾರ್ಗದ ಸಾಮಾನ್ಯ ಜನಕ್ಕೆ ಸುಲಭವಾದ ಧರ್ಮ ಬೋಧೆಯನ್ನು ನೀಡಿತು. ಈ ವಾಙ್ಮಯದಲ್ಲಿ ವೈಷ್ಣವ ವಾಙ್ಮಯವು ಹೆಸರಿಟ್ಟು ಹೇಳಲು ತಕ್ಕದಾಗಿದೆ. ಪುರಂದರದಾಸ, ಕನಕದಾಸ ಮೊದಲಾದ ದಾಸರ ಪದ್ಯಗಳು ದೇವಭಕ್ತಿಯನ್ನು ಲಲಿತವಾಗಿ ಬಣ್ಣಿಸಿ ಸರಳ ಜೀವನವನ್ನು ಸಾಧು ಚರಿತ್ರವನ್ನು ಭಕ್ತಿಯ ಗಾಂಭೀರ್ಯವನ್ನು ಬೋಧಿಸುತ್ತವೆ.

ಸಶೇಷ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋ ಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೨೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೪೫-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಪಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಪುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ,
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹೆಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚೆರ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಚ್ಛೆವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕೆಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮುಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ರತ್ರು ಬ.ಟ್ಲು—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಸ-ನೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ಜಿ. ವಿಜಾಪುರ.

೧೬೩

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

೧೮೩

REGISTERED No. B. 2891

ಶರಣ ಸಂದೇಶ

The

Sharana Sandesh.

ನ್ಯಾಯನಸ್ಯೂರ| ದಾಕ್ಷಿಣ್ಯಪರನಾನಲ್ಲ| ಲೋಕಜ್ಞರೋಧಿ| ಶರಣನಾರಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ್ ರಾಜತೇಜದಲ್ಲಿ ಪ್ರನಾಗಿ ॥ ವ ಚನ ಕ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೮ ನೆಯ ಜನವರಿ ೧೯೩೪. | ಸಂಚಿಕೆ ೨

ಜನಸೇವೆಯೇ ದೇವರಸೇವ

ಹಿಂದು ಧರ್ಮವೀರರ ಸಂಚಾರ.

ಭಾಯಿ ಪರಮಾನಂದ ಮತ್ತು ಡಾ. ಮುಂಜೆ.

ಹಿಂದು ಸಮಾಜ ಸಂಘಟನೆಯ ಕಾರ್ಯದ ಪ್ರಮುಖ ಮುಂದಾಳುಗಳಾದ

ಭಾಯಿ ಪರಮಾನಂದ ಮತ್ತು ಡಾ. ಮುಂಜೆ

ಈ ಉಭಯ ಧರ್ಮ ವೀರರೂ

ಮಹಾರಾಷ್ಟ್ರ ದೇಶದಲ್ಲಿ ಹಿಂದು ಸಮಾಜ ಜಾಗೃತಿಯ ಕಾರ್ಯಕ್ಕಾಗಿ ಸಂಚರಿಸುತ್ತಿದ್ದಾರೆ.

ಡಾ. ಮುಂಜೆ.

ಈ ಮಹಾಶಯರು ೪ನೆಯ ತಾರೀಖಿನ ದಿನ ಸೊಲ್ಲಾಪುರಕ್ಕೆ ಆಗಮಿಸಿದ್ದರು. ೫ನೆಯ ತಾರೀಖಿನ ದಿನ ಅಲ್ಲಿಯ 'ವಿಜಯ' ಮಾಸಿಕ ಪತ್ರಿಕೆಯು ವಾರಪತ್ರಿಕೆಯಾಗಿ ಪ್ರಕಟವಾಗುವ ಸಮಾರಂಭವು ಈ ಮಹಾಶಯರಿಂದ ನೆರವೇರಿತು.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ದೇಹವೇ ದೇವಾಲಯ

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಠ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಡಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಸ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ ತಿಜೋರಿ** ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಅತಪಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೀಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತಪರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜನವರಿ ತಾರೀಖು ೮ ನೆಯ ಸೋಮವಾರ | ಸಂಚಿಕೆ ೨೨.

ಇಂಡೋ-ಜಪಾನಿ ವ್ಯಾಪಾರದ ಒಪ್ಪಂದ.

ಮೂರು ವರುಷ ಮಾತ್ರ.

೧೫ ಲಕ್ಷ ಅರಳೆ ಗಂಟು ೪೦ ಕೋಟಿ ಗಜ ಬಟ್ಟೆ!

ಅನೇಕ ದಿವಸಗಳಿಂದ ನಡೆಯುತ್ತಿದ್ದ ಹಿಂದುಸ್ಥಾನ ಸರಕಾರದ ಮತ್ತು ಜಪಾನ ಸರಕಾರಗಳಲ್ಲಿಯ ವ್ಯಾಪಾರ ಸಂಬಂಧವಾದ ವಿಚಾರ ವಿನಿಮಯವು ಕೊನೆಗೆ ತಾ. ೫ನೆಯ ಸುಧ್ಯಾನ್ಹಕ್ಕೆ ಪರಿಸಮಾಪ್ತಿಯನ್ನು ಹೊಂದಿ ಹಿಂದುಸ್ಥಾನ ಸರಕಾರದವರ ಯೋಜನೆಯನ್ನು ಜಪಾನ ಸರಕಾರವು ಒಪ್ಪಿತು.

ಈ ಒಪ್ಪಂದದ ಪ್ರಕಾರ ಇದೇ ಎಂಟನೆಯ ತಾರೀಖಿನಿಂದಲೇ ಉಭಯ ಸರಕಾರದವರೂ ನಡೆದುಕೊಳ್ಳಬೇಕಾಗಿದೆ. ಈ ಒಪ್ಪಂದವು ಇಂದಿನಿಂದ ಮೂರುವರುಷಗಳವರೆಗೆ ಮಾತ್ರ ನಡವಳಿಕೆಯಲ್ಲಿರತಕ್ಕದ್ದಾಗಿದೆ. ಈ ಒಪ್ಪಂದದಲ್ಲಿ ಕೆಳಗಿನ ಏಳು ಮುಖ್ಯ ನಿಯಮಗಳಿವೆ.

(೧) ಪರಸ್ಪರರು ವಿರುದ್ಧವಾಗಿ ಸುಂಕವನ್ನು ಹೆಚ್ಚಿಸಬಾರದು. (೨) ಈ ಒಪ್ಪಂದವು ನಷ್ಟಕರವಾಗಿ ತೋರಿದರೆ ಪುನಃ ವಿಚಾರ ವಿನಿಮಯಕ್ಕೆ ಅವಕಾಶವಿದೆ. (೩) ಯೆನ್ (ಜಪಾನದ ನಾಣ್ಯ)ದ ಕ್ರಯ ಕಡಿಮೆಯಾದರೆ ಸುಂಕವನ್ನು ವ್ಯತ್ಯಾಸಮಾಡಲಾಗುವುದು. (೪) ಬರುವ ನೂಲಿನ ಬಟ್ಟೆಯ ಮೇಲಣ ಸುಂಕದ ವಿಚಾರ (೫) ಬರುವ ನೂಲಿನ ಬಟ್ಟೆಯನ್ನು ಹೆಚ್ಚಿಸುವುದು. (೬) ಬ್ರಹ್ಮದೇಶವು ಬೇರೆಯಾದರೆ ಒಪ್ಪಂದವು ಬೇರೆಯಾಗುವದು. (೭) ಅರಳೆಯ ಸಂಬಂಧವಾದ ಅವಧಿಯು ಮೂರು ವರುಷಗಳವರೆಗೆ ಮಾತ್ರ ಇರುವುದು.

೧೫ ಲಕ್ಷ ಅರಳೆಯ ಗಂಟುಗಳನ್ನು ಜಪಾನದವರು ಹಿಂದುಸ್ಥಾನದಿಂದ ಕೊಂಡು ೪೦ ಕೋಟ ಗಜ ಬಟ್ಟೆಯನ್ನು ಈ ದೇಶದಲ್ಲಿ ವಿಕ್ರಯಿಸುವ ಸಿದ್ಧತೆಯಲ್ಲಿದ್ದಂತೆ ತೋರುತ್ತಿದೆ. ಜಪಾನದಿಂದ ಬರುವ ಬಟ್ಟೆಗೆ ಮೂರು ಅಥವಾ ೬ ತಿಂಗಳುಗಳ ಅವಧಿಯನ್ನು ಮಾತ್ರ ಕೊಡುವಂತೆ ಕಾಣುತ್ತದೆ.

ಈ ಒಪ್ಪಂದವಾದುದು ಜಪಾನಕ್ಕೆ ಹಿತಕರವೆಂದು ಲ್ಯಾಂಕೆಶಾಯರದವರು ಹೇಳುತ್ತಾರೆ. ಏಕೆಂದರೆ ಆ ದೇಶದ ಬಟ್ಟೆಗೆ ೧೦೦ಕ್ಕೆ ೫೦ ರಂತೆ ಮಾತ್ರ ಸುಂಕವನ್ನು ಹಾಕಿವರು. ಈ ಒಪ್ಪಂದದಿಂದ ಜಪಾನದ ಬಟ್ಟೆಯ ವ್ಯಾಪಾರವನ್ನು ಮಾಡುತ್ತಿದ್ದ ಹಿಂದಿ ವ್ಯಾಪಾರಿಗಳಿಗೆ ತುಂಬಾ ನಷ್ಟವಾಗುವುದೆಂದು ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸದ ಅಧ್ಯಕ್ಷರಾದ ಶ್ರೀ. ನರಿ ನಿರಂಜನ ಸರಕಾರ ಎಂಬುವವರು ಹೇಳಿದ್ದಾರೆ. ಏಕೆಂದರೆ ಜಪಾನದವರು ತಮ್ಮ ಬಟ್ಟೆಯ ವ್ಯಾಪಾರವನ್ನು ತಾವೆ ಹಿಂದುಸ್ಥಾನದಲ್ಲಿ ನಡೆಯಿಸಲು ಒಂದು ಸಂಘವನ್ನು ಏರ್ಪಡಿಸಿಕೊಂಡು ಅದರ ಶಾಖೆಯನ್ನು ಮುಂಬೈ, ಕಲಕತ್ತಾ, ಕರಾಚಿಗಳಲ್ಲಿ ಸ್ಥಾಪಿಸುವವರಿದ್ದಾರೆ.

ಈ ಇಂಡೋ-ಜಪಾನಿ ಒಪ್ಪಂದದ ಸಂಗತಿಯು ತಾ. ೪ ನೆಯ ದಿವಸ ಮುಂಬೈಯಲ್ಲಿ ತಿಳಿದ ಕೂಡಲೆ ಅರಳೆಯ ಕ್ರಯ ೧೮೭ ಇದ್ದದ್ದು ೧೯೧೦ವರೆಗೆ ಹೆಚ್ಚಿತು. ನಾಗಪುರದಲ್ಲಿಯೂ ಇದೇ ಪ್ರಕಾರ ೧೯೧೦ ರೂ ವರೆಗೆ ಅರಳೆಯ ಧಾರಣೆ ಏರಿತು.

ನಿಜ್ಞಾಪನೆ.

ಶರಣಸಂದೇಶ ಪತ್ರಿಕೆಯು ಪದ್ಧತಿಯ ಪ್ರಕಾರ ಮುಂದಣವಾರ ಪ್ರಕಟವಾಗುವುದಿಲ್ಲ. ಜನವರಿ ೨೨ನೆಯ ತಾರೀಖಿನ ದಿವಸ ಪ್ರಕಟವಾಗುವುದು. ಮ್ಯಾನೇಜರ್.

ನಾನೇನು ಕಂಡೆ? ನಾನೇನು ಕೇಳಿದೆ?

ಹುಬ್ಬಳ್ಳಿಯಲ್ಲಿ ಕೂಡಿದ್ದ ೧೯ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ನಾನೂ ಹೋಗಿದ್ದೆ. ಅಲ್ಲಿ ನಾನು ಕಂಡುದು ನನ್ನೂ ಕೇಳಿದುದನ್ನೂ ಇದ್ದ ಕ್ಕಿದ್ದಂತೆ ಕನ್ನಡಿಗರ ಮುಂದಿಡುತ್ತೇನೆ. ಇದರಿಂದ ಅಲ್ಲಿಗೆ ಬಾರದಿರುವವರಿಗೆ ಒಹು ಸಂಗತಿಗಳು ಗೊತ್ತಾಗುವವು. ಬಂದವರಿಗೂ ಕೆಲವು ವಿಷಯಗಳು ತಿಳಿಯುವವು. ಹುಬ್ಬಳ್ಳಿಯ ತಪ್ಪು ಒಪ್ಪುಗಳು ರಾಯಚೂರಿಗೆ ದಾರಿ ಶೋಧಿಸುವವು.

ಈ ಸರಸಮ್ಮನ ಸೇವೆಗೆ ಲಕ್ಷ್ಮಮ್ಮನು ಬರದೆ ಮುನಿಸು ಗುಟ್ಟುತ್ತಿದ್ದುದೇ ಹೆಚ್ಚು. ಆದರೆ ಈ ಸಾರೆ ಹಾಗೆ ಮಾಡದೆ ಲಕ್ಷ್ಮಮ್ಮನು ಒಹು ಅಕ್ಕರದಿಂದ ಮುಂದೆ ಬಂದು ಸರಸಮ್ಮನ ಸೇವೆ ಮಾಡಿದ್ದರಿಂದ ಎಲ್ಲೆಲ್ಲಿಯೂ ಸೊಬಗೇ ಸೊಬಗು.

ಈ ಸಾರೆಯ ಸಮ್ಮೇಲನಕ್ಕೆ ಸ್ವಾಗತ ಸಂಘದ ಸದಸ್ಯರೂ ಪ್ರತಿನಿಧಿಗಳೂ ಪ್ರೇಕ್ಷಕರೂ ಒಹು ಹೆಚ್ಚಿದ್ದರು. ರಾಜಕೀಯ ಕ್ಷೇತ್ರವು ಸಾಮಾಜಿಕ ಸಮ್ಮೇಲನದಂತೆ ಈ ಸಾಹಿತ್ಯ ಸಮ್ಮೇಲನವು ಈ ಸಾರೆ ಒಹು ಸಾಹಸೋತ್ಸಾಹಗಳಿಂದ ನಡೆಯುತ್ತಿದ್ದಿತು.

ಸ್ವಾಗತ ಸಂಘಾಧ್ಯಕ್ಷರಾದ ಶ್ರೀ. ಪಾವಟೆ ಸಿದ್ಧರಾಮಪ್ಪಣ್ಣ ನವರ ಭಸಿತಾಂಕಿತ ಮಂಗಲಕರವಾದ ಮುಖಮುದ್ರೆ ಒಡನೆ ಪೆಟ್ಟಿಗೆ ರೊಟ್ಟಿಯನ್ನೀಡುವ ಕೊಡಿ ಅರಿವೆಯ ದೊಡ್ಡಂಗಿ, ಅಚ್ಚ ಕನ್ನಡ ನುಡಿಗಡಣಗಳು ಕನ್ನಡ ಸಂಸ್ಕೃತಿಯ ಬೆಳಕನ್ನು ತೋರಿಸುತ್ತಿದ್ದವು. ಕಾರ್ಯದರ್ಶಿಗಳಾದ ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರು ಮತ್ತು ಶ್ರೀ ಗಾಂವಕರರ ಅವ್ಯಾಹತ ಪರಿಶ್ರಮಗಳು ಸಮ್ಮೇಲನದ ಕಾರ್ಯದಲ್ಲಿ ಆದರಾಭಿಮಾನಗಳನ್ನುಂಟು ಮಾಡುತ್ತಿದ್ದವು.

ಸ್ವಯಂಸೇವಕರ ಸಂಖ್ಯೆ ನೂರು! ಇದೇ ಗುಂಪು ಹೆಚ್ಚು. ಕೆಲಸ ಕಡಿಮೆ. ಮೊದಲನೆಯ ದಿನ ಪ್ರತಿನಿಧಿಗಳಿಗೆ ಊಟೋಪಚಾರಗಳ ಅನಾನುಕೂಲ. ಆ ಮೇಲೆ ಬೇಕಷ್ಟು. ಆದರೆ ಕ್ರಮವಿಲ್ಲ. ಭೋಜನಾಲಯ ಸ್ವಚ್ಛವಿಲ್ಲ.

ಬಿಡುವಿಲ್ಲದ ಕಾರ್ಯಕ್ರಮ. ಆದೂ ಕಾಲ ಮಿರಿ ಮಿರಿ ನಡೆವುದು. ಮುಂಜೆಯೇ ಕಾರ್ಯಗಳ ನಿರ್ದೇಶವಿರಲಿಲ್ಲ. ಅದಕ್ಕಾಗಿ ಕವಿಗಳ ತಿಕ್ಕಾಟದ ಓದು. ಭಾರತದ ಓದು ಬಹು ಮೇಲಾಗಿದ್ದಿತು. ಹೊಸ ಕವಿತೆಗೂ ನಲಿದಾಡಲು ಅವಕಾಶ ದೊರೆಯಿತು. ಆದರೆ ಶರಣರ ವಚನಗಳೂ ದಾಸರ ಪದಗಳೂ ಸಮ್ಮೇಲನದಲ್ಲಿ ಪ್ರಕಾಶಿಸಲಿಲ್ಲ.

ಪತ್ರಿಕೆ ಮತ್ತು ಪುಸ್ತಕಗಳ ಪ್ರದರ್ಶನವೂ ಅಚ್ಚುಕಟ್ಟಾಗಿಯೂ ಆಕರ್ಷಣೀಯವಾಗಿಯೂ ಇದ್ದಿತು. ಅಲ್ಲಿ ಒರೆದಿಟ್ಟ ಪಟಗಳು ಬಹು ಬೋಧಪರವಾಗಿದ್ದವು. ಇದು ನಮ್ಮ ಸಾಹಿತ್ಯದ ವಿಕಸನೆಗೆಯನ್ನು ತೋರಿಸುತ್ತಿದ್ದಿತು. ಎಡತೊರೆ ವಿದ್ಯಾಶಾಲಾ ಉಪಾಧ್ಯಾಪಕರಾದ ಶ್ರೀ ನರಸಿಂಹ ಅಯ್ಯಂಗಾರ್ಯರು ಮಕ್ಕಳ ಶಿಕ್ಷಣಕ್ಕಾಗಿ ಕಂಡು ಹಿಡಿದ ಅನೇಕ ರೀತಿಗಳು ಚಿತ್ರಪಟಗಳು ಅವರು ಜನರಿಗೆ ತಿಳಿಸುತ್ತಿದ್ದ ಸಂಗತಿಗಳು ಬಹು ಉಪಯುಕ್ತವಾಗಿದ್ದವು.

ಅಧ್ಯಕ್ಷರೇ ಮೊದಲಾದ ಕೆಲವು ದೊಡ್ಡ ಮನುಷ್ಯರಿಗೆ ತಮ್ಮವರ ಘನತೆ ಗೌರವಗಳಿಗೆ ತಕ್ಕಂತೆ ಊಟೋಪಚಾರಗಳ ಏರ್ಪಾಟಿಲಿಲ್ಲ. ಅವರಲ್ಲಿದ್ದ ವಿನಯ ಸೌಜನ್ಯಗಳು ಆ ಏರ್ಪಾಟುಗಳ ವಿಷಯದಲ್ಲಿ ಉಪೇಕ್ಷೆಯನ್ನುಂಟುಮಾಡಿರಬಹುದೇ? ಅಥವಾ ಅನನುಭವವೇ?

ಬ್ರಾಹ್ಮಣ ಬಂಧುಗಳಂತೆ ವೀರಶೈವರು ವಿದ್ಯೆಯಲ್ಲಿ ಮುಂದಿರದಿದ್ದರೂ ಆಚಾರದಲ್ಲಿ ಮುಂದರಿದಿದ್ದು ಇಲ್ಲಿ ಕಂಡಿತು. ಬ್ರಾಹ್ಮಣ ಪ್ರತಿನಿಧಿಗಳಲ್ಲಿ ಒಹು ಜನರು ಹೇಗೆ ಸಂಧ್ಯಾವಂದನೆಗೆ ರಾಜಿನಾಮೆ ಕೊಟ್ಟಿದ್ದರೋ ಹಾಗೇ ಲಿಂಗಾಯತ ಪ್ರತಿನಿಧಿಗಳಲ್ಲಿಯೂ ಒಹು ಜನರು ಲಿಂಗಪೂಜೆಗೆ ರಾಜಿನಾಮೆ ಕೊಟ್ಟಿದ್ದರು. ಲಿಂಗಾಯತ ಪ್ರತಿನಿಧಿಗಳಿಗೆ ಲಿಂಗಪೂಜೆಗಾಗಿ ಏರ್ಪಾಟೇ ಮಾಡಿರಲಿಲ್ಲ. ಭಸ್ಮ ದೊರೆಯುವದೂ ದುರ್ಲಭ.

ಬ್ರಾಹ್ಮಣ ಪ್ರತಿನಿಧಿಗಳಂತೆಯೇ ಅಂಗಿ ಹಾಕಿಕೊಂಡೇ ಲಿಂಗಾಯತರೂ ಊಟಮಾಡುವದು. ಅಂಗಿ ಟೊಪ್ಪಿಗೆ ಹಾಕಿಕೊಂಡೇ ನೀಡುವವರೂ ಇದ್ದರು. ಇಂಗ್ಲಿಷ್ ಕಲಿತವರೇ ಹೀಗಲ್ಲ ಹುಬ್ಬಳ್ಳಿ ಸಂಸ್ಕೃತ ಕಾಲೇಜಿನಲ್ಲಿದ್ದ ಅನೇಕ ವಿದ್ಯಾರ್ಥಿಗಳೂ ಹೀಗೇ ಮಾಡುತ್ತಿದ್ದರು. ಶ್ರೀ. ಪಾವಟೆ ಅಣ್ಣನವರ ಮತ್ತು ಶಾಸ್ತ್ರಿಗಳ ಅಧಿಪತ್ಯದಲ್ಲಿ ಹೀಗೆ ನಡೆದುದೊಂದು ವಿಶೇಷ.

ಇವೆಲ್ಲ ನೋಡಿದ್ದು ಇನ್ನು ಕೇಳಿದವುಗಳನ್ನು ಕೇಳಿ ಇದೇನು ಲಿಂಗಾಯತರ ಸಮ್ಮೇಲನವೇ? ಅಧ್ಯಕ್ಷರೂ ಲಿಂಗಾಯತರು, ಸ್ವಾಗತಾಧ್ಯಕ್ಷರೂ ಲಿಂಗಾಯತರು, ಕಾರ್ಯದರ್ಶಿಗಳೂ ಲಿಂಗಾಯತರು; ಉಪಕ್ರಮ ಮಾಡುವವರೂ ಲಿಂಗಾಯತರು; ಲಿಂಗಾಯತ ಸ್ವಾಮಿಗಳೇ ಪ್ರೋತ್ಸಾಹಕರು; ಎಂದು ಒಬ್ಬರು ಹೇಳಿದರು. ಈ ತರ್ಕ ಕುತರ್ಕ. ಕವಿಸಮ್ಮೇಳನದ ಅಧ್ಯಕ್ಷರೂ, ಉಪಾಧ್ಯಕ್ಷರೂ ಲಿಂಗಾಯತೇತರರಲ್ಲವೇ? ಎಂದು ಮತ್ತೊಬ್ಬರು ಉತ್ತರ ಕೊಟ್ಟರು.

ಶ್ರೀಮಾನ್ ಮಾಸ್ತಿ ಶ್ರೀನಿವಾಸ ಅಯ್ಯಂಗಾರ್ಯರು, ಶ್ರೀಮಾನ್ ಶ್ರೀನಿವಾಸ ಮೂರ್ತಿಗಳೇ ಮೊದಲಾದ ಮಹಾ ಪಂಡಿತರು ಆಗಮಿಸಿದ್ದರು. ಅವರನ್ನು ಸರಿಯಾಗಿ ಗೌರವಿಸಿ ಉಪನ್ಯಾಸಗಳ ವೊಲಕ ಪ್ರಯೋಜನವನ್ನುಂಟುಮಾಡಿಕೊಳ್ಳಲಿಲ್ಲವೆಂದು ಒಬ್ಬರು ಹೇಳಿದರು.

ಅನೇಕ ಪುಸ್ತಕಗಳ ಅಂಗಡಿ, ಖಾದಿ ಅಂಗಡಿಗಳು ಇಲ್ಲಿಗೆ ಬಂದು ಶೋಭೆಯನ್ನೂ ಪ್ರಯೋಜನವನ್ನೂ ಉಂಟುಮಾಡುತ್ತಿದ್ದವು. ಅಂಗಡಿಯೊಂದಕ್ಕೆ ೫೦ ರೂ. ಬಾಡಿಗೆ ಕೊಡಬೇಕೆಂದು ನಿಯಮ ಮಾಡಿದ್ದರಿಂದ ಇವು ಬರಲಿಲ್ಲ. ಇದು ಸರಿಯಾದುದಲ್ಲವೆಂದು ಕೆಲವರು ಮಾತಾಡುತ್ತಿದ್ದರು.

ಇದೇನು ಸ್ವಾಗತ ಸಂಘದವರು ಅಭಾರ ಮನ್ನಣೆಯ ಕಾಲದಲ್ಲಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಾರಲ್ಲಾ! ಎಂದು ಕೆಲವರು ಮಾತನಾಡಿದರು. ಸಾಹಿತ್ಯದ ಕಡೆಗೆ ಜನರ ದೃಷ್ಟಿ ತಿರುಗಿದೆಯೆಂಬುದಕ್ಕೆ ಈ ಸಾರೆ ಇಷ್ಟು ಹೆಚ್ಚು ಜನ ಸೇರಿದುದೇ ಸಾಕ್ಷಿಯೆಂದು ಒಬ್ಬರು ಹೇಳಿದರು. ಮುಂದಿನ ವರುಷ ರಾಯಚೂರಲ್ಲಿ ಕೂಡುವದರ ಮೇಲೆ ಕಂಡು ಹಿಡಿಯಬೇಕಷ್ಟು. ರಾಜಕೀಯ ಚಟುವಟಿಕೆಯು ನಿಂತಿದೆ. ದಿ. ಬ. ಕಂಬಳಿಯವರು ಬಂದರು. ವಿಜಯನಗರದ ಸ್ಮಾರಕೋತ್ಸವದ ಕಾರ್ಯ ಸಾಧಿಸಬೇಕೆಂದು ಕೆಲವರು ಬಂದಿದ್ದರು. ಹೀಗಾಗಿ ಬೇರೆ ಬೇರೆ ಉದ್ದೇಶದ ಮಂದಿ ಕೂಡಿತ್ತು. ಸಾಹಿತ್ಯ ಪ್ರೇಮಕ್ಕಾಗಿ ಕೂಡಿದ್ದಲ್ಲವೆಂದು ಕೆಲವರು ಉತ್ತರ ಕೊಟ್ಟರು.

ಈ ಕಂಡುಕೇಳಿದ ಸಂಗತಿಗಳಲ್ಲಿ ತಪ್ಪುಗಳಿದ್ದರೆ ತಿದ್ದಿಕೊಳ್ಳಲಿ. ಒಪ್ಪುಗಳಿದ್ದರೆ ಅನುಸರಿಸಲಿ. ಸಮ್ಮೇಲನವೇನೋ ಬಹು ತೃಪ್ತಿಕರವಾಗಿಯೇ ಜರುಗಿತು. ತಪ್ಪುಗಳಾಗಿದ್ದರೆ ಅನನುಭವ ಮುರವೆಗಳೇ ಕಾರಣವಲ್ಲದೆ ಸ್ವೇಮಾದರಗಳಲ್ಲೇನೂ ಎಳ್ಳಷ್ಟಾದರೂ ಕಡಿಮೆಯಿರಲಿಲ್ಲ.

ಓರ್ವ ಪ್ರತಿನಿಧಿ.

ಅಧ್ಯಕ್ಷರಾದ

ಶ್ರೀ ವೈ. ನಾಗೇಶ ಶಾಸ್ತ್ರಿಗಳವರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಸಾಹಿತ್ಯವೆಂದರೆ ಸವಿನುಡಿ— ಯಾವ ನುಡಿಯು, ಅದು ಗ್ರಾಂಥಿಕವಿರಲಿ ವಾಚಿಕವಿರಲಿ, ಅದನ್ನು ಓದಿದೊಡನೆ ಅಥವಾ ಕೇಳಿದೊಡನೆ ಕಿವಿಗೂ ಮನಸ್ಸಿಗೂ ಏಕ ಕಾಲದಲ್ಲಿಯೇ ಸವಿಯುಂಟಾಗುವದೋ ಅದೇ ಸವಿ ನುಡಿ. ಈ ಸವಿನುಡಿಯು ಕವಿಯನ್ನು ತಟ್ಟಿ ಬಗೆಯನ್ನು ಮುಟ್ಟಿ ಜೀವಾತ್ಮನ ಆನಂದಾಂಶದ ಆವರಣವನ್ನು ಭೇದಿಸಿ, ಜೀವನನ್ನು ಇತರ ವಿಷಯಗಳಿಂದ ದೂರಿರಿಸಿ ಬಿಡುವುದಾಗಿರುವುದು. ಆಗ ಜೀವಾತ್ಮನು ಧ್ಯಾನ ಸಮಯದಲ್ಲಿ ಭಗವಂತನ ಸಾಕ್ಷಾತ್ಕಾರವನ್ನು ಹೊಂದಿದ ಭಕ್ತನಂತಾಗುವನು. ಅವನ ಮೈ ಉಬ್ಬವದ.. ರೋಮೋದ್ಗಮವಾಗುವುದು. ಹೃದಯದಲ್ಲಿ ತುಂಬಿದ ಆನಂದ ರಸವು ಕಣ್ಣಿಳಿಂದ ಹೊರಸೂಸುವುದು. ನುಡಿಯಲ್ಲಿರುವ ಸವಿಯಿಂದಂಟಾಗುವ ಪರಿಣಾಮವಿದು. ಈ ಸವಿನುಡಿಯು ಬರೆಯಲ್ಪಟ್ಟುದಾದರೆ ಗ್ರಂಥವೆನಿಸುವುದು. ಗ್ರಂಥವು ಯಾವ ವಿಷಯವನ್ನಾದರೂ ವಿವರಿಸತಕ್ಕುದಾಗಿರಲಿ, ಆ ವಿಷಯ ವಿವರಣೆಯು ಮಾತ್ರ ಸವಿನುಡಿಯಿಂದಾಗಿರಬೇಕು. ಆ ನುಡಿಯು ವಾಚಿಕವಾಗಿದ್ದರೆ ಭಾಷಣ ಅಥವಾ ಉಪನ್ಯಾಸವೆನಿಸುವುದು. ಬರೆಯಲ್ಪಡುವ ಭಾಷಣಾದಿ ವಾಙ್ಮಯವನ್ನು ವಾಚಿಕ ಸಾಹಿತ್ಯವೆಂದು ಕರೆಯಬಹುದಲ್ಲವೆ? ಈಗ ನಾವು ಜನಪದ ಸಾಹಿತ್ಯದಲ್ಲಿ ಸಂಗ್ರಹಿಸಬೇಕೆಂದಿರುವ 'ಲಾವಣಿ' ಮೊದಲಾದ ಹಾಡುಗಳಲ್ಲಿಯೂ ಈ ಸವಿನುಡಿಯನ್ನು ಕಾಣಬಹುದು. ಅನೇಕ ಲಾವಣಿಗಳು ಒರೆಯಲ್ಪಡದಿದ್ದು, ಓದು ಬರೆಹಗಳು ಬರದಿದ್ದವರಲ್ಲಿಯೂ ಒಬ್ಬರಿಂದೊಬ್ಬರು ಕಲಿಯಲ್ಪಟ್ಟುವಾಗಿ ರೂಢಿಯಲ್ಲಿರುವವು. ಅವೆಲ್ಲವನ್ನೂ ವಾಚಿಕ ಸಾಹಿತ್ಯಕ್ಕೆ ಸೇರಿವೆಂದು ಹೇಳಬಹುದು. ಓದು ಬರೆಹಗಳನ್ನು ಕಲಿತವರಲ್ಲಿಯೇ ಸವಿನುಡಿಯ ಬೆಡಗಿರುವದೆಂದು ಹೇಳುವಂತಿಲ್ಲ. ಓದದವರಲ್ಲಿಯೂ ಅದಿರುವದೆಂಬುದು ನಮ್ಮೆಲ್ಲರ ಅನುಭವವಾಗಿದೆ, ಸವಿನುಡಿಯೆಂಬುದು ಕೆಲವರಲ್ಲಿ ಹುಟ್ಟುಗುಣವಾಗಿರುವುದು. ಓದು ಮೊದಲಾದುವುಗಳು ಆ ಸವಿನುಡಿಯ ಪುಷ್ಟಿಗೆ ಸಹಾಯಕಗಳಾಗಿರುವುವು. ನುಡಿಯಲ್ಲಿರುವ ಸವಿಯೆಂಬುದೇನು— ಸವಿಯೆಂಬುದನ್ನು ಮಾಧುರ್ಯವೆಂದರ್ಥ ಮಾಡಿ, ಮಾಧುರ್ಯವೆಂಬುದು ಕಾವ್ಯದಲ್ಲಿರಬೇಕಾದೊಂದು ಗುಣವೆಂದು ತಿಳಿದುಕೊಂಡರೆ ಸದ್ಯದಲ್ಲಿ ಸಾಕಾಗದು. ಸವಿಯೆಂಬ ಮಾತನ್ನು ನಾವು ಶಬ್ದಾರ್ಥಗಳಲ್ಲುಪಯೋಗಿಸುವಂತೆ 'ಇದು ಸವಿಯಲ್ಲ'ವೆಂದು ತಿನ್ನುವ ಪದಾರ್ಥದಲ್ಲಿಯೂ ಇದು 'ಸವಿಗೇಡಿ, ಯೆಂದು ಅಂದವಿಲ್ಲದ ವಸ್ತುವಿನಲ್ಲಿಯೂ, ಪ್ರಯೋಗಿಸುತ್ತಿರುವೆವು. ಇದರಿಂದ ಸವಿಯೆಂಬ ಮಾತಿನ ಅರ್ಥವ್ಯಾಪ್ತಿಯು ವಿಸ್ತಾರವುಳ್ಳದೆಂಬುದು ವಿದಿತವಾಗುವುದು. ಇಲ್ಲಿ ಸವಿಗೆ 'ಸೊಗಸು' 'ರಮಣೀಯತೆ, ಎಂದು ಮೊದಲಾಗಿ ಹೇಳಿಕೊಳ್ಳಬಹುದು.

ಜಗತ್ತಿನಲ್ಲಿ ದುಃಖವಿರುವಂತೆ ಸುಖವೂ ಇರುವುದಷ್ಟೆ. ಸುಖ ದುಃಖಗಳು ನಾನಾ ವಿಧ. ಮನುಷ್ಯನ ಪ್ರವೃತ್ತಿಗೆ ಸುಖವೇ ಮೂಲಕಾರಣ. ಸುಂದರವಾದ ರೂಪ, ಇಂಪಾದ ಗಾನ, ರುಚಿಯಾದ ಆಹಾರ, ಮೃದುವಾದ ಸ್ಪರ್ಶ, ಒಳ್ಳೆಯ ವಾಸನೆ ಇವುಗಳಿಂದ ಒಂದೊಂದು ವಿಧವಾದ ಸುಖವುಂಟಾಗುತ್ತದೆ. ಇವೆಲ್ಲ ಬಾಹ್ಯೇಂದ್ರಿಯ ಮೂಲಕವಾಗಿ ಮನಸ್ಸಿಗುಂಟಾಗತಕ್ಕವು. ಇತರರು ತೋರಿಸುವ ಪ್ರೀತಿ ಗೌರವಗಳು ಕಾರ್ಯದಲ್ಲುಂಟಾಗುವ ಲಾಭಗಳು ಇವೇ ಮೊದಲಾದವುಗಳಿಂದಲೂ ಸುಖವುಂಟಾಗುತ್ತದೆ. ಅದನ್ನು ಆಂತರಿಕ ಸುಖವೆಂದು ಹೇಳಬಹುದು. ದೇಹೇಂದ್ರಿಯಾದಿಗಳಿಗೆ ನಿಲುಕದ ಪಾರಮಾರ್ಥಿಕ ಸುಖವೊಂದಿರುವದೆಂತಲೂ ಶಾಸ್ತ್ರಗಳಿಂದ ತಿಳಿದು ಬರುವದು ಅಂತು ಸುಖಗಳಲ್ಲಿ ವೈವಿಧ್ಯವೂ ತಾರತಮ್ಯವೂ ಇರುವುದೆಂದು ಹೇಳಬೇಕಾಗುತ್ತದೆ. ಈ ಸುಖಗಳು ಮನುಷ್ಯನ ವಾಸನೆ, ಸ್ವಭಾವ, ಸಂಸ್ಕಾರಾದಿಗಳಿಗನುಸರಿಸಿ ಹಚ್ಚು ಕಡಿಮೆಯಾಗುವುದುಂಟು ಒಟ್ಟಿನಮೇಲೆ ಬಾಹ್ಯ ಅಥವಾ ಆಂತರಿಕ ಸುಖಕ್ಕೆ ಸಾಧನವಾದ ವಸ್ತುಗಳಲ್ಲಿ ಸುಖಪ್ರದವಾದ ಅಂಶವು ಒಂದು ಇದೆ. ಅದನ್ನೇ ರಮಣೀಯತೆಯೆಂದು ಕರೆಯಬಹುದು. ಈ ರಮಣೀಯತೆಯು ಜಗತ್ತಿನಲ್ಲಿ ಗಿಡ-ಬಳ್ಳಿ ಫಲಪುಷ್ಪ ಮೃಗಪಕ್ಷಿ ತಂಗಾಳಿ ಬೆಳದಿಂಗಳು ಸಂಗೀತ ಜಲಕ್ರೀಡೆ ಬಾಲಲೀಲೆ ಜೀವನಸಮಸ್ಯೆ ಮೊದಲಾದವುಗಳಲ್ಲಿ ಸ್ವತಃ ಸಿದ್ಧವಾಗಿದ್ದು ನಮಗೆ ಆನಂದವನ್ನುಂಟುಮಾಡುತ್ತಿರುವುದು. ಸ್ವತಃ ಸಿದ್ಧವಾದ ಈ ರಮಣೀಯತೆಯನ್ನನುಭವಿಸಿ, ಈ ರಮಣೀಯತೆಗೆ ನೆಲೆಯಾದ ಪ್ರಪಂಚವನ್ನೋ ತತ್ಸದೃಶವಾದ ಕಲ್ಪಿತ ಪ್ರಪಂಚವನ್ನೋ ಕಲಾನಿಪುಣರು ತಮ್ಮ ಕುಶಲ ಕರ್ಮದಲ್ಲಿ ಚಿತ್ರಿಸಿ ರಮಣೀಯತೆಯನ್ನುಂಟುಮಾಡುವರು. ಶಿಲ್ಪ ಕಲಾವಿದನು ಕಲ್ಲುಕಟ್ಟಿಗೆ ಲೋಹಾದಿಗಳಲ್ಲಿ ತನ್ನ ಕಡೆದು ಕೆತ್ತುವ ಜಾಣ್ಮೆಯಿಂದ ರಮಣೀಯತೆಯನ್ನುಂಟುಮಾಡುವಂತೆ ಚಿತ್ರಕಲಾಭಿಜ್ಞನು ಕುಂಚ್ಯಾದಿಗಳಲ್ಲಿ ಬಣ್ಣದಿಂದ ಬರೆಯುವ ಜಾಣ್ಮೆಯಿಂದ ರಮಣೀಯತೆಯನ್ನು ತೋರಿಸುವನು. ಮಾತಿನ ಜಾಣನು ಕ್ರಮವಾಗಿ ಯಾವುವಾದರೊಂದು ವಿಷಯವನ್ನು ವಿವರಿಸುವ ಗ್ರಂಥದಲ್ಲಿ ಅಥವಾ ಭಾಷಣದಲ್ಲಿ ಉಪಯೋಗಿಸುವ ಮಾತಿನಲ್ಲಿ ರಮಣೀಯತೆಯನ್ನು ತುಂಬುವನು. ಆ ರಮಣೀಯತೆಯೇ ಸವಿಯು. ಆ ಸವಿನುಡಿಯೇ ಸಾಹಿತ್ಯವು. ಸವಿನುಡಿಯ ಜಾಣನೇ ಕವಿಯಾಗುವನು. ಸಾಹಿತ್ಯಾದಿ ಕಲಾನಿಪುಣರ ಕುಶಲ ಕರ್ಮಗಳಲ್ಲಿ ಎರಡು ಬಗೆಯಿಂದಾನಂದವುಂಟಾಗುವುದು. ನಾವು ಅನುಭವಿಸಿದ ಪ್ರಾಪಂಚಿಕ ಸುಖ ವಿಷಯಗಳೇ ಅವರ ಕುಶಲ ಕರ್ಮದ ಕಲ್ಪಿತ ಪ್ರಪಂಚದಲ್ಲಿಯೂ ಇರುವುದರಿಂದ ನಮ್ಮಲ್ಲಿರುವ ತದ್ವಿಷಯಕ ಸಂಸ್ಕಾರಗಳು ಉದ್ರೇಕವಾಗಿ ಆನಂದವುಂಟಾಗುವದೊಂದು ವಿಧ; ಅವರ ಕಲಾ ನೈಪುಣ್ಯವು ನಮ್ಮಲ್ಲಿ ಆಶ್ಚರ್ಯವನ್ನುಂಟುಮಾಡುವುದರಿಂದಾಗುವ ಆನಂದವು ಮತ್ತೊಂದು ವಿಧ.

ಆತ್ಮೋದ್ಧಾರವೆಂದರೆ ಆತ್ಮನ ಇರವೂ ಅರಿವೂ ಆನಂದ ಇವುಗಳ ವಿಕಾಸದ ತತ್ವ ವಿಮರ್ಶೆಯು. ಯಾವನ ಸವಿನುಡಿಯು ಕೈಪಿಡಿಯಲ್ಲಿ ಪ್ರತಿಫಲಿತವಾಗುವುದೋ ಅವನೇ ಕವಿ. ಇಲ್ಲಿ ಆತ್ಮನ ಇರುವಿಕೆಯೆಂಬುದು ಅವನು ನಿತ್ಯನೆಂಬುದನ್ನು ಸೂಚಿಸುವುದು. ಸದಾ ಇರತಕ್ಕ ಮನವನು. ದೇಹವು ನಾಶವಾದರೆ ತಾನೂ ನಾಶವಾಗತಕ್ಕವನಲ್ಲ. ಇಂತಹ ಇರುವಿಕೆಯ ವಿಷಯವೆಂದರೆ ಜನನ ಮರಣ ದೂರನಾಗಿ

(೧೦ ನೆಯ ಪುಟಕ್ಕೆ ಮುಂದರಿದಿದೆ.)

ಕವಿಸಮ್ಮೇಲನದ ಅಧ್ಯಕ್ಷರಾದ

ಪ್ರೊ. ಕೆ. ವಿ. ಪುಟ್ಟಪ್ಪನವರ ಭಾಷಣ.

ಇಂದು ಜಗಜ್ಜೀವನದಲ್ಲಿ ಒಂದು ಸಂಧಿಕಾಲ ಒದಗಿದೆ. ಮಾನವ ಜೀವನವು ಕುಲುಮೆಯ ಮೇಲೆ ಮೂಸೆಯಲ್ಲಿರುವ ಅದುರಿನಂತೆ ಬೆಂದಿಯುತ್ತಿದೆ. ಈ ಕುದಿದಾಟಕ್ಕೆ ಕಾರಣವಾದ ಮುಖ್ಯ ಶಕ್ತಿಗಳು ಎರಡಿವೆ. ಒಂದು ವೈಜ್ಞಾನಿಕ ಮತ್ತೊಂದು ರಾಜಕೀಯ. ಹಿಂದೆ ಬಲವಾಗಿದ್ದು ಅಗ್ರಸ್ಥಾನದಲ್ಲಿದ್ದ ಇತರ ಶಕ್ತಿಗಳು— ಮತ, ತತ್ವ, ಕಾವ್ಯ, ಚಿತ್ರ, ಶಿಲ್ಪ ಮೊದಲಾದವುಗಳು ಇಂದು ಗೌಣ ಸ್ಥಾನದಲ್ಲಿವೆ. ಹಲಕೆಲವರ ದೃಷ್ಟಿಯಲ್ಲಿ ಅವು ಈಗಲೂ ಸಹ ಹಿಂದಿದ್ದಂತೆಯೇ ವಂದ್ಯವಾಗಿ ಆನಂದದಾಯಕವಾಗಿ ಆತ್ಮೋದ್ಧಾರಕವಾಗಿದ್ದರೂ ಬಹು ಸಂಖ್ಯಾಕ ಮನುಷ್ಯ ಗಣದ ದೃಷ್ಟಿಯಲ್ಲಿ ಅವುಗಳೆಲ್ಲ ಅಮುಖ್ಯವಾಗಿ ತೋರಹತ್ತಿವೆ. ಜೀವನ ಸಂಗ್ರಾಮದಲ್ಲಿ ವಿಜ್ಞಾನವೂ ಅರ್ಥಶಾಸ್ತ್ರವನ್ನೊಳಗೊಂಡು ರಾಜಕೀಯವೂ ಅವಶ್ಯವಾಗಿರುವಷ್ಟು ಮತತತ್ವ, ಕಲೆಗಳು ಅವಶ್ಯಕವಾಗಿ ತೋರುವುದಿಲ್ಲ. ಇಷ್ಟೇ ಅಲ್ಲದೆ ಅವುಗಳಿಂದ ವೈಜ್ಞಾನಿಕ ಪ್ರಗತಿಗೂ ರಾಜಕೀಯ ಸಂಗತಿಗೂ ಅಡಚಣೆಯಾಗುತ್ತಿದೆ. ಎಂದು ಹಲವರು ಅಭಿಪ್ರಾಯ ಪಡುತ್ತಾರೆ. ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ ನೋಡಿದರೆ ಮೇಲೆ ಹೇಳಿದ ದೃಷ್ಟಿಯು ಸ್ವಾಭಾವಿಕವಾ ಗಿದೆಂದು ತಿಳಿಯುತ್ತದೆ. ವಿಜ್ಞಾನವು ಹೊಸಹೊಸ ಸುಖ ಸೌಕರ್ಯಗಳನ್ನು ಗೆದ್ದು ಕೊಡುತ್ತಿದೆ. ವೈರಿ ವಿನಾಶಕ್ಕೆ ಹೊಸ ಮಾರ್ಗಗಳನ್ನು ಕಲ್ಪಿಸುತ್ತದೆ. ಧೂಳಿಕಣದ ಒಳಗಿರುವ ರಹಸ್ಯ ವಂದ ಹಿಡಿದು ಅಮಿತ ಸಂಖ್ಯೆಯ ಜ್ಯೋತಿರ್ವತ್ಸರಗಳಾಚೆ ಇರುವ ತಾರೆ ನಿಹಾರಿಕೆಗಳ ಗುಟ್ಟನ್ನರಿಗೂ ಜ್ಞಾನ ಜ್ಯೋತಿಯನ್ನು ಬೀರಿ ಸತ್ಯದ ಮಹಾದ್ಭುತಗಳನ್ನು ನಿರ್ದಾಕ್ಷಿಣ್ಯವಾಗಿ ಪ್ರದರ್ಶಿಸುತ್ತಿದೆ. ಸುತ್ಸಾಹದಿಂದ ಅವಿಷ್ಕಾರಗೊಳಿಸುತ್ತಿದೆ. ಸ್ವಲ್ಪವೂ ಅಧೀರವಾಗದೆ ಅನ್ವೇಷಿಸುತ್ತಿದೆ. ಅಂತಹ ಶ್ರೀಮಂತ ಸಾಹಸದ ಎದುರಿನಲ್ಲಿ ಕಾವ್ಯಾದಿ ಕಲೆಗಳ, ಮತ ಹಾಗು ತತ್ವಗಳ ದರಿದ್ರ ದೀನತೆಯು ತೊಸ ಕೈಯ್ಯಾಗಬಲ್ಲುದೇ?

ಇದೇ ಮಾತು ರಾಜಕೀಯಕ್ಕೂ ಒಪ್ಪುತ್ತದೆ. ವಿಶ್ವಾಸವಾದವು ಬೋಧಿಸುವಂತೆ ಬಲವಾದುದು ಬದುಕುತ್ತದೆ. ಆದ್ದರಿಂದ ವಿಶ್ವ ಸುಂದರ ಧ್ಯೇಯಗಳ ಸಮ್ಮೋಹಿನೀ ಶಕ್ತಿಗೆ ಒಳಗಾಗಿ ನಾಶವಾಗುವ ಬದಲು ಕಠೋರವಾಸ್ತವ ಜಗತ್ತಿನ ನಿಷ್ಕಾರಣ ನಿಯಮಗಳನ್ನು ಔದಾರ್ಯಕ್ಕಿಂತಲೂ ಅತಿಶಯವಾಗಿ ಯುಕ್ತಿ ಸಾಮರ್ಥ್ಯಗಳಿಂದ ಜಯಿಸಿ ಕೃತಾರ್ಥರಾಗಿ ಸುಖಿಗಳಾಗುವದು ಲೇಸಲ್ಲವೆ? ವಿಶ್ವಪ್ರೇಮ, ಅಂತರಾಷ್ಟ್ರೀಯತೆ ಮೊದಲಾದವು ಸೋತವರ ಸನ್ನಾಹಗಳೇ ಹೊರತು ಗೆದ್ದವರ ನೀತಿಯಲ್ಲ. ಆದ್ದರಿಂದ ದೇಶಗಳು ತಮ್ಮ ತಮ್ಮ ಸುಖಸೌಕರ್ಯಗಳನ್ನು ಮೊದಲು ಗಣನೆಗೆ ತೆಗೆದುಕೊಂಡು ಉದ್ಧಾರವಾಗಬೇಕು. ತಮ್ಮ ಉದ್ಧಾರವು ಅನ್ಯ ಜನಾಂಗಗಳ ವಿನಾಶವನ್ನು ಒಳಗೊಂಡಿದ್ದರೂ ಚಿಂತೆಯಿಲ್ಲ. ಏಕೆಂದರೆ ಬದುಕಲಾರದದು, ಬದುಕಬಾರದು, ಬದುಕಲರ್ಹವಲ್ಲ.

ಈ ರೀತಿ ವಾದಿಸಿ ರಾಜಕೀಯವು ಜನಗಳಿಗೆ ಅನ್ನದಾತೆ ತೋರಿಸುತ್ತದೆ. ಹಸಿದವರಿಗೆ ಬೇಕಾದುದು ಅನ್ನ ಮತ, ತತ್ವ, ಮತ್ತು ಕಲೆಗಳ ಕನಸಿನುಣಿಸಲ್ಲ. ಅಂತಹ ವಾಸ್ತವಾನ್ನವನ್ನು ಕೊಡುತ್ತೇನೆಂದು ಹೇಳುತ್ತಿರುವ ರಾಜಕೀಯದ ಗಂಡುತನದ ಮುಂದೆ ಕಾಣದ ಕನಸಿನ ಅಮೃತವನ್ನು ನಿರ್ದೇಶಿಸುವ ಕಾವ್ಯ ಕಲೆಗಳ ಹೆಣ್ಣುತನವು ಹೇಗಲಣಿಯಾಗಬಲ್ಲುದೇ?

ಆದ್ದರಿಂದ ಮಂದಿಯ ಮನಸ್ಸು ವಿಜ್ಞಾನ ರಾಜಕೀಯಗಳ ಕಡೆಗೆ ತಿರುಗಿರುವುದು ಹೆಚ್ಚು ಸ್ವಾಭಾವಿಕವಾದುದಾಗಿದೆ. ಹಸಿದ ಪ್ರಾಣಿಗೆ ಬೇಕಾದುದು ಬೋಗುಣಿಯಲ್ಲಿರುವ ಮುದ್ದೆ. ಗೋಡೆಯ ಮೇಲೆ ತಗುಲಿಸಿರು ಚಿತ್ರಪಟವಲ್ಲ. (ಈ ಉಪಮಾನವನ್ನು ಅವ ಹೇಳನದ ದೃಷ್ಟಿಯಿಂದಲ್ಲ. ವಿಷಯವನ್ನು ಚೆನ್ನಾಗಿ ಮನಸ್ಸಿಗೆ ತರಲೆಂದು ಉಪಯೋಗಿಸಿದೆ.)

ಪೂರ್ವೋಕ್ತ ಪರಿಸ್ಥಿತಿಗೆ ಸಂಕುಚಿತ ಭಾವಗಳನ್ನಾಶ್ರಯಿಸಿ ಪ್ರಚಾರ ಮಾಡಲೆಳಸಿದ ಮತ, ತತ್ವ, ಕಲೆಗಳೂ ಕಾರಣವಾಗಿವೆ. ಜೀವನವು ಮತಕ್ಕಿಂತಲೂ ಗಂಭೀರವಾದುದು, ತತ್ವಕ್ಕಿಂತಲೂ ಆಳವಾದುದು. ಕಲೆಗಿಂತಲೂ ಗುಹ್ಯವಾದುದು. ಅದರ ಬೃಹದ್ಗರ್ಭದಲ್ಲಿ ಮತ ತತ್ವ ಕಲೆಗಳಂತೆಯೇ ವಿಜ್ಞಾನ ರಾಜಕೀಯಗಳೂ ಪ್ರಧಾನಾಂಶಗಳಾಗಿವೆ. ಅಸಂಖ್ಯ ಮುಖವಾದ ಜೀವನವು ಯಾವ ಒಂದು ಮುಖದ ಅತಿ ಪ್ರಶಸ್ತ್ಯವನ್ನೂ ಸಹಿಸದು. ಅದಕ್ಕೆ ಎಲ್ಲ ಮುಖಗಳೂ ಬೇಕಾಗಿವೆ. ಅತಿಯಾಗಿ ಉತ್ಪ್ರೇಕ್ಷಿತವಾದ ಮುಖವು ವಿಕಾರವಾಗುತ್ತದೆ. ಜೀವನವು ಒಂದಿಲ್ಲೊಂದು ದಿನ ಅದನ್ನು ಖಂಡಿಸಿ ತಿರಸ್ಕರಿಸುತ್ತದೆ. ಅಂಥ ದೃಷ್ಟಿಯು ಅನರ್ಥಕಾರಿ. ಪೂರ್ಣ ದೃಷ್ಟಿಯಿಂದಲೇ ಶ್ರೇಯಸ್ಸು. ಪೂರ್ಣ ದೃಷ್ಟಿಯೆಂದರೆ ನಿಜವಾದ ಶಾಶ್ವತವಾದ ಸರ್ವೋತ್ಕೃಷ್ಟವಾದ 'ದರ್ಶನ' ಅಂತಹ ದರ್ಶನದಲ್ಲಿ ವಿಜ್ಞಾನ ರಾಜಕೀಯ ಮತತತ್ವ ಕಲೆ ಎಲ್ಲವೂ ಅಂಗಗಳಾಗಿರುತ್ತವೆ. ಸಮನ್ವಿತವಾಗಿರುತ್ತವೆ. ಶ್ರೇಷ್ಠನಾದ ಕವಿಗೆ ಅಂತಹ 'ದರ್ಶನ' ವಿರಬೇಕು. ಅಂಥವನು ರಸಋಷಿಯಾಗುತ್ತಾನೆ. ಅಂಥವನ ವಾಣಿಯಲ್ಲಿ ವೇದ ಶಾಸ್ತ್ರ ಕಲೆಗಳೆಲ್ಲ ಸಂಗಮವಾಗಿ ಕಾವ್ಯತ್ರಿವೇಣಿಯು ಜೀವನ ಸಮಸ್ತವನ್ನು ರಸಮಯವಾಗಿ ಮಾಡಿ ಪ್ರವಹಿಸುತ್ತದೆ. ಆದ್ದರಿಂದಲೇ ಋಷಿಯಲ್ಲದವನಿಗೆ ಉತ್ತಮ ಕಾವ್ಯ ರಚನೆ ಸಾಧ್ಯವಲ್ಲವೆಂದು ಹಿಂದಿನವರು ಹೇಳಿದ್ದಾರೆ. ಜೀವನ ವೈಕ್ಷದ ಕುಸುಮ ಸದೃಶವಾದ ಸಾಹಿತ್ಯವು ಸರ್ವಗಾತ್ರಸಿಯಾಗಿರಬೇಕು. ಕವಿಯ ದರ್ಶನವು ಭೂಮವಾಗಿರಬೇಕು. ಇಲ್ಲದಿದ್ದರೆ ಶಾಂತಿಯಿಲ್ಲ. ಇದನ್ನೇ ಕುರಿತು ಋಷಿಯು— 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ' ಎಂದು ಹಾಡಿದ್ದಾನೆ. ದೊಡ್ಡವರಲ್ಲಿ ಸುಖವಿದೆ. ಸಣ್ಣವರಲ್ಲಿ ಸುಖವಿಲ್ಲ. ಕವಿಯಾದವನು ಮತಾಚಾರ ಸಂಪ್ರದಾಯಗಳ ಶೃಂಖಲಾಸದೃಶವಾದ ಸಂಕುಚಿತ ದೃಷ್ಟಿಯಿಂದ ವಿಮುಕ್ತನಾಗಿ ಭೂಮಯವಾದುದರಲ್ಲಿ ಸಂಚರಿಸಬೇಕು. ಅವನ ದರ್ಶನವು ತತ್ವ, ಮತ, ಪಂಥ, ಪಂಗಡಗಳಲ್ಲ. ಅವನ ದರ್ಶನವು ವಿಜ್ಞಾನದ ನವನವಾವಿಷ್ಕಾರಗಳನ್ನೂ ಪ್ರಾಚ್ಯಪಾಶ್ಚಾತ್ಯಗಳೆಂಬ ಭೇದವಿಲ್ಲದೆ ಎಲ್ಲ ತತ್ವವಿಚಾರಗಳ ಚಿರಸಾರಾಂಶಗಳನ್ನೂ ಸರ್ವ ಮತಗಳ ಸಮನ್ವಯ ದೃಷ್ಟಿಯನ್ನೂ ಜೀರ್ಣಿಸಿಕೊಂಡಿರಬೇಕು. ಆ ದರ್ಶನದ ಬೃಹದ್ಬಾಲಿಂಗನಕ್ಕೆ ಯಾವುದೂ ಹೊರಗಾಗಿರಬಾರದು. ಹೊರತಾಗಿರಬಾರದು; ಅದರಿಂದ ಯಾವುದೂ ತಪ್ಪಿಸಿಕೊಳ್ಳಬಾರದು.

ಅಂತಹ ದರ್ಶನದಿಂದ ಹೊರಹೊಮ್ಮುವ ಸಾಹಿತ್ಯವು ಜೀವನ ಪಥದಲ್ಲಿ ಮಾರ್ಗದರ್ಶಕ ಜ್ಯೋತಿಯಾಗುತ್ತದೆ. ಜೀವನ ಸಂಗ್ರಾಮದಲ್ಲಿ ಉತ್ಸಾಹವೀಯುವ ರಣಭೇರಿಯಾಗುತ್ತವೆ. ಜೀವನದ ನಿರಾಶೆಯಲ್ಲಿ ಆಶಾ ಕಿರಣವಾಗುತ್ತದೆ. ಬುದ್ಧಿಗೂ ಭಾವಕ್ಕೂ ಕಲ್ಪನೆಗೂ ನೂತನ ಚೇತನಕಾರಿಯಾಗುತ್ತದೆ. ಎಲ್ಲರ ಗೌರವಾದರಗಳಿಗೆ ಪಾತ್ರವಾಗಿ ಕಳೆದುಕೊಂಡಿರುವ ಸಿಂಹಾಸನವನ್ನು ಮತ್ತೆ ಏರುತ್ತದೆ. ನಮಗಿಂದು ಬೇಕಾಗಿರುವುದು ಇಂತಹ ಸಾಹಿತ್ಯಕ್ಕೆ ಕಾರಣವಾಗುವ ಜೀವನ ''ದರ್ಶನ''.

ನೂತನ ಸಂಸ್ಕೃತಿಗಳ ಸಂಪರ್ಕದಿಂದಲೂ ರಾಷ್ಟ್ರೀಯ ಜೀವನದಲ್ಲಿ ಜರುಗುತ್ತಿರುವ ಉತ್ಕರ್ಷೋತ್ಕರ್ಷ ಆಕಾಂಕ್ಷೆಗಳ ಆಂದೋಲನದಿಂದಲೂ ವೈಜ್ಞಾನಿಕರ ಅದ್ಭುತ ನೂತನ ನಿಷ್ಕರ್ಷಗಳ ಹಿತಕರ ಆಘಾತಗಳಿಗಿಂತಲೂ ಈಗ ನಮ್ಮ ಜೀವನದಲ್ಲಿ ಆಗಿರುವ ಮತ್ತು ಆಗುತ್ತಿರುವ ಪರಿಣಾಮಗಳ ಪ್ರತಿಫಲವಾಗಿ ನಮ್ಮ ಸಾಹಿತ್ಯದಲ್ಲಿ ನವಯುಗವು ನೊಗದೋರಿದೆ. ಅದನ್ನು ಅಲ್ಲಗಳೆಯುವವರು. ಏನೇ ಹೇಳಲಿ, ಅದಂತೂ ಜಯಶೀಲವಾಗುತ್ತಿದೆ ಎನ್ನುವದಕ್ಕೆ ಈ ಕವಿಸಮ್ಮೇಲನವೇ ಸಾಕ್ಷಿಯಾಗಿದೆ. ನವೀನ ಸಾಹಿತ್ಯ ಪ್ರಯತ್ನಗಳ ಸಮರ್ಥನೆಯನ್ನು ಅನೇಕ ಶ್ರೇಷ್ಠತರ ಸಾಹಿತ್ಯಿಗಳು ಮಾಡಿದ್ದಾರೆ. ನಾನೂ ಇತರ ಸಂದರ್ಭಗಳಲ್ಲಿ ಅದನ್ನು ತುಸು ಮಟ್ಟಿಗೆ ನೆರವೇರಿಸಿದ್ದೇನೆ. ಬಹುಶಃ ಇಲ್ಲಿ ನೆರೆದಿರುವ ಸಾಹಿತ್ಯ ಪ್ರೇಮಿಗಳಿಗೆ ಅವುಗಳೆಲ್ಲ ತಿಳಿದ ವಿಷಯಗಳಾಗಿರಬಹುದು.. ಸತ್ತ ಹಾವನ್ನು ಮತ್ತೆ ಹೊಡೆಯುವದರಿಂದ ಪ್ರಯೋಜನವಿಲ್ಲ. ಆದ್ದರಿಂದ ನಾನೀಗ ಆಧುನಿಕ ಸಾಹಿತ್ಯದ ಸಮರ್ಥನೆಗೆ ಕೈ ಹಾಕುವದಿಲ್ಲ. ಆ ಸಾಹಿತ್ಯವೇ ಅದರ ಸಮರ್ಥನೆಯಾಗಿದೆ. ಅದಕ್ಕೆ ಬದಲಾಗಿ ಸಾಹಿತ್ಯ ನಿರ್ಮಾಪಕರ ಮತ್ತು ಸಾಹಿತ್ಯ ವಾಚಕರ ಅವಗಾಹನೆಗಾಗಿ ನನಗೆ ತಿಳಿದಿರುವ ಒಂದೆರಡು ಇತರ ವಿಷಯಗಳನ್ನು ಪ್ರಸ್ತಾವಿಸುತ್ತೇನೆ. ನಾನು ಹೇಳಲಿರುವುದು ಸಾಹಿತ್ಯವೆಲ್ಲಕ್ಕೂ ಅನ್ವಯಿಸುವುದಾದರೂ ಕವಿಗಳಿಗೂ ಅವರ ಕೃತಿಗಳಿಗೂ ಹೆಚ್ಚಾಗಿ ಅನ್ವಯವಾಗುತ್ತದೆ.

ಉತ್ತಮ ಕವಿಗೆ ಜೀವನ ದರ್ಶನವಿರಬೇಕೆಂದು ಹಿಂದೆಯೇ ಹೇಳಿದೆ. ಉತ್ತಮ ಕೃತಿಯು ಅಂತಹ ದರ್ಶನಾತ್ಮಕವಾಗಿರಬೇಕು. ಇಲ್ಲಿ ದರ್ಶನ ಎಂದರೆ ನಿಯಮಬದ್ಧವಾದ ಅಥವಾ ತರ್ಕಬದ್ಧವಾದ ಆಲೋಚನೆಗಳ ಸಮುದಾಯವಲ್ಲ. ಭಾವ, ಕಲ್ಪನೆ ಮತ್ತು ಆಲೋಚನೆಗಳ ವಿದ್ಯುದಾಲಿಂಗನದಿಂದ ಸಂಭವಿಸುವ ಪ್ರತಿಭಾ ಜ್ಯೋತಿಯು. ಅದರ ಲಕ್ಷಣ. ಅಂತಹ ದರ್ಶನ ಸಂಪಾದನೆಯು ಕವಿಗೆ ತಪಸ್ಸಿನಿಂದಲೂ ಧ್ಯಾನದಿಂದಲೂ ಅವಲೋಕನದಿಂದಲೂ ಮಾತ್ರವೇ ಸಾಧ್ಯವಾಗುತ್ತದೆ. ಕಾಲ ಸುಂದರಿಯು ಬಹಿರಂಗದಲ್ಲಿ ತೇಜಸ್ವಿನಿ, ಅಂತರಂಗದಲ್ಲಿ ತಪಸ್ವಿನಿ. ಲಘುಜೀವನದಿಂದ ಕಲಾ ಸುಂದರಿಯು ಸಾಕ್ಷಾತ್ಕಾರವಾಗಳು, ಅನೀತಿ, ಕಳಂಕ ಅನುದಾರತೆಗಳಿಂದ ತಾತ್ಕಾಲಿಕ ಸುಖದಾಯಕಗಳಾದ ಪದ್ಯಗಳು ಹುಟ್ಟಬಲ್ಲವೇ ಹೊರತು ಸರ್ವಕಾಲ ದೇಶ ಸಮ್ಮತವಾದ ಆತ್ಮೋದ್ಧಾರಕವಾದ ಆನಂದದಾಯಕವಾದ ಕವನಗಳು ಲಭಿಸುವದಿಲ್ಲ. ಆದ್ದರಿಂದ ಕವಿಯು ತನ್ನ ಜೀವನವನ್ನು ಸರ್ವ ವಿಧದಲ್ಲಿಯೂ ಪರಿಷ್ಕರಿಸಿಕೊಳ್ಳುವದು ಅತ್ಯಾವಶ್ಯಕ. ಭಾವ, ಕಲ್ಪನೆ, ಆಲೋಚನೆ ಎಲ್ಲದರಲ್ಲಿಯೂ ಆತನು ಸಮುದಾರವಾಗಿ ಬಹುದೂರ ಮುಂದುವರಿದು ಪ್ರತಿಭಾಶಾಲಿಯಾಗಿರಸಿ ಋಷಿಯಾಗಬೇಕು. 'ದರ್ಶನ' ಸಂಪಾದನೆ ಮಾಡಬೇಕು. ''ಕಲೆಗಾಗಿ'' ಎಂಬ ಸೂತ್ರವು ಕಲಾಪೂರ್ಣವಾದುದಾದರೂ ಪೂರ್ಣವಾದುದಲ್ಲ. ನನಗೇನೋ ಆ ಸೂತ್ರದಲ್ಲಿ ಸಂಶಯವಿದೆ ಅದು ನಮ್ಮನ್ನು ಉತ್ತಮಗತಿಗೆ ಕೊಂಡೊಯ್ಯಲು ಸಮರ್ಥವಾಗಿರುವಂತೆಯೇ ಅಧೋಗತಿಗೆ ಕೊಂಡುಯ್ಯುವುದೂ ಸಾಧ್ಯ. ಆ ಸೂತ್ರದ ಸ್ವಚ್ಛಂದ ವ್ಯಾಖ್ಯಾನದಿಂದ 'ಪ್ರೇರಿತರಾಗಿ ಎಷ್ಟೋ ಜನ ಕಲೋಪಾಸಕರು ಅಧೋಗತಿಗಿಳಿದಿದ್ದಾರೆಂಬುದು ಜಗತ್ತಿನ ಸಾಹಿತ್ಯದ ಇತಿಹಾಸದಿಂದ ತಿಳಿದು ಬರುತ್ತದೆ. ಜೀವನವು ಕಲೆಗಿಂತಲೂ ಗುಹ್ಯವಾದುದೆಂದು ಹಿಂದೆ ಹೇಳಿದೆ. ಕಲೆಯೂ ಮತತತ್ವವಿಜ್ಞಾನ, ರಾಜಕೀಯಗಳಂತೆ ಆತ್ಮ ಸಾಕ್ಷಾತ್ಕಾರಕ್ಕೆ ಒಂದು ಮಾರ್ಗವೇ ಹೊರತು ಗಮ್ಯದಲ್ಲ. ದಾರಿಯೇ ಹೊರತು ಮನೆಯಲ್ಲ. ದಾರಿಗಾಗಿ ದಾರಿ' ಎಂದು ಎಷ್ಟು ವಿವೇಕವಾಗುತ್ತದೊ ಅಷ್ಟು ವಿವೇಕವಾಗುತ್ತದೆ.

ವೀರಶೈವ ಏಕೀಕರಣದ ವಾದ ಭೂಮಿ.

ಅಷ್ಟಾವರಣ ಪಂಚಾಚಾರ ಯುಕ್ತ ವೀರಶೈವರಲ್ಲಿ ಬ್ರಾಹ್ಮಣಾದಿ ವರ್ಣಗಳಾಗಲಿ ಅಥವಾ ಒಳಪಂಗಡಗಳೆಂಬ ಜಾತಿಗಳಾಗಲಿ ಇಲ್ಲವೆ ಭಕ್ತ ಮಾಹೇಶ್ವರ ಎಂಬ ಜಾತಿಗಳಾಗಲಿ ಇರುವುದಿಲ್ಲ.

ಈ ಪ್ರಕಾರ ಜನ್ಮದಿಂದ ಜಾತಿಗಳನ್ನು ವೀರಶೈವರಲ್ಲಿ ಕಲ್ಪಿಸಿ ಮೇಲುಕೀಳುಗಳೆಂಬ ಭಾವಗಳನ್ನುಂಟುಮಾಡುತ್ತಿರುವುದು ಅಧಮವಾಗಿಯೂ ಅತ್ಯಂತ ಘಾತಕವಾದುದಾಗಿಯೂ ಇದೆ. ಈ ಶೋಚನೀಯ ಸ್ಥಿತಿಯು ನಿವಾರಣೆಯಾಗಿ ವೀರಶೈವ ಏಕೀಕರಣ ಸಂಘ ವಿಸದಿದ್ದರೆ ಈ ಸಮಾಜಕ್ಕೆ ದಿನೇದಿನೇ ನಾನಾ ವಿಪತ್ತುಗಳು ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಪ್ರತಿಯೊಂದು ಸ್ಥಳದಲ್ಲಿಯೂ ಅನೇಕ ಪಂಗಡಗಳೂ ಮತಗಳೂ ಈ ಜಾತಿಯ ಮೇಲುಕೀಳು ಕಲ್ಪನೆಯಿಂದಲೇ ಉಂಟಾದ ದ್ವೇಷಾಸೂಯೆಗಳು. ಹೆಚ್ಚುತ್ತ ಸಮಾಜವು ಛಿನ್ನವಿಚ್ಛಿನ್ನವಾಗುತ್ತಲಿದೆ. ನಾನಾ ತರದ ವ್ಯಾಜ್ಯಗಳಿಂದ ಸಮಾಜದ ಹಣವು ಸೂರೆಯಾಗುತ್ತಲಿದೆ. ಅನೇಕ ಸ್ವಾರ್ಥಿಗಳು ರಾಜಕಾರಣದವರೂ ಈ ಒಳಪಂಗಡಗಳ ಸಹಾಯವನ್ನು ಹೊಂದುತ್ತ ಸಮಾಜದಲ್ಲಿ ಅನೈಕಮತ್ಯವನ್ನು ಹೆಚ್ಚಿಸುತ್ತಿದ್ದಾರೆ.

ಈ ಪ್ರಕಾರ ಈ ಒಳಪಂಗಡಗಳು ಛಿನ್ನವಾಗಿ ಮೇಲುಕೀಳುತನದ್ಯೋತಕವಾಗಿರುವವರೆಗೂ ಸಮಾಜವು ಅನೇಕ ಮುಖಗಳಿಂದ ದುರವಸ್ಥೆಗೀಡಾಗುತ್ತಲೇ ಹೋಗುವುದು. ಒಳಪಂಗಡಗಳು ದಿನೆ ದಿನೇ ಸ್ವತಂತ್ರ ಮತಗಳಾಗಲುಪಕ್ರಮಿಸಿವೆ. ಹಿಂದು ಸಂಘಟನೆಯು ಏನಾ ಹಿಂದು ಸಮಾಜಕ್ಕೆ ಉಳಿಗಾಲವಿಲ್ಲವೆಂದು ಹೇಗೆ ಹಿಂದು ಸಮಾಜ ಹಿತಚಿಂತಕರು ಹೇಳುತ್ತಿದ್ದಾರೆಯೋ ಹಾಗೆಯೆ ವೀರಶೈವರ ಏಕೀಕರಣದ ವಿನಾ ವೀರಶೈವ ಸಮಾಜೋನ್ನತಿಯಾಗುವದು ಶಕ್ಯವಿಲ್ಲವೆಂದೇ ಈ ಸಮಾಜದ ಹಿತಚಿಂತಕರು ತಿಳಿಯಬೇಕು.

ಅಧರ್ಮವಾಗಿಯೂ ಅಹಿತಕರವಾಗಿಯೂ ಇರತಕ್ಕ ಈ ಜಾತಿ ಕಲ್ಪನೆಯ ವಿಷಯಕವಾಗಿ ಬರುವ ಸಂಚಿಕೆಯಿಂದ ಒಂದೆರಡು ಪುಟಗಳನ್ನು ಈ ಪತ್ರಿಕೆಯಲ್ಲಿ ಕಾದಿಡಲಾಗುವುದು.

ಈ ವಾದ ಭೂಮಿಯಲ್ಲಿ ಬೇಕಾದವರು ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸಬಹುದು. ಜಾತಿಗಳಿವೆಯೆಂದು ಹೇಳುವವರು ತಮ್ಮ ಅಭಿಪ್ರಾಯಗಳನ್ನು ದಯವಿಟ್ಟು ಶಾಸ್ತ್ರಾಧಾರಗಳಿಂದ ನಮ್ಮ ಕಡೆಗೆ ಬರೆದು ಕಳುಹಿಸಬೇಕೆಂದು ಈ ಮೂಲಕ ಆಹ್ವಾನ.

ಆ ಲೇಖನವು ಯಾವುದೊಂದು ವ್ಯಕ್ತಿಯ ದೂಷಣೆ ಮಾಡತಕ್ಕುದಾಗಿರಬಾರದು. ಜನರಿಗೆ ವೀರಶೈವ ಮತದ ನಿಜತತ್ವ ತಿಳಿಯಬೇಕೆಂದೇ ಈ ಪ್ರಕಾರ ಮಾಡಿದ್ದಾಗಿದೆ, [ಸಂಪಾದಕ.]



ಶಾ. ಶ. ೧೮೭೫ ನೆಯ ಪುಷ್ಯ ಬ. ೭ ಸೋಮವಾರ.

ಸಾಹಿತ್ಯ ಸಮ್ಮೇಲನ.

ಕರ್ನಾಟಕ ಸಾಹಿತ್ಯ ಸಮ್ಮೇಲನದ ೧೯ನೆಯ ಅಧಿವೇಶನವು ಹುಬ್ಬಳ್ಳಿಯಲ್ಲಿ ಬಹು ಸಂಭ್ರಮದಿಂದ ಜರುಗಿತು. ಹುಬ್ಬಳ್ಳಿಯ ನಾಗರಿಕರಾದ ೨೫೫ ಜನ ಸಾಹಿತ್ಯ ಸೇವಕರು ಸ್ವಾಗತ ಸಂಘದ ಸದಸ್ಯರಾಗಿ ಉದಾರ ಬುದ್ಧಿಯಿಂದ ಧನ ಸಹಾಯ ಮಾಡಿದ್ದರಲ್ಲದೆ ಅನೇಕ ಮಹಾಶಯರೂ ಬೇರೆಬೇರೆ ಸಹಾಯ ಸೌಲಭ್ಯಗಳನ್ನು ಒಟುಮಾಡಿಕೊಟ್ಟಿದ್ದರು. ಈ ಪ್ರಕಾರ ಸಕಲರೂ ಪವಿತ್ರವಾದ ಈ ಮಾತೃಭಾಷೆಯ ಅಭಿವೃದ್ಧಿಗಾಗಿ ಸಾಹಸೋತ್ಸಾಹಗಳಿಂದ ಪ್ರಯತ್ನಿಸಿದುದು ಹುಬ್ಬಳ್ಳಿಯ ನಾಗರಿಕರಿಗೆ ಅತ್ಯಂತ ಭೂಷಣಪ್ರದವಾದುದಾಗಿದೆ.

ಕಳೆದ ಅಧಿವೇಶನಕ್ಕೆ ೧೫೫೫ ಪ್ರತಿನಿಧಿಗಳು ಮಾತ್ರ ಸೇರಿದ್ದರು. ಈ ಸಾರೆ ೪೦೦ ಪ್ರತಿನಿಧಿಗಳವರೆಗೆ ಈ ಸಮ್ಮೇಲನಕ್ಕೆ ಬಂದುದು ಕೂಡಾ ಅಭಿನಂದನೀಯವಾದುದೇ ಸರಿ. ಪ್ರೇಕ್ಷಕರ ಸಂಖ್ಯೆಯು ೫೦೦ ರರ ವರೆಗೆ ಇದ್ದು ಅವರಲ್ಲಿ ಹೆಣ್ಣು ಮಕ್ಕಳೂ ಹೆಚ್ಚಾಗಿ ಸೇರಿದ್ದುದು ತುಂಬಾ ಉತ್ಸಾಹಜನಕವಾದುದು.

ಈ ಸಮ್ಮೇಲನವನ್ನು ಉವಕ್ರಮಗೊಳಿಸಿದ ಶಿಕ್ಷಣ ಶಾಖೆಯ ಮಂತ್ರಿಗಳಾದ ದಿ| ಬ| ಕಂಬಳಿಯವರ ಭಾಷಣವು ಸಾಹಿತ್ಯಸೇವಕರಿಗೆ ಮಾರ್ಗದರ್ಶಿಯಾಗಿದೆ. ಅಧ್ಯಕ್ಷರಾದ ವಿದ್ವಾನ್ ವೈ. ನಾಗೇಶ ಶಾಸ್ತ್ರಿಗಳವರ ಭಾಷಣವು ಗಹನ ವಿಚಾರಗಳಿಂದ ಕೂಡಿದ್ದಾಗಿದೆ. ಕನ್ನಡ ಸಂಸ್ಕೃತಿಯ ಸ್ವಾತಂತ್ರ್ಯ ಮತ್ತು ವೈಶಿಷ್ಟ್ಯಗಳ ಸಂಬಂಧವಾಗಿ ಅಧ್ಯಕ್ಷರು ವ್ಯಕ್ತಪಡಿಸಿದ ಅಭಿಪ್ರಾಯಗಳು ಬಹು ಪ್ರಾಮುಖ್ಯವಾದವುಗಳಾಗಿವೆ. ಕವಿ ಸಮ್ಮೇಲನದ ಅಧ್ಯಕ್ಷರಾದ ಶ್ರೀವಾನ್ ಪುಟ್ಟಪ್ಪನವರ ಭಾಷಣವೂ ವಿಚಾರ ಪರಿಪೂರ್ಣವಾಗಿದೆ.

ಈ ಪ್ರಕಾರ ಸ್ವಾಗತ ಸಂಘದವರ ಏರ್ಪಾಟು, ಪ್ರತಿನಿಧಿಗಳ ಸಂದಣಿ, ಪ್ರಮುಖರ ಭಾಷಣ ಇವೆಲ್ಲವೂ ಸಮ್ಮೇಲನದ ಬಾಹ್ಯಾಂಗಗಳು, ಇವೆಲ್ಲವೂ ತೃಪ್ತಿಕರವಾಗಿದ್ದುದರಿಂದ ಸಮ್ಮೇಲನವು ಸಂಭ್ರಮದಿಂದ ಜರುಗಿತೆಂದು ಧಾರಾಳವಾಗಿ ಹೇಳಬಹುದು.

ಯಾವ ಸಭೆ ಸಮ್ಮೇಲನಗಳಾದರೂ ಅವುಗಳ ಈ ಬಾಹ್ಯಾಂಗದ ಮೇಲಿಂದಲೇ ಅವು ಜಯಪ್ರದವಾಗಿ ಜರುಗಿದವೆಂದು ಹೇಳಲಿಕ್ಕಾಗುವುದಿಲ್ಲ ಅವು ನಿರ್ಣಯಿಸಿದ ಗೊತ್ತುವಳಿಗಳು ಮುಂದಿಟ್ಟುಕೊಂಡ ವಿಧಾಯಕ ಕಾರ್ಯಗಳು ಇವೇ ಅವುಗಳ ಅಂತರಂಗ. ಇವು ಪರಿಣಾಮಕಾರಿಯಾಗಿದ್ದರೇನೇ ಆ ಸಭೆ ಸಮ್ಮೇಲನಗಳು ಶ್ರೇಯಸ್ಕರವಾಗಿ ಜರುಗಿದವೆಂದು ತಿಳಿಯಬೇಕು.

ಈ ದೃಷ್ಟಿಯಿಂದ ಈ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ನೋಡುವಂತೆಯೇ ಇಲ್ಲ. ಏಕೆಂದರೆ ಇದರ ಘಟನೆಯೇ ಆ ಪ್ರಕಾರ ಇದೆ. ಸಮ್ಮೇಲನಕ್ಕೆ ಬಹುಜನರು ಕೂಡಿ ಊಟೋಪಚಾರಗಳು ಸರಿಯಾಗಿ ಜರುಗಿ ನಿಬಂಧಗಳ ವಾಚನವು ರಸವತ್ತಾಗಿದ್ದರೆ ಸಮ್ಮೇಲನವು ಯಶಸ್ವಿಯಾಯಿತು. ಇವುಗಳಲ್ಲಿ ಕೊರತೆಯಾದಂತೆ ಸಮ್ಮೇಲನವೂ ಅಯಶಸ್ವಿಯಾಯಿತೆಂದೇ ತಿಳುವಳಿಕೆ.

ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಒಂದು ಸಂಸ್ಥೆಯು ಬೆಂಗಳೂರಲ್ಲಿದೆಯಷ್ಟೆ. ಈ ಸಂಸ್ಥೆಯ ಪರವಾಗಿ ಈ ಸಮ್ಮೇಲನವು ಬೇರೆಬೇರೆ ಸ್ಥಳಗಳಲ್ಲಿ ಕೂಡುತ್ತಾ ಬಂದಿದೆ. ಹಾಗೆಯೇ ಈ ಸಾರೆ ಹುಬ್ಬಳ್ಳಿಯಲ್ಲಿ ಕೂಡಿದ್ದಿತು. ಆ ಪರಿಷತ್ತೇ ಕಾರ್ಯಕಾರಿ ಮಂಡಲವು. ಈ ಸಮ್ಮೇಲನವೇನೋ ಮೂರು ದಿನ ಕೂಡಿ ಬಯಲಾಗಿ ಹೋಗುವುದು. ಇದಕ್ಕೆ ಸ್ವತಂತ್ರವಾದ ಅಸ್ತಿತ್ವವೇ ಇಲ್ಲ. ಎಂದರೆ ಈ ಸಮ್ಮೇಲನದಲ್ಲಿ ಸೇರಿದ ಪ್ರತಿನಿಧಿಗಳಿಂದ ಒಂದು ಕಾರ್ಯ ನಿರ್ವಾಹಕ ಮಂಡಲಿಯು ಏರ್ಪಡುವುದಿಲ್ಲ. ಬೆಂಗಳೂರಲ್ಲಿರುವ ಸಾಹಿತ್ಯ ಪರಿಷತ್ತಿಗೆ ಸೇರಿದವರೇ ಸಮ್ಮೇಲನಗಳಲ್ಲಿಯು ನಿರ್ಣಯಗಳನ್ನು ಆಚರಣೆಯಲ್ಲಿ ತರಲು ಅಧಿಕಾರವುಳ್ಳವರಾಗಿದ್ದಾರೆ.

ಸಮ್ಮೇಲನಕ್ಕೆ ನೂರು ಪ್ರತಿನಿಧಿಗಳು ಸೇರಿರಲಿ ಅಥವಾ ೪೦೦ ಸೇರಲಿ ಎಷ್ಟು ಜನರು ಸೇರಿದರೂ ಆ ಪರಿಷತ್ತಿನವರು ಗೊತ್ತು ಮಾಡಿದಷ್ಟೇ ಜನರು ವಿಷಯನಿಯಾಮಕ ಸಂಘದಲ್ಲಿ ಸೇರಬೇಕಾಗಿದೆ. ಸಮ್ಮೇಲನದ ಪ್ರತಿನಿಧಿಗಳಿಗೇನೂ ಪರಿಷತ್ತಿನವರು ಬದ್ಧರಾಗಿಲ್ಲ. ಪರಿಷತ್ತಿನ ವಾರ್ಷಿಕ ಅಧಿವೇಶನವೇ ಬೇರೆ. ಸಮ್ಮೇಲನವೇ ಬೇರೆ.

ಈ ಸ್ಥಿತಿಯಿರುವವರೆಗೂ ಸಮ್ಮೇಲನದ ಅಂತರಂಗ ನಿರೀಕ್ಷಣೆಯ ಅವಶ್ಯಕತೆಯೇ ಇಲ್ಲ. ಕರ್ನಾಟಕ ಸಾಹಿತ್ಯ ಪರಿಷತ್ತೇ ಈ ಸಮ್ಮೇಲನದ ಅಂತರಂಗ. ಅದರ ಕಾರ್ಯಕಲಾಪಗಳನ್ನು ಕುರಿತು ಈ ಸಮ್ಮೇಲನದ ಪ್ರಸಂಗದಲ್ಲಿ ಪ್ರಸ್ತಾಪಿಸುವುದು ಅಸಂಗತವಾಗಿದೆಯಷ್ಟೆ.

ಪರಿಣಾಮಕಾರಿಯಾದ ಗೊತ್ತುವಳಿ ಮತ್ತು ವಿಧಾಯಕ ಕಾರ್ಯಕ್ರಮಗಳಲ್ಲದ ಸಭೆ ಸಮ್ಮೇಲನಗಳು ಹೇಗೆ ಜಾತ್ರೆಗಳಂತಿರುತ್ತವೆಯೋ ಹಾಗೆಯೇ ಈ ಪ್ರಕಾರ ಕಾರ್ಯ ನಡೆಯಿಸುವ ಸಂಘ ಬೇರೆ ಮತ್ತು ಮಾತನಾಡಿ ಹೋಗುವ ಗುಂಪು ಬೇರೆಯಾಗಿರುವಲ್ಲಯ ಸಭೆ ಸಮ್ಮೇಲನಗಳು ಲಗ್ನದಂತಿರುತ್ತವೆ. ಧನಿಕರೂ ಉತ್ಸಾಹಿಗಳೂ ಇದ್ದ ಊರಲ್ಲಿ ಸಮ್ಮೇಲನವಾದರೆ ಧನಿಕರ ಮನೆಯ ಲಗ್ನ. ಇವು ಕೊರತೆಯಿದ್ದಲ್ಲಿ ಸಮ್ಮೇಲನವಾದರೆ ಬಡವರ ಮನೆಯ ಲಗ್ನ.

ಇದೇ ಕಾಲದಲ್ಲಿ ನಡೆದ ಮರಾಠಿ ಮತ್ತು ಗುಜರಾತಿ ಸಾಹಿತ್ಯ ಸಮ್ಮೇಲನಗಳಲ್ಲಿಯ ಕಾರ್ಯಗಳನ್ನು ನೋಡಿದರೆ ನಾವು ಎಷ್ಟು ಹಿಂದಿರುವೆವೆಂಬುದು ಸ್ಪಷ್ಟ ಕಾಣುತ್ತದೆ. ಸಾಹಿತ್ಯ ಕ್ಷೇತ್ರವನ್ನು ಅತ್ಯಂತ ವಿಸ್ತಾರಗೊಳಿಸಿ ಅವರು ಮಾಡುತ್ತಿರುವ ಅತ್ಯಂತ ಪರಿಣಾಮಕಾರಿಯಾದ ಕಾರ್ಯಗಳನ್ನು ನೋಡಿಯಾದರೂ ನಾವು ಎಚ್ಚತ್ತು ನಮ್ಮ ಕಾರ್ಯ ಪದ್ಧತಿಗಳನ್ನು ಇನ್ನು ಮೇಲಾದರೂ ಗೊತ್ತುಮಾಡಿಕೊಂಡು ಮುಂದಡಿಯಿಡುವುದು ವಿಹಿತವಾಗಿದೆ. ಇಲ್ಲದಿದ್ದರೆ ನಮ್ಮ ಸಾಹಿತ್ಯವು ಕವಿಯ ಕಲ್ಪನಾ ಸೃಷ್ಟಿಯಲ್ಲಿ ಮಾತ್ರವೇ ಬಹು ಪ್ರಕಾಶಮಯವಾಗಿ ಬೆಳಗುವುದು.

ಶ್ರೀ ಅಲ್ಲಮ ಪ್ರಭುದೇವರ ವಿಷಯವಾಗಿ
ಶ್ರೀ. ಶ್ರೀನಿವಾಸ ಮೂರ್ತಿಗಳ ವ್ಯಾಖ್ಯಾನ.

ನಿನ್ನೆ ಧಾರವಾಡ ಲಿಂಗಾಯತ ನಗರ ಭವನದಲ್ಲಿ ಸಾಯಂಕಾಲ ೫ ಘಂಟೆಗೆ ಪ್ರೊಫೆಸರ ಶ್ರೀಮಾನ್ ಕೆ. ವಿ. ಪುಟ್ಟಪ್ಪ ಎಂ. ಎ. ಇವರ ಕವನ ವಾಚನವೂ ಮತ್ತು ಶ್ರೀಮಾನ್ ಎಂ. ಆರ್. ಶ್ರೀನಿವಾಸ ಮೂರ್ತಿ ಬಿ. ಎ. ಇವರ "ಅಲ್ಲಮ ಪ್ರಭುದೇವರು" ಎಂಬ ವಿಷಯದ ಮೇಲಿನ ವ್ಯಾಖ್ಯಾನವೂ ಜರುಗಿದವು. ನಗರಭವನವು ಜನಸಂದಣಿಯಿಂದ ಕಿಕ್ಕಿರಿದಿದ್ದಿತು. ಆ ಕಾಲಕ್ಕೆ ಕರ್ನಾಟಕ ಕಾಲೇಜದ ಪ್ರೊಫೆಸರರುಗಳಾದ ಶ್ರೀ. ಪತ್ರಾವಳಿ ಶ್ರೀ. ಸಾಸನೂರ ಶ್ರೀ. ಜಹಗೀರದಾರ ಇವರೂ ಲಿಂಗರಾಜ ಕಾಲೇಜನ ಪ್ರೊಫೆಸರ ಶ್ರೀ. ಬಸವನಾಳ ಮತ್ತು ರಾಜಾರಾಮ ಕಾಲೇಜದ ಪ್ರೊಫೆಸರ ಶ್ರೀ. ಕುಂದಣಗಾರ ಇವರೂ ಅಲ್ಲದೆ ಸ್ಥಳಪರಸ್ಥಳಗಳ ಹಲವು ಶಿಕ್ಷಕರೂ, ಸಭ್ಯಗೃಹಸ್ಥರೂ, ವಿದ್ಯಾರ್ಥಿಗಳೂ ಬಂದಿದ್ದರು.

ಮೊದಲು ಶ್ರೀಮಾನ್ ಪುಟ್ಟಪ್ಪನವರು ತಾವು ರಚಿಸಿದ ಕವನಗಳನ್ನು ಸುಮಾರು ೪೫ ನಿಮಿಷಗಳವರೆಗೆ ಹಾಡಿ ತೋರಿಸಿದ ಬಳಿಕ ಇಲ್ಲಿಯ ಲಿಂಗಾಯತ ಸ್ಪೋರ್ಟ್ ಅಸೋಸಿಏಶನ್ನಿನ ಪರವಾಗಿ ಅಮೆಚೂಆರ ನಾಟಕ ಮಂಡಲದವರು ಕಲಿತ ರಕ್ತಾಕ್ಷಿ ಎಂಬ ತಮ್ಮ ನಾಟಕದ ಅಲ್ಪ ನಟನೆಯನ್ನು ನೋಡಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸಂದರ್ಶಿಸಿದರು. ತರುವಾಯ ಶ್ರೀಮಾನ್ ಶ್ರೀನಿವಾಸ ಮೂರ್ತಿಗಳ ಅಲ್ಪ ಪರಿಚಯವಾದ ಮೇಲೆ ಅವರು ವ್ಯಾಖ್ಯಾನವನ್ನಾರಂಭಿಸಿ ಸುಮಾರು ಒಂದೂ ಕಾಲು ಗಂಟೆಯವರೆಗೆ ಅಲ್ಲಮ ಪ್ರಭುದೇವರ ವಿಷಯವಾಗಿ ಹೇಳಿ ಆ ಮೇಲೆ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸಂದರ್ಶಿಸಿದರು. ಶ್ರೀಮಾನ್ ಶ್ರೀನಿವಾಸ ಮೂರ್ತಿಗಳು ತಮ್ಮ ವ್ಯಾಖ್ಯಾನದಲ್ಲಿ—

ಬಸವ, ಸಿದ್ಧರಾಮ ಇವರ ವಿಷಯವಾಗಿ ಸುಗಮವಾಗಿ ತಿಳಿಯುವಂತೆ ಅಲ್ಲಮನ ವಿಷಯವಾಗಿ ತಿಳಿಯುವದು ಕಷ್ಟ. ಆದರೂ ಹರಿಹರನ ಪ್ರಭುದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಪುರಾಣ ಇತ್ಯಾದಿ ಗ್ರಂಥಗಳಲ್ಲಿ ಬರುವ ಕಥಾಭಾಗ, ಮತ್ತು ವಚನ ಗ್ರಂಥ ಇವುಗಳ ಸಹಾಯದಿಂದ ಪ್ರಭುದೇವರ ವಿಷಯವಾಗಿ ತಿಳಿದುಕೊಳ್ಳಲು ಸಹಾಯವಿದೆ. ಈಗ ಅಚ್ಚು ಆದ ಗ್ರಂಥಗಳಲ್ಲಿ ಹರಿಹರನ ರಗಳೆಯು ಪ್ರಾಚೀನವಿದ್ದು ಅದರಿಂದ ಕೈಲಾಸದಲ್ಲಿದ್ದ ನಿರ್ಮಾಯನೆಂಬ ಗಣೇಶ್ವರನು ಶಾಪದಿಂದ ಭೂಲೋಕದಲ್ಲಿ ಅಲ್ಲಮನೆಂಬ ಹೆಸರಿನಿಂದ ಬಳ್ಳಿಗಾವಿಯಲ್ಲಿ ಜನಿಸಿ ಕಾಮಲತೆ ಎಂಬ ಸ್ತ್ರೀಗೆ ಮೋಹಿಸಿ ಆಕೆಯ ಅಳುವಿನಲ್ಲಿ ಎಚ್ಚರಗೊಂಡು ತನ್ನೆದುರಿನಲ್ಲಿ ಹೊರಟ ಹೊನ್ನಕಲಶದ ಭೂಗತ ದೇವಸ್ಥಾನದಲ್ಲಿದ್ದ ಅನುಮಿಷನ ಮೂರ್ತಿಯನ್ನು ನೋಡಿ ಅವನನ್ನು ಗುರುವೆಂದು ಭಾವಿಸಿ ಅವನ ಲಿಂಗವನ್ನು ಹೊಂದಿದನೆಂದೂ ತಿಳಿಯುವದು. ಸುಜ್ಞಾನ ನಿರಹಂಕಾರುದರದಿಂದ ಅಲ್ಲಮನು ಬಳ್ಳಿಗಾವಿಯಲ್ಲಿ ಜನಿಸಿ ಮಾಯೆಯನ್ನು ನಿರಾಕರಿಸಿ ಅನುಮಿಷನಿಂದ ಲಿಂಗವನ್ನು ಪಡೆದ ಚಾಮರಸನು ಬರೆದ ಪ್ರಭುಲಿಂಗಲೀಲೆಯ ವೃತ್ತಾಂತದಿಂದ ಜನತೆಯು ಅಲ್ಲಮನಿಗೆ ಅಂಥ ಮೋಹಸ್ಥಿತಿಯುಂಟಾಗಬಾರದೆಂದು -ಕಥೆ ಬದಲಾಯಿಸಲು ಪ್ರಯತ್ನ ಪಟ್ಟಂತೆ ಕಾಣುತ್ತದೆ. ಪ್ರಭುದೇವರು ಲಿಂಗವನ್ನು ಹೊಂದಿ ಲೀಲೆಗೆ ನಿಂತು, ಕಲ್ಯಾಣ ಸೊಲ್ಲಾಪುರಗಳಲ್ಲಿ ಪಡೆದಿದ್ದ ಮತಪ್ರಸಾರ ಕಾರ್ಯವನ್ನು ತಾನು ಮಾಡಬೇಕೆಂದಿದ್ದ ಮತ ಪ್ರಸಾರ ಕಾರ್ಯಕ್ಕೆ ಅನುಕೂಲವಾಗಲೆಂದು ಬಸವ ಸಿದ್ಧರಾಮರನ್ನು ಕಂಡು ಅವರನ್ನು ತನ್ನ ಬೆಂಬಲಕ್ಕಾಗಿ ತೆಗೆದುಕೊಳ್ಳಬಯಸಿರಬಹುದು. ಅದಕ್ಕಾಗಿ ಅವನು ಗೊಗ್ಗಯ್ಯ ಇತ್ಯಾದಿ ಶರಣರ ಮನೋಭಾವಗಳಲ್ಲಿದ್ದ ದೋಷ ಸ್ಥಿತಿಯನ್ನು ಹೊಡೆದೋಡಿಸಿ ಸೊಲ್ಲಾಪುರಕ್ಕೆ ಹೋಗಿ ಸಿದ್ಧರಾಮನ ಒಡ್ಡತನವನ್ನು ದೂಷಿಸಿ ಬಸವನಿಗೆ ಕೆಂಚಿತ್ ಪ್ರಾಪ್ತವಾದ ಅಹಂಕಾರತಾಮಸವನ್ನು ಕಳೆದು ಶರಣರಿಗೆ ಅವನ್ನು ತಿಳುಹಿಸಿ ತನ್ನ ಕಾರ್ಯವು ಸುಯಂತ್ರಿತವಾಗಿ ಸಾಗುವಂತೆ ಮಾಡಿದನು. ಕಲ್ಯಾಣ ಸೊಲ್ಲಾಪುರಗಳಲ್ಲಿ ಈ ಮೊದಲೇ ಖ್ಯಾತಿ ಪಡೆದಿದ್ದ ಶಿವಶರಣರಿಗೆ ತಾನು ಗುರುವಾಗಬೇಕಾಗಿದ್ದರೆ ಅಲ್ಲಮನ ಯೋಗ್ಯತೆಗೆ ಸಂಶಯಾದುದು ಬೇರೊಂದಿಲ್ಲ. ಶಿವಶರಣರಲ್ಲಿ ಅವನು ಜಗ್ಗಣ್ಣನು ಇತ್ಯಾದಿಯಾಗಿ ಹೇಳಿದರು. ವಾಖ್ಯಾನದಲ್ಲಿ ಶೂನ್ಯ ಸಂಪಾದನೆಯ ಕ್ರಮಕ್ಕೆ ಸರಿಯಾಗಿ ತುಂಬಾ ನಡನಗಳು ತುಂಬಿದುದರಿಂದ ಕೇಳುವವರ ಮೇಲೆ ಒಳ್ಳೇ ಪರಿಣಾಮವನ್ನುಂಟುಮಾತಿತು. ಸಮಾರೋಹಣದಲ್ಲಿ ಶಿವಶರಣನು ಶಾಪದಿಂದ ಭೂಮಿಗೆ ಇಳಿದು ಬಂದನೆಂಬ ಮಾತು ತುಂಬಾ ನಂಬಲಿಕ್ಕೆ ಆಗುತ್ತದೆಯೇ? ಸುಜ್ಞಾನಿ ನಿರಹಂಕಾರದಿಂದುದಿಸಿದವನು ಶಾಪಗ್ರಸ್ತನಾಗಿ ಜನಿಸಿ ಮೋಹಕ್ಕೆ ಎಷ್ಟರ ಮಟ್ಟಿಗೆ ಸಿಲುಕಿರಬಹುದು? ಇತ್ಯಾದಿ ವಿಷಯಗಳನ್ನು ಕುರಿತು ಚರ್ಚೆಯಾದಬಳಿಕ ಹಾರತುರಾಯಿಗಳಿಂದ ಸಭೆಯ ಕಾರ್ಯವು ಪೂರ್ತಿಯಸ್ಪದಿತು.

ಧಾರವಾಡ. } ಕಾಮೋಜಿ ಚನ್ನಣ್ಣ,
ತಾ. ೨-೧-೩೪. } ಓರ್ವ ಸಮಾಜ ಸೇವಕ.

ಕರ್ನಾಟಕ ಸಾಹಿತ್ಯ ಪರಿಷತ್ತಿನ
ಕೆಲವು ಸಂಗತಿಗಳು.

ಈ ಪರಿಷತ್ತು ಕ್ರಿ. ಶ. ೧೯೧೫ರಲ್ಲಿ ಬೆಂಗಳೂರಲ್ಲಿ ಸ್ಥಾಪನೆಯಾಯಿತು. ಇದಕ್ಕೆ ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರು ಅಧ್ಯಕ್ಷರಾಗಿದ್ದಾರೆ.

ಈ ಪರಿಷತ್ತಿಗೆ ಸಹಾಯಕರು, ಆಜೀವ ಸದಸ್ಯರು, ಸಾಧಾರಣ ಸದಸ್ಯರು ಎಂಬ ಮೂರು ಪ್ರಕಾರಗಳ ಸದಸ್ಯರಿದ್ದಾರೆ. ಇವರ ಒಟ್ಟು ಸಂಖ್ಯೆ ಇಡೀ ಕರ್ನಾಟಕದಲ್ಲಿ ೧೩೭. ಇವರಿಂದ ಕಳೆದ ವರುಷ ಬರಬೇಕಾಗಿದ್ದ ವಾರ್ಷಿಕ ಚಂದಾ ಹಣದಲ್ಲಿ ೬೧೪ ರೂ. ಗಳು ಬಂದಿವೆ. ೬೭೦-೦-೦ ರೂ. ಬರುವುದಿದೆ.

ಈ ಪರಿಷತ್ತಿನ ಕಳೆದ ವರುಷದ ಆದಾಯ ೧೬೮೫-೧೧-೧ ವ್ಯಯ ೧೦೧೯-೧೩-೦ ಶಿಲ್ಕು ೫೮೬-೧೭-೧ ಪರಿಷತ್ತಿನ ಆಫೀಸ ಸಿಬ್ಬಂದಿಗಾಗಿ ಲಂಪಿ-೧೨-೦ ವೆಚ್ಚ. ಪ್ರಚಾರ ಕಾರ್ಯಕ್ಕಾಗಿ ೫೦ ರೂ. ವೆಚ್ಚ.

ಈ ಪರಿಷತ್ತಿಗೆ ೩೩ ಸಾವಿರ ರೂ. ಗಳ ಬೆಲೆಯ ಒಂದು ಕಟ್ಟಡವಿದೆ. ೪೬೦೦ ರೂ. ಗಳ ಗ್ರಂಥ ಭಾಂಡಾಗಾರ ಮತ್ತು ೩೦೦೦ ರೂ. ಗಳ ವಿಕ್ರಯಿಸುವ ಪುಸ್ತಕಗಳಿವೆ. ಒಂದು ಪರಿಷತ್ಪತ್ರಿಕೆ ಪ್ರಕಟವಾಗುತ್ತದೆ

ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ಎಂ. ಎ. ಎಲ್. ಎಲ್. ಬಿ. ಇವರು ಈ ಪರಿಷತ್ತಿನ ಗೌರವ ಕಾರ್ಯದರ್ಶಿಗಳು.

—ಮಹಾತ್ಮಾ ಗಾಂಧೀಜಿಯವರಿಗೆ ಆಂಧ್ರ ಪ್ರಾಂತದವರು 'ಆದಿಜನ' ಸೇವೆಗಾಗಿ ೬೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ವೈ. ನಾಗೇಶ ಶಾಸ್ತ್ರಿಗಳವರ ಭಾಷಣ.

(೫ ನೆಯ ಪುಟದಿಂದ ಬಂದುದು.)

ಸ್ವಸ್ವರೂಪದಿಂದಲೇ ಇರುವ ಆತ್ಮನ ಪೂರ್ಣಾವಸ್ಥೆ. ಅರಿವಿನ ಮತ್ತು ಆನಂದದ ವಿಕಾಸವೆಂದರೆ ಸರ್ವಜ್ಞತೆ, ಸದಾನಂದ ಸ್ಥಿತಿ. ಇಂತಹ ಆತ್ಮೋದ್ಧಾರದ ನಿಜ ಮಾರ್ಗವನ್ನು ತನ್ನ ಸವಿನುಡಿಯಿಂದ ಜಗತ್ತಿನ ಮುಂದಿಡುವವನೇ ಕವಿ. ಸರ್ವಜ್ಞತ್ವಾದಿ ಪ್ರಾಪ್ತಿಯು ತತ್ಪವನ್ನು ತೋರಿಸುವವನು ಗುರುವು. ಕವಿಯಲ್ಲವೆಂದು ನಾವು ತಿಳಿಯುವಂತಿಲ್ಲ. ಗುರುವು ಬೋಧಿಸುವುದಾದರೂ ಕವಿಯ ಸವಿನುಡಿಯನ್ನೇ ಅಲ್ಲ. ಅವನು ಬೋಧಿಸುವುದು ಋಷಿಗಳ ನುಡಿಯೆಂದರೆ, ನಾನೃಷಿಃ ಕ್ರೀಯತೇ ಕಾವ್ಯಂ (ಋಷಿಯಲ್ಲದವನು ಕಾವ್ಯ ರಚನೆಯನ್ನು ಮಾಡಲಾರನು.) ಎಂಬ ಸೂಕ್ತಿಯು ಕವಿಯನ್ನು ಋಷಿಯೆಂದೇ ಹೇಳುವುದು. ಕವಿಯಲ್ಲಿ ಚಿತ್ತದ ಏಕಾಗ್ರತೆಯೂ, ತತ್ಪ ವಿಚಾರವೂ, ಆ ವಿಚಾರದಿಂದುಂಟಾದ ಸ್ವಾನುಭವವೂ, ಆ ಸ್ವಾನುಭವವನ್ನು ಜಗತ್ತಿನ ಮುಂದಿಡುವ ಶಕ್ತಿಯೂ ಇರುವವು ಇಷ್ಟೇ ಅಲ್ಲ; ಅವನಲ್ಲಿ ಸಂಸಾರ ಸಂಬಂಧವಾದ ಕಷ್ಟ ನಷ್ಟಗಳುಂಟಾಗುತ್ತಿದ್ದರೂ, ಅವನು ಅವುಗಳಿಂದ ದುಃಖಿತನಾಗದೆ ಸೃಷ್ಟಿಸೌಂದರ್ಯದಿಂದುಂಟಾಗುವ ಆನಂದದಲ್ಲಿ ಮೈಮರೆಯುತ್ತಿರುವನು. ಆ ಆನಂದದ ಆವೇಶದಲ್ಲಿ ಹೃದಯದಲ್ಲುಂಟಾದ ತಾತ್ವಿಕ ಭಾವನಾ ತರಂಗವು ಬಾಯಿಂದ ಸವಿನುಡಿಯ ರೂಪದಿಂದ (ಕಾವ್ಯವಾಗಿ) ಹೊರಬೀಳುವುದು. ಜಗತ್ತಿನಲ್ಲಿರುವ ಸಹೃದಯರು ಅವನ ಸವಿನುಡಿಯ ಸವಿಯನ್ನು ಸವಿದು ತಾವೂ ಆನಂದದಿಂದ ಮೈಮರೆವರು. ಋಷಿಪದವಾಚ್ಯನಾದ ಇಂತಹ ಕವಿಯ ವಾಣಿಯನ್ನೇ ವ್ಯಾಕರಣಾದಿ ಶಾಸ್ತ್ರಗಳು ಬೆನ್ನಟ್ಟಿವೆ. ಪ್ರಯೋಗ ಶರಣರಾದ ವೈಯಾಕರಣಿಗಳಿಗೂ "ಅಸ್ಮಿನ್ ವಿಷಯೇ ಋಷಿವಚನಮೇವ ಪ್ರಮಾಣಂ" ಎಂಬ ಇತರ ಶಾಸ್ತ್ರಕಾರರಿಗೂ ಕವಿಯ ಸ್ವತಂತ್ರ ವಾಣಿಯೇ ಆಧಾರ. ಕವಿ ವಾಣಿಯು 'ನಿಯತಿಕೃತನಿಯಮರಹಿತವೂ ಆಲ್ಹಾದೈಕಮಯವೂ ಅನನ್ಯ ಪರತಂತ್ರವೂ ನವರಸ ರುಚಿಕರವೂ ಆದ ನಿರ್ಮಿತಿಯನ್ನು (ನವಸೃಷ್ಟಿಯನ್ನು) ನಿರ್ಮಿಸುವುದು ಎಂದು ಕಾವ್ಯ ಪ್ರಕಾಶಕಾರನು ಹೇಳಿದುದು ಯಥಾರ್ಥವಿರುವುದು ಕವಿ ದೃಷ್ಟಿಯನ್ನು ಕಲ್ಪಿತ ಸೃಷ್ಟಿಯೆಂದು ನಾನು ಕರೆಯುವೆನು. ಅದನ್ನು ಹಾಗೆ ಕರೆಯದೆ ಆತ್ಮೋದ್ಧಾರದ ತಾತ್ವಿಕಸೃಷ್ಟಿಯೆಂದು, ಕರೆಯುವುದು ವಿಹಿತವಲ್ಲವೇ? ಕವಿಯು ತನ್ನ ಕಾವ್ಯ ರಾಜ್ಯದಲ್ಲಿ ನಿರಂಕುಶ ಪ್ರಭುವಾಗಿರುವನು. ತನ್ನಧಿಕಾರ ನಿಯಮಕ್ಕೆ ತನ್ನಂತಃಕರಣ ಪ್ರವೃತ್ತಿಯನ್ನೇ ಪ್ರಮಾಣವೆಂದು ಗ್ರಹಿಸುವನು. ಆದರೆ, ಈ ನಿರಂಕುಶ ಪ್ರಭುತ್ವದ ಉದ್ದೇಶವು ಲೋಕೋದ್ಧಾರವು; ಸ್ವಾರ್ಥ ಸಾಧನೆಯಲ್ಲ.

ಕೊನೆಯ ಮಾತು:—ಭಗವದ್ಗೀತೆಯಲ್ಲಿ ನಮ್ಮನ್ನು ಕರ್ತವ್ಯ ಪರಾಯಣರನ್ನಾಗಿ ಮಾಡುವ ಅನೇಕ ತಾತ್ವಿಕ ವಾಕ್ಯಗಳಿರುವವು. ಆತ್ಮೀಯ ಬಲದಿಂದ ಸುಖಸಂಪತ್ತುಗಳನ್ನು ಪಡೆಯುವ ಈ ನವನಾಗರಿಕತೆಯ ಕಾಲದಲ್ಲಿ ನಮಗೆ ಬೇಕಾಗಿರುವ ಗೀತೋಕ್ತಿಯೆಂದರೆ— 'ಉದ್ಧರೇದಾತ್ಮನಾತ್ಮನಂ ನಾತ್ಮಾನಮವಸಾದಯೇತ್', ಎಂಬುದೇ ತಾನು ತನ್ನ ಉದ್ಧಾರವನ್ನು ಮಾಡಿಕೊಳ್ಳತಕ್ಕದ್ದು; ತಾನು ತನ್ನನ್ನು ಅಧೋಗತಿಗೆ ತಳ್ಳಕೂಡದು. ಎಂಬುದೇ ಈ ಸೂಕ್ತಿಯ ಭಾವಾರ್ಥವು. ಈ ಸೂಕ್ತಿಯಲ್ಲಿರುವ 'ತಾನು, 'ತನ್ನ' ಎಂಬ ಮಾತುಗಳು ವ್ಯಕ್ತಿಗೆ ಸಂಬಂಧಿಸಿರುವುದಲ್ಲದೆ ಸಮಾಜ ದೇಶ ಮೊದಲಾದವುಗಳಿಗೆಲ್ಲಾ ಅನ್ವಯಿಸುತ್ತಿರುವವು.

ಭೂಲೋಕದಲ್ಲಿ ಜನ್ಮವೆತ್ತಿದ ಪ್ರತಿಯೊಂದು ವ್ಯಕ್ತಿಗೂ ತನ್ನಾತ್ಮೋದ್ಧಾರದ ಹಕ್ಕು ಜನ್ಮ ಸಿದ್ಧವಾಗಿರುವುದು. ಆತ್ಮೋದ್ಧಾರಕ್ಕಾಗಿಯೇ ವ್ಯಕ್ತಿಯ ಜನ್ಮಗ್ರಹಣವಿರುವದು. ಇದೇ ಈಶ್ವರನ ಸಂಕಲ್ಪವು. ಈ ಸಂಕಲ್ಪಕ್ಕನುಸರಿಸಿ ಪ್ರತಿಯೊಂದು ವ್ಯಕ್ತಿಯು ತನ್ನಾತ್ಮೋದ್ಧಾರವನ್ನು ಮಾಡಿಕೊಳ್ಳುವುದೇ ಧರ್ಮವು. ವ್ಯಕ್ತಿಯು ತನ್ನ ಆಲಸ್ಯಾದಿ ದೋಷದಿಂದ ಅಧಃಸ್ಥಲಕ್ಕೆ ಬಿದ್ದು ಇತರರಿಗಿಂತಲೂ ತಾನು ಕಿಮ್ಮಿಯೂ ಆತ್ಮೋದ್ಧಾರ ಮಾಡಿಕೊಳ್ಳಲಿಕ್ಕೆ ಅನಧಿಕಾರಿಯೂ ಎಂದು ತಿಳಿದುಕೊಳ್ಳುವುದೇ ಅಧರ್ಮ.

ಈ ಆತ್ಮೋದ್ಧಾರಕ್ಕೆ— ಆತ್ಮವಿಕಾಸಕ್ಕೆ- ಸ್ವಾವಲಂಬನ, ಸ್ವಪ್ರಯತ್ನ, ಸ್ವಕರ್ತವ್ಯ ದಕ್ಷತೆ ಮೊದಲಾದವುಗಳೇ ಮುಖ್ಯ ಸಾಧನಗಳು. ವ್ಯಕ್ತಿಯಂತೆ ಸಮಾಜದ ಅಥವಾ ದೇಶವೇ ಮೊದಲಾದುದರ ಉದ್ಧಾರವಾಗಬೇಕಾದರೆ ಆಯಾ ಸಮಾಜದವರಿಂದಲೂ ಆಯಾ ದೇಶದವರಿಂದಲೂ ಆಗುವಂತೆ ಇತರರಿಂದ ಆಗಲಾರವೆಂಬುದು ಅನುಭವದ ಮಾತಾಗಿದೆ. ಕನ್ನಡಿಗರಾದ ನಾವು ನಮ್ಮ ನಾಡಿನ ಮತ್ತು ಭಾಷೆಯ ಉದ್ಧಾರವನ್ನು ನಾನೇ ಮಾಡಿಕೊಳ್ಳಬೇಕಾಗಿದೆ. ನಾವೆಲ್ಲರೂ ಒಗ್ಗಟ್ಟಾಗಬೇಕು. 'ಉದ್ಧರೇದಾತ್ಮನಾತ್ಮಾನಂ' ಎಂಬ ವಾಕ್ಯವನ್ನು ಮೂಲಮಂತ್ರವಾಗಿಟ್ಟುಕೊಂಡು ನಮ್ಮ ಭಾಷೆಯ ಮತ್ತು ಸಾಹಿತ್ಯದ ಉದ್ಧಾರಕ್ಕೆ ತಕ್ಕ ಆತ್ಮಶಕ್ತಿಯನ್ನು ನಮಗೆ ಪರಮಾತ್ಮನು ಅವಶ್ಯವಾಗಿ ಅನುಗ್ರಹಿಸುವನು.

ಶ್ರೀ ಬಸವಾದಿ ಪ್ರಮಥರ
ವಚನ ಪ್ರವಚನ ಮಾಲಾ
ಧಾರವಾಡ.

ಧಾರವಾಡದ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಇದೇ ಬರುವ ಮಾಘ ಶುದ್ಧ ಪ್ರತಿಪದೆಯಿಂದ ೧೫ ದಿವಸ ಪ್ರತಿನಿತ್ಯ ಸಾಯಂಕಾಲ ವೀರಶೈವ ವಿದ್ವಾಂಸರಿಂದ ವಚನ ಪ್ರವಚನ ನಡೆಯುವಂತೆ ಗೊತ್ತುಮಾಡಿದ್ದಾಗಿದೆ.

ಈ ಪ್ರವಚನವನ್ನು ಸಾಗಿಸಲು ಅನೇಕ ವಿದ್ವಾಂಸರಿಗೆ ಈ ಮುಂಚೆಯೇ ಬರೆದುಕೊಂಡಿದ್ದಾಗಿದೆ. ಈ ವರೆಗೆ ಒಳ್ಳಾರಿಯ ಶ್ರೀ ವಿದ್ವಾನ್ ವೈ. ನಾಗೇಶ ಶಾಸ್ತ್ರಿಗಳವರು, ಬಾಗಲಕೋಟೆಯ ಪಂಡಿತ ಕಲಿಗಣನಾಥ ಶಾಸ್ತ್ರಿಗಳವರು, ಆಲಮಟ್ಟಿಯ ಶ್ರೀ. ಹರ್ಡೇಕರ ಮಂಜಪ್ಪನವರು ಪ್ರವಚನ ಮಾಡಲು ಬರುವುದಾಗಿ ತಿಳಿಸಿದ್ದಾರೆ. ಇನ್ನೂ ಅನೇಕ ಮಹಾಶಯರು ಬರುವವರಿದ್ದಾರೆ.

ವಿದ್ವಾಂಸರಾದ ಪ್ರವಚನ ಕಾರರೂ ವಚನಗಳ ತತ್ವಗಳನ್ನರಿತುಕೊಳ್ಳಬೇಕೆಂಬ ಮಹನೀಯರೂ ಸಕಾಲಕ್ಕೆ ಆಗಮಿಸಿ ಈ ಪ್ರವಚನಮಾಲೆಯು ಫಲಕಾರಿಯಾಗುವಂತೆ ಮಾಡುವರೆಂದು ನಂಬಿದ್ದೇನೆ.

ಮುಟ್ಟ ಶಿವಪ್ಪ
ಸೆಕ್ರೆಟರಿ.

ಧಾರವಾಡದ ಲಿಂಗರಾಜ ಚಿತ್ರಕಲಾ ಪ್ರೆಸ್ಸಿನ ಯಜಮಾನರು ತಮ್ಮ ಮುದ್ರಣ ಯಂತ್ರದಲ್ಲಿ ಅಚ್ಚುಮಾಡಿದ ನಾ| ದಿ| ಬ| ಕಂಬಳಿಯವರ ಭಾವ ಚಿತ್ರವನ್ನು ಈ ಸಂಚಿಕೆಯಲ್ಲಿ ಹಂಚಿಸಿದ್ದಾರೆ. ಮ್ಯಾನೇಜರ್.

ಸ್ವಾಗತಾಧ್ಯಕ್ಷರಾದ,

ಶ್ರೀ ಪಾವಟೆ ಸಿದ್ಧರಾಮಪ್ಪನವರ ಭಾಷಣ

(ಕಳೆದ ಸಂಚಿಕೆಯಿಂದ ಮುಂದುವರಿದುದ

ಕರ್ನಾಟಕ ಸರಸ್ವತಿಯ ವಿಪತ್ತು— ದೈವ ಘಟನೆಯಿಂದಾದ ಪರಸಂಸ್ಕೃತಿಗಳ ದಾಳಿಯು ಮಿರಲಾಗದ ಗಂಡಾಂತರವಾಯಿತು. ಕುತ್ತು ಕವಿದು ಬಂದಿತು. ಉತ್ತರಭಾರತವನ್ನು ತುತ್ತುಗೊಂಡ ಪರದೇಶದನರ ಪರಸಂಸ್ಕೃತಿಯು ದಕ್ಷಿಣ ಭಾಂತವನ್ನು ತನ್ನ ದವಡೆಯಲ್ಲಿಕ್ಕಿತು. ದ್ವಾರಸಮುದ್ರವು, ಹಳೇ ಬೀಡು ಹಾಳಾದ ಬಳಿಕ ವಿಜಯನಗರವು ಕನ್ನಡಿಗರ ಕೆಚ್ಚಾಳುತನದ ಬಲುಮೆಯಿಂದ ಕರಾಲಕಾಲನಿಗಿದಿರಾಗಿ ನಿಂದುದಾದರು ತಾಳಿಕೋಟೆಯ ಕಾಳಗದಲ್ಲಿ ತಳದೂಳಿಯಾಯಿತು. ಅಂದಿನಿಂದ ಅದೇಕೆ ಅದಕ್ಕೆ ಮೊದಲಿಂದ ಪರ ಸಂಸ್ಕೃತಿಯು ನಮ್ಮ ಕನ್ನಡಿಗರ ಬಾಳುವೆಯ ನುಣ್ಪು ಗುಣ್ಪುಗಳನ್ನು ತಡವಿತ್ತು. ಆಗ ನಮ್ಮ ಮನೆವಾಳ್ತೆಯು ಸಿಡಿದೊಡೆದು ಬೇರೆ ನಿಂದುದರಿಂದ ಪರಕೀಯ ಸಂಸ್ಕೃತಿಯ ಆಘಾತವು ನಮ್ಮ ರಾಜ್ಯನಿರ್ವಾಹ ಪದ್ಧತಿಯಲ್ಲಿ ವಿಶೇಷವಾಗಿ ಆಯ್ತು. ನಮ್ಮ ಶಿಲ್ಪ ಕಲೆಯು ಹಿಂದು ಸರಿಯಿತು. ಪರಕೀಯ ಶಿಲ್ಪವು ಏರಿತು. ಧಾರ್ಮಿಕ ವಿಚಾರದಲ್ಲಿಯು ಒಂದು ಬಗೆಯ ಅದಲುಬದಲುಗಳಾದುವು. ಗೃಹ್ಯ ಜೀವನದಲ್ಲಿಯು ಹಲವು ಪರಕೀಯ ರೂಢಿಗಳು ನೆಲೆಯಾದುವು.

ವಿಜಯನಗರದ ಸಾಮ್ರಾಜ್ಯವಳಿದ ಬಳಿಕ ಕಾಯ್ವರಿಲ್ಲದೆ ಕಂಗೆಟ್ಟ ಭಾರತ ಸಂಸ್ಕೃತಿಯನ್ನು ಶಿವಾಜಿಯು ಜೋಕೆಗೆಯ್ದನು. ಮುಸಲ್ಮಾನರ ಆಳಿಕೆಯಿಂದ ಬಿಡುಗಡೆಯೊಂದಿದ ಭಾರತ ದೇಶವು ಮಹಾರಾಷ್ಟ್ರರನ್ನು ಒಂದು ತೆರನಾದ ಗೌರವದಿಂದ ಕಾಣುವುದು ಸಾಜವಾಗಿದ್ದಿತು. ಕನ್ನಡ ನಾಡು ಮಹರಾಷ್ಟ್ರರ ಕೈಗೆ ಬಂದು ಅವರಾಡಳಿತಕ್ಕೆ ಸೇರಿದ ಬಳಿಕ ಮಹಾರಾಷ್ಟ್ರರ ನಡೆನುಡಿಗಳು ನಮ್ಮ ನಡೆನುಡಿಗಳನ್ನು ಮಾರ್ಪುಗೊಳಿಸಹತ್ತಿದುವು. ಮಹಾರಾಷ್ಟ್ರರು ಭಾರತ ಭೂಮಿಜರಾದುದರಿಂದ ಅವರ ಬಳಕೆಗಳು ನಮ್ಮ ಮನೆಗಳಲ್ಲಿಯೂ ಹೇರಳವಾಗಿ ಬಂದುವು. ನಮ್ಮ ಕನ್ನಡವು ಮೂಲಿಗೆ ಸರಿದು ಮರಾಠರ ಮರಾಟೆಯು ನಮ್ಮ ತಾಯಿ ಮಾತಿಗಿಂತ ಇನಿದಾಯ್ತು. ರಾಜ್ಯ ನಿರ್ವಾಹದಲ್ಲಿಯೂ ಗೃಹ್ಯಗಳಲ್ಲಿಯೂ ವ್ಯಾಪಾರೋದ್ಯಮಗಳಲ್ಲಿಯೂ ಮರಾಟೆಯು ಬಂದಿತು.

ಪೂರ್ವದ ಚಾಳುಕ್ಯರು, ರಾಷ್ಟ್ರಕೂಟರು, ಕದಂಬರು, ಹೊಯ್ಸಳರು ಪಿರಿದೊಂದಕ್ಕರದಿಂದ ನಡಿಸಿದ ಕನ್ನಡ ಸರಸತಿಯು ವಿಜಯನಗರದ ಸಾಮ್ರಾಜ್ಯದಲ್ಲಿ ಹೊಸ ತೌರುಗಂಡು ಅದರಳವಿನಿಂದ ಬಳಲುತ್ತಿರಲು ಕರ್ನಾಟಕದ ದಕ್ಷಿಣ ರಾಜವಂಶಗಳು ಆಕೆಯ ಪಾಲನವನ್ನು ಕೈಕೊಂಡುವು. ಕೆಳದಿಯ ಸಂಸ್ಥಾನವೂ ಮೈಸೂರು ಸಂಸ್ಥಾನವೂ ಕನ್ನಡದ ಕವಿಗಳಿಗೂ ಕಲಾಭಿಜ್ಞರಿಗೂ ಕನ್ನಡದ ಸಂಸ್ಕೃತಿಗೂ ಪಾಲನಶಾಲೆಗಳಾದುವು. ದೈವವಿಲಾಸದಿಂದ ಕೆಳದಿಯು ಅಳಿದ ಬಳಿಕ ಮೈಸೂರು ರಾಜವಂಶವು ಕರ್ನಾಟಕ ಸರಸ್ವತಿಯ ಒಂದೆ ಒಂದು ಆಲಂಬನವಾಯಿತು. ಹದಿನೇಳನೆಯ ಶತಕದಿಂದಿತ್ತಿನ ವಾಙ್ಮಯವು ಮೈಸೂರು ಅರಸರು ಬೆಳೆಸಿದ ಉದ್ಯಾನವಹುದು. ಈ ಸಾಹಿತ್ಯ ಪರಿಪತ್ತು ಘನತೆ ಪಡೆದ ಮೈಸೂರು ಯುವರಾಜರವರ ಕೃಪಾಕಟಾಕ್ಷ ವರ್ಷಪೋಷಿತ ಸಸ್ಯವಾಗಿದೆ.

ಆದರೇನು? ಕನ್ನಡದ ಹೆಜ್ಜೆಯು ಮುಂದುವರಿದಿಲ್ಲ. ಅರಬ ಸಂಸ್ಕೃತಿಯು ಮುಟ್ಟಲಸದಳವಾದ ನಮ್ಮ ಪುರಾತನ ಪದ್ಧತಿಗಳ ಮತ್ತು ಬಳಕೆಗಳ ಬುಡದಳವನ್ನು ಆಂಗ್ಲ ಸಂಸ್ಕೃತಿಯು ಕಲಕುತ್ತಲಿದೆ. ಪ್ರಾಚೀನ ಧರ್ಮಕಲ್ಪನೆಗಳು ನಮ್ಮ ಹೃದಯದಿಂದ ದೂರಾಗುತ್ತಲಿವೆ. ನಮ್ಮ ವಿಚಾರ ಪರಂಪರೆಗಳು ಹೊಸ ವಿಚಾರಗಳಿಗೆ ನೆಲೆಗೊಡುತ್ತಲಿವೆ ನಮ್ಮ ಕುಟುಂಬದ ಬಾಳುವೆಯು ಮೊದಲಿನ ಬಳಿಗೆಡುತ್ತಲಿದೆ. ನಮ್ಮ ಹಳ್ಳಿಗರು 'ಹೊತ್ತು, ವರೆಯುತ್ತ 'Time' ನೆನೆಯುತ್ತಿಹೆವು. 'ಉಟವನ್ನ' 'Meals' ಎಂದೆಂಬೆವು. ಈ ನುಡಿಗಳು ನಮ್ಮ ನಡೆಗಳು ಹೊಂದುತ್ತಿರುವ ಕ್ರಾಂತಿವೇಗದ ದರ್ಶಕಗಳಾಗಿವೆ.

ಶಾಂತಿಮಯ ಭಾರತ ಸಂಸ್ಕೃತಿ.

ಇದರಿಂದಾವ ಹಾನಿ? ಕೇವಲ ತನ್ನದೆಂಬ ಎರಕದಿಂದ ಸವ್ಳಳುಭಾವಿಯ ನೀರುಗುಡಿವನು ಹೆಡ್ಡನೆನಬಹುದು. ಹಾಗಲ್ಲ; ಈ ಫಲವ್ಯಕ್ಷಗಳಿಂತೊ ಸಸ್ಯತತಿಯಂತೊ ಅಂತೆ ಸಂಸ್ಕೃತಿಗಳು ಕ್ಷೇತ್ರ ವಿಶೇಷವನ್ನು ಬಯಸುವುವು. ಸಹಜ ಸಂಸ್ಕೃತಿಯು ಒಂದೊಂದು ನಾಡಿನ ವಾಕೃತಿಕ ಸನ್ನಿವೇಶಗಳನ್ನೂ ಪೂರ್ವೇತಿಹಾಸವನ್ನೂ ಅವಲಂಬಿಸುವುದು. ಒಂದೊಂದು ಜನತಾವಿಶೇಷವು ತನ್ನ ಸಂಸ್ಕೃತಿಯಿಂದಲೆ ಬದುಕಿಹುದು. ಕಾರಣಾಂತರಗಳಿಂದ ಸಂಸ್ಕೃತಿಯಳಿದು ಜನವುಳಿದರೆ ಆ ಜನವು ಜೀವಿಸಿದಂತಲ್ಲ. ಇದೆಲ್ಲಕ್ಕು ಹಿರಿದು ನಮ್ಮ ಸಂಸ್ಕೃತಿಯು ಜಗತ್ತಿನ ಬೇರೆ ಸಂಸ್ಕೃತಿಗಳಿಗಿಂತ ಆಧ್ಯಾತ್ಮಿಕವಾಗಿಹುದರಿಂದ ಮಾನವ ಕುಲದ ಶಾಂತಿ ಸಮಾಧಾನಗಳಿಗೆ ಒಂದೆ ಒಂದು ಸಾಧನವಹುದು. ಬಹಿರ್ಮುಖ ಸಂಸ್ಕೃತಿಗಳಿಂದ ಶಾಂತಿ ಸಮಾಧಾನವೂ ಜೀವನಕ್ಕೆ ಹಿತವಾದ ವ್ಯವಹಾರ ವಿನಿಮಯವೂ ಉಂಟಾಗದೆಂಬುದಕ್ಕೆ ಸದ್ಯದ ಜಗತ್ತಿನ ಕದಡಿದ ಸ್ಥಿತಿಯು ದೃಶ್ಯವಾಗಿದೆ. ನಮ್ಮ ಸಂಸ್ಕೃತಿಯು ಅಣಬೆಯಂತೆ ಆಗಲೆ ತೋರಲಿಲ್ಲ. ವೇದಾಗವು ಕಾಲಗಳಿಂದ ಋಷಿಗಳೂ ರಾಜರ್ಷಿಗಳೂ ಸಾಧು ಸತ್ಪುರುಷರೂ ವೀರರೂ ಶೀವ್ರತಾಮಣಿಗಳೂ ವೀರಮಾತೆಯರೂ ಸ್ವಕರ್ತವ್ಯದಕ್ಷತೆಯಿಂದಿದನ್ನು ಬಲಿಸಿದರು.

ಪೂರ್ವ ಕಾಲದಲ್ಲಿ ರಾಮಾಯಣ ಭಾರತಾದಿ ಯುದ್ಧಗಳಿಂದಲೂ ಇತ್ತಿನ ಹೊತ್ತಿನಲ್ಲಿ ಧರ್ಮ ಧರ್ಮಗಳ ಹೋರಾಟದಿಂದಲೂ ನಾವು ಮಣ್ಣು ಪಾಲಾದುದರಿಂದ ಭಾರತ ಸಂಸ್ಕೃತಿಯಂದೇನು ಪಿರಿದುತನ? ನೆನಬಹುದು. ಆವ ಸಂಸ್ಕೃತಿಯಾದರು ಸಂಸ್ಕೃತಿ ಘಾತಕ ಸಂದರ್ಭಗಳೊದಗಿದಾಗ ಆಥವಾ ಕೆಳಗಿನವರನ್ನು ಮೇಲಿನವರು ಹಿಂಡುತ್ತಿರುವಾಗ ಆ ಸಂಸ್ಕೃತಿಯು ತಕ್ಕ ಮಾರ್ಪಾಟುಗಳನ್ನು ಹೊಂದುವಾಗ ದೇಹದೋಷಗಳು ಜ್ವರವೆನಿಸುವಂತೆ ಹೋರಾಟಗಳಾಗುವುವು. ಆ ಹೋರಾಟಗಳು ಸಂಸ್ಕೃತಿಯ ಜೀವಚೈತನ್ಯದರ್ಶಕಗಳಾಗಿವೆ. ಅದು ದೋಷಗಳನ್ನು ನೀಗಿ ನವೀನ ಚೈತನ್ಯವನ್ನು ಪಡೆವ ಬೇನೆಗಳಾಗಿವೆ. ಇದರ ಊಹಾಪೋಹದಿಂದ ಸಿದ್ಧಾಂತಸ್ಥಾಪನೆಗಿದು ಇಂಬಲ್ಲ.

ಬಸವಣ್ಣನವರ ವಚನಗಳೂ ಸಾಹಿತ್ಯದಲ್ಲಿ ಅವುಗಳ ಸ್ಥಾನವೂ.

(ಲೇಖಕರು:— ಶ್ರೀ. ಸಂಗಪ್ಪ ಸಾಸನೂರು ಬಿ ಎ. ಎಲ್. ಎಲ್. ಬಿ. ವಕೀಲ ಬಾಗಲಕೋಟೆ.)

(೧)

ಈ ವರೆಗೆ ಬಸವಣ್ಣನವರ ವಚನಗಳ ಮೇಲೆ ಅನೇಕ ಲೇಖನಗಳು ಪ್ರಕಟವಾಗಿರುವವು. ಆದರೆ, ಅವೆಲ್ಲ ಬಹುತರವಾಗಿ ಧಾರ್ಮಿಕ ದೃಷ್ಟಿಯಿಂದ ಬರೆದವುಗಳು. ಸಾಹಿತ್ಯ ದೃಷ್ಟಿಯಿಂದ ಈ ವಚನಗಳ ಮಹತ್ವವನ್ನು ಎಷ್ಟಿದೆಯೆಂದೂ ಆ ಕಡೆಗೆ ಸಾಹಿತಿಗಳು ಲಕ್ಷ ಕೊಡಲೆಂದೂ ಸದ್ಯಃ ಈ ಪ್ರಸಾಪ್ತಾವನೆಯನ್ನು ಎತ್ತಿದ್ದಾಗಿದೆ.

ಬಸವ ಜಯಂತಿಯ ಹೋದ ಸಮಾರಂಭದಲ್ಲಿ ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳೂ, ಆಧುನಿಕ ಸಾಹಿತ್ಯದ ಮಾರ್ಗದರ್ಶಕರೂ ಆದ ಶ್ರೀ. ಬಿ ಎಂ. ಶ್ರೀಕಂಠಯ್ಯನವರು ಬಾಗಲಕೋಟೆಯ ನಾಗರಿಕರಿಂದ ಆಮಂತ್ರಿತರಾಗಿ ಆ ಮಹಾನುಭಾವರ ವಿಷಯದಲ್ಲಿಯೂ, ಅವರ ವಚನಗಳ ವಿಷಯವಲ್ಲಿಯೂ ಒಳ್ಳೇ ಚಿತ್ತಾಕರ್ಷಕ ಭಾಷಣವನ್ನು ಮಾಡಿದರು, ತಮ್ಮ ಭಾಷಣದ ಸಮಾರೋಪಣದಲ್ಲಿ ಅವರು:—"ಮಹಾತ್ಮ ಗಾಂಧಿಯವರ ತತ್ವಾನ್ವೇಷಣದಲ್ಲಿ ನಮ್ಮ ಚಿತ್ತವು ಸಹಜವಾಗಿ ಮಹಾನುಭಾವ ಬಸವಣ್ಣನವರ ಕಡೆಗೆ ಹೊರಳುವಂತೆ; ಈ ಕಾಲದ ಸಾಹಿತಿಗಳಾದರೋ ತಮ್ಮ ಸ್ಫೂರ್ತಿಯನ್ನು ಬಸವಣ್ಣನವರ ವಚನಗಳಲ್ಲಿ ಕಂಡುಕೊಳ್ಳಲಿ" ಹೀಗೆಂದು ಹೇಳಿದರು. ಈ ಮಾತಿನ ಗೂಢವಿನ್ಯೆ, ಆ ಮಹಾನುಭಾವರ ವಚನಗಳ ಅಭ್ಯಾಸವು ಆಧುನಿಕ ಸಾಹಿತ್ಯದ ಕೇವಲ ದಿಗ್ದರ್ಶಕ ದೃಷ್ಟಿಯಿಂದ ಅತ್ಯಂತ ಮಹತ್ವವಾದುದು.

ವಚನಕಾರರ ಸಾಹಿತ್ಯವನ್ನು ಉಜ್ಜಿ, ಅಂದಗೊಳಿಸಿದ ರಾ. ಸಾ. ಹೇಳಕಟ್ಟಿ ಫಕೀರಪ್ಪನವರಿಗೂ, ಬಸವ ಚರಿತೆಗೆ ಕುಂದುಬರದಂತೆ ಮಾರ್ಪಡಿಸಿದ ಶ್ರೀಯುತ ಹರ್ಡೀಕರ ಮಂಜಪ್ಪನವರಿಗೂ ಮುಷ್ಕಿಕಾ ನಮ್ಮ ಸಮಾಜವು ಅತ್ಯಂತ ಋಣಿಯಾಗಿರುವುದು. ಅವರಂತೆ ಆಧುನಿಕ ಸಾಹಿತಿಗಳಾದರೂ ಆ ಮಹಾನುಭಾವರ ವಚನಗಳನ್ನು ಸಾಹಿತ್ಯ ದೃಷ್ಟಿಯಿಂದ ಸರಾಸರಿಸಿ, ಕನ್ನಡಿಗರೆಲ್ಲರಿಗೂ ಅಮೃತಪಾನೀಯವಲ್ಲಿ! ಎಂಬುದೇ ನಮ್ಮ ಹಾರೈಕೆ.

(೨)

ವಚನಕಾರರ ಸಾಹಿತ್ಯವು, ಜೈನರ ಪೌರಾಣಿಕ ಸಾಹಿತ್ಯ ಯುಗದ ಪಟ್ಟದಿಯ ಸರಸ ಸಾಹಿತ್ಯ ಯುಗದ ನಡುವಿನ ಕಾಲದಲ್ಲಿ ಉದ್ಭವವಾದುದು. ಹೀಗೆ ಇದು ಸಂಕ್ರಮಣ ಸಮಯಕ್ಕೆ ಸಂಬಂಧಿಸಿದುದು. ಆ ಸಮಯಕ್ಕನುಸರಿಸಿ ಬಂಧನದ ಕಟ್ಟು ನಿಯಮಗಳು ವಚನಕಾರರಲ್ಲಿ ಇರಲಿಲ್ಲ. ವೇದ ಕಾಲದ ಋಷಿಗಳು ಸ್ವಯಂಸ್ಫೂರಿತರಾಗಿ ಉಸುರಿಸಿದ ಮಂತ್ರಗಳಂತೆ, ನಮ್ಮ ವಚನಕಾರರ ವಚನಗಳು. ಅಲ್ಲಿ ವ್ಯಾಕರಣದ ಕಟ್ಟು ಇಲ್ಲ. ಛಂದಸ್ಸಿನ ತೊಡಕು ಇಲ್ಲ. ಅಲ್ಲಿ ಸ್ವಯಂಸ್ಫೂರ್ತಿಯೂ, ಸ್ವಚ್ಛಂದ ವೃತ್ತಿಯೂ ಕಂಡುಬರುವವು. ವಚನಕಾರರು ಭಾಷಾ ಪಂಡಿತರಲ್ಲ; ಭಾಷಾ ಜನಕರು. ಜೈನರ ಪೌರಾಣಿಕ ಸಾಹಿತ್ಯವು ಕೇವಲ ಪಂಡಿತ ರಂಜಕವಾಗಿದ್ದಿತು. ಆದರೆ ವಚನಕಾರರ ಸಾಹಿತ್ಯವು ಪಂಡಿತ ಪಾಮರರಿಬ್ಬರಿಗೂ ರಂಜಕವಾಯಿತು.

ವಚನಕಾರರ ಸಾಹಿತ್ಯದಲ್ಲಿ ಬಸವಣ್ಣನವರ ವಚನಗಳು ಮೇಲ್ಪಂಕ್ತಿಯಲ್ಲಿ ಸೇರುವುವು. ಶಿವಶರಣರ ವಚನಗಳಲ್ಲಿ ಕಂಡು ಬರುವ ಕಾಠಿಣ್ಯವೂ, ನಿಷ್ಠುರತೆಯೂ, ಉದ್ದಾಮತನವೂ, ಬಸವಣ್ಣನವರ ವಚನಗಳಲ್ಲಿ ಕಂಡು ಬರುವುದಿಲ್ಲ. ಅಲ್ಲಿ ಮಾರ್ದವವೂ, ಮಾಧುರ್ಯವೂ, ಮೆಲುಮಾತೂ ಕಂಡು ಬರುವವು. ಅಲ್ಲಿ ಆತ್ಮದ ತೇಜವು ಬೆಳಗಿರುವುದು; ಅಂತಃಕರಣವು ತುಂಬಿತುಳುಕಿರುವುದು. ಭಕ್ತಿ ರಸವು ಹೊರಹೊಮ್ಮಿರುವುದು. ಈ ವಚನಗಳ ವಿಷಯದಲ್ಲಿ ಶ್ರೀ. ಆಲೂರು ವೆಂಕಟರಾಯರು:—

"ಅವರ ಹೃದಯವು ಕರಗಿ ನೀರಾಗಿ ಅದು ವಚನಗಳ ರೂಪದಲ್ಲಿ ಹರಿದಿದೆ. ಆ ಪ್ರವಾಹದಲ್ಲಿ ಅವರ ವಿಚಾರವು ಬೋರ್ಗರೆಯುತ್ತಿವೆ. ಅಲ್ಲಿ ಅವರ ಅಂತರಂಗದ ಅಲೆಗಳು ನಲಿಯುತ್ತಿವೆ, ತತ್ವ ರತ್ನಗಳು ಥಳಥಳಿಸುತ್ತಿವೆ. ಆ ವಚನಗಳಲ್ಲಿ ನಾವೀನ್ಯವು ಮಿನುಗುತ್ತಿದೆ, ತೇಜವು ತುಳುಕುತ್ತಿದೆ. ಅದು ಅವರ ಮಿದುವಾದ ಒಳ ಎದೆಯ ಒಡನುಡಿಗಳು; ನಂಜಿನ ನಾಲಿಗೆಯ ಬಿರುನುಡಿಗಳಲ್ಲ." ಹೀಗೆ ಹೃದಯಂಗಮವಾಗಿ ಹೇಳಿರುವರು.

ಬಸವಣ್ಣನವರ ವಚನಗಳಲ್ಲಿ ಭಾವ ರಸಗಳು ತುಂಬಿ ತುಳಿಕಿರುವದರಿಂದ, ಈ ವಚನಗಳು ಗದ್ಯವೇ ಎಂಬ ಸಂದೇಹಕ್ಕೂಳಗಾಗುವೆವು. 'ರಸಾತ್ಮಕಮ್ ವಾಕ್ಯಂ ಕಾವ್ಯಂ' ಎಂಬ ಕಾವ್ಯದ ವ್ಯಾಖ್ಯೆಯನ್ನು ನಾವು ಒಪ್ಪುವುದಾದರೆ ಬಸವಣ್ಣನವರ ವಚನಗಳು ಕಾವ್ಯ ಮಾಲೆಯಲ್ಲಿ ಸೇರಲಿಕ್ಕಿಲ್ಲವೇ?

(೩)

ಸರ್ವಜ್ಞನ ವಿಷಯದಲ್ಲಿ 'ಸರ್ವಜ್ಞನ ವಚನಗಳು ಕಾವ್ಯವೇ?' ಎಂಬ ಆಕ್ಷೇಪಣೆಯನ್ನು ಕೆಲವರು ಎತ್ತುವಂತೆ, ನಾವಾದರೂ, ಬಸವಣ್ಣನವರ ವಚನಗಳು ಗದ್ಯವೇ?— ಎಂಬ ಪ್ರಶ್ನೆಯನ್ನು ಇದಿರಡಿಯಲ್ಲಿ ಎತ್ತದಿರಲಾರೆವು. ಸರ್ವಜ್ಞನ ವಚನಗಳು ತ್ರಿಪುಡಿಯ ಎರಕದಲ್ಲಿ ಹೊಯ್ದಂತೆ ಬಸವಣ್ಣನವರ ವಚನಗಳು ಯಾವ ಎರಕದಲ್ಲಿ ಹೊಯ್ದಿಲ್ಲವೆಂಬುದೇನೋ ನಿಜ. ಆದರೂ ಬಸವಣ್ಣನವರ ವಚನಗಳು ಕಾವ್ಯವೆಂದು ಹೇಳಕೊಡುವುದು ಅಸ್ಖಲಿತವೆಂದು ಮುಸ್ತರವಲ್ಲ. ಏಕೆಂದರೆ ಕಾವ್ಯದ ಆತ್ಮ ಪೋಷಕಗಳಾದ ರಸಭಾವಗಳು ಅಲ್ಲಿ ಕಂಡು ಬರುವವು. ಕಾವ್ಯಕ್ಕೆ ರಸದಷ್ಟು ರೂಪವು ಮಹತ್ವವಲ್ಲ. ಕಾವ್ಯ ಕಾಮಿನಿಗೆ ರಸಭಾವಗಳು ನೈಸರ್ಗಿಕ ಸೌಂದರ್ಯದಂತೆ; ರೂಪವು ಉಡಿಗೆ ತೊಡಿಗೆಯಂತೆ; ಕಾವ್ಯಕ್ಕೆ ರೂಪವಿರದಿದ್ದರೂ ಸರಿಯೇ, ಆದರೆ ರಸವು ಬೇಕೇಬೇಕು. 'ಬೈಬಲ್' ಎಂಬ ಕ್ರೈಸ್ತರ ಧರ್ಮಗ್ರಂಥವು ಹೇಗೆ ರಸಭರಿತವಾಗಿದೆಯೋ ಹಾಗೆಯೇ ಈ ವಚನಗಳಾದರೂ ರಸಭರಿತವಾಗಿವೆ. ಬೈಬಲನ್ನು ಕಾವ್ಯದಲ್ಲಿ ಎಣಿಸುವಂತೆ ಈ ವಚನಗಳಾದರೂ ಕಾವ್ಯ ಮಾಲೆಯಲ್ಲಿ ಸೇರುವವು. ಕವಿತ್ವವು (Poetry is emotional Thought) ಅಂದರೆ ಭಾವ ಪರಿಪ್ಲುತವಾದ ವಿಚಾರ ತರಂಗವೇ ಕಾವ್ಯವು. ಎಂದು ಹೇಳಿರುವನು. ಕಾವ್ಯದ ಗುಣವು ಈ ವಚನ

ಳಲ್ಲಿ ಒಡಮೂಡಿರುವ ಕಾರಣ ಇವನ್ನು ನಾವು ಕಾವ್ಯವೆಂದೇ ಕರೆಯುವೆವು. "ಸಮುದ್ರದೊಳಗಣ ಸಿಂಪಿಯಂತೆ ಬಾಯ ಬಿಡು ತಲಿದ್ದೇನೆ. ನೀವಲ್ಲದೆ ಮತ್ತಾರೂ ಎನ್ನವರಿಲ್ಲ ನೋಡಯ್ಯ!" ಹೀಗೆ ಭಾವಪರಿಪ್ಲುತ ರಸಭರಿತ ವಿಚಾರತರಂಗಗಳು ಆ ಮಹಾನುಭಾವರ ವಚನಗಳಲ್ಲಿ ಕಂಗೊಳಿಸುತ್ತಿರಲು ಅವು ಕಾವ್ಯವಲ್ಲವೇ? ಕಾವ್ಯದ ಅತ್ಯಪೇಕ್ಷಕವಾದ ರಸವು ಇಲ್ಲಿ ಯಾವದಿದೆ?

(೪)

ಕಾಳಿದಾಸನಲ್ಲಿ ಶೃಂಗಾರ ರಸವೂ, ಭವಭೂತಿಯಲ್ಲಿ ವೀರ ರಸವೂ, ಹೊರಹೊಮ್ಮಿದಂತೆ ಬಸವನಲ್ಲಿ ಭಕ್ತಿ ರಸವು ಹೊರ ಹೊಮ್ಮಿರುವುದು. ಆತನ ಭಕ್ತಿಯು ಅಚಲವಾದುದು, ಅನಂತವಾದುದು, ಅದಕ್ಕೆ ತುದಿಮೊದಲಿಲ್ಲ. 'ಎನ್ನ ಚಿತ್ತ ನಿಮ್ಮ ಮೇಲೆ, ಲಿಂಗಯ್ಯ, ಎನ್ನ ಭಾವವು ನಿಮ್ಮ ಮೇಲೆ, ಸಂಗಯ್ಯ, ಎಂದು ಹೇಳಿರುವ ಬಸವಣ್ಣನವರ ಜೀವಿತವೆಲ್ಲ ಭಕ್ತಿರಸ ಪೂರ್ಣವಾದುದು. ಆತನ ಆತ್ಮವು ಭಕ್ತಿ ರಸದಲ್ಲಿ ಬೆರೆತು ಸಮರಸವಾಗಿದ್ದಿತು. ಶಿವಶರಣರಲ್ಲಿಯೂ, ಸಂಗಮನಾಥನಲ್ಲಿಯೂ ಆತನ ನಿಷ್ಠೆಯೂ, ಭಕ್ತಿಯೂ, ಅಂತಃಕರಣಪೂರ್ವಕ ಶುದ್ಧವಿದ್ದುದರಿಂದಲೇ, ಆತನ ವಚನಗಳಾದರೋ ಈ ವಿಷಯದಲ್ಲಿ ಒಳ್ಳೆಯ ಹೃದಯಂಗಮವಾಗಿರುವವು. ಇಲ್ಲಿ ಕೆಲವನ್ನು ಉದಹರಿಸುವೆವು.

ಭಕ್ತಿಯಿಲ್ಲದ ಬಡವ ನಾನಯ್ಯ. ಕಕ್ಕಯ್ಯನ ಮನೆಯಲ್ಲಿ ಬೇಡಿದೆ. ಚೆನ್ನಯ್ಯನ ಮನೆಯಲ್ಲಿ ಬೇಡಿದೆ. ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನಿಕ್ಕಿದರೆ, ಎನ್ನ ಪಾತ್ರೆ ತುಂಬಿತ್ತು ಕೂಡಲ ಸಂಗಮದೇವಾ.

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯ, ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ, ಜಗಕ್ಕೆ ಬಲ್ಲಿದ ನೀನು, ನಿನಗೆ ಬಲ್ಲಿದ ನಾನು ಕಂಡಯ್ಯ, ಜಗವು ನಿನ್ನೊಳಗೆ ನೀನು ಎನ್ನೊಳಗೆ; ಕರಿಯು ಕನ್ನಡಿಯೊಳಗೆ ಅಡಗಿದಂತೆ ನೀನೆನ್ನೊಳಡಗಿದೆ ಕೂಡಲ ಸಂಗಮದೇವ.

ಹೀಗೆ ಬಸವಣ್ಣನವರ ಕೂಡಲ ಸಂಗಮದೇವನು 'ಭಕ್ತಿ ಪ್ರಿಯನು' 'ಭಕ್ತಿ ಕಂಪಿತನು' ಆದುದರಿಂದ ಬಸವಣ್ಣನವರು ಮಾನವನು ಶಿವಭಕ್ತನಾಗಿ ಭಕ್ತಿ ಪಕ್ವವಿಲ್ಲದಿದ್ದರೆ, ಕಾಗಿ ಕೋಳಿಗಳಿಗಿಂತ ಕರಕಷ್ಟ ಎಂದು ಹೇಳಿರುವರು.

ಶ್ರೀನಿವಾಸ ಮೂರ್ತಿಗಳು ಭಕ್ತಿ ಭಾಂಡಾರಿ ಬಸವಣ್ಣ ಎಂಬ ಹೃದಯಂಗಮವಾದ ಲೇಖನದಲ್ಲಿ ಆತನ ಮಹಾತ್ಮೆಯನ್ನೂ ಭಕ್ತಿಯನ್ನೂ ತುಲನಾತೀತ ರೀತಿಯಲ್ಲಿ ವಿವರಿಸಿದ್ದಾರೆ. ಆ ಮಹಾತ್ಮರ ಜೀವನ ಚರಿತಕ್ಕೂ ಮತ್ತು ಅವರ ವಚನಗಳಿಗೂ ನಿಕಟವಾದ ಸಂಬಂಧವಿದೆಯೆಂದೂ, ಅಯಾಯ ವಾತಾವರಣವನ್ನು ಕಲ್ಪಿಸಿಕೊಂಡಾಗಲೇ ಆ ಆ ವಚನಗಳ ಭಾವವು ಹೊಳೆಯುವುದೆಂದು ಆ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಬಸವ ಭಕ್ತರು ಅದನ್ನು ಓದುವುದು ಯುಕ್ತವು.

(೫)

ಸಾಹಿತ್ಯವು ಜೀವನದ ಪಡಿನೆಳಲಾಗಿರಬೇಕು. ಈ ದೃಷ್ಟಿಯಿಂದ ಬಸವಣ್ಣನ ವಚನಗಳನ್ನು ಪರಾಮರ್ಶಿಸಿದರೂ, ಅವು ಉತ್ತಮ ಸಾಹಿತ್ಯದಲ್ಲಿ ಗಣನೆಯಾಗುವವು. ಅವರ ವಚನಗಳ ಆಧ್ಯಾಸದಿಂದಲೇ, ಅವರ ಜೀವನ ಚರಿತ್ರೆಗೆ ಅನ್ಯರ ದೂಷಣೆಯಿಂದ ಮುಸುಕಿದ ಮಂಜು ಮರೆಯಾಗುವದೆಂದು ಖಂಡಿತವಾಗಿ ಹೇಳಬಹುದು. ಏಕೆಂದರೆ ಧರ್ಮ ಜೀವನದ ದುರ್ಧರ ಪ್ರಸಂಗಗಳಲ್ಲಿ ಚಡಪಡಿಸಿದ ತೇಜಃಪುಂಜ ಆತ್ಮದ ಕಿರಣಗಳೇ ವಚನರೂಪದಲ್ಲಿ ಹೊರ ಚಲ್ಲಿವೆ. ಅವು ಜನರಂಜನೆಯ ಸಲುವಾಗಿ ಹೊರಪಂಟ ನಟನೆಯ ಉದ್ಗಾರಗಳಲ್ಲ. ಆವನ ಜೀವನದಲ್ಲಿ ಒದಗಿದ ಧರ್ಮ ಸಂಕಟಗಳನ್ನೂ ಆ ಪ್ರಸಂಗಕ್ಕನುಸರಿಸಿ ಹೊರ ಹೊಮ್ಮಿದ ವಚನಗಳನ್ನೂ ಇದರಡಿಯಲ್ಲಿ ಉದಹರಿಸುವೆವು.

ಬಸವನು ಶಿವಶರಣರ ಭಕ್ತನಾಗಿ ಭವಿ ಬಿಜ್ಜಳನ ಸೇವೆಯಲ್ಲಿರುವುದು ಲೇಸೇ ಎಂಬ ಆಕ್ಷೇಪವು ಸೊರಟಾಗ ಬಸವಣ್ಣನವರು ಹೀಗಂದಿರಬೇಕಲ್ಲವೇ?

ಭವಿಯಾದ ಬಿಜ್ಜಳನ ಸಿಂಹಾಸನದ ಕೆಳಗೆ ಕುಳಿತು ಓಲೈಸ ಬಹುದೇ ಎಂದೊಡೆ ಹೊಲೆಹೊಲೆಯರ ಮನೆಯಲ್ಲಿ ಹೊಕ್ಕು ಚನ್ನಾಗಿ ಕೈಕೂಲಿಯನ್ನು ಮಾಡಿಯಾದರೂ ನಿಮ್ಮ ನಿಲುವಿಂಗೆ ನಿಲ್ಲುವೆನೆಲ್ಲದೆ, ಎನ್ನ ಹೊಟ್ಟೆಯ ರಕ್ಷಣಕ್ಕಾಗಿ ಸೇವಿಸಿದೊಡೆ ತಲೆದಂಡ ಕೂಡಲ ಸಂಗಮದೇವಾ.

ಇನ್ನೊಂದು ಪ್ರಸಂಗವನ್ನು ಕಲ್ಪಿಸುವಾ. ಶಿವಶರಣರ ಸೇವೆಯಲ್ಲಯೂ ಜಂಗಮ ದಾಸೋಹದಲ್ಲಿಯೂ ಬಿಜ್ಜಳನ ಭಂಡಾರವನ್ನು ಬಸವನು ಬರಿದಾಗಿ ಮಾಡುತ್ತಾನೆ ಎಂಬ ಚಾಡಿಖೋರರ ದೂಷಣೆಯನ್ನು ಕೇಳಿ ಬಸವನು ಹೀಗಂದಿರಬೇಕಲ್ಲವೇ?

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲಿ, ನಾಳೆ ಅವಿನ ಬೆನ್ನ ಮೇಲೆ ಹರಿಯಲಿ. ಅದೇಕಯ್ಯ, ಲಜ್ಜೆಗೆಡಲೇಕೆ? ನಾಣು ಗೆಡಲೇಕೆ? ಕೂಡಲಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಂಡಾರ ಎನಗೇಕಯ್ಯ?

ಇಂತಹ ಕೆಲವು ಸುಂದರ ಪ್ರಸಂಗಗಳನ್ನು ಕಲ್ಪಿಸಿಕೊಂಡು ಅವನ ಜೀವನ ಚರಿತಕ್ಕೂ ವಚನಗಳಿಗೂ ನಿಕಟವಾದ ಸಂಬಂಧ ವಿದೆಯೆಂದು ತೋರಿಸಬಹುದು. ಈ ವಚನಗಳ ಅಭ್ಯಾಸದಿಂದ ಬಸವನ ಕಾಲದ ಸ್ಥಿತಿ ರೀತಿ ಗಳನ್ನೂ ಶಿವಶರಣರ ಆಚರಣೆಗಳನ್ನೂ ಗುರುತಿಸಬಹುದು. ಇದೊಂದು ಸಾಹಿತ್ಯದ ದೊಡ್ಡ ಗುಣವು. ಈ ಗುಣವು ಬಸವಣ್ಣನವರ ವಚನಗಳಲ್ಲಿ ಕಂಡು ಬರುವದು.

ಇದಲ್ಲದೆ, ಈ ವಚನಗಳಲ್ಲಿ ಅಂತರಂಗದ ಕಳವಳವು ಕಂಡು ಬರುವದು. ಸಂಸಾರದಲ್ಲಿ ಸಿಲುಕಿ ಕಳವಳವನ್ನು ಪಡುವ ಆತ್ಮವು ಆಕ್ರೋಶದು.

ಏನು ಹುರುಳಿಲ್ಲವಯ್ಯ! ಪ್ರಪಂಚಿನ ಡಂಭಿನಲ್ಲಿ ಎನ್ನದೊಂದು ರೂಪವ ಮಾಡಿ ನೀವಿಂಬಿರಿಯಯ್ಯ.

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ ಕಾಯಯ್ಯ!

ಇದಲ್ಲದೆ, ಇವರ ವಚನಗಳು ವಿಷಯಕ್ಕನುಸರಿಸಿರುವುವು. ಮಾಧುರ್ಯದಿಂದ ತುಂಬಿದಂತೆ ಕೆಲವೆಡೆಯಲ್ಲಿ ವೀರ್ಯವತ್ತಾಗಿರುವವು.

ನಾಳೆಬಪ್ಪುದು ನನಗಿಂದೇ ಬರಲಿ; ಇದಕಾರಂಜುವರು? ಇದಕಾರಳುಕುವರು?

ಎನಿಸೆನಿಸೆಂದರೆಯು ನಾಧೃತಿಗೆಡೆನಯ್ಯ; ಎಲುದೋರಿದಡೆ ನರಹರಿದಡೆ ಕರುಳು ಕುಪ್ಪಳಿಸಿದಡೆ; ನಾಧೃತಿಗೆಡೆನಯ್ಯ.

ಇಷ್ಟು ವೀರ್ಯವತ್ತಾಗಿಯೂ ರಸಭರಿತವಾಗಿಯೂ ಹೊರ ಹೊಮ್ಮಿದ ವಚನಗಳು ಉತ್ತಮ ಸಾಹಿತ್ಯದಲ್ಲಿ ಗಣನೆಯಾಗದಿರವು.

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! **ಮಹತ್ವದ ಪುಸ್ತಕ!!**

ಖಾದೀ ಶಾಸ್ತ್ರ.

ಲೇಖಕರು:—ಶ್ರೀ. ಹರ್ಡೀಕರ ಮಂಜಪ್ಪನವರು,
ಪ್ರಕಾಶಕರು ಮತ್ತು ಸಂಪಾದಕರು:— ಶ್ರೀ ಆಲೂರು ವೆಂಕಟರಾಯರು.

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸುಖ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅದನ್ನು ಬಿಟ್ಟದ್ದರಿಂದಲೇ ನಾವು ಹೇಗೆ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಆಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿದೆ.

ಈ ಪ್ರಕಾರ ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣದಿಂದ ಬರೆದುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತೆ ತರಿಸಿಕೊಂಡು ಖಾದಿಯ ವಿಷಯವನ್ನು ಚೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. / **ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.**

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! **ಬರೇ ೬ ತಾಸುಗಳಲ್ಲಿಯೇ ಗುಣ!!**

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಿ ಜನರು ಸಾಯುತ್ತಿರುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಬರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ. ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಪಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತು ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದುದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಆದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಿಬ್ಬರಿಗೆ ಸಾಲುವಷ್ಟು ಔಷಧವನ್ನು ನುರಿತವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹಣದ ಅಡಚಣೆಯು ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ. ವ್ಹೀ. ಪಿ. ಚಾರ್ಜ ಬೇರೆ.

ಅನುಪಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಕ್ಷಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧನೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬರಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡುಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚ್ಯೂ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ಪರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳವು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನೆ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ' ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್, ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦--

ನೀಲೀ ಮಸಿಚೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಜೇಳಿನ ನಾಶ— ೧೧ ,,
೧೨ ತಗಣಿ ರತ್ನ ಬಾಟ್ಲಿ— ೭ ,,
೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆನು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ಜಿ. ವಿಜಾಪೂರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

SANGAM CLOTH STORES
Prop: M. S. Hunasi'gar & Sons,
P.O: TERDAL - 587 315
Dt. Bijapur, (Karnataka)

ಶಾಂತಿ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕ.

ಸಂಪುಟ ೩. ಆಲಮಟ್ಟಿ ಜನವರಿ ತಾರೀಖು ೨೨ ನೆಯ ಸೋಮವಾರ ಸಂಚಿಕೆ ೨೩.

ಭೂದೇವಿಯ ಪ್ರಕೋಪಕ್ಕೆ ಸಾವಿರಾರು ಜನರ ಆಹುತಿ.

P.O: TERDAL
Dt. Bijapur, (Karnataka)

ಧರಣೀಕಂಪನ, ಜಲಪ್ರಳಯ, ಅಗ್ನಿಪ್ರಕೋಪ.

ಮಹಾಭೂತ ಪೀಡಿತರಿಗೆ ಧರ್ಮಾತ್ಮಾ ಮಾಲವೀಜಿಯವರ ಭೂತದಯೆ.

ಕಾಲಸರ್ಪಯೋಗಕ್ಕೆ ಸರಿಯಾಗಿ ಹಿಂದೂಸ್ಥಾನದಲ್ಲಿಯ ಎಲ್ಲ ಭಾಗಗಳಲ್ಲಿ ವಿಶೇಷವಾಗಿ ಬಿಹಾರ ಪ್ರಾಂತದಲ್ಲಿ ಭೂತಗಳ ಪ್ರಕೋಪದಿಂದ ಕಾಲನ ಹಾವಳಿಯೇ ಉಂಟಾಗಿರುವುದು. ಬಿಹಾರ ಪ್ರಾಂತದ ರಾಜಧಾನಿಯಾದ ಪಾಟಲೀ ಪುತ್ರ, ಮುಜಫರಪೂರ, ಚಂಪಾರಣ್ಯ, ಬಾಗಲಪೂರ ಮೊದಲಾದ ಕಡೆಗಳಲ್ಲಿ ಕಟ್ಟಡಗಳೆಲ್ಲ ಉರುಳಿ ಬಿದ್ದು ಸಾವಿರಾರು ಜನರು ಮಡಿದರು. ಲಕ್ಷಾವಧಿ ಜನರು ನಿರಾಶ್ರಿತರಾಗಿದ್ದಾರೆ. ಬಿಹಾರದಲ್ಲಿ ಭೂಮಿಯೊಳಗೆ ೨೦೦ ಜ ಉದ್ದವಿರುವ ಕೊರಕಲುಗಳು ಬಿದ್ದಿವೆ! ಮತ್ತು ಅವುಗಳೊಳ ಂದ ನೀರೂ ಕೆಸರೂ ಹೊರಬೀಳುತ್ತಲಿವೆ. ಪಟ್ಟಣಗಳಲ್ಲಿ ಸುಮಾರು ಹಳ್ಳಿಗಳಲ್ಲಿ ಪ್ರಾಣಹಾನಿಯಾಗಿದ್ದರೂ ಹೊಲಗಳು ಬಹ ವಾಗಿ ಕೆಟ್ಟು ಹೋಗಿವೆ. ಬಾವಿಗಳು ಬಿದ್ದುದರಿಂದ ಕುಡಿಯಲು ೀರು ಸಿಗದಂತಾಗಿದೆ, ಗೋಗರಾ ಎಂಬಲ್ಲಿ ಒಂದು ಉಗಿಬಂಡಿಯ ೇತುವೆಯು ಬಿದ್ದು ಹೋಗಿದೆ. ದರಭಂಗಾ ಮತ್ತು ಮೋಂಗಿ ಗಳಲ್ಲಿ ವಿಶೇಷ ಪ್ರಾಣಹಾನಿಯಾಗಿದೆ. ದರಭಂಗಾದಲ್ಲಿ ಒಂದು ಾವಿರ ಜನರು ಸತ್ತಿರುವರು. ಮೋಂಗೀರದಲ್ಲಿ ಒಂದಾದರೂ ಟ್ಟಡವು ನೆಲಸಮವಾಗದೆ ಉಳಿದಿಲ್ಲ. ಇಲ್ಲಿಯ ಪೇಟೆ ತೋಸಿನ ೂಡತದಿಂದ ದೆಸೆಗೆಟ್ಟು ಹಾಗೆ ತೋರುತ್ತದೆ. ಲಕ್ಷಾವಧಿ ರೂ. ಲೆಯ ಸರಕುಗಳುಳ್ಳ ಅಂಗಡಿಗಳು ಬಿದ್ದು ಹೋದುದರಿಂದ ಸ್ರೀಮಂತ ಜನರು ಸಹ ಹೊದೆದ ಒಂದೇ ಅರಿವೆಯಿಂದ ಚಳಿಯಲ್ಲಿ ದಗುಟ್ಟಿ ನಡಗುತ್ತ ಶರೀರದಲ್ಲೆಲ್ಲ ಗಾಯಗಳಾಗಿರುವುದರಿಂದ ಳಲುತ್ತಿದ್ದಾರೆ. ದಿಲ್ಲಿಯಲ್ಲಿರುವ ಕುತುಬು ಮಿನಾರಕ್ಕೆ ಭೂಕಂಪ ಂದ ಕೆಂಡಿಗಳು ಬಿದ್ದಿವೆ. ಆಗ್ರಾದಲ್ಲಿಯ ತಾಜಮಹಾಲವು ನಡುಗಿ ನಿಂತಿತು. ದಕ್ಷಿಣ ಹೈದರಾಬಾದದಲ್ಲಿಯೂ ಸೋಮವಾ ಮಧ್ಯಾಹ್ನ ೨ ಗಂಟೆಗೆ ಭೂಕಂಪದ ಹೊಡತವುಂಟಾಯಿತು. ಇ ರಿಂದ ಆಲ್ಲಿಯ ಪ್ರಯೋಗ ಶಾಲೆಯ ಭೂಕಂಪ ತೋರಿಸುವ ಮುಳ ಬದಿಗೆ ಸರಿಯಿತು. ವರಂಗಲ ಜಿಲ್ಲೆಯಲ್ಲಿಯೂ ಭೂಕಂಪವುಂಟಾಗಿ

ವಿಪದ್ಗ್ರಸ್ತ ಭಾಗವನ್ನು ಕಂಡುಕೊಳ್ಳಲಿಕ್ಕೆ ವಿಮಾನಗ ಕಳಿಸಲ್ಪಟ್ಟಿವೆ. ಪಟ್ಟಣಗಳ ಹಾಳಾದ ಅಂಗಡಿಗಳ ಸರಕುಗಳನ್ನ ಕಾಯಲು ಸೋಲೀಸರು ನಿಯಮಿಸಲ್ಪಟ್ಟಿದ್ದಾರೆ. ಬಿಹಾರ ಗವ್ಹರ್ನರರು ಮುಜಫರಪುರದ ಅನಾಹುತವನ್ನು ವಿಮಾನಮಾ ವಾಗಿ ಬಂದು ನೋಡಿ ಕೊಂಡರು. ಇನ್ನೂ ಕಂಪವುಂಟಾಗುವ ದೆಂಬ ಭೀತಿಯಿಂದ ಜನರು ಬೈಲಿನಲ್ಲಿಯೇ ಇರುತ್ತಾರೆ. ಫಲ ನದಿಯೊಳಗೇ ಭೂಕಂಪವಾದುದರಿಂದ ನದಿಯನ್ನೇ ಮೇಲ ಎತ್ತಿದಂತಾಗಿ ನದಿಯೊಳಗಿನ ನೀರು ಉಸುಬುಗಳೆಲ್ಲ ಹೊರಚ ಎಷ್ಟೋ ಅನರ್ಥಗಳನ್ನು ಮಾಡಿವೆ.

ನಿರಾಶ್ರಿತ ಮತ್ತು ಗಾಯಪಟ್ಟ ಜನರಿಗೆ ಸಹಾಯ ಮಾಡುವುದಕ್ಕಾಗಿ ಪಂ. ಮದನಮೋಹನ ಮಾಲವೀಜಿಯವರು ಅಖಿ ಭಾರತೀಯ ಪ್ರಯಾಗ ಸೇವಾ ಸಮಿತಿಯವರಿಗೆ ಈ ಭೂತದಯೆಯ ಕಾರ್ಯವನ್ನು ಕೂಡಲೆ ಕೈಕೊಳ್ಳಲು ತಾರಿನಿಂದ ತಿಳಿಸಿರುವರ ಪಂಡಿತಜಿಯವರು ಒಂದು ಅನಾಥ ಫಂಡನ್ನು ಕೂಡಿಸಹತ್ತಿದ ಅದಕ್ಕೆ ಸೇವಾ ಸಮಿತಿಯಿಂದ ೫೦೦೦ ರೂ. ಗಳನ್ನು ಹಾಕಿರುವರ ಮಾಲವೀಜಿಯವರ ನೇತೃತ್ವದಲ್ಲಿ ಕಾಶಿ ಸೇವಾ ಸಮಿತಿಯು ಸ್ಥಾ ಸಲ್ಪಟ್ಟಿದೆ. ಮತ್ತು ವಿಪದ್ಗ್ರಸ್ತ ಬಿಹಾರ ಪ್ರಾಂತಕ್ಕೆ ಕಾಯ ಕರ್ತರನ್ನು ಕಳುಹಿಸಲಾಗಿದೆ.

ಬಸವಣ್ಣನವರು ಅಸ್ಪೃಶ್ಯತಾ ನಿವಾರಕರೇ?



ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ಅವಿಶ್ರಾಂತ ಶ್ರಮಪಡುತ್ತಿದ್ದಾರಷ್ಟೆ. ಈ ಪ್ರಕಾರ ಮಹಾನುಭಾ ಈ ಕರ್ನಾಟಕದಲ್ಲಿ ಪ್ರಯಾಣಿಸಿದ್ದರಿಂದು ಅನೇಕರು ಹೇಳುತ್ತಿದ್ದಾರೆ. ಇಷ್ಟೇ ಅಲ್ಲ; ಆ ಬಸವಣ್ಣನವರ ಅಭಿಪ್ರಾಯದಂತೆಯೇ ವಿಶ್ವೈವರು ಈ ವರೆಗೂ ಆಚರಿಸುತ್ತಾ ಬಂದಿದ್ದರೆ ಕರ್ನಾಟಕದಲ್ಲಾದರೂ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯೇ ಈಗ ಇರುತ್ತಿರಲಿಲ್ಲವೆಂಬಷ್ಟರ ಮಟ್ಟಿಗೆ ಕೆಲವರು ಸಮರ್ಥಿಸಿದ್ದಾರೆ.

ಇಷ್ಟರಲ್ಲೇ ಈ ಉತ್ತರ ಕರ್ನಾಟಕಕ್ಕೆ ಗಾಂಧೀಜಿಯವರು ಆಗಮಿಸುವವರಿದ್ದಾರಷ್ಟೆ. ಆಗ ಅನೇಕರು ಈ ಸಮಸ್ಯೆಯನ್ನು ಗಾಂಧೀಜಿಯವರ ಮುಂದೆ ವ್ಯಕ್ತಗೊಳಿಸಬಹುದಾಗಿಯೂ ತೋರುತ್ತದೆ. ಅದುದರಿಂದ ಈ ಸಂಗತಿಯನ್ನು ಕುರಿತು ಈಗ ವಿಸ್ತಾರವಾಗಿ ಪ್ರಸ್ತಾಪಿಸುವುದೂ ಅಗತ್ಯವಾಗಿದೆ. ಆದಿ ಜನಗಳ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಗಾಂಧೀಜಿಯವರ ಉದ್ದೇಶ ಮತ್ತು ಅಭಿಪ್ರಾಯಗಳಾವುವು? ಬಸವಣ್ಣನವರ ತತ್ವವೇನು? ಎಂಬಂಶಗಳನ್ನು ಸ್ವಲ್ಪ ನೋಡೋಣ.

ಆದಿಜನಗಳ ಸೇವೆಯ ಸಂಬಂಧವಾದ ಗಾಂಧೀಜಿಯವರ ಈಗಿನ ಚಟುವಟಿಕೆಯು ಕೇವಲ ಅಸ್ಪೃಶ್ಯತಾ ನಿವಾರಣೆಯಾಗಿದೆ. ಈ ಜನರನ್ನು ನಾವು ಇತರ ಮನುಷ್ಯರಂತೆಯೇ ತಿಳಿಯಬೇಕು. ಮನುಷ್ಯ ಜಾತಿಗಿರಬೇಕಾದ ಸಾಮಾಜಿಕ ಸ್ವಾತಂತ್ರ್ಯವು ಅವರಿಗೂ ಇರಬೇಕು. ಜನ್ಮದಿಂದ ಒಂದು ವ್ಯಕ್ತಿಯಾಗಲಿ ಅಥವಾ ವ್ಯಕ್ತಿ ಸಮೂಹವಾಗಲಿ ಅಸ್ಪೃಶ್ಯವಾಗಿರುವುದು ದೇವರ ರಾಜ್ಯದಲ್ಲಿ ಮಹಾ ಅನ್ಯಾಯವೇ ಸರಿ. ಇಂಥಾ ದೇಶದಲ್ಲಿ ಅಥವಾ ವರ್ಗದಲ್ಲಿ ಜನ್ಮನೆತ್ತಿದ ಮಾತ್ರದಿಂದ ಅವರೆಲ್ಲರೂ ಅಸ್ಪೃಶ್ಯರೆಂದು ತಿಳಿಯುವದು ಮನುಷ್ಯ ಧರ್ಮಕ್ಕೇನೇ ವಿರೋಧವಾದುದಾಗಿದೆ.

ಹೀಗಿರುವಾಗ ಹಿಂದು ಧರ್ಮದಲ್ಲಿ ಹಿಂದುಗಳೆಂದು ಹೇಳಿಕೊಳ್ಳುವ ಆದಿಜನಗಳನ್ನು ಮುಟ್ಟಬಾರದೆಂಬ ನಿಯಮವಿರುವುದು ಶಕ್ಯನೇ ಇಲ್ಲ. ಹಾಗೆ ನಿಯಮವಿದ್ದರೆ ಅದು ಹಿಂದು ಧರ್ಮಕ್ಕೆ ಕಲಂಕವೇ ಸರಿ. ಬೇರೆ ಹಿಂದುಗಳಿಗಿರತಕ್ಕ ಮುಟ್ಟು ತಟ್ಟುಗಳಿಂದ ದೇವಾಲಯ ಪ್ರವೇಶದ ವರೆಗಿನ ಎಲ್ಲ ಸಾಮಾಜಿಕ ಸ್ವಾತಂತ್ರ್ಯಗಳೂ ಈ ಆದಿಜನಗಳಿಗೂ ಇರಲೇ ಬೇಕಾದುದು ನ್ಯಾಯವಾಗಿದೆ.

ಗಾಂಧೀಜಿಯವರ ಈಗಿನ ಅಸ್ಪೃಶ್ಯತಾ ನಿವಾರಣೆಯಲ್ಲಿ ಮೇಲಣ ಉದ್ದೇಶ ಮತ್ತು ಅಭಿಪ್ರಾಯಗಳು ಮಾತ್ರ ಇವೆಯೇನಾ ಆದಿಜನಗಳ ಸಂಗಡ ಊಟೋಪಚಾರ ಶರೀರ ಸಂಬಂಧ ಮೊದಲಾದ ಯಾವ ಬೇರೆ ಬಳಕೆಗಳನ್ನು ಮಾಡಬೇಕಾದ ವಿಷಯವು ಎಳ್ಳಷ್ಟಾದರೂ ಇಲ್ಲ. ಮತ್ತು ಆದಿಜನಗಳಿಗೆ ಮೇಲೆ ತಿಳಿಸಿದಂತೆ, ಸಾಮಾಜಿಕ ಸ್ವಾತಂತ್ರ್ಯ ದೊರೆಯಬೇಕಾದರೆ ಅವರಿಗೆ ಯಾವ ಧಾರ್ಮಿಕ ಸಂಸ್ಕಾರ ಶುದ್ಧಿಗಳೂ ಅವಶ್ಯಕವಿಲ್ಲ. ಅವರ ಆಹಾರ ಪಾನಗಳಲ್ಲಿ ಸುಧಾರಣೆಯಾದಾಗಲೇ ಸ್ಪರ್ಶಕ್ಕೆ ಅರ್ಹರೆಂಬ ಮಾತಿಲ್ಲ. ಸ್ಪೃಶ್ಯಾಸ್ಪೃಶ್ಯತೆಗಳಿಗೆ ಈ ಧಾರ್ಮಿಕ ಸಂಸ್ಕಾರ ಆಚಾರ ವಿಚಾರಗಳೇನೂ ಸಂಬಂಧವಿಲ್ಲ. ಅವು ಹೇಗಾದರೂ ಇರಲಿ. ಅವರು ಮನುಷ್ಯರಾದುದರಿಂದ ಮನುಷ್ಯ ಜನ್ಮಸಿದ್ಧವಾದ ಸ್ವಾತಂತ್ರ್ಯದಿಂದಲೇ ಅವರು ನಿತ್ಯವನ್ನು ಮುಟ್ಟಲು ಅರ್ಹರಾಗಿದ್ದಾರೆ.

ಈ ಪ್ರಕಾರ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯು ಮೂಢನಂಬಿಕೆಗಳು, ಧರ್ಮ ಸಂಸ್ಕಾರ ಆಚಾರ ವಿಚಾರಗಳನ್ನವಲಂಬಿಸಿರದೆ ಅದು ಕೇವಲ ಮನುಷ್ಯ ಜಾತಿಯ ಸ್ವಾತಂತ್ರ್ಯ ತತ್ವವನ್ನನುಸರಿಸಿದೆಯೆಂಬುದನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು.

ಆದರೆ ಬಸವಣ್ಣನವರ ವಿಚಾರವಾದರೂ ಇದಕ್ಕೆ ತೀರ ಭಿನ್ನವಾಗಿದೆ. ಅವರು ಧಾರ್ಮಿಕ ಸಂಸ್ಕಾರ ಆಚಾರ ವಿಚಾರಗಳನ್ನನುಸರಿಸಿದವರು. ಅವರ ದೃಷ್ಟಿಯಲ್ಲಿ ಎರಡೇ ಜಾತಿಗಳಿವೆ. ಶಿವಭಕ್ತನಾಗಬೇಕು. ಅಂಗದಲ್ಲಿ ಲಿಂಗ ಧರಿಸಬೇಕು. ಶುದ್ಧ ಆಚಾರ ವಿಚಾರ ಶೀಲನಾಗಬೇಕು. ಈ ಪ್ರಕಾರ ಧಾರ್ಮಿಕ ಸಂಸ್ಕಾರ ಆಚಾರ ವಿಚಾರಗಳುಳ್ಳವನಾದರೆ ಆತನು ಭಕ್ತ. ಆತನ ಜನ್ಮವು ಯಾವ ಕುಲದಲ್ಲಿಯೇ ಆಗಿರಲಿ. ಆತನು ಯಾವ ಉದ್ಯೋಗವನ್ನೇ ಮಾಡುತ್ತಿರಲಿ. ಅಂತಹ ಶಿವಭಕ್ತನು ಅಸ್ಪೃಶ್ಯರಲ್ಲಿ ಜನ್ಮನೆತ್ತಿದ್ದರೂ ಆತನಿಗಾಗುವಾದ ಧಾರ್ಮಿಕ ಸಂಸ್ಕಾರ ಆಚಾರ ವಿಚಾರಗಳಿಂದ ಆತನು ಸ್ಪರ್ಶಕ್ಕೆ ಮಾತ್ರವೆ ಅಲ್ಲ; ಸಹಭೋಜನ ಶರೀರ ಸಂಬಂಧಗಳಿಗು ಕೂಡಾ ಅರ್ಹನಾಗುತ್ತಾನೆ.

ಈ ಪ್ರಕಾರ ಶಿವಾಚಾರ ಶೀಲರಿಲ್ಲ ಶಿವಭಕ್ತರು ಇವರೊಂದು ಜಾತಿ. ಇಂಥ ಲಿಂಗಾಂಗಿಗಳಲ್ಲದ ಬ್ರಾಹ್ಮಣಾದಿ ಅಂತ್ಯ ಜಾತ್ಯಂತದವರೆಗಿನ ಎಲ್ಲ ವರ್ಣ ಜಾತಿ ಕುಲ ಪಂಕ್ತಿಯವರೂ ಭವಿಗಳು. ಅವರದೊಂದು ಜಾತಿ. ಈ ಪ್ರಕಾರ ಬಸವಣ್ಣನವರಿಗೆ ತಮ್ಮ ಧಾರ್ಮಿಕ ದೃಷ್ಟಿಯಿಂದ ಮನುಷ್ಯರಲ್ಲಿ ಎರಡೇ ವರ್ಗಗಳು ತೋರುತ್ತಿದ್ದವು.

ಧಾರ್ಮಿಕ ಸಂಸ್ಕಾರವನ್ನು ಹೊಂದಿ ತಮ್ಮ ಮತದಲ್ಲಿ ಸೇರಿದವರಿಗೆ ಮಾತ್ರ ಅವರು ಸಮಾನತ್ವವನ್ನು ಕೊಡುತ್ತಿದ್ದರೇ ವಿನಾ ಅನ್ಯ ಮತೀಯರಿಗೆ ಕೊಡುತ್ತಿರಲಿಲ್ಲ. ಅನ್ಯರು ಭವಿಗಳೆಂದು ಅವರನ್ನು ಕೀಳಾಗಿಯೇ ತಿಳಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ಭವಿಗಳಾಗಿರುವ ಆದಿಜನಗಳನ್ನು ಮುಟ್ಟಬೇಕೆಂತಲೂ ಅದರಿಂದ ಯಾವ ದೋಷವಿಲ್ಲವೆಂತಲೂ ಈಗ ಗಾಂಧೀಜಿಯವರು ಹೇಳುವಂತೆ ಅವರೆಲ್ಲಿಯೂ ಹೇಳಿಲ್ಲ. ಹಾಗೆ ಆಚರಿಸಿದುದೂ ಇಲ್ಲ. ಹೀಗಿರುವಾಗ ಬಸವಣ್ಣನವರು ಅಸ್ಪೃಶ್ಯತಾ ನಿವಾರಕರು ಹೇಗಾಗುವರು? ಗಾಂಧೀಜಿಯವರ ಈಗಿನ ಚಟುವಟಿಕೆಗೂ ಬಸವಣ್ಣನವರ ತತ್ವಕ್ಕೂ ಯಾವ ಸಂಬಂಧವಿದೆ?

ಆದಿ ಜನಗಳನ್ನು ಮುಟ್ಟದಿರುವದು ತಮ್ಮ ಪಾಪದ ಗುರುತೆಂದು ಗಾಂಧೀಜಿಯವರು ಹೇಳುತ್ತಾರೆ. ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ನಮ್ಮ ಆತ್ಮ ಶುದ್ಧಿಗೆ ಸಾಧನವೆಂದು ಅವರ ಅಭಿಪ್ರಾಯವಾಗಿದೆ. ಎಂದಮೇಲೆ ಈ ಚಟುವಟಿಕೆಯು ಆದಿಜನಗಳನ್ನು ಮುಟ್ಟದಿರುವ ಜನಗಳಿಗೆ ಸಂಬಂಧಿಸಿದ್ದಾಗಿದೆ.

ಬಸವಣ್ಣನವರ ಚಟುವಟಿಕೆಯಾದರೋ ಆದಿಜನಗಳಿಗೆ ಸಂಬಂಧಿಸಿದ್ದಾಗಿದ್ದಿತು. ಅವರು ತಾವು ಶುದ್ಧರಾಗಬೇಕಾಗಿದ್ದಿತು. ತಮ್ಮ ಆಚಾರ ವಿಚಾರಗಳು ಪಾಪಕೃತ್ಯಗಳೆಂಬ ಅರುವು ಅವರಿಗುಂಟಾಗಿ ಅವುಗಳನ್ನು ಅವರು ಬಿಟ್ಟು ಶಿವ ಮತಕ್ಕೆ ಬರಬೇಕಾ

ಗಿದ್ದಿತು. ಅವರು ಪ್ರಯತ್ನಿಸಿ ಶುದ್ಧಾಚಾರ ಶೀಲರಾಗಿ ಧಾರ್ಮಿಕ ಸಂಸ್ಕಾರ ಹೊಂದಿದ್ದರೆ ಅವರಿಗಿದ್ದ ಅಸ್ಪೃಶ್ಯತೆಯು ನಿವಾರಣೆಯಾಗುತ್ತಿತ್ತು. ಎಂದರೆ ಅಸ್ಪೃಶ್ಯತೆಗೆ ಅವರು ಕಾರಣರಾಗಿದ್ದಾರೆಂಬುದು ಬಸವಣ್ಣನವರ ಅಭಿಪ್ರಾಯ. ನಾವೇ ಕಾರಣರಾಗಿದ್ದೇವೆಂದು ಗಾಂಧೀಜಿಯವರ ಅಭಿಪ್ರಾಯ. ಈ ಪ್ರಕಾರ ಬಸವಣ್ಣನವರಿಗೂ ಗಾಂಧೀಜಿಯವರಿಗೂ ಈ ವಿಷಯದಲ್ಲಿ ಮಹದಂತರವಿರುವಾಗ ಬಸವಣ್ಣನವರ ತತ್ವದಂತೆ ವೀರಶೈವರು ಆಚರಿಸಿದ್ದರೆ ಗಾಂಧೀಜಿಯವರ ಈಗಿನ ಚಟುವಟಿಕೆಯ ಪ್ರಯೋಗವು ಹೇಗೆ ತಪ್ಪುತ್ತಿದ್ದಿತು?

ಹರಳಯ್ಯ ಮಧುವಯ್ಯಗಳ ಶರೀರ ಸಂಬಂಧವನ್ನು ಮುಂದಿಟ್ಟುಕೊಂಡು ಅನೇಕರು ಈ ಪ್ರಕಾರ ಹೇಳುತ್ತಿರುವುದುಂಟು. ಹರಳಯ್ಯನವರು ಜನ್ಮದಿಂದ ಆದಿಜನಗಳಾಗಿದ್ದರೂ ಅವರು ಲಿಂಗಾಯತ ಮತದೀಕ್ಷೆಯನ್ನು ಹೊಂದಿದ್ದರೆಂಬುದನ್ನು ಮರೆಯಬಾರದು. ಹಾಗೆ ಅವರು ಧಾರ್ಮಿಕ ಸಂಸ್ಕಾರ ಆಚಾರ ವಿಚಾರಗಳುಳ್ಳವರಾದುದರಿಂದ ಮಾತ್ರ ಸ್ಪರ್ಶಕ್ಕೆ ಯೋಗ್ಯರಾದರು. ಮಧುವಯ್ಯನವರು ಬ್ರಾಹ್ಮಣರಾಗಿದ್ದರೂ ಹರಳಯ್ಯನವರಂತೆಯೇ ಲಿಂಗಾಯತ ಮತವನ್ನು ಸ್ವೀಕರಿಸಿದ ನಂತರವೇ ಶಿವಭಕ್ತರ ಬಳಕೆಗೆ ಯೋಗ್ಯರಾದರು ಎಂದಮೇಲೆ, ಅಸ್ಪೃಶ್ಯತಾ ನಿವಾರಣೆಗೆ ಧಾರ್ಮಿಕ ಸಂಸ್ಕಾರವೂ ಆ ಸಂಸ್ಕಾರಕ್ಕೆ ಅವರ ಶುದ್ಧಾಚಾರ ವಿಚಾರಗಳೂ ಕಾರಣವಾಗಿವೆಯೆಂಬುದು ಸ್ಪಷ್ಟವಾಗುವದಿಲ್ಲವೆ?

ಗಾಂಧೀಜಿಯವರ ಈಗಿನ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಯಲ್ಲಿ ಈ ಯಾವ ನಿಯಮಗಳವೆ? ಅವರಿಗೆ ಯಾವುದಾದರೊಂದು ಧಾರ್ಮಿಕ ಸಂಸ್ಕಾರವನ್ನು ಕೊಡಬೇಕೆನ್ನುವರೆ? ಅವರು ಆಹಾರಪಾನಾದಿಗಳು ಶುದ್ಧವಾಗಿರಬೇಕೆನ್ನುವರೇ? ಈ ಯಾವ ನಿರ್ಬಂಧಗಳನ್ನಾದರೂ ಅನುಸರಿಸಿದಾಗಲೇ ಅವರು ಸ್ಪರ್ಶಕ್ಕೆ ಯೋಗ್ಯರಾಗುವರೆಂದು ಹೇಳುವರೆ? ಇಲ್ಲವೇ ಇಲ್ಲ. ಎಂದಮೇಲೆ ಹರಳಯ್ಯ ಮಧುವಯ್ಯಗಳ ಶರೀರ ಸಂಬಂಧವು ಗಾಂಧೀಜಿಯವರ ಈಗಿನ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗೆ ಹೇಗೆ ಸಂಬಂಧಿಸುವದು?

ಬಸವಣ್ಣನವರು ಕಂಡಕಂಡವರಿಗೆ ಲಿಂಗ ಕಟ್ಟಿದರು. ಅವರ ಆಚಾರ ವಿಚಾರಗಳನ್ನೇನೂ ನೋಡಲಿಲ್ಲ. ಹಾಗೆಯೇ ವೀರಶೈವರು ಆದಿಜನಗಳ ಆಚಾರ ವಿಚಾರ ನೋಡದೆ ಲಿಂಗವನ್ನು ಕಟ್ಟಿಕೊಳ್ಳುತ್ತಾ ಬಂದಿದ್ದರೆ ಇಷ್ಟರಲ್ಲಿ ಆದಿಜನಗಳ ಒಂದು ವರ್ಗವೇ ಈ ಕರ್ನಾಟಕದಲ್ಲಿಲ್ಲದಂತಾಗುತ್ತಿತ್ತೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಅವರ ದೊಡ್ಡ ತಪ್ಪೇ ಸರಿ.

ಈಗ ಮುಸಲ್ಮಾನ ಕ್ರೈಸ್ತ ಮೊದಲಾದ ಧರ್ಮದವರು ಜನಸಂಖ್ಯೆ ಹೆಚ್ಚಿಸಲು ಜನರ ಆಚಾರಾದಿಗಳನ್ನು ನೋಡದೆ ಹೇಗೆ ತಮ್ಮ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದಾರೆಯೋ ಹಾಗೆಯೇ ಬಸವಣ್ಣನವರು ಮಾಡಿದ್ದರೆಂದು ಅನೇಕರು ತಿಳಿದುಕೊಂಡಿರುವುದುಂಟು. ಅದು ಅವರ ತಪ್ಪುತಿಳುವಳಿಕೆಯಾಗಿದೆಯೆಂಬುದು ಬಸವಣ್ಣನವರ ಈ ಕೆಳಗಿನ ವಚನಗಳಿಂದ ಸ್ಪಷ್ಟವಾಗುತ್ತದೆ.

೧, ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ? ಅಳಮನದವಂಗೆ ಶಿವದೀಕ್ಷೆಯ ಕೊಟ್ಟರೆ ಭಕ್ತಿಯೆಂತಹುದೊ? ಮುನ್ನಿನಂತೆ. ಕೂಡಲ ಸಂಗಯ್ಯ ಮನಹೀನನ ಮಾಸಲ ಕಾಯ್ದಿರಿಸಿದಂತೆ.

೨, ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ, ಮಣ್ಣಾ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚಟನಿಚ್ಚಟಕೆ ಕೆಸರಲ್ಲದೆ ಅದರ ಚುಚ್ಚುಗ ಬಿಡದಣ್ಣಾ. ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕ ಸದ್ಭಕ್ತನಹನು ಕೂಡಲಸಂಗಮದೇವ!

ಶಿವಭಕ್ತಿಹೀನರಿಗೂ ಶುದ್ಧಾಚಾರ ವಿರಹಿತರಿಗೂ ಶಿವದೀಕ್ಷೆಯನ್ನು ಮಾಡಲಾಗದೆಂದೇ ಬಸವಣ್ಣನವರು ಸಾರಿ ಸಾರಿ ಹೇಳಿದ್ದಾರೆ. ಎಂದಮೇಲೆ ಈಗಿನ ಸಂಖ್ಯಾಬಲದ ಧರ್ಮ ಪ್ರಸಾರ ಕಾರ್ಯವನ್ನು ಬಸವಣ್ಣನವರು ಪ್ರಾರಂಭಿಸಿದ್ದಹೆಂದು ತಿಳಿಯುವುದು ತಪ್ಪಲ್ಲವೆ?

ಶಿವಭಕ್ತಿ ಶುದ್ಧಾಚಾರ ಶೀಲರಿದ್ದರೂ ಅವರ ಜನ್ಮವು ಬೇರೆ ಮತೀಯರಲ್ಲಿ ಆಗಿದ್ದರೆ ಅವರನ್ನು ಅನ್ಯ ಕೆಲವು ಮತೀಯರು ತಮ್ಮ ಮತದಲ್ಲಿ ತೆಗೆದುಕೊಂಡು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡುತ್ತಿರಲಿಲ್ಲ. ಈ ಅನ್ಯಾಯವನ್ನು ಬಸವಣ್ಣನವರು ತೆಗೆದುಹಾಕಿದರು. ಧರ್ಮಕ್ಕೆ ಜನ್ಮವು ಕಾರಣವಲ್ಲ. ಆತನ ಆಚಾರ ವಿಚಾರ ಭಕ್ತಿಭಾವನೆಗಳೇ ಕಾರಣವಾಗಿವೆ. ಅವು ಯಾರಲ್ಲಿದ್ದರೂ ಅವರು ಪೂಜ್ಯರೇ ಸರಿಯೆಂಬ ನ್ಯಾಯವಮಾರ್ಗವನ್ನು ಪ್ರಾರಂಭಿಸಿದರು. ಅವರ ನಂತರ ಅನೇಕ ವೀರಶೈವ ಮಹನೀಯರೂ ಈ ಮಾರ್ಗವನ್ನನುಸರಿಸಿದ್ದರಿಂದಲೇ ವೀರಶೈವ ಸಮಾಜವು ಈಗ ಇಷ್ಟು ವಿಸ್ತಾರವಾಗಿದೆ. ಈಗಲು ಕೂಡಾ ಅಲ್ಪ ಪ್ರಮಾಣದಲ್ಲಾದರೂ ಈ ಪದ್ಧತಿಯಂತೆ ಶಿವದೀಕ್ಷೆಯನ್ನು ಕೊಡುವ ಕಾರ್ಯವು ಈ ಸಮಾಜದಲ್ಲಿ ಇದ್ದೇ ಇದೆ.

ಈ ಎಲ್ಲ ಸಂಗತಿಗಳನ್ನು ತಿಳಿದುಕೊಂಡರೆ ಬಸವಣ್ಣನವರು ಗಾಂಧಿಯವರ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಪ್ರಾರಂಭಿಸಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಜಾತಿಮತಗಳು ಜನ್ಮದಿಂದಲೇ ಪ್ರಾಪ್ತವಾಗುತ್ತವೆಂಬ ಘಾತಕವಾದ ಅನ್ಯಾಯ ಪದ್ಧತಿಯನ್ನು ನಿವಾರಣೆ ಮಾಡಿದುದೇ ಬಸವಣ್ಣನವರ ಮಹತ್ಕಾರ್ಯ. ಇದು ಈಗಿನ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗೆ ತೀರ ಭಿನ್ನವಾಗಿಲ್ಲವೆ? ಬಸವಣ್ಣನವರ ಕೆಲವು ವಚನಗಳನ್ನು ಇಲ್ಲಿ ಉದಾಹರಿಸಿದ್ದಾಗಿದೆ. ಇವುಗಳ ಮೇಲಿಂದ ಮೇಲಣ ಅಭಿಪ್ರಾಯವು ದೃಢವಾಗುತ್ತದೆ.

ಬಸವಣ್ಣನವರು ಹೇಳುವುದೇನು?

ಗಾಂಧೀಜಿಯವರು ಪ್ರಾರಂಭಿಸಿರುವ ಅಸ್ಪೃಶ್ಯತಾ ನಿವಾರಣೆಗೂ ಬಸವಣ್ಣನವರು ಮಾಡಿದ ಕಾರ್ಯಕ್ಕೂ ಸಂಬಂಧವನ್ನು ಜೋಡಿಸುವವರು ಬಸವಣ್ಣನವರು ಹೇಳಿರುವುದೇನೆಂಬುದನ್ನು ಪರ್ಯಾಲೋಚಿಸಲೆಂದು ಆ ಮಹಾನುಭಾವರ ಕೆಲವು ವಚನಗಳನ್ನು ಇಲ್ಲಿ ಉದಾಹರಿಸಿದ್ದಾಗಿದೆ.

ಹೊಲೆಯ ಹೊಲಬಿಗನಾದೊಡೆ, ಆತನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯಾ. ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ. ಹೊಲಬುಗೆಡಬೇಡ. ಶಿವಶರಣೆನ್ನಿರಯ್ಯಾ. ನಮ್ಮ ಕೂಡಲ ಸಂಗನ ಮಹಾಮನೆಯಲು ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ.

ದೂಷಕನವನೊಬ್ಬ ದೇಶವ ಕೊಟ್ಟರೆ ಅಸಿವಾಡಿ ಅವನ ಹೊರೆಯಲ್ಲಿರಬೇಡ. ಮಾದರ ಶಿವಭಕ್ತನಾದೊಡೆ ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯಾ. ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಟ್ಟು ಕೂಡಿಕೊಂಡಿಪ್ಪುದೀಗ ನಮ್ಮ ಕೂಡಲ ಸಂಗನ ಶರಣರ.

ಪಟ್ಟವ ಕಟ್ಟದ ಬಳಿಕ ಲಕ್ಷಣವನರಸುವರೆ? ಲಿಂಗದೇವ ನ ಪೂಜಿಸಿ ಕುಲವನರಸುವರೆ ಅಯ್ಯಾ? ಕೂಡಲಸಂಗಮದೇವ ಭಕ್ತಕಾಯ ಮಮಕಾಯವೆಂದುದಾಗಿ.

ಎಂತವನಾದಡೇನು? ಲಿಂಗ ಮುಟ್ಟದವನೇ ಕೀಳು ಜಾತಿ. ಕುಲವಹುದು ತಪ್ಪದು. ಲಿಂಗವ ಮುಟ್ಟಲೊಡನೆ ಶಿವಕುಲವಹುದು ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಹುದು ತಪ್ಪದು. ಕೂಡಲಸಂಗಮದೇವನೊಲ್ಲ ಸರ್ವ ಸಂದೇಹಿಗಳ.

ಓದಿದರೇನು, ಕೇಳಿದರೇನು, ಶಿವಪಥವನರಿಯದನ್ನಕ್ಕ? ಓದಿತ್ತು ಕಾಣಿರೋ ಶುಕನು. ಶಿವಜ್ಞಾನವನರಿಯದನ್ನಕ್ಕ, ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು. ಕೂಡಲಸಂಗಮದೇವ.

ಅಪ್ಪನು ಡೋಹರ ಕಕ್ಕಯ್ಯನಾಗಿ. ಮುತ್ತೈಯ್ಯ ಚೆನ್ನಯ್ಯನಾದರೆ ಅನು ಬದುಕುವೆನು. ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ ನಾನರಿವೆನಯ್ಯಾ. ಕಷ್ಟ ಜಾತಿ ಜನ್ಮದಲ್ಲಿ ಜನಿಸಿದೆ. ಎನಗಿದು ವಿಧಿಯೇ ಕೂಡಲಸಂಗಮದೇವ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ. ಕಕ್ಕಯ್ಯನೊಕ್ಕುದ ನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವ ನೆರೆಯ ನೋಡಯ್ಯಾ. ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ. ಉನ್ನತ ಮಹಿಮ ಕೂಡಲಸಂಗಮದೇವ ಶಿವಧೋ ಶಿವಧೋ.

ಶಿಟ್ಟ ಎಂಬೆನೆ ಶಿರಿಯಾಳನ ಮಡಿವಾಳನೆಂಬೆನೆ ಮಾಚಯ್ಯನ. ಡೋಹರನೆಂಬೆನೆ ಕಕ್ಕಯ್ಯನ. ಮಾದಾರನೆಂಬೆನೆ ಚನ್ನಯ್ಯನ ಅನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ.

ಅಪ್ಪನು ನಮ್ಮ ಮಾದಾರ ಚನ್ನಯ್ಯ. ಒಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯಾ. ಅಜ್ಜನು ನಮ್ಮ ಕಿನ್ನರಿಯ ಬೊಮ್ಮಯ್ಯ. ಎನ್ನನೇತಕ್ಕೆ ತಂದಿರಿ? ಕೂಡಲಸಂಗಮದೇವ.

ಭಕ್ತಿಯಿಲ್ಲದ ಬಡವನಾನಯ್ಯಾ ಕಕ್ಕಯ್ಯನ ಮನೆಯಲ್ಲಿ ಬೇಡಿದೆ, ದಾಸಯ್ಯನ ಮನೆಯಲ್ಲು ಬೇಡಿದೆ, ಚನ್ನಯ್ಯನ ಮನೆಯಲ್ಲು ಬೇಡಿದೆ, ಎಲ್ಲ ಪುರಾತನರು ನೆರೆದು ಪಕ್ಷ ಹಿಕ್ಕೆಯಕ್ಕೆದರೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವ.

ಹಿರಿಯಯ್ಯ ಶ್ವಪಚಯ್ಯ. ಕಿರಿಯಯ್ಯ ಡೋಹರ ಕಕ್ಕಯ್ಯ. ಅಯ್ಯಗಳಯ್ಯ ನಮ್ಮ ಮಾದಾರ ಚನ್ನಯ್ಯ ಕೂಡಲಸಂಗಮದೇವ ನಿಮ್ಮ ಶರಣರು ಎನ್ನ ಸಲಹುವರಾಗಿ.

ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡಿನಾದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ. ತಲೆದಂಡ, ತಲೆದಂಡ ಕೂಡಲಸಂಗಮದೇವ ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ.

ಹೊಲೆಯೊಳಗೆ ಹುಟ್ಟ ಕುಲವನರಸುವೆ, ಎಲವೋ ಮಾತಂಗಿಯ ಮಗ ನೀನು. ಸತ್ತುದನೆಳೆವನೆತ್ತಣ ಹೊಲೆಯ? ಹೊತ್ತಂದು ನೀವು ಕೊಲುವಿರಿ. ಶಾಸ್ತ್ರವೆಂಬುದು ಹೋತಂಗೆ ಮಾರಿ ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗಮದೇವನ ಶರಣರು ಕರ್ಮ ವಿರಹಿತರು, ಶರಣ ಸನ್ನಿಹಿತರು, ಅನುಭವ ಚರಿತ್ರರು, ಅವರಿಗೆ ತೋರಲು ಪ್ರತಿಯಿಲ್ಲವು.

ವ್ಯಾಸ ಬೋಯಿತಿಯ ಮಗ, ವಾರ್ಕಂಡೆಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು, ಕುಲವನರಸಿದಿರಿ ಭೋ. ಕುಲದಿಂದ ಮುನ್ನೇನಾದಿರಿ ಭೋ. ಸಾಕ್ಷಾತ್ ಅಗಸ್ತ್ಯ ಕಬ್ಬೇ ದುರ್ವಾಸ ಮಚ್ಚಿಗ, ಕಶ್ಯಪ ಕರ್ಮಾರ; ಕೌಂಡಿಲ್ಯನೆಂಬ ಋಮೂರು ಭುವನವರಿಯೆ ನಾಯಿದ ಕಾಣಿ ಭೋ. ನಮ್ಮ ಕೂಡಲಸಂಗಮದೇವನ ವಚನವಿಂತೆಂದುದು ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜ ಭೋ.

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲ ಬಿಂದುವಿನ ವ್ಯವಹಾರವೊಂದೇ. ಆಶೆಯಾಮಿಷ, ಹೆರುಷ ವಿಷಯಾದಿಗಳೊಂದೇ. ವಿಸನೋದಿ ವಿನಕೇಳಿ ಎನು ಫಲ? ಕುಲಜನೆಂಬುದಕೆ ಆವುದು ದೃಷ್ಟ? " ಸಪ್ತ ಧಾತು ಸಮಂ ಪಿಂಡಂ । ಸಮಯೋನಿ ಸಮುದ್ಭವಂ ॥ ಆತ್ಮ ಜೀವ ಸಮುತ್ಪನ್ನಂ । ವರ್ಣಾನಾಂ ಕಿಂ ಪ್ರಯೋಜನಂ ॥ " ಕಾಸಿ ಕರ್ಮಾರನಾದ, ಬೀಸಿ ಮಡಿವಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾವ ಕಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದುಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು.

ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ ಕುಲವೇನೋ ಅವಂದಿರ ಕುಲವೇನೊ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

ಜಾತಿವಿಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯ ನರಸುವೆ ಇದೇಕೋ ಮರುಳ ಮಾನವಾ? ಜಾತಿಯೇ ಅಧಿಕನೆಂಬೆ ನಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು? ಭಕ್ತಶಿಖಾವಣಿ ಎಂಬುದು ವಚನ. ನಮ್ಮ ಕೂಡಲಸಂಗನ ಶರಣರ ಪಾದ ಸರಸವ ನಂಬು ಕೆಡಬೇಡ ಮಾನವಾ.

ಹೊಲೆಯ ಮಾದಿಗ ಭಕ್ತನಾದೊಡೆ ಆತನ ಮನೆಯ ಸೊಣಗಂಗೆ ಪಂಚ ಮಹಾ ವಾದ್ಯದಲ್ಲಿ ಸನ್ಮಾನವ ಮಾಡಣೆ ನೆಲನನ್ಹೆಳ್ಳಿಡಿಸಿ ಉಳೆ ಚಾಂಗು ಫಲಾ ಎಂದು ಕುಲಕಧಿಕ ಹಾರುವಂಗೆ ಸಿದ್ದಿಗೆಯ್ಯ. ಸಲೆ ನಿಮ್ಮ ಶರಣರ ಮಹಿಮೆ ಘನಕ್ಕೆ ಘನ ಎಲೆ ಕೂಡಲಸಂಗಮದೇವಾ ನಿಮ್ಮ ನಂಬದವ ಹೊಲೆಯ.

ದೇವ ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು. ದೇವ ನಿಮ್ಮ ಪೂಜಿಸಿ ದಾಸನ ಕುಲ ದೇಶವಡೆಯಿತ್ತು. ದೇವ ನಿಮ್ಮಡಿಗೆರಗಿ ಮಡಿವಾಳ ಮಾಚಯ್ಯ ನಿಮ್ಮಡಿಯಾದ. ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ ಮೇರೆಯುಂಟೆ ದೇವಾ? ಶ್ವಪಚೋಪಿ ಮುನಿ ಶ್ರೇಷ್ಠಃ । ಯಸ್ತುಲಿಂಗಾರ್ಚನೆ ರತಃ ॥ ಲಿಂಗಾರ್ಚನ ವಿಹೀನೋಪಿ । ಬ್ರಾಹ್ಮಣಃ ಶ್ವಪಚಾಧಮಃ ॥ ಎಂದುದಾಗಿ ಚಾತಿ ವಿಜಾತಿಯಾದರೇನು? ಅಜಾತಂಗೆ ಶರಣೆಂದೆನ್ನವನು ಆತನೇ ಹೊಲೆಯ ಕೂಡಲಸಂಗಮದೇವ.

ಚತುರ್ವೇದಿಯಾದರೇನು? ಲಿಂಗವಿಲ್ಲದವನೇ ಹೊಲೆಯ ಶ್ವಪಚನಾದರೇನು? ಲಿಂಗವಿದ್ದವನೇ ವಾರಣಾಸಿ ಆತನ ನುಡಿಗಡಣ ಲೇಸು. ಆತ ಜಗಕ್ಕೆ ಪಾವನ. ಆತನ ಪ್ರಸಾದವೆನಗಮೃತ ಸೇವನೆ. " ನಮೆ ಪ್ರಿಯಶ್ಚತುರ್ವೇದೀ । ಮದ್ಭಕ್ತಃ ಶ್ವಪಚೋಪಿ ಯಃ ॥ ತಸ್ಮಾದೇವಂ ತಥೋಗ್ರಾಹ್ಯಂ । ಸಚಪೂಜ್ಯೋ ಯಥಾ ಸ್ವಯಃ ॥ " ಕೂಡಲಸಂಗನನರಿತು ಪೂಜಿಸಿದಾತ ಪತಿತದರ್ಶನಕ್ಕಧಿಕ ಜಗಕ್ಕೆ ಪಾವನ ನೋಡಾ.

ಶ್ವಪಚನಾದರೇನು ಲಿಂಗಭಕ್ತನೇ ಕುಲಜನು, ನಂಬಿ ನಂಬದಿದ್ದರೆ ಸಂದೇಹ ನೋಡಾ. ಕೆಟ್ಟದರೇನು, ಮುಟ್ಟದರೇನು, ಹೊಸಿದರೇನು? ಮನಮುಟ್ಟದನ್ನಕ್ಕ? ಭಾವ ಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು ಕೂಡಲಸಂಗಮದೇವನೊಲಿದವಂಗಲ್ಲದೆ.

ದೇವ ದೇವ ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯ ಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರು ವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರನೊಂದೇ ಎಂಬೆ. ಹೀಗೆಂದು ನಂಬುವದೆನ್ನ ಮನವು. ಈ ನುಡಿದ ನುಡಿಯೊಳಗೆಳ್ಳ ಮೊನೆಯಷ್ಟು ಸಂದೇಹವುಳ್ಳರೆ ಹಲ್ಲುದೋರಿ ಮೂಗ ಕೊಯ್ಯಿ ಕೂಡಲಸಂಗಮದೇವ.

ಒಡೆಯರಿಲ್ಲದ ಮನೆಯ ತುತುಗುಣಿ ನಾಯ ನೊಗ ವಂತೆ ನೀವಿಲ್ಲದವರ ಮನೆಯನು ಹೊಗೆಸು ಸಂಗಯ್ಯ. ಶ್ವಪಚೋಪಿಗಳಾಗಲಿ ಕೂಡಲಸಂಗಯ್ಯಾ ನೀನಿದ್ದವನೇ ಕುಲಜನು.

ವೇದಕ್ಕೆ ಒರೆಯು ಕಟ್ಟುವೆ. ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗಕೊಯ್ವೆ ನೋಡಯ್ಯ ಮಹಾದಾನಿ ಕೂಡಲಸಂಗಮದೇವ ಮಾದಾರ ಚೆನ್ನಯ್ಯನ ಮನೆಯಲುಂಡಕಾರಣ.

ಆವ ಕುಲವಾದರೇನು ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿ ಸಂಕರನಾದ ಬಳಿಕ? " ಶಿವೇ ಜಾತೆ ಕುಲೇ ಧರ್ಮ। ಪೂರ್ವ ಜನ್ಮ ವಿವರ್ಜಿತಃ॥ ಉಮಾ ಮಾತಾ ಪಿತಾ ರುದ್ರ ಈಶ್ವರಃಕುಲವೇವಚ॥ ಎಂದುದಾಗಿ ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ ಕೂಡಲ ಸಂಗಮದೇವ ನಂಬುವೆ ನಿಮ್ಮ ಶರಣರನು.

ಕಳ್ಳ, ಬಂದಿಕಾರ, ಹಾವಡಿಗ, ಹಾದರಿಗ, ಬಂಟನೋಲೆಯ ಕಾರನೆಂದೆನಾದರೆ ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿರ್ದರೆ ಅದೇ ದ್ರೋಹ. ನಡೆನುಡಿ ಹುಸಿಯುಂಟಾದರೆ ಕೂಡಲಸಂಗನ ತೋರಿದ ಚನ್ನಬಸವಣ್ಣನಾಣೆ.

ಮಹಾತ್ಮಾಜಿಯವರ ಮಹಾ ಯಾತ್ರೆ.

ಮಹಾತ್ಮಾಜಿಯವರು ತಮ್ಮ ಆಂಧ್ರ ಪ್ರವಾಸವನ್ನು ತೀರಿಸಿಕೊಂಡು ಮೈಸೂರು ಸಂಸ್ಥಾನವನ್ನು ಪ್ರವೇಶಿಸಿದರು. ಆಂಧ್ರ ಸ್ತ್ರೀಯರ ಉತ್ಸಾಹವು ಮಿಗಿಲಾಗಿದ್ದಿತು' ಅವರು ಧನವನ್ನು ಇನ್ನೂ ಕೊಡುವವರಿದ್ದರು. ಆದರೆ ಗಾಂಧೀಜಿಯವರು ಅವರ ಮುತ್ತು ರತ್ನಾಭರಣಗಳನ್ನು ತೆಗೆದುಕೊಂಡದ್ದರಿಂದ ಕಡೆಯ ಬೇಕಾಯಿತು. ಸ್ತ್ರೀಯರ ನಿಜವಾದ ಆಭರಣವು ಮುತ್ತು ರತ್ನಗಳಲ್ಲ, ಆದರೆ ಅವರ ಪಾವಿತ್ರ್ಯ, ಸುಗುಣಗಳೇ ನಿಜವಾದ ಆಭರಣಗಳು ಸೀತಾ, ದಮಯಂತಿಯರು ತಮ್ಮ ಸದ್ಗುಣಗಳಿಂದಲೇ ಪೂಜ್ಯರಾಗಿದ್ದಾರೆ. ಯಾವ ಮನುಷ್ಯನು ಅಥವಾ ಸ್ತ್ರೀಯು ತನ್ನ ಧನದಲ್ಲಿ ಅಲ್ಪ ಭಾಗವನ್ನಾದರೂ ಬಡವರಿಗೆ ದಾನ ಮಾಡುವುದಿಲ್ಲವೋ ಅವರು ಧನ ಸಂಗ್ರಹಿಸಿಟ್ಟುಕೊಳ್ಳಲು ಅರ್ಹರಲ್ಲವೆಂದು 'ಗಾಂಧೀಜಿ' ಯವರು ಹೇಳಿದರು.

ಕಡಪಾದಲ್ಲಿ ಮಹಾತ್ಮಾಜಿಯವರಿಗೆ ಕೆಲ ಆದಿ ಜನರು ಸದ್ಯದ ಜಾತಿ ತೊಡಕು ನಿವಾರಣೆಯಾಗಲೇಬೇಕೆಂದು ವಾದಿಸಿದರು. ಅದಕ್ಕೆ ಮಹಾತ್ಮರು—'ಸದ್ಯದ ಅಸ್ಪೃಶ್ಯತಾ ಚಟುವಟಿಕೆಯು ಜಯಶಾಲಿಯಾದರೆ ಸದ್ಯದಲ್ಲಿ ತೋರುವ ಜಾತಿ ಭೇದಗಳೆಲ್ಲಾ ಹೋಗುವವು" ಎಂದು ಹೇಳಿದರು. ಅದಕ್ಕವರು ಇದು ಶಕ್ಯವಲ್ಲವೆಂದು ವಾದಿಸಿದರು. ಆ ಮೇಲೆ ಗಾಂಧೀಜಿಯವರು ಮನುಷ್ಯನಲ್ಲಿ ಉತ್ಕ್ರಾಂತಿಯಾದಂತೆಯೇ ಶಬ್ದಾರ್ಥದಲ್ಲಿಯೂ ಉತ್ಕ್ರಾಂತಿಯಾಗುವುದೆಂದೂ ವರ್ಣಾಶ್ರಮಕ್ಕೆ ಧರ್ಮಪುಸ್ತಕಗಳಲ್ಲಿ ಒಂದು ಅರ್ಥ ಮಾಡಿದರೆ ಅದೇ ಅರ್ಥವು ಸದ್ಯದ ಕಾಲಕ್ಕೆ ಅನ್ವಯಿಸಲಾರದೆಂದೂ ಹೇಳಿದರು. ಕಡಪಾದಿಂದ ಮಹಾತ್ಮಾಜಿಯವರು ಮೈಸೂರಿಗೆ ಬಂದರು. ಮೈಸೂರು ಆದರ್ಶ ಸಂಸ್ಥಾನವೆಂಬ ತನ್ನ ಹೆಸರಿಗೆ ತಕ್ಕಂತೆ ಸ್ವಚ್ಛತೆ ಮೊದಲಾದವುಗಳಿಂದ ಅನಂದ ಪಡಿಸಿತ್ತು. ಮಹಾರಾಜರಿಂದ ಪ್ರತಿಯೊಬ್ಬ ನಾಗರಿಕನ ವರೆಗೆ ತಮ್ಮ ವಿಷಯಕ್ಕೆ ಇರುವ ಉಜ್ವಲವಾದ ಪ್ರೇಮವನ್ನು ನಾನು ಅನುಭವಿಸಿದೆನೆಂದು ಗಾಂಧೀಜಿಯವರು ಹೇಳಿದರು. ಮೈಸೂರಿನ ತರುವಾಯ ಬದನವಾಳದ ಖಾದೀ ಕೇಂದ್ರವನ್ನು ನೋಡಿಕೊಂಡು ಬೆಂಗಳೂರಿಗೆ ಬಂದರು. ಅಲ್ಲಿ ಅವರಿಗೆ ಭಿನ್ನ ಭಿನ್ನ ಸಂಸ್ಥೆಗಳ ಪರವಾಗಿಯೂ ನಾಗರಿಕರಿಂದಲೂ ೩೦ ಸಾವಿರ ರೂಪಾಯಿಗಳವರೆಗೆ ದೊರೆತವು. ಇಲ್ಲಿಯ ಸ್ತ್ರೀ ಸಭೆಯಲ್ಲಿ ಗಾಂಧೀಜಿಯವರು ಹೇಳಿದುದೇನಂದರೆ ಒಬ್ಬನನ್ನು ಮುಟ್ಟಿಸಿಕೊಳ್ಳದಿದ್ದರೆ ಅದು ನಮ್ಮನ್ನೇ ತಿಂದು ಬಿಡುವದು. ಇನ್ನೇ ಅಲ್ಲ ಹಿಂದುಗಡೆ ಇದರ ವಿಷಯಕ್ಕೆ ತಪಸ್ಸನ್ನಾಚರಿಸಬೇಕೆಂದರೂ ಒಬ್ಬ ಹಿಂದುವು ಕೂಡಾ ಉಳಿಯಲಿಕ್ಕಿಲ್ಲ

—ಭೂಕಂಪದಿಂದ ಮೋಂಗೀರ ಮತ್ತು ಮುಜಫರಪುರ ಪಟ್ಟಣಗಳು ಕುಸಿದು ಬಿದ್ದು ಸಾವಿರಾರು ಜನರ ಪ್ರಾಣಹಾನಿಯಾಗಿದೆ.

—ಮುಂಬಯಿಯ ಫ್ರೀ ಪ್ರೆಸ್ ಆಫ್ ಇಂಡಿಯಾ ಲಿಮಿಟೆಡ್ ಕಂಪನಿಯ ಪರವಾಗಿ ಮುಂಬೈಯಲ್ಲಿ 'ನವಶಕ್ತಿ' ಎಂಬ ದೈನಿಕ ಪತ್ರಿಕೆಯು ಹೊರಡುವುದಿದ್ದು ಆ ಪತ್ರಿಕೆಯ ಡಿಕ್ಲರೇಶನ್ ಕೊಡಲು ಹೋದಾಗ ಶ್ರೀ. ಶಂಕರ ದತ್ತಾತ್ರೇಯ ಜಾವಡೇಕರ್‌ರವರಿಗೆ ಸರಕಾರದವರು ೨ ಸಾವಿರ ರೂ. ಗಳ ಹೊಣೆಯನ್ನು ಬೇಡಿದ್ದಾರೆ.

—ಕೋಚೀನದ ಅಸ್ಪೃಶ್ಯತೆಯನ್ನು ಲೇಖಣಿಯಿಂದ ಇಲ್ಲವೆ ಬಲುಮೆಯಿಂದ ದೂರೀಕರಿಸಲು ಬರುವದಿಲ್ಲೆಂದೂ ಮತ್ತು ತಮ್ಮ ಪ್ರವಾಸದಿಂದ ದೂರಾಗದಿದ್ದರೆ ಹಿಂದು ಧರ್ಮವು ನಿಜವಾಗಿ ಅಸಹಿಷ್ಣು ಧರ್ಮವಾಗುವದೆಂದು ಮಹಾತ್ಮಾಜಿಯವರು ಹೇಳಿದರು.

ಏಜಂಟರು ಬೇಕಾಗಿದೆ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ ಕಂ. ಲಿಮಿಟೆಡ್ ಧಾರವಾಡ,

ಇವರು ಹೊಸ ಮಾದರಿಯ ಜನನ, ಮದುವೆ, ಮತ್ತು ಮರಣ ವಿಮೆಗಳನ್ನು ಸುರುವು ಮಾಡಿದ್ದಾರೆ. ಕರ್ನಾಟಕದ ಯಾವತ್ತೂ ಭಾಗಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಉತ್ಸುಕತೆಯಿಂದ ಕೆಲಸ ಮಾಡಶಕ್ಕವರು ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಕೊಳ್ಳಬಹುದು.

ಮ್ಯಾನೇಜಿಂಗ್ ಏಜಂಟ್ಸ.



ಶಾ. ಶ. ೧೮೫೫ ನೆಯ ಮಾಘ ಶು. ೭ ಸೋಮವಾರ.

ದೇವಾಲಯ ಪ್ರವೇಶದ ಗೊತ್ತುವಳಿ.

ಶ್ರೀಮಾನ್ ಸಿ. ಎಸ್. ರಂಗ ಅಯ್ಯರವರು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಆದಿಜನಗಳಿಗೆ ಹಿಂದು ದೇವಾಲಯಗಳಲ್ಲಿ ಪ್ರವೇಶಿಸಲು ಅವಕಾಶವಿಂಬೇಕಾದ ಸಂಬಂಧವಾಗಿ ಒಂದು ಗೊತ್ತುವಳಿಯನ್ನು ತಂದಿದ್ದಾರೆಷ್ಟೆ. ಈ ವಿಷಯದಲ್ಲಿ ಜನಗಳು ತಮ್ಮ ಅಭಿಪ್ರಾಯ ತಿಳಿಸಬೇಕಾದುದು ಅವಶ್ಯಕವಾಗಿರುವುದರಿಂದ ಈ ರಂಗತಿಯನ್ನು ಇಲ್ಲಿ ಪ್ರಸ್ತಾಪಿಸಿದ್ದಾಗಿದೆ.

ಶ್ರೀ ರಂಗ ಅಯ್ಯನವರ ಗೊತ್ತುವಳಿಯ ಪ್ರಕಾರ ಈ ರಾಷ್ಟ್ರಕ್ಕೆ ಇಂದು ದೇವಾಲಯ ಪ್ರವೇಶ ಪ್ರಕರಣಕ್ಕಾಗಿ ನಿವಾರಣಾ ಶಾಸನವೇನು ಜಾರಿಯಾಗುವುದು. ಈ ಶಾಸನವು ಬ್ರಿಟಿಷ್ ಇಂಡಿಯಾದಲ್ಲಿರುವ ಇಂದು ಮಂ. ಗಳಿಗಿಂತ ಹೆಚ್ಚಾದ ಪಾರ್ಷಿಕಾಯವುಳ್ಳ ಹಿಂದು ದೇವಾಲಯಗಳಿಗೆ ಮಾತ್ರ ಅನ್ವಯಿಸತಕ್ಕದ್ದಾಗಿದೆ. ಮತ್ತು ಆದಿಜನಗಳ ಪ್ರವೇಶಕ್ಕೆ ಆ ದೇವಭಕ್ತಿಯಲ್ಲಿ ಬಹುಮತ ದೊರೆತರೆ ಮಾತ್ರ ಆದಿಜನರು ಪ್ರವೇಶಿಸಲು ಈ ಶಾಸನದಿಂದ ಅಧಿಕಾರವುಳ್ಳವರಾಗುತ್ತಾರೆ.

ಶ್ರೀ ರಂಗ ಅಯ್ಯರವರ ಈ ಗೊತ್ತುವಳಿಯು ಈ ಪ್ರಕಾರ ಜನರ ಬಹುಮತದಂತೆ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಡುವುದಾಗಿದೆಯೇ ವಿನಾ ಬಹುಮತವನ್ನು ವಿರೋಧಿಸತಕ್ಕುದಾಗಿಲ್ಲ. ಆದುದರಿಂದ ಸಕಲರೂ ಈ ಗೊತ್ತುವಳಿಯನ್ನು ಹೃದಯಪೂರ್ವಕ ಅಭಿನಂದಿಸಿ ಆದಿಜನರಿಗೆ ಹಿಂದು ಸಮಾಜದಲ್ಲಿ ಇಷ್ಟರಮಟ್ಟಿಗಾದರೂ ಸ್ವಾತಂತ್ರ್ಯವನ್ನು ಕೊಡುವುದು ಅತ್ಯಾವಶ್ಯಕವಾಗಿದೆ.

ಆದಿಜನಗಳಂತೆಯೇ ಮದ್ಯ ಮಾಂಸಾದಿಗಳನ್ನು ಸೇವಿಸುತ್ತಿರುವ ಬೇರೆ ಹಿಂದುಗಳು ದೇವಾಲಯವನ್ನು ಪ್ರವೇಶಿಸಬಹುದು. ಇಷ್ಟೇ ಅಲ್ಲ; ಹಿಂದುಗಳಲ್ಲದ ಅನ್ಯ ಧರ್ಮದವರು ಪ್ರವೇಶಿಸಿ ತೆರೂ ಆಗಬಹುದು. ಆದರೆ ಆದಿಜನಗಳು ಮಾತ್ರ ಪ್ರವೇಶಿಸಬಾರದು. ಅವರು ಪ್ರವೇಶಿಸಿದರೆ ದೇವರೂ ದೇವಾಲಯವೂ ಭ್ರಷ್ಟವಾಗುತ್ತವೆಂದು ತಿಳಿಯುವುದು ಮೂಢತನವಲ್ಲವೆ? ಇದು ಆದಿಜನಗಳ ನೇಲಣ ಭಯಂಕರವಾದ ಅನ್ಯಾಯವಲ್ಲವೆ?

ಹಿಂದು ಧರ್ಮವೇ ಕೇಳಾದುದೆಂದು ಈ ಮೂಢ ನಡತೆಯಿಂದ ಸ್ಪಷ್ಟವಾಗುವುದಿಲ್ಲವೆ? ಏಕೆಂದರೆ, ಆ ಜನರೇ ಈ ದಿನ ಮುಸಲ್ಮಾನ ಅಥವಾ ಕ್ರೈಸ್ತ ಧರ್ಮಕ್ಕೆ ಸೇರಿದರೆ ನಾಳಿನ ದಿನವೇ ಅವರು ದೇವಾಲಯದಲ್ಲಿ ಪ್ರವೇಶಿಸಲು ಅರ್ಹರಾಗುತ್ತಾರೆ. ಆದರೆ ಅವರು ಹಿಂದು ಧರ್ಮದಲ್ಲಿರುವುದರಿಂದಲೇ ಮುಟ್ಟಿಸಿಕೊಳ್ಳಲು ಕೂಡಾ ಅನರ್ಹರಾಗುತ್ತಾರೆ. ಎಂದಮೇಲೆ ಹಿಂದು ಧರ್ಮಕ್ಕಿಂತಲೂ ಮುಸಲ್ಮಾನ್, ಕ್ರೈಸ್ತ ಧರ್ಮಗಳೇ ಶ್ರೇಷ್ಠವಾದವುಗಳೆಂದು ನಮ್ಮ ಈ ನಡತೆಯಿಂದಲೇ ಒಪ್ಪಿಕೊಂಡಂತಾಗುವುದಿಲ್ಲವೆ?

ಹಿಂದುಗಳು ಈಗಲಾದರೂ ಈ ತಮ್ಮ ಮೂಢ ಧಾರ್ಮಿಕ ಕುಕಲ್ಪನೆಯನ್ನು ತೆಗೆದುಹಾಕಿ ಆದಿಜನಗಳಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಡುವುದು ನ್ಯಾಯವಾಗಿಯೂ ಶ್ರೇಯಸ್ಕರವಾದುದಾಗಿಯೂ ಇದೆ.

ಶ್ರೀ ರಂಗ ಅಯ್ಯರವರ ಈ ಗೊತ್ತುವಳಿಯನ್ನು ಎಲ್ಲ ಹಿಂದುಗಳು ಒಪ್ಪಿ ಆದಿಜನಗಳ ವಿಷಯದಲ್ಲಿರುವ ಅನ್ಯಾಯವನ್ನು ದೂರಮಾಡುವರೆಂದು ನಾವು ನಂಬಿದ್ದೇವೆ.

ಶೋಚನೀಯ ನಿಧನ.

ಬಾಗಲಕೋಟೆ— ಮೇ. ಬಸವಯ್ಯನವರು ದಂಡಾವತಿ ಇವರು ತಾ. ೧೫-೧-೩೪ ನೆಯ ದಿವಸ ತಿನ್ನೈಕ್ಯರಾದ್ದರಿಂದ ಇಲ್ಲಿಯ ನಾಗರಿಕರ ದುಃಖಪ್ರದರ್ಶನ ಸಭೆಯು ಇಲ್ಲಿಯ ಪ್ರಸಿದ್ಧ ವ್ಯಾಪಾರಿಗಳಾದ ಹಾಜಿ ಅಬ್ದುಲ್ ಗಣಿ ಸೇಟ ಇವರ ಅಧ್ಯಕ್ಷತೆಯಲ್ಲಿ ತಾ. ೧೬-೧-೩೪ ನೇ ಸಂಜೆಯ ೬ ಗಂಟೆಗೆ ಬಸವೇಶ್ವರ ಹಾಯಸ್ಕೂಲಿನಲ್ಲಿ ಕೂಡಿದ್ದಿತು. ಆ ಕಾಲಕ್ಕೆ ಮೇ. ಮುರಿಗೆಯ್ಯನವರು ಜಂಗಿನ, ಮಿ. ದೇವೂರ, ಮಿ. ಕಣಗಿ ವಕೀಲ, ಮಿ. ಧಾರವಾಡಕರ ವಕೀಲ, ಮಿ. ಕಟ್ಟಿಮನಿ ಮತ್ತು ಮಿ. ಎಂ.ಗಳ್ಳ ಇವರು ಕೈ. ಬಸಯ್ಯನವರು ದಂಡಾವತಿ ಇವರ ಗುಣಾನುಸ್ಮರಣೆ ಮಾಡಿದ ನಂತರ ಕೆಳಗಿನ ತರಾವು ಸರ್ವಾನುಮತದಿಂದ ಪಾಸಾಯಿತು.

ತರಾವು.

ಬಾಗಲಕೋಟೆ ಶಹರದ ಒಬ್ಬ ಪ್ರಸಿದ್ಧ ನಾಗರಿಕರೂ ವೀರಶೈವ ಸಮಾಜದ ಮುಖಂಡರೂ ವಿದ್ಯಾಭಿಮಾನಿಗಳೂ ದೊಡ್ಡ ಕರ್ತೃತ್ವಶಾಲಿಗಳೂ ದೀರ್ಘ ಸಾಹಸಿಗಳೂ ಬಾಗಲಕೋಟೆ ಮುನಿಸಿಪಾಲ್ಟಿಯಲ್ಲಿ ಅನೇಕ ವರ್ಷಗಳ ವರೆಗೆ ಕೌನ್ಸಿಲರಾಗಿ ಜನಹಿತದ ಅನೇಕ ಕೆಲಸಗಳನ್ನು ಒಳ್ಳೇ ದಕ್ಷತೆಯಿಂದ ಮಾಡಿದವರೂ ಶ್ರೀ ಬಸವೇಶ್ವರ ಹಾಯಸ್ಕೂಲಿನ ಉತ್ಪಾದಕರೂ ಒಳ್ಳೇ ಧೂರ್ತಿಗಳೂ ಆದ ಮೇ. ಬಸವಯ್ಯನವರು ದಂಡಾವತಿ ಇವರು ನಿನ್ನೆಯ ದಿವಸ ಅಕಾಲಿಕವಾಗಿ ಕೈಲಾಸವಾಸಿಯಾದ್ದರಿಂದ ಈ ಬಾಗಲಕೋಟೆಯ ನಾಗರಿಕರಿಗೆ ಅತ್ಯಂತ ದುಃಖವಾಗಿರುತ್ತದೆ. ಇವರ ನಿಧನದಿಂದ ಬಾಗಲಕೋಟೆ ಶಹರಕ್ಕೂ ವಿಶೇಷತಃ ವೀರಶೈವ ಸಮಾಜಕ್ಕೂ ವಿಶೇಷತರವಾದ ಹಾನಿಯಾದದ್ದು ಈ ನಾಗರಿಕ ಸಭೆಯು ವ್ಯಕ್ತಮಾಡುತ್ತದೆ. ಮತ್ತು ಇವರ ಮನೆತನದವರಿಗೆ ಆದ ದುಃಖದಲ್ಲಿ ಬಾಗಲಕೋಟೆ ನಾಗರಿಕರೆಲ್ಲರೂ ಪಾಲುಗಾರರಿರುತ್ತಾರೆಂದು ಈ ಸಭೆಯು ವ್ಯಕ್ತಪಡಿಸುತ್ತದೆ. ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪರಮೇಶ್ವರನನ್ನು ಅನನ್ಯ ಭಾವದಿಂದ ಈ ಸಭೆಯು ಪ್ರಾರ್ಥಿಸುತ್ತದೆ.

ವೀರಶೈವ ಏಕೀಕರಣದ ವಾದಭೂಮಿ.

ಯಾವುದು ಮೊದಲು?

ಉಂಬಲ್ಲಿ ಉಡುವಲ್ಲಿ ಕ್ರಯೆ ಅಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು ಎಂತಯ್ಯಾ ಅವರ ಭಕ್ತರೆಂತೆಂಬೆ? ಎಂತಯ್ಯಾ ಅವರ ಯುಕ್ತರೆಂತೆಂಬೆ? ಕೂಡಲಸಂಗಮದೇವ ಕೇಳಯ್ಯಾ ಹೊಲತಿ ಶುದ್ಧ ನೀರ ಮಿಂದಂತಾಯಿತಯ್ಯಾ॥

ವೀರಶೈವ ಸಮಾಜದಲ್ಲಿ ನೂರಾರು ಒಳಪಂಗಡಗಳು ಸ್ವತಂತ್ರವಾಗಿಯೇ ಇದ್ದು ಬೇರೆ ಮತ ಪಂಥಗಳಂತೆ ಜಾತಿ ವಿಶಿಷ್ಟವಾದವುಗಳಾಗಿವೆಯಷ್ಟೆ. ವೀರಶೈವ ಮತಕ್ಕೆ ವಿರೋಧವಾದ ಈ ಭೇದವನ್ನು ತೆಗೆದುಹಾಕಿ ಏಕೀಕರಣವನ್ನುಂಟು ಮಾಡುವುದೇ ನಮ್ಮ ಮೊದಲನೆಯ ಕಾರ್ಯವೆಂದು ತಾ. ೧೧-೧-೧೯೩೪ನೆಯ ಸಂಚಿಕೆಯಲ್ಲಿ ನಾವು ವಿವರಿಸಿದ್ದೆವಷ್ಟೆ. ಇದು ನಮ್ಮ ಮಿತ್ರರಾದ ಬಸವರಾಜ ಪತ್ರಿಕಾ ಕರ್ತರಿಗೆ ಒಪ್ಪಿಗೆಯಿಲ್ಲವೆಂದು ಅವರು ಸೂಚಿಸಿದುದು ಅತ್ಯಂತ ಖೇದದ ಸಂಗತಿಯು.

ಊಟ ಮಾಡಿದ್ದನ್ನು ಜೀರ್ಣಿಸಿಕೊಳ್ಳುವುದು ಮೊದಲು. ಅನಂತರವೇ ಊಟ ಮಾಡಬೇಕಾದುದು ವಿಹಿತ. ಊಟ ಮಾಡಿದುದೇ ಜೀರ್ಣವಾಗದೆ ನಾನಾ ರೋಗಗಳನ್ನುಂಟು ಮಾಡುತ್ತಿರುವಾಗ ಮತ್ತೆ ಊಟ ಮಾಡುವುದು ವಿಹಿತವೇ? ಒಂದು ವೇಳೆ ಊಟ ಮಾಡಿದರೆ ಅದು ಮೊದಲಿನ ಆಹಾರ ಜೀರ್ಣಕ್ಕೆ ಸಾಧಕವಾಗಬೇಕೇ ವಿನಾ ಬಾಧಕವಾಗಬಾರದಷ್ಟೆ. ಹಾಗೆಯೇ ಈಗಿರುವ ನೂರಾರು ಪಂಗಡಗಳನ್ನು ಏಕೀಕರಿಸುವುದು ಮೊಲನೆಯ ಕಾರ್ಯ. ಈ ಕಾರ್ಯವೇ ಸಮಾಜದಲ್ಲಿ ಪ್ರಬಲವಾಗಿ ನಡೆದಿಲ್ಲ. ಹೀಗಿರುವಾಗ ಮತ್ತೆ ಹೊಸ ಪಂಗಡಗಳನ್ನುಂಟು ಮಾಡುವುದು ಯುಕ್ತವೆ? ಇದರಿಂದ ನಾವು ಶುದ್ಧಿಗೆ ವಿರೋಧವಾಗಿದ್ದೇವೆಂದು ತಿಳಿಯಬಾರದು. ಆದರೆ ಆ ಶುದ್ಧಿಯು ಸಂಘಟನೆಯನ್ನುಂಟು ಮಾಡಬೇಕು. ಹಾಗಿದ್ದರೆ ಎಷ್ಟು ಶುದ್ಧಿಗಳು ನಡೆದರೂ ನಮಗೆ ಬೇಕೇಬೇಕು.

ಲಿಂಗಧಾರಣೆ ಮಾಡಿದನಂತರ ಅವರ ಸಂಗಡ ಊಟೋಪಚಾರಗಳನ್ನಾದರೂ ಮಾಡುವಂತಿದ್ದರೆ ಇಲ್ಲವೆ ಇಂತಿಷ್ಟು ವರ್ಷಗಳವರೆಗೆ ಅವರನ್ನು ಪರೀಕ್ಷಿಸಿ ಅನಂತರವಾದರೂ ಅವರ ಸಂಗಡ ಬಳಕೆ ಮಾಡುವಂತಿದ್ದರೆ ಲಿಂಗಧಾರಣೆಯು ವಿಹಿತವು. ಹಾಗೆ ಮಾಡದೆ ಅವೂ ಬೇರೆ ಪಂಗಡವಾಗಿಯೇ ಉಳಿಯುವಂತೆ ಶುದ್ಧಿಯನ್ನು ಮಾಡಿದರೆ ಸಂಘಟನೆಗೆ ಪ್ರತಿಬಂಧವಾಗುವುದಿಲ್ಲವೇ? ಬಸವ ಮಹಾನುಭಾವರು ಪ್ರಾರಂಭಿಸಿದ ಕಾರ್ಯವು ಇನ್ನೂ ಕೊನೆಗಂಡಿಲ್ಲವೆಂದು ಅನೇಕರು ಹೇಳುತ್ತಿರುವುದೇಕೆ? ನೂರಾರು ವರ್ಷಗಳಾದರೂ ಒಳಪಂಗಡಗಳು ಇನ್ನು ಹಾಗೆಯೇ ಜಾತಿವಿಶಿಷ್ಟವಾಗಿರುವುದರಿಂದಲ್ಲವೇ?

ಆದುದರಿಂದ ಸಕಲರೂ ಈ ಅನ್ಯಾಯವನ್ನು ನಿವಾರಣೆ ಮಾಡಲು ಏಕೀಕರಣಕ್ಕಾಗಿ ಮೊದಲು ಪ್ರಯತ್ನಿಸಬೇಕಾದುದು ಯುಕ್ತವಾಗಿಲ್ಲವೇ? ಈ ಕಾರ್ಯವೇ ನಡೆಯದೆ ಕೇವಲ ಲಿಂಗಧಾರಣೆಯ ಮೂಲಕ ಪಂಗಡಗಳನ್ನು ಹೆಚ್ಚಿಸುವುದೇ ನಡೆಯುವುದು ವಿಹಿತವಲ್ಲವೆಂಬುದೇ ನಮ್ಮ ಅಭಿಪ್ರಾಯವು.

ಸಂಪಾದಕ.

ನ್ಯಾಯವಾದ ಪ್ರಶ್ನೆ.

ರೋಣ ತಾಲೂಕ ಗಜೇಂದ್ರಗಡದಲ್ಲಿರುವ ಶ್ರೀಯುತ ಎಲ್ಲಪ್ಪ ರಾಚಪ್ಪ ಕಕ್ಕಯ್ಯಾ ಪೆ|| ಮಾಸ್ತರ ಇವರು ತಾ. ೫-೧-೩೪ ನೆಯ ದಿನ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿರುವ ಮುಖ್ಯಾಂಶವೇನೆಂದರೆ—

" ನಾನು, ನನ್ನ ಕುಟುಂಬ, ಆಪ್ತರು ಎಲ್ಲರೂ ನಾವು ಮೊದಲು ಡೋಹರ ಜನರಲ್ಲಿ ಹುಟ್ಟಿ ನಮ್ಮ ನಡಾವಳಿಯಂತೆ ಇದ್ದೆವು. ನಾವು ಮುಂಬಯಿಗೆ ಹೋಗಿದ್ದಾಗ ೧೯೩೨ ರಲ್ಲಿ ನಮಗೆ ಗೋಕಾವಿ ಹಿರೇಮಠದ ಸ್ವಾಮಿಗಳಾದ ರಾಚಯ್ಯನವರು ಲಿಂಗಧಾರಣೆ ಮಾಡಿ ದೀಕ್ಷಾ ಕೊಟ್ಟರು. ಅಂದಿನಿಂದ ನಾವು ಲಿಂಗವಿಲ್ಲದ ಭವಿಗಳ ಮನೆಯಲ್ಲಿ ಊಟ ಉಪಚಾರ ಮಾಡುವುದಿಲ್ಲ. ಮುಂಬಯಿ ಬಿಟ್ಟು ಇಲ್ಲಿಗೆ ಬಂದು ೧|| ವರ್ಷವಾಯಿತು. ಸದರಿ ಗ್ರಾಮದಲ್ಲಿ ಮುಸಲ್ಮಾನ್ ಕುರುಬ ಮೊದಲಾದ ಜನರಿಗಿಂತ ನಮ್ಮನ್ನು ಕಡೆಮಾಡಿ ಲಿಂಗವಂತರು ಮಾತನಾಡುತ್ತಾರೆ. ಈ ಲಿಂಗವಂತಮತಬಿಟ್ಟು ಮುಸಲ್ಮಾನ ಆಗಿದ್ದರೆ ನಮ್ಮ ಮರ್ಯಾದೆಗೆ ಇಷ್ಟು ಹಾನಿ ಬರುತ್ತಿದ್ದಿಲ್ಲ ಅಂತಾ ನಮಗೆ ಕಂಡುಬರುತ್ತದೆ. ನಾವು ಇಂತಿಷ್ಟು ವರುಷ ಒಳ್ಳೇ ನಡಾವಳಿಯಿಂದ ಇದ್ದರೆ ಬಳಕೆಯಲ್ಲಿ ತೆಗೆದುಕೊಳ್ಳಬಹುದೆಂಬಂತೆ ನಿಮ್ಮ ಪತ್ರಿಕೆಯಲ್ಲಿ ಬರೆದು ಆದನ್ನು ನಮಗೆ ಕಳುಹಿಸಬೇಕು. "

ಶ್ರೀಯುತ ಎಲ್ಲಪ್ಪನವರು ಬರೆದ ಮೇಲಿನ ಸಂಗತಿಗಳು ನಿಜವಾಗಿದ್ದರೆ ಅವರನ್ನು ಕೇಳಾಗಿ ಕಾಣುವುದು ಅತ್ಯಂತ ಅನ್ಯಾಯವಾಗಿದೆ. ಇವರು ತಮ್ಮ ಪತ್ರದಲ್ಲಿ ಲಿಂಗಧಾರಣೆ ಮತ್ತು ದೀಕ್ಷೆ ಆಗಿವೆಯೆಂದು ತಿಳಿಸುತ್ತಾರೆ. ಇವರಿಗೆ ಲಿಂಗಧಾರಣೆ ಮಾಡಿದವರು ಇವರಲ್ಲಿ ಬಳಕೆ ಮಾಡಿದ್ದಾರೋ ಇಲ್ಲವೋ ಎಂಬುದು ಇವರ ಪತ್ರದಿಂದ ತಿಳಿಯುವುದಿಲ್ಲ. ಲಿಂಗವಂತ ಮತವನ್ನು ಬಿಟ್ಟು ಮುಸಲ್ಮಾನ್ ಧರ್ಮಕ್ಕೆ ಸೇರಿದ್ದರೆ ಹೇಗಾಗುತ್ತಿದ್ದಿತೆಂಬ ಇವರ ಕಲ್ಪನೆಯು ಇವರ ಮನಸ್ಸಿಗಾದ ನೋವನ್ನು ಸೂಚಿಸತಕ್ಕುದಾಗಿದೆ. ಲಿಂಗಧಾರಣ ಮಾಡುವವರೂ ಲಿಂಗಮು

ಸಮಾಚಾರ ಸಂಗ್ರಹ.

—ಮಹಾತ್ಮಾಜಿಯವರ ನಿರ್ಣಯದ ಮೇರೆಗೆ ಅಹಮದಾಬಾದ ಗಿರಣಿ ಯಜಮಾನರು ಕೂಲಿಕಾರರ ವೇತನವನ್ನು ಕಡಿಮೆ ಮಾಡುವದನ್ನು ನಿಲ್ಲಿಸಿದ್ದಾರೆ.

—ಫ್ರಾನ್ಸಿನಲ್ಲಿ ಒಂದು ವಿಮಾನವು ವಿದ್ಯುತ್ತಿನ ತಂತಿಗೆ ಬಡಿದದ್ದರಿಂದ ಉರಿ ಹತ್ತಿಗಿ ಜನರು ಸುಟ್ಟುಕೊಂಡು ಸತ್ತರು. ಆದೇ ಕಾಲಕ್ಕೆ ವಿದ್ಯುದ್ದೀಪಗಳು ನೊಂದಿ ಹೋಗಿ ಕತ್ತಲೆಯು ಬಿದ್ದಿತು.

—ದೇವಾಸ ಸಂಸ್ಥಾನಿಕರ ಪ್ರಕೃತಿಯು ಚಂತಾಜನಕವಿದ್ದು ಅವರ ಕಾರ್ಯದ ನಿರ್ಣಯವನ್ನು ತೀವ್ರವೇ ಮಾಡಬೇಕೆಂದು ವೈದ್ಯ ವ್ಹಾಯಿಸ್‌ರಾಯರಿಗೆ ತಂತೀ ಕೊಟ್ಟರು. ದೇವಾಸ ಸಂಸ್ಥಾನವನ್ನು ಮುರಾರಾವರಿಗೆ ಒಪ್ಪಿಸುವಂತೆ ಕಾಣುತ್ತದೆ.

—ರಾಮಪುರ ಸಂಸ್ಥಾನದ ನವಾಬರು ತಮ್ಮ ರಾಜ್ಯದಲ್ಲಿ ಪ್ರಜೆಗಳ ಗೊಂದಲವು ಹೆಚ್ಚಾದುದರಿಂದ ೬ ತಿಂಗಳವರೆಗೆ ಇಂಗ್ಲೆಂಡಕ್ಕೆ ಹೊರಟ್ಟಿದ್ದಾರೆ. ಆ ಅವಧಿಯಲ್ಲಿ ಮುರಾದಾಬಾದ ಜಿಲ್ಲಾ ಕಲೆಕ್ಟ್ರ ಸಂಸ್ಥಾನದ ಪೊಲ್ವಿಚಾರಣೆಯನ್ನು ಮಾಡುವರು.

—ಶ್ರೀ ದೇವದಾಸ ಗಾಂಧೀಜಿಯವರು ಸದ್ಯಕ್ಕೆ ದಿಲ್ಲಿಯಲ್ಲಿರಲು ಅಡ್ಡಿ ಇಲ್ಲವೆಂದು ದಿಲ್ಲಿ ಜೀಫ ಕಮಿಶನರು ಅವರಿಗೆ ತಿಳಿಸಿದ್ದಾರೆ.

—ಮಹಾತ್ಮಾ ಹಾನೆಲೆಗೆ ಒಂದಾಗ್ಗೆ ಅವರ ಹಸ್ತದಿಂದ ಒಂದು ವ್ಯಾಯಾಮ ಶಾಲೆಯ ಮತ್ತು ಒಂದು ಧರ್ಮಶಾಲೆಯ ಉದ್ಘಾಟನ ಸಮಾರಂಭವೂ ಮತ್ತು ಒಂದು ಧರ್ಮಶಾಲೆಯ ಉದ್ಘಾಟನ ಸಮಾರಂಭವೂ ನಡೆಯುವವು. ಈ ಸಂದರ್ಭಕ್ಕೆ ಒಂದು ಆದಿಜನ ಶಾಲೆಯೂ ಪ್ರಾರಂಭವಾಗುವದು.

—ನಿಜಾಮ ಸಾಹೇಬರ ಮೊಮ್ಮಗನ ಆಗಮನ ಕಾರಣದಿಂದ ಶ್ರೀ. ವೆಂಕಟರಾಮಾ ರಡ್ಡಿಯವರ ಅಧ್ಯಕ್ಷತೆಯ ಸಮಿತಿಯವರು ಬಡವರಿಗೆ ಅನ್ನವಸ್ತ್ರಗಳನ್ನು ಕೊಟ್ಟರು.

—ಗಾಂಜೆಯ ಕಾರ್ಯಾರಂಭವಾಗಿ ಇಂಗ್ಲೆಂಡದಲ್ಲಿಯೂ ಭೂಕಂಪವಾಯಿತು. ಅದರ ಉಗಮವು ೪೬೦೦ ಮೈಲು ದೂರವಿರಬಹುದೆಂದು ತಿಳಿಯಲಾಗಿದೆ.

—ದಿ ಬ. ಲಕ್ಷ್ಮಿಯವರು ಲಿಂಗರಾಜ ಕಾಲೇಜಕ್ಕೆ Historian's History of the World ಎಂಬ ಪುಸ್ತಕ ಮಾಲೆಯನ್ನು ಪುಸ್ತಕಾಲಯಕ್ಕೆ ಕಾಣಿಕೆಯಾಗಿ ಕೊಟ್ಟರು.

—ಇಂದೂರಿನ ಶಾಸನ ಸಮಿತಿಯವರು ಪುರುಷನು ೪೫ ವರುಷದವನಾದಮೇಲೆ ತರುಣ ಸ್ತ್ರೀಯನ್ನು ಲಗ್ನವಾಗಲು ಅನರ್ಹನೆಂದೂ ಹಾಗೆ ಮಾಡಿದರೆ ೧೦೦ ರೂ. ದಂಡವನ್ನು ವಿಧಿಸಬೇಕೆಂಬ ಗೊತ್ತುವಳಿಯನ್ನು ಮೊನ್ನೆ ಮಾಡಿರುವರು.

—ಬೈಲ ಹೊಂಗಲದಲ್ಲಿ ರೈತರ ಪರಿಷತ್ತು ಶ್ರೀ. ಪಂಡಿತಪ್ಪ ಚಿಕ್ಕೋಡಿ ಇವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು.

—ಹರಿಹರಕ್ಕೆ ಹೋಗುವ ಉಗಿಬಂಡಿಯ ಅಂಡರ ಗಾರ್ಡನು ಏನು ಕಾರಣದಿಂದಲೋ ಹುಬ್ಬಳ್ಳಿಯ ಹತ್ತಿರವೇ ಕೆಳಗೆ ಬಿದ್ದನು. ಇದು ಯಾರಿಗೂ ಗೊತ್ತಾಗದೆ ಬಂಡಿಯು ಹರಿಹರಕ್ಕೆ ಮುಟ್ಟಿದ ಮೇಲೆ ಹುಡುಕ ಹತ್ತಿದರು, ಈಗ ಅವನಿಗೆ ೧॥ ತಿಂಗಳ ಉಪಚಾರ ಹೊಂದಬೇಕೆಂದು ಡಾಕ್ಟರರು ಹೇಳಿದರು.

—ಮುಂಬಯಿಯಲ್ಲಿ ಅಮಿನಬಿ ಎಂಬವಳು ಡೋಜಾ ವನಂತರ ಮಾಂಸದ ಊಟ ಮಾಡುವಾಗ್ಗೆ ಅದರಲ್ಲಿಯ ಒಂದು ಎಲುಬು ಗಂಟಲೊಳಗೆ ಶಿಕ್ಕು ಒದ್ದಾಡಹತ್ತಿದಳು. ಅವಳನ್ನು ಆಸ್ಪತ್ರಿಗೆ ಒಯ್ಯಲು ೨ ದಿವಸದ ನೋಲೆ ನೋವು ತಡೆಯದೆ ಸತ್ತೇ ಬಿಟ್ಟಳು.

—ಕವಿಚರಿತ್ರೆಯ ಮೂರು ಭಾಗಗಳನ್ನು ದೀರ್ಘ ಸಂಶೋಧನೆಯಿಂದ ಸಿದ್ಧ ಪಡಿಸಿದ ಮೈಸೂರಿನ ಶ್ರೀ. ಆರ್. ನರಸಿಂಹಾಚಾರ್ಯರಿಗೆ ಸಾಮ್ರಾಟರು 'ಮಹಾಮಹೋಪಾಧ್ಯಾಯ' ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು.

—ವಿಜಾಪುರದಲ್ಲಿ ಮಹಾತ್ಮಾಜಿಯವರ ಆಗಮನ ನಿಮಿತ್ತ ಸಭೆಯು ನಡೆದಿದೆ. ಕೊಲ್ಹಾರ ದೇಶಗತಿಯ ವ್ಯಾಜ್ಯವು ಇಲ್ಲಿ ನಡೆದಿದ್ದು ಇಬ್ಬರು ವಕೀಲರು ಮುಂಬಯಿಯಿಂದ ಕರಸಲ್ಪಟ್ಟಿದ್ದರು.

—ಹೊಸರಿತ್ತಿಯಲ್ಲಾಗುವ ಜಾತ್ರೆಗೆ ಈ ವರುಷ ಸುಂಕ ಕೂಡ್ರಿಸಬೇಕೆಂದು ಲಿಲಾವು ಮಾಡಿಸಲು ಯಾರೂ ಕೇಳಲಿಲ್ಲವಾದರಿಂದ ಹಾಗೆ ಮಾಡುವದನ್ನು ನಿಲ್ಲಿಸಬೇಕಾಯಿತು.

—ಗದುಗಿನಲ್ಲಿ ಶ್ರೀ. ವೀರನಗೌಡರು ಬಂದು ಮಹಾತ್ಮರ ಸ್ವಾಗತ ಸಮಿತಿಯನ್ನು ಏರ್ಪಡಿಸಿರುವರು.

—ರಂಗೂನದಲ್ಲಿ ಕೆಲವು ಮಂಗಗಳು ಒಂದು ಬಿಳೀ ಮಂಗವನ್ನು ಮುಂದೆ ಮಾಡಿಕೊಂಡು ಅಲ್ಲಿರುವ ಸೆಂಟ ಪಾಗೋಡಾದಲ್ಲಿಯ ಬುದ್ಧನ ಮೂರ್ತಿಗೆ ಪುಷ್ಪಗಳನ್ನು ಏರಿಸಿ ಶಾಂತರೀತಿಯಿಂದ ಹೋದವಂತೆ.

—ಕಂಪ್ಲಿ ಗ್ರಾಮದವರು ಬಳ್ಳಾರಿ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ. ನೈ. ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಆರೋಗ್ಯ ಸಪ್ತಾಹವನ್ನು ಜರುಗಿಸಿದರು.

—ಬ್ಯಾಡಿಗಿಯಲ್ಲಿ ಶ್ರೀ ಸಿರಸಂಗಿ ಲಿಂಗರಾಜ ವಾಚನಾಲಯದ ಜನ್ಮೋತ್ಸವವು ಶ್ರೀ ಪಾಟೀಲ ವೀರನಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

—ಬಿಹಾರ ಪ್ರಾಂತದ ರಾಷ್ಟ್ರೀಯ ಪ್ರಮುಖರಾದ ಬಾಬುರಾಜೇಂದ್ರಪ್ರಸಾದ ಇವರು ಕಾರಾಗೃಹದಲ್ಲಿ ಅತ್ಯಂತ ಅಸ್ವಸ್ಥರಾಗಿರುವುದರಿಂದ ಔಷಧೋಪಚಾರಕ್ಕಾಗಿ ಅವರನ್ನು ಮುಕ್ತ ಮಾಡಬೇಕೆಂದು ಸರಕಾರದವರು ನಿರ್ಣಯಿಸಿದ್ದಾರೆ.

—ಲಖನೌನಿಲ್ಲಾಣದಲ್ಲಿ ಭೂಕಂಪವಾದುದರಿಂದ ಲಕ್ಷಾವಧಿ ಜನರುಗಳೂ ಇಲಿಗಳೂ ಪ್ರಾಣರಕ್ಷಣೆಗಾಗಿ ತಮ್ಮ ತೂತಿನೊಳಗಿಂದ ಹೊರಗೆ ಬಂದುದು ಬಹಳೇ ಕೌತುಕವಾದುದಾಗಿದೆ.

ತ ಪ್ರೇಮಿಗಳೂ ಹಿಂದು ಧರ್ಮಾಭಿಮಾನಿಗಳೂ ಇವರ ಈ ಪತ್ರಾಭಿಸ್ರಾಯವನ್ನು ಲಕ್ಷಿಸುವಂತಿದೆ.

ಲಿಂಗವಂತ ಮತದಂತೆ ಶುದ್ಧಾಚಾರ ಶೀಲರಾಗಿ ನೀವು ೧೫ ವರುಷ ನಡೆದಿದ್ದಾದರೆ ನಿಮ್ಮ ಸಂಗಡ ಬಳಕೆಯನ್ನು ಮಾಡಲು ಯಾವ ಅಭ್ಯಂತರವೂ ಇಲ್ಲವೆಂದು ಶಿವಸಿದ್ಧಾಂತವಿರುವ ಕಾರಣ ಆ ಪ್ರಕಾರ ನಿಮ್ಮ ನಡೆನುಡಿಗಳಿಂದ ನೀವು ಬ್ರಾಹ್ಮ ಸಂಗಡ ಬಳಕೆಮಾಡಲು ಅಪೇಕ್ಷಿಸುವಿರೋ ಅವರಿಗೆ ಮನವರಿಕೆ ಮಾಡಿಕೊಟ್ಟು ಪುನಃ ದೀಕ್ಷೆಯನ್ನು ಹೊಂದಬೇಕಾಗುವದು.

ಸಂಪಾದಕ.

ಪತ್ರಗಳ ಸಾರಾಂಶ.

ಶೋಚನೀಯ ಮೃತ್ಯು.

ನಿಜಾಂ ವೀರಶೈವ ವಿದ್ಯಾವರ್ಧಕ ಫಂಡಿನ ಮಾಜಿ ಸೆಕ್ರೆಟರಿಗಳಾದ ಶ್ರೀಮಾನ್ ಫಕೀರಪ್ಪ ಶೃಂಗೇರಿ ಇವರು ಪುಷ್ಯ ಶುದ್ಧ ೧೧ ತಾ. ೨೭-೧೨-೧೯೩೩ ಬುಧವಾರ ೨॥ ಗಂಟೆಗೆ ಪರಲೋಕವಾಸಿಗಳಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರ ಅಗಲುವಿಕೆಯಿಂದ ಎಲ್ಲರಿಗೂ ಬಹಳ ದುಃಖವಾಗಿದೆ. ನಿಜಾಂ ಸ್ಟೇಟಿನ ವೀರಶೈವರ ಉನ್ನತಿಗಾಗಿ ಹೆಣಗುವ ಒಬ್ಬ ಪ್ರಮುಖ ಕಾರ್ಯಕರ್ತರು ಇಲ್ಲದಂತಾಗಿದೆ. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ತೀವುದೂ ಸುಕ್ಷೇತ್ರ ಉಳಿವೆಯ
ಶ್ರೀ ಚೆನ್ನಬಸವೇಶ್ವರ ಮಹಾಯಾತ್ರಾ.

ಶಿವಾಚಾತ್ಮಸ್ವರೂಪಾಯ ಶಿವ ಭಾವ ಪ್ರದಾಯಿನೇ|
ಶಮಃ ಸದ್ಗುರುನಾಥಾಯ ಷಟ್‌ಸ್ಥಲ ಬ್ರಹ್ಮ ಮೂರ್ತಯೇ ॥೧॥

ಜಗತ್ತಿನಲ್ಲಿ ಮನುಷ್ಯನು ಸುಖವನ್ನು ಹೊಂದಬೇಕಾದರೆ ನಕ್ತಿಯು ಒಂದಾಗಿರುವದು. ಈ ತರಹದ ಧರ್ಮ ಮಾರ್ಗವನ್ನು ಅನುಸರಿಸಿ ನಡೆದರೆ ಸುಖಸಂಪತ್ತಿಗಳು ಸಹಜವಾಗಿ ಒದಗುವವು. ಆದುದರಿಂದ ತನಗಿಂತಲೂ ಶ್ರೇಷ್ಠವಾದ ವಸ್ತುವಿನ ಸ್ಮರಣೆ, ದರ್ಶನ, ಪೂಜಾಮಾಡುವದು ಮನುಷ್ಯನ ಮುಖ್ಯ ಕರ್ತವ್ಯವಾದುದರಿಂದ ಈ ಮಹಾಕ್ಷೇತ್ರ ಯಾತ್ರೆಯನ್ನು ಪ್ರತಿ ವರುಷ ಮಾಘ ಶು. ಪೌರ್ಣಮೆಯಲ್ಲಿ ಹತ್ತಾರು ಸಹಸ್ರ ಜನರು ಬಂಡಿ ಮಾಡುತ್ತಲೂ ಬಂದು ಪುಣ್ಯಭಾಗಿಗಳಾಗಿದುವರು. ಅದರಂತೆ ಈ ಮಹಾಕ್ಷೇತ್ರದಲ್ಲಿ ಇದೇ ಮಾಘ ಶು॥ ೭ ರಿಂದ ಬಹುಳ ೨ ರವರೆಗೆ ನಿತ್ಯೋತ್ಸವಗಳು ನಡೆದು ಇದೇ ಮಾಘ ಬಹುಳ ೨ ಗುರುವಾರ ಮಧ್ಯಾಹ್ನ ಮಹಾ ರಥೋತ್ಸವವೂ ವತ್ತು ತ್ಯದಲ್ಲಿ ಭಜನಾ ಕೀರ್ತನಾ ಉಪನ್ಯಾಸಾದಿಗಳು ನಡೆಯುವವು. ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳದೆ ಬಂದು ಮಹಾಸ್ವಾಮಿಯ ದರ್ಶನಾಶೀರ್ವಾದಗಳನ್ನು ಪಡೆದು ಮಹಾ ಕ್ಷೇತ್ರದ ಗುರುವ ಮಹಾಮುನಿಗವಿ, ಕಿನ್ನರಿ ಬೊಮ್ಮಯ್ಯನ ಹೊಳೆ, ಹರಳಯ್ಯನ ಚಿಲುಮೆ, ಶ್ರೀ ವಿಭೂತಿಯ ಕಣಜ, ರುದ್ರಾಕ್ಷಿಯ ಮಂಟಪ, ಆಕಳಗವಿ ಇತ್ಯಾದಿ ತೀರ್ಥ ಕ್ಷೇತ್ರಗಳ ದರ್ಶನವನ್ನು ಮಾಡಿಕೊಂಡು ಪುಣ್ಯಭಾಗಿಗಳಾಗಬೇಕೆಂದು ಅಪೇಕ್ಷಿಸುವ,

ಮಹಾಕ್ಷೇತ್ರದ ಮುಖ್ಯ ಮಕ್ತೇಶ್ವರ
ಮಹಾಬಳೇಶ್ವರಪ್ಪ ಗುರಪ್ಪ ಪಾಟೀಲ.

ತೀ ಕ್ಷೇತ್ರಕ್ಕೆ ಬರತಕ್ಕ ಮಾರ್ಗಗಳು

ಬೆಂಗಳೂರು ರೇಲ್ವೆಯಿಂದ ಬರತಕ್ಕವರು ಧಾರವಾಡ, ಖಾನಾವರ ಸ್ಟೇಶನಕ್ಕೆ ಇಳಿದರೆ ಮೋಟಾರುಗಳು ಕ್ಷೇತ್ರದ ವರೆಗೂ ಶಿಗುವವು. ಪೂನಾ ರೇಲ್ವೆಯಿಂದ ಬರತಕ್ಕವರು ಬೆಳಗಾವ ಗುಂಡಾ ಸ್ಟೇಶನುಗಳಿಗೆ ಇಳಿದರೆ ಮೋಟಾರುಗಳು ಕ್ಷೇತ್ರದ ವರೆಗೂ ಶಿಗುವವು. ಶಿರ್ಸಿ ಮಾರ್ಗದಿಂದ ಬರತಕ್ಕವರು ಮೇಲಯಲ್ಲಾಪೂರ ಗಣೇಶಗುಡಿಯ ವರೆಗೆ ಮೋಟಾರ ವ ಚಕ್ಕಡಿಗಳಿಂದ ಬಂದು ಗಣೇಶಗುಡಿಯಿಂದ ಕ್ಷೇತ್ರದ ವರೆಗೆ ೧೫ ಮೈಲು ಕಾಲದಸ್ತಿಯಿಂದ ಬರುವದು.

ಪುಣ್ಯ ತಿಥಿ.

ಯಾವ ಮಹಾ ವಿಭೂತಿಯ ಉದಯದಿಂದ ವೀರಶೈವ ಸಮಾಜವನ್ನೆಡರಿದ ಅಧರ್ಮಾಂಧಕಾರವಡಗಿ ಬೆಳಕಾಯಿತೊ, ಆ ಬೆಳಗಿನಲ್ಲಿ ಸಮಾಜವು ತನ್ನ ಕಣ್ಣುಗಳನ್ನು ನಸ ದೆರೆದು ನೋಡಲಾರಂಭಿಸಿತೋ, ಯಾವ ಮಹಾತ್ಮನು ವೀರಶೈವ ನಿಜಾಚರಣೆಯ ಯುಗಪ್ರವರ್ತಕನೆನಿಸಿದನೋ, ಯಾವ ಪುಣ್ಯಾತ್ಮನು ಪ್ರಾಚ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳ ಹೋರಾಟದ ಸಮಯದಲ್ಲಿ ಆರ್ಯ ಸಂಸ್ಕೃತಿಗಳ ಬೆನ್ನಾಶ್ರಯಿಸಿದನೋ, ಯಾರ ದೀರ್ಘ ಪ್ರಯತ್ನದಿಂದ ವೀರಶೈವರ ಏಕಮುಖವಾದ ಮಹಾಸಭಾ ರೂಪಿ ಸಂಸ್ಥೆಯು ಉದಯವಾಯಿತೋ, ಧಾರ್ಮಿಕ ನೈತಿಕಾಚಾರ ವಿಚಾರಗಳಿಗೆ ಅಗ್ರವಾದ ಶಿವಯೋಗ ಮಂದಿರ ಜನನವು ಯಾವ ಯೋಗ ಶ್ರೇಷ್ಠನಿಂದ ಆಗಿರುವದೋ ಯಾವ ಪುಣ್ಯಾತ್ಮನು ಉಸರಡಗುವವರೆಗೆ ಸಮಾಜ, ಸಮಾಜವೆಂದು ಕನಕರಿಸಿ ಮರೆಯಾದನೊ, ಆ ಪುಣ್ಯ ಶ್ಲೋಕೇ ಹಾನಗಲ್ಲ ಶ್ರೀ ಕುಮಾರ ಯತಿವರೇಣ್ಯರ ಪುಣ್ಯ ತಿಥಿಯು ಇದೇ ಮಾಘ ಬ॥ ಸಪ್ತಮಿ ತಾ. ೬-೨-೩೪ ಮಂಗಳವಾರವೇ ಬಂದಿರುವದು. ಆ ದಿವಸವನ್ನು ಪವಿತ್ರ ದಿವಸವನ್ನಾಗಿ ತಿಳಿದಾಚರಿಸುವದು ಎಲ್ಲ ವೀರಶೈವರ ಆದ್ಯಕರ್ತವ್ಯವಾಗಿದೆ.

ಈ ಸಮಾರಂಭವನ್ನು ನಾವೆಲ್ಲರೂ ಒಮ್ಮನದಿಂದ ಕಡು ಸಡಗರದಿಂದ ಮಾಡಿದರೆ ಆ ಸಾಮಾಜಿಕ ಜೀವನದ ನೆನಹು ನಮಗಾಗಿ ಸಮಾಜ ಸೇವೆಯ ಹಾದಿಯಲ್ಲಿ ನಾವೂ ಮುಂದಡಿ ಇಡಬಹುದಲ್ಲವೇ? ಆ ದೇಹವು ಮಣ್ಣುಮರೆಯಾದರೂ ಆ ಪುಣ್ಯದ ಜೀವನದ ಜ್ಯೋತಿಯು ನಮ್ಮ ಕಣ್ಣ ಮುಂದೆ ಬೆಳಗುವದಿಲ್ಲವೇ? ಆ ಬೆಳಗಿನಲ್ಲಿ ನಮ್ಮ ಭಾವೀ ಜೀವನದ ವಾಹನವನ್ನು ಕಲಿಯ ಬಹುದಲ್ಲವೇ?

ಶ್ರೀ ಬಸವಲಿಂಗ ದೇಶಿಕರು ನವಲಗುಂದ
ವ್ಹಾ. ಪ್ರೆಸಿಡೆಂಟ ಗಣಿವಯೋವೃದ್ಧ ಮಂದಿರ,

ಮ. ಗಾಂಧಿ ಮತ್ತು ಗುರುವಾಯೂರ್

ಹಿಂದಕ್ಕೆ ಗುರುವಾಯೂರು ದೇವಾಲಯ ಪ್ರವೇಶದ ಪ್ರಸಂಗದ ಕಾಲಕ್ಕೆ ಗುರುವಾಯೂರಿನವರಿಗೂ ಮಹಾತ್ಮಾ ಗಾಂಧೀಜಿಯವರಿಗೂ ಸಂಬಂಧವುಂಟಾಯಿತು. ಮೊನ್ನೆ ಮಹಾತ್ಮರು ಕಾಲಿಕತ್ತಕ್ಕೆ ಹೋದಾಗ್ಗೆ ಗುರುವಾಯೂರಿನವರನ್ನು ಕಾಣುವ ಪ್ರಸಂಗವು ಬಂದಿತು. ಮಹಾತ್ಮರು ಆರಮನೆಗೆ ಬಂದಾಗ್ಗೆ ಗುರುವಾಯೂರಿನವರು ಪ್ರವೇಶದ್ವಾರದಲ್ಲಿಯೇ ಅವರನ್ನು ಸ್ವಾಗತಿಸಿ ಕರೆದುಕೊಂಡು ಒಳಗೆ ಹೋದರು. ಆ ಮೇಲೆ ಗುರುವಾಯೂರಿನವರು ಅವರ ಪ್ರಕೃತಿಯ ವಿಚಾರಣೆಯನ್ನು ಮಾಡಿ ಮಲಬಾರದ ವಿಷಯಕ್ಕೆ ತಮಗೇನು ಅನಿಸುತ್ತದೆಂದು ಕೇಳಲು ಮಹಾತ್ಮರು "ಮಲಬಾರವು ಅಪ್ಸರೆಯರ ತಾಯಿನಾಡು ಆಗಿದ್ದು ಅಲ್ಲಿಯ ಸೃಷ್ಟಿ ಸೌಂದರ್ಯವು ಮನೋಹರವಾಗಿದೆಯೆಂದು ಹೇಳವರು. ಈ ಪ್ರಸಂಗದಲ್ಲಿ ಅವರು ಮಂದಿರ ಪ್ರವೇಶದ ವಿಷಯವನ್ನೇನೂ ತೆಗೆಯಲಿಲ್ಲ. ಆ ಮೇಲೆ ಮಹಾತ್ಮಾಜಿಯವರಿಗೆ ಕೆಲವು ಕಿತ್ತಳಿಹಣ್ಣುಗಳನ್ನು ಅರ್ಪಿಸಿದರು.

ಮಹಾತ್ಮರಿಗೆ ಕಾಲಿಕತ್ತದಲ್ಲಿ ಲಕ್ಷಾಧಿಕ ರೂ. ಗಳು ಅರ್ಪಿಸಲ್ಪಟ್ಟವು. ಹಿಂದುಸ್ಥಾನದ ಉಳಿದ ಭಾಗಗಳಿಗಿಂತ ಮಲಬಾರದಲ್ಲಿ ಅಸ್ಪೃಶ್ಯತೆಯು ಬಹಳೇ ಕೀಳುಸ್ಥಿತಿಯಲ್ಲಿರುವುದೆಂದು ಅಲ್ಲಿ ಹೇಳಿದರು.

ವಿವಿಧ ವಿಷಯ.

ನರ್ತಕಿಯ ವೇತನ.

ಗ್ರೇಸಿ ಫೀಲ್ಡ್ಸ ಎಂಬ ಹೆಸರಿನ ಸ್ತ್ರೀಯು ಜಗತ್ತಿನ ಗಳಿಸು ವವರೆಲ್ಲರಲ್ಲಿ ಮಿಗಿಲಾಗಿದ್ದಾಳೆ. ಇವಳು ಲಾಂಕಶಾಯರದವಳು. ಇವಳ ವೇತನವು ಒಂದು ವರ್ಷಕ್ಕೆ ೧೫೦,೦೦೦ ಪೌಂಡುಗಳು. ಅಂದರೆ ಅವಳ ವೇತನವು ಒಂದು ಮಿನೀಟಿಗೆ ೬ ಪೌಂಡಿನಂತೆ ಬೀಳುತ್ತದೆ. ಇವಳು ೩೫ ವರ್ಷ ವಯಸ್ಸಿನವಳಿರುತ್ತಾಳೆ. ಇವಳಿಗೆ ಯಾವಾಗಲೂ ಉದ್ಯೋಗವೇ ಇರುತ್ತದೆ. ಬ್ರಿಟಿಶ್ ಫಿಲ್ಮ ಕಂಪನಿಯವರು ವರುಷಕ್ಕೆ ೩ ಚಿತ್ರಗಳನ್ನು ತೆಗೆದುಕೊಡಲಿಕ್ಕೆ ಇವಳಿಗೆ ೭೫ ಸಾವಿರ ಪೌಂಡುಗಳನ್ನುಕೊಡುತ್ತಾರೆ. ಯಾವದಾದರೊಂದು ಕಂಪನಿಯವರು ಅವಳನ್ನು ಕೆಲವು ಗಂಟೆಗಳ ವರೆಗೆ ನಿಯಮಮಾಡಿ ಕರೆದುಕೊಂಡು ಹೋದಲ್ಲಿ ಅವರು ಆ ವೇಳೆಯನ್ನು ವ್ಯರ್ಥ ಕಳೆದರೆ ಅವಳು ಅಷ್ಟು ನಷ್ಟ ದ್ರವ್ಯವನ್ನು ತೆಗೆದುಕೊಳ್ಳುವಳು. ಅವಳು ಯಾವಾಗಲೂ ಪ್ರವಾಸದಲ್ಲಿರುತ್ತಾಳೆ. ಒಂದಾನೊಂದು ಕಾಲಕ್ಕೆ ಒಂದು ರಿಕಾರ್ಡ ಕಂಪನಿಯ ಮುಂದೆ ಕೇವಲ ೭ ನಿಮಿಷಗಳ ವರೆಗೆ ಹಾಡಿದಳು. ಆದರೆ ಇಷ್ಟಕ್ಕೆ ಅವಳ ವೇತನವು ೧೫೦ ಪೌಂಡಿನಿಂದ ೨೦೦ ಪೌಂಡುಗಳ ವರೆಗಿದ್ದಿತು. ಇಷ್ಟೆಲ್ಲ ದ್ರವ್ಯವನ್ನು ತೆಗೆದುಕೊಂಡು ಅವಳೇನು ಮಾಡುತ್ತಿರಬಹುದು? ಉತ್ತರವಿಷ್ಟೆ- ಈ ದ್ರವ್ಯವನ್ನು ಉಪಭೋಗಿಸಲಿಕ್ಕೆ ಅವಳಿಗೆ ವೇಳೆಯೇ ಇಲ್ಲ.

ಪ್ರಸಂಗವು ಹೇಗೆ ಬಂದಿದೆ ನೋಡಿರಿ! ವಿದ್ಯಾ ಕಲಿತು ಹೊಟ್ಟಿಗಿಲ್ಲದೆ ತಿರುಗುವವರೆಷ್ಟೋ. ಆದರೆ ಇಂಥ ಉದ್ಯೋಗಗಳಲ್ಲಿ ಧನದ ಪ್ರವಾಹವೇ ಹರಿಯುತ್ತದಲ್ಲವೇ?

ಸಿಂಹದ ಸಂಗಡ ಕುಸ್ತಿಯನ್ನಾಡುವಳೆ?

ಕ್ಯಾಲಿಫೋರ್ನಿಯಾದಲ್ಲಿ ಕಾಡಪಶುಗಳನ್ನು ನಿಧೇಯತ್ವದಲ್ಲಿ ಟ್ಟುಕೊಳ್ಳುವದನ್ನು ಕಲಿಸುವ ಒಂದು ಶಾಲೆಯಿರುತ್ತದೆ. ಮಿ. ಲುಯಿರೊಥ ಎಂಬ ಅವರ ಅಧ್ಯಾಪಕರು ಅನ್ನುವದೇನೆಂದರೆ— " ಸಾಧಾರಣ ಮನುಷ್ಯನು ೨-೩ ವಾರಗಳಲ್ಲಿಯೇ ಪಶುಗಳನ್ನು ನಡೆಯಿಸಿಕೊಳ್ಳಲು ಕಲಿಯುವನು. ಕೆಲವರು ೮ ದಿವಸಗಳಲ್ಲಿ ಎಲ್ಲ ಯುಕ್ತಿಗಳನ್ನೂ ಕಲಿಯುವರು. ಈ ವಿಷಯವು ಮನುಷ್ಯನ ಬುದ್ಧಿಶಕ್ತಿಯನ್ನವಲಂಬಿಸಿರುತ್ತದೆ. " ಪ್ರಾಣಿಗಳನ್ನು ನಡೆಯಿಸಿಕೊಳ್ಳುವದು ಬಹಳೇ ಸುಲಭವಾಗಿದೆ. ಎಂದು ಮಿ. ರೋಥರು ಹೇಳುತ್ತಾರೆ. " ನೀವು ಮಾಡಬೇಕಾದುದಿಷ್ಟೆ; ಆ ಪ್ರಾಣಿಯ ಸಂಗಡ ಮಾತನಾಡಿರಿ ಅದು ನಿಮ್ಮ ಇರವನ್ನ ತಿಳಿಯಲಿ; ಅದು ಹೆದರಕೂಡದು; ಮನುಷ್ಯರಾಗಲಿ ಪಶುಗಳಾಗಲಿ ಒಂದೆ. ನೀವು ಅವುಗಳನ್ನು ಹೊಡೆದು ವಶಪಡಿಸಿಕೊಳ್ಳಲಾಗದು. ಕೆಲವು ಚುರುಕು ಇರುತ್ತವೆ. ಕೆಲವು ಮೂರ್ಖವೂ ಇರುತ್ತವೆ. ಎಲ್ಲ ಪಶುಗಳಲ್ಲಿ ಹುಲಿಯೇ ಹೆಚ್ಚು ಚುರುಕಾದದ್ದು; ಆದರೆ ಅದು ಬಹಳೇ ಘಾತಕ ಪಶುವು.

ಪಶುಗಳ ಪಂಜರಗಳಲ್ಲಿ ಪ್ರಥಮ ಪ್ರವೇಶಮಾಡುವಾಗ ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚು ಧೈರ್ಯಶಾಲಿಗಳಾಗಿರುತ್ತಾರೆ. ಸ್ತ್ರೀಯರೇ ನನ್ನ ಅತ್ಯುತ್ತಮ ವಿದ್ಯಾರ್ಥಿನಿಯರಾಗಿದ್ದಾರೆ. ನನ್ನ ೧೮ ವರ್ಷ ವಯಸ್ಸಿನ ಮಗಳು ಎಲ್ಲ ಪೊಂಚುಗಳನ್ನು ತೀವ್ರವೇ ಕಲಿತಳು. ಅವಳು ಸಿಂಹದ ಸಂಗಡ ಕುಸ್ತಿಯನ್ನಾಡುತ್ತಾಳೆ." ಎಂದು ಹೇಳಿದರು.

ಅಬಲೆಯರು ನಿಜವಾಗಿಯೂ ಸಬಲೆಯರಾಗಿಲ್ಲವೆ?

ಜಲಚರಕ್ಕೆ ೨೦ ಸಾವಿರ ಪೌಂಡು.

ನೀರಿನಲ್ಲಿ ಎಷ್ಟು ತರದ ಪ್ರಾಣಿಗಳಿಲ್ಲ? ಅವೆಲ್ಲ ಒಂದಕ್ಕೊಂದು ವಿಚಿತ್ರವಾಗಿಯೇ ಇರುವವು. ಆದರೆ ಸ್ಕಾಟಲಂಡದ ಸಮುದ್ರದಲ್ಲಿ ಒಂದು ವಿಚಿತ್ರವಾದ ಪ್ರಾಣಿಯನ್ನು ಕಂಡಿದ್ದಾರೆ. ಅದು ಒಂದು ಹಾವು ಇರಬಹುದೇನೋ ಎಂದು ಭಾಸವಾಗುತ್ತದೆ. ಅದು ೫೦ ಫುಟು ಉದ್ದವಿದ್ದು ೬ ಫುಟಿನ ವರೆಗೆ ಅಗಲವಿರುತ್ತದೆ. ಇದು ಇತಿಹಾಸದ ಉತ್ಪತ್ತಿಯಕಿಂತ ಪೂರ್ವದಲ್ಲಿದ್ದ ಪ್ರಾಣಿಯೆಂದು ಬಲ್ಲವರು ತರ್ಕಿಸಿದ್ದಾರೆ. ಅದು ಸಮುದ್ರ ಮಧ್ಯದಿಂದ ಬಿರುಗಾಳಿಯ ಹೊಡೆತಕ್ಕೆ ಇಲ್ಲಿಗೆ ಬಂದಿರಬಹುದೆಂದು ತರ್ಕಿಸುತ್ತಾರೆ ಕೆಲವರು ಅದಕ್ಕಿಂತಲೂ ಬಲಿಷ್ಠವಾದ ಮತ್ತೊಂದು ಪ್ರಾಣಿಯ ಅಂಜಿಕೆಯಿಂದ ತಪ್ಪಿಸಿಕೊಂಡು ಬಂದಿದೆಯೆಂದು ಊಹಿಸುತ್ತಾರೆ, ಅದು ಯಾರಿಗೂ ಅಪಾಯವನ್ನು ಮಾಡುವದಲ್ಲವಂತೆ. ಏನೇ ಇರಲಿ, ನೋಡಲು ಜನರ ಕುತೂಹಲವು ವಿಶೇಷವಾಗಿದೆ. ಇವನ್ನು ಕಂಡು ಒಬ್ಬ ಸರ್ಕಸ್ಸಿನವನು ಅದನ್ನು ಹಿಡಿದುಕೊಟ್ಟವರಿಗೆ ೨೦ ಸಾವಿರ ಪೌಂಡುಗಳನ್ನು ಕೊಡಲು ಸಿದ್ಧನಾಗಿದ್ದಾನೆ. ಅದು ಸಿಕ್ಕರೆ ಹೆಸರಿಡಲಿಕ್ಕೆ " ಮ್ಯಾಕ್ ಕಿಪರ್ " ಎಂಬ ಹೆಸರನ್ನೂ ಸಿದ್ಧಪಡಿಸಿದ್ದಾನೆ.

೨೦ ಸಾವಿರ ಪೌಂಡು ಬೆಲೆಬಾಳುವ ಆ ಜಲಚರವೆಂಥದಿರಬೇಕು?

ಚಳಿಯ ಗಾಳಿ.

ಸಪ್ತಗ್ರಹಯುತಿಯ ಪರಿಣಾಮವೆಂದರೆ ಚಳಿಗಾಳಿಯ ಪ್ರವಾಹವು. ಬರ್ಫಾಚ್ಛಾದಿತ ಹಿಮಾಲಯ ಪರ್ವತದ ಮೇಲಿನಿಂದ ಚಳಿಗಾಳಿಯು ಬೀಸುತ್ತ ಬೀಸುತ್ತ ಮುಂಬಯಿವರೆಗೆ ಬಂದಿದೆ. ಈ ಗಾಳಿಯ ಚಳಿಯಿಂದ ಮುಂಬಯಿಯಲ್ಲಿ ಉಷ್ಣತಾಮಾನವು ೫೫ ಅಂಶಗಳ ವರೆಗೆ ಇಳಿದಿದ್ದಿತು. ಇಂಥ ಚಳಿಯು ಅಲ್ಲಿ ೧೯೨೪ ನೆಯ ಇಸ್ವಿಯಲ್ಲಿ ಒಮ್ಮೆ ಬಂದಿದ್ದಿತಂತೆ. ಮುಂಬಯಿಯಲ್ಲಿ ಅಲ್ಲಲ್ಲಿ ಮೂಲೆಗಳದ್ದಲ್ಲಿ ಜನರು ಕಾಸಿಕೊಳ್ಳುವದಕ್ಕಾಗಿ ಬೆಂಕಿ ಹಚ್ಚಿಸಿದ್ದರು. ಭಡೋಚ ಜಿಲ್ಲೆಯಲ್ಲಿ ಇದೇ ಚಳಿಯು ವಿಪರೀತವಾಗಿದೆ. ಭಯಂಕರ ಬಿರುಗಾಳಿಯು ಬೀಸಿ ಬೀಸಿ ಚಳಿಯನ್ನು ಹೆಚ್ಚಿಸುತ್ತಲಿದೆ. ನರ್ಮದಾನದಿಯ ನಂಡೆಯ ಮೇಲಿನ ಬೆಳೆಗಳೆಲ್ಲ ಈ ಭಯಂಕರವಾದ ಥಂಡಿಯಿಂದ ಒಣಗಿ ಹೋಗಿವೆ. ಇದಲ್ಲದೆ ಅಲ್ಲಿ ಚಳಿಯನ್ನು ತಡೆಯಲಾರದೆ ೨-೩ ಜನರೂ ಸತ್ತಿರುವರು.

ದೈವೀಕಾರ್ಯಕ್ಕೆ ಉಪಾಯವೇನು! ಆದರೂ ನಿರಾಶ್ರಿತರಿಗೆ ಸಹಾಯಮಾಡುವದು ಮನುಷ್ಯನ ಕರ್ತವ್ಯವಲ್ಲವೆ?

ಉತ್ತರ ಹಿಂದುಸ್ಥಾನದಲ್ಲಿ ಭೂಕಂಪ.

ಸಪ್ತಗ್ರಹ ಯುತಿಯಾಗುವುದರಿಂದ ದೇಶದಲ್ಲಿ ನಾನಾವಿಧ ಪೀಡೆಗಳುಂಟಾಗುವವೆಂದು ಫಲಜ್ಯೋತಿಷಕಾರರು ಹೇಳಿದ ಮೇರೆಗೆ ಉತ್ತರ ಹಿಂದುಸ್ಥಾನದಲ್ಲಿ ಎಲ್ಲ ಕಡೆಗೆ ಭೂಕಂಪದ ಅನರ್ಥಗಳುಂಟಾಗಿವೆ. ದಿಲ್ಲಿಯಲ್ಲಿ ಭೂಕಂಪವಾಗಿ ಕೆಲವು ಸೇಕಂದುಗಳ ವರೆಗೆ ಉಗಿಬಂಡಿಯು ವೇಗದಿಂದ ಹೋಗುವಾಗ ಆಗುವಂತೆ ಗಡಗಡ ಸಪ್ಪಳವಾಯಿತು. ಕೆಲವು ಕಟ್ಟಡಗಳು ಬಿದ್ದವು. ಜಮಾಲಪುರದ ಕಾರ್ಯಾಲಯದ ಅಡಳಿತೆಗಾರರಾದ ಮಿ. ಬ್ರಾಫುನ್ ಮತ್ತು ವೈದ್ಯರಾದ ಮಿ. ಮುಜುಮದಾರ ಇವರ ಬಂಗ್ಲೆಗಳು ಕಳಚಿಬಿದ್ದು ಇವರಿಬ್ಬರ ಪತ್ನಿಯರು ಮತ್ತು ಮಕ್ಕಳು

ಅತ್ಯಲ್ಪವೇ ಎಂದು ಹೇಳಬಹುದು. ಮತ್ತು ಒಟ್ಟಿಗೆ ೩೩ ಜನರು ಸತ್ತರು. ೪೮ ಜನರಿಗೆ ಗಾಯಗಳಾಗಿವೆ.

ಕಾನಪೂರದಲ್ಲಿಯಂತೂ ಭೂಕಂಪದಿಂದ ಹಾಹಾಕಾರವೆದ್ದಿದೆ. ೩೦೦ ವರೆಗೆ ಮನೆಗಳು ಬಿದ್ದಿವೆ. ೭೦೦೦ ಮನೆಗಳಿಗೆ ಅಪಾಯವಾಗಿದೆ. ಕಾಶಿಯಲ್ಲಿಯೂ ಎಷ್ಟೋ ಮನೆಗಳಿಗೆ ಕಿಂಡಿಗಳು ಬಿದ್ದಿವೆ. ಒಂದು ವನೆ ಬಿದ್ದು ಒಬ್ಬನು ಸತ್ತನು. ಪಾಟಣಾದಲ್ಲಿಯಂತೂ ಎಲ್ಲ ಮನೆಗಳಿಗೂ ಅಪಾಯವಾಗಿದೆ. ಇಲ್ಲಿ ೭ ಜನರು ಸತ್ತರು. ಮತ್ತು ೯೦ ಜನರಿಗೆ ಗಾಯಗಳಾಗಿವೆ. ಮುಜಫರಪುರದಲ್ಲಿ ೧ ಸಾವಿರ ಜನರು ಸತ್ತರೆಂದು. ಇದರಂತೆಯೇ ಲಖನೌ, ಮಿರ್ಜಾಪೂರ, ಕಲಕತ್ತಾ, ಮುಂಬಯಿ ಪುಣೆ ಮೊದಲಾದ ಪಟ್ಟಣಗಳಲ್ಲಿ ಭೂಕಂಪದಿಂದ ಅನರ್ಥವಾಗಿವೆ.

ಹಿಂದುಸ್ಥಾನದಲ್ಲಿ ಮೊದಲನೆಯ ಭೂಕಂಪವು ೧೮೩೪ರಲ್ಲಿ ಆಯಿತು. ಮುಂದೆ ೧೯೦೪ ಮತ್ತು ೧೯೩೦ ನೆಯ ಇಶ್ವಿಗಳಲ್ಲಿ ಭೂಕಂಪಗಳಾದವು, ಈ ಭೂಕಂಪದ ಉಗಮವು ಕಲಕತ್ತೆಯ ಎಡಬಲ ೧೦೦ ಮೈಲುಗಳ ಅಂತರದಲ್ಲಿರಬಹುದೆಂದು ತರ್ಕಿಸಲಾಗಿದೆ.

ಉಪವಾಸದ ದುರುಪಯೋಗ.

ಮಹಾತ್ಮಾಜಿಯವರು ಉಪವಾಸದ ದುರುಪಯೋಗ ವಿಷಯುಕ್ಕೆ ಹೀಗೆ ಬರೆಯುತ್ತಾರೆ— " ಉಪವಾಸ ದುರುಪಯೋಗದ ಕೆಲವು ಪ್ರಸಂಗಗಳು ನನ್ನ ದೃಷ್ಟಿ ಪಥದಲ್ಲಿ ಬಂದಿವೆ. ನನ್ನ ಕೈ ಬರಹವನ್ನು ಕಳುಹಿಸದಿದ್ದರೆ ಒಬ್ಬನು ತಾನು ಉಪವಾಸ ಮಾಡುವೆ [illegible] ಮೂವರು ನಾನು ಅವರಲಿಗೆ ಹೋಗದಿದರೆ ಉಪವಾಸ [illegible] ಮಾನಸಿಕ ಬಲವು [illegible] ಲೆ ಅವಲಂಬಿಸಿಲ್ಲ ಎಷ್ಟೋ ಜನರ ಮತ್ತು [illegible] ಮಿದುಳುಗಳ ಬಾರೆಗಳು ಒಂದೇ ಇರುತ್ತವೆ. ಆದರೆ ಎಷ್ಟೋ ಜನರು ಎಷ್ಟೋ ಹಿಂದುಳಿದಿದ್ದಾರೆ. ಲ್ಯಾಂಬೋಲ್ಕ್ ಎಂಬ ಫ್ರೆಂಚ್ ಪ್ರಕೃತಿಶಾಸ್ತ್ರಜ್ಞನೂ ತತ್ವಜ್ಞಾನಿಯೂ ಆದ ಮಹಾಪುರುಷನ ಮಿದುಳು ಸ್ತ್ರೀಯರ ಮಿದುಳಿಗಿಂತ ಹಗುರಾಗಿದ್ದಿತು.

ಅಂದ ಮೇಲೆ ಸ್ತ್ರೀಯರು ಪುರುಷರಿಗಿಂತ ದಡ್ಡರು ಹೇಗೆ?

ಪುಸ್ತಕಾಲಯದ ವ್ಯವಸ್ಥೆ.

ಜಗತ್ತಿನ ಪ್ರಸಿದ್ಧ ವಸ್ತು ಸಂಗ್ರಹಾಲಯಗಳಲ್ಲಿ ಲಂಡನ್ನಿನಲ್ಲಿರುವ ವಸ್ತು ಸಂಗ್ರಹಾಲಯವು ಅಗ್ರೇಸರತ್ವವನ್ನು [illegible]. ಇಲ್ಲಿ ಆವುದೊಂದು ಗ್ರಂಥವಾಗಲಿ ವಸ್ತುವಾಗಲಿ ದೊರೆಯದಿವದಿಲ್ಲೆಂಬುದು ಇಲ್ಲವೇ ಇಲ್ಲ. ಆದುದರಿಂದ ಜಗತ್ತಿನ ಎಲ್ಲ ಭಾಗಗಳಿಂದ ಸಂಶೋಧಕರೂ, ವಿದ್ಯಾರ್ಜನಾಪೇಕ್ಷಿಗಳೂ ಇಲ್ಲಿಗೆ ವೆಗ್ಗಳವಾಗಿ ಬರುತ್ತಿರುತ್ತಾರೆ. ಈ ಆಲಯವು ಯಾವಾಗಲೂ ಓದುಗರಿಂದ ತುಂಬಿ ಹೋಗಿರುತ್ತದೆ. ಇವರೆಲ್ಲರ ವ್ಯವಸ್ಥೆಯನ್ನು ಸಂಗ್ರಹಾಲಯದವರು ಯಾವ ಪ್ರಕಾರವಾಗಿ ಮಾಡುತ್ತಿರಬಹುದ? ಜನರು ಎಷ್ಟೇ ಹೊತ್ತಿನ ವರೆಗೆ ಓದಲು ಅಡ್ಡಿಯಿಲ್ಲ. ಮತ್ತು ಎಷ್ಟೇ ದಟ್ಟಣಿಯಾಗಲಿ ಅವರು ಕಾಳಜಿ ಮಾಡುವದಿಲ್ಲ. ಯಾಕಂದರೆ ಓದುಗರ ಮೇಲೆ ಅವರು ಯಾವಾಗಲೂ ಗುಪ್ತವಾಗಿ ಕಣ್ಣು ಇಡುತ್ತಾರೆ. ಯಾವನಾದರೊಬ್ಬನು ಯಾದು ಪದಾರ್ಥವನ್ನು ಕದ್ದರೆ ಕೂಡಲೇ ಅದು ಅವರಿಗೆ

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! ಮಹತ್ವದ ಪುಸ್ತಕ!!

ಖಾದೀ ಶಾಸ್ತ್ರ.

ಲೇಖಕರು:—ಶ್ರೀ. ಹರ್ಡೀಕರ ಮಂಜಪ್ಪನವರು,
ಪ್ರಕಾಶಕರು ಮತ್ತು ಸಂಪಾದಕರು:— ಶ್ರೀ ಆಲೂರು ವೆಂಕಟರಾಯರು.

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸುಖ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅದನ್ನು ಬಿಟ್ಟದ್ದರಿಂದಲೇ ನಾವು ಹೇಗ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಆಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿದೆ.

ಈ ಪ್ರ[illegible]ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣವಿರುವುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತೆ ತರಿಸಿಕೊಂಡು ಖಾದಿಯ ವಿಷಯವನ್ನು ಜೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ. ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. } ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.

[illegible] ಇಲ್ಲ.

ಪ್ರಸಂಗವು ಹೇಗೆ ಬಂದಿದೆ ನೋಡಿರಿ! ವಿದ್ಯಾ ಕಲಿತು ಹೊಟ್ಟೆಗಿಲ್ಲದೆ ತಿರುಗುವವರೆಷ್ಟೋ, ಆದರೆ ಇಂಥ ಉದ್ಯೋಗಗಳಲ್ಲಿ ಧನದ ಪ್ರವಾಹವೇ ಹರಿಯುತ್ತದಲ್ಲವೇ?

ಸಿಂಹದ ಸಂಗಡ ಕುಸ್ತಿಯನ್ನಾಡುವಳೆ?

ಕ್ಯಾಲಿಫೋರ್ನಿಯಾದಲ್ಲಿ ಕಾಡಪಶುಗಳನ್ನು ವಿಧೇಯತ್ವದಲ್ಲಿ ಮೈಮೈಕೊಳ್ಳುವದನ್ನು ಕಲಿಸುವ ಒಂದು ಶಾಲೆಯಿರುತ್ತದೆ. ಮಿ. ಯುಯಿರೊಥ ಎಂಬ ಅವರ ಅಧ್ಯಾಪಕರು ಅನ್ನುವದೇನೆಂದರೆ—"ಸಾಧಾರಣ ಮನುಷ್ಯನು ೨-೩ ವಾರಗಳಲ್ಲಿಯೇ ಪಶುಗಳನ್ನು ಪಳಗಿಸಿಕೊಳ್ಳಲು ಕಲಿಯುವನು. ಕೆಲವರು ೪ ದಿವಸಗಳಲ್ಲಿ ಎಲ್ಲ ಯುಕ್ತಿಗಳನ್ನೂ ಕಲಿಯುವರು. ಈ ವಿಷಯವು ಮನುಷ್ಯನ ಬುದ್ಧಿಶಕ್ತಿಯನ್ನವಲಂಬಿಸಿರುತ್ತದೆ." ಪ್ರಾಣಿಗಳನ್ನು ನಡೆಯಿಸಿ ತಾಳ್ಮೆಯಿಂದ ಬಹಳೇ ಸುಲಭವಾಗಿದೆ. ಎಂದು ಮಿ. ರೋಧರು ಹೇಳುತ್ತಾರೆ. "ನೀವು ಮಾಡಬೇಕಾದುದಿಷ್ಟೆ; ಆ ಪ್ರಾಣಿಯ ಜೊತೆಗಡ ಮಾತನಾಡಿರಿ ಅದು ನಿಮ್ಮ ಇರವನ್ನು ತಿಳಿಯಲಿ; ತಿದುಕೊಡದು; ಮನುಷ್ಯರಾಗಲಿ ಪಶುಗಳಾಗಲಿ ಒಂದೆ. ನೀವು ಮೃಗಗಳನ್ನು ಹೊಡೆದು ವಶಪಡಿಸಿಕೊಳ್ಳಲಾಗದು. ಕೆಲವು ಚುರುಕು ಇರುತ್ತವೆ. ಕೆಲವು ಮೂರ್ಖವೂ ಇರುತ್ತವೆ. ಎಲ್ಲ ಪಶುಗಳಲ್ಲಿ ಆನೆಯೇ ಹೆಚ್ಚು ಚುರುಕಾದದ್ದು. ಆದರೆ ಅದು ಬಹಳೇ ಘಾತಕ ಪಶುವು.

ಪಶುಗಳ ಪಂಜರಗಳಲ್ಲಿ ಪ್ರಥಮ ಪ್ರವೇಶಮಾಡುವಾಗ ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚು ಧೈರ್ಯಶಾಲಿಗಳಾಗಿರುತ್ತಾರೆ. ಸ್ತ್ರೀಯರೇ ನನ್ನ ಅತ್ಯುತ್ತಮ ವಿದ್ಯಾರ್ಥಿನಿಯರಾಗಿದ್ದಾರೆ. ೧೧ ವರ್ಷ ವಯಸ್ಸಿನ ಮಗಳು ಎಲ್ಲ ಹೊಂಚುಗಳನ್ನು ಪ್ರವೇ ಕಲಿತಳು. ಅವಳು ಸಿಂಹದ ಸಂಗಡ ಕುಸ್ತಿಯನ್ನಾಡುವಳೆ." ಎಂದು ಹೇಳಿದರು

ಅಬಲೆಯರು ನಿಜವಾಗಿಯೂ ಸಬಲೆಯರಾಗಿಲ್ಲವೆ?

ಸಪ್ತಗ್ರಹ ಯುತಿಯ ಪರಿಣಾಮವೆಂದರೆ ಚಳಿಗಾಳಿಯ ಪ್ರವಾಹವು, ಬರ್ಫಾಚ್ಛಾದಿತ ಹಿಮಾಲಯ ಪರ್ವತದ ಮೇಲಿನಿಂದ ಚಳಿಗಾಳಿಯು ಬೀಸುತ್ತ ಬೀಸುತ್ತ ಮುಂಬಯಿವರೆಗೆ ಬಂದಿದೆ ಈ ಗಾಳಿಯ ಚಳಿಯಿಂದ ಮುಂಬಯಿಯಲ್ಲಿ ಉಷ್ಣತಾಮಾನವು ೨೩ ಅಂಶಗಳ ವರೆಗೆ ಇಳಿದಿದ್ದಿತು. ಇಂಥ ಚಳಿಯು ಫೆಬ್ರುವರಿ ತಿಂಗಳಲ್ಲಿ ಇಷ್ಟಿಯಲ್ಲಿ ಒಮ್ಮೆ ಬಂದಿದ್ದಿತಂತೆ ಮುಂಬಯಿಯಲ್ಲಿ ಅಲ್ಲಲ್ಲಿ ಮೂಲೆಗಳಲ್ಲಿದ್ದಲ್ಲಿ ಜನರು ಕಾಸಿಕೊಳ್ಳುವದಕ್ಕಾಗಿ ಬೆಂಕಿ ಹಚ್ಚಿಸಿದ್ದರು. ಭಡೋಚ ಜಿಲ್ಲೆಯಲ್ಲಿ ಇದೇ ಚಳಿಯು ವಿಪರೀತವಾಗಿದೆ. ಭಯಂಕರ ಬಿರುಗಾಳಿಯು ಬೀಸಿ ಬೀಸಿ ಚಳಿಯನ್ನು ಹೆಚ್ಚಿಸುತ್ತಲಿದೆ. ನರ್ಮದಾನದಿಯ ದಂಡೆಯ ಮೇಲಿನ ಬೆಳೆಗಳೆಲ್ಲ ಈ ಭಯಂಕರವಾದ ಥಂಡಿಯಿಂದ ಒಣಗಿ ಹೋಗಿವೆ. ಇದಲ್ಲದೆ ಅಲ್ಲಿ ಚಳಿಯನ್ನು ತಡೆಯಲಾರದೆ ೨-೩ ಜನರೂ ಸತ್ತಿರುವರು.

ದೈವೀಕಾರ್ಯಕ್ಕೆ ಉಪಾಯವೇನು! ಆದರೂ ನಿರಾಶ್ರಿತರಿಗೆ ಸಹಾಯಮಾಡುವದು ಮನುಷ್ಯನ ಕರ್ತವ್ಯವಲ್ಲವೆ?

ಉತ್ತರ ಹಿಂದುಸ್ಥಾನದಲ್ಲಿ ಭೂಕಂಪ.

ಸಪ್ತಗ್ರಹ ಯುತಿಯಾಗುವುದರಿಂದ ದೇಶದಲ್ಲಿ ನಾನಾವಿಧ ಪೀಡೆಗಳುಂಟಾಗುವವೆಂದು ಫಲಜ್ಯೋತಿಷಕಾರರು ಹೇಳಿದ ಮೇರೆಗೆ ಉತ್ತರ ಹಿಂದುಸ್ಥಾನದಲ್ಲಿ ಎಲ್ಲ ಕಡೆಗೆ ಭೂಕಂಪದ ಅನರ್ಥಗಳುಂಟಾಗಿವೆ. ದಿಲ್ಲಿಯಲ್ಲಿ ಭೂಕಂಪವಾಗಿ ಕೆಲವು ಸೇಕಂದುಗಳ ವರೆಗೆ ಉಗಿಬಂಡಿಯು ವೇಗದಿಂದ ಹೋಗುವಾಗ ಆಗುವಂತೆ ಗಡಗಡ ಸಪ್ಪಳವಾಯಿತು. ಕೆಲವು ಕಟ್ಟಡಗಳು ಬಿದ್ದವು. ಜಮಾಲಪುರದ ಕಾರ್ಯಾಲಯದ ಆಡಳಿತೆಗಾರರಾದ ಮಿ. ಬ್ರಾವುನ್ ಮತ್ತು ವೈದ್ಯರಾದ ಮಿ. ಮುಖಮದಾರ ಇವರ ಬಂಗ್ಲೆಗಳು ಕಳಚಿಬಿದ್ದು ಇವರಿಬ್ಬರ ಪತ್ನಿಯರು ಮತ್ತು ಮಕ್ಕಳು

REGISTERED No. B. 285

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾಧಿಗ ಅಂಜುವವನಲ್ಲ।

ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಲಿಸಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-

ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.

ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೩. | ಆಲಮಟ್ಟಿ- ಸೋಮವಾರ ತಾರೀಖು ೨೯ ನೆಯ ಜನವರಿ ೧೯೩೪. | ಸಂಚಿಕೆ೨೪.

ಜನಸೇವೆಯೇ ದೇವರಸೇವೆ.

ನಿರಾಶ್ರಿತ ಜನರಿಗೆ ಆಶ್ರಯ.

ಸರಕಾರ ಮತ್ತು ರಾಷ್ಟ್ರೀಯ ಜನರ ಸಹಕಾರ ಸಹಾಯ

ಬಿಹಾರದಲ್ಲಿ ಭೂಕಂಪದಿಂದ ನಿರಾಶ್ರಿತರಾದ ಜನರಿಗೆ ಸಹಾಯ ಮಾಡುವದಕ್ಕಾಗಿ ವೈಸರಾಯರು ಕೂಡಿಸುವ ಫಂಡಿಗೆ ೪ ಲಕ್ಷ ರೂ. ಗಳು ಕೂಡಿವೆ. ಮತ್ತು ರಾಷ್ಟ್ರೀಯ ಧುರೀಣರಾದ ಬಾಬು ರಾಜೇಂದ್ರ ಪ್ರಸಾದರು ೬೦,೦೦೦ ರೂಪಾಯಿಗಳನ್ನು ಕೂಡಿಸಿರುವರು, ವೈಸ್ರಾಯರ ಫಂಡಿಗೆ ಲಂಡನದ ಮೇಯರರೂ ಧನನಿಧಿಯನ್ನು ಕೂಡಿಸಲು ಸಿದ್ಧರಾಗಿದ್ದಾರೆ. ಬಿಹಾರ ಸರಕಾರದವರು ಬಿದ್ದ ಮನೆಗಳನ್ನು ಇನ್ನು ಮೇಲೆ ಭೂಕಂಪದಿಂದ ಅಪಾಯವಾಗದಂತೆ ಕಟ್ಟಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಮುಂಬಯಿ ಮೇಯರ ಫಂಡು ಈಗ ೬೭೦೦೦ ರೂಪಾಯಿ ಆಗಿದೆ. ಮದ್ರಾಸ ಫಂಡು ೧೧೦೦೦, ಲಖನೌ ಫಂಡು ೧೨೫೦೦ ಮತ್ತು ಕಲಕತ್ತಾ ಮೇಯರ ಫಂಡು ೨೦೦೦೦, ಹೀಗೆ ಅನೇಕ ಕಡೆಗಳಿಂದ ಧನ ನಿಧಿಯು ಕೂಡಿಸಲ್ಪಡಹತ್ತಿದೆ.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL-587315
Dt. Bijapur. (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ರಾ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿ ಚೆನಬಸನಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ — ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹಿಂಗಾತಪ್ಪಾ.

ರಾಮುಜಿ —ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿವಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷಪಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ, ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಿ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಗತ್ಗುರು ರೇಣುಕಾಚಾರ್ಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲನುಟ್ಟ ಜನವರಿ ತಾರೀಖು ೨೯ ನೆಯ ಸೋಮವಾರ | ಸಂಚಿಕೆ ೨೪.

ಭೂಕಂಪದ ಅನಾಹುತಕ್ಕೆ ೨೦ ಸಾವಿರ ಜನರ ಬಲಿ!

(ಭೂಕಂಪದ ಅನರ್ಥ ಮಾಡುವುದರಲ್ಲಿ ಈಶ್ವರನದೇನೋ ಉದ್ದೇಶವಿರಬಹುದು

ಮ. ಗಾಂಧಿ

ವೈಸರಾಯರ ಫಂಡು ೪ ಲಕ್ಷದ ವರೆಗೆ ಬೆಳೆದಿದೆ.

ಹಿಂದುಸ್ಥಾನದಲ್ಲಿ ಅಭೂತಪೂರ್ವವಾದಂಥ ಭೂಕಂಪವು ಈಗ ಕೆಲವು ದಿವಸಗಳಿಂದ ಎಲ್ಲ ಕಡೆಯಲ್ಲಿಯೂ ಆಗಿದೆಯಷ್ಟೆ. ಅದರಲ್ಲಿ ಬಿಹಾರ ಪ್ರಾಂತವು ಭೂಕಂಪನಿನಿಂದ ಬಹಳೇ ಜರ್ಜರಿತವಾಗಿದೆ. ಸಮಾಧಾನದ ಸಂಗತಿಯಿಂದರೆ ಇಂಥ ವಿಪತ್ಕಾಲದಲ್ಲಿ ರಾಷ್ಟ್ರೀಯ ಪಕ್ಷದವರೂ ಸರಕಾರದವರೂ ಏಕೀಭವಿಸಿ ಮಾನವ ಕಲ್ಯಾಣದ ದೃಷ್ಟಿಯಿಂದ ಕೆಲಸ ಮಾಡುತ್ತಿರುವರು. ವೈಸ್ರಾಯರ ಫಂಡು ಈಗಾಗಲೇ ೪ ಲಕ್ಷದ ಮೇಲೆ ಹೋಗಿರುವುದು. ಇದಕ್ಕೆ ಸಂಸ್ಥಾನಿಕರೂ ತಮ್ಮ ಶಕ್ತ್ಯನುಸಾರವಾಗಿ ಸಹಾಯ ಮಾಡಿರುವರು. ಇದಲ್ಲದೆ ಹಿಂದುಸ್ಥಾನದ ದೊಡ್ಡ ದೊಡ್ಡ ನಗರ ಸಭೆಯವರೂ, ಸಂಸ್ಥೆಯವರೂ ಉದಾರಪೂರ್ವಕವಾಗಿ ಸಹಾಯ ಮಾಡಿರುವರು.

ಪಂ. ಮಾಲವೀಯ, ಪಂ. ಜವಾಹರಲಾಲ ನೆಹರು, ಬಾಬು ರಾಜೇಂದ್ರ ಪ್ರಸಾದ ಇವರು ವಿಪದ್ಗ್ರಸ್ತರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿರುವರು. ಭೂಕಂಪದಿಂದ ೨೦ ಸಾವಿರ ಜನರು ಸತ್ತರೆಂದು ಮಾಲವೀಜಿಯವರು ಪ್ರಕಟ ಪಡಿಸಿರುವರು. ಮಹಾತ್ಮಾಜಿಯವರು ರಾಜೇಂದ್ರ ಪ್ರಸಾದರಿಗೆ ತಂತೀ ಮೂಲಕವಾಗಿ ಈ ಪ್ರಕಾರ ತಿಳಿಸಿರುವರು—" ನಿಮ್ಮ ತಂತಿ ವಾರ್ತೆಯು ಹೃದಯದ್ರಾವಕವಾಗಿದೆ. ಈ ಕಾಲಕ್ಕೆ ಆಪದ್ಗ್ರಸ್ತ ಜನರಿಗೆ ಸಹಾಯ ಮಾಡುವದಕ್ಕಾಗಿ ನಾನು ಹತ್ತಿರವಿದ್ದರೆ ಒಳ್ಳೆಯದಾಗುತ್ತಿತ್ತು. ನಿಮಗೆ ಜನರ ಕಡೆಯಿಂದ ಪೂರ್ಣ ಸಹಾಯ ಸಿಗುವುದೆಂಬ ಆತ್ಮ ಇದೆ. ಮೇಲಿಂದ ಮೇಲೆ ತಿಳಿಸುತ್ತ ಹೋಗಿರಿ."

ಹಿಂದುಸ್ಥಾನದ ಈ ಅನರ್ಥಕ್ಕೆ ಪರದೇಶಗಳಿಂದಲೂ ಸಹಾಯವು ಬರುತ್ತಲಿದೆ. ಅಮೇರಿಕನ್ ರೆಡ್‌ಕ್ರಾಸ ಸಂಸ್ಥೆಯವರು ಹಿಂದುಸ್ಥಾನದ ರೆಡ್‌ಕ್ರಾಸ್ ಸಂಸ್ಥೆಗೆ ೨೬ ಲಕ್ಷ ರೂಪಾಯಿಗಳನ್ನು ಕಳಿಸಿರುವರು. ಇದಲ್ಲದೆ ಲಂಡನ್ನಿನ ಮೇಯರರು ಫಂಡು ಕೂಡಿಸಹತ್ತಿದ್ದಾರೆ. ಪ್ಯಾರಿಸ್ ನಗರದಿಂದಲೂ ಸಹಾಯ ಮಾಡುವ ಪ್ರಯತ್ನವು ನಡೆದಿದೆ. ಬ್ರಿಟಿಶ ರೆಡ್‌ಕ್ರಾಸ್ ಸೊಸಾಯಿಟಿಯವರು ೫೦ ಲಕ್ಷ ರೂಪಾಯಿ ಕಳಿಸಿದ್ದಾರೆ.

ಅಲಾಹಾಬಾದದಲ್ಲಿ ಸರ್. ತೇಜಬಹಾದ್ದೂರ ಸಪ್ರುರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಭೂಕಂಪ ದುಃಖನಿವಾರಣ ಸಮಿತಿಯನ್ನು ಏರ್ಪಾಡಮಾಡಲಾಯಿತು. ಸರ್. ಸಪ್ರುರವರು ಭೂಕಂಪ ಫಂಡಿಗೆ ೧ ಸಾವಿರ ರೂಪಾಯಿಗಳನ್ನು ಕೊಟ್ಟದ್ದು ಅಲಾಹಾಬಾದದಿಂದ ಒಟ್ಟಿಗೆ ೧೫೦೦ ರೂಪಾಯಿಗಳನ್ನು ಬಿಹಾರಕ್ಕೆ ಕಳಿಸಲಾಗಿದೆ.

೩೦ ನೆಯ ತಾರೀಖನ್ನು ಬಿಹಾರ ದಿನವೆಂದು ಪಾಲಿಸಿರೆಂದು ಪಂ. ಮದನಮೋಹನ ಮಾಲವೀಯರು ಸೂಚಿಸಿದ ಮೇರೆಗೆ ಅಲ್ಲಲ್ಲಿ ಸೈರಣೆಗಳು ಮಾಡಲ್ಪಡಹತ್ತಿವೆ.

— ೨೬ ನೆಯ ತಾರೀಖಿನ ದಿವಸ ಸ್ವಾತಂತ್ರ್ಯದಿವಸವೆಂದು ಪಾಲಿಸಲ್ಪಟ್ಟು ಭಾಷಣಮಾಡಿದ್ದರಿಂದ ಕಾಕಾ ಕಾಲೇಲಕರ, ಶ್ರೀ. ದೇವಗಿರಿಕರ ಮೊದಲಾದವರು ಬಂಧಿಸಲ್ಪಟ್ಟರು.

ಶ್ರೀ ಬಸವಾದಿ ಪ್ರಮಥರ

ವಚನ ಪ್ರವಚನ ಮಾಲಾ ಧಾರವಾಡ.

ಈ ಮುಂಜಿ ಪ್ರಕಟವಾದ ಪ್ರಕಾರ ಧಾರವಾಡದ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಮಾಘ ಶುದ್ಧ ಪ್ರತಿಪದೆಯಿಂದ ಶ್ರೀ. ಬಸವಾದಿ ಪ್ರಮಥರ ವಚನ ಪ್ರವಚನ ಮಾಲೆಯು ಪ್ರಾರಂಭವಾಯಿತು. ಈ ಪ್ರವಚನ ಮಾಲೆಯು ಶ್ರೀಯುತ ಹರ್ಡೇಕರ ಮಂಜಪ್ಪನವರಿಂದ ಉಪಕ್ರಮಿಸಲ್ಪಟ್ಟು ಮೊದಲನೆಯ ಮೂರು ದಿವಸ ಇವರಿಂದಲೇ ಪ್ರವಚನ ಜರುಗಿತು. ಒಂದು ವಾರದ ಪ್ರವಚನಗಳ ತಾತ್ಪರ್ಯವನ್ನು ಇಲ್ಲಿ ಕೊಟ್ಟಿದೆ.

ಶ್ರೀ. ಹರ್ಡೇಕರ ಮಂಜಪ್ಪನವರು.

ಭಕ್ತಿಯ ಬೆಳಕು—ಮಹಾನುಭಾವರಾದ ಬಸವಣ್ಣನವರ ವಚನಗಳ ಮೇಲೆ ಮೂರು ಪ್ರವಚನಗಳನ್ನು ಮಾಡಿದರು. ಮೊದಲನೆಯದು ಭಕ್ತಿಯ ಬೆಳಕು. ಶಿವನು ನಾದ ಪ್ರಿಯನಲ್ಲ, ವೇದ ಪ್ರಿಯನಲ್ಲ ಭಕ್ತಿ ಪ್ರಿಯ ನೆಂಬುದನ್ನು ವಿವರಿಸಿ ಭಕ್ತಿಯು ಬರೆಮಾತಿನಲ್ಲಿಲ್ಲ. ಅಥವಾ ಡಂಭಾಚಾರ ಪೂಜೆ, ಭಸ್ಮ ರುದ್ರಾಕ್ಷಿ ಧಾರಣ, ಮೊದಲಾದವುಗಳಲ್ಲಿಲ್ಲ.

ಗುರುವಿಗೆ ತನುವನ್ನು ಲಿಂಗಕ್ಕೆ ಮನಸ್ಸನ್ನು ಜಂಗಮಕ್ಕೆ ಧನವನ್ನು ವಂಚನೆಯಿಲ್ಲದೆ ಅರ್ಪಿಸುವುದೇ ಭಕ್ತಿಯ ಲಕ್ಷಣ. ಭಕ್ತಿಯೆಂದರೆ ಸೇವೆ. ಶಿವಭಕ್ತರ ಸೇವೆಯಲ್ಲಿಯೇ ತನು ಮನ ಧನಗಳನ್ನು ಇಟ್ಟೇ ಇಲ್ಲ, ಆತ್ಮವನ್ನು ಅರ್ಪಿಸುವದೇ ನಿಜ ಭಕ್ತಿಯು. ಇಂಥ ಭಕ್ತಿಯನ್ನೇ ಬಸವಣ್ಣನವರು ಜಗತ್ತಿಗೆ ತೋರಿಸಿ ಆ ಭಕ್ತಿಯ ಬೆಳಕಿನಲ್ಲಿಯೇ ಬೆರೆದರು.

ಲಿಂಗ ನಿಷ್ಠೆ—ಶ್ರೀ. ಬಸವಣ್ಣನವರ ಲಿಂಗ ನಿಷ್ಠೆಯು ಅಪಾರವಾದುದು. ಅಂಗದಲ್ಲಿ ಲಿಂಗವುಳ್ಳವರೆಲ್ಲಾ ಅವರಿಗೆ ಸಂಗಯ್ಯನಂತೆ ಅಂದರೆ ಗುರುವಿನಂತೆ ಕಾಣುತ್ತಿದ್ದರು. ಇಂಥ ನಿಷ್ಠೆ ಬಲಿಯಲು ಗುರು ಲಿಂಗ ಜಂಗಮಗಳ ವಿನಾ ಇನ್ನಾವ ದೇವರನ್ನೂ ಪೂಜಿಸಬಾರದು. ಹಾಗೆ ಪೂಜಿಸುವ ವೀರಶೈವನು ವ್ಯಭಿಚಾರಿಯಂತೆ ಭ್ರಷ್ಟನಾಗುತ್ತಾನೆ.

ಅಂಗದಲ್ಲಿ ಲಿಂಗವುಳ್ಳವರಲ್ಲಿ ಅನೇಕರು ಕಂಡ ಕಂಡ ಕಲ್ಲು ಮರ ಮೂರ್ತಿಗಳನ್ನು ಮಾರೆಪ್ಪ, ಬೀರಪ್ಪ, ದುರ್ಗವ್ವ ಎಂದು ನಾನಾ ರೀತಿಗಳಿಂದ ಪೂಜಿಸುತ್ತಾರೆ. ಮನೆ ದೇವರೆಂದು ಅನೇಕ ದೇವರಿಗೆ ನಡೆದುಕೊಳ್ಳುತ್ತಾರೆ. ಇವೆಲ್ಲಾ ಲಿಂಗಾಂಗಿಗಳಿಗೆ ಅಧರ್ಮ. ಈ ದೇವರ ಕುಕಲ್ಪನೆಗಳನ್ನೆಲ್ಲಾ ಕಿತ್ತು ಹಾಕಿ ಅಂಗದಲ್ಲುಳ್ಳ ಲಿಂಗ ಗುರು ಜಂಗಮರನ್ನು ಮಾತ್ರ ಪೂಜಿಸಬೇಕು.

ಜಂಗಮ ಶ್ರೇಯ— ಬಸವ ಮಹಾನುಭಾವರು ಜಂಗಮ ಪ್ರಾಣಿಗಳಾಗಿದ್ದರು. ಜಂಗಮನು ಇವರಿಗೆ ಪ್ರಾಣ ಸ್ವರೂಪ. ಜಂಗಮ ಸೇವೆಯ ವಿನಾ ಲಿಂಗ ಪೂಜೆಯು ನ್ಯರ್ಥ. ಅಂಥ ಲಿಂಗ ಪೂಜೆಯಲ್ಲಿ ಹುರುಳಿಲ್ಲ. ಗಿಡಕ್ಕೆ ಬೇರು ಹೇಗೆ ಮುಖ್ಯವೋ ಹಾಗೆಯೇ ಲಿಂಗಕ್ಕೆ ಜಂಗಮವೇ ಮುಖ್ಯ. ಗುರುವಿಗೂ ಗುರು ಜಂಗಮವು.

ಶಿವಭಕ್ತರ ತನು ಮನಗಳನ್ನು ನೋಯಿಸಿ ಅವರನ್ನು ಬಳಲಿಸಿ ಲಿಂಗ ಪೂಜೆ ಮಾಡುವುದು ವ್ಯರ್ಥ. ಆದಕಾರಣ ನಾನಾ ರೀತಿಗಳಿಂದ ಶಿವಭಕ್ತರ ಸೇವೆ ಮಾಡಿ ಅವರನ್ನು ಸಂತುಷ್ಟಗೊಳಿಸುವುದೇ ನಿಜವಾದ ಲಿಂಗ ಪೂಜೆ. ಅದೇ ಜಂಗಮ ಸೇವೆ.

ಶ್ರೀ. ಪಂಡಿತ ಕಲಿಗಣನಾಥ ಶಾಸ್ತ್ರಿಗಳು.

ಬಾಗಲಕೋಟೆಯ ಶ್ರೀ. ಪಂಡಿತ ಕಲಿಗಣನಾಥ ಶಾಸ್ತ್ರಿಗಳವರು ಮಾಘ ಶುದ್ಧ ೪-೫ ಗಳಲ್ಲಿ ಶ್ರೀ. ಬಸವೇಶ್ವರ ದೇವರ ವಚನಗಳ ಮೇಲೆ ಪ್ರವಚನ ಮಾಡಿದರು. ಇವರು ಅಲ್ಲಲ್ಲಿ ಆಗಮ ಮತ್ತು ಶಿದ್ಧಾಂತಶಿಖಾಮಣಿ ಮೊದಲಾದ ಗ್ರಂಥಗಳ ಆಧಾರಗಳನ್ನೂ ಕೊಡುತ್ತಿದ್ದರು.

ಭವಬಂಧನ ಭವನಾಶ—ಈ ವಿಷಯದ ಮೇಲೆ ಮೊದಲನೆಯ ಪ್ರವಚನವಾಯಿತು. ಲಿಂಗ ಪೂಜೆ ಮತ್ತು ಜಂಗಮ ದಾಸೋಹಗಳನ್ನು ಮಾಡದಿದ್ದುದರಿಂದ ಜೀವಿಗೆ ಈ ಸಂಸಾರವು ಪ್ರಾಪ್ತವಾಗಿದೆ. ಪುನಃ ಈ ಜನನ ಮರಣಗಳು ಬೇಡವಾಗಿದ್ದರೆ ಭಕ್ತಿಯಿಂದ ಲಿಂಗ ಪೂಜೆ ಜಂಗಮ ದಾಸೋಹಗಳನ್ನು ಮಾಡಲೇ ಬೇಕು.

ಲಿಂಗಪೂಜೆ—ಲಿಂಗಪೂಜೆಯು ವೀರಶೈವನ ನಿತ್ಯ ಕರ್ಮವು. ಈ ಲಿಂಗಪೂಜೆಯನ್ನು ಮಾಡುವ ಲಿಂಗಾಂಗಿಗಳಿಗೆ ಪಂಚ ಸೂತಕಗಳಾಗಲಿ ಜುಟ್ಟು ಜನಿವಾರಗಳಾಗಲಿ ಇರಕೂಡದು. ಇತ್ತಲಾಗಿ ಕೆಲವರು ಜುಟ್ಟವನ್ನು ಬಿಡಿಸಹತ್ತಿದ್ದಾರೆ. ಇದು ಅಧರ್ಮವು. ಪ್ರಾಕೃತರಾದ ಬ್ರಾಹ್ಮಣಾದಿಗಳಂತೆ ತಾವೂ ಆಗಬೇಕೆಂದು. ಪಂಚ ಸೂತಕಗಳನ್ನೂ ನೇಳಹತ್ತಿದ್ದಾರೆ, ಇದೂ ಅನಾಚಾರವು. ಸ್ತ್ರೀಯರು ಕಚ್ಚಿ ಹಾಕಿಕೊಂಡು ಲಿಂಗಪೂಜೆ ಮಾಡಬೇಕೆಂದು ಕೆಲವರು ದುರುಪದೇಶ ಮಾಡುತ್ತಿದ್ದಾರೆ.

ಪಂಚ ಕಚ್ಚೆ ಹಾಕಿಕೊಂಡು ಶಿವಪೂಜೆ ಮಾಡಬೇಕೆಂದು ನಿಯಮವಿರುವುದೇನೋ ನಿಜ. ಆದರೆ ಅದು ಪುರುಷರಿಗೆ. ಸ್ತ್ರೀಯರಿಗಲ್ಲ. ದೀಕ್ಷೆಯ ಕಾಲಕ್ಕೆ ತಲೆ ಬೋಳಿಸಬೇಕೆಂದಿದೆ. ಲಿಂಗಾಂಗಿಗಳಾದ ನಮ್ಮಲ್ಲಿ ಸ್ತ್ರೀಯರಿಗೂ ದೀಕ್ಷೆಯಾಗಲೇಬೇಕು. ಹಾಗಾದರೆ ಆಗ ಅವರ ತಲೆ ಬೋಳಿಸಬೇಕೆಂದು ಹೇಳಬಹುದೇ? ಇದು ದುರುಪದೇಶವೇ ಸರಿ.

ಶಿಖಾಸೂತ್ರ ವಿಹೀನಾಶ್ಚ| ಪಂಚಸೂತಕ ವರ್ಜಿತಾಃ| ವೀರಶೈವಾಭವಂತ್ಯೇತೆ| ಮತ್ತುಲ್ಯಾ ನ ಚ ಸಂಶಯಃ|| ಎಂಬ ವಾತುಲಾಗಮದ ಪ್ರಕಾರ ವೀರಶೈವನಿಗೆ ಜುಟ್ಟು ಜನಿವಾರ ಮತ್ತು ಪಂಚ ಸೂತಕಗಳಿಲ್ಲವೆಂದೇ ತಿಳಿಯಬೇಕು.

ಜಂಗಮ ತೃಪ್ತಿಗೊಳಿಸದೆ ಲಿಂಗಪೂಜೆ ಮಾಡಿದರೆ ಮೋಕ್ಷವಿಲ್ಲ. ತನಗಾಗಿ ಆಹಾರವನ್ನು ಸಿದ್ಧಗೊಳಿಸುವವನು ನರನೆಯಾಗುತ್ತಾನೆ. ಗುರು ಲಿಂಗ ಜಂಗಮ ತೃಪ್ತಿಗಾಗಿಯೇ ಅನ್ನವನ್ನು ಸಿದ್ಧಗೊಳಿಸಬೇಕೆಂದು ವೀರಶೈವಾಚಾರ ಪ್ರದೀಪಿಕೆಯಲ್ಲಿ ಹೀಗೆ ಹೇಳಿದೆ.

ಲಿಂಗಾರ್ಥಂ ಜಂಗಮಾರ್ಥಂವಾ| ಪಾಚನಂ ನಾತ್ಮಕಾರಣಾತ್| ಆತ್ಮಾರ್ಥಂ ಯಃ ಪಚೇದನ್ನಂ| ನರಕಾರ್ಥಂ ಸಜೀವತಿ|

ಶ್ರೀ. ಮಾಸ್ತರ ಚನ್ನಮಲ್ಲಪ್ಪನವರು.

ಲಿಂಗಾಂಗ ಸಾಮರಸ್ಯ—ಹಾವೇರಿಯಲ್ಲಿರುವ ಶಿರಾಳಕೊಪ್ಪದ ಮಾಸ್ತರ ಚನ್ನಮಲ್ಲಪ್ಪನವರು ೬-೭ ಗಳಲ್ಲಿ ಕೂಸ್ಯ ಸಂಪಾದನೆಯಲ್ಲಿರುವ ಸಿದ್ಧರಾಮಯ್ಯದೇವರ ಮೂರನೆಯ ಸಂಪಾದನೆಯನ್ನು ಕು

ವೀರಶೈವರೇ ಸಮಾಜೋತ್ಕರ್ಷ ಸಾಧಕರಾಗಿರಿ.

[ಬೆಂಗಳೂರುನಗರದ ಶ್ರೀ ವೀರಶೈವ ಸಮಾಜೋತ್ಕರ್ಷ ಸಾಧಕ ಸಂಘದವರಿಂದ]

ಪೂರ್ವಾಚಾರ್ಯರೂ. ಶಿವಶರಣರೂ ಮುಖ್ಯವಾಗಿ ಲಿಂಗಾಂಗಿಗಳಾದ ಪೂರ್ವಜರೆಲ್ಲರೂ "ಅರ್ಪಣ" ಯೋಗಿಗಳಾಗಿಯೇ ಜೀವಿಸಿದರಲ್ಲದೆ ತಮ್ಮ ಮುಂದಿನ ಪೀಳಿಗೆಗೂ, ಅಂದರೆ ವೀರಶೈವರೆಲ್ಲರೂ ಅರ್ಪಣ ಬುದ್ಧಿಯಿಂದಲೇ ಅಂದರೆ ಕೇವಲ ಶಿವಾರ್ಪಿತ ಭಾವನೆಯಿಂದಲೇ ಜಗತ್ತಿನಲ್ಲಿ ತಮ್ಮ ಬಾಳ್ವೆಯನ್ನು ನಡೆಯಿಸಬೇಕೆಂತಲೂ, ಬೋಧಿಸಿ ಕೀರ್ತಿಕಾಯರಾಗಿ ಹೋಗಿರುವರಷ್ಟೆ. ಆದರೆ ಇಂದಿನ ಲಿಂಗಾಂಗಿಗಳು ಪೂರ್ವಜರ ಈ ಬುದ್ಧಿವಾದವನ್ನು ಯಾವ ರೀತಿಯಲ್ಲಿ ಅನುಸರಿಸುತ್ತಿರುವರೆಂಬುದನ್ನು ನೋಡಿದರೆ ಮಾತ್ರ ನಿಜವಾದ ಯಾವ ಸಮಾಜಾಭಿಮಾನಿಗಾದರೂ ವಿಷಾದ, ವ್ಯಸನಗಳು ಮೂಡದಿರಲಾರವು. ಯಾಕೆಂದರೆ ನಮ್ಮ ಪೂರ್ವಜರು ಐಹಿಕವಾದೀ ಭೋಗ ಭಾಗ್ಯಂಗಳೂ, ಪಂಚ ಭೌತಿಕವಾದೀ ಶರೀರವೂ, 'ಜಗದೀಶ್ವರನಿಂದನುಗ್ರಹಿಸಲ್ಪಟ್ಟಿದ್ದರೂ, ಪುನಃ ಅವನಿಚ್ಛೆಯಾದಾಗ ಅವುಗಳನ್ನು ಮರಳತೆಗೆದುಕೊಂಡು ಬಿಡುವನಾದ್ದರಿಂದ ಅವುಗಳನ್ನೇ ಸ್ಥಿರವೆಂದು ನಂಬಬಾರದೆಂತಲೂ ಆದರೆ ನಂಬದೆ ಲುಬ್ಧತ್ವವನ್ನೂ, ತಾಳಬಾರದೆಂತಲೂ ಈಶ್ವರನಿಂದನುಗ್ರಹೀತವಾದೀ ಶರೀರಕ್ಕೆ ಈಶ್ವರ ಸೃಷ್ಟವಾದೀ ಪ್ರಕೃತಿ ಸೌಖ್ಯವನ್ನು ಈಶ್ವರಾರ್ಪಿತ ಭಾವನೆಯಿಂದಲೇ ಅನುಭವಿಸಬೇಕೆಂತಲೂ, ಈ ಬಗೆಯ ಅರ್ಪಣ ಬುದ್ಧಿಯ ಲಿಂಗಾಂಗಿ ಧರ್ಮವನ್ನೇ ಎಲ್ಲೆಲ್ಲಿಯೂ ಪಸರಿಸುವಂತೆ ಮಾಡಬೇಕಾದುದು ಪ್ರತಿಯೊಬ್ಬ ಲಿಂಗಾಂಗಿಯ ಕರ್ತವ್ಯವೆಂತಲೂ ಬೋಧಿಸಿರುವರು. ಆದರೆ ಇಂದಿನ ವೀರಶೈವರ ಅರ್ಪಣ. ಅಥವಾ ಅನಾಸಕ್ತ ಭಾವನೆಯೇ ಬೇರೆ, ಹಿಂದಿನವರು ಐಹಿಕ ವಿಷಯಗಳ ಮೇಲೆ ಅನಾಸಕ್ತ ಭಾವನೆಯನ್ನು ತಾಳಿದ್ದರೆ ಇಂದಿನವರು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳ ಮೇಲೆ ಅನಾಸಕ್ತ ಬುದ್ಧಿಯನ್ನು ತೋರಿಸುತ್ತಿರುವರು. ಹಿಂದಿನವರು ಸಮಾಜದೊಳಗಣ ಕೀಳು ಮೇಲುಗಳ ಕುರಿತಲ್ಪನೆಗಳನ್ನು ಕಿತ್ತು ಹಾಕಿ, ಸಸ್ನೇಮ ಸರ್ವ ಸಮತಾ ಭಾವನೆಯನ್ನು ನೆಲೆಗೊಳಿಸಿ ಐಕಮತ್ಯವನ್ನು ಗಳಿಸಿ ಆ ಐಕಮತ್ಯ ಬಲದ ಮೂಲಕ ದುರ್ವಾದಿಗಳನ್ನು ಗೆದ್ದು ಆ ಐಕಮತ್ಯ ಶಕ್ತಿಯ ಮೂಲಕ ಊಹಾತೀತವಾದ ಮಹತ್ಕಾರ್ಯಗಳನ್ನು ಮಾಡಿ ಆ ಮೂಲಕ ಸಮಾಜಕ್ಕೆ ಅನಾರವಾದ ಮಾನ ಮನ್ನಣೆಗಳನ್ನು ಗಳಿಸಿದ್ದರೆ ಇಂದಿನವರು ಕೀಳುಮೇಲುಗಳನ್ನು ಕಲ್ಪಿಸಿಕೊಂಡು ಇದ್ದ ಅಲ್ಪ ಸ್ವಲ್ಪ ಐಕಮತ್ಯವನ್ನು ನಾಶ ಪಡಿಸಿಕೊಂಡು ಧಾರ್ಮಿಕ ವಿಧಿಗಳನ್ನು ಮನಬಂದಂತೆ ಕಲ್ಪಿಸಿಕೊಂಡು ಸಮಾಜವನ್ನು ಇಬ್ಭಾಗಗೊಳಿಸಿ ಅನೈಕಮತ್ಯದ ಮೂಲಕ ಸಣ್ಣದೊಂದು ಅಲ್ಪ ಕಾರ್ಯವನ್ನೂ ಸಹ ಮಾಡಲಾರದಷ್ಟು ಬಲಹೀನರಾಗಿದ್ದಾರೆ. ಹಿಂದಿನವರು ಪ್ರಬಲ ಪ್ರೇಮಯುಕ್ತ ಅದ್ಭುತ ಧಾರ್ಮಿಕ ಕ್ರಾಂತಿಯ ಮೂಲಕ ಸಮಾಜವನ್ನು ಬಂಧುರಗೊಳಿಸಿ ಲಿಂಗಾಂಗಿ ಧರ್ಮವು ಲೋಕದಲ್ಲೆಲ್ಲಾ ಹಬ್ಬುವಂತೆ ಸಮಾಜದ ಧಾರ್ಮಿಕ ಕವಾಟಗಳನ್ನು ವಿಶಾಲವಾಗಿ ತೆರೆದಿಟ್ಟು ಹೋಗಿದ್ದರೆ. ಇಂದಿನವರು ಅದಕ್ಕೆ ವ್ಯತಿರಿಕ್ತವಾಗಿ ಸಮಾಜವನ್ನು ಸಡಿಲಿಸಿ ಧಾರ್ಮಿಕ ಕವಾಟಗಳನ್ನು ಬಂಧಿಸಿ, ಲಿಂಗಾಂಗಿ ಧರ್ಮವನ್ನು ಲುಪ್ತಪ್ರಾಯಗೊಳಿಸಿ ಬಿಟ್ಟಿರುವರು. ಮುಖ್ಯವಾಗಿ ಪೂಜ್ಯವರ್ಗವೆನಿಸುವ ಇಂದಿನ ಗುರು, ಜಂಗಮ ವೃಂದವು ಇಂದು ಅನುಭವಿಸುತ್ತಿರುವ, ಅಮೋದ ಪ್ರಮೋದಗಳಿಂದ ದೂರ ಸರಿದು ತಮ್ಮ ಪೂರ್ವಜರ ಮಾರ್ಗವನ್ನು ಅಂದರೆ "ಎನಗೆ ಭೋಗ ಭಾಗ್ಯ ಬೇಡ| ಎನಗೆ ಜಪವು ತಪವು ಬೇಡ| ಎನಗೆ ನಿಮ್ಮ ತೊತ್ತ ಸೇವೆ ನಿತ್ಯವಾಗಲೈ|" ಎಂಬ ಪೂಜ್ಯ ಶ್ರೀ ವಿಪ್ಪಿನ ಷಡಕ್ಷರಿ ಮಹಾಸ್ವಾಮಿಗಳವರ ದಿವ್ಯ ಬೋಧೆಯನ್ನನುಸರಿಸಿ ಸಮಾಜ ಸೇವೆ, ಧರ್ಮೋನ್ನತಿ, ಧರ್ಮ ಪ್ರಸಾರಣಾ ಕಾರ್ಯಗಳಲ್ಲಿ ತಮ್ಮ ಉತ್ಸಾಹವನ್ನು ತೋರಬೇಕು. ಶಿವಪೂಜಾ ಲೋಲರಾಗಿ ಬಹುಕಾಲವನ್ನು ಶಿವಾರ್ಚನೆಯಲ್ಲಿಯೇ ಕಳೆದು ಪರಮ ಪದವಿಗಾಗಿ (ಅನಾಚಾರಿಗಳ ಮಾತಂತಿರಲಿ)ಹಗಲಿರುಳೂ ಶ್ರಮ ಪಡುತ್ತಿರುವ ಭಕ್ತ ವರ್ಗವಾದರೂ ಪರಮ ಪದವಿಗೆ ಸುಲಭ ಮಾರ್ಗವಾವುದೆಂಬುದನ್ನು ಈ ಕೆಳಗಣ "ಪರಮ ಪದವಿಯ ನಿಮ್ಮ ಕೊರಳೊಳು ಹಾಕಿಕೊಳ್ಳಿ,ಪರಮ ಪದವಿಯ ನಿಮ್ಮ ಎದೆಯೊಳು ಇರಿದು ಕೊಳ್ಳಿ, ಎನಗೆ ನಿಮ್ಮ ತೊತ್ತ ಸೇವೆಯೇ ಸಾಕು. ಮಹಾಲಿಂಗ ಕಲ್ಲೇಶ್ವರದೇವ ಪರಮ ಪದವಿಯ ನಿಮ್ಮ ತಲೆಯೊಳು ಸುತ್ತಿಕೊಳ್ಳಿ," ಎಂಬ ಶರಣರ ದಿವ್ಯೋಪದೇಶದಿಂದರಿತು ಶಿವಭಕ್ತರ ಸೇವೆ ಅಂದರೆ ವೀರಶೈವ ಸಮಾಜ ಸೇವಕರಾಗುವದು, ಸಮಾಜ ಸುಧಾರಕರಿಗೆ ತಮ್ಮ ಒತ್ತಾಸೆಯನ್ನೀಯುವುದು, ವೀರಶೈವ ಸಮಾಜದ ಉತ್ಕರ್ಷಕ್ಕಾಗಿ ಸ್ವತಃ ಪ್ರಯತ್ನಿಸುವದಲ್ಲದೆ, ಪ್ರಯತ್ನಿಸುವವರಿಗೆ ಕೈಲಾದಷ್ಟು ಪ್ರೋತ್ಸಾಹಿಸುವುದು, ಸ್ವತಃ ಸಮಾಜ ಸೇವಾ ದೀಕ್ಷೆಯನ್ನು ವಹಿಸಿ ಕೊಳ್ಳುವುದು, ಮೊದಲಾದ ಈ ಮಾರ್ಗವೇ ಪರಮ ಪದವಿಗೆ ಅತ್ಯಂತ ಸುಲಭ ಮಾರ್ಗವೆಂದರಿತು ಸಮಸ್ತ ಲಿಂಗಾಂಗಿಗಳೂ ಸೇವಾ ದೀಕ್ಷಿಕರಾಗಬೇಕು. ಮುಖ್ಯವಾಗಿ ಇಂದಿನ ವೀರಶೈವರು ಹಿಂದಿನವರ ಅನಾಸಕ್ತ ಭಾವನೆಯನ್ನೇ, ಇಂದಿನ ಸ್ವಾರ್ಥತ್ಯಾಗ ಭಾವನೆಯನ್ನಾಗಿ ಮಾರ್ಪಡಿಸಿಕೊಂಡು ಆ ಸ್ವಾರ್ಥತ್ಯಾಗ ಬುದ್ಧಿಯನ್ನು ತಮ್ಮ ದಿನ ನಿತ್ಯ ನಾಳಗಳಲ್ಲಿ ಅಳವಡಿಸಿಕೊಂಡು ನಾನು ಸಮಾಜ ಸೇವೆ ಮಾಡುತ್ತಿರು

ರಿತು ಪ್ರವಚನ ಮಾಡಿದರು. ಇವರು ಶಿವಾನುಭವ ತತ್ವಗಳನ್ನು ಬಹು ವಿವರವಾಗಿ ವಿವರಿಸಿದರು. ಬೇರೆ ಮತಗಳಿಗೂ ವೀರಶೈವ ಮತಕ್ಕೂ ಇರತಕ್ಕ ತಾರತಮ್ಯವನ್ನು ಹೆಚ್ಚಾಗಿ ತಿಳಿಸಿದರು.

ಲಿಂಗದಾಕಾರ, ಲಿಂಗಪೂಜೆಗಳ ಮಹತ್ವವನ್ನು ವಿಶೇಷವಾಗಿ ತಿಳಿಸಿದರು. ಮಂತ್ರಯೋಗ, ಲಯಯೋಗ, ಹಟಯೋಗ, ರಾಜಯೋಗಗಳು ಈ ಲಿಂಗಪೂಜೆಯ ಶಿವಯೋಗದಲ್ಲಿ ಹೇಗೆ ಅಡಕವಾಗಿವೆಯೆಂಬುದನ್ನು ತಿಳಿಸಿದರು. ಬ್ರಹ್ಮರಂಧ್ರ ಶಿಖಾಚಕ್ರ ಮತ್ತು ವಿಶ್ವಯಚಕ್ರಗಳಿಂದಲೇ ಲಿಂಗ ಗುರು ಜಂಗಮಗಳುದಯವಾಗಿವೆಯೆಂಬುದನ್ನು ವಿವರಿಸಿದರು.

ಅಂತರಷ್ಟಾವರಣ—ಶ್ರೀ. ಚನ್ನವೃಷಪ್ಪನವರು ಉಪಕ್ರಮ ಮಾಡಿದ ವಿಷಯವನ್ನೇ ಶು. ೮ ದಿನ ಶ್ರೀ. ನಂಜಪ್ಪನವರು ಮುಂದರಿಸಿ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರಗಳ ವಿವೇಚನೆಯನ್ನು ಮಾಡಿದರು. ಜಾತಿಯ ಕಲ್ಪನೆಯು ನಿವಾರಣೆಯಾಗದೆ ಅಣವಮಲವು ಹೋಗದು. ಅದಳಿಯದೆ ಇಷ್ಟಲಿಂಗ ಸಿದ್ಧಿಯಿಲ್ಲ. ಲಿಂಗಾಂಗಿಯು ತನ್ನಲ್ಲಿ ಜಾತಿಸೂತಕವನ್ನೇ ಕಳೆದುಕೊಳ್ಳದಿದ್ದಾಗ ಮುಂದಿನ ಸುಖ ಶಾಂತಿಗಳೆಲ್ಲಿ ದೊರೆಯುವವು? ಅವು ಕೇವಲ ಮಾತಿನ ಮಾಲೆಯೇ ಸರಿ.

ವ್ಯವಸ್ಥಾಪಕ

ವೆನೆಂಬ ಹೆಮ್ಮೆಯನ್ನು ಮರೆತು ನಿರಪೇಕ್ಷ ಬುದ್ಧಿಯಿಂದ ಸಮಾಜೋ ತ್ಕರ್ಷಕ್ಕಾಗಿ ಶ್ರಮ ಪಡಬೇಕು. ಅಭ್ಯುದಯಾಕಾಂಕ್ಷಿಗಳು ಮನಃ ಪೂರ್ವಕವಾಗಿ ಪ್ರಯತ್ನಿಸಿದರೆ ಬೂದಿ ಮುಚ್ಚಿದ ಕೆಂಡದಂತೆ ಮಂಕಾ ಗಿರುವ ಈ ನಮ್ಮ ಸಮಾಜವನ್ನು ಅಲ್ಪ ಕಾಲದಲ್ಲಿಯೇ ಪ್ರಜ್ವಲನಂ ದಾದೀಪಿಗೆಯಂತೆ ಪ್ರಕಾಶಗೊಳಿಸಬಹುದು. ಯಾಕಂದರೆ ಜನತೆ ಯ ಮನವು ಪ್ರಬಲ ಶಕ್ತಿಯುಕ್ತವಾದುದಾದರೂ ಅದರ ಜ್ಞಾಪಕ ಶಕ್ತಿಯು ಮಾತ್ರ ಬಹು ಅಬಲ. ಇಂದು ದೇವಾದಿದೇವನ ಅವತಾರಿಯಂದು ಪೂಜಿಸುತ್ತಿದ್ದವನನ್ನು ನಾಳೆ ಅದೇ ಜನತೆಯು ಅ ದೇ ಅವತಾರಿಯನ್ನು ಎಬ್ಬಿಸಿಕೊಂಡು ಹೋಗಿ ಕಲ್ಲಿನಿಂದ ಹೊ ಡೆಯುವಂಥಹ ಕ್ಷಣಿಕ ಜ್ಞಾಪಕ ಶಕ್ತಿಯದರದು. ಅದುದರಿಂದ ನಿ ಷ್ಕಲಂಕ ಚರಿತರೂ, ಪರಿಶುದ್ಧ ಹೃದಯಿಗಳೂ, ಹಿರಿತನ, ಕಿರಿತನಗ ಳ ಭ್ರಮೆಯಿಂದ ದೂರವಾದ ಸಾ ಅದ ಸಮಾಜಾಭಿಮಾನಿಗಳೆಲ್ಲರೂ ನೃಥ ವಿಶ್ವಾಸದಿಂದ ಸುಧಾರಣಾತ್ಮಕೋಲನವನ್ನಾರಂಭಿಸಿ ಜನತೆ ಯ ಕ್ಷಣಿಕ ಜ್ಞಾಪಕ ಶಕ್ತಿಯನ್ನು ಹೋಗಲಾಡಿಸಿ ಜನತೆಯಲ್ಲಿ ಸ್ಥಿ ರ ಪ್ರಜ್ಞೆಯನ್ನು ನೆಲೆಗೊಳಿಸಿ ವಿಮರ್ಶಾತ್ಮಕ, ವಿಚಾರ ಸಂಗ್ರಹ ಬು ದ್ಧಿಯನ್ನು ಹುಟ್ಟಿಸಬೇಕು. ಸಮಾಜದಲ್ಲಿ ವಿಚಾರ ಸಂಗ್ರಹ ಶಕ್ತಿ ಯು ಹೆಚ್ಚಿದಂತೆಲ್ಲಾ, ದುರ್ವಾದಿಗಳ, ದುರಾಗ್ರಹಿಗಳ, ಸ್ವಾರ್ಥಿಗಳ ಕುಟಿಲೋಪಾಯಗಳೂ ಕುಹಕ ವಿಚಾರಗಳೂ ತಾವಾಗಿಯೇ ಮಾ ಯವಾಗುವವು ಆದುದರಿಂದ ಸಮಾಜಾಭಿಮಾನಿಗಳೆಲ್ಲರೂ ಮುಖ್ಯ ವಾಗಿ ತರುಣ ವರ್ಗದವರೆಲ್ಲರೂ ಸ್ವಾರ್ಥ ಸಾಧಕರ ಚಳುವಳಿಯಿಂ ದ ದೂರ ನಿಂತು ವ್ಯವಸ್ಥಿತವಾದೊಂದು ಕಾರ್ಯ ಕ್ರಮವನ್ನೇರ್ಪ ಡಿಸಿಕೊಂಡು ಆ ಮೂಲಕ ಸಮಾಜಕ್ಕೆ ತಮ್ಮ ನಿಷ್ಕಾಮ ಸೇವೆಯ ನ್ನರ್ಪಿಸಲು ಸಿದ್ಧರಾದರೆ ಸಮಾಜ ಸುಧಾರಣೆಯು ಅತ್ಯಂತ ಭರ ದಿಂದ ಸಾಗಿ ಸಮಾಜದ ಅನೈಕ್ಯ ಮತ್ಯವು ತೊಲಗಲು ಅತ್ಯಂತ ಸ ಹಕಾರಿಯಾಗುವುದಲ್ಲವೆ? ಪಕ್ಷಾಂಧರೂ, ಸ್ವಾರ್ಥಮನೋವೃತ್ತಿಯು ಳ್ಳವರೂ, ಮತತ್ವಗಳ ಜ್ಞಾನವಿಲ್ಲದವರೂ, ಮೂಢ ವಿಶ್ವಾಸಿಗಳೂ, ಆದ ಜನರು ಸ್ವಾರ್ಥ ಪರರಾದ ಕೆಲ ವಿದ್ಯಾವಂತರ ದಾಕ್ಷಿಣ್ಯಕ್ಕೆ ಕ ಟ್ಟು ಬಿದ್ದಿರುವುದರ ಮೂಲಕ ಉಂಟಾಗಿರುವ ಇಂದಿನ ಗೊಂದಲವ ನ್ನು ಪರಿಹರಿಸಬೇಕಾದರೆ ಪರಿಶುದ್ಧ ಹೃದಯಿಗಳೂ, ಸತ್ಯಾನ್ವೇಷಿಗ ಳೂ, ನಿಷ್ಪಕ್ಷಪಾತ ಮತಿಗಳೂ ಆದ ಇಂದಿನ ವೀರಶೈವ ತರುಣರು ಶಿಸ್ತಿನಿಂದ ಸಮಾಜ ಸುಧಾರಣಾ ಕಾರ್ಯಗಳಿಗುಪಕ್ರಮಿಸಿದರೆ ಇಂ ದಿನ ಗೊಂದಲವು ತಾನಾಗಿಯೇ ಮಾಯವಾಗುತ್ತದೆ. ಮುಖ್ಯವಾಗಿ ಇಂದಿನ ಹಿರಿತನ, ಕಿರಿತನಗಳ ಚಳುವಳಿಯಿಂದ ನಿರ್ಲಿಪ್ತರಾಗಿರುವ ವೀರಶೈವ ಸಮಾಜದ ಅಭ್ಯುದಯಾಕಾಂಕ್ಷಿಗಳೆಲ್ಲರೂ ತಮ್ಮ ತಮ್ಮ ಪ್ರಾಂತ್ಯಗಳಲ್ಲಿರುವ ವೀರಶೈವ ಸಮಾಜದ ಸಾರ್ವಜನಿಕ ಸಂಘ, ಸಂ ಸ್ಥೆಗಳಲ್ಲೆಲ್ಲಾ ಹೆಚ್ಚು ಹೆಚ್ಚು ಸಂಖ್ಯೆಯಿಂದ ಆಕ್ರಮಿಸಿಕೊಂಡೂ ಆ ವುಗಳಿಲ್ಲದ ಕಡೆ ಹೊಸದಾಗಿ ಸಂಘ ಸಂಸ್ಥೆಗಳನ್ನೇರ್ಪಡಿಸಿಕೊಂಡೂ ನಮ್ಮ ಧರ್ಮದ ಗತವೈಭವವನ್ನು ಮರಳಿಪಡಿಯಲು ಪ್ರಯತ್ನಿಸುವು ದು ನಮ್ಮ ಸಮಾಜದ ಸುಶಿಕ್ಷಿತರ, ಸುಧಾರಕರ, ಸಭ್ಯರೆಲ್ಲರ ಮುಖ್ಯ ಕರ್ತವ್ಯವಲ್ಲವೆ? ಸಮಾಜ ಸೇವಕರೆಲ್ಲರೂ, ತಮ್ಮ ತಮ್ಮ ಪ್ರಾಂತ್ಯಗ ಳಲ್ಲಿ ವಾಸಿಸುವ ಸ್ವಧರ್ಮೀಯರಲ್ಲಿ ಮಸುಳಿಸಿ ಹೋಗಿರುವ ಸದಾ ಚಾರವನ್ನೂ ಪರಿಶುದ್ಧ ಧಾರ್ಮಿಕ ಭಾವನೆಯನ್ನೂ ವೀರಶೈವ ಮತ ತ್ವ ಸಂಗ್ರಹಣ ಶಕ್ತಿಯನ್ನೂ, ವೃದ್ಧಿಗೊಳಿಸಲೆತ್ನಿಸುವುದು ಅತ್ಯಂತ ಪ್ರಯೋಜನಕಾರಿಯಲ್ಲವೆ? ಆದುದರಿಂದ ಲಿಂಗಾಂಗಿಗಳಾದ ನಾವೆ ಲ್ಲರೂ ನಮ್ಮ ಪೂರ್ವಜರ ಮಾರ್ಗವನ್ನನುಸರಿಸಿ ಅನಾಚಾರ, ಅಧ ರ್ಮಗಳಲ್ಲಿ ತಿರಸ್ಕಾರ ಭಾವನೆಯನ್ನು ವಹಿಸಿ, ಸದಾಚಾರ, ಸದ್ಧರ್ಮ ಗಳಲ್ಲಿ ಆಸಕ್ತ ಭಾವನೆಯನ್ನಿರಿಸಿ ಸಮಾಜ ಸೇವೆ ಮಾಡುತ್ತಿರುವೆನೆಂ ಬ ಹೆಮ್ಮೆಯನ್ನು ತ್ಯಜಿಸಿ ಸಮಾಜದ ಅಭ್ಯುದಯವನ್ನು ಸಾಧಿಸುವು ದರ ಮೂಲಕ ನಿಜವಾದ ಅರ್ಪಣ ಯೋಗಿಗಳು ಅರ್ಥಾತ್ ಸ್ವಾರ್ಥ ತ್ಯಾಗಿಗಳಾಗಿ ಸಮಾಜೋತ್ಕರ್ಷ ಸಾಧಕರಾಗಲೆಂಬುದೇ ನಮ್ಮ ಪ್ರಾರ್ಥನೆ. (ಮಾ. ಸಂ. ಸ.)

ಹೂಲಿಯ ಚರೆವಯ್ಯರ ನಿಧನ.

ಸಿದ್ಧ ಶಿವಯೋಗಿಗಳೆಂತಲೂ, ಬಾಲ ಲೀಲಾ ಮೂರ್ತಿಗ ಳೆಂತಲೂ ಹೆಸರುಗೊಂಡ ಹೂಲಿಯ ಸಾಂಬಯ್ಯನ ಮಠದ ಶ್ರೀಮ ತ್ಸಚ್ಚಿದಾನಂದ ಚರಮೂರ್ತಿಗಳವರು ಪುಷ್ಯ ವದ್ಯ ೧೩ ಶನಿವಾರ ಪ್ರದೋಷ ಸಮಯದಲ್ಲಿ ಶಿವೈಕ್ಯರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ.

ಶ್ರೀಗಳು ಹಿಂದಿನ ಬಂಗಾರದ ಚರಮೂರ್ತಿಗಳಂತೆ ಸಿದ್ಧಿಯು ಳ್ಳವರಾಗಿದ್ದು ಅನೇಕ ಪವಾಡಗಳನ್ನು ತೋರಿಸಿದರು. ಇವರು ಅಖಂಡ ಬ್ರಹ್ಮಚಾರಿಗಳೂ, ನಿಷ್ಕಾರರೂ, ಸಿದ್ಧರೂ ಇದ್ದುದರಿಂದ ಜನಗಳು ಇವರಿಗೆ ಬಹಳೇ ಹೆದರುತ್ತಿದ್ದರು.

ಅಹಿಂಸಾ ಮುಂತಾದ ಸಾಮಾಜಿಕ ಸುಧಾರಣೆಗಳು ಇವರಿಗೆ ಪ್ರಿಯವಾಗಿದ್ದುವು. ಬ್ರಹ್ಮಚರ್ಯದಷ್ಟು ಇನ್ನುಳಿದದ್ದಾವುದಕ್ಕೂ ಇವರು ಮಹತ್ವ ಕೊಡುತ್ತಿದ್ದಿಲ್ಲ ನೀತಿ, ಭಕ್ತಿ ಇವೇ ಶಿವಪೂಜೆಯ ಜೀವನೆನ್ನುತ್ತಿದ್ದರು.

ಪವಿತ್ರಾಚರಣೆಯುಳ್ಳ ವಿರಕ್ತರಲ್ಲಿ ಬಹಳವಾಗಿ ಪೂಜ್ಯ ಭಾವವಿತ್ತು. ತಮ್ಮ ಸ್ಥಾನಕ್ಕಿಂತಲೂ ಆ ಸ್ಥಾನ ಮೇಲಿನದೆನ್ನುತ್ತಿದ್ದರು. ಅದರೆ ವ್ರತ (ಬ್ರಹ್ಮಚರ್ಯ) ರಕ್ಷಣೆ, ನೀತಿಯಿಲ್ಲದ ವಿರಕ್ತನಾಗಲಿ, ಪಟ್ಟಾಧಿಕಾರಿಯಾಗಲಿ ತುಡುಗ ಪ್ರಪಂಚಿಕನಿಗಿಂತ ಲೂ ಕಡೆಯೆನ್ನುತ್ತಿದ್ದರು.

ತಮ್ಮ ಜ್ಞಾನ ವೈರಾಗ್ಯ ಬಲದಿಂದ ಭಕ್ತ ವೃಂದಕ್ಕೆ ನಾನಾ ವಿಧವಾದ ತೃಪ್ತಿಯನ್ನೀಯುತ್ತಿರುವಾಗ ಯಾವ ರೋಗವೂ ಇಲ್ಲದೆ ೧೮ ದಿವಸ ಅನ್ನಪಾನಾದಿಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಸ್ವಸ್ಥ ಚಿತ್ತರಾಗಿ, ಶಿವಧ್ಯಾನದಲ್ಲಿ ದೇಹವಿಟ್ಟರು.

ಈ ಮಹಾಮಹಿಮರು ಸರ್ವರಿಗೂ ಸನ್ಮಾರ್ಗವನ್ನು ದರ್ಶಿಸಿ, ನಿತ್ಯ ಸುಖವನ್ನೀಯಲಿ!

ತಾ. ೧೫-೧೧-೧೯೪೪ ಬೆಳಗಾಂವ. } ಯಂ. ಸಿ. ಗಂಗಯ್ಯ.

ಏಜಂಟರು ಬೇಕಾಗಿದೆ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ ಕಂ. ಲಿಮಿಟೆಡ್ ಧಾರವಾಡ,

ಇವರು ಹೊಸ ಮಜಲಿಯ ಜನನ, ಮದುವೆ, ಮತ್ತು ಮರಣ ವಿಮೆಗಳನ್ನು ಸುರುವು ಮಾಡಿದ್ದಾರೆ. ಕರ್ನಾಟಕದ ಯಾವತ್ತೂ ಭಾಗಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಉತ್ಸುಕತೆಯಿಂದ ಕೆಲಸ ಮಾಡಬಕ್ಕವರು ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿಕೊಳ್ಳಬಹುದು.

ಮ್ಯಾನೇಜಿಂಗ್ ಏಜಂಟ್ಸ.

ಮಹಾತ್ಮಾಜಿಯವರ ಮಹಾಯಾತ್ರೆ.

ಬೆಂಗಳೂರಿನಿಂದ ಮಹಾತ್ಮಾಜಿಯವರು ಮಲಬಾರಕ್ಕೆ ಪ್ರಯಾಣ ಬೆಳೆಸಿದರು. ಪಾಲಘಾಟೇ ಮಲಬಾರದ ಮೊದಲನೆಯ ಸ್ಟೇಷನ್ನು. ಮಲಬಾರದಲ್ಲಿ ಅಸ್ಪೃಶ್ಯತೆಯು ಜಗತ್ತಿನಲ್ಲೆಲ್ಲಿಯೂ ಕಾಣದ ಭಯಂಕರ ರೂಪವನ್ನು ಧರಿಸಿರುವುದು. ಅಲ್ಲಿ ಅಸ್ಪೃಶ್ಯನು ಮುಟ್ಟಬಾರದಿಷ್ಟೇ ಅಲ್ಲ. ಅಸ್ಪೃಶ್ಯನು ಹತ್ತಿರ ಸಹ ಬರಕೂಡದು. ಇದಕ್ಕಿಂತಲೂ ಭಯಂಕರವಾದುದೆಂದರೆ ಅಸ್ಪೃಶ್ಯನು ದೃಷ್ಟಿಗೆ ಸಹ ಬೀಳಬಾರದು. ಇಂಥ ಪ್ರಕಾರವು ಗಾಂಧೀಜಿಯವರ ಮನಸ್ಸಿಗೆ ತೀವ್ರವಾದ ವೇದನೆಯನ್ನುಂಟುಮಾಡಿತು. ಆಯದ ಮೇಲೆ ಬರೆ ಕೊಟ್ಟಂತೆ ಸಾರ್ವಜನಿಕ ಮಾರ್ಗವನ್ನು ಬಿಟ್ಟು ಜನರು ತನ್ನನ್ನು ನೋಡಬಾರದೆಂದು ದೂರ ಹೊಲಗದ ಕೊಳಗೆ ಅಡ್ಡ ಹಾಯ್ದು ಹೋಗುತ್ತಿರುವಂಥ ಒಬ್ಬ ನಾಯಾಡಿ ಜಾತಿಯ ಅಸ್ಪೃಶ್ಯನು ಅದೇ ಕಾಲಕ್ಕೆ ಅವರ ದೃಷ್ಟಿಗೆ ಬಿದ್ದನು. ಅವನನ್ನು ಕರೆದು ಗಾಂಧೀಜಿಯವರು— ನೀನು ಸಾರ್ವಜನಿಕ ಬೀದಿಯ ಮೇಲೆ ಏಕೆ ಅಡ್ಡಾಡುವುದಿಲ್ಲವೆಂದು ಕೇಳಲು ಆ ಮನುಷ್ಯನು ತನ್ನನ್ನು ಎಲ್ಲಿ ಹೊಡೆಯುವರೋ ಎಂದು ಬಹಳವಾಗಿ ಹೆದರಿದನು. ಇದರಂತೆಯೇ ಕೆಲವು ನಾಯಾಡಿ ಹುಡುಗರಿಗೆ ಗಾಂಧೀಜಿಯವರು ಪ್ರೇಮದಿಂದ ಹಾರವನ್ನೂ ಬಂಬೀ ಹಣ್ಣುಗಳನ್ನೂ ಕೊಡಹೋಗಲು ಅವರು ಅಂಜಿ ಓಡಿ ಹೋದರು. ಇದನ್ನು ನೋಡಿಯೇ ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನದ ಅಸ್ಪೃಶ್ಯತಾ ದರ್ಶಕ ನಕಾಶದಲ್ಲಿ ಮಲಬಾರವು ಕಾರ್ಗತ್ತಲೆಯಾಗಿದೆಯೆಂದು ಹೇಳಿದರು. ಅಲ್ಲಿಂದ ಟ್ರಾಂಬಿಗೆ ಹೋಗಿ ಅಲ್ಲಿಯೂ ಇದೇ ಪ್ರಕಾರವಾಗಿ ಭಾಷಣ ಮಾಡಿ ಗುರುವಾಯೂರಿಗೆ ಹೋದರು. ಅಲ್ಲಿ ಉತ್ತರ ಹಿಂದುಸ್ಥಾನದಿಂದ ವರ್ಣಾಶ್ರಮ ಸ್ವರಾಜ್ಯ ಸಂಘದವರು ಕೆಲ ಜನರನ್ನು ಕರಿಸಿದ್ದರು. ಅವರು ಗಾಂಧೀಜಿಯವರಿಗೆ ಕರೇ ಧ್ವಜಗಳಿಂದ ಸ್ವಾಗತ ಮಾಡಿದರಲ್ಲದೆ ಅಲ್ಲಿ ನೆರೆದ ಸಭೆಯಲ್ಲಿ ಸ್ವಲ್ಪ ಗೊಂದಲ ಬ್ಬಿಸಿದರು. ಮಲಬಾರದ ಯಾತ್ರೆಯಲ್ಲಿ ಮಹಾತ್ಮಾಜಿಯವರು ಲ್ಲಿಯೂ ಅಸ್ಪೃಶ್ಯತೆಯು ಹಾರಿ ಹೋಗುತ್ತಿರುವುದನ್ನು ಕಂಡು ಂಡರು. ಅಲ್ಲಿ ನೆರೆದ ಸಭೆಗಳಲ್ಲೆಲ್ಲ ಸ್ಪೃಶ್ಯಾಸ್ಪೃಶ್ಯರು ಭೇದ ಲ್ಲದೆ ಕೂಡುತ್ತಿದ್ದರು. ಅಲ್ಲಿ ನೆರೆದ ಆದಿಜನಗಳಿಗೆ ಸೈರಣೆ ಾಡಿರಿ. ಸ್ವಲ್ಪ ದಿವಸಗಳಲ್ಲಯೇ ಅಸ್ಪೃಶ್ಯತೆಯು ನಿರ್ಮೂಲ ಾಗುವುದು ಎಂದು ಹೇಳಿದರು.

ಗುರುವಾಯೂರಿನಿಂದ ಗಾಂಧೀಜಿಯವರು ಕಾನಾನೂರು ಲ್ಲಿಚೇರಿಗಳಿಗೆ ಹೋದರು. ಅಲ್ಲಿಯ ಮಾನಪತ್ರಗಳನ್ನು ಸ್ವೀಕ ಿಸಿ ಕಾಲಿಕತ್ತಕ್ಕೆ ಬಂದು ದಿವಂಗತ ಮಾಧವನ್ ನಾಯರ್ ಇವರ ಾವಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸಿದರು. ಾಲಿಕತ್ತದಲ್ಲಿ ಕೌಮುದಿಯೆಂಬ ಬಾಲೆಯ ವಿಷಯವಾಗಿ ಗಾಂಧೀ ಯವರು ಬರೆದಿರುವುದೇನೆಂದರೆ—"ಕೌಮುದಿಯು ನನ್ನ ಹಸ್ತಾಕ್ಷ ರಕ್ಕಾಗಿ ತನ್ನ ಒಂದು ಬಂಗಾರದ ಬಳೆಯನ್ನು ಕೊಟ್ಟಳು. ನನಗೆ ಷ್ಟಕ್ಕೇ ತೃಪ್ತಿಯಾಯಿತು. ಆದರೆ ಅವಳು ಮತ್ತೊಂದನ್ನು ಚ್ಚಿಕೊಟ್ಟಳು. ಅವಳು ಇಷ್ಟಕ್ಕೇ ತಡೆಯದೆ ತನ್ನ ಕಿವಿಯಲ್ಲಿ ವೆ ಅಭರಣಗಳನ್ನೆಲ್ಲ ಬಿಚ್ಚಿ ಕೊಟ್ಟಳು. ಆಗ ನಾನು ನಿನ್ನ ಂದೆಯ ಅಪ್ಪಣೆಯನ್ನು ಪಡೆದಿರುವೆಯಾ? ಎಂದು ಕೇಳಿದೆನು. ಗ ನೆರೆದವರಲ್ಲೊಬ್ಬನು ಅವಳ ತಂದೆಯು ಇಲ್ಲಿಯೇ ಬಂದಿ ರುವನೆಂದೂ ಅವನೂ ಆದಿಜನ ಸೇವೆಗೆ ಎಷ್ಟೋ ದ್ರವ್ಯವನ್ನು ದಾನ ಮಾಡಿರುವನೆಂದೂ ಹೇಳಿದನು. ಕಡೆಗೆ ಕೌಮುದಿಯು—"ನನ್ನನ್ನು ಆಭರಣಗಳನ್ನಿಟ್ಟುಕೊಳ್ಳಲು ಒತ್ತಾಯಪಡಿಸದ ಗಂಡನನ್ನೇ ನಾನು ಲಗ್ನವಾಗುವೆನು" ಎಂದು ಹೇಳಿದಳು. ಅದಕ್ಕೆ ಗಾಂಧೀಜಿಯವರು—"ಹಿಂದಕ್ಕೆ ಅನ್ನಪೂರ್ಣಾ ಎಂಬವಳು ಇದೇ ಪ್ರಕಾರವಾಗಿ ಪ್ರತಿಜ್ಞೆ ಮಾಡಿದ್ದಳು. ಈಗ ನೀನು ಮಾಡಿರುವೆ" ಎಂದು ಪೇಳಿ ಸ್ತ್ರೀಯರ ಮುಂದೆ ಅವರು ಕೌಮುದಿಯ ಸ್ವಾರ್ಥತ್ಯಾಗವನ್ನೇ ಹೊಗಳುತ್ತಿರುವರು.

ಕಾಲಿಕತ್ತದ ಝಾಮೋರಿನ್ನರನ್ನು ಕಂಡುದನ್ನು ಹಿಂದಿನ ಸಂಚಿಕೆಯಲ್ಲಿಯೇ ಬರೆದಿರುವುದಷ್ಟೆ.

ತ್ರಾವಣಕೋರ, ಕೋಚೀನ ಸಂಸ್ಥಾನಗಳಲ್ಲಿ "ಮಹಾತ್ಮಾಜಿಯವರೇ, ಧರ್ಮವು ಹೋಗಲೇಬೇಕು ಧರ್ಮವನ್ನು ತ್ಯಜಿಸಿರಿ ಮತ್ತು ಹಿಂದುಸ್ಥಾನವನ್ನು ಉಳಿಸಿರಿ. ಎಲ್ಲಿಯವರೆಗೆ ಹಿಂದು ಸ್ಥಾನದಲ್ಲಿ ಜಾತಿ, ಧರ್ಮಗಳಿರುವವೋ ಅಲ್ಲಿಯವರೆಗೆ ಆದರ ಉದ್ಧಾರವಾಗದು." ಇತ್ಯಾದಿ ಪತ್ರಗಳು ಮೇಲಿಂದ ಮೇಲೆ ಬರುತ್ತಿದ್ದವು. ಎರ್ನಾಕುಲಮ್ ಎಂಬಲ್ಲಿ ಒಬ್ಬನು ಒಂದು ಚಿತ್ರದಲ್ಲಿ "ಜಾತಿಯೂ ಧರ್ಮವೂ ಹರಿಜನರ ಶತ್ರುಗಳಾಗಿವೆ" ಎಂದು ಬರೆದು ಕೊಟ್ಟನು. ಅದನ್ನು ಗಾಂಧೀಜಿಯವರು ತೆಗೆದುಕೊಳ್ಳದೆ— ಜಾತಿಯು ಶತ್ರುವಾಗಬಹುದು. ಆಗದಿರಬಹುದು. ಆದರೆ ಧರ್ಮವೆಂದೂ ಶತ್ರುವಾಗಲಾರದು. ಧರ್ಮದ ಹೆಸರಿನಿಂದ ನಾನು ಹರಿಜನರ ಮುಕ್ತತೆಯನ್ನು ಕೋರುತ್ತೇನೆ ಅಧರ್ಮ ಧಾತುವಿನ ಅರ್ಥವು ಕಟ್ಟುವಂಥದು ಎಂದಾಗುತ್ತದೆ. ಧರ್ಮದ ಅರ್ಥವು ಎತ್ತಿ ಹಿಡಿಯುವಂಥದು ಮನುಷ್ಯನಲ್ಲಿ ನೀತಿಯು ನೆಲೆಗೊಂಡರೆ ಅದು ಧರ್ಮವಾಗುತ್ತದೆ. ಅದೇ ಅವರನ್ನು ಕಂಟಕ ಕಾಲದಲ್ಲಿ ಎತ್ತಿಹಿಡಿಯುವದುಎಂದು ಹೇಳಿದರು.ಅಲ್ಲೆಪ್ಪಿಯಲ್ಲಿಯೂ ಇದೇ ಪ್ರಶ್ನೆಯು ಕೇಳಲ್ಪಟ್ಟಿತು. ಅಲ್ಲಿಯೂ ಗಾಂಧೀಜಿಯವರು "ಅಸ್ಪೃಶ್ಯತೆಯೇ ಧರ್ಮಕ್ಕೆ ಈ ಭಾವನೆಯನ್ನುಂಟುಮಾಡುತ್ತಿದೆ ಅಸ್ಪೃಶ್ಯತೆಯು ಅಳಿದರೆ ಹಿಂದುಗಳ ಸಂಘಟನೆಯೇ ಏಕೆ, ಜಗತ್ತಿನ ಎಲ್ಲ ಧರ್ಮಗಳಲ್ಲಿಯೂ ಸಂಘಟನೆಯಾಗುವುದು. ಅಸ್ಪೃಶ್ಯತೆ ಇದ್ದರೆ ಹಿಂದು ಧರ್ಮದಲ್ಲಿ ನನ್ನ ವಿಶ್ವಾಸ ಉಳಿಯಲಿಕ್ಕಿಲ್ಲ. ಆದರೆ ದೇವರ ಮೇಲಿನ ನನ್ನ ನಂಬುಗೆಯನ್ನು ಬಿಡಲಾರೆನು. ಭಕ್ತಿ ಪುಷ್ಪವು ಬಿರುಗಾಳಿಗೆ ಒಣಗುವಂಥದಲ್ಲ. ಅದು ಹಿಮಾಲಯದಂತೆ ಸ್ಥಿರವಿರುತ್ತದೆ.

ಹಿಂದು ಧರ್ಮಿಗಳು ನನ್ನನ್ನು ನಿರಾಶೆಗೊಳಿಸಿದಾಗೆಲ್ಲ ನಾನು ಪರಮಾತ್ಮನನ್ನು ಕುರಿತು ದೇವನೇ, ನಿನ್ನ ಸಂತತಿಯೇ ನನ್ನನ್ನು ನಿರಾಶೆಗೊಳಿಸಿದರೂ ನಾನು ನಿನ್ನನ್ನು ಕೂಸು ತಾಯಿಯನ್ನು ಅಪ್ಪಿ ಕೊಳ್ಳುವಂತೆ ಅಪ್ಪಿಕೊಳ್ಳುವೆನು. ಇದೇ ನಿಷ್ಠೆಯನ್ನೇ ಪ್ರತಿ ಯೊಬ್ಬರೂ ದೇವರಲ್ಲಿಯೂ ಧರ್ಮದಲ್ಲಿಯೂ ಇಡಬೇಕು. ಜಗತ್ತಿನ ಧರ್ಮಗಳೆಲ್ಲ ಸತ್ಯವೆಂದೂ ಮತ್ತು ಅವು ದೇವರ ಕಾರ್ಯವನ್ನೇ ಮಾಡುತ್ತವೆಂದೂ ನನಗೆ ಬಲವಾದ ನಂಬುಗೆ ಇದೆ. ಆದರೆ ಎಲ್ಲ ಧರ್ಮಗಳು ಕೂಡಿ ಒಂದೇ ಒಂದು ಧರ್ಮವಾದೀತೆಂದು ನಾನು ಹೇಳಲಾರೆ." ಎಂದು ಹೇಳಿದರು. ಕೊಟ್ಟಾಯಮದಲ್ಲಿಯ ಭಾಷಣದಲ್ಲಿ ಇದನ್ನೇ ವಿಶೇಷವಾಗಿ ಹೇಳಿ ಸನಾತನಿಗಳಿಗೆ ಎಚ್ಚರಿಗೆ ಕೊಟ್ಟರು.

ಶಾ. ಶ. ೧೮೪೩ ನೆಯ ವಾಷಿ ಶು. ೧೪ ಸೋಮವಾರ.

ಗಾಂಧೀಜಿಯವರ ಸ್ವಾಗತದ ಸಿದ್ಧತೆ.

ಮಹಾತ್ಮಾಗಾಂಧಿಯವರು ಬರುವ ತಿಂಗಳು ೧೧ ನೆಯ ತಾರೀಖಿನಿಂದ ೧೭ ನೆಯ ತಾರೀಖಿನ ವರೆಗೆ ಈ ನಮ್ಮ ಉತ್ತರ ಕರ್ನಾಟಕದಲ್ಲಿರುವರಷ್ಟೆ. ಈ ಮಹಾತ್ಮರ ಸ್ವಾಗತದ ಸಿದ್ಧತೆಯು ಈಗಾಗಲೇ ಎಲ್ಲಕಡೆಗೂ ಉತ್ಸಾಹದಿಂದ ನಡೆದಿದೆ.

ಅತ್ಯಂತ ಹೀನ ದೀನಸ್ಥಿತಿಗಳಲ್ಲಿರುವ ಕೋಟ್ಯಾಂತರ ಅದಿಜನಗಳ ಸೇವೆಯ ಪರಮ ಪವಿತ್ರವಾದ ಮಹತ್ಕಾರ್ಯಕ್ಕಾಗಿ ಗಾಂಧೀಜಿಯವರು ಈ ಭಾರತ ಪರ್ಯಟನವನ್ನು ಪ್ರಾರಂಭಿಸಿದ್ದಾರೆ. ಈಗಾಗಲೇ ಅನೇಕ ಪ್ರಾಂತಗಳು ತಮ್ಮಲ್ಲಿರುವ ಅದಿಜನಸೇವೆಯ ಪ್ರೇಮಾದರಗಳನ್ನು ತನು ಮನ ಧನಗಳ ಸಮರ್ಪಣೆಯ ಮೂಲಕ ವ್ಯಕ್ತಗೊಳಿಸಿದ್ದಾರೆ. ಕರ್ನಾಟಕವು ಕೂಡಾ ಈ ವಿಷಯದಲ್ಲಿ ಮುಂದಡಿಯಿಡುವುದೆಂದೇ ನಮ್ಮ ನೈಸೂರು ಪ್ರಾಂತದ ಬಂಧುಗಳು ತಮ್ಮ ಉದಾರ ಹಸ್ತದಿಂದ ಈಗಾಗಲೇ ಗಾಂಧೀಜಿಯವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಗಾಂಧೀಜಿಯವರಂತೆ ಅದಿಜನಗಳ ಕಲ್ಯಾಣಕ್ಕಾಗಿ ಮೃತ್ಯುವಿನ ಬಾಯಲ್ಲಿ ಕೂಡಾ ಸೇರಲು ಸಿದ್ಧರಾಗಿದ್ದ ಮಹಾತ್ಮರು ಈ ಭರತಖಂಡದಲ್ಲಿ ಈ ವರೆಗೆ ಯಾರೂ ಅವತರಿಸಿರಲಿಲ್ಲ. ಆದುದರಿಂದಲೇ ಹಿಂದು ಧರ್ಮಕ್ಕೇನೇ ಕಲಂಕವನ್ನುಂಟುಮಾಡುವ ಅಸ್ಪೃಶ್ಯತೆಯು ಹಿಂದುಗಳಲ್ಲುಳಿದಿದೆ. ಈ ಘಾತಕವಾದ ರೂಢಿಯನ್ನು ನಿರ್ಮೂಲ ಮಾಡಲು ಗಾಂಧೀಜಿಯವರು ಪ್ರಾರಂಭಿಸಿರುವ ಚಟುವಟಿಕೆಯು ಕೇವಲ ಹಿಂದುಗಳಿಗೇನೇ ಕ್ಷೇಮಕರವಾದುದಲ್ಲ; ಮನುಷ್ಯ ಜ್ಞಾತಿಗೇನೇ ಹಿತಕರವಾದುದಾಗಿದೆ.

ಇಂತಹ ಈ ಮಹತ್ಕಾರ್ಯವನ್ನು ಕರ್ನಾಟಕವು ಈ ವರೆಗೂ ಎಷ್ಟು ನಡೆಯಿಸಬೇಕಾಗಿದ್ದಿತೋ ಅಷ್ಟು ನಡೆಯಿಸಿಲ್ಲವೆಂಬುದು ದುಃಖದ ಸಂಗತಿಯೇ ಸರಿ. ಆದರೆ ಈ ಕಾರ್ಯಕ್ಕೆ ಬೇರೆ ಕೆಲವು ಪ್ರಾಂತಗಳಲ್ಲಿರುವಂತೆ ಸನಾತನಿಗಳ ವಿರೋಧವಿಲ್ಲದಿರುವುದು ಸಂತೋಷಕರವು. ಶ್ರೀ ಬಸವಾದಿ ಶಿವಶರಣರು ಜನ್ಮವಿತ್ತವಾದ ವರ್ಣಾಗಳ ಘಾತಕ ಪದ್ಧತಿಯನ್ನು ಈ ನಾಡಿನಲ್ಲಿ ಎಷ್ಟೋ ಮಟ್ಟಿಗೆ ನಿವಾರಣೆ ಮಾಡಿದ್ದರಿಂದಲೇ ಆ ಸನಾತನಿಗಳ ಜನಾಂಗವು ಇಲ್ಲಿ ಅಷ್ಟು ಪ್ರಬಲವಾಗಿ ಉಳಿಯದಿದ್ದುದಕ್ಕೆ ಕಾರಣವಾಯಿತು.

ಆದಕಾರಣ ಅಸ್ಪೃಶ್ಯತಾ ನಿವಾರಣೆಗೆ ಎಷ್ಟೋ ಅನುಕೂಲವಾಗಿರುವ ಈ ನಮ್ಮನಾಡಿನಲ್ಲಿ ಇನ್ನು ಮೇಲಾದರೂ ನಾವು ವಿಶೇಷವಾಗಿ ಪ್ರಯತ್ನಿಸಿ ಮಹಾತ್ಮಾಜಿಯವರು ಪ್ರಾರಂಭಿಸಿರುವ ಸರ್ವಶ್ರೇಷ್ಠವಾದ ಕಾರ್ಯವನ್ನು ನೆರವೇರಿಸಬೇಕು. ಗಾಂಧೀಜಿಯವರ ಈ ಸುಖಾಗಮನವು ಈ ಮಹತ್ಕಾರ್ಯಕ್ಕೆ ಎಷ್ಟೋ ಅನುಕೂಲವಾದುದಾಗಿಯೇ ಇದೆ. ಆದುದರಿಂದ ಗಾಂಧೀಜಿಯವರ ಆಗಮಿಸಿ ಗಾಳಿ ಬೀಸಿದಾಗಲೇ ತೂರಿಕೊಳ್ಳುವುದು ಅನುಕೂಲವಲ್ಲವೆ? ಈ ಕೆಳಗಿನ ಕಾರ್ಯಗಳಲ್ಲಿ ಯಾವುದನ್ನಾದರೂ ಆಚರಣೆಯಲ್ಲಿ ತರುವುದೇ ಗಾಂಧೀಜಿಯವರ ಸ್ವಾಗತದ ಸಿದ್ಧತೆಗಳಲ್ಲಿ ಉತ್ತಮವಾದುದು.

(೧) ಗಾಂಧೀಜಿಯವರ ಆಗಮನದ ಸ್ಮರಣಾರ್ಥವಾಗಿಯೂ ಪ್ರೇಮಾರ್ಥವಾಗಿಯೂ ಸಾರ್ವಜನಿಕ ದೇವಾಲಯಗಳಲ್ಲಿ ಅದಿಜನರ ಪ್ರವೇಶಕ್ಕೆ ಅವಕಾಶವನ್ನುಂಟು ಮಾಡಿಕೊಡುವುದು. (೨) ಹೊಂಡ, ಬಾವಿ ಮೊದಲಾದ ಜಲಾಶಯಗಳಲ್ಲಿ ಅದಿಜನರು ಪ್ರವೇಶಿಸಿ ನೀರನ್ನು ತೆಗೆದುಕೊಳ್ಳಲು ಅವಕಾಶಕೊಡುವುದು. (೩) ಅದಿಜನರ ಹುಡುಗರಿಗಾಗಿಯೇ ಪಾಠಶಾಲೆಯನ್ನು ಏರ್ಪಡಿಸಿ ಅದರಲ್ಲಿ ಬೇರೆ ಹುಡುಗರೂ ವಿದ್ಯಾಭ್ಯಾಸ ಮಾಡುವಂತೆ ಗೊತ್ತುಪಡಿಸುವುದು.

(೪) ಅದಿಜನರ ಕೇರಿಯಲ್ಲಿ ಸಾಪ್ತಾಹಿಕ ಸಭೆಯನ್ನು ಏರ್ಪಡಿಸಿ ಅವರ ಆಹಾರ ವಿಹಾರಗಳಲ್ಲಿ ಶುದ್ಧತೆಗಳುಂಟಾಗುವಂತಹ ಉಪನ್ಯಾಸ, ಕೀರ್ತನೆ, ಭಜನೆಗಳು ತಪ್ಪದೇ ನಡೆಯುವಂತೆಯೂ ಸ್ವಚ್ಛತಾ, ಒಳ್ಳೆಯ ಆಚಾರ ವಿಚಾರಗಳಲ್ಲಿರುವವರಿಗೆ ಬಹುಮಾನಗಳು ದೊರೆಯುವಂತೆಯೂ ಪ್ರಯತ್ನಿಸುವ ಸ್ಥಳೀಯ ಅದಿಜನ ಸೇವಾಸಂಘವನ್ನು ಸ್ಥಾಪಿಸುವುದು. ಈ ಪ್ರಕಾರ ಯಾವುದಾದರೊಂದು ಕಾರ್ಯವನ್ನು ಪ್ರಾರಂಭಿಸುವುದಕ್ಕಾಗಿ ಈಗಲೇ ಸಿದ್ಧತೆಯನ್ನು ಮಾಡುವುದು ಗಾಂಧೀಜಿಯವರ ಸ್ವಾಗತದ ಸಿದ್ಧತೆಗಳಲ್ಲಿ ಉತ್ತಮೋತ್ತಮವಾದುದು.

(೫) ಹೀಗೆ ಕಾರ್ಯ ಪ್ರಾರಂಭಮಾಡಲು ಶಕ್ಯವಿಲ್ಲದಿದ್ದರೆ ಅದಿಜನರ ಸೇವೆಯ ಕಾರ್ಯಗಳಿಗಾಗಿಯೇ ಏರ್ಪಟ್ಟಿರುವ ಧನನಿಧಿಗಾದರೂ ಸಕಲರೂ ಉದಾರ ಬುದ್ಧಿಯಿಂದ ಧನ ಸಹಾಯಮಾಡಿ ಹಿಂದು ಸಮಾಜದ ವಿಪತ್ತಿನ ಪರಿಹಾರದ ಪುಣ್ಯಕ್ಕೆ ಭಾಗಿಗಳಾಗಬೇಕು. ಈ ಪರಮ ಪವಿತ್ರವಾದ ಕಾರ್ಯಕ್ಕಾಗಿ ಕೊಡುವ ಹಣವಿನ ಬಹು ಭಾಗವೆಲ್ಲಾ ಇದೇ ಪ್ರಾಂತದಲ್ಲುಳಿದು ಇಲ್ಲಿಯ ಅದಿಜನಗಳ ಸುಧಾರಣೆಗಾಗಿಯೇ ವಿನಿಯೋಗವಾಗುವುದು.

(೬) ಅನೇಕ ಮುನಿಸಿಪಾಲ್ಟಿಯವರು ಗಾಂಧಿಯವರಿಗೆ ವಿಜ್ಞಾಪನಾಪತ್ರಿಕೆಗಳನ್ನು ಒಪ್ಪಿಸುವ ಸಿದ್ಧತೆಯಲ್ಲಿದ್ದಾರಷ್ಟೆ. ಇವರೂ ಅದಿಜನಗಳ ವಸತಿ, ನೀರು, ಬೆಳಕು ಮೊದಲಾದವುಗಳಿಗೆ ವಿಶೇಷ ಸೌಲಭ್ಯಗಳನ್ನುಂಟುಮಾಡಿಕೊಟ್ಟರೆ ತಾವು ಗಾಂಧೀಜಿಯವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಸಮರ್ಪಿಸಿದ ನಿಜವಾದ ಸಾರ್ಥಕವೆಂದು ಹೇಳಬಹುದು. ಆದಕಾರಣ ಅದಿಜನರ ನಿಜ ಸುಧಾರಣೆಯ ಸ್ವಲ್ಪ ಸಿದ್ಧತೆಯನ್ನಾದರೂ ಈ ರೀತಿಯಲ್ಲಿ ಮಾಡುವುದು ಯುಕ್ತವಲ್ಲವೆ?

ಅದಿಜನರ ಸೇವೆಯ ಕಾರ್ಯದಲ್ಲಿ ಬಹು ಪ್ರೇಮಾದರಗಳುಳ್ಳ ಶ್ರೀಯುತ ಪಾಟೀಲ ವೀರನಗೌಡರು ಈ ಪ್ರಾಂತದ ಅದಿಜನ ಸೇವಾ ಸಂಘದ ಅಧ್ಯಕ್ಷರಾಗಿ ಈಗಾಗಲೇ ಇವರು ಉತ್ತರ ಕರ್ನಾಟಕ ಬೇರೆ ಬೇರೆ ಸ್ಥಳಗಳಲ್ಲಿ ಸಂಚರಿಸಲುಪಕ್ರಮಿಸಿರುವುದರಿಂದಲೂ ಗಾಂಧೀಜಿಯವರಲ್ಲಿ ಕರ್ನಾಟಕದವರಿಗೆ ತುಂಬಾ ಶ್ರದ್ಧೆಯಿರುವುದರಿಂದಲೂ ಈ ಸ್ವಾಗತದ ಸಿದ್ಧತೆಗಳು ಕರ್ನಾಟಕದ ಕೀರ್ತಿ ಧನತೆಗಳಿಗೆ ತಕ್ಕಂತೆಯೇ ನಡೆಯುವವೆಂದು ನಾವು ನಂಬಿದ್ದೇವೆ.

ವೀರಶೈವ ಏಕೀಕರಣದ ವಾದಭೂಮಿ.

"ವರ್ಣಾನಾಂ ಕಿಂ ಪ್ರಯೋಜನಂ?"

—ಮಹಾನುಭಾವರಾದ ಬಸವಣ್ಣನವರು.

(ಲೇಖಕರು:—ಶ್ರೀ. ಗುರುಸಿದ್ಧಪ್ಪ ಬಸವಪ್ಪ ಬಳ್ಳಾರಿ ಗದಗ.)

ಮೊದಲಿಗೆ ಒಂದಿತ್ತು ವರ್ಣ. ನಾಲ್ಕಾಯಿತು ಶ್ರೀ ಕೃಷ್ಣನ ಕಾಲದಲ್ಲಿ. ಅಥವಾ ಶ್ರೀ ಕೃಷ್ಣನೇ ನಾಲ್ಕೂ ವರ್ಣಗಳನ್ನುಂಟು ಮಾಡಿದನು. ಹಾಗೆ "ಚಾತುರ್ವರ್ಣಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ" ಎಂದು ಗೀತೆಯಲ್ಲಿ ತಾನೇ ಹೇಳಿದ್ದಾನೆ. ಸಮಾಜದ ಧಾರಣ ಪೋಷಣೆಗಾಗಿ ಶ್ರಮ ವಿಭಾಗದ ತತ್ವದ ಪ್ರಕಾರ ಗುಣಕರ್ಮದ ಮೇಲಿಂದ ಏರ್ಪಟ್ಟವು ನಾಲ್ಕು ವರ್ಣಗಳು. ಈಗಿನಂತೆ ಮೇಲು ಕೀಳೆಂದಲ್ಲ. ಜಾತಿಯಿಂದಲ್ಲ. ಇದನ್ನೇ ೧೯೧೭ನೇ ಇಸವಿಯಲ್ಲಿ ಗಂಜಮದಲ್ಲಿ ಕೂಡಿದ ೩ನೇ ಸಾಮಾಜಿಕ ಪರಿಷತ್ತಿನ ಅಧ್ಯಕ್ಷರಾದ ಎ. ಮಹದೇವ ಶಾಸ್ತ್ರಿಗಳೆಂಬುವವರು ಈ ರೀತಿ ಹೇಳಿದ್ದಾರೆ.—

"All the four classes were spiritually equal and there were no restrictions as to interdining and intermarriage. They were all really members of one Brahmana community but were known by different names only with reference to their temporal occupations."

"ಧಾರ್ಮಿಕ ದೃಷ್ಟಿಯಿಂದ ನಾಲ್ಕು ವರ್ಣಗಳೆಲ್ಲ ಸಮವಾಗಿದ್ದು ಅವುಗಳಲ್ಲಿ ಪರಸ್ಪರ ಊಟೋಪಚಾರ ಮತ್ತು ಶರೀರ ಸಂಬಂಧ ಮಾಡಲು ನಿರ್ಬಂಧವಿದ್ದಿಲ್ಲ, ಆವರೆಲ್ಲರೂ ನಿಜವಾಗಿಯೂ ಒಂದೆ ಬ್ರಾಹ್ಮಣ ವರ್ಣದ ಬಂಧುಗಳಿದ್ದು ಸ್ವಭಾವತಃ ಅವರು ಕೈಕೊಂಡ ಕರ್ಮಗಳ ಮೇಲಿಂದ ಅವುಗೆ ಬೇರೆಬೇರೆ ಹೆಸರುಗಳು ಬಂದವು."

ವರ್ಣದ ಹುಟ್ಟು ಹೀಗಿದ್ದರೂ ಪ್ರಚಾರದಲ್ಲಿ ಅದು ಬೇರೆ ದಾರಿ ಹಿಡಿಯಿತು. ಪರಸ್ಪರರಲ್ಲಿಯ ಒಣ ಅಭಿಮಾನ ಮತ್ತು ಸ್ವಾರ್ಥದ ಮೂಲಕ ಒಂದಿದ್ದ ವರ್ಣವೇ ಒಡೆದು ನಾಲ್ಕಾಯಿತು. ನಾಲ್ಕು ಹೆಸರೇ ನಾಲ್ಕು ಜಾತಿಗಳಾದವು. ಈ ನಾಲ್ಕರಲ್ಲಿಯೇ ಮತ್ತೆ ಶಾಖೋಪಶಾಖೆಗಳಾಗಿ ನಾಲ್ಕು ಸಾವಿರದ ಮನೆಗೆ ಬಂದು ಮುಟ್ಟಿದ್ದರೂ, ಇನ್ನೂ ಗುಣಿಸುವದರಲ್ಲಿದೆಯೇ ಹೊರತು ಭಾಗಿಸುವದರಲ್ಲಿಲ್ಲ. ಹೀಗೆ ವರ್ಣವು ಹಸಗೆಟ್ಟು, ಅಂದಗೆಟ್ಟು ಅದರ ಅಂತಸ್ತೇಜಸ್ಸೆಲ್ಲ ಅಳಿದು ಹೋಗಿ ಅದರ ಕಸುವು ಕಡಿಮೆಯಾಗುತ್ತ ಬಂದಿದ್ದರೂ, ಜಾತಿಯ ಹಮ್ಮು ಮಾತ್ರ ಬೆಳೆಯುತ್ತ ಬಂದಿದೆ. ಇನ್ನೂ ಬೆಳೆಯುವದರಲ್ಲಿದೆ. ವರ್ಣಗಳನ್ನು ಹುಟ್ಟಿಸಿದ ಭಗವಂತ ಶಿಷ್ಟನಾದ. ಆತನಿಂದ ಹುಟ್ಟಿದವರು ಗುರುಗಳಾದರು ಅತನಿಗೂ. ಗುಣದ ಬಲುಮೆಯಿಂದಲ್ಲ ಜನ್ಮದ ಹಕ್ಕಿನಿಂದ. ಎಂದು ಜಾತಿಯು ತಲೆ ಎತ್ತಿತೋ ಅಂದು ಗುಣಕ್ಕಿದ್ದ ಗೌರವವು ಇಲ್ಲದಾಯಿತು. ಹುಟ್ಟಿನಿಂದಲೇ ಒಬ್ಬನ ಜಾತಿಯ ನಿರ್ಣಯವಾಗಿ, ಅವನು ಇಂಥಿಂಥ ಕರ್ಮಗಳನ್ನೇ ಅವು ಅವರ ಸ್ವಭಾವಕ್ಕೆ ರುಚಿಸಲಿ ರುಚಿಸದಿರಲಿ, ಮಾಡಬೇಕೆಂಬ ಕಟ್ಟಳೆಯುಂಟಾಯಿತು. ಅದರ ಅತಿಕ್ರಮಣವು ಪಾಪವೆಂದೂ, ಅತಿಕ್ರಮಿಸಿದವರು ದಂಡನೆಗೆ ಪಾತ್ರರೆಂದೂ ಹೇಳುವದರಲ್ಲಿ ಬಂದಿತು. ಈ ನಿರ್ಬಂಧನೆಗಳಿಂದ ಮನುಷ್ಯನ ಬುದ್ಧಿ ವಿಕಾಸಕ್ಕೆ ಕಡಿಯುಂಟಾಯಿತು. ಬಹುಜನರು ನಿರಕ್ಷರಿಗಳಾದರು. ದುಡಿಯುವವರು ಕೀಳಾದರು, ಕೂತು ಉಣ್ಣುವವರು ಮೇಲಾದರು. ಇದರಿಂದ ನಿರುದ್ಯೋಗವು ಹೆಚ್ಚಿತು. ಹೀಗಾಗಿ ಸಮಾಜೋನ್ನತಿಗೆಂದು ವಿಭಾಗಿಸಿದ ಚಾತುರ್ವರ್ಣಗಳೇ ವರ್ಣಗಳ ಸ್ಪರ್ಧೆದ ಮೂಲಕ ಸಮಾಜದ ಅಧೋಗತಿಗೆ ಕಾರಣವಾದವು. ತಾರಕವಾಗುವರ ಬದಲು ಮಾರಕವಾಯಿತು. "ಭಾಗ್ಯವಂತರ ಬೀಡು ಭರತ ನಾಡು" ಎಂಬುದು ಹೋಗಿ "ಭರತ ನಾಡು ಬಡತನದ ಬೀಡು" ಎಂದನ್ನುವಂತಾಯಿತು.

ವರ್ಣದ ಹೆಸರಿನಿಂದ ಅನೇಕ ಅಕಾರ್ಯಗಳೂ ಜುಲುಮೆಯೂ ಆಗಹತ್ತಿ ಜನಾಂಗವು ಜರ್ಜರಿತವಾಗಹತ್ತಲು, ಅದರ ಪ್ರತೀಕಾರಕ್ಕಾಗಿ ವರ್ಣದ ವಿರುದ್ಧ ಆಗಾಗ ಬಂಡಾಯಗಳಾಗಹತ್ತಿದವು. ಹೀಗೆ ವರ್ಣದ ವಿರುದ್ಧ ಸ್ವಾತೀನ ಕಾಲದಲ್ಲಿ ಬಂಡಾಯವೆಬ್ಬಿಸಿದವರಲ್ಲಿ ಭಗವಾನ್ ಬುದ್ಧ ಮತ್ತು ಮಹಾನುಭಾವರಾದ ಬಸವಣ್ಣನವರು ಅಗ್ರಗಣ್ಯರು. ಈಗ ಮಹಾತ್ಮಾ ಗಾಂಧಿಯವರಿಗೆ ವರ್ಣದ ಹಂಗು ಪೂರಾ ಬಿಡದಿದ್ದರೂ, ಅವರು ಈಗಿನ ವರ್ಣ ಪದ್ಧತಿಗೆ ಒಪ್ಪುವದಿಲ್ಲ. ಭಗವಾನ್ ಬುದ್ಧನಾಗಲಿ, ಮಹಾತ್ಮಾ ಗಾಂಧಿಯವರಾಗಲಿ ಹುಟ್ಟಿನಿಂದ ಬ್ರಾಹ್ಮಣರಲ್ಲ. ಬ್ರಾಹ್ಮಣೇತರರು, ಬ್ರಾಹ್ಮಣರ ಅಧಿಕಾರಕ್ಕೆ ಬೇಸತ್ತ ಇತರ ವರ್ಣದವರು. ಅವರ ಅಧಿಕಾರವನ್ನು ಹೆಗೆದೊಗೆಯಲಿಕ್ಕೆ ಪ್ರಯತ್ನಿಸಿದ್ದರಲ್ಲಿ ಏನೂ ವಿಶೇಷವಿಲ್ಲ. ಈಗಲಾದರೂ ದೇಶದಲ್ಲಿ ಈ ತರದ ಪ್ರಯತ್ನಗಳು ನಡದೇ ಇರುವವು. ಬ್ರಾಹ್ಮಣೇತರರ ಪಕ್ಷವು ತಲೆ ಎತ್ತಿದುದು ಯಾತಕ್ಕೆ? ಮ. ಗಾಂಧೀಜಿಯವರ ಇತಿಹಾಸ ಪ್ರಸಿದ್ಧವಾದ ೨೧ ದಿವಸಗಳ ಘೋರತರವಾದ ಉಪವಾಸ ವ್ರತವನ್ನು ಯಾತಕ್ಕಾಗಿ ಕೈಕೊಂಡರು? ಮಹಾತ್ಮರು ಹರಿಜನ ಕಾರ್ಯವನ್ನು ಕೈಕೊಳ್ಳುವಂತೆ ಮಾಡಿ ಅವರನ್ನು ಒಂದು ವರುಷದ ವರೆಗೆ ಊರೂರು ತಿರುಗುವಂತೆ ಮಾಡಿಸಿದುದು ಯಾವುದು? ಪಂ. ಜವಾಹರಲಾಲರು ಇದುವರೆಗೆ ಸಾಮಾಜಿಕ ಪ್ರಶ್ನೆಯಿಂದ ಅಲಿಪ್ತರಿದ್ದರೂ ಆವರನ್ನು ಸಹ ಎಳೆದು ಜಾತಿಯ ವಿರುದ್ಧ ಯುದ್ಧ ಹೂಡಲು ಹಚ್ಚಿದುದು ಯಾವದು? ಸವರ್ಣಿಗಳ ಅಂಧಾನುಕರಣವೂ ಧರ್ಮದ ಹೆಸರಿನಿಂದ ಆಗುತ್ತಿರುವ ಧರ್ಮದ್ರೋಹವೂ ಕಾರಣವಲ್ಲದೆ ಮತ್ತೇನು?

ಆದರೆ ಮಹಾನುಭಾವರಾದ ಬಸವಣ್ಣನವರ ಮಾತು ಹಾಗಲ್ಲ. ಇವರ ಹುಟ್ಟು, ಬ್ರಾಹ್ಮಣರಲ್ಲಿ. ಕೆಸರಲ್ಲಿ ಹುಟ್ಟಿದ ಕಮಲದಂತೆ. ಬಸವಣ್ಣನವರಿಗೆ ಮಾತ್ರ ಜಾತಿಯ ಸಂಕು ಸೋಂಕಿಲ್ಲ. ಇದು ವಿಶೇಷವು. ಯಾಕಂದರೆ ವರ್ಣಾಭಿಮಾನವು ಯಾರಿಗೂ ಬಿಟ್ಟಿದ್ದಲ್ಲ. ಅದರ ಬಲಿಯಲ್ಲಿ ಸಿಕ್ಕು ನಾ, ನಾ ಅನ್ನುವವರು ಫಾಸಿಯಾಗಿ ಹೋಗಿರುವರು. ಈಗಂತೂ ವರ್ಣದ ಹೆಸರಿಗಾಗಿಯೇ ಹಲವರು ಹೆಣಗಾಡುತ್ತಿರುವರು. ಹಿಂದಿನ ಪುಣ್ಯಕ್ಕಾಗಿ ಇಂದು ತಾವು ಅಗ್ರ ವರ್ಣದಲ್ಲಿ ಹುಟ್ಟಿರುವೆನೆಂದು ಅವರ ಭಾವನೆ. ಅದಕ್ಕಾಗಿ ಅವರಿಗೆ

ಇಷ್ಟು ಅಭಿಮಾನ ಹೆಚ್ಚು. ಆನಂತರ ಬಸವಣ್ಣನವರು ತಾವು ಅಗ್ರವರ್ಣದಲ್ಲಿ ಹುಟ್ಟಿದ ಬಗ್ಗೆ ಅಭಿಮಾನ ಪಡಬಹುದಾಗಿತ್ತು. ತಾವು ಹುಟ್ಟಿದ ಹುಟ್ಟನ್ನೇ ಮತ್ತಿಷ್ಟು ಬಲವತ್ತರವಾಗಿ ಕಟ್ಟಿ ಬಹುದಾಗಿತ್ತು. ತಮ್ಮ ಅಧಿಕಾರದಿಂದ ಜನವನ್ನು ಎತ್ತಿ ಹಿಡಿಯ ಬಹುದಾಗಿತ್ತು. ಇತರರಿಂದ ಸೇವೆಯನ್ನು ಕೈಕೊಳ್ಳಬಹುದಾಗಿತ್ತು. ಬೇಕಾದಂತೆ ತಿಂದುಟ್ಟು ವೈಭವದಲ್ಲಿ ನೆರೆಯಬಹುದಾಗಿತ್ತು. ಆದರೆ ಬಸವಣ್ಣನವರಿಗೆ ಇವಾವನ್ನೂ ಸರಿಬೀಳಲಿಲ್ಲ. ಭಗವಾನ್ ಬುದ್ಧ ದೇವನ ವಿರತಿಗೆ ಅವನ ವಿಲಾಸ ವೈಭವಗಳು ಒಂದು ಕಡೆ, ಬಡವರ ಬಡತನದ ಚಿತ್ರವು ಇನ್ನೊಂದು ಕಡೆ, ಕಣ್ಣಿಗೆ ಬೀಳಲು ಅವನ ಹೃದಯವು ಕರಗಿ ಇವುಗಳೇ ಅವನ ವಿರತಿಗೆ ಕಾರಣಗಳಾದವು. ಅದರಂತೆಯೇ ಉಚ್ಚವರ್ಣದವರ ಆಶೆಬುರುಕತನ, ಒಣ ಪ್ರತಿಷ್ಠೆ ಹಿಂಸೆ, ಅನ್ಯಾಯ, ಜುಲುಮೆಗಳು ಒಂದು ಕಡೆ, ಇತರರ ದೀನಾವಸ್ಥೆ, ಕಷ್ಟ ಸಹಿಸುವಿಕೆ, ದಾಸತ್ವ ಇವೇ ಮೊದಲಾದವುಗಳು ಇನ್ನೊಂದು ಕಡೆ ಮಹಾನುಭಾವರಾದ ಬಸವಣ್ಣನವರ ಕಣ್ಣು ಮುಂದೆ ಕಟ್ಟಿದಂತಾಗಿ, ಉಚ್ಚ ವರ್ಣದವರ ಕೃತಿಗಳೇ ಇವು? ಉಚ್ಚ ವರ್ಣವವರ ಕೃತಿಗಳೂ ಉಚ್ಚವಾಗಿರಲೇಬೇಕು. ಎಂದು ಕೋಮಲಾಂತಃಕರಣದ ಅವರ ಹೃದಯವು ಕರಗಿತು. ಮತ್ತು ಇವುಗಳೇ ಅವರ ಮತ ಪರಿವರ್ತನೆಗೆ ಕಾರಣಗಳಾದವು. ಬಸವಣ್ಣನವರಿಗೆ ತಾವು ಉತ್ತಮ ಕುಲದಲ್ಲಿ ಹುಟ್ಟಿದವರೆಂಬುದನ್ನು ಕೇಳಿದಾಗಲೆಲ್ಲ, ಆನಂದವಾಗುವವರ ಒದಲು ಅನಿವಾರವಾದ ವೇದನೆ ಯಾಗುತ್ತಿದ್ದಿತು. "ಉತ್ತಮ ಕುಲದಲ್ಲಿ ಹುಟ್ಟಿಸೆಂಬ ಕಷ್ಟ ತನದ ಪೊರೆಯ ಪೊರಿಸದಿರಯ್ಯ." ಎಂದು ಕಡಗೆ ಸಂಗಮನಾಥನಲ್ಲಿ ಮರೆಹೊಕ್ಕರು. ಅವರು ಬಸವಣ್ಣನವರ ಈ ಅದ್ವಿತೀಯ ಸಾಹಸಕ್ಕೆ ಬೆರಗಾಗಿ ವೈರಾಗ್ಯವೇ ಮೂರ್ತಿಯಾದ ಪ್ರಭುದೇವರು "ಕುಲದಲ್ಲಿ ಹುಟ್ಟ ಕುಲವ ಬೆರಸದೆ ತನ್ನ ನಿಲವ ಬಲಿದಿಪ್ಪವರಾರು ಹೇಳಾ! ಇಂಥ ಸಂಗನ ಬಸವಣ್ಣನ ಪಾದಕ್ಕೆ ನಮಸ್ಕಾರವು." ಎಂದು ಜಗದ್ಗುರುವೇ ಇವರನ್ನು ಕೊಂಡಾಡಿರಬೇಕಾದರೆ ಇವರಂಥ ವಿಭೂತಿಗಳು ಜಗತ್ತಿನಲ್ಲಿ ಮತ್ತಾರಿರುವರು?

ಇನ್ನು ವರ್ಣದ ಬಗ್ಗೆ ಯಾರಾರು ಏನೇನು ಹೇಳಿರುವರೆಂಬುದನ್ನಷ್ಟು ನೋಡುವಾ. ಈ ಬಗ್ಗೆ ಶ್ರೀಮಾನ್ ಎ. ಮಹದೇವ ಶಾಸ್ತ್ರಿಗಳೆಂಬುವವರು ಮುಂದೆ ಈ ರೀತಿ ಹೇಳಿದ್ದಾರೆ—

"The secred tradition embodied in the Itihasas, Puranas and Smritis, has revealed to us that the social and religious disabilities of women of non-Brahmanas generally, of Shudras and of Panchamas especially, originated in the general ignorance of the true Vedic Law, and in the apathy and the prejudice of the upper classes engaged in a greedy and mis-directed pursuit of individual and class interests—though they have been clothed in the garb of sacred laws. They were all made by men who posed themselves as leaders of the community, and can therefore be unmade by us who have realised the absurdity, inhumanity and injustice involved in those regulations and have become alive to our moral obligation of bringing about a better state of things in the light of the true Vedic Law. If I had time I would have shown how far opposed to the original Vedic scheme of Life is the way in which the Hindu Society manages to keep women and Shudras ignorant and servile, and to shut off non-Brahmanas from Vedic culture, and there by close against them the door to the Brahmanic status which was open to them in the former ages when one was a Brahmana by life and character, not by mere birth"

"ಇತಿಹಾಸ, ಪುರಾಣ, ಸ್ಮೃತಿಗಳ ಪವಿತ್ರ ಪರಂಪರೆಯನ್ನು ಅವಲೋಕಿಸಿದರೆ ಸ್ತ್ರೀಯರು, ಬ್ರಾಹ್ಮಣೇತರರು, ಸಾಧಾರಣವಾಗಿ ಶೂದ್ರರು ಮತ್ತು ವಿಶೇಷವಾಗಿ ಪಂಚಮರು ಇವರೆಲ್ಲರಿಗೆ ಉಂಟಾದ ಸಾಮಾಜಿಕ ಹಾಗು ಧಾರ್ಮಿಕ ಅನಾನುಕೂಲತೆಗಳಿಗೆ ವೇದ ಧರ್ಮದ ನಿಜಸ್ಥಿತಿಯ ಅಜ್ಞಾನವೂ ಮತ್ತು ಉಚ್ಚ ವರ್ಣದ ಪರು ಪವಿತ್ರ ಶಾಸ್ತ್ರಾಧಾರದ ನೇಪವನ್ನು ತೊಟ್ಟು ತಮ್ಮ ವೈಯಕ್ತಿಕ ಹಾಗು ವಿಶಿಷ್ಟ ವರ್ಗದ ಹಿತ ಸಂಬಂಧಗಳನ್ನು ಮಾತ್ರ ಬೆಳೆಸಿಕೊಳ್ಳುವದರಲ್ಲಿ ವಹಿಸಿದ ಲಕ್ಷ್ಯವೂ ಕಾರಣವಾಗಿವೆ ಯೆಂದು ಕಂಡು ಬರುತ್ತದೆ. ತಾವೇ ಸಮಾಜದ ಧರ್ಮನಾಯಕರೆಂದು ಹೇಳಿಕೊಳ್ಳುವವರಿಂದಲೇ ಈ ಕಟ್ಟಳೆಗಳು ರಚಿಸಲ್ಪಟ್ಟವೆ ಯೆಂದನೇಲೆ, ಅವುಗಳ ಅಸಂಬದ್ಧತೆ ಅಮಾನುಷತೆ ಮತ್ತು ಅನ್ಯಾಯಗಳನ್ನು ಅನುಭವಿಸಿದವರಾದ ನಾವು ನಿಜವಾದ ವೇದ ಧರ್ಮದ ದೃಷ್ಟಿಯಿಂದ ಈಗಿನಗಿಂತ ಹೆಚ್ಚು ಉತ್ತಮವಾದ ಪರಿಸ್ಥಿತಿಯನ್ನುಂಟುಮಾಡುವದು ನಮ್ಮ ನೈತಿಕ ಧರ್ಮವಾದ್ದರಿಂದ ಮೊದಲಿನ ಆ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಬೇಕು. ಹಿಂದು ಸಮಾಜವು ಸ್ತ್ರೀ ಶೂದ್ರಾದಿಗಳನ್ನು ಅಜ್ಞಾನ ಮತ್ತು ದಾಸ್ಯಗಳಲ್ಲಿ ನೂಕಿರುವುದೂ, ಹಾಗು ಬ್ರಾಹ್ಮಣೇತರರನ್ನು ವೈದಿಕ ಸಂಸ್ಕೃತಿಗೆ ಎರವು ಮಾಡಿ ಜನ್ಮಮಾತ್ರದಿಂದಲ್ಲದೆ ಗುಣಕರ್ಮದಿಂದಲೂ ಪೂರ್ವ ಕಾಲದಲ್ಲಿ ಲಭ್ಯವಿದ್ದ ಬ್ರಾಹ್ಮಣತ್ವವನ್ನು ಅವರಿಗೆ ಅಲ್ಲಗಳೆದಿರುವದೂ ವೈದಿಕ ಜೀವನ ರಹಸ್ಯದ ಮೂಲ ತತ್ವಗಳಿಗೆ ಎಷ್ಟೊಂದು ವಿರುದ್ಧವಾಗಿದೆಯೆಂಬುದನ್ನು ಸಮಯ ಸಿಕ್ಕಿದ್ದರೆ ನಾನು ಸಿದ್ಧ ಮಾಡಿ ತೋರಿಸಬಹುದಾಗಿತ್ತು.

ಮಹಾತ್ಮಾ ಗಾಂಧಿಯವರು ಫೆಬ್ರುವರಿ ಜೂನ ೧೯೩೩ರಲ್ಲಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ—

"According to my definition of Varna, there is no Varna in operation at present in Hunduism. The so called Bramhans have ceased to impart knowledge. They take to various other occupations. This is more or less true of other Varnas. In reality, being under foreign domination we are all slaves, and hence less than Shudras-untouchables of the west."

"ನನ್ನ ವ್ಯಾಖ್ಯೆಯ ಪ್ರಕಾರ ಸದ್ಯದ ಹಿಂದೂ ಸಮಾಜದಲ್ಲಿ ವರ್ಣವು ಕಾರ್ಯತಃ ಇಲ್ಲ. ಬ್ರಾಹ್ಮಣರೆಂದೆನಿಸಿಕೊಳ್ಳುವವರು ಜನರಿಗೆ ಜ್ಞಾನ ಬೋಧೆ ಮಾಡದೆ ಬೇರೆ ಉದ್ಯೋಗಗಳನ್ನು ಕೈಕೊಂಡಿರುವರು. ಇದರಂತೆ ಉಳಿದ ವರ್ಣದವರ ಸ್ಥಿತಿಯಾದರೂ ಹೆಚ್ಚು ಕಡಿಮೆ ಇದೇ ಪ್ರಕಾರ ಇರುವದು. ವಸ್ತುತಃ ಪರಕೀಯರ ಆಧೀನದಲ್ಲಿದ್ದ ನಾವೆಲ್ಲರು ಗುಲಾಮರು ಅಂದರೆ ಶೂದ್ರರಿಗಿಂತ ಕೀಳರು, ಪಾಶ್ಚಿಮಾತ್ಯರ ಅಸ್ಪೃಶ್ಯರು." ಪಾಂಡಿಚೇರಿ ಶ್ರೀ. ಅರವಿಂದ ಆಶ್ರಮದ ವಿನಿಲ್ ಬೆರನ್ ರಾಯ ಎಂಬವರು (Caste & its future) ಜಾತಿಯೂ ಮತ್ತು ಅದರ ಭವಿಷ್ಯ

ತೆಯೂ ಎಂಬ ಚಕ್ರಪ್ರಬಂಧದಲ್ಲಿ ಹೇಳಿರುವುದೇನೆಂದರೆ—

"Thus even within the Brahman caste we find men of all degrees of culture from the highest to the lowest, and all occupations open to men. In Sind there are untouchable Brahmins, the Brahmins of Orissa sometimes come as sweepers to Calcutta; the Brahmins of South India are artisans, agriculturists, day labourers, and this is more or less the case all over India."

"Whatever might have been the meaning and utility of caste system in the past, it has become the ghost of its former self and is doing incalculable harm to society. Foreign critics who do not or cannot look at original truths and essential principles, readily point at the present artificial, meaningless, tyrannous caste system as a sufficient condemnation of Indian culture and civilisation."

"ಈ ಪ್ರಕಾರ ಬ್ರಾಹ್ಮಣ ವರ್ಣದಲ್ಲಿ ಉಚ್ಚ ಸ್ಥಿತಿಯಿಂದ ಕಡಿಮೆ ಸ್ಥಿತಿಯವರೆಗಿನ ಎಲ್ಲ ಸ್ವಭಾವದ ಎಲ್ಲ ವೃತ್ತಿಯ ಜನರನ್ನು ನಾವು ಕಾಣಬಹುದು, ಸಿಂಧದಲ್ಲಿ ಅಸ್ಪೃಶ್ಯ ಬ್ರಾಹ್ಮಣರಿದ್ದಾರೆ, ಓರಿಸಾ ಬ್ರಾಹ್ಮಣರು ಒಂದಾನೊಂದು ಕಾಲಕ್ಕೆ ಕಸ ಗುಡಿಸುವವರಾಗಿ ಕಲಕತ್ತೆಗೆ ಬಂದರು; ದಕ್ಷಿಣ ಹಿಂದುಸ್ಥಾನದ ಬ್ರಾಹ್ಮಣರು ಶಿಲ್ಪಿಗರು, ಒಕ್ಕಲಿಗರು, ಕೂಲಿಕಾರರು ಇದ್ದಾರೆ. ಇಡೀ ಭಾರತದಲ್ಲೆಲ್ಲ ಹೆಚ್ಚು ಕಡಿಮೆ ಇದೇ ಸ್ಥಿತಿ ಇರುತ್ತದೆ."

"ವರ್ಣ ವ್ಯವಸ್ಥೆಯ ಅರ್ಥ ಮತ್ತು ಪ್ರಯೋಜನವು ಪ್ರಾಚೀನ ಕಾಲದಲ್ಲಿ ಏನೇ ಇದ್ದರೂ ಅದರ ಜೀವಕಳೆ ಹೋಗಿ ಅದೀಗ ಪ್ರೇತವಾಗಿದೆ, ಮತ್ತು ಸಮಾಜಕ್ಕೆ ಎಣೆಸಲಾರದಷ್ಟು ಹಾನಿಯನ್ನು ಮಾಡಹತ್ತಿದೆ. ವರ್ಣ ವ್ಯವಸ್ಥೆಯ ಮೂಲಸತ್ಯತೆಯನ್ನು ಮತ್ತು ವಾಸ್ತವಿಕ ತತ್ವಗಳನ್ನು ನೋಡದ ಅಥವಾ ತಿಳಿಯದ ಪರದೇಶಿ ವಿಮರ್ಶಕರು ಕೂಡಲೇ ಅದರ ಈಗಿನ ತೋರಿಕೆಯ ಹುರುಳಿಲ್ಲದ ಬಲಾತ್ಕಾರ ಮಾಡುವ ಜಾತಿ ಪದ್ಧತಿಯು ಭಾರತ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅಲ್ಲಗಳೆಯಲಿಕ್ಕೆ ಸಾಕಷ್ಟಿದೆಯೆಂದು ಇದರ ಕಡಿಗೆ ಬೆರಳುಮಾಡಿ ತೋರಿಸುವರು."

ಈ ಪ್ರಕಾರ ವರ್ಣಗಳೇ ವರ್ಣದಿಂದ ಸಮಾಜಕ್ಕೆ ಮತ್ತು ದೇಶಕ್ಕಾದ ಹಿತಾಹಿತಗಳನ್ನು ಬಾಯಿ ಬಿಚ್ಚಿ ಹೇಳುತ್ತಿರುವಾಗ ಅವುಗಳನ್ನು ಕೇಳಿ ನೋಡಿವ ನೀಲಾದರೂ ಈಗ ವೀರಶೈವರಲ್ಲಿ ವರ್ಣಗಳನ್ನು ಸ್ಥಾಪಿಸಲಿಕ್ಕೆ ಹೊರಟ ಪಂಡಿತರು ತಮ್ಮ ನಡೆ ನುಡಿಗಳನ್ನು ತಿದ್ದಿಕೊಳ್ಳುವದು ಒಳ್ಳೆಯದಲ್ಲವೇ? ಇವರು ಇದಕ್ಕಾಗಿ ವೃಥಾ ಬಸವಣ್ಣನವರನ್ನು ದೂರುವದು ವಿಹಿತವೇ? ಈ ೨೦ನೇ ಶತಮಾನದಲ್ಲಿ ಅವರಲ್ಲೂ ಮಹಾತ್ಮಾ ಗಾಂಧಿಯವರ ಹರಿಜನ ಚಳವಳಿಯ ಈ ದಿನಗಳಲ್ಲಿ ತಮ್ಮ ಚಳವಳಿಗೆಷ್ಟು ಬೆಲೆ ಬಂದೀತೆಂಬುದನ್ನಾದರೂ ಇವರು ವಿಚಾರಿಸಬೇಡವೇ? ಸುಮ್ಮನೇ ಕೈತೋರಿಸಿ ಅವಲಕ್ಷಣ ಮಾಡಿಕೊಳ್ಳುವದು ಸುಜ್ಞರ ಲಕ್ಷಣವಲ್ಲ, "ಒಮ್ಮೆ ಉತ್ತಮ ಕುಲದವರು ಯಾವಾಗಲೂ ಉತ್ತಮ ಕುಲದವರೇ" ಎಂಬ ತತ್ವವು ಬದಲಾಗುವ ಕಾಲವು ಉದಯವಾಗಹತ್ತಿದೆ. 'ಕುಲಜರಾರು' ಎಂಬ ಪ್ರಶ್ನೆಯು ಈಗೆಲ್ಲೆಲ್ಲಿಯೂ ಎದ್ದಿದೆ. ಆದರ ನಿರ್ಣಯವೂ ಸ್ವಲ್ಪೇ ದಿವಸಗಳಲ್ಲಾಗುವ ಲಕ್ಷಣವು ಕಾಣಹತ್ತಿದೆ **ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನಶರಣರೇ ಕುಲಜರು** ಎಂಬ ಮಹಾನುಭಾವರಾದ ಬಸವಣ್ಣನವರ ತತ್ವಕ್ಕೆ ಜಗತ್ತು ಬಂದಿಳಿಯಹತ್ತಿದೆ. ಕಡೆಗೂ ಇದೇ ತತ್ವವು ಜಯಶಾಲಿಯಾಗುವುದು. ಇಷ್ಟು ದಿವಸಗಳವರೆಗೆ ಮುಂದರಿದವರು ತಮ್ಮ ವಿದ್ಯಾ ಬುದ್ಧಿ ಮತ್ತು ಚಾಣಾಕ್ಷತನದಿಂದ ಇತರ ವರ್ಣದವರನ್ನು ಅಂಕಿತದಲ್ಲಿಟ್ಟುಕೊಂಡು ಅಗ್ರವರ್ಣದವರೆನಿಸಿಕೊಳ್ಳುತ್ತ ಬಂದಿದ್ದರೆ, ಈಗಲಾದರೂ ಆವರಲ್ಲಿ ಕೆಲವರು ತಾವು ತಲೆತಲಾಂತರಗಳಿಂದ ಇತರ ವರ್ಣದವರನ್ನು ಅದರಲ್ಲೂ ಅಡಿಜನರನ್ನು ಹೆತ್ತೊತ್ತಿದ ಪ್ರಾಯಶ್ಚಿತ್ತವೆಂದು ಇಂದು ಮಹಾತ್ಮರ ಹರಿಜನ ಚಳವಳಿಯಲ್ಲಿ ಸೇರಿ ಅದರಲ್ಲಿ ಅಗ್ರಭಾಗ ವಹಿಸಿ, ಆತ್ಮಶುದ್ಧಿಗಾಗಿ ಹರಿಜನರ ಸೇವೆಯನ್ನು ತನುವ ನಧನದಿಂದ ಮಾಡಲು ಮುಂದಾಗಿ ಮತ್ತೆ ಮುಂದೊರೆದವರೇ ಆಗಲೂ ಪ್ರಯತ್ನಿಸುತ್ತಿರುವಾಗ, ವೀರಶೈವರು ತಮ್ಮ ಗುರುಗಳೆಂಬುವವರ ಅಲಕ್ಷ್ಯ, ಕರ್ತವ್ಯ ಪರಾಂಙ್ಮುಖತೆ, ಸ್ವಾರ್ಥತೆ ಮೊದಲಾದವುಗಳಿಂದ ಅಜ್ಞಾನಿಗಳಾಗಿ ಅವಿದ್ಯಾವಂತರಾಗಿ ಆನೈಕ್ಯಕ್ಕೆಡೆಯಾಗಿ ತಮ್ಮ ಪೂರ್ವಜರು ಕಾಯ್ದುಕೊಂಡು ಬಂದ ಮತ ಕೀರ್ತಿಯನ್ನು ಕಾಯಲಾರದ ಹೇಡಿಗಳಾಗಿ ಹಿಂದುಳಿದು ಹಿಂದುಳಿದವರೆನಿಸಿಕೊಳ್ಳುತ್ತ ಬಂದಿದ್ದರೂ, ಮುಂದೊರೆಯುವ ಈ ಸಮಯದಲ್ಲಾದರೂ ಎಚ್ಚತ್ತು ಅದರ ಸದುಪಯೋಗವನ್ನು ಮಾಡಿಕೊಳ್ಳದೆ, ಯಾವದನ್ನು ವರ್ಣಗಳು ಚೀಪಿ ನೋಡಿ ಅಸ್ವಾದವೆಂದುಗುಳುತ್ತಿರುವರೋ ಅದನ್ನೇ ವೀರಶೈವರಲ್ಲಿಯ ವರ್ಣಾಪೇಕ್ಷಿಗಳು ಮಹಾ ಪ್ರಸಾದವೆಂದು ಸ್ವೀಕರಿಸಿ, ಯಾವ ವರ್ಣದ ವಿರುದ್ಧ ಈಗ ಜಗತ್ತೇ ಕತ್ತೀ ಕಿತ್ತಿರುವದೋ ಅದೇ ವರ್ಣವನ್ನು ಬೆನ್ನಿಗೆ ಹಾಕಿಕೊಂಡು, ತಾವು ಉಚ್ಚ ವರ್ಣದವರೆನಿಸಿಕೊಳ್ಳಬೇಕೆಂಬ ಉತ್ಸಾಹದಲ್ಲಿ ಇತರರಿಗೆ ಕಡಿಮೆ ಎಂದರೆ ಅವರ ಮನ ನೋಂದೀತೆಂಬುದರ ಸಾಮಾನ್ಯ ತಿಳುವಳಿಕೆಯು ಕೂಡಾ ಇಲ್ಲದೆ, ಜಗತ್ತಿನ ರೋಷಕ್ಕೂ ವೀರಶೈವರು ಪರಪೀಡಕರು ಪ್ರಗತಿಯ ದಾರಿಯಲ್ಲಿ ಅಡ್ಡಬರುವವರು ಎಂಬ ಅಪವಾದಕ್ಕೂ ಗುರಿಯಾಗಿ, ಮುಂದೆಯೂ ಹಿಂದುಳಿದವರೇ ಆಗಲು ಪ್ರಯತ್ನಿಸುತ್ತಿರುವರು. ಮಹಾನುಭಾವರಾದ ಬಸವಣ್ಣನವರ ತತ್ವವನ್ನು ಇತರರೂ ಅನುಸರಿಸಿ ಮುಂದೆ ಹೋಗಬೇಕು. ಆದರೆ ಮೊದಲಿನಿಂದಲೂ ಅವರ ಅನುಯಾಯಿಗಳಾದ ವೀರಶೈವರು ಅವರ ತತ್ವವನ್ನು ಮರೆತು ಹಿಂದುಳಿಯಬೇಕು. ಏನಿದು ವಿಚಿತ್ರವು?

ವೀರಶೈವರ ಹಿಂದಿನ ಮತ್ತು ಇಂದಿನ ಚಿತ್ರವನ್ನು ಮಿ. ಜೆ. ಎನ್. ಫಾರ್ಕರ ಎಂ. ಎ ಎಂಬ ಆಂಗ್ಲ ವಿದ್ವಾಂಸರು ತಮ್ಮ (Primer of Hinduism) 'ಹಿಂದು ಧರ್ಮದ ಮೊದಲನೆಯ ಪುಸ್ತಕ' ಎಂಬುದರಲ್ಲಿ ಸ್ವಲ್ಪದರಲ್ಲೆ ಚಿತ್ರಿಸಿದ್ದಾರೆ. ಅದನ್ನಷ್ಟು ವೀರಶೈವರು ಅದರಲ್ಲೂ ವರ್ಣಾಪೇಕ್ಷಿಗಳು ನೋಡಲೆಂದು ಇಲ್ಲಿ ಕೊಟ್ಟಿದೆ.

"At Kalyan in the Maratha country in the twelth century, Basava, the prime minister of the state, founded the Virasaiva Sect. The movement seems to have been essentially a revolt against Brahaman domination. The ancient worship of Siva is retained, only the Linga and Siva's Bull, Nandi, are very prominent. Members of the sect are distinguished from ordinary Hindus by the wearing of a small Linga some where about

the person. Hence they are commonly called Lingayats. Their priests are called Jangamas. At first they renounced caste completely; but the old poison has crept in amongst them again, and they demand recognition for their caste distinctions in the census papers. Caste had been denounced ehrlier by Kapilar and Vemana, the first a Tamil, the second a Telugu poet; but the Virasaiva Sect seems to have been the earliest organized movement that opposed the ancient basis of Hindu Society ,

"ಮಹಾರಾಷ್ಟ್ರದೇಶದ, ಕಲ್ಯಾಣದಲ್ಲಿ ೧೨ ನೇ ಶತಮಾನದಲ್ಲಿ ಆ ದೇಶದ ಮುಖ್ಯ ಮಂತ್ರಿಯಾದ ಬಸವನು ವೀರಶೈವ ಮತವನ್ನು ಸ್ಥಾಪಿಸಿದನು. ತತ್ವತಃ ಬ್ರಾಹ್ಮಣ ಪ್ರಭುತ್ವದ ವಿರುದ್ಧ ಇವನು ಚಳವಳಿ ನಡಿಸಿದಂತೆ ಕಾಣುತ್ತದೆ. ವ್ಯಾಚೇನ ಕಾಲದ ಶಿವಪೂಜೆಯನ್ನಿಟ್ಟುಕೊಂಡಿರುತ್ತಾರೆ. ಲಿಂಗ ಮತ್ತು ಶಿವನ ವಾಹನವಾದ ನಂದಿಯ ಪೂಜೆಯೇ ಮುಖ್ಯವಾದವುಗಳು. ದೇಹದಲ್ಲಿ ಧರಿಸಿದ ಲಿಂಗಧಾರಣೆಯಿಂದ ಈ ಸಮಾಜದವರು ಇತರ ಹಿಂದುಗಳಿಂದ ಪ್ರತ್ಯೇಕ ಗುರುತಿಸಲ್ಪಡುತ್ತಾರೆ. ಸಾಮಾನ್ಯವಾಗಿ ಅವರಿಗೆ ಲಿಂಗಾಯತರೆನ್ನುವರು. ಅವರ ಗುರುಗಳಿಗೆ ಜಂಗಮರೆನ್ನುವರು. ಮೊದಲು ಅವರು ಜಾತಿಯನ್ನು ಸಂಪೂರ್ಣವಾಗಿ ನಿರಾಕರಿಸಿದರು; ಆದರೆ ಆ ಹಳೆ ವಿಷವು ಪುನಃ ಅವರಲ್ಲಿ ವ್ಯಾಪಿಸಿ ಅವರು ಜನಗಣತಿಯ ಕಾಗದದಲ್ಲಿ ತಮ್ಮ ಜಾತಿಯು ಪ್ರತ್ಯೇಕ ಕಾಣುವಂತೆ ಸ್ಥಾನವನ್ನು ಕೇಳುತ್ತಿದ್ದಾರೆ. ತಮಿಳು ಮತ್ತು ತೆಲುಗು ಕವಿಗಳಾದ ಕಪಿಲಿಯರ ಮತ್ತು ವೆಮನ ಇವರಿಂದ ಪೂರ್ವದಲ್ಲಿ ಜಾತಿಯು ನಿರಾಕರಿಸಲ್ಪಟ್ಟಿದ್ದರೂ, ಹಿಂದು ಸಮಾಜದ ಮೂಲ ತತ್ವಗಳಾದ ವರ್ಣಾಶ್ರಮಗಳನ್ನು ಸಂಘಟಿತ ರೀತಿಯಿಂದ ವಿರೋಧಿಸಿದ್ದರಲ್ಲಿ ವೀರಶೈವ ಸಮಾಜವು ಮೊದಲನೆಯದೆಂದು ಕಾಣುತ್ತದೆ,

ಆವರು ವೀರಶೈವರಲ್ಲಿ ಜಾತಿಭೇದವೆಂಬ ವಿಷವು ಪುನಃ ವ್ಯಾಪಿಸಕತ್ತಿದೆ ಎಂದು ಹೇಳಿದ್ದಾರೆ. ವಿಷ ವ್ಯಾಪಿಸಿದಲ್ಲಿ ಎಂದಾದರೂ ಉಳಿಯುವುದುಂಟೆ? ಕಾರಣ ಸಮಾಜವು ಉಳಿಯಬೇಕೆನ್ನುವವರು ಜಾತಿಭೇದ ರೂಪೀ ವಿಷವನ್ನು ತೆಗೆದುಹಾಕಲಿಕ್ಕೆ ಪ್ರಯತ್ನಿಸಬೇಕು. ಜಾತಿಭೇದ ಉಳಿಯಬೇಕೆಂದರೆ ವೀರಶೈವ ಸಮಾಜದ ಆಶೆ ಬಿಡಬೇಕು. ಇದರ ಹೊರತು ಈಗ ಬೇರೆ ಗತ್ಯಂತರವೇ ಇಲ್ಲ.

ಶ್ರೀ ಜಗದ್ಗುರು ಮುರಘ ರಾಜೇಂದ್ರ ಫ್ರೀ ಬೋರ್ಡಿಂಗಿನ ಜನರಲ್ ಕಮಿಟಿಯ ಕಾರ್ಯ.

ಧಾರವಾಡದಲ್ಲಿರುವ ಶ್ರೀಮನ್ನಿರಂಜನ ಜಗದ್ಗುರು ಮುರಘ ರಾಜೇಂದ್ರ ಫ್ರೀ ಬೋರ್ಡಿಂಗಿನ ಜನರಲ್ ಕಮಿಟಿಯು ಈ ಮುಂಚೆ ಪ್ರಕಟವಾದ ಪ್ರಕಾರ ತಾ. ೨೦-೧-೩೪ನೆಯ ದಿವಸ ಮುಂಜಾನೆ ರಾ. ಬ. ಬಿ. ಎಲ್. ಪಾಟೀಲರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಈ ಸಂಸ್ಥೆಯು ೧೩ನೆಯ ವರುಷದ ರಿಪೋರ್ಟು ಹಂಚಲಾಯಿತು. ಆ ಮೇಲೆ ಮ್ಯಾನೇಜಿಂಗ್ ಕಮಿಟಿಯ ಚುನಾವಣೆ ಯಾಗಲು ಇಲ್ಲಿಯ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜನ್ನು ಈ ಸಂಸ್ಥೆಯಲ್ಲಿಯೇ ಸಮಾವೇಶ ಮಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣಯವಾಯಿತು. ವಸ್ತು ಈ ಸಂಸ್ಥೆಯನ್ನು ಕ್ರಿ. ಶ. ೧೮೬೦ನೇ ಸೊಸೈಟಿ ರಿಜಿಸ್ಟ್ರೇಶನ್ ಆಕ್ಟ ಪ್ರಕಾರ ರಜಿಸ್ಟರ ಮಾಡಿಸಬೇಕೆಂದೂ ಈ ಕಾರ್ಯಕ್ಕಾಗಿ ಶ್ರೀ. ಹರ್ಡೇಕರ ಮಂಜಪ್ಪ ನವರು, ಶ್ರೀ. ಮಟ್ಟಿ ವಕೀಲರು ಮತ್ತು ಶ್ರೀ. ಬಳ್ಳಾರಿ ಬಸಪ್ಪ ನವರು ಈ ಪ್ರಕಾರ ಮೂವರ ಒಂದು ಸಬ್ ಕಮಿಟಿ ನೇಮಕವಾಗಿದೆಯೆಂದೂ ಸರ್ವಾನುಮತದಿಂದ ಗೊತ್ತಾಯಿತು.

ಧಾರವಾಡ.
೨೧-೧-೧೯೩೪.

ಶಿವಪ್ಪ ಮಟ್ಟಿ
ಸೆಕ್ರೆಟರಿ.

ಎರಡು ಮರಾಠಿ ಪತ್ರಿಕೆಗಳ ಸುಸ್ವಾಗತ.

ಸೊಲ್ಲಾಪುರವು ಉತ್ತರ ಕರ್ನಾಟಕದಲ್ಲಿ ಒಂದು ಮುಖ್ಯ ಪಟ್ಟಣವಾಗಿದ್ದಿತು. ಈಗ ದಕ್ಷಿಣ ಮಹರಾಷ್ಟ್ರದಲ್ಲಿ ಪ್ರಮುಖ ಸ್ಥಳವಾಗಿದೆ. ಇಲ್ಲಿ ವೀರಶೈವರ ಸಂಖ್ಯೆಯಾದರೂ ವಿಶೇಷವಾಗಿದೆ. ಇತ್ತೀಚೆಗೆ ವೀರಶೈವರಲ್ಲಿ ಶ್ರೀ. ಬಸವಾದಿ ಪ್ರಮಥರ ನಿಂದೆಯ ಪಂಗಡವೊಂದುಂಟಾಗಿದೆಯಷ್ಟೆ ಈ ಪಂಗಡವು ಈಗೀಗ ಮರಾಠಿ ದೇಶದಲ್ಲಿಯೂ ಬೆಳೆಯುತ್ತಲಿದೆ. ಇಂತಹ ಪ್ರಸಂಗದಲ್ಲಿ ಸೊಲ್ಲಾಪುರದಿಂದ ಪ್ರಕಟವಾಗುವ ಎರಡು ಮರಾಠಿ ಸಾಪ್ತಾಹಿಕ ಪತ್ರಿಕೆಗಳ ಸುಸ್ವಾಗತ ಮಾಡುವ ಸಮಯ ಬಂದುದು ಅತ್ಯಂತ ಸಂತೋಷಕರವಾದುದು.

ವಿಜಯ— ಎಂಬ ಮಾಸ ಪತ್ರಿಕೆಯನ್ನು ಶ್ರೀ. ಪಂಡಿತ ಬಸವಲಿಂಗ ಶಾಸ್ತ್ರಿಗಳು ಪ್ರಕಟಿಸುತ್ತಿದ್ದಾರಷ್ಟೆ. ಅದನ್ನೇ ಕಳೆದ ಲಿಂಗಳಿಂದ ವಾರಪತ್ರಿಕೆಯನ್ನಾಗಿ ಮಾಡಿದುದು ಮತ್ತು ಶ್ರೀ ಬಸವಾದಿ ಪ್ರಮಥರ ದಿವ್ಯ ತತ್ವಗಳನ್ನು ಪ್ರಸಾರಗೊಳಿಸುತ್ತಿರುವುದು ಅತ್ಯಂತ ಅಭಿನಂದನೀಯವಾದುದಾಗಿದೆ.

ಸುದರ್ಶನ—ಎಂಬ ವಾರಪತ್ರಿಕೆಯನ್ನು ಕಳೆದ ೨೩ನೆಯ ತಾರೀಖಿನಿಂದ ಶ್ರೀಯುತ ಸಿದ್ಧಮಲ್ಲಪ್ಪ ಕಲ್ಯಾಣಶೆಟ್ಟಿ ಬಿ. ಎ. ಎಲ್. ಎಲ್. ಬಿ. ಇವರು ಪ್ರಕಟಿಸಲುಪಕ್ರಮಿಸಿ ಇವರು ಕೂಡಾ ಶ್ರೀಬಸವಾದಿ ಪ್ರಮಥರ ಶ್ರೇಷ್ಠ ಮಾರ್ಗವನ್ನೇ ವೀರಶೈವರಿಗೆ ತೋರಿಸಿಕೊಡಲುಪಕ್ರಮಿಸಿರುವುದು ಬಹು ಸ್ತುತ್ಯವಾದುದಾಗಿದೆ.

ಈ ಪ್ರಕಾರ ಈ ಉಭಯ ಮಹನೀಯರೂ ಸಮಾಜೋನ್ನತಿಗೆ ಅವಶ್ಯಕವಾಗಿರುವ ವೀರಶೈವ ಮತದ ನಿಜತತ್ವಗಳನ್ನು ಪ್ರಸಾರಗೊಳಿಸಲುಪಕ್ರಮಿಸಿದುದರಿಂದ ನಾವು ಈ ನಮ್ಮ ವ್ಯವಸಾಯ ಬಂಧುಗಳನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ. ಈ ಪವಿತ್ರ ಕಾರ್ಯಕ್ಕೆ ನೆರವಾದ ಮಹಾಶಯರಿಗೂ ನಮ್ಮ ಅನೇಕ ಧನ್ಯವಾದಗಳು. ಈಗಲಾದರೂ ಮರಾಠಿ ದೇಶದಲ್ಲಿರುವ ವೀರಶೈವ ಬಾಂಧವರು ಮತದ ನಿಜ ತತ್ವಗಳನ್ನು ಅರಿತು ಆಚರಿಸಲಿ. ಶರಣವರೇಣ್ಯನಾದ ಆ ಸಿದ್ಧರಾಮ ಶಿವಯೋಗಿಯ ಕೃಪೆಯಿಂದ ಈ ಉಭಯ ಪತ್ರಿಕೆಗಳೂ ತಮ್ಮ ಉದ್ದೇಶದಂತೆ ಸಮಾಜಸೇವೆ ಮಾಡಲು ಹೆಚ್ಚಾದ ಸಾಮರ್ಥ್ಯವನ್ನು ಹೊಂದಲಿ. ಈ ಪುಣ್ಯ ಕಾರ್ಯಕ್ಕಾಗಿ ಇವು ಚಿರಕಾಲ ಬಾಳಲಿ.

ಸ್ವೀಕಾರ.

ಇಲ್ಲಿಯ ಪಾಟೀಲರಾದ ಶ್ರೀ ನೂರೊಂದಯ್ಯನವರ ಚಿರಂಜೀವಿಗಳ ಈ ವಾರದಲ್ಲಿ ನಡೆದ ವಿವಾಹ ಸಮಯದಲ್ಲಿ ವಧೂ ಪಕ್ಷದವರಾದ ಶ್ರೀ ವೀರಭದ್ರಯ್ಯ ನಾಗಯ್ಯ ಶಿವಸ್ವಯ್ಯನವರ ಗದಗ ಇವರು ವೀರಶೈವ ವಿದ್ಯಾಲಯಕ್ಕೆ ೩೫ ರೂ. ಗಳ ದಾನ ಕೊಟ್ಟುದನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಸಹಾಯಾಧಿಪತಿ.

॥ ಓಂ ಜಗದ್ಗುರು ಪ್ರಭುವೆ ನಮಃ ॥

ಶ್ರೀಮದ್ವೀರಶೈವ-ಸನಾತನ ಜಗದ್ಗುರು ಮೂಲಸಿಂಹಾಸನಾಧೀಶ ಪ್ರಭುದೇವ ಪರಂಪರಾಗತ ಸುಕ್ಷೇತ್ರ ಬಂಥನಾಳ ವೃಷಭಲಿಂಗೇಶ್ವರ

ಮಹೋತ್ಸವ ಪತ್ರಿಕಾ.

ಸುಕ್ಷೇತ್ರ ಬಂಥನಾಳ ಮಹಾಸ್ಥಳದ ವ್ಯವಸ್ಥಾಪಕ ಮಂಡಲಿಯು ವಿ. ವಿ ಸುಕ್ಷೇತ್ರ ಬಂಥನಾಳದಲ್ಲಿ ಪ್ರತಿವರುಷದ ಪದ್ಧತಿಯಂತೆ ಜರುಗುವ ಮಂಗಲಮಹೋತ್ಸವದ

ಕಾರ್ಯಕ್ರಮಗಳ ವಿವರ.

(೧) ಅಗ್ನಿ ಸಮಾರಂಭವು.

ಇದೇ ಶ್ರೀಮುಖ ನಾಮ ಸಂವತ್ಸರ ಮಾಘ ವದಿ ೩೦. ತಾ. ೧೩-೨-೩೪ ಮಂಗಳವಾರ ದಿವಸ ಸಂಜೆಗೆ ಪಾಂಚಾಲ ಭಕ್ತರಿಂದ ಶಿವಾಧಿಕ್ಯ ಸಮರ್ಥನವಾದ ಅಗ್ನಿ ಸಮಾರಂಭವು ಜರಗುವುದು.

(೨) ಅಗ್ನಿ ಶಮನವು ಮತ್ತು ಅನ್ನ ಸಂತರ್ಪಣೆಯು.

ಫಾಲ್ಗುಣ ಶುದ್ಧ ೧ ತಾ. ೧೪-೨-೩೪ ಬುಧವಾರ ಮುಂಜಾನೆ ೪ ಘಂಟೆಗೆ ಅಗ್ನಿ ಶಮನವು ಆ ಮೇಲೆ ಅನ್ನ ಸಂತರ್ಪಣೆಯು ನಡೆಯುವದು.

(೩) ದನಗಳ ಪ್ರದರ್ಶನವು.

ಫಾಲ್ಗುಣ ಶು. ೧ ತಾ. ೧೪-೨-೩೪ ಬುಧವಾರ ದಿವಸ ಮಧ್ಯಾನ್ಹ ೩ ಗಂಟೆಗೆ ಶ್ರೀಮಂತರಾಯ್ ಚಂದ್ರರಾವ ದೇಶಮುಖ ಹಿರೊಳ್ಳಿ ಸೈಜಾಮ ಸ್ಟೇಟ ಇವರ ಅಧ್ಯಕ್ಷತೆಯಲ್ಲಿ ದನಗಳ ಪ್ರದರ್ಶನವು ನಡೆದು ಯೋಗ್ಯ ಜನಾವರಗಳಿಗೆ ಇನಾವು ಕೊಡಲ್ಪಡುವದು

(೪) ಶಿವಕೀರ್ತನೆಗಳು.

ತಾ. ೧೩-೨-೩೪ ರಿಂದ ತಾ. ೧೫-೨-೩೪ರವರೆಗೆ ಪ್ರಸಿದ್ಧರಾದ ಕೀರ್ತನ ಕೇಸರಿ ಜಯರಾವಮಾಚಾರ್ಯರು ಕೊಪ್ಪಳ ಇವರ ಸುಶ್ರಾವ್ಯ ಕೀರ್ತನಗಳು ಜರಗುವವು.

(೫) ಧಾರ್ಮಿಕ ಸಭೆಯು.

ತಾ. ೧೫-೨-೩೪ನೇ ಗುರುವಾರ ಮಧ್ಯಾನ್ಹ ಮೂರು ಘಂಟೆಗೆ ಧಾರ್ಮಿಕ ಸಭೆಯು ನಡೆದು ಧಾರ್ಮಿಕ ಸಾಮಾಜಿಕ ಮೊದಲಾದ ವಿಷಯಗಳ ಮೇಲೆ ಪಂಡಿತರ ಭಾಷಣಗಳು ಜರುಗುವವು. ಪ್ರಯುಕ್ತ ತಾವು ತಮ್ಮ ಪರಿವಾರಸಮೇತ ಆಗಮಿಸಿ ಸದ್ಗುರುವಿನ ಕೃಪೆಗೆ ಪಾತ್ರರಾಗಬೇಕಾಗಿ ಕೋರಿಕೆ.

ಸೂಚನೆ:—ಎರಡು ತಿಂಗಳಿಂದಲೂ ಹಪೆಯು ಚನ್ನಾಗಿದ್ದು ನೀರು ಸ್ಥಳಗಳ ಅನುಕೂಲತೆಯು ನೆಟ್ಟಗದೆ.

ವ್ಯವಸ್ಥಾಪಕ ಮಂಡಳಿ.

ಶ್ರೀ. ದಾನಪ್ಪಗೌಡ ಪಾಟೀಲ ಬೊಮ್ಮನಹಳ್ಳಿ	ಶ್ರೀ ಸಿದ್ಧಲಿಂಗಪ್ಪ ಜತ್ತಿ ವಿಜಾಪುರ,
ಶ್ರೀ. ಲಿಂಗನಗೌಡ ಪಾಟೀಲ ಡೋಣೂರ,	ಶ್ರೀ. ಶಂಕರೆಪ್ಪ ಹೇರಲಗಿ ವಿಜಾಪುರ,
ಶ್ರೀ. ಶರಣಪ್ಪ ಪಾಟೀಲ ಚಾಂದಕವತೆ,	ಶ್ರೀ. ಮುರಿಗೆಪ್ಪ ಹುಂಡೇಕಾರ ವಿಜಾಪುರ,
ಶ್ರೀ. ಚನ್ನಗೌಡ ಪಾಟೀಲ ರಬಿನಾಳ,	ಶ್ರೀ. ಶಿವಲಿಂಗಪ್ಪ ಧಂಕರಿ ಶಿವಣಗಿ,
ಶ್ರೀ. ಮಲ್ಲೇಶಪ್ಪ ಪೋ.ಪಾಟೀಲ ಬೂದಿಹಾಳ,	ಶ್ರೀ. ತೋಟಪ್ಪ ವಾಲಿ ಮಾರ್ಕಬ್ಬಿನ ಹಳ್ಳಿ,
ಶ್ರೀ. ಹಣಮಂತರಾವ ಪಾಟೀಲ ಸಲಗರ,	ಶ್ರೀ. ಸಾಹೇಬಗೌಡ ಪಾಟೀಲ ರೂಗಿ,
ಶ್ರೀ. ಶರಣಪ್ಪ ಪಾಟೀಲ ಉಕ್ಕಲಿ,	ಶ್ರೀ. ಗೌಡಪ್ಪ ಬಿರಾದರ ಪಟ್ಟದಕಿ,
ಶ್ರೀ. ಬಸವ ಲಿಂಗಪ್ಪ ಪೋ. ಪಾಟೀಲ ಬಂಥನಾಳ,	ಶ್ರೀ ಗೋಪಾಲರಾವ ಕುಲಕರ್ಣಿ ಬಂಥನಾಳ.

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! **ಮಹತ್ವದ ಪುಸ್ತಕ!!**

ಖಾದೀ ಶಾಸ್ತ್ರ.

ಲೇಖಕರು:—ಶ್ರೀ. ಹರ್ಡೀಕರ ಮಂಜಪ್ಪನವರು,
ಪ್ರಕಾಶಕರು ಮತ್ತು ಸಂಪಾದಕರು:— ಶ್ರೀ. ಆಲೂರು ವೆಂಕಟರಾಯರು.

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸುಖ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅದನ್ನು ಬಿಟ್ಟದ್ದರಿಂದಲೇ ನಾವು ಹೇಗೆ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಆಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿದೆ.

ಈ ಪ್ರಕಾರ ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣದಿಂದ ಒರೆದುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತೆ ಕರಿಸಿಕೊಂಡು ಖಾದಿಯ ವಿಷಯವನ್ನು ಚೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ. ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. / **ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.**

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! **ಬರೇ ೬ ತಾಸುಗಳಲ್ಲಿಯೇ ಗುಣ!!**

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಿ ಜನರು ಸಾಯುತ್ತಿರುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಆರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಪಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತು ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದುದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಅದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಬ್ಬರಿಗೆ ಸಾಲುವಷ್ಟು ಔಷಧವನ್ನು ಮುಂಚಿತವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹಣದ ಅಡಚಣೆಯು ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ. ವ್ಹೀ. ಪಿ. ಚಾರ್ಜ ಬೇರೆ.

ಅನುಪಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— **ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೆ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ ... . ಅಂದವಾಗಿ ಸಿಂಗರಿಸಿದ ಹೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೮-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರಕ್ಕೆ ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ.**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಅಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚೊಲ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲಿ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ನೂರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳಿವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು. ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಿದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕೆಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ವಿಳಾಸ-
ಶಿವಸಂಗಪ್ಪಣ್ಣ ಕುಪಸತ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧೯೬ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಚೇಳಿನ ನಾಶ— ೧೧ ,,
೧೨ ತಗಣಿ ಶಮ್ರು ಬಾಟ್ಲಿ— ೭ ,,
೧೦೦ ಚೀಟುಗಳಾದರೂ ವ್ಹಿ. ಪಿ ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಲಿ
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

SANGAM CLOTH STORES
Prop: M. S. Hundeka[illegible] Sons,
P.O: TERDAL – 587 313
Dt. Bijapur, (Karnataka)

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಫೆಬ್ರುವರಿ ತಾರೀಖು ೫ ನೆಯ ಸೋಮವಾರ | ಸಂಚಿಕೆ ೨೫.

ಬಿಹಾರದ ಪುನರ್ಘಟನೆ.

ಇಂಥ ಭೂಕಂಪವು ಮನುಷ್ಯನ ಜ್ಞಾಪಕದಲ್ಲಿ ಎಂದೂ ಆಗಿರುವುದಿಲ್ಲ.

"ಅಸ್ಪೃಶ್ಯತೆಯ ಪಾಪವೇ ಈ ಅನರ್ಥಕ್ಕೆ ಕಾರಣವು."

ಮಹಾತ್ಮಾಜಿ.

ಭೂಕಂಪದ ಅನರ್ಥದ ವಿಷಯವಾಗಿ ಬಾಬೂ ರಾಜೇಂದ್ರ ಪ್ರಸಾದರವರಿಂದ ಮಹಾತ್ಮಾಜಿಯವರಿಗೆ ತಂತಿಯು ಬಂದೊಡನೆಯೇ ಮಹಾತ್ಮರ ಹೃದಯಕ್ಕೆ ವಜ್ರಾಘಾತವಾದಂತಾಯಿತು. ಅದೇ ಕಾಲಕ್ಕೆ ಅವರು ಆದಿಜನ ಕಾರ್ಯವನ್ನು ಬಿಟ್ಟು ಬಿಹಾರಕ್ಕೆ ಹೋಗಬೇಕೆಂದೂ ಆದಿಜನಗಳಿಗಾಗಿ ಈ ವರೆಗೆ ಕೂಡಿಸಿದ ಧನವನ್ನು ಬಿಹಾರಕ್ಕೆ ಕಳುಹಿಕೊಡಬೇಕೆಂದೂ ಜನರಿಂದ ತಂತಿಗಳು ಬರಹತ್ತಿದವು. ಇದಕ್ಕಾಗಿ ಮಹಾತ್ಮಾಜಿಯವರು 'ಹರಿಜನ' ದಲ್ಲಿ ಈ ಪ್ರಕಾರ ಬರೆಯುತ್ತಾರೆ.

"ಬಾಬು ರಾಜೇಂದ್ರ ಪ್ರಸಾದರವರು ನನ್ನ ಅತ್ಯುತ್ತಮ ಸಹೋದ್ಯೋಗಿಗಳಲ್ಲೊಬ್ಬರು. ಅವರು ತಮಗೆ ಬೇಕಾದಾಗ್ಗೆ ನನ್ನ ಸೇವೆಯನ್ನು ತೆಗೆದುಕೊಳ್ಳಬಲ್ಲರು. ಹರಿಜನ ಸಮಸ್ಯೆಯು ಯಾವ ಪ್ರಕಾರ ನನ್ನದಿರುತ್ತದೆಯೋ ಅದೇ ಪ್ರಕಾರ ಅವರದೂ ಇರುತ್ತದೆ. ಅದರಂತೆಯೇ ಬಿಹಾರದ ಕಾರ್ಯವು ಅವರದಿರುವಂತೆಯೇ ನನ್ನದೂ ಇರುತ್ತದೆ. ಆದರೆ ಪರಮಾತ್ಮನು ನನಗೆ ಹರಿಜನ ಕಾರ್ಯವನ್ನು ಒಪ್ಪಿಸಿರುವಂತೆಯೇ ಅವರಿಗೆ ಬಿಹಾರದ ಕಾರ್ಯವನ್ನು ಒಪ್ಪಿಸಿರುತ್ತಾನೆ. ಬಿಹಾರದ ಕೂಗು ಕೇಳುತ್ತಲೇ ನಾನೆಂದೂ ಹಿಂದೆಗೆಯಲಾರೆನು. ಆದರೆ ನಾನು ನನ್ನ ಸ್ಥಾನದಲ್ಲಿದ್ದುಕೊಂಡೇ ಅದರ ಸೇವೆಯನ್ನು ಮಾಡಬಲ್ಲೆನು. ಹೇಗೆ ಮತ್ತು ಎಲ್ಲಿಯವರೆಗೆ ತಡೆಯಬೇಕೆಂಬುದನ್ನು ಯಾರು ಬಲ್ಲರೊ ಅವರು ಸಹ ಸಹಾಯ ಮಾಡುತ್ತಾರೆ.

ಆದರೆ ನಾನು ಕೂಡಿಸಿದ ಹರಿಜನ ಫಂಡನ್ನು ಬಿಹಾರಕ್ಕಾಗಿ ಉಪಯೋಗ ಮಾಡಬೇಕೆಂದು ಒಂದು ತಂತಿಯು ಬಂದಿದೆ. ಈ ಸಲಹೆಯನ್ನು ಸ್ವೀಕರಿಸಿದರೆ ನಾನು ವಿಶ್ವಾಸಘಾತ ಮಾಡಿದಂತಾಗುವುದು. ನಾನು ಭಯಂಕರ ಆಪತ್ತಿನಲ್ಲಿ ಎದೆಗುಂದಬಾರದು. ಯಾಕಂದರೆ ಜಗತ್ತಿನ ಐಶ್ವರ್ಯವನ್ನೆಲ್ಲ ಕೊಟ್ಟರೂ ಬಿಹಾರದ ಪೂರ್ವದ ಸ್ಥಿತಿಯು ಬರಲಾರದು.

ಆದರೆ ಪುನರ್ಘಟನೆಯ ವಿಷಯವಾಗಿ ನಾನು ಸ್ವಲ್ಪ ಸೂಚಿಸುತ್ತೇನೆ. ಸಹಾಯದ ನಿಜವಾದ ಉಪಯೋಗ ಮಾಡುವದಿದ್ದರೆ ಇನ್ನು ಮೇಲೆ ಅಸ್ಪೃಶ್ಯತೆಯನ್ನು ಬೀರುವ ಅನಾಚಾರಗಳಿಗೂ ಭಿನ್ನ ಭೇದಗಳಿಗೂ ಅಸ್ಪದ ಕೊಡಬಾರದು. ಪ್ರಕೃತಿಯು ನಾಶ ಮಾಡವದರಲ್ಲಿ ಪಕ್ಷಪಾತವನ್ನು ಮಾಡಿರುವದಿಲ್ಲವೆಂದ ಮೇಲೆ ನಾವಾದರೂ ಏಕೆಮಾಡಬೇಕು? ಸರಕಾರದವರ ಮೇಲೆಯೂ, ರಾಷ್ಟ್ರೀಯ ಸೇವಕರ ಮೇಲೆಯೂ ಈ ಪುನರ್ಘಟನೆಯ ಹೊಣೆಗಾರಿಕೆಯು ಅವಾರವಾದುದಾಗಿದೆ. ಈ ಪ್ರಸಂಗದಲ್ಲಿ ಉಭಯತರೂ ಸಹಕರಿಸಿ ಕಾರ್ಯಮಾಡುತ್ತಿರುವುದರಿಂದ ಬಿಹಾರವನ್ನು ಮನುಷ್ಯನಿಗೆ ತಕ್ಕಂತೆ ಆರೋಗ್ಯಕ್ರಮಬದ್ಧವಾಗಿ ಕಟ್ಟತಕ್ಕದ್ದು.

ಬಿಹಾರದ ಅನರ್ಥಕ್ಕೆ ಅಸ್ಪೃಶ್ಯತೆಯ ಪಾಪವೇ ಕಾರಣವೆಂದು ನಾನು ಭಾವಿಸುತ್ತೇನೆ. ಅದು ನನ್ನನ್ನು ಮತ್ತಷ್ಟು ವಿನೀತನನ್ನಾಗಿ ಮಾಡಿ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ಬಲವಾದ ಪ್ರಯತ್ನವನ್ನು ಮಾಡಹಚ್ಚುವದಲ್ಲದೆ ನನ್ನನ್ನು ಶುದ್ಧಾತ್ಮನಾಗಲು ಉತ್ತೇಜನಗೊಳಿಸಿ ಪರಮಾತ್ಮನ ಸಾನ್ನಿಧ್ಯವನ್ನು ಹೊಂದುವಂತೆ ಮಾಡುತ್ತದೆ.

ಅಸ್ಪೃಶ್ಯತಾ ನಿವಾರಕ ಸುಧಾರಕರು ಅಸ್ಪೃಶ್ಯತೆಯ ಪಾಪಕ್ಕಾಗಿಯೇ ಭೂಕಂಪವುಂಟಾಯಿತೆಂಬುದನ್ನು ತಿಳಿಯಲಿ. ನನ್ನಲ್ಲಿರುವಂಥ ನಂಬುಗೆಯೇ ಅವರಲ್ಲಿದ್ದುದಾದರೆ ಅವರು ಎಂದೂ ತಪ್ಪು ಮಾಡರು. ಆ ನಂಬುಗೆಯಿಂದಲೇ ಅವರು ಹೆಚ್ಚು ಹೆಚ್ಚಿಗೆ ಸಹಾಯ ಮಾಡಬಲ್ಲರು, ಮತ್ತು ತಿರುಗಿ ಕಟ್ಟುವ ಯೋಜನೆಯಲ್ಲಿ ಅಸ್ಪೃಶ್ಯತೆಯು ಪುನಃ ಉತ್ಪನ್ನವಾಗದಂತಹ ವಾತಾವರಣವನ್ನು ಹುಟ್ಟಿಸಲು ಪ್ರಯತ್ನಿಸುವರು.

ಶ್ರೀ ಬಸವಾದಿ ಪ್ರಮಥರ

ವಚನ ಪ್ರವಚನ ಮಾಲಾ ಧಾರವಾಡ.

ಇಲ್ಲಿಯ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಪ್ರವಚನವು ಪ್ರಾರಂಭವಾಗಿ ೮ ದಿನಗಳವರೆಗೆ ನಡೆದುದನ್ನು ಈಗಾಗಲೇ ತಿಳಿಸಿದ್ದಾಗಿದೆಯಷ್ಟೆ. ಈ ಮಾಘ ಶುದ್ಧ ೯-೧೦ ಈ ಎರಡು ದಿವಸ,

ಪಂಡಿತ ಶ್ರೀ. ವಿರೂಪಾಕ್ಷ ಶಿವಾಚಾರ್ಯರು 'ನೈತಿಕ ಸಾಮರ್ಥ್ಯದ' ವಿಷಯವಾಗಿ ಶಿವಶರಣರ ದಿವ್ಯ ವಚನಗಳಿಗೂ ಯೋಗ ಶಾಸ್ತ್ರದಲ್ಲಿ ವಿವರಿಸಿರುವ ಸೂತ್ರಗಳಿಗೂ ಹೋಲಿಸಿ ವಚನಕಾರರು ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಪರಿಗ್ರಹ ಮೊದಲಾದ ನೀತಿಯ ನಿಯಮಗಳಿಗೆ ಎಷ್ಟು ಮಹತ್ವ ಕೊಟ್ಟಿದ್ದರೆಂಬುದನ್ನು ತಿಳಿಸಿದರು. ಈ ನೀತಿಯ ನಿಯಮಗಳೇ ಧರ್ಮಕ್ಕೆ ತಳಹದಿಯಾಗಿವೆ. ಇವುಗಳನ್ನನುಸರಿಸಿ ಧರ್ಮಾಚಾರಗಳಂತೆ ನಡೆದಾಗಲೇ ಆತನಿಗೆ ಇಹಪರ ಸುಖಶಾಂತಿಗಳು ದೊರೆಯುವವು. ಈ ಪ್ರಕಾರ ಲೌಕಿಕ ಪಾರಮಾರ್ಥಗಳೆರಡನ್ನೂ ಸಾಧಿಸುವಾತನೇ ಜಾಣನು.

ಕಾಯಕವೆ ಕೈಲಾಸ ಎಂಬ ಶ್ರೀ ಆಯದಕ್ಕಿ ಮಾರಯ್ಯಗಳ ವಚನವನ್ನು ಕುರಿತು ಮಾಘ ಶುದ್ಧ ೧೧ ಯ ದಿವಸ **ಶ್ರೀ. ಹರ್ಡೇಕರ ಮಂಜಪ್ಪನವರ** ಪ್ರವಚನವಾಯಿತು. ವೀರಶೈವ ತತ್ವಗಳಲ್ಲಿ ಕಾಯಕವು ಒಂದು ಪ್ರಾಮುಖ್ಯವಾದುದಾಗಿಯೇ ಇದೆ. ಗುರುಲಿಂಗ ಜಂಗಮ ಸೇವೆಗಾಗಿ ಏರ್ಪಟ್ಟ ಈ ಕಾಯಕವು ಜನಾಂಗದ ಸ್ವಾವಲಂಬನೆ, ಸಾಂಪತ್ತಿಕ ವಿಷಮತೆಯ ನಿವಾರಣೆ ಮನಸ್ಸಿನ ಪಾವಿತ್ರ್ಯತೆಗಳಿಗೆ ಬಹು ಸಹಾಯಕವಾಗಿದೆ. ಉದ್ಯೋಗಗಳಲ್ಲಿ ಮೇಲು ಕೀಳುಗಳಿಲ್ಲ. ಅವುಗಳನ್ನು ನಡೆಸುವ ರೀತಿಗಳಲ್ಲಿ ಮಾತ್ರ ಉಚ್ಚ ನೀಚತ್ವಗಳುಂಟಾಗುವವು.

ವಿದ್ವಾನ್ ಶ್ರೀ. ನಾಗೇಶ ಶಾಸ್ತ್ರಿಗಳವರು.

ಶಿವಶರಣರ ಆತ್ಮಶಕ್ತಿಯ ತೇಜಸ್ಸು— ಎಂಬ ವಿಷಯವಾಗಿ ಮಾಘ ಶುದ್ಧ ೧೨-೧೩ ಈ ಎರಡು ದಿವಸ ಪ್ರವಚನ ಮಾಡಿದರು. ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಎಂಬ ಅರ್ಥವುಳ್ಳ ವಚನವನ್ನು ವಿವೇಚನೆ ಮಾಡಿದರು. ದೇಹ ಬಿಟ್ಟ ನಂತರ ಕೈಲಾಸಾದಿ ಲೋಕಗಳು ದೊರೆಯುತ್ತವೆಂದು ಈ ಲೋಕದಲ್ಲಿ ಧರ್ಮವನ್ನಾಚರಿಸಲು ಶರಣರು ಬೋಧಿಸಿಲ್ಲ. ಈ ಲೋಕದಲ್ಲಿಯೇ ಈ ದೇಹದಲ್ಲಿರುವಾಗಲೇ ಜೀವನು ಶಿವನಾಗಿ ಆನಂದ ಸಾಮ್ರಾಜ್ಯದಲ್ಲಿರುವುದನ್ನು ಬೋಧಿಸಿದ್ದಾರೆ.

ವೀರಶೈವರಲ್ಲಿರತಕ್ಕ ಷಟ್ಸ್ಥಳಗಳ ತತ್ವವೇ ಈ ದಿವ್ಯ ಮಾರ್ಗವನ್ನು ಬೋಧಿಸತಕ್ಕುದಾಗಿದೆ. ಅಷ್ಟಾವರಣಗಳು ಆ ತತ್ವಕ್ಕೆ ಪೋಷಕವಾಗಿವೆ ಅವುಗಳಲ್ಲಿರುವ ಗುರುಲಿಂಗ ಜಂಗಮಗಳ ತಾರತಮ್ಯ ಭಾವವೂ ಮಹತ್ವವಾದುದಾಗಿದೆ. ಗುರುವು ಈ ಶಿವತತ್ವವನ್ನು ಬೋಧಿಸುವಾತನು. ಭಕ್ತನಾದರೂ ಲಿಂಗಪೂಜಾದಿಗಳಿಂದ ಅದನ್ನು ಆಚರಿಸುವವನು. ಜಂಗಮ ಮೂರ್ತಿಯು ಪರೀಕ್ಷಕನು. ಗುರು ಸರಿಯಾಗಿ ಬೋಧಿಸಿದ್ದಾನೆಯೇ ಇಲ್ಲವೇ ಎಂಬುದನ್ನು, ಭಕ್ತನು ಅದರಂತೆ ಆಚರಿಸುತ್ತಿದ್ದಾನೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವಾತನೇ ಜಂಗಮ ಮೂರ್ತಿ. ಹೀಗೆ ಗುರುವಿನ ಮೇಲೆ ಒಬ್ಬ ಪರೀಕ್ಷಕನಾಗಿರತಕ್ಕ ಜಂಗಮಮೂರ್ತಿಯಿರತಕ್ಕು ಈ ವೀರಶೈವ ಮತದಲ್ಲಿ ಒಂದು ಮಹತ್ವವಾದ ವೈಶಿಷ್ಟ್ಯವು.

ಷಟ್ಸ್ಥಳಗಳಲ್ಲಿಯ ತ್ಯಾಗಾಂಗ, ಭೋಗಾಂಗ, ಯೋಗಾಂಗಗಳೇ ಆತ್ಮಶಕ್ತಿಯನ್ನು ಪ್ರಕಾಶಿಸತಕ್ಕವುಗಳಾಗಿವೆ. ಯೋಗಾಂಗದಲ್ಲಿರುವ ಶರಣನೇ ಲೋಕೋದ್ಧಾರಕನಾಗುತ್ತಾನೆ. ಆತನ ತೇಜಸ್ಸೆಂದರೆ ಈ ವಚನಗಳು.

ಕಾಯಕ ಯೋಗವು ಕೂಡಾ ವೀರಶೈವರಲ್ಲಿ ಒಂದು ಮಹತ್ವವಾದುದು. ಭಗವದ್ಗೀತೆಯಲ್ಲಿರುವ ಕರ್ಮಯೋಗಕ್ಕಿಂತ ಇದು ಹೆಚ್ಚಿನದಾದುದು.

ಶ್ರೀ. ಬಾಗೋಜಿ ಮುರಳಯ್ಯನವರು.

ವೀರಶೈವ ಲಕ್ಷಣವನ್ನು ಕುರಿತು ಶುದ್ಧ ೧೩-೧೪ ಎರಡು ದಿವಸ ಪ್ರವಚನ ಮಾಡಿದರು. ಭಗವದ್ಗೀತೆಯಲ್ಲಿರ ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ|| ಎಂಬ ಉಯಂತೆ ಆಚರಿಸಿ ತೋರಿಸುವವರೇ ವೀರಶೈವರು. ವೀರಶೈವ ತತ್ವಗಳ ಅನೇಕ ಸಂಗತಿಗಳು ಭಗವದ್ಗೀತೆಯಲಿ ಅಪ್ರಸ್ತಾವಾಗಿದ್ದ ಶಿವಶರಣರ ವಚನಗಳಲ್ಲಿ ಅವು ಸ್ಪಷ್ಟವಾಗಿವೆ.

ಶ್ರೀ ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿಯು ವಿವರಿಸಿದಂತೆ ವೀರಶೈವ ಲಕ್ಷಣಗಳು ನಮ್ಮ ಆಚರಣೆಯಲ್ಲಿ ವುದು ಅಗತ್ಯವಾಗಿದೆ.

ಶ್ರೀ. ಹರ್ಡೇಕರ ಮಂಜಪ್ಪನವರು

ಭಕ್ತಿಪಕ್ಷ— ಈ ವಿಷಯವನ್ನು ಕುರಿತು ಶುದ್ಧ ೧೪ ಯ ದಿವಸ ಪ್ರವಚನ ಮಾಡಿದರು. ಇದು ಕೊನೆಯ ದಿವಸವಾದುದರಿಂದ ಹಿಂದಣ ದಿನ ಪ್ರವಚನಕಾರರ ವಿಷಯಗಳ ಮುಖ್ಯಾಂಶಗಳನ್ನು ತಿಳಿಸಿ ಭಕ್ತಿಪಕ್ಷವಿಲ್ಲದವರು ಕಾಗಿ ಕೋಳಿಗಳಿಗಿಂತ ಕ ಯೆಂಬ ಒಸವಣ್ಣನವರ ವಚನದ ಮೇಲಿಂದ ಅವರ ಅವತಾರ ಶಿವಭಕ್ತಿ ಪ್ರಸಾರಣೆಗಾಗಿಯೇ ಆಗಿದ್ದಿತೆಂತಲೂ, ಅದಕ್ಕಾಗಿ ಅವರು ಭಕ್ತಿಪಕ್ಷವನ್ನೆ ಹಿಡಿದಿದ್ದರೆಂತಲೂ, ಹರಳಯ್ಯ ಮಧುವಯ್ಯಗಳ ಶರೀರಸಂಬಂಧವು ಅದಕ್ಕೊಂದು ಮಹತ್ತರವಾದ ದೃಷ್ಟಾಂತವೆಂತಲೂ ಕೊನೆಗೆ ಅದೇ ಅವರ ಅವತಾರ ಸಮಾಪ್ತಿಗೆ ಕಾರಣವಾಯಿತೆಂತಲೂ ಹೇಳಿದರು.

ಈ ಪ್ರವಚನ ನಡೆದಾಗ ಹಾವೇರಿ, ಬೆಳಗಾಂವ, ದಾವಣಗೆರೆ ಮುದ್ದೇಬಿಹಾಳ ಮೊದಲಾದ ಕಡೆಯ ಕೆಲವು ಮಹಾಶಯರು ಶ್ರವಣಕ್ಕಾಗಿ ಬಂದಿದ್ದರು. ಈ ಪ್ರಕಾರ ಎಲ್ಲ ರೀತಿಗಳಿಂದಲೂ ಈ ಪ್ರವಚನ ಮಾಲಾ ಕಾರ್ಯವು ಆ ಬಸವಾದಿ ಪ್ರಮಥರ ಕೃಪೆಯಿಂದ ಜಯಪ್ರದವಾಗಿ ಜರುಗಿತು. **ವ್ಯವಸ್ಥಾಪಕ.**

—ಅಕ್ಕಲಕೋಟ ಸಂಸ್ಥಾನಾಧಿಪತಿಗಳಾದ ಶ್ರೀ ವಿಜಯಸಿಂಹರಾಜೆ ಇವರ ವಿವಾಹವು ಗ್ವಾಲ್ಹೇರದ ರಾಜಕುಮಾರಿ ಶ್ರೀ ಕಮಲಾರಾಜೆ ಇವರೊಡನೆ ೫೫ ನೆಯ ತಾರೀಖಿನ ದಿವಸ ಅಕ್ಕಲಕೋಟದಲ್ಲಿ ನೆರವೇರುವದು.

ಮಹಾತ್ಮಾಜಿಯವರ ಮಹಾಯಾತ್ರೆ.

ತ್ರಾವಣಕೋರ ಸಂಸ್ಥಾನದಲ್ಲಿ ೩೧ ಲಕ್ಷ ಹಿಂದುಗಳಿದ್ದಾರೆ. ಅವರಲ್ಲಿ ೧೦ಕ್ಕೆ ೯ರಂತೆ ಅಂದರೆ ೧೨ ಲಕ್ಷ ಜನರು ಸವರ್ಣೀಯರು. ಉಳಿದವರೆಲ್ಲ ಅವರ್ಣೀಯರು. ಇದರ ಮೇಲಿಂದ ಅಲ್ಲಿಯ ಅಸ್ಪೃಶ್ಯತೆಯ ಭೀಕರ ಸ್ವರೂಪವು ಗೊತ್ತಾಗಬಹುದು. ಆದರೆ ಸಂಸ್ಥಾನಿಕರು ಗಾಂಧೀಜಿಯವರ ಆಗಮನಪೂರ್ವದಲ್ಲಿ ಸಾರ್ವಜನಿಕ ಬೀದಿ, ಕೆರೆ, ಬಾವಿ, ಮತ್ತು ಛತ್ರಗಳನ್ನು ಆದಿಜನರಿಗೆ ತೆರೆದುಕೊಟ್ಟರು. ಗಾಂಧೀಮಹಾತ್ಮಾಜಿಯವರು ತ್ರಿವೇಂದ್ರಮದಲ್ಲಿ ಸಂಸ್ಥಾನಿಕರ ಈ ಕೃತಿಯನ್ನು ಶ್ಲಾಘಿಸಿದಲ್ಲದೆ ಸುಧಾರಕರು ಸಂಸ್ಥಾನದ ಎಲ್ಲ ತರದ ಅಸ್ಪೃಶ್ಯತೆಯು ನಿರ್ಮೂಲವಾಗುವವರೆಗೆ ಹಿಂದೆಗೆಯಬಾರದೆಂದು ಹೇಳಿದರು. ಒಬ್ಬ ಛಪ್ರಿಕಾ ಪ್ರತಿನಿಧಿಯು ಮಹಾತ್ಮಾಜಿಯವರಿಗೆ ಈ ರೀತಿ ಪ್ರಶ್ನೆ ಮಾಡಿದನು— ತ್ರಾವಣಕೋರ ಸಂಸ್ಥಾನದವರು ಒಂದು ಪಂಡಿತ ಮಂಡಲವನ್ನು ಕರೆದು ಅಸ್ಪೃಶ್ಯತೆಯ ವಿಷಯದಲ್ಲಿ ಅವರ ಅಭಿಪ್ರಾಯದ ಮೇರೆಗೆ ನಡೆಯುವುದು ಉಚಿತವಲ್ಲವೇನೆ? ಆದಕ್ಕೆ ಗಾಂಧೀಜಿಯವರು— "ಪಂಡಿತ ಮಂಡಲವು ಜನತೆಗೆ ಮಾರ್ಗದರ್ಶಿಯಾಗಬಹುದು. ಆದರೆ ಸಂಸ್ಥಾನಕ್ಕೆ ಅಗತ್ಯವಾದದ್ದು ಯಾಕಂದರೆ ಭಿನ್ನ ಭಿನ್ನ ಅಭಿಪ್ರಾಯಗಳ ಜನಗಳಿಂದ ಕೂಡಿದ ಸರಕಾರದಲ್ಲಿ ಒಂದೇ ಒಂದು ಅಭಿಪ್ರಾಯದ ಮೇರೆಗೆ ಕಟ್ಟಳೆ ಮಾಡಲಿಕ್ಕೆ ಬರಲಾರದು." ಎಂದು ಹೇಳಿದರು.

ತ್ರಿವೇಂದ್ರಮದಲ್ಲಿ ಮಹಾತ್ಮಾಜಿಯವರಿರುವಾಗ ೧೭ ವರುಷದ ಮೀನಾಕ್ಷಿ ಎಂಬ ಬಾಲಿಕೆಯು ರತ್ನಾಭರಣಗಳನ್ನಿಟ್ಟುಕೊಂಡು ಬಂದಳು. ಅವಳಿಗೆ ಗಾಂಧೀಜಿಯವರು ರತ್ನಾಭರಣಗಳನ್ನು ಕೇಳಲು ಅವಳು ಸರ್ವಸ್ವವನ್ನು ಕೊಡಲು ಸಿದ್ಧಳಾದಳು. ಅದಕ್ಕೆ ಅವರು ವಿಚಾರ ಮಾಡಿಬಾ ಎಂದು, ಕಳುಹಲು ಮರುದಿವಸ ಅವಳು ತನ್ನ ತಂದೆತಾಯಿಗಳೊಡನೆ ಬಂದು, ಒಂದು ಬಂಗಾರದ ಬಳೆಯನ್ನೂ ಮತ್ತು ಒಂದು ಹಾರವನ್ನೂ ಅರ್ಪಿಸಿದಳು. ಅವಳ ರತ್ನಾಭರಣಗಳನ್ನೆಲ್ಲ ಅವಳ ತಂದೆಯು ತನ್ನ ಸಾಲ ತೀರಿಸಲು ತೆಗೆದುಕೊಂಡಿರುವನೆಂದು ಮಹಾತ್ಮಾಜಿಯವರಿಗೆ ತಿಳಿದು ಬಂದಿತು. ಆಗ ಅವರು ಆ ಆಭರಣಗಳನ್ನ ಸೇಠರಿಗೆ ಕೊಟ್ಟು ಸಾಲ ತೀರಿಸಿರೆಂದು ಹೇಳಿದರು. ಮೀನಾಕ್ಷಿಯು ತಾನು ಎಂದೂ ಆಭರಣಗಳನ್ನು ಧರಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿರುವಳೆಂದೂ ಮತ್ತು ಹಾಗೆ ಮಾಡಿದರೆ ಅವಳಿಗೆ ಪತಿಯನ್ನು ದೊರಕಿಸುವದು ಬಹು ಕಠಿಣವಾಗುತ್ತದೆಂದೂ ಅವಳ ತಾಯಿಯು ಹೇಳಲು ಗಾಂಧೀಜಿಯವರು— "ಅಂಜಬೇಡಿರಿ, ಮೀನಾಕ್ಷಿಯನ್ನು ಲಗ್ನಮಾಡಿಕೊಳ್ಳುವ ೫೦ ಜನ ವರರನ್ನು ನಾನು ತರುತ್ತೇನೆ. ಅವರಲ್ಲಿ ಬೇಕಾದವನನ್ನು ನೀವು ಆರಿಸಿಕೊಳ್ಳಬಹುದು." ಎಂದು ಹೇಳಿದರು.

ತ್ರಿವೇಂದ್ರಮದಿಂದ ನಗರಕೋಯಿಲಕ್ಕೆ ಹೋದರು. ಅಲ್ಲಿ ಬಹು ದೊಡ್ಡ ಸಭೆಯಾಯಿತು. ಮುಂದೆ ಮಹಾತ್ಮಾಜಿಯವರು ಕನ್ಯಾಕುಮಾರಿಗೆ ಹೋಗಲು ಅಲ್ಲಿಯೇ ಬಾಬು ರಾಜೇಂದ್ರ ಪ್ರಸಾದರವರಿಂದ ಬಿಹಾರದ ಭೂಕಂಪದ ಕಂತಿಯು ಬಂದಿತು. ಇದು ಗಾಂಧೀಜಿಯವರ ಹೃದಯಕ್ಕೆ ಬಲವಾದ ಆಘಾತವನ್ನುಂಟುಮಾಡಿತು. "ನಾನು ಮಾತನಾಡುತ್ತಿದ್ದರೂ ನಗುತ್ತಿದ್ದರೂ ೨೪ ತಾಸುಗಳವರೆಗೂ ಬಿಹಾರದ ವಿಷಯವನ್ನೇ ಚಿಂತಿಸುತ್ತಿರುವೆನು." ಎಂದು ಉಸುರ್ಗರೆಯುತ್ತಿರುತ್ತಾರೆ. ಪ್ರತಿಯೊಂದು ಸಭೆಯಲ್ಲಿಯೂ ಅವರು ಬಿಹಾರದ ಸುದ್ದಿಯನ್ನೇ ಹೇಳುತ್ತಾರೆ.

ತುತಿಕೋರಿನದಲ್ಲಿ ಮಹಾತ್ಮಾಜಿಯವರು—"ಈ ದೈವಿಕ ಆಪತ್ತಿಯೂ ನಮಗೇನು ಕಲಿಸುತ್ತದೆ? ಮನುಷ್ಯ ಮಾತ್ರನೆಲ್ಲ ಒಂದು, ಆದುದರಿಂದಲೇ ಸರಕಾರದವರೂ, ರಾಷ್ಟ್ರೀಯ ಪಂಗಡದವರೂ ಈ ಕಾರ್ಯದಲ್ಲಿ ಒಂದಾಗಿದ್ದಾರೆ. ಇದರಿಂದ ಮನುಷ್ಯ ಜೀವನವು ದೀಪದ ಹುಳಕ್ಕಿಂತಲೂ ಕ್ಷಣಿಕವೆಂಬುದನ್ನು ನಾವು ತಿಳಿಯಬೇಕು," ಮದುರೆಯಲ್ಲಿಯೂ ಭಾಷಣ ಮಾಡುವಾಗ್ಗೆ—"ಈ ಆಪತ್ತಿಯು ನಮ್ಮ ಪಾಪದಿಂದಲೇ ಬಂದಿದೆ. ನಾವು ಅಸ್ಪೃಶ್ಯತೆಯ ಪಾಪವನ್ನಾಚರಿಸಿದುದರಿಂದಲೇ ಈ ದುಃಖವನ್ನು ಅನುಭವಿಸಬೇಕಾಗಿದೆ" ಎಂದು ಹೇಳಿದರು.

ವಿದ್ವಾನ್ ನಾಗೇಶ ಶಾಸ್ತ್ರಿಗಳವರ ಮಹತ್ವದ ವ್ಯಾಖ್ಯಾನ.

ಧಾರವಾಡದ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಪ್ರಾರಂಭವಾದ ಶ್ರೀ. ಬಸವಾದಿ ಪ್ರಮಥರ ವಚನ ಪ್ರವಚನ ಮಾಲೆಯಲ್ಲಿ ಒಂದು ಪುಷ್ಪವನ್ನು ಪೋಣಿಸಲು ಬಳ್ಳಾರಿಯಿಂದ ವಿದ್ವಾನ್ ವೈ. ನಾಗೇಶ ಶಾಸ್ತ್ರಿಗಳವರು ಬಂದಿದ್ದರು. ಇಲ್ಲಿಯ ಲಿಂಗಾಯತ ನಗರ ಭವನದಲ್ಲಿ ತಾ. ೨೮ನೆಯ ರವಿವಾರ ನಾಯಂಕಾಲ ಇವರ ವ್ಯಾಖ್ಯಾನವಾಯಿತು. ಹಿಂದು ಧರ್ಮದಲ್ಲಿ ವೀರಶೈವರ ಸ್ಥಾನವಾವುದೆಂಬುದೇ ಇವರ ವಿಷಯವಾಗಿದ್ದಿತು. ಈ ವಿದ್ವಾನ್ ವ್ಯಾಖ್ಯಾತರು ತಮ್ಮ ಈ ಭಾಷಣದಲ್ಲಿ ಅನೇಕ ಮಹತ್ವದ ಸಂಗತಿಗಳನ್ನು ಪ್ರತಿಪಾದಿಸಿದರು. ಅವುಗಳ ಮುಖ್ಯಾಂಶ ಈ ಪ್ರಕಾರ ಇತ್ತು.

"ಹಿಂದುಸ್ಥಾನದಲ್ಲಿ ಹುಟ್ಟಿರತಕ್ಕ ಎಲ್ಲ ಮತಪಂಥಗಳೂ ಹಿಂದು ಧರ್ಮದಲ್ಲಿಯೇ ಸೇರಿದವುಗಳಾಗಿವೆ. ಜೈನ, ಬೌದ್ಧ, ಶೀಖ ಮೊದಲಾದ ಮತಪಂಥಗಳು ಹಿಂದು ಧರ್ಮದಿಂದ ಭಿನ್ನವಾದವುಗಳಲ್ಲ. ಆದರಲ್ಲಿಯ ಬೇರೆ ಬೇರೆ ಅಂಗಗಳು. ಈಗಿನ ಹಿಂದು ಧರ್ಮವು ಪ್ರಾಚೀನ ದ್ರಾವಿಡ ಮತ್ತು ಆರ್ಯ ಜನಗಳ ಧರ್ಮಗಳಿಂದ ಕೂಡಿದ್ದಾಗಿದೆ ಭಕ್ತಿಮಾರ್ಗವು ದ್ರಾವಿಡ ಜನರಿಂದಲೇ ಉಂಟಾದುದು. ವರ್ಣಾಶ್ರಮಗಳು ಆರ್ಯ ಜನರ ವಿಶೇಷಗಳು. ಇವು ದ್ರಾವಿಡರಿಗೆ ಒಪ್ಪಿಗೆಯಿರಲಿಲ್ಲ. ವೀರಶೈವ ಮತವು ಇವುಗಳನ್ನು ನಿರಾಕರಿಸಿದೆ.

ಈಗಿನ ಕಾಲದಲ್ಲಿಯು ಕೂಡಾ ಆ ವರ್ಣಗಳ ಅಪ್ರಯೋಜನವು ಗೊತ್ತಾಗಿದೆ. ಇದನ್ನು ವೀರಶೈವರು ಪ್ರಾಚೀನ ಕಾಲದಲ್ಲಿಯೇ ಆರಿತಿದ್ದರು. ಈಗ ಸ್ವರಾಜ್ಯವನ್ನು ಯಾವ ವರ್ಣದವರು ಕೇಳುವುದಿಲ್ಲ? ಬ್ರಾಹ್ಮಣರೂ ರಾಜ್ಯವಾಳಲು ಸಿದ್ಧರಾಗಿಲ್ಲವೆ? ಎಂದಮೇಲೆ ಕ್ಷತ್ರಿಯ ವರ್ಣದ ಕರ್ತವ್ಯವು ಅನ್ಯ ವರ್ಣದವರಿಗೆ ಹೇಗೆ ಲಭಿಸಿತು? ವರ್ಣಗಳ ಕಟ್ಟು ಜನಾಂಗದ ಶ್ರೇಯಸ್ಸಿಗೆ ಪ್ರತಿಬಂಧಕವಾದುದೆಂದು ವೀರಶೈವರು ಮೊದಲೇ ನಿರ್ಧರಿಸಿದ್ದಾರೆ.

ವೇದಕಾಲದಿಂದಲೂ ಒಂದು ಧರ್ಮದವರನ್ನು ಇನ್ನೊಂದು ಧರ್ಮದಲ್ಲಿ ತೆಗೆದುಕೊಳ್ಳುವ ರೂಢಿಯಿದೆ. ದ್ರಾವಿಡರನ್ನು ಆರ್ಯರನ್ನಾಗಿ ಮಾಡುವ ರೀತಿಗಳು ವೇದಗಳಲ್ಲಿವೆ ಮುಸಲ್ಮಾನರನ್ನು ಕೂಡಾ ಸ್ವಧರ್ಮದಲ್ಲಿ ತೆಗೆದುಕೊಳ್ಳಲು ದೇವಲಸ್ಮೃತಿಯುಂಟಾಗಿದೆ. ಈ ಪದ್ಧತಿಯು ಕೂಡಾ ವೀರಶೈವರಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಇದೆ. ಈ ಸಾಮಾಜಿಕ ಸಂಗತಿಗಳಲ್ಲದೆ ತತ್ವ ಜ್ಞಾನದಿಂದಲೂ ಈ ಮತವು ಅನ್ಯ ಮತಗಳಿಗಿಂತ ಎಷ್ಟೋ ಉತ್ತಮವಾದುದಾಗಿದೆ.

ಓರ್ವ ಪ್ರವಾಸಿ.

ನನ್ನ ಸಮಾಜ ಸ್ಥಿತಿಯ ವಿವರಣೆ.

(ಲೇಖಕರು:— ಎನ್. ಬಿ ಬುಲ್ಲಿ ಡೆಕ್ಕನ್ ಫಾರ್ಮಸಿ ಸಾಂಗಲಿ.)

ನನ್ನ ಸಮಾಜದಲ್ಲಿ ಮಠಪತಿ, ಹಿರೇಮಠಸ್ಥ, ಚರಮೂರ್ತಿ, ಪಟ್ಟಚರಮೂರ್ತಿ ಮತ್ತು ನಿರಕ್ತರು ಹೀಗೆ ಈ ಜನರಿಂದಲೇ ಧಾರ್ಮಿಕ ವಿಧಿಗಳಾಗಬೇಕಾಗುತ್ತವಸ್ಟೆ. ಈ ಜನರಲ್ಲಿ ಒಂದೊಂದು ಪಂಗಡಗಳೇ ಆಗಿವೆ ಹೀಗಿರುವಾಗ ಊರೊಳಗಿನ ದಿನವಹ ಗುರು ಬೇರೆ, ವರ್ಷಕ್ಕೊಮ್ಮೆ ವರ್ಷಾಶನ ತಕ್ಕೊಂಡು ಹೋಗುವ ಗುರು ಬೇರೆ. ಮತ್ತು ಗಂಡು-ಹೆಣ್ಣು ವರಿಸಕ್ಕೊಮ್ಮೆ ಪಡ್ಡಲಿಕ್ಕೆ, ಛತ್ರ, ಚಾಮರ, ಪಂಚಕಳಸ ಮುಂತಾದ ಬಿರುದಾವಳಿ ಪಲ್ಲಕಿಂದ ಬರುವ ಜಗದ್ಗುರುಗಳು ಬೇರೆ ಏನಿಲ್ಲೆಂದರೂ ನನ್ನ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೆ ಎಂಟರಿಂದ ಹತ್ತಾಗೆ ಗುರುಗಳು, ಇಂಡತರೈವರು ಪತ್ರಿಗಳೋ ಹಾಗೆ ಇತ್ತ್ಯಾದಿ ಗುರುಗಳಿರುವರು ಬೇರೆ ಸಮಾಜದಲ್ಲಿ ಇಷ್ಟು ಗುರುಗಳಿಲ್ಲವಾದರೂ ಇವರ ದಿನ ಎನೇ ಅವರ ಹೆಜ್ಜೆಗಳು ಜಗತ್ತಿನ ಪರಿಸ್ಥಿತಿಗನುಸಾರ ಸಮಂಜಸವೇ ಬೀಳುತ್ತಿರುವವು. ಆವರೆ ನನ್ನ ಸಮಾಜದಲ್ಲಿ ಎಷ್ಟು ಗುರುಗಳಿದ್ದಾರೆಲಿಕ್ಕಾಗಿ ಇವರ ಹೆಜ್ಜೆಯು ಇನ್ನೂ ಹಿಂದೆ ಏಕೆ? ಇವರ ಕಾರಣವನ್ನ ಯಾರಾದರೂ ಹೇಳಹತ್ತಿದರೆ ಎಂಥವ ಕೇಳಹತ್ತಿದರೆ "ಛೇ, ಛೇ. ಹೀಗೆ ಮಾತನಾಡಬಾರದಪ್ಪ; ನಮ್ಮ ಪೂಜ್ಯ ಆರು ತಲೆಯಿಂದ ಹೀಗೆ ಪಡೆಯುತ್ತ ಬಂದಿರುವದು" ಎಂದು ಬೆದರಿಸಿ ಬಿಡುವರು. ಮತ್ತೇನಾದರೂ ಸಂತಯ ಯುಕ್ತ ಪ್ರಶ್ನೆಗಳನ್ನು ಕೇಳಿದರೆ, ಯಾರಿಗೆ ಕೇಳಬೇಕೆಂಬ ಪ್ರಶ್ನೆಯೇ ಮುಂದೆ ಬರುವದು ಯಾಕಂದರೆ ಹುಟ್ಟಿದ ಕ್ಷಣವೇ ಲಿಂಗವನ್ನು ಕಟ್ಟುವ ಮತ್ತು ಪೂಜೆಯ ಹೊಗಿಯುವ ಮಠಪತಿಗಳೇ ಯಾವಾಗಲೂ ಊರಲ್ಲಿರುವರು. ಇವರನ್ನು ವಿಚಾರಿಸಬೇಕೆಂದರೆ, ಅವರಲ್ಲಿ ಎವೆ ಶೇಕಡರೆ ಒಂದು ಅಕ್ಷರ ಸಹ ಹೊರಡುವದಿಲ್ಲ. ಏನೋ ಒಂದು ಹೊಟ್ಟೆ ತಂಬಿಕೊಳ್ಳುವ ಸಾಧನೆಯೆಂದು ಅವರು ಈ ಕಾರ್ಯಗಳನ್ನು ಮಾಡುವರು ಹೊರತು ಧಾರ್ಮಿಕ ವಿಧಿಯಂತಲ್ಲ. ಇವರಂತಯೇ ಹಿರೇಮಠಸ್ಥರು ಹಾಡು. ಆ ಮೇಲೆ ಪಟ್ಟಚರಮೂರ್ತಿಗಳು. ಇವರಂತೂ ವರ್ಷಕ್ಕೊಮ್ಮೆ ಬರುವವರು; ಒಂದೆರಡು ದಿವಸ ನಿಂತು, ತಮ್ಮ ಶಿಷ್ಯರಲ್ಲಿ ಯಾವನಾದರೊಬ್ಬನ ಲಗ್ನ ಕಾರ್ಯವಾಗುವವಿದ್ದರೆ, ಹೆಣ್ಣು ಗಂಡಿನ ಸಾಲು ಮಾತುಗಳನ್ನಾಡಿ ತಮ್ಮ ವರ್ಷಾಶನ ಕೂಡಹಾಕುವದರಲ್ಲಿ ನೇಳೆ ಹೇಗೆ ಶಿಗಬೇಕು? ವರ್ಷಾಶನ ಶಿಗುವ ದೊಂದೇ ತಡ ಮುಂದಿನ ಊರು ದಾರಿ ಹಿಡಿದರೇ. ಇವರಲ್ಲಾದರೂ ಎಲ್ಲರೂ ಶಾಸ್ತ್ರ ಬಲ್ಲವರಿರುವರೆಂದು ಹೇಳಲಿಕ್ಕೆ ಬರುವದಿಲ್ಲ. ಇನ್ನುಳಿದವರು ಯಾರಿಂದರೆ, ಬಸವನ ಅನುಯಾಯಿಗೆಂದು ಅನ್ನಿಸಿಕೊಳ್ಳುವ ನಿರಕ್ತರು ಇವರ ವೈಭವವನ್ನು ಕೇಳುವದೇನಿದೆ? ಈ ಎಲ್ಲ ವೈಭವಕ್ಕೆ ನನ್ನ ಸಮಾಜದ ಬಂಧುಗಳೇ ಕಾರಣರು. ಜಗತ್ತಿಗೆ ವಂದ್ಯರೆನ್ನಿಸಿಕೊಂಡ ಸ್ವಾಮಿ ವಿವೇಕಾನಂದರ ಎದು ಏಕೆ ನಮ್ಮಲ್ಲಿಯ ಮಹಾ ಮಹಾ ಶಿವಯೋಗಿಗಳ ಜ್ಯೋತಿಯ ಎತ್ತ, ಮತ್ತು ಈಗಿನ ನಡೆನುಡಿ ಎತ್ತ? ಇಂಥವರು ಸಮಾಜದ ಮಾರ್ಗದರ್ಶಿಗಳಾಗುವ ಬಗೆ ಹೇಗೆ? ತಮ್ಮ ಸ್ಥಾನದ ಹಿರಿವು ತಮಗಿಲ್ಲದವರು ಸಮಾಜಕ್ಕೆನು ಪಾಠಕಲಿಸುವರು? ಇವರಿಗೆ ಯಾವಾಗಲೂ, ಸಂಪತ್ತಿಗಾಗಿ ಹೆಣ್ಣನ್ನು ಹ್ಯಾಗೆ ಬೆಳೆದೀತು? ಹೆಚ್ಚಿಗೆ ಉಪ್ಪನ್ನು ಹಳ್ಳ ಗುರಿದ ಅಧಿಕಾರವು ಹ್ಯಾಗೆ ಶಿಕ್ಕೀತು? ಅಡ್ಡ ಬೆಳ್ಳಕ್ಕಿಯಲ್ಲಿ ಒಮ್ಮೆ ಯಾವಾಗ್ಗೆ ವೇರವಣಿಗೆ ಹೊರಟೀತು? ಎಂಬ ವಿಷಯದ ಕಡೆಗೇ ಲಕ್ಷ ಬಹಳ ದಕ್ಷಿಣೆ ಮುಂತಾದವುಗಳಿಂದ ಕೂಡಿ ಹುಕಿಟ್ಟ ಹಣವನ್ನು ಸಾಲಕೊಡುವದಲ್ಲದೆ, ತಮ್ಮ ಪವಿತ್ರವಾದ ಸ್ಥಾನಕ್ಕೆ ಲಾಂಛನಾಸ್ಪದವಾದ ಕೃತಿಯನ್ನಾಚರಿಸಿದವರೂ ಇರುವರು. ಇಂಥವರು ನನ್ನ ಸಮಾಜದ ಗುರುಗಳು.

ವಿರಕ್ತರು ನಾವು ಹೆಚ್ಚೆನ್ನುವರು, ಗುರುವರ್ಗದವರು ನಾವು ಹೆಚ್ಚೆನ್ನುವರು. ಇದರ ನಿರ್ಣಯವಾಗುವ ಬಗೆಯಾದರೂ ಹೇಗೆ? ಪಂಚಾಚಾರ್ಯರೆನ್ನಿಸಿಕೊಳ್ಳುವ ನಾವು ಐವರು ಜಗದ್ಗುರುಗಳೇ ವೀರಶೈವರ ಗುರುಗಳೆಂದು, ಬಾಯಿಗೆ ಬಂದಂತೆ ಆ ಬಸವನನ್ನು ಅವನ ಅನುಯಾಯಿಗಳನ್ನು ಹಳಿಯುವರು. ಮಿತಿಮೀರಿ ಉಪ್ಪನ್ನೆ ವಿರುವುದರಿಂದ ಅಲ್ಲಲ್ಲಿ ವರ್ತಮಾನ ಪತ್ರಗಳನ್ನು ತೆಗೆದು ಅದರ ದ್ವಾರಾ ಜನರಿಗೆ ಬಸವನ ತತ್ವಾದ ವಿರುದ್ಧ ಬೋಧಿಸುವರು. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಸಂಸ್ಕೃತ ಅಭ್ಯಾಸ ಮಾಡಿದ ಶಾಸ್ತ್ರಿಗಳನ್ನು ಬಸವ ನಿಂದೆಗೆ ನಿಯಮಿಸಿರುವರು. ಈ ಹೊತ್ತಿನವರೆಗೂ ಈ ನಿಂದೆಗೆ ಖರ್ಚು ಮಾಡಿದ ವೇಳೆಯನ್ನು ಮತ್ತು ಹಣವನ್ನೂ, ಸಮಾಜ ಕಾರ್ಯಕ್ಕೆ ಮಾಡಿದ್ದರೆ, ಈ ಹೊತ್ತಿಗೆ ಒಂದು ಮಾದರಿಯ ಸಮಾಜವಾಗುತ್ತಿತ್ತು.

ವಿರಕ್ತರಲ್ಲಾದರೂ ಮುರಿಗಿ, ಕುಮಾರ ಎಂದು ಎರಡು ಪಂಗಡಗಳಿರುವವು. ಮೇಲೆ ಮೇಲೆ ತೋರಲಿಕ್ಕೆ ಇವರಿಬ್ಬರು ಒಂದೇ ಎನ್ನಿಸಿದರೂ, ಒಳಗಿಂದೊಳಗೆ ಒಬ್ಬರಿಗೊಬ್ಬರ ದ್ವೇಷಾಸೂಯೆಗಳು ನಡದೇ ಇರುವವು.

ಭಕ್ತ ವರ್ಗದಿಂದಲೇ ಧನತೆಗೇರಿದ ಸರ್ವಜನಿಕ ಸಂಸ್ಥೆಗಳು ನಿಸಿದ ಪದಗಳು, ಈಗ ವ್ಯಕ್ತಿಗೆ ಸಂಬಂಧಪಟ್ಟವೆ. ಯಾವದಾದರೊಂದು ಮಠಕ್ಕೆ ಮಠಾಧಿಕಾರಿಯನ್ನು ನಿಯಮಿಸಬೇಕಾದರೆ ಭಕ್ತರನ್ನು ಲೆಕ್ಕಿಸದೆ, ತಮ್ಮ ಆಪಕ್ತದಲ್ಲಿದ್ದವನನ್ನಾಗಲಿ ಅಥವಾ ತಮ್ಮ ಅಸ್ಪೇಷ್ಟರಲ್ಲಿಯ ಯಾರನ್ನಾದರೂ ನಿಯಮಿಸುವರು. ಭಕ್ತರಲ್ಲಿ ಯಾವನಾದರೊಬ್ಬ ವ್ಯಕ್ತಿಯು— ಸ್ವಾಮಿಗಳೇ ಈ ಆಶ್ರಮಕ್ಕೆ ಯೋಗ್ಯರಾದ ಮತ್ತು ಸಮಾಜಕ್ಕೆ ಮಾರ್ಗದರ್ಶಿಗಳಾದ ಸ್ವಾಮಿಗಳನ್ನು ನಿಯಮಿಸಿದರೆ ಒಳಿತೆಂದು ಯಕಿ ಹೋದರೆ, ತೀರೇ ಹೋಯಿತು. ನಮ್ಮ ಮಠ, ನಮ್ಮ ಮಾತು. ನಮ್ಮ ಮನಸ್ಸಿಗೆ ಬಂದವನನ್ನು ಅಧಿಕಾರಿಗಳನ್ನಾಗಿ ಆರಿಸುವೆವು. ನಿನಗ ಕೇಳುವ ಅಧಿಕಾರವೇನು? ಈ ಯಾವವೇ ಉಸಾಬರಿ ಮಾಡದೆ ಸುಮ್ಮನೆ ಬರುವದಿದ್ದರೆ ನಮ್ಮ ಮಠಕ್ಕೆ ಬರಬೇಕೆಂದು ಕಣ್ಣು ಕೆಂಪಗೆ ಮಾಡಿ ಹೇಳುತ್ತಿರುವರು ಧಿಕ್ಕಾರ! ಧಿಕ್ಕಾರ! ಈ ಭಿಕ್ಷುಕ ಶಾಹಿಗೆ. ನಮ್ಮ ಸಮಾಜದಲ್ಲಿಯ ಮತ್ತು ಹಿಂದುಸ್ಥಾನದಲ್ಲಿಯ ಇಂಥ ಭಿಕ್ಷುಕ ಶಾಹಿಯು ಎಂದು ನಷ್ಟವಾಗುವದೋ ಅಂದೇ ಸುದಿನವು.

ಆದ್ದರಿಂದ ನನ್ನ ಸಮಾಜದ ಸಹೃದಯಿಗಳೇ, ಇನ್ನೂ ಎಷ್ಟು ದಿವಸಗಳವರೆಗೆ ಈ ತೆರ ಬಾಳ್ವೆ ಮಾಡುವಿರಿ? ಈ ೨೦ನೇ ಶತಮಾನದಲ್ಲಿ ಇಡೀ ಜಗತ್ತೇ ಬೇರೆ ಬೇರೆ ಉಚ್ಚ ಸ್ಥಿತಿಗೆ ಮುಟ್ಟುತ್ತಿರುವಾಗ್ಗೆ, ನಾವು ಮಾತ್ರ ಯಾವದೇ ತರದ ಸಾಹಸ ಮಾಡದೇ ನಮಗೆ ಯಾಕೆ ಬೇಕಪ್ಪ ಊರು ಉಸಾಬರಿ, ಇದ್ದದ್ದು ಇರಲಿ

—(೧೩ ನೆಯ ಪುಟಕ್ಕೆ ಮುಂದರಿದಿದೆ.)—

ಕನ್ನಡ ನುಡಿಯ ಮೇಲೆ ದಾಯಾದಿಗಳ ಮತ್ಸರ.

ಕಳೆದ ಕೆಲವು ವರುಷಗಳಿಂದ ನಮ್ಮ ಕನ್ನಡ ನಾಡಿನಲ್ಲಿ ತಾಯಿನಾಡಿನ ವಿಷಯವಾಗಿಯೂ ತಾಯಿನುಡಿಯ ವಿಷಯವಾಗಿಯೂ ಎಳಮುಖವಾದ ಚಟುವಟಿಕೆಯುಂಟಾಗಿದೆಯಷ್ಟೆ. ಇದನ್ನು ಕಂಡು ಸಹಿಸಲಾರದ ದಾಯಾದಿಗಳು, ಮರಾಟಿಗರು ಮತ್ತು ತೆಲುಗರು, ಕನ್ನಡ ಸೀಮೆಯನ್ನು ಪಹರಿಸಲು ಅನೇಕ ಹೊಂಚು ಹಾಕುತ್ತಿರುವರು. ಕರ್ನಾಟಕ ಪ್ರಾಂತವು ಬಹು ಪ್ರಾಚೀನ ಕಾಲದಿಂದಲೂ ಹಿಂದು ದೇಶದಲ್ಲಿ ತನ್ನ ಸಂಸ್ಕೃತಿ ವೈಶಿಷ್ಟ್ಯದಿಂದ ಮೆರೆಯುತ್ತಿರುವಾಗ, ಕನ್ನಡ ನುಡಿಯು ಉಳಿದ ಭಾಷೆಗಳಿಗಿಂತಲೂ ಮೊದಲೆ ತನ್ನ ಅಸ್ತಿತ್ವವನ್ನು ಪಡೆದುಕೊಂಡಿರುವಾಗ ಮತ್ತು ಸದ್ಯದ ಕಾಲದಲ್ಲಿ ರಾಷ್ಟ್ರ ಸಭೆಯವರು ಸಹ ಕರ್ನಾಟಕ ಸ್ವತಂತ್ರ ಪ್ರಾಂತವನ್ನು ಮನ್ನಿಸಿರುವಾಗ ಈ ನಮ್ಮ ದಾಯಾದಿಗಳು ನಾವು ಅಜ್ಞಾನಾವಸ್ಥೆಯಲ್ಲಿರುವ ಸಮಯವನ್ನೇ ಸಾಧಿಸಿ ತಮ್ಮ ಒಳ ಹಂಚಿಕೆಗಳಿಂದ ನಮಗಾಗುವ ಪರ್ವತಪ್ರಾಯವಾದ ಹಾನಿಯನ್ನು ಗಣನೆಗೆ ತಾರದೆ ತಮಗಾಗಬೇಕಾಗಿರುವ ಅಲ್ಪ ಲಾಭಕ್ಕಾಗಿ ಹೋರಾಡುತ್ತಿರುವರಲ್ಲ! ಅನೇಕ ಪ್ರಸಂಗಗಳಲ್ಲಿ ಹಿಂದು ಸಂಸ್ಕೃತಿಯನ್ನು, ಹಿಂದು ಧರ್ಮವನ್ನು ರಕ್ಷಿಸಿದಂಥ ಈ ಪ್ರಾಂತವು ಹಿಂದುಸ್ಥಾನದ ನಕಾಶದಿಂದ ಅಳಿಸಿಹೋದರೆ ಮತ್ತು ಈ ಭಾಷೆಯು ಉಳಿದ ಭಾಷೆಗಳಲ್ಲಿ ಇಂಗಿ ಹೋದರೆ ಇವರಿಗೆ ಹಾಲು ಕುಡಿದಷ್ಟು ಹಿಗ್ಗಾಗಬಹುದಲ್ಲವೆ?

ಯಾಕಂದರೆ ಒಂದು ಭಾಷೆಯ ಮೇಲೆ ಮತ್ತೊಂದು ಭಾಷೆಯ ಆಕ್ರಮಣವಾಗುವುದೆಂದರೆ ಒಂದಾನೊಂದು ರಾಜ್ಯವು ನಾಶವಾಗುವದಕ್ಕಿಂತಲೂ ಹೆಚ್ಚು ಹಾನಿಕರವೆಂದು ಹೇಳಬಹುದು. ಭಾಷೆಯಿಲ್ಲದಿದ್ದರೆ ಸಾಹಿತ್ಯವಿಲ್ಲ. ಸಾಹಿತ್ಯವಿಲ್ಲದೆ ಸಂಸ್ಕೃತಿಯಿಲ್ಲ. ಸಂಸ್ಕೃತಿಯಿಲ್ಲದಿದ್ದರೆ ಉದ್ಧಾರವಿಲ್ಲ. ಆದುದರಿಂದ ಜನಾಂಗದ ಉದ್ಧಾರವಾಗಬೇಕಾದರೆ ಪರಸ್ಪರಾನುಬಂಧಿಗಳಾದ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಬೇಕೇ ಬೇಕು. ಭಾಷೆಯೇ ಉದ್ಧಾರದ ತಳಹದಿಯು. ಯಾವ ಪ್ರದೇಶದಲ್ಲಿ ತಾಯಿನುಡಿಯು ಕೀಳು ಸ್ಥಿತಿಯಲ್ಲಿರುವುದೋ ಆ ಪ್ರದೇಶದಲ್ಲಿಯ ಜನ ಜೀವನವೂ ಕೀಳು ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. ಭಾಷೆಯ ಉದ್ಧಾರವಾಗದೆ ಸುಧಾರಣೆಯಾಗುವುದು ದುಷ್ಕರವಾಗಿದೆ.

ಈ ಪ್ರಕಾರವಾಗಿ ತಮ್ಮ ಸುಧಾರಣೆಯ ಮಾರ್ಗವನ್ನು ಕಂಡುಕೊಂಡವರಾದ ಕನ್ನಡಿಗರು ಬೆಳಗಾವಿಯಲ್ಲಿ ಸಂಯುಕ್ತ ಕರ್ನಾಟಕ ಛೇರಿಯನ್ನು ಬಾರಿಸಲು ಅಲ್ಲಲ್ಲಿ ನಿದ್ರಿ ಹೋದ ಕನ್ನಡಿಗರು ಎಚ್ಚತ್ತು ತಾಯಿನಾಡು ತಾಯಿನುಡಿಯ ಪೋಷಣೆಗಾಗಿ ಟೊಂಕಾಕಟ್ಟಿದರು. ಹರಿದು ಹಂಚಿಹೋದ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಕರ್ನಾಟಕ ಏಕೀಕರಣದ ಏಕಮಾತ್ರ ನಿನಾದವು ಕೇಳಬರಹತ್ತಿತು. ಅದರ ಅಬ್ಬರದಿಂದ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು, ಬೆಳಗಾವಿ ಜಿಲ್ಲೆಯು ತಮ್ಮ ಕೈ ಬಿಟ್ಟ ತೆಂದು ಮರಾಟಿಗರು ನಿರಾಶೆ ಪಡಬೇಕಾಯಿತು.

ಕರ್ನಾಟಕ ಜಾಗೃತಿಯನ್ನು ಕಣ್ಣಾರೆ ಕಂಡೂ ಕಂಡೂ ಮರಾಟಿಗರು ತಮ್ಮ ತುಂಟ ಚೇಷ್ಟೆಯನ್ನು ಬಿಡಲೊಲ್ಲರು ಕನ್ನಡ ಭಾಷೆಯ ಮೇಲೆ ಮತ್ಸರ, ಕರ್ನಾಟಕ ಮಂತ್ರಿಗಳ ನೆಂಟನ ತ್ಸ ಮೊನ್ನೆ ತಾನೆ ಮುಂಬಯಿ ವಿಶ್ವವಿದ್ಯಾಲಯದ ಸೀನೇಟ್ ಸಭೆಯು ಕೂಡಿದಾಗ್ಗೆ ಸಾಂಗಲಿ ವಿಲಿಂಗ್ಡನ್ ಕಾಲೇಜಿನಲ್ಲಿ ಕನ್ನಡ ಆನರ್ಸ ತೆಗೆದುಕೊಳ್ಳುವ ಬಿ. ಎ ವಿದ್ಯಾರ್ಥಿಗಳಿಗೆ ಕಲಿಸಲು ಪ್ರತ್ಯೇಕವಾಗಿ ಒಬ್ಬ ಕನ್ನಡ ಮಹೋಪಾಧ್ಯಾಯರನ್ನು ನಿಯಮಿಸುವಂಬ ಗೊತ್ತುವಳಿಯನ್ನು ಶ್ರೀ. ಡಿ. ಜಿ ದಶವಿಯವರು ಮಂಡಿಸಲು, ವಾದಕ್ಕೆ ಪ್ರಾರಂಭವಾಯಿತು ಅನೇಕತರದ ಸೂಚನೆಗಳೂ ಅಡ್ಡಿಗಳೂ ಮುಂದೆ ಮಾಡಲ್ಪಡಹತ್ತಿದವು. ಕನ್ನಡ ಭಾಷೆಗೆ ಉತ್ತೇಜನ ಕೊಡುವದೆಂದರೆ ಈ ಮರಾಟಿಗರಿಗೆ ಬಹು ತಳವಳ ಕಾರಣವಿತ್ತು, ಅನಾಯಾಸವಾಗಿ ದೊರೆತಿದ್ದ ಬೇಟೆಯು ಮಾರಾಗಿ ಹೋಯಿತಲ್ಲ!

ಇನ್ನು ತೆಲುಗರ ಸಮಾಚಾರವನ್ನು ತೆಗೆದುಕೊಳ್ಳುವ. ಮದ್ರಾಸ್ ಪ್ರಾಂತದಲ್ಲಿ ಬಳ್ಳಾರಿಯು ಪೂರ್ಣ ಕನ್ನಡ ಜಿಲ್ಲೆಯಾಗಿದ್ದರೂ ಅದನ್ನು ಆಪಹರಿಸಬೇಕೆಂದು ಆಂಧ್ರ ವಿಶ್ವ ವಿದ್ಯಾಲಯದವರ ನುಹತ್ವಾಕಾಂಕ್ಷೆ. ಅನಂತಪುರ ಜಿಲ್ಲೆಯ ಬಹು ಭಾಗದಲ್ಲಿ ಕನ್ನಡ ನುಡಿಯೇ ನಡೆಯುತ್ತಿದ್ದರೂ ಯಾವದೇ ವಿಧದಿಂದ ಅನಂತಪುರ ಕಾಲೇಜನ್ನು ತಮ್ಮ ವಿಶ್ವವಿದ್ಯಾಲಯ ಕ್ಕೆ ಸೇರಿಸಿಕೊಳ್ಳಬೇಕೆಂಬ ಹಂಬಲ ಇವರಿಗೆ. ಕನ್ನಡ ಜಿಲ್ಲೆಯು ಆಂಧ್ರ ವಿಶ್ವವಿದ್ಯಾಲಯಕ್ಕೆ ಜೋಡಿಸಲ್ಪಟ್ಟರೆ ಅಲ್ಲಿಯ ಕನ್ನಡ ಭಾಷೆಯು ನಾಮಶೇಷವಾಗುವುದೆಂಬುದರ ಅರಿವು ಇವರಿಗೆಲ್ಲಿಂದ ಬಂದೀತು!

ಅನಂತಪುರ ಹಾಯಸ್ಕೂಲು ಕೇವಲ ಕನ್ನಡಿಗರಾದ ಶ್ರೀ ಭೋಗಶೆಟ್ಟಿ ಬಸಪ್ಪನವರ ಪ್ರೋತ್ಸಾಹದಿಂದ ಗವಿಮಠದ ಶ್ರೀ ಚನ್ನಬಸವಸ್ವಾಮಿಗಳವರಿಂದ ಮೊದಲು ಸ್ಥಾಪಿಸಲ್ಪಟ್ಟಿತು ಹೀಗಿದ್ದರೂ ಅಲ್ಲಿ ಕನ್ನಡ ಕಲಿಸಲು ಅನುಕೂಲವಿಲ್ಲ. ಬಳ್ಳಾರಿ ಜಿಲ್ಲೆಯ ಎಲ್ಲ ಕೋರ್ಟುಗಳಲ್ಲಿಯೂ ಕನ್ನಡ ಫಾರ್ಮುಗಳನ್ನೇ ಕೊಡಬೇಕೆಂದು ಕರ್ನಾಟಕ ವಣಿಕ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ. ಬಳ್ಳಾರಿ ವೀರಭದ್ರಪ್ಪನವರು ಮದ್ರಾಸ ಹೈಕೋರ್ಟು ರಜಿಸ್ಟ್ರಾರರವರಿಗೆ ಬರೆದುಕೊಂಡಿದ್ದರು. ಅದರ ವಿಷಯಕ್ಕೆ ಹಾಯ ಕೋರ್ಟಿನವರಿಂದ ಜಿಲ್ಲಾ ಜಜ್ಜರ ಅಭಿಪ್ರಾಯವು ಕೇಳಲ್ಪಟ್ಟಿತು. ಅವರು ಹೇಳುವದೇನಂದರೆ— ನಾಲ್ಕೈದು ಜನ ಲಿಂಗಾಯತ ವಕೀಲರನ್ನು ಬಿಟ್ಟರೆ ಉಳಿದವರೆಲ್ಲರೂ ತೆಲುಗ ಫಾರ್ಮುಗಳನ್ನೇ ಕೇಳುತ್ತಾರೆ. ಬಾರ ಅಸೋಸಿಯೇಶನ್‌ದ ಕಾರ್ಯದರ್ಶಿಗಳ ಕಡೆಗೆ ವಣಿಕ ಸಂಘದವರ ಪತ್ರವನ್ನು ಕಳುಹಿಸಲು ಅವರು ಮುಖ್ಯಾಲು ಭಾಗ ತೆಲುಗು ಇರಬೇಕೆಂದೂ ಕಾಲುಭಾಗ ಕನ್ನಡವಾದರೆ ಸಾಕೆಂದೂ ಅಭಿಪ್ರಾಯ ಪಟ್ಟರೆಂದು ತಿಳಿಸುತ್ತಾರೆ. ಇದು ನಿಜವಾದ ಪಕ್ಷ ದಲ್ಲಿ ಬಳ್ಳಾರಿಯ ವಕೀಲರಲ್ಲಿ ಇನ್ನೂ ಅಷ್ಟೊಂದು ಜಾಗೃತಿಯಾಗಿರುವುದಿಲ್ಲವೆಂದೇ ಕಂಡು ಬರುತ್ತಿದೆ. ಆದರೂ ಜಿಲ್ಲಾ ಲೋಕಲ್ ಬೋರ್ಡಿನ ಉತ್ಸಾಹಿ ಅಧ್ಯಕ್ಷರಾದ ಶ್ರೀ. ಮಹಾಬಲೇಶ್ವರಪ್ಪನವರ ಮತ್ತು ನವಸಂದೇಶ ಪತ್ರಿಕಾ ಕರ್ತರ ಸ್ವತ್ಯ ಪ್ರಯತ್ನದಿಂದ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಕನ್ನಡ ಜಾಗೃತಿಯಾಗುವ ಚಿಹ್ನೆಗಳು ಸ್ಪಷ್ಟ ಕಾಣಿಸುತ್ತಿವೆ. [ಪಾಟೀಲ ಲಿಂಗನಗೌಡ.]

ತಾ. ೫ ನೆಯ ಮಾಘ ಬ. ೬ ಸೋಮವಾರ.

ಮಹಾತ್ಮಾಜಿಯವರೂ ಕರ್ನಾಟಕವೂ.

ಮಹಾತ್ಮಾಜಿಯವರು ಇನ್ನು ಸ್ವಲ್ಪ ದಿವಸಗಳಲ್ಲಿಯೇ ಕರ್ನಾಟಕಕ್ಕೆ ಆಗಮಿಸುವರೆಂದು ಎಲ್ಲ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಅವರನ್ನು ಸ್ವಾಗತ ಮಾಡುವ ಸಿದ್ಧತೆಯು ನಡೆದಿದೆಯಷ್ಟೆ. ಗಾಂಧೀಜಿಯವರಿಗೂ ಕರ್ನಾಟಕಕ್ಕೂ ಒಂದು ವಿಶೇಷವಾದ ಸಂಬಂಧವುಂಟು. ಆದುದರಿಂದಲೇ ಮಹಾತ್ಮಾಜಿಯವರು ಒಂದು ವಾರದ ವರೆಗಾದರೂ ಕರ್ನಾಟಕದಲ್ಲಿರಬೇಕೆಂದು ಅದಿಜನ ಸೇವಾ ಕಾರ್ಯವನ್ನು ಕೈಕೊಂಡ ಮುಂದಾಳುಗಳೆಲ್ಲ ಪ್ರಯತ್ನಿಸಿದರು. ಆದರೆ ಗಾಂಧೀಜಿಯವರ ಸದ್ಯದ ವೇಳೆಯು ಅಮೌಲ್ಯವಾದುದಾಗಿದೆ. ಬಿಹಾರದ ಅನರ್ಥದಿಂದ ಅವರಿಗೆ ಬಲವಾದ ನೋವಾಗಿದ್ದರೂ ಅವರು ಪ್ರತಿಜ್ಞಾಪೂರ್ವಕವಾಗಿ ಕೈಕೊಂಡ ಸದ್ಯದ ಕಾರ್ಯವನ್ನು ಪೂರ್ಣ ಮಾಡದೆ ಎಂದಿಗೂ ಬಿಡರು. ಕರ್ನಾಟಕ, ಹೈದರಾಬಾದ ಸಂಸ್ಥಾನದ ಸಂಚಾರವನ್ನು ತೀರಿಸಿಕೊಂಡು ಅವರು ಬಿಹಾರಕ್ಕೆ ಹೋಗುವವರಿರುವರು. ಈಗಾಗಲೆ ಬಿಹಾರದ ಸಂಚಾರದ ವಿಷಯವಾಗಿ ಬಾಬು ರಾಜೇಂದ್ರ ಪ್ರಸಾದರವರೊಡನೆ ಪತ್ರವ್ಯವಹಾರ ನಡೆಸಿರುವರು

ಮಹಾತ್ಮರು ಬಿಹಾರಕ್ಕೆ ತೀವ್ರವಾಗಿಯೇ ಹೋಗಬದು ಅವಶ್ಯಕವಾಗಿದೆಯಷ್ಟೆ. ನವ್ಮ ನೆರೆಯ ಪ್ರಾಂತದ ದುಸ್ಥಿತಿಯನ್ನು ನೋಡಿದರೂ ನಾವು ಹಟ ಹಿಡಿಯುವುದು ಸರಿಯಲ್ಲ ಹಾಗೆಯೇ ನಮ್ಮ ಪ್ರಾಂತದ ಹಿತವನ್ನು ನಾವು ನೋಡಲೇಬೇಕಾಗಿದೆ. ಆದುದರಿಂದ ಅವರಿಗೆ ಕಷ್ಟವಾಗದಂತೆ ಶಕ್ಯವಿದ್ದಷ್ಟು ದಿವಸಗಳಲ್ಲಿಯೇ ನಮ್ಮ ಕಾರ್ಯವನ್ನು ಪೂರೈಸಿಕೊಳ್ಳುವದು ಯುಕ್ತವಾದುದಾಗಿದೆ.

ಇನ್ನು ಕೆಲಕೆಲವು ಕಡೆಗಳಲ್ಲಿ ಮಹಾತ್ಮಾಜಿಯವರ ಸ್ವಾಗತಕ್ಕಾಗಿ ಹೆಚ್ಚಾಗಿ ಧನವ್ಯಯ ಮಾಡಿದುದನ್ನು ಗಾಂಧೀಜಿಯವರು ನಿವೇದಿಸಿರುತ್ತಾರೆ. ಗಾಂಧೀಜಿಯವರನ್ನು ಕರೆದುಕೊಂಡು ಬರುವದು ಗಾಂಧೀಜಿಯವರಿಗಾಗಿಯಲ್ಲ ಆದರೆ ಅದಿಜನರ ಉದ್ಧಾರಾರ್ಥವಾಗಿ. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಅವಶ್ಯ ಅದಿಜನರಿಗೆ ಹಿತವಾಗುವಂಥ ವಿಧಾಯಕ ಕಾರ್ಯಕ್ರಮಗಳನ್ನೇ ಕೈಕೊಳ್ಳುವದು ಉತ್ತಮ. ಗಾಂಧೀಜಿಯವರು ಕರ್ನಾಟಕದ ನಾಲ್ಕೂ ಕಡೆಯಲ್ಲಿಯೂ ಸಂಚರಿಸಿದ್ದಾದರೆ ಜನ ಜಾಗೃತಿಯು ವಿಶೇಷವಾಗಿ ಆಗುವದೇನೋ ನಿಜ ಆದರೆ ಅದಕ್ಕೆ ತಕ್ಕಂತೆ ನಾವು ಬಲವಾಗಿ ಕಾರ್ಯವನ್ನು ಮಾಡದಿದ್ದರೆ ಅವರ ಕಾಲವಿಲಂಬ ಮಾಡಿದ ಪಾಪಕ್ಕೆ ಗುರಿಯಾಗಬಹುದಲ್ಲವೆ? ಆದುದರಿಂದ ಎಲ್ಲ ಪ್ರಾಂತಗಳಂತೆಯೇ ನಾವೂ ಈ ವಿಧಾಯಕ ಕಾರ್ಯವನ್ನು ಕೈಕೊಂಡು ಅವರು ಬಂದ ಸಮಯದಲ್ಲಿ ನಮ್ಮ ಕಾರ್ಯಗಳಿಂದಲೇ ಅವರನ್ನು ಸಂತುಷ್ಟಗೊಳಿಸಬೇಕಲ್ಲವೆ?

ಸ್ಫುಟ ಸೂಚನೆ.

ಮ್ಯಾಟ್ರಿಕ್ ಪರೀಕ್ಷೆ.

ಮುಂಬಯಿ ವಿಶ್ವವಿದ್ಯಾಲಯದ ಸೀನೇಟಿನಲ್ಲಿ ಮ್ಯಾಟ್ರಿಕ್ ವಿದ್ಯಾರ್ಥಿಗಳ ಪರೀಕ್ಷೆಯನ್ನು ವರುಷಕ್ಕೆ ಎರಡು ಸಾರಿ ತೆಗೆದುಕೊಳ್ಳಬೇಕೆಂದು ಡಾ ದೇಶಮುಖ ಇವರು ತಂದ ಗೊತ್ತುವಳಿಯು ದೀರ್ಘ ವಿಚಾರವಿನಿಮಯವಾಗಿ ಬಹುಮತದಿಂದ ಪಾಸಾಯಿತು. ಇಂಗ್ಲೀಷ ಕಲಿಯುವ ವಿದ್ಯಾರ್ಥಿಗಳಿಗೆ ಮ್ಯಾಟ್ರಿಕ್ ಪರೀಕ್ಷೆಯು ಹೆಬ್ಬಾಗಿಲನಾಗಿದೆ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಅವರು ಭಿನ್ನ ಭಿನ್ನ ವಿಷಯಗಳನ್ನು ಆರಿಸಿಕೊಂಡು ತಮ್ಮ ಜೀವನವನ್ನು ನಿಶ್ಚಯಿಸಿಕೊಳ್ಳಬಹುದು. ಯಾವನಾದರೊಬ್ಬ ದುರ್ದೈವಿ ವಿದ್ಯಾರ್ಥಿಯು ಸ್ವಲ್ಪದರಲ್ಲಿಯೇ ನಾಪಾಸಾದರೆ ಮತ್ತೆ ಒಂದು ವರುಷದ ವರೆಗೆ ನಿರಾಶನಾಗಿ ಕೂಡ್ರಬೇಕಾಗುತ್ತಿದ್ದಿತು. ಇದಲ್ಲದೆ, ಈ ಪರೀಕ್ಷೆಯಿಂದ ವಿಶ್ವವಿದ್ಯಾಲಯಕ್ಕೆ ೧| ಲಕ್ಷ ರೂ. ಲಾಭವಾಗುತ್ತದೆ. ಪಾಶ್ಚಿಮಾತ್ಯದೇಶಗಳಲ್ಲಿ ಇಂಥ ಪರೀಕ್ಷೆಗಳನ್ನು ವರುಷಕ್ಕೆ ೩-೪ ಸಾರಿ ತೆಗೆದುಕೊಳ್ಳುತ್ತಿರುತ್ತಾರೆ. ಇದರಿಂದ ಮ್ಯಾಟ್ರಿಕದ ವಿದ್ಯಾರ್ಥಿಗಳಿಗೆ ಲಾಭವೇ ಆಗುವುದರಲ್ಲಿ ಸಂದೇಹವಿಲ್ಲ.

ಬಿಹಾರದ ಭೂಕಂಪ.

ಭೂಕಂಪದ ವಿಪತ್ತನ್ನು ನಿವಾರಿಸಲು ಅನೇಕ ಪ್ರಯತ್ನಗಳು ದೇಶದಲ್ಲಿ ನಡೆದಿವೆಯಷ್ಟೆ ಈ ಕಾಲದಲ್ಲಿ ನಮ್ಮ ಕರ್ನಾಟಕಸ್ಥರು ಏನು ಮಾಡುವರು? ಬಿಹಾರಿಗಳು ನಮ್ಮ ದೇಶಬಂಧುಗಳಲ್ಲವೇ? ಅವರ ಸುಖ ಮತ್ತು ದುಃಖಗಳು ನವ್ಮವಲ್ಲವೇ? ಕರ್ನಾಟಕದವರು ಲಕ್ಷಾವಧಿ ಜನರಿಗೆ ಧರ್ಮದ ಹೆಸರಿನಿಂದ ದಾನಕೊಟ್ಟು ಪುಣ್ಯ ಪಡೆಯಬೇಕೆಂದು ಆಶಿಸುತ್ತಾರೆ; ಆದರೆ ಇಂಥ ಪುಣ್ಯ ಕಾರ್ಯಕ್ಕೆ ದಾನಕೊಡಲು ಇವರಿಗೆ ಒಂದು ದುಡ್ಡು ಸಹ ಇಲ್ಲವಲ್ಲ ಎಂದು ಉಳಿದ ಪ್ರಾಂತದವರು ನಮ್ಮನ್ನು ಹೀಯಾಳಿಸಬಹುದಲ್ಲವೇ? ಹುಬ್ಬಳ್ಳಿಯಲ್ಲಿ ಈ ಕಾರ್ಯಕ್ಕಾಗಿ ೧ ಸಾವಿರ ರೂ. ಗಳು ಮಾತ್ರ ಕೂಡಿವೆಯಂತೆ. ಇಂಗ್ಲಂಡ, ಅಮೇರಿಕ, ಮೊದಲಾದ ಕಡೆಗಳಿಂದ ಭೂತದಯಾಪರರಾದ ಜನರು ಸಹಾಯ ಮಾಡುತ್ತಿರುವಾಗ ನಮ್ಮ ಸ್ವದೇಶಬಂಧುಗಳ ಹಿತವನ್ನು ನಾವು ನೋಡದಿದ್ದರೆ ನವ್ಮಂಥ ಕೃತಘ್ನರಿನ್ನಾರು? ಆದುದರಿಂದ ಕರ್ನಾಟಕದ ದೊಡ್ಡ ದೊಡ್ಡ ಪಟ್ಟಣಗಳೆಲ್ಲೆಲ್ಲ ಜನಜಾಗೃತಿಯನ್ನುಂಟುಮಾಡಿ ತೀವ್ರವೇ ಆಪದ್ಗ್ರಸ್ತರಿಗೆ ನೆರವಾಗುವ ಪುಣ್ಯವನ್ನು ಕಟ್ಟಿಕೊಳ್ಳಿರೆಂದು ನಮ್ಮ ಉದಾರ ಕನ್ನಡಿಗರಿಗೆ ವಿನ್ನವಿಸಿಕೊಳ್ಳುತ್ತೇನೆ.

ಮಧ್ಯವರ್ತಿ ಆರಳೆಯ ಸಮಿತಿ.

ಹಿಂದುಸ್ಥಾನದ ಮಧ್ಯವರ್ತಿ ಆರಳೆಯ ಸಮಿತಿಯವರ ಸಭೆ ಸೇರಿ ಕೆಳಗಿನಂತೆ ಗೊತ್ತುವಳಿಗಳಾದವು—ಒಕ್ಕಲಿಗನಿಗೆ ಅನುಕೂಲವಾಗುವಂತೆ ರೇಲ್ವೆ ಬೋರ್ಡಿನವರು ಆರಳೆಯ ಮೇಲಿನ ರೇಲ್ವೆ ಬಾಡಿಗೆಯನ್ನು ಇಳಿಸುವಂತೆ ಅಪ್ಪಣೆ ಮಾಡಬೇಕೆಂದು ಹಿಂದುಸ್ಥಾನ ಸರಕಾರದವರಿಗೆ ವಿನಂತಿ ಮಾಡಿಕೊಳ್ಳುವದು. ಹಿಂದುಸ್ಥಾನದಲ್ಲೆಲ್ಲ ಹತ್ತಿಯ ಒಂದೇ ತರದ ತೂಕಗಳನ್ನು ಸ್ಥಾಪಿಸುವದು ಮತ್ತು ಅನಧಿಕಾರ ತೂಕಗಳನ್ನು ತೆಗೆದುಬಿಡುವದು.

ಜಗದ್ಗುರುಗಳ ದಿವ್ಯೋಪದೇಶ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾ ಸ್ವಾಮಿಗಳವರು ಉಳವಿ ಮಹಾ ಕ್ಷೇತ್ರಕ್ಕೆ ದಯಮಾಡಿಸುವದಕ್ಕೋಸ್ಕರ ಧಾರವಾಡಕ್ಕೆ ತಾ. ೨೦ನೇ ದಿವಸ ಸಾಯಂಕಾಲ ಆಗಮಿಸಿದ್ದರು. ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಆ ದಿನ ವಿದ್ವಾನ್ ವೈ. ನಾಗೇಶ ಶಾಸ್ತ್ರಿಗಳ ಪ್ರವಚನವಿತ್ತು. ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಈ ಪ್ರವಚನ ನಡೆದ ನಂತರ ಆ ಪ್ರವಚನದ ವಿಷಯವನ್ನು ಉಪಸಂಹಾರಗೊಳಿಸುವಾಗ ಮಹಾ ಪೂಜ್ಯಪಾದರು ಈ ಪ್ರಕಾರ ಅಪ್ಪಣೆ ಕೊಡಿಸಿದರು.

"ಪ್ರವಚನಕಾರರು ಪ್ರತಿಪಾದಿಸಿದ ಸಂಗತಿಗಳಲ್ಲಿ ಧಾರ್ಮಿಕ ನೈತಿಕ ಮತ್ತು ಸಾಮಾಜಿಕ ಈ ಮೂರು ಮುಖ್ಯ ವಿಷಯಗಳಿದ್ದವು. ವಿದ್ವಾನ್ ನಾಗೇಶ ಶಾಸ್ತ್ರಿಗಳು ಧಾರ್ಮಿಕ ವಿಷಯದಲ್ಲಿ ಜಂಗಮ ಮೂರ್ತಿಗಳ ಶ್ರೇಷ್ಠತ್ವವನ್ನು ವಿಶೇಷ ಪ್ರಸ್ತಾಪಿಸಿದರು. ಗುರುಪೀಠಗಳಂತೆಯೇ ಜಂಗಮ ಪೀಠವೂ ಅನಾದಿಯೆಂತಲೂ ಜಂಗಮರು ಪರೀಕ್ಷಕರೆಂತಲೂ ಅವರು ಸಮಾಜೋದ್ಧಾರಕ್ಕಾಗಿಯೇ ಭಕ್ತಾದಿಗಳ ಧನವನ್ನು ತೆಗೆದುಕೊಳ್ಳಬೇಕೇ ವಿನಾ ಸ್ವಂತಕ್ಕಲ್ಲ ವೆಂತಲೂ ಹೇಳಿದುದು ಸಹಜವಾಗಿದೆ. ಈ ಪ್ರಕಾರ ಅನೇಕ ಜಂಗಮ ಮೂರ್ತಿಗಳು ಆಚರಿಸುತ್ತಿರುವುದರಿಂದಲೇ ಇಲ್ಲಿಯ ಬೋರ್ಡಿಂಗ ಮೊದಲಾದ ಅನೇಕ ವಿದ್ಯಾ ಸಂಸ್ಥೆಗಳು ನಡೆಯುತ್ತಾ ಸಮಾಜಕ್ಕೆ ಬಹು ಪ್ರಯೋಜನವನ್ನುಂಟುಮಾಡುತ್ತಲಿವೆ. ಕ್ರಿಮಿಕೀಟಗಳಿಂದ ಷಟ್ಸ್ಥಳ ಬ್ರಹ್ಮಿಯಾದ ಜಂಗಮ ಮೂರ್ತಿಯ ವರೆಗಿನ ತಾರತಮ್ಯಗಳನ್ನು ನೋಡಿದರೆ ಎಲ್ಲ ಪ್ರಾಣಿಗಳಲ್ಲಿ ಮನುಷ್ಯನು ಹೇಗೆ ಶ್ರೇಷ್ಠನೋ ಹಾಗೆಯೇ ಮನುಷ್ಯರಲ್ಲಿ ಬ್ರಾಹ್ಮಣನೂ ಆತನಿಗಿಂತ ವೀರಶೈವನೂ ಆ ವೀರಶೈವರಲ್ಲಿ ಜಂಗಮ ಮೂರ್ತಿಯೂ ಶ್ರೇಷ್ಠವೆಂದು ಆಗಮವು ಘಂಟಾಘೋಷವಾಗಿ ಹೇಳುತ್ತಿದೆ.

ದಯವೇ ಧರ್ಮದ ಮೂಲವೆಂದು ಶಾಸ್ತ್ರಿಗಳು ಹೇಳಿದ ಆ ಬಸವೇಶ್ವರ ದಿವ್ಯ ವಚನವು ಯಥಾರ್ಥವಾದುದು. ಸಕಲರೂ ಪ್ರಾಣಿಗಳಲ್ಲಿ ದಯೆಯುಳ್ಳವರಾಗಿರಬೇಕೆಂದ ಮೇಲೆ ಮನುಷ್ಯರ ಬಗ್ಗೆ ದಯೆಯುಳ್ಳವರಾಗಿರಬಾರದೇ? ಹಿಂದು ಧರ್ಮಾವಲಂಬಿಗಳಾದ ಅನೇಕರನ್ನು ಅಸ್ಪೃಶ್ಯರೆಂದು ಅವರನ್ನು ಮುಟ್ಟದಿರುವುದು ಮತ್ತು ಹಿಂದುಗಳಲ್ಲದ ಕ್ರೈಸ್ತ ಮುಸಲ್ಮಾನ್ ಧರ್ಮದವರಿಗಿದು ವಸ್ತ್ರ ಸಾಮಾಜಿಕ ಸ್ವಾತಂತ್ರ್ಯವನ್ನು ಕೊಡದಿರುವುದು ಅನ್ಯಾಯವಾದುದಾಗಿದೆ. ಮತ್ತು ನಿರ್ದಯೆಯನ್ನು ತೋರಿಸತಕ್ಕದಾಗಿದೆ. ಮಹಾ ಸನ್ನಿಧಿಯಿಂದ ಈ ವಿಷಯದಲ್ಲಿ ಮಾಡಿದ ವಿಚಾರಣೆಯನ್ನು ಅನೇಕರು ತಪ್ಪಾಗಿ ತಿಳಿದುಕೊಂಡಿದ್ದಾರೆ.

ಅಸ್ಪೃಶ್ಯತಾ ನಿವಾರಣೆಯಾಗಲೇಬೇಕು. ಇದು ಆ ದೀನ ಜನರಲ್ಲಿ ದಯೆಯನ್ನು ತೋರಿಸತಕ್ಕದ್ದಾಗಿದೆ. ವೀರಶೈವರಿಗಂತೂ ಈ ವಿಷಯದಲ್ಲಿ ಪ್ರತಿಬಂಧವಿಲ್ಲ. ವೀರಶೈವರಲ್ಲದ ಜನರೆಲ್ಲರೂ ಒಂದೇ ಪಂಗ್ತಿಗೆ ಸೇರಿದವರೆಂದು ನಮ್ಮ ಮತ ಸಿದ್ಧಾಂತ ವಿರುವಾಗ ಅನ್ಯರನ್ನು ಮುಟ್ಟಿಸಿಕೊಳ್ಳುವವರು ಅವರನ್ನೇಕೆ ಮುಟ್ಟಿಸಿಕೊಳ್ಳಬಾರದು? ವೀರಶೈವರ ಶೀಲಗಳಂತೆ ವ್ರತಸ್ಥರಾಗಿ ವೀರಶೈವೇತರರಲ್ಲಿ ಯಾರನ್ನೂ ಮುಟ್ಟಿಸಿಕೊಳ್ಳದವರಿಗೆ ಅವರನ್ನು ಮುಟ್ಟಿಸಿಕೊಳ್ಳಿರೆಂದು ನಾವೇನೂ ಅಪ್ಪಣೆ ಮಾಡುವುದಿಲ್ಲ. ಆದರೆ ಯಾರು ಎಲ್ಲ ಧರ್ಮ ಮತದವರ ಸಂಗಡ ಮುಟ್ಟಿ ತಮ್ಮ ಉದ್ಯೋಗಾದಿಗಳನ್ನು ನಡೆಸುತ್ತಿದ್ದಾರೆಯೋ ಅವರು ಈ ಜನರನ್ನೂ ಮುಟ್ಟುವುದರಲ್ಲಿ ಅಭ್ಯಂತರವೇನಿದೆ?

ಮರುದಿನ ಸೋಮವಾರ ಪ್ರಾತಃಕಾಲ ೬ ಗಂಟೆಗೆ ಮಹಾ ಸನ್ನಿಧಿಯಲ್ಲಿ ವಿದ್ವಾನ್ ನಾಗೇಶ ಶಾಸ್ತ್ರಿಗಳ, ಪಂಡಿತ ವಿರೂಪಾಕ್ಷ ಶಿವಾಚಾರ್ಯರ ಮತ್ತು ಶ್ರೀ. ಹರ್ಡೇಕರ ಮಂಜಪ್ಪನವರ ವ್ಯಾಖ್ಯಾನಗಳಾದವು ಆಗ ವಿದ್ಯಾರ್ಥಿಗಳಿಗೆ ಶ್ರೀ ನಾಗೇಶ ಶಾಸ್ತ್ರಿಗಳವರಿಂದ ಶಿವಾನುಭವ ಶಿಕ್ಷಣವನ್ನು ಪ್ರಾರಂಭಿಸುವ ಶುಭಕಾರ್ಯ ಜರುಗುವುದಿದ್ದಿತು. ಆಗ ಶ್ರೀ ನಾಗೇಶ ಶಾಸ್ತ್ರಿಗಳು ಈ ಪ್ರಕಾರ ಹೇಳಿದರು.

"ವೀರಶೈವರ ಈಗಿನ ಸಂಸ್ಕೃತ ಕಾಲೇಜುಗಳಲ್ಲಿ ಬೇರೆ ಮತ ಪಂಥಗಳ ಮತ್ತು ಭಾಷೆಯ ಜ್ಞಾನವಾಗುತ್ತದೆಯೇ ವಿನಾ ವೀರಶೈವ ಮತಜ್ಞಾನವು ಆಗುವುದೇ ಇಲ್ಲ. ಬೇರೆ ಮತೀಯರು ತಮ್ಮ ತಮ್ಮ ಕಾಲೇಜುಗಳಲ್ಲಿ ದ್ವೈತಾದ್ವೈತ ತತ್ವಗಳನ್ನು ಚೆನ್ನಾಗಿ ಕಲಿಸುತ್ತಿದ್ದಾರೆ. ಹಾಗೆ ನಮ್ಮ ಕಾಲೇಜುಗಳಲ್ಲಿ ನಮ್ಮ ಧರ್ಮದ ಶಿಕ್ಷಣವೇ ಇಲ್ಲ. ಇದೊಂದು ದೊಡ್ಡ ಕೊರತೆ ಇದನ್ನು ನಿವಾರಣೆ ಮಾಡಲು ಇಲ್ಲಿಯ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನವರು ಯೋಚಿಸಿ ಬರುವ ಜೂನ್ ತಿಂಗಳಿಂದ ಶಿವಾನುಭವ ಆದ್ಯ, ವಚನ ಮತ್ತು ತೀರ್ಥ ಪರೀಕ್ಷೆಗಳು ತಮ್ಮ ಕಾಲೇಜಿನಲ್ಲಿ ನಡೆಯುವಂತೆಯೂ ಅವುಗಳಿಗೆ ಯೋಗ್ಯ ಪಠ್ಯ ಪುಸ್ತಕಗಳನ್ನು ಗೊತ್ತುಪಡಿಸಿ ಪರೀಕ್ಷಕ ಮಂಡಲವನ್ನು ನಿಯಮಿಸುವುದೂ ಸ್ತುತ್ಯವಾಗಿದೆ. ಆ ಮಹಾ ಕಾರ್ಯವನ್ನೇ ಈ ದಿವಸ ಶ್ರೀ ಜಗದ್ಗುರುಗಳ ಸನ್ನಿಧಿಯಲ್ಲಿ ಉಪಕ್ರಮಿಸಲು ಶ್ರೀ. ಬಸವೇಶನ ವಚನಗಳನ್ನು ಓದುತ್ತೇನೆ."

ಈ ವಿಷಯವನ್ನೇ ಉಳಿದ ಉಭಯ ವ್ಯಾಖ್ಯಾತರೂ ಪುಷ್ಟೀಕರಿಸಿದನಂತರ ಜಗದ್ಗುರು ಮಹಾಸನ್ನಿಧಿಯಿಂದ ಈ ಪ್ರಕಾರ ಅಪ್ಪಣೆ ಕೊಡಿಸೋಣವಾಯಿತು.

"ಇಲ್ಲಿಯ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನಲ್ಲಿ ಶಿವಾನುಭವ ಶಿಕ್ಷಣವನ್ನು ಪ್ರಾರಂಭಿಸುವದು ಒಹು ಯೋಗ್ಯವಾಗಿದೆ. ಇಂಥ ಶಿಕ್ಷಣದಿಂದಲೇ ನಮ್ಮ ಧರ್ಮದ ನಿಜಜ್ಞಾನವು ಪ್ರಸಾರವಾಗುತ್ತದೆ. ಅನ್ಯಮತೀಯರೇ ನಮ್ಮ ಪ್ರಮಥರ ವಚನ ಶಾಸ್ತ್ರವನ್ನು ಅಧ್ಯಯನ ಮಾಡುತ್ತಿರುವಾಗ ನಾವು ಉಪೇಕ್ಷಿಸುವುದು ಯೋಗ್ಯವೇ? ಈ ವರೆಗೆ ಲಕ್ಷಿಸದಿದ್ದುದೇ ತಪ್ಪು. ಇನ್ನು ಮೇಲಾದರೂ ಶಿವಾನುಭವ ಶಿಕ್ಷಣ ಪ್ರಸಾರಗೊಳಿಸುವುದು ಅವಶ್ಯಕ." ವೃತ್ತಾಂತ.

ಶರಣರೊಡನೆ ಸರಸ.

ಸೊಲ್ಲಾಪುರದಲ್ಲಿ ನಾವದಿಗಿ ಶಿವಶರಣರು ವೀರಶೈವ ನೀಲಗಾರರ ಬಿನ್ನಹವನ್ನು ಕೈಕೊಳ್ಳಬಾರದೆಂದು ಅವರ ಚಲವಾದಿಯು ಗಂಟೆಯನ್ನು ಕೆಲವು ಪಕ್ಷಾಭಿಮಾನಿಗಳು ಕಸಿದುಕೊಂಡರಂತೆ. ಇದಕ್ಕಾಗಿ ಶರಣರು ಎರಡು ದಿವಸಗಳವರೆಗೆ ಉಪವಾಸವಿದ್ದು ವಿಜಾಪುರದಿಂದ ಚಲವಾದಿಯು ಬಂದಮೇಲೆ ಪ್ರಸಾದ ಸೇವಿಸಿದರಂತೆ ಮಹಾ ಶಿವಶರಣರಿಗೆ ಈ ರೀತಿ ಮಾಡುವುದು ಎಂಥ ಅನ್ಯಾಯ! ಶರಣರೊಡನೆ ಸರಸವಾಡಿದರೆ ಸುಣ್ಣದ ಕಲ್ಲು ಮಡಲಲ್ಲಿ ಕಟ್ಟಿಕೊಂಡು ಮಡುವ ಬೀಳಬೇಕಾಗುವದೆಂಬವನ್ನು ಇವರು ಅರಿಯರೇ?

ವಿವಿಧ ವಿಷಯ.

ಘಂಟಾನಾದ.

ಘಂಟೆಯು ಪ್ರತಿಯೊಂದು ಧರ್ಮದಲ್ಲಿಯೂ ಸ್ಥಾನವನ್ನು ಪಡೆದಿದೆ. ಇಜಿಪ್ತ ಜನರು ಘಂಟಾನಾದದಲ್ಲಿಯೇ ಪರಮೇಶ್ವರನ ಉಪಾಸನೆಯನ್ನು ಮಾಡುತ್ತಾರೆ. ಹಿಂದು ದೇವಾಲಯಗಳಲ್ಲಿ ಇಲ್ಲವೆ ಹಿಂದು ಜನರ ಅರ್ಚನೆಯಲ್ಲಿ ಘಂಟೆಯು ಇದ್ದೇ ಇರುತ್ತದೆ. ಯಹೂದಿ ಭಾಟರ ನಿಲುವಂಗಿಯ ಅಂಚಿಗೆ ಸಣ್ಣ ಸಣ್ಣ ಘಂಟೆಗಳಿರುತ್ತವೆ. ರೋಮನ್ ಜನರು ಘಂಟೆಯನ್ನು ಬಾರಿಸಿಯೇ ಜನರನ್ನು ಪ್ರಾರ್ಥನೆಗೆ ಕರೆಯುವರು. ಕ್ರಿಸ್ತೀ ದೇವಾಲಯಗಳಲ್ಲಿ ಘಂಟೆಗಳು ಅವಶ್ಯಕವಾದವುಗಳಿರುತ್ತವೆ. ರಶಿಯನ್ ಜನರಿಗೆ ಘಂಟೆಯ ಪ್ರೇಮವು ಬಹಳ. ೧೭೩೩ನೆಯ ಇಸವಿಯಲ್ಲಿ ಮಾಸ್ಕೋ ಪಟ್ಟಣದಲ್ಲಿ ಎರಕ ಹೊಯ್ದ ಘಂಟೆಯು ೧೯೮ ಟನ್ ಭಾರವಿರುತ್ತದೆ. ನಾರೋ ಶಂಕರ ಘಂಟೆಯಷ್ಟೇ ಮಾನವು ಇದಕ್ಕಿರುತ್ತದೆ. ಮಾಸ್ಕೋದಲ್ಲಿಯ ಇನ್ನೊಂದು ಘಂಟೆಯ ಭಾರವು ೧೩೮ ಟನ್ ಇರುತ್ತದೆ. ಚೀನದ ರಾಜಧಾನಿಯಾದ ಪೇಕೀನ ಪಟ್ಟಣದಲ್ಲಿ ಒಂದು ಘಂಟೆಯು ೫೩॥ ಟನ್ ಇರುತ್ತದೆ. ಸೆಂಟಪಾಲ ಕ್ರಿಸ್ತೀ ದೇವಾಲಯದಲ್ಲಿ ೧೭॥ ಟನ್ ಭಾರದ್ದಿರುತ್ತದೆ. ಬ್ರಹ್ಮೀ ಜನರು ಸಣ್ಣ ಸಣ್ಣ ಘಂಟೆಗಳ ಮೇಲೆ ಬಹು ಪ್ರೀತಿ. ಅವರು ತಮ್ಮ ದೇವಾಲಯಗಳ (ಪಾಗೋಡಾ) ಮೇಲೆ ಕಟ್ಟಿದ ಸಣ್ಣಸಣ್ಣ ಘಂಟೆಗಳು ವಾಯು ಚಲನದಿಂದ ನಾದ ಮಾಡಿದರೆ ಸ್ವರ್ಗದಲ್ಲಿಯ ಪಿತರುಗಳು ತೃಪ್ತರಾಗುವರೆಂದು ಅವರ ನಂಬುಗೆ. ಬ್ರಹ್ಮದೇಶದ ಮಿನ್‌ಗುನ್ ಎಂಬ ಪಟ್ಟಣದಲ್ಲಿ ೮೦ ಟನ್ ಭಾರವಾದ ಘಂಟೆ ಇರುತ್ತದೆ. ಹಿಂದಕ್ಕೆ ನಮ್ಮ ಭಾಗದಲ್ಲಿ ಕಳಕ ಮಲ್ಲೇಶನ ಘಂಟೆಯು ಬಹು ದೊಡ್ಡದಿತ್ತೆಂದು ಹೇಳುತ್ತಾರೆ. ಹೀಗೆ ಎಲ್ಲ ಧರ್ಮಗಳಲ್ಲಿ ಘಂಟೆಯು ಭಕ್ತಿರಸದ್ಯೋತಕನೆಂದು ಗ್ರಹಿಸಲ್ಪಟ್ಟಿದೆ.

ಕಬ್ಬಿನ ರಸದ ಉಪಯೋಗ.

ಮುಂಬೈ ಇಲಾಖೆಯ ಶಿಶು ಆರೋಗ್ಯ ಸಪ್ತಾಹ ಸಂಸ್ಥೆಯವರು ಕಳೆದ ೪-೫ ವರುಷಗಳಿಂದ ಮನುಷ್ಯನ ಜೀವನಕ್ಕೆ ಅತ್ಯುಪಯುಕ್ತವಾದ ಸೇಯಗಳನ್ನು ಕುರಿತು ಪ್ರದರ್ಶನವನ್ನು ನೆರೆಯಿಸುತ್ತಿರುವರಷ್ಟೆ. ಅವರು ಕಬ್ಬಿನ ರಸವನ್ನು ಕುರಿತು ಈ ಪ್ರಕಾರವಾಗಿ ಪಸಿದ್ಧಿಸಿರುವರು—

ಕಬ್ಬಿನ ರಸವು ಉತ್ತಮ ವಾನಕವಾಗಿರುವದು. ಅದರಲ್ಲಿ ಕಬ್ಬಿಣ, ತಾಮ್ರ ಫಾಸ್ಫರಸ್ ಮೊದಲಾದ ಮಹತ್ವದ ಧಾತುಗಳ ಕ್ಷಾರಗಳಿರುವವು. ಕಡಿಮೆ ರಕ್ತವುಳ್ಳವರು ಇದನ್ನು ಸೇವಿಸಿದರೆ ರಕ್ತ ವೃದ್ಧಿಯಾಗುತ್ತದೆ. ಕಾಮಣಿಯಾದ ರೋಗಿಗೂ ಸಹ ಈ ರಸದಿಂದ ಲಾಭವಾಗುತ್ತದೆ. ಶಕ್ಯವಿದ್ದಲ್ಲ ಸಕ್ಕರೆಯನ್ನು ಬಿಟ್ಟು ಬೆಲ್ಲದ ಉಪಯೋಗವನ್ನೇ ಮಾಡಿಕೊಳ್ಳಬೇಕು. ಯಾಕಂದರೆ ಬೆಲ್ಲದಲ್ಲಿ ಲೋಹಾದಿ ಕ್ಷಾರಗಳು ಸಕ್ಕರೆಯಲ್ಲಿಯಕ್ಕಿಂತ ಹೆಚ್ಚು ಪ್ರಮಾಣದಲ್ಲಿದ್ದು ಬೆಲ್ಲದ ಪದಾರ್ಥಗಳೇ ಹೆಚ್ಚು ರುಚಿಕರವಾಗುತ್ತವೆ.

ಕಬ್ಬಿನ ರಸವನ್ನು ತೆಗೆಯಲು ಕಿರ್ಲೋಸ್ಕರ ಕಂಪನಿಯವರು ಸಿದ್ಧಪಡಿಸಿದ 'ಕುಮಾರ' ಎಂಬ ಯಂತ್ರದ ಗಾತ್ರವು ಉತ್ತಮವಾದದ್ದು. ಅದು ಗಂಟೆಗೆ ೩೦೦ ಪೌಂಡು ಕಬ್ಬನ್ನು ಹಿಂಡುತ್ತಿದ್ದು ಅದರ ಬೆಲೆಯು ೧೦೮ ರೂಪಾಯಿ ಇರುತ್ತದೆ. ನಮ್ಮ ಕಡೆಯಲ್ಲೆಲ್ಲ ಸುತ್ತಲಿನ ನಾಲ್ಕು ಮೈಲುಗಳಲ್ಲಿ ಕಬ್ಬಿನ ತೋಟಗಳು ಇದ್ದೇ ಇರುತ್ತವೆ. ಅದುದರಿಂದ ಜಹಾ, ಸರಾಯಿ ಮೊದಲಾದ ದುಷ್ಟ ಪಾನಕಗಳನ್ನು ಸೇವಿಸುವದನ್ನು ಬಿಟ್ಟು ಈ ಉಪಯುಕ್ತ ಸೇಯವನ್ನು ಸೇವಿಸಿದರೆ ಆರೋಗ್ಯ ವರ್ಧನೆಯಾಗುತ್ತದಲ್ಲದೆ ಒಕ್ಕಲಿಗರಿಗೆ ಉತ್ತೇಜನವೂ ದೊರೆಯುವದಿಲ್ಲವೇ?

ಜಗತ್ತಿನಲ್ಲೆಲ್ಲ ದೊಡ್ಡದಾದ ರತ್ನ.

ಸದ್ಯಃ ಹಿಂದುಸ್ಥಾನದಲ್ಲಿ ಜಗತ್ತಿನಲ್ಲೆಲ್ಲ ದೊಡ್ಡದಾದ ರತ್ನವು ಬಂದಿದೆ. ಇದು ದಿಲ್ಲಿಯಲ್ಲಿ ಒಬ್ಬ ಅಜ್ಞಾತ ವ್ಯಕ್ತಿಯ ಹತ್ತರವಿದೆ. ಅಂಥ ರತ್ನವು ಎಲ್ಲಿಂದ ಬಂದಿತು ಮತ್ತು ಹೇಗೆ ಬಂದಿತೆಂಬುದು ಯಾರಿಗೂ ಗೊತ್ತಾಗಿಲ್ಲ. ಈ ರತ್ನವು ೭ ಇಂಚು ಉದ್ದವಿದ್ದು ಅದರ ಸುತ್ತಳತೆಯು ಎಲ್ಲಕ್ಕೂ ಹೆಚ್ಚೆಂದರೆ ೪॥ ಇಂಚು ಮತ್ತು ಎಲ್ಲಕ್ಕೂ ಕಡಿಮೆಯೆಂದರೆ ೩॥ ಇಂಚು ಅದೆ. ಅದರ ತೂಕವು ೩ ಔಂಸು ಅಂದರೆ ಸರಾಸರಿ ೧೪೦೦ ಗ್ರೇನು ಇರುತ್ತದೆ. ಈ ರತ್ನವು ಮೊದಲು ಫ್ರಾನ್ಸಿನ ರಾಣಿಯಾದ ಮೇರಿ ಆ್ಯಂಟೋನೇವ್ ಎಂಬವಳ ಹತ್ತಿರವಿದ್ದಿತು. ಮುಂದೆ ಹೆನ್ರಿ ಫಿಲಿಪ್ಪ ಹೋಪ ಇವರ ಪತ್ನಿಯವರಾದ ಮೇಯೋ ಇವಳ ಹತ್ತರದಿಂದ ಅದು ಬರಬರುತ್ತ ಸದ್ಯದ ವ್ಯಕ್ತಿಯ ಕಡೆಗೆ ಬಂದಿದೆ. ಅದು ಹೇಗೆ ಬಂದಿತೆಂಬುದು ಮಾತ್ರ ಒಂದು ಗೂಢವೇ ಆಗಿದೆ.

ಎಲ್ಲರಲ್ಲಿ ಹೆಚ್ಚಿನವರು?

ಶ್ರೀ ದಾದಾಭಾಯಿ ನೌರೋಜಿಯವರ ಪ್ರತಿಮಾ ಉದ್ಘಾಟನ ಸಮಾರಂಭದ ಕಾಲಕ್ಕೆ ಶ್ರೀ ಗಾಯಕವಾಡ ಮಹಾರಾಜರು ಹೇಳಿದ್ದೇನೆಂದರೆ— ಹಿಂದುಸ್ಥಾನದ ಪ್ರಥಮ ಅಗ್ರಣಿಯಂದರೆ ದಾದಾಭಾಯಿ ನೌರೋಜಿಯವರು. ಮುಂಬಯಿಯಲ್ಲಿ ಅವರೇ ಪ್ರಥಮ ಕನ್ಯಾ ಪಾಠಶಾಲೆಯನ್ನು ಸ್ಥಾರಂಭಿಸಿದರು. ಪ್ರೊಫೆಸರ ಸ್ಥಾನದಲ್ಲಿ ಹಿಂದೀ ಪ್ರೊಫೆಸರರೆಂದು ಪ್ರಥಮತಃ ಅವರೇ ನಿಯಮಿಸಲ್ಪಟ್ಟರು. ಹಿಂದೀ ವ್ಯಾಪಾರಿ ಸಂಸ್ಥೆಯ ಪ್ರತಿನಿಧಿಯಾಗಿ ಇಂಗ್ಲಂದಲ್ಲಿ ಕೆಲಸ ಮಾಡಲು ಮೊದಲಿಗೆ ಇವರೇ ನಿಯಮಿಸಲ್ಪಟ್ಟರು. ಪಾರ್ಲಿಮೆಂಟಿನ ಆಯ್ಕೆಯಲ್ಲಿ ಹೋರಾಡಲು ನಿಂತವರಲ್ಲಿ ಇವರೇ ಮೊದಲನೆಯವರು. ಹಿಂದೀ ಮುಸ್ಲಿದ್ದಿಗಳಲ್ಲಿ ಮತ್ತು ಹಿಂದೀ ಸುಧಾರಕರಲ್ಲಿ ಇವರೇ ಪ್ರಥಮ ನೇತೃಗಳಾಗಿರುವರು. ರಾಷ್ಟ್ರೀಯ ಚಟುವಟಿಕೆಯ ಜನಕರೆಂಬ ಹೆಸರು ಇವರಿಗೇ ಸಲ್ಲುತ್ತದೆ.

ಭೂಕಂಪದ ಲೀಲೆ.

ಕಳೆದ ೩೦ನೆಯ ತಾರೀಖಿನ ದಿವಸ ಪಾಟಣಾದಲ್ಲಿ ಮತ್ತೆ ಭೂಕಂಪವಾಯಿತು. ಆದರೆ ಇದು ಸೌಮ್ಯ ಸ್ವರೂಪದ್ದಾಗಿದೆ. ಮೋಂಗೀರದಲ್ಲಿ ೧೯೩೪ನೆಯ ಇಸವಿಯ ಅತಿವೃಷ್ಟಿಯಂತೆ ಭಯಂಕರ ಮಳೆಯು ಬೀಳುತ್ತಿದ್ದುದರಿಂದ ಉಳಿದ ಕಟ್ಟಡಗಳೆಲ್ಲ ನೆಲಸಮವಾಗಹತ್ತಿವೆ. ಸಾಲದ್ದಕ್ಕೆ ನ್ಯೂಮೋನಿಯಾ ಮೊದಲಾದ ಭಯಂಕರ ರೋಗಗಳೂ ಆವರಿಸಿವೆ. ಈ ಪರಿಯಾದ ಕಷ್ಟವನ್ನು ೩೦ ಸಾವಿರ ಜನರು ಅನುಭವಿಸುತ್ತಿದ್ದಾರೆ. ಹೊಸ ಮನೆಗಳನ್ನು ಕಟ್ಟುವದು ಇಂಥ ಮಳೆಯಲ್ಲಿ ಅಶಕ್ಯವಾದುದರಿಂದ ಕೂಡಲೇ ೪೦೦೦ ತಗಡುಗಳು ಬೇಕೆಂದು ಅಲ್ಲಿಯವರು ಬರೆಯುತ್ತಾರೆ. ಮೋಂಗೀರ ಪಟ್ಟಣದಲ್ಲಿ ಒಂದಾದರೂ ದೀಪವನ್ನು ಹಚ್ಚಿಲ್ಲ. ಒಂದಾದರೂ ಒಲೆಯನ್ನು ಹೊತ್ತಿಸಿಲ್ಲ.

ಭೂಕಂಪದ ತರುವಾಯ ಪೃಥ್ವಿಯ ಹೊಟ್ಟೆಯೊಳಗಿಂದ ಉರಿಯು ಎದ್ದು ಬೇಟೆಯಾ ಜಲ್ಲೆಯೊಳಗಿನ ಏಕದರಮಾ ಮತ್ತು ಪಾಣಕೋಟಾ ಎಂಬ ಎರಡು ಗ್ರಾಮಗಳನ್ನು ಸುಟ್ಟು ಬೂದಿ ಮಾಡಿತೆಂದು 'ಸರ್ಚ್ ಲಾಯಿಟ್ ಪತ್ರಿಕೆಯ ಸುದ್ದಿಗಾರನು ಬರೆದಿರುತ್ತಾನೆ. ಗೋವೆಯ ಹತ್ತಿರ ಒಂದು ಜಾತ್ರೆಯ ಕಾಲದಲ್ಲಿ ಜನರು ನೆರೆದಾಗ್ಗೆ ಅವರ ಪಾದ ತಳದಲ್ಲಿ ರುಂ ರುಂ ಎಂದು ಬಂದೂ ತಿನ ಗುಂಡಿನ ಸಪ್ಪಳದಂತೆ ಸಪ್ಪಳವಾಗಲು ಅವರೆಲ್ಲ ಓಡಿ ಹೋಗ ಲಾಗಿ ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿ ನೀರು ನಿಂತು ಅದೊಂದು ಆಳವಾದ ಕೆರೆಯೇ ಆಯಿತು. ಆ ಸ್ಥಾನದಲ್ಲಿದ್ದ ಮರಗಳೆಲ್ಲ ಮುಳುಗಿ ಚಂಡಿಗಳು ಮಾತ್ರ ಕಾಣಿಸಹತ್ತಿದವು.

ಪಾಟಣಾದೊಳಗಿನ ಒಂದು ದರ್ಗಾದಲ್ಲಿ ಒಂದು ಹಸ್ತಲಿಖಿತ ಪುಸ್ತಕವು ದೊರೆತಿದ್ದು ಅದರಲ್ಲಿ ನೂರು ವರುಷಗಳ ಕೆಳಗೆ ಇದೇ ಪ್ರಕಾರದ ಭೂಕಂಪವು ನೇಪಾಳದಲ್ಲಾಯಿತೆಂದೂ ಮತ್ತು ಅದರ ಆಘಾತವು ಬಿಹಾರ ಪ್ರಾಂತಕ್ಕೆ ಬಲವಾಗಿ ತಗಲಿದುದಲ್ಲದೆ ಮದ್ರಾಸ ದವರೆಗುಂಟಾಯಿತೆಂದೂ ಬರೆದಿರುತ್ತದೆ. ದೈವಲೀಲೆಗೆ ಎಣೆಯಾರು?

ಕಾಶ್ಮೀರದಲ್ಲಿ ರಾಜಕೀಯ ಕಂಪ.

ಕಾಶ್ಮೀರ ಸಂಸ್ಥಾನದಲ್ಲಿ ಪುನಃ ಮುಸಲ್ಮಾನರು ಕೋಲಾಹಲ ವನ್ನು ಎಬ್ಬಿಸಿದ್ದಾರೆ. ಶ್ರೀ ನಗರದಲ್ಲಿಯ ಮುಸಲ್ಮಾನ್ ತರುಣ ಸಂಘದ ಅಧ್ಯಕ್ಷರಾದ ಮಿ. ಮಹಮ್ಮದ ಸಯ್ಯದ ಇವರನ್ನು ಬಂದಿ ಸಲಾಗಿದೆ. ಇನ್ನೂ ಮೂವರು ಮುಂದಾಳುಗಳನ್ನು ಕೈಸೆರೆ ಮಾಡಿ ರುವರೆಂದೂ ಮತ್ತು ಎಷ್ಟೋ ಜನರನ್ನು ಹಿಡಿಯಲು ವಾರಂಟು ಹೊರಟಿರುವದೆಂದೂ ತಿಳಿಯುತ್ತದೆ. ಶ್ರೀ ನಗರ ಪಟ್ಟಣದ ಶುಂಕದ ಕಟ್ಟಿಗಳ ಸ್ಥಾನದಲ್ಲಿ ಯುದ್ಧದ ಸೈನಿಕರಿಂದ ಕೂಡಿದ ಮೋಟಾರು ಗಾಡಿಗಳು ನಿಲ್ಲಿಸಲ್ಪಟ್ಟಿದ್ದು ಅಲ್ಲಲ್ಲಿ ಮ್ಯಾಜಿಸ್ಟ್ರೇಟರೂ ಸನ್ನಿಹಿತ ರಾಗಿದ್ದಾರೆ. ಶ್ರೀ ನಗರದ ನಗರಸೀಮೆಯಲ್ಲಿಯೂ ಮತ್ತು ಅನಂತನಾಗ ಪಟ್ಟಣದಲ್ಲಿಯೂ ಬಹಳೇ ಗದ್ದಲವುಂಟಾಗಿ ಅಪಾ ಯದ ಪ್ರಸಂಗವುಂಟಾಗಿದೆಯೆಂದು ಕಾಶ್ಮೀರದ ಮುಖ್ಯ ಪ್ರಧಾನರು ಪ್ರಕಟಪಡಿಸಿರುವರು. ಆ ಸ್ಥಳಗಳಲ್ಲಿ ೬ ತಿಂಗಳವರೆಗೆ ಹೆಚ್ಚಿಗೆ ಪೋಲೀಸರನ್ನಿಡಲು ಸಂಸ್ಥಾನಾಧಿಕಾರಿಗಳು ಅಪ್ಪಣೆ ಮಾಡಿದ್ದಾರೆ. ಮುಸಲ್ಮಾನರ ಒಂದು ಮೆರವಣಿಗೆಯನ್ನು ಪೋಲೀಸರು ತಡೆದುದ ರಿಂದ ಗದ್ದಲವುಂಟಾಗಿ ಎಷ್ಟೋ ಜನರನ್ನು ಬಂಧಿಸಲಾಯಿತು. ಅನಂತನಾಗ ಮತ್ತು ಬಾರಾಮೂಲಾ ಪಟ್ಟಣಗಳಲ್ಲಿ ಎಲ್ಲ ವ್ಯವಹಾರವು ನಿಲ್ಲಿಸಲ್ಪಟ್ಟಿದೆ. ಹಿಂದುಸ್ಥಾನಕ್ಕೆ ಇಮೊಂದು ಕಾಪನವೂ ಏಕೆ ಬೇಡ!

ಗವ್ಹರ್ನರ ಅಧಿಕಾರದ ಸುಗ್ಗಿ.

ನ್ಯಾಯಾಸನಾಯರಾದ ಲಾರ್ಡ ವಿಲಿಂಗ್ಡನ್ನರು ರಜೆಯಮೇಲೆ ಹೋಗುವುದರಿಂದೂ ಅವರ ಸ್ಥಾನಕ್ಕೆ ಮದ್ರಾಸ ಗವ್ಹರ್ನರರು ಬರುವ ರೆಂದೂ ಹಾಗು ತೆರವಾದ ಅವರ ಸ್ಥಾನಕ್ಕೆ ಶ್ರೀ ಉಸ್ಮಾನರು ಗವ್ಹ ರ್ನರರಾಗುವರೆಂದೂ ಪ್ರಕಟವಾಗಿದೆಯಷ್ಟೆ. ಹಾಗೆಯೇ ಬಂಗಾಲ ಇಲಾಖೆಯ ಗವ್ಹರ್ನರರಾದ ಸರ್. ಜಾನ್ ಅ್ಯಂಡರಸನ್ ಇವರು ಎಪ್ರಿಲದಲ್ಲಿ ರಜೆಯಮೇಲೆ ಹೋಗುವವರಿದ್ದು ಅವರ ಸ್ಥಾನಕ್ಕೆ ಬಂಗಾಲ ಸರ್ಕಾರದ ಕಾರ್ಯಕಾರಿ ಸಭೆಯ ಸದಸ್ಯರಾದ ಸರ್. ಪಿ. ಸಿ. ಮಿತ್ರ ಇವರು ಗವ್ಹರ್ನರರಾಗಿ ಬರುವುದೊಂದು ಬಲವಾದ ಸುದ್ದಿ ಇದೆ. ಇದಲ್ಲದೆ ಪಂಜಾಬದ ಗವ್ಹರ್ನರರಾದ ಸರ್ ಹರ್ಬರ್ಟ್ ಇಮರ್ಸನ್ ಇವರ, ಲೇಡಿ ಇಮರ್ಸನ್ ಇವರಿಗೆ ಪ್ರಕೃತಿ ಸ್ವಾಸ್ಥ್ಯ ವಿಲ್ಲದ ಮೂಲಕ ರಜೆಯಮೇಲೆ ಹೋಗುವವರಿದ್ದು ಅವರ ಸ್ಥಾನದಲ್ಲಿ ಪಂಜಾಬ ಸರ್ಕಾರದ ರೆವೆನ್ಯೂ ಮಂತ್ರಿಗಳಾದ ಸರ್. ಶಿಕಂದರಹಯಾ ಖಾನ್ ಇವರು ತಾತ್ಕಾಲಿಕ ಗವ್ಹರ್ನರರಾಗುವರೆಂಬ ಸುದ್ದಿ ಇದೆ.

ನೋಡಬೇಕು ಈ ಸುಗ್ಗಿಯು ಎವ್ವಂಮಟ್ಟಿಗ ಫಲಿಸುವದೊ!

ಪುಣೆಯು ಸುಧಾರಕರ ಪಟ್ಟಣವೇ?

ಮಹಾರಾಷ್ಟ್ರದ ಕೇಂದ್ರ ಪಟ್ಟಣವಾದ ಪುಣೆ ಪಟ್ಟಣವು ಸುಧಾರಕರ ಆಗರವೆಂದೆನಿಸಿಕೊಳ್ಳುತ್ತಿದೆ. ಕಳೆದ ೧೯ನೆಯ ತಾರೀಖಿನ ಕೇಸರಿಯಲ್ಲಿ ಒಬ್ಬ ಮರಾಠಿ ಪ್ರವಾಸಿಯು "ನನ್ನ ಮೈಸೂರಿನ ಪ್ರವಾಸ" ಎಂಬ ತಲೆಬರಹದ ಕೆಳಗೆ ಕರ್ನಾಟಕದಲ್ಲಿ ಲಿಂಗಾಯತರು ಯಾವಾಗಲೂ ವಿಭೂತಿಯನ್ನು ಧರಿಸಿರುತ್ತಾ ರೆಂದೂ ಮತ್ತು ಸ್ಮಾರ್ತ ಬ್ರಾಹ್ಮಣರು ಅಡ್ಡ ಗಂಧವನ್ನು ಧರಿಸಿ ರುವರೆಂದೂ ಆದರೆ ಮಹಾರಾಷ್ಟ್ರದಲ್ಲಿ ಇವೆಲ್ಲ ಧಾರ್ಮಿಕ ಚಿಹ್ನೆಗಳು ಲೋಪವಾಗುತ್ತ ಬಂದಿರುವವೆಂದೂ ತಮ್ಮ ಆಧುನಿಕ ಸುಧಾರಣೆಯ ಪ್ರೌಢಿಮೆಯನ್ನು ಹೇಳಿಕೊಂಡಿರುವನು. ಆದರೆ ಮರಾಟಿಗರು ಈ ಹೊಸ ಸುಧಾರಣೆಯನ್ನು ಎಷ್ಟರಮಟ್ಟಿಗೆ ಅವಲಂಬಿಸಿರುವರು? ಯಾಕಂದರೆ ಈಗೀಗ ಪುಣೆ ಪಟ್ಟಣದಲ್ಲಿ ಪ್ರತಿದಿವಸ ಸನಾತನಿಗಳ ಸಭೆ ಜರುಗಿ ಮಹಾತ್ಮಾಜಿಯವರ ಅದಿ ಜನ ಕಾರ್ಯವನ್ನು ನಿಷೇಧಿಸುವ ಗೊತ್ತುವಳಿಗಳಾಗುತ್ತಿರುವವಲ್ಲ! ಈ ಸನಾತನಿಗಳು ಹೇಳುವದೇನಂದರೆ ಗಾಂಧೀಜಿಯವರು ಅಸ್ಪೃಶ್ಯ ರನ್ನು ಉದ್ಧಾರಮಾಡುವ ಕಾರ್ಯವನ್ನು ಕೈಕೊಂಡೊಡನೆಯೆ ಪಂಚಮಹಾಭೂತಗಳು ಕೋಪಿಸಿಕೊಂಡು ಅನೇಕ ಉತ್ಪಾತಗಳು ದೇಶದಲ್ಲಾಗಹತ್ತಿವೆಯಂತೆ. ಕಳೆದ ತಿಂಗಳು ೯ನೆಯ ತಾರೀ ಖಿನ ದಿವಸ ನಡೆದ ಸನಾತನಿಗಳ ಸಭೆಯಲ್ಲಿ ಶ್ರೀ. ಬಾಳ ಶಾಸ್ತ್ರಿ ಉಪಾಸನಿ ಎಂಬ ಮಹಾಶಯರು ಮಹಾತ್ಮಾಜಿಯವರು ಕಲಿಯ ಮೂರ್ತಿಯೆಂದು ಹೇಳಿ ಅವರ ಕಾರ್ಯವನ್ನು ನಿಷೇಧಿಸಿದರು. ಇದೆಂಥ ವಿಪರೀತ. ಶ್ರೀ ವಿಷ್ಣುವಿನ ೧೦ನೆಯ ಅವತಾರವಾದ ಕಲಿಯೇ ಮಹಾತ್ಮಾಜಿಯವರೆಂದು ಇವರು ಒಡಂಬಡುವದಾದರೆ ಆ ಪರಮಾತ್ಮನು ಕೈಕೊಂಡ ಕಾರ್ಯವು ಎಷ್ಟೋಚಿತವೆಂದು ಇವರು ನಂಬಬಾರದೇಕೆ? ಅಂದಮೇಲೆ ಪುಣೆಯು ಸುಧಾರಕರ ಪಟ್ಟಣವೇ ಅಥವಾ ಸನಾತನಿಗಳ ಪಟ್ಟಣವೇ?

ಹೇರ ಹಿಟ್ಲರರ ಹೇಳಿಕೆ.

ಕಳೆದ ತಿಂಗಳ ೩೦ನೆಯ ತಾರೀಖಿನ ದಿವಸ ನಾಝಿ ಪಕ್ಷವು ಅಧಿಕಾರಾರೂಢನಾಗಿ ಒಂದು ವರುಷವಾದುದರಿಂದ ಅತ್ಯಂತ ಸಮಾರಂಭದಿಂದ ಅವರ ವಾರ್ಷಿಕೋತ್ಸವವು ಜರುಗಿತು. ಆ ಕಾಲಕ್ಕೆ ಜರ್ಮನಿಯ ಚಾನ್ಸೆಲರರಾದ ಹೇರ ಹಿಟ್ಲರರು ತಮ್ಮ ಮನೀಷೆಗಳನ್ನು ಬೆರಳು ಕಚ್ಚುವಂತೆ ಪ್ರಕಟಪಡಿಸಿದರು. ಆ ಕಾಲಕ್ಕೆ ನ್ಯಾಯ ಸಭೆಗಳ ಮೇಲೆ ಧ್ವಜಗಳನ್ನು ಏರಿಸಿದ್ದರು. ಮತ್ತು ಹಿಟ್ಲರರವರ ಭಾಷಣ ಕೇಳಲು ಲಕ್ಷಾವಧಿ ಜನರು ನೆರೆ ದಿದ್ದರು. ಹಿಟ್ಲರರವರು ಹೇಳಿದುದೇನೆಂದರೆ—"ಪೂರ್ವದ ಜರ್ಮ ನಿಯ ಪ್ರಶಸ್ತ ರಾಜಸತ್ತೆಯನ್ನು ಪುನಃ ಸ್ಥಾಪಿಸುವದು ನಮ್ಮ ನಾಝಿ ಪಕ್ಷದ ಉದ್ದೇಶವಿಲ್ಲ. (ಚಪ್ಪಾಳೆ) ಜರ್ಮನ್ ರಾಷ್ಟ್ರದ ಮುಂದಾ ಳುತನವು ಯಾರ ಕಡೆಗಿರಬೇಕೆಂಬುದನ್ನು ಜರ್ಮನ್ ಜನರೇ ನಿರ್ಣಯಿಸಬೇಕಾಗಿದೆ. (ಚಪ್ಪಾಳೆ) ನಾವು ಉಳಿದ ರಾಷ್ಟ್ರಗಳ ಸಂಗಡ ವೈರತ್ವ ಬೆಳೆಸುವದಿಲ್ಲ. ತೆರಿಗೆಯ ವಿಷಯವಾಗಿ ಫ್ರಾನ್ಸಿನ ಸಂಗಡ ನಮ್ಮ ಜಗಳವಿರುತ್ತದೆ. ಆದು ಕೊನೆಗಂಡಿತೆಂದರೆ ಲೋಕೊರ್ನೋ ಒಪ್ಪಂದವನ್ನು ನಾವು ಮನ್ನಿಸುವೆವು. (ಚಪ್ಪಾಳೆ) ಆಸ್ಟ್ರಿಯಾ ದೇಶವು ನಾಝಿ ಮತದ ವಿರುದ್ಧವಾಗಿ ಹೋರಾಡುತ್ತದೆ. ಅದರ ಪರಿಣಾಮವನ್ನು ಆಸ್ಟ್ರಿಯಾ ದೇಶವು ಭೋಗಿಸ ಬೇಕಾಗುವದು. ಆದರೆ ಅದರಲ್ಲಿ ನಾವು ಕೈಹಾಕಲಿಚ್ಛಿಸುವದಿಲ್ಲ. (ಚಪ್ಪಾಳೆ) ಆಸ್ಟ್ರಿಯಾದ ಮೇಲೆ ಜರ್ಮನಿಯು ಏರಿ ಹೋಗುವ ವಿಚಾರವು ಎಂದೂ ಇದ್ದಿಲ್ಲ. ಮತ್ತು ಇರುವುದಿಲ್ಲ. (ಚಪ್ಪಾಳೆ.)

ವೀರಶೈವ ಏಕೀಕರಣದ ವಾದಭೂಮಿ.

ಶಿವಾನುಭವ ಕೇಸರಿಯ ಸಂದೇಹ.

ಕಳೆದ ೯ನೆಯ ತಾರೀಖಿನ "ಬಸವರಾಜ" ಪತ್ರಿಕೆಯಲ್ಲಿ ಶ್ರೀ ಜೀರಿಗೆ ಬಸವಲಿಂಗಪ್ಪನವರು ಶರಣಸಂದೇಶಕಾರರ ಲೇಖನದ ಮೇಲೆ ಆಕ್ಷೇಪ ತೆಗೆದುಕೊಂಡಿದ್ದಾರೆ. ಅಸ್ಪೃಶ್ಯತೆಯನ್ನು ಬಸವಣ್ಣನವರು ಯಾವ ರೀತಿಯಿಂದ ನಿವಾರಣೆ ಮಾಡಿದರು, ಗಾಂಧೀಜಿಯವರು ಯಾವ ಪ್ರಕಾರ ನಿವಾರಣೆ ಮಾಡುತ್ತಿರುತ್ತಾರೆ, ಅವರಿಬ್ಬರೂ ಒಂದೇ ರೀತಿಯಾಗಿ ನಿವಾರಣೆ ಮಾಡಿದರೆಂಬುದು ಎಷ್ಟು ಶಕ್ಯಾಗುತ್ತದೆಂಬುದನ್ನು, ಶರಣಸಂದೇಶಕಾರರು ವಿವೇಚಿಸಿದರೆ ನಮ್ಮ ಶಿವಾನುಭವ ಹಿರೇಹುದ್ದಿರಿಗಳು "ಬಸವಣ್ಣನವರು ಅಸ್ಪೃಶ್ಯತಾ ನಿವಾರಣೆ ಮಾಡಲಿಲ್ಲವೆಂದು ಶರಣಸಂದೇಶ ಸಂಪಾದಕರು ಹೇಳಿರುವದಕ್ಕೆ ನಾನು ಭಿನ್ನಾಭಿಪ್ರಾಯ ಪಡುತ್ತೇನೆ" ಎಂದಿರುವರು. ಇವರಿಗೆ ನನ್ನ ಕೆಲವು ವಿಚಾರಗಳನ್ನು ಬಿನ್ನವಿಸಿಕೊಳ್ಳುತ್ತೇನೆ. ಬಸವಣ್ಣನವರು ಅಸ್ಪೃಶ್ಯತೆಯನ್ನು ತೊಡೆದು ಹಾಕಿದರು. ಹೇಗೆ? ಶಿವಸಂಸ್ಕಾರದಿಂದ. ಗಾಂಧೀಜಿಯವರು ಯಾವ ಸಂಸ್ಕಾರದಿಂದ ತೊಡೆಯುವರು? ಅವರಿಗೆ ಯಾವ ಸಂಸ್ಕಾರವೂ ಅವಶ್ಯವಿಲ್ಲ. ಮನುಷ್ಯರಾದ ಮಾತ್ರದಿಂದಲೇ ಮುಟ್ಟಬೇಕೆನ್ನುತ್ತಾರೆ. ಶಿವಸಂಸ್ಕಾರವಾಗದವರನ್ನು ಬಸವಣ್ಣನವರು ಮುಟ್ಟಿಸಿಕೊಳ್ಳುತ್ತಿದ್ದಿಲ್ಲವೇ ಹೇಗೆ? ಮುಟ್ಟಿಸಿಕೊಳ್ಳುತ್ತಿದ್ದರು. ಹಾಗಾದರೆ ಮತ್ತೇನು? ಯಾವನಾದರೂ ವೀರಶೈವ ವ್ರತಸ್ಥನು ಶಿವ ಸಂಸ್ಕಾರವಾಗದ ಯಾರನ್ನೂ ಮುಟ್ಟಿಸಿಕೊಳ್ಳುವದಿಲ್ಲವೆನ್ನುತ್ತಾನೆ. ಅವನು ಭವಿಯನ್ನು ಮುಟ್ಟುವದರಲಿ ನೋಡುವದು ಸಹ ತನ್ನ ಧರ್ಮವ್ರತದ ಹಾನಿ ಎನ್ನುತ್ತಾನೆ. ಈ ಮಾತು ಬಸವಣ್ಣನವರಿಗೆ ಒಪ್ಪಿಗೆ ಇದ್ದಿತೆ? ಈ ವಿಷಯವಾಗಿ ವೀರಶೈವ ತತ್ವವೇನೆನ್ನುತ್ತದೆ? ಪರಮಪೂಜ್ಯ ಶ್ರೀ ಜಗದ್ಗುರುಗಳು ಧಾರವಾಡದಲ್ಲಿ ಏನು ಅಪ್ಪಣೆ ಕೊಡಿಸಿರುತ್ತಾರೆ? ಆಗಬಹುದು. ಭವಿಗಳಾರನ್ನೂ ಮುಟ್ಟದಿದ್ದರೆ ಬಿಡಬಹುದು. ಎಂದು ಅಪ್ಪಣೆ ಕೊಡಿಸಿರುತ್ತಾರೆ. ಇಂಥ ಪ್ರಸಂಗದಲ್ಲಿ ಗಾಂಧೀಜಿಯವರೇನರಿದಾರು? (The present movement is one of self purification, penance and reparation by the Savarna Hindus)

'Harijan' 2nd Feb. 1934.

ಯಾವ ಮಾನ್ಯನ ಪ್ರಾಣಗಾದರೂ ಧರ್ಮದ ಹೆಸರಿನಿಂದ ಮುಟ್ಟೇ ಎನ್ನುವದೇ ಪಾಪ. ಆ ಪಾಪ ಕಳೆದುಕೊಳ್ಳಲಿಕ್ಕೆ ಈಗ ನಾವಾಗಿಯೇ ಅವರನ್ನು ಮುಟ್ಟಬೇಕು. ಈ ಮೇರೆಗೆ ಅನ್ನುವರಲ್ಲವೇ! ಈ ಉಭಯತ್ರರ ಕಾರ್ಯಗಳ ಅಂತರವು ಈಗ ಸ್ಪಷ್ಟವಾಗಿ ತೋರಬಹುದೆಂದು ಅನಿಸುತ್ತದೆ. ಇನ್ನು ಕಂಡಕಂಡವರಿಗೆ ಲಿಂಗಧಾರಣೆಯೆಂದರೇನು? ನೀವು ಶುದ್ಧಾಚಾರ ನೋಡಿ ಲಿಂಗಧಾರಣೆ ಮಾಡಬೇಕೆನ್ನುತ್ತೀರಾ ಅಥವಾ ಲಿಂಗಧಾರಣೆ ಮಾಡಿ ಶುದ್ಧಾಚಾರಿಗಳನ್ನಾಗಿ ಮಾಡಬೇಕೆನ್ನುತ್ತೀರಾ? 'ಆಚಾರಶೀಲರನ್ನಾಗಿ ಮಾಡಿ ಲಿಂಗಧಾರಣೆ ಮಾಡಿಸಿದರೆ' ಮತ್ತು "ಕಂಡಕಂಡವರಿಗೆ ಲಿಂಗಧಾರಣ ಮಾಡಿ ಅವರನ್ನು ಶುದ್ಧಾಚಾರ ಸಂಪನ್ನರನ್ನಾಗಿ ಮಾಡಿ ಅವರನ್ನು ಮೇಲಕ್ಕೆತ್ತಿದ್ದೇ ಬಸವಣ್ಣನವರ ಶ್ರೇಷ್ಠ ಕಾರ್ಯ" ಹೀಗೆ ನೀವು ಎರಡೂ ಪಕ್ಷವನ್ನು ಬರೆದಿರುವಿರಿ. ಕಂಡಕಂಡವರೆಂದರೆ ಶುದ್ಧಾಚಾರವಿಲ್ಲದವರು; ಬಲಾತ್ಕಾರದಿಂದ ಬಂದವರು ಎಂದು ನನಗೆ ತಿಳಿಯುತ್ತದೆ. ನೀವು ಕಂಡಕಂಡವರೆಂದರೆ ಬೇಕಾದ ಜಾತಿಯವರೆಂದು ಅರ್ಥಮಾಡಿಕೊಳ್ಳುತ್ತೀರಿ. ನಾವೂ ಅನ್ನುತ್ತೇವಲ್ಲ, ಬೇಕಾದ ಜಾತಿಯವನಿರಲಿ, ಆದರೆ ಆಚಾರ ಮಾತ್ರ ಶುದ್ಧವಿರಬೇಕು.

ಪಾಟೀಲ ಲಿಂಗನಗೌಡ.

ಸಮಾಚಾರ ಸಂಗ್ರಹ.

—ಚಿತಗಾಂಗಿನಲ್ಲಿ ಸಿಡಿಮದ್ದಿನ ಅಪರಾಧದಿಂದ ಕೈಸೆರೆ ಮಾಡಲ್ಪಟ್ಟ ಹರೇಂದ್ರ ಚಕ್ರವರ್ತಿ ಮತ್ತು ಕೃಷ್ಣ ಚೌಧರಿ ಇವರಿಬ್ಬರಿಗೆ ದೇಹಾಂತ ಶಾಸನವು ವಿಧಿಸಲ್ಪಟ್ಟಿತು.

—ಪುನಃ ರಾಜದ್ರೋಹಕ್ಕೆ ಧಾರಣ ಮಾಡಿಕೊಡದಂದು ಡಾ. ಅಲಮ್ ಇವರಿಂದ ವಚನ ತೆಗೆದುಕೊಂಡು [illegible] ಕೋರ್ಟಿನವರು ಅವರ ಪ್ರಾಣವು ಕೊಟ್ಟರು.

—ಮ್ಯಾಟ್ರಿಕ್ ಪರೀಕ್ಷೆಯ ವಿಷಯದಲ್ಲಿ [illegible] ಮಾಡಲು ಮುಂಬಯಿ ವಿಶ್ವವಿದ್ಯಾಲಯದವರು ಒಂದು ಸಮಿತಿಯನ್ನು ಏರ್ಪಾಟುಮಾಡಿದ್ದಾರೆ.

—ಶ್ರೀ ಕಾಕಾ ಕಾಲೇಲಕರ ಇವರನ್ನು ಬಿಟ್ಟು ಬಿಟ್ಟರು. ಅವರ ಸಂಗಡವೇ ಬಂಧಿಸಲ್ಪಟ್ಟವರಿಗೆ ಆರಾರು ತಿಂಗಳ ಕಠಿಣ ಶಿಕ್ಷೆಯಾಯಿತು.

—ಚೀನದಲ್ಲಿ ಹೂಆಂಗಹೂ ಎಂಬ ನದಿಗೆ ಮಹಾಪೂರ ಬಂದು ೧೧ ಸಾವಿರ ಜನರು ಜಲಸಮಾಧಿಯನ್ನು ಹೊಂದಿದರು.

—ಪುಣೆಯ ಚಿತ್ರಶಾಲಾ ಪ್ರೆಸ್ಸಿನಲ್ಲಿ ಮುದ್ರಿತವಾಗುವ "ಸ್ಫೂರ್ತಿ" ಎಂಬ ಮರಾಠಿ ಮಾಸಪತ್ರಿಕೆಗಾಗಿ ಸರಕಾರದಲ್ಲಿ ಹೋಗಿಯಾಗಿಟ್ಟಿದ್ದ ೨೦೦೦ ರೂಪಾಯಿಗಳನ್ನು ಆಕ್ಷೇಪಾರ್ಹ ಲೇಖನ ಬರೆದುದಕ್ಕಾಗಿ ಸ್ವಾಧೀನಪಡಿಸಿಕೊಂಡರು.

—ಮಹಾತ್ಮಾಜಿಯವರು ತಮ್ಮ ಆಶ್ರಮದ ಅನುಯಾಯಿಗಳಿಗೆ ನೈಯಕ್ತಿಕ ಶಾಸನಭಂಗದ ಮಾರ್ಗವನ್ನು ಬಿಟ್ಟು ಭೂಕಂಪ ಪೀಡಿತರಿಗೆ ಸಹಾಯಮಾಡಿರೆಂದು ಉಪದೇಶಿಸಿರುವರು.

—ಮಹಾತ್ಮಾಜಿಯವರು ಕುನ್ನೂರಿನಲ್ಲಿ ೮ ದಿವಸ ವಿಶ್ರಾಂತಿ ತೆಗೆದುಕೊಂಡು ಅಲ್ಲಿಯ ನಾತಾರ ಮತ್ತು ಆದಿಜನರಲ್ಲಿ ಸಂವಾಗುವಂತೆ ಪ್ರಯತ್ನಿಸುತ್ತಿದ್ದಾರೆ.

ವಿಜಯಕ್ಕೆ ಭೇಕಾಗಿದೆ

ದಿ ಸ್ವರಾಜ್ಯ ಬ್ಯಾಂಕಿಂಗ್ ಎಂಡ್ ಇನ್ವೆಸ್ಟ್‌ಮೆಂಟ್ ಕಂ. ಲಿಮಿಟೆಡ್,

ಧಾರವಾಡ,

ಇವರು ಹೊಸ ವ್ಯಾಪಾರಿಯ ಜನನ, ಮದುವೆ, ಮತ್ತು ಮರಣ ವಿಮೆಗಳನ್ನು ಸುರುವು ಮಾಡಿದ್ದಾರೆ. ಕರ್ನಾಟಕದ ಯಾವತ್ತೂ ಭಾಗಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಉತ್ಸುಕತೆಯಿಂದ ಕೆಲಸ ಮಾಡತಕ್ಕವರು ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿಕೊಳ್ಳಬಹುದು.

ಮ್ಯಾನೇಜಿಂಗ್ ಏಜಂಟ್.

ಅಷ್ಟಾವರಣಗಳ ಬಗ್ಗೆ ಪದ್ಯಗಳು.

[ಕಳಿಸಿದವರು- ಅಷ್ಟಾವಧಾನಯ್ಯ ಹಿರೇಮಠ ಶಾಲಾ ಹೆ. ಮಾಸ್ತರ ಇಳ್ಕಲ್ಲಾಗಿ.]

[ಕಂದ]

ಗುರುವಿನ ಕೃಪಾಕಟಾಕ್ಷಂ |
ನರಕಾವಗೆದೊರೆವುದವನಕಷ್ಟಗಳಳಿಗುಂ ||
ಹರಿನ್ವುದು ಭವಬಂಧನ ತಾಂ |
ದೊರೆವುದು ವರಮೋಕ್ಷಸುಖವು ಗುರುಸೇವೆಯೊಳುಂ ॥ ೧ ॥

ಪ್ರತಿನಿತ್ಯ ಲಿಂಗಪೂಜಪ |
ನತಿಭಕ್ತಿಯೊಳವನೆ ವೀರಶೈವಂ ಜಗದೋಳ್ ||
ಸತಿತಾನು ಲಿಂಗಪತಿಯೆಂ |
ಬತಿಮತಿಯುತನಂತ್ಯದಲ್ಲಿ ಲಿಂಗದೆ ಬೆರೆವಂ ॥ ೨ ॥

ಜಂಗಮವ ಪೂಜಿಸೇವೆಯೊ |
ಳಂಗವನುರೆ ಭಕ್ತಿಯಿಂದೆ ಸವಿಸುವ ಮನುಜಂ ||
ಭಂಗಿತನಾಗಲು ಜಗದೊಳು |
ಮಂಗಲಕರನಾದ ಮುಪ್ಪುರಾರಿಯ ಬೆರೆವಂ ॥ ೩ ॥

ಗುರುಲಿಂಗ ಜಂಗಮದ ಪರ |
ತರ ಪಾದೋದಕವು ಶುದ್ಧತೆಯಂ ಕೊಡುಗುಂ ||
ವರತೇಜವ ಕೊಡುತಿಹುದದು |
ನರದೇಹವ ಕಳೆದು ನಿತ್ಯಸುಖ ಕೊಡುತಿಹುದೈ ॥ ೪ ॥

ಪ್ರಾಣದುಳವು ಪ್ರಸಾದದಿ |
ಜ್ಞಾನವೆ ಭುಂಜಿಸುವನ್ನ ವೀಶಪ್ರಸಾದಂ ||
ಕಾಣಾತೆ ಗುರುಪ್ರಸಾದವ |
ಮಾಣದೆ ಸೇವಿಸಲು ಪೋಗುವದು ಭವರೋಗಂ ॥ ೫ ॥

ಭಸಿತದೆ ಭಾಗ್ಯವು ದೊರೆವುದು |
ಭಸಿತದೆ ಭೂತಾದಿ ಕಾಟ ಬಿಟ್ಟೋಡುವುದೈ ||
ಭಸಿತದೆ ಶುದ್ಧತೆ ಬರ್ಪುದು |
ಭಸಿತವ ನವನರತ ಧರಿಪ ನರನೇ ಧನ್ಯಂ ॥ ೬ ॥

ಶಿವಪ್ರೀತಿಕರ ಭಸಿತವು |
ಅವನಿಯೊಳಿಷ್ಟಾರ್ಥಮೊದಗಿಸುವದೀ ಭಸಿತಂ ||
ಭವಬಾಧೆ ಕಳೆದು ಭಸಿತವು |
ಜವನವರನ್ನೋಡಿಸುತ್ತೆ ನೋಕ್ಷವ ಕೊಡುಗುಂ ॥ ೭ ॥

ರುದ್ರಾಕ್ಷಿ ಮಹಿಮೆಯಗಣಿತ |
ರುದ್ರಂ ತ್ರಿಪುರವನು ನಾಶಿಪಾಸಮಯದೊಳುಂ ||
ಭದ್ರಕರಮೆನಿಸಿ ಪುಟ್ಟಿದ |
ರುದ್ರಾಕ್ಷಿಯ ನೊಂದನಾದರನುದಿನ ಧರಿಸೈ ॥ ೮ ॥

ಜ್ವರಪೀಡೆಯ ನೀಕಾಕ್ಷಿಯು |
ಪರಿಹರಿಸುತೆ ಮನಕೆ ಶಾಂತಿಸುಖಮಂ ಕೊಡುಗುಂ ||
ಧರಿಸಲು ಬೇಡನು ಶುನಕಗೆ |
ವರಮೋಕ್ಷವ ಪೊಂದಿಸಿದು ಶಿವಾಕ್ಷಿಯ ಮಹಿಮಂ ॥ ೯ ॥

ಗುರುವರ ತಿಳಿಸಿದ ಮಂತ್ರವ |
ನರ ತಾನೆಡೆವಿಡದೆ ಜಪಿಸೆ ಗುಪಿತದೊಳದರಿಂ ||
ವರ ಫಲದೊರೆವುದು ಸತ್ಯವು |
ಧರೆಯೋಳ್ ಕೂಗಲ್ಕೆ ಮಂತ್ರಮಹಿಮೆಯದಳಿಗುಂ ॥ ೧೦ ॥

ಮಂತ್ರ ಲಕ್ಷನೆಂಬನುತಾ |
ಮಂತ್ರದ ಮಹಿಮೆಯೊಳು ಪುಣ್ಯಭವನೇರುತ್ತಂ ||
ಮಂತ್ರಮಯನೊಡನೆ ಬಿಡದಾ |
ಮಂತ್ರವ ಜಪಿಸುತ್ತೆ ರಜತಗಿರಿಯನು ಸಾರ್ದಂ ॥ ೧೧ ॥

[ಶಿವಸ್ತುತಿ ಕಂದ]

ಹರನಂಶಂಕರನಂ ಪುರ |
ಹರನಂ ವರವೀರಭದ್ರ ಪಿತನಂ ಯಮಸಂ ||
ಹರನಂ ಹರಿಸುಳುಮಾರನ |
ಹರನಂ ಶಿತಿಕಂಠನಂ ಸದಾಜ್ಯಾನಿಪೆನಾಂ ॥ ೧೨ ॥

ನನ್ನ ಸಮಾಜ ಸ್ಥಿತಿಯ ವಿವರಣೆ.

—(೬ ನೆಯ ಪುಟದಿಂದ ಬಂದಿದೆ.)—

ಎಂದು ಕೈಲಾಗದ ಹೇಡಿಗಳಂತೆ ಮಾತ್ರ ಸುಮ್ಮನಿರುವಿರಿ. ಪ್ರತಿಯೊಂದು ಧರ್ಮದವರು ತಮ್ಮ ತಮ್ಮ ಧರ್ಮದಲ್ಲಿ ತಕ್ಕ ಸುಧಾರಣೆಯನ್ನು ಮಾಡಹತ್ತಿರುವದನ್ನು ನೋಡುವದಿಲ್ಲವೇ? ಗುರುವರ್ಗದವರು ವಿರಕ್ತರು ಬಡೆದಾಡಹತ್ತಿ ೧೫-೨೦ ವರುಷಗಳಾಗುತ್ತ ಬಂದರೂ ಯಾವದೂ ನಿರ್ಣಯವಾಗಲೊಲ್ಲದು. ಈ ಜಗಳಗಳು ನನ್ನ ಸಮಾಜದ ಕಂಟಕ ದೂರು ಮಾಡುವದರ ಸಲುವಾಗಿಯೇ ಹುಟ್ಟಿದಂತೆ ಕಾಣುತ್ತಿದೆ.

ನನ್ನ ಸಮಾಜದಲ್ಲಿಯ ಇಂಗ್ಲೀಷ ಮತ್ತು ಸಂಸ್ಕೃತ ಬಲ್ಲ ಎಷ್ಟೋ ಸುಶಿಕ್ಷಿತ ತರುಣರು ನಿರುದ್ಯೋಗಿಗಳಾಗಿರುವರಲ್ಲವೇ? ಅವರು ವೀರಶೈವರ ಶಾಸ್ತ್ರ ಪುರಾಣಗಳನ್ನು ಕಲಿತು ಧಾರ್ಮಿಕರಿಗೆ ಬೇಕಾದ ಯಾವದೇ ಧರ್ಮಕಾರ್ಯವನ್ನು ವಿಧಿಪೂರ್ವಕ ಮಾಡಲು ಬರುವದಿಲ್ಲವೇ? ಈ ಮಹತ್ವದ ಕಾರ್ಯವನ್ನು ಸುಶಿಕ್ಷಿತರು ಕೈಕೊಂಡರೆ ಜನರಿಗೆ ನಿಜವಾದ ಧರ್ಮದ ಗುಟ್ಟು ಗೊತ್ತಾಗುವದರಲ್ಲೇನೂ ಸಂದೇಹವಿಲ್ಲ. ಅಲ್ಲಲ್ಲಿಯ ಮಠ ಗುಡಿಗಳ ಉತ್ಪನ್ನವನ್ನು ಸಾರ್ವಜನಿಕ ಮಾಡಿ, ಪ್ರಮುಖ ಮತ್ತು ನಿಸ್ವಾರ್ಥತ್ಯಾಗಿಗಳ ಜನರದೊಂದು ಕಮಿಟಿಯನ್ನೇರ್ಪಡಿಸಿ ಆ ಕಮಿಟಿಯ ಪರವಾಗಿ ಧರ್ಮೋನ್ನತಿಯ ಕಾರ್ಯಗಳಾಗುವದುಚಿತವು. ಸಾರ್ವಜನಿಕವಾಗದ ಮಠ ಗುಡಿಗಳಿಗೆ ಇನ್ನು ಮುಂದೆ ಯಾವದೇ ತರದ ಸಹಾಯ ಮಾಡದೇ ಇರುವದು ಉತ್ತಮವಾದ ಮಾರ್ಗವು. ಶಕ್ಯವಿದ್ದಮಟ್ಟಿಗೆ ಈಗಿದ್ದ ಮಠ ಗುಡಿಗಳ ಉತ್ಪನ್ನಗಳನ್ನು ಸಾರ್ವಜನಿಕ ಮಾಡಿಕೊಳ್ಳಬೇಕು. ಹೀಗೆ ಮಾಡುವದರಿಂದ ಸಮಾಜದಲ್ಲಿ ನಿಜವಾದ ಧರ್ಮದ ಪ್ರಕಾಶವು ಬೀಳಹತ್ತಿ ನನ್ನ ಸಮಾಜವು ಮುಂದುವರಿವ ಸಮಾಜಗಳನ್ನು ಕೂಡುವದರಲ್ಲೇನೂ ಸಂದೇಹವಿಲ್ಲ. ಬ್ರಾಹ್ಮಣರ ಧಾರ್ಮಿಕ ಜುಲುಮೆಗೆ ಬೇಸತ್ತು ಹ್ಯಾಗೆ ಮರಾಠಾ ಜನರು ಸತ್ಯ ಸಮಾಜದ ಚಳವಳಿಯನ್ನೆಬ್ಬಿಸಿ, ಮರಾಠರಿಗೆ ನಿಜವಾದ ಧರ್ಮದ ಗುಟ್ಟನ್ನು ತಿಳಿಸಿದರೋ, ಹಾಗೆ ನನ್ನ ಸಮಾಜದಲ್ಲಿ ಸತ್ಯ ಸಮಾಜದ ಅವಶ್ಯಕತೆಯು ಬಹಳುಂಟು. ಹೀಗೆ ಆಗದ ವಿನಾ ನನ್ನ ಸಮಾಜಕ್ಕೆ ಕರುಣೋಪಾಯವಿಲ್ಲ.

—ಹಿಂದು ವಿಧವೆಯರಿಗೆ ತಮ್ಮ ಪತಿಯ ಆಸ್ತಿಯ ಮೇಲೆ ಅಧಿಕಾರವಿರಬೇಕೆಂಬ ಗೊತ್ತುವಳಿಯು ಕೇಂದ್ರ ಶಾಸನ ಸಭೆಯಲ್ಲಿ ಬಂದಿದ್ದು ಮುಂಬಯಿ ಪ್ರಾಂತದ ಹೊರ್ತಾಗಿ ಎಲ್ಲ ಪ್ರಾಂತಗಳೂ ಸಮ್ಮತಿಸಿವೆ.

—ತನ್ನಂಬಾಡಿಯ ಉದ್ಯಾನ ವನವನ್ನು ಇನ್ನು ಮುಂದೆ 'ಬೃಂದಾವನ' ಎಂಬುದಾಗಿ ಕರೆಯಬೇಕೆಂದು ಮೈಸೂರು ಸರಕಾರದವರು ಆಜ್ಞೆ ಮಾಡಿದ್ದಾರೆ.

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! **ಮಹತ್ವದ ಪುಸ್ತಕ!!**

ಖಾದೀ ಶಾಸ್ತ್ರ.

ಲೇಖಕರು:—ಶ್ರೀ. ಹರ್ಡೀಕರ ಮಂಜಪ್ಪನವರು.
ಪ್ರಕಾಶಕರು ಮತ್ತು ಸಂಪಾದಕರು:— ಶ್ರೀ. ಆಲೂರು ವೆಂಕಟರಾಯರು.

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸುಖ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅದನ್ನು ಬಿಟ್ಟದ್ದರಿಂದಲೇ ನಾವು ಹೇಗೆ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಅಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿ

ಈ ಪ್ರಕಾರ ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣದಿಂದ ಬರೆದುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತರಿಸಿಕೊಂಡು ಖಾದಿಯ ವಿಷಯವನ್ನು ಚೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ. ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. } **ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.**

ಪ್ಲೇಗ ಸಂಜೀವನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! **ಬರೇ ೬ ತಾಸುಗಳಲ್ಲಿಯೇ ಗುಣ!!**

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಲೆ ಜನರು ಸಾಯುತ್ತಿರುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು. ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಅರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಪಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತು ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದುದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಆದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಿಬ್ಬರಿಗೆ ಸಾಲುವಷ್ಟು ಔಷಧವನ್ನು ನುಂಚಿತವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹಣದ ಅಡಚಣೆಯು ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ, ವ್ಹೀ. ಪಿ. ಚಾರ್ಜ ಬೇರೆ.

ಅನುಪಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.

REGISTERED No. B. 2891

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಲ್ಲ| ದೋಷವಿರೋಧಿ| ಪ್ರಿಯನಾರಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವನ ಶಾಶ್ವತಗಣವಲ್ಲಿಪ್ಪನಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು

ಸಂಪಾದಕರು:-
೧. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೧೨ ನೆಯ ಫೆಬ್ರುವರಿ ೧೯೩೮ | ಸಂಚಿಕೆ ೭೬.

ಜನಸೇವೆಯೇ ದೇವರಸೇವೆ.

ಪ್ಯಾರಿಸ್ ಪಟ್ಟಣದಲ್ಲಿ ಭಯಂಕರ ದೊಂಬಿ!

ಫ್ರಾನ್ಸ್ ದೇಶದ

ಮುಖ್ಯ ಸ್ಥಳವಾದ ಪ್ಯಾರಿಸ್ ಪಟ್ಟಣದಲ್ಲಿ

(ತಾ. ೬-೨-೧೯೩೪ನೆಯ ದಿವಸ ಮಧ್ಯಾನ್ಹ)

ಮಂತ್ರಿ ಮಂಡಲವು ಸೇರಿದ್ದಿತು. ಅದರಲ್ಲಿ ಎರಡು ಪಂಗಡ. ಅಧಿಕಾರಾರೂಢರಾದವರ ಮೇಲೆ ಇನ್ನೊಂದು ಪಂಗಡದ ವಿಶ್ವಾಸವಿಲ್ಲ. ಪಾರ್ಲಿಮೆಂಟಿನಲ್ಲಿಯೇ ದೊಂಬಿ ಪ್ರಾರಂಭವಾಯಿತು.

ಸ್ವಲ್ಪ ಹೊತ್ತಿನಲ್ಲಿಯೇ ಪಟ್ಟಣದಲ್ಲೆಲ್ಲಾ ವ್ಯಾಪಿಸಿತು. ಸೈನಿಕರಿಗೂ ದೊಂಬಿಗಾರರಿಗೂ ಯುದ್ಧ. ೯ ಜನರು ಆಗಲೇ ಸತ್ತರು. ೫೮೨ ಜನಗಳಿಗೆ ಗಾಯವಾಯಿತು. ೩೫೦ ಜನರನ್ನು ಹಿಡಿದಿದ್ದಾರೆ. ಮಂತ್ರಿ ಮಂಡಲ ಬೇರೆಯಾಯಿತು.

SANGAM CLOTH STORES
Prop. M. S Hundekar & Co.
PO: TERDAL-587 313
Dt. Bijapur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜೋರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹೆಂಗೆ ಕೈಯಾಟ್ಟಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ನಿನ್ನ ಮೇಲೆ ಈ ತಿಜೋರಿಯ ಜಾಹೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳನು ಕಾದ ನಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಮೆಚ್ಚುಗೆ ನಿನ್ನ ಕಳ್ಳರ ಕಾಯಿಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇವೆಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದ್ದಗಿನಾಗ, ಹುಬ್ಬಳ್ಳ್ಯಾಗ- ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಪಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ಬಿ ಎ. ಎಂ. ದಿವ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.
ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ. ಗೋಟೂ.
ರವಿವಾರಪೇಟೆ ಬೆಳಗಾಂವ.

ಹರ್ದೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಳ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತಂತ್ರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಫೆಬ್ರುವರಿ ತಾರೀಖು ೧೨ನೆಯ ಸೋಮವಾರ | ಸಂಚಿಕೆ ೨೬.

ಬಿಹಾರದ ಬಾಂಧವರ ಮೊರೆ.

ಜಗತ್ತಿನಲ್ಲಿ ಅತ್ಯಂತ ಭಯಂಕರವಾದ ಭೂಕಂಪನ!

೧೫ ಸಾವಿರ ಚದುರು ಮೈಲು ಪ್ರದೇಶದ ನಾಶ!!

ಬಿಹಾರ ಪ್ರಾಂತದಲ್ಲಾದ ಭೂಕಂಪದ ಅನರ್ಥವು ನಮಗೆ ಇನ್ನೂ ಸರಿಯಾಗಿ ತಿಳಿದಿಲ್ಲ. ಅಲ್ಲಿಯ ಅತ್ಯಂತ ಶೋಚನೀಯವಾದ ಸ್ಥಿತಿಯನ್ನು ಸರಕಾರದವರು ಈ ಪ್ರಕಾರ ಪ್ರಕಟಿಸಿದ್ದಾರೆ—

"ಮಾನವ ಪ್ರಾಣಿಯ ಚರಿತ್ರೆಯಲ್ಲಿಯೇ ಇಂತಹ ಭಯಂಕರವಾದ ಭೂಕಂಪನದ ಸಂಗತಿಯಿಲ್ಲ. ಸಾಧಾರಣ ೧೫೦ ಮೈಲು ಉದ್ದಗಲಗಳ ಪ್ರದೇಶವು ನಾಶವಾಗಿ ಹೋಗಿದೆ. ಎಂದರೆ ಯುರೋಪ ಖಂಡದ ಬೆಲ್ಜಂ, ಹಾಲಂಡ್, ಈ ಎರಡು ದೇಶಗಳಷ್ಟು ವಿಸ್ತಾರ ಪ್ರದೇಶವು ಹಾಳಾಗಿ ಹೋಗಿದೆ.

೭೦೦೦ ಜನಗಳು ಮರಣ ಹೊಂದಿದರು, ಅನೇಕ ಸಾವಿರ ಜನಗಳಿಗೆ ಗಾಯವಾಗಿದೆ. ಅನೇಕ ಸಾವಿರ ಮನೆಗಳು ನೆಲಸಮವಾಗಿ ಹೋಗಿವೆ. ಅನೇಕ ಕಡೆ ಭಯಂಕರವಾದ ಕಂದಕಗಳುಂಟಾಗಿವೆ. ವಿಮಾನಿನಲ್ಲಿ ನೋಡುವವರಿಗೆ ಅವು ಜ್ವಾಲಾಮುಖಿಯ ಬಾಯಿಗಳಂತೆ ಕಾಣುತ್ತಿವೆ.

ರೇಲ್ವೆ ಮಾರ್ಗಗಳೂ ಹಾಳಾಗಿ ಹೋಗಿವೆ. ಈ ಭೂಕಂಪನವು ಮಧ್ಯಾನ್ಹದಲ್ಲಿ ಸಂಭವಿಸಿದ್ದರಿಂದ ಇನ್ನೂ ಆಗುತ್ತಿದ್ದ ಮಹದನರ್ಥ ತಪ್ಪಿತು. ಜನರೆಲ್ಲ ಬೈಲು ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದರು. ಈ ಭೂಕಂಪನವು ಮೂರೇ ಸೆಕೆಂಡ್ ಕಾಲವಿದ್ದಿತು. ಇಷ್ಟರಲ್ಲಿ ಇಂಥ ಮಹದನರ್ಥ. ಜಪಾನ, ನ್ಯೂಝಿಲಂಡ್ ದೇಶಗಳಲ್ಲಿಯೂ ಭೀಕರವಾದ ಭೂಕಂಪಗಳು ಸಂಭವಿಸಿದ್ದವು. ಆದರೆ ಅವು ೨೦ ಮೈಲುಗಳಿಗಿಂತ ಹೆಚ್ಚು ಪ್ರದೇಶಗಳಲ್ಲಿ ವ್ಯಾಪಿಸಿರಲಿಲ್ಲ. ಈ ಬಿಹಾರದಂಥ ಭಯಂಕರ ಭೂಕಂಪವು ಜಗತ್ತಿನ ಚರಿತ್ರೆಯಲ್ಲಿಯೇ ಇಲ್ಲ."

ಎಂದಮೇಲೆ ಅಲ್ಲಿಯ ನಮ್ಮ ದೇಶಬಾಂಧವರ ಮೊರೆಯ ಕಡೆಗೆ ಲಕ್ಷಿಸಿ ಧನ ಸಹಾಯ ಮಾಡುವುದು ನಮ್ಮ ಕರ್ತವ್ಯವಲ್ಲವೇ! ಮಹಾತ್ಮಾ ಗಾಂಧಿ, ಕವಿವರ್ಯ ಠಾಗೋರ ಈ ಜಗದ್ವಂದ್ಯ ವಿಭೂತಿಗಳು ಪ್ರಪಂಚದ ಸಕಲ ಭಾಗದವರೂ ಬಿಹಾರ ಬಾಂಧವರ ಮೊರೆಯ ಕಡೆಗೆ ಲಕ್ಷಿಸಿ ಸಹಾಯ ಮಾಡಬೇಕಾಗಿ ಕೇಳಿಕೊಂಡಿದ್ದಾರೆ.

ಪಂಡಿತಜಿಯವರ ದಯೆ!

ಪಂಡಿತ ಜವಾಹರಲಾಲ ನೆಹರುರವರು ಬಿಹಾರ ಪ್ರಾಂತಕ್ಕೆ ಹೋಗಿದ್ದಾರೆ. ಅಲ್ಲಿಯ ಮೋಂಗೀರ ಪಟ್ಟಣದ ಒಂದು ಮನೆಯಲ್ಲಿ ೪ ವರುಷದ ಮಗು ಭೂಗತವಾಗಿದ್ದಿತು, ಈ ಸಂಗತಿ ತಿಳಿದೊಡನೆ ಪಂಡಿತಜಿಯವರು ಸಲಕೆ ಗುದ್ದಲಿಗಳನ್ನು ತೆಗೆದುಕೊಂಡು ಹೋಗಿ ತಾವೇ ಅಗಿದು ಆ ಮಗುವನ್ನು ಕಂಡಕೂಡಲೆ ಅದಕ್ಕೆ ಹೂವುಗಳನ್ನರ್ಪಿಸಿದರು. ಈ ರಾಷ್ಟ್ರವೀರರ ಸಂಗಡ ನೂರಾರು ಪ್ರಮುಖರೂ ಸಲಕೆ ಗುದ್ದಲಿಗಳಿಂದ ಮಣ್ಣನ್ನು ತೆಗೆಯುತ್ತಿದ್ದರು. ಅವರಿಗೆ ಸ್ವಾವಲಂಬನದ ಮಹತ್ವವನ್ನು ಕುರಿತು ಬೋಧಿಸಿದರು. ಪಂಡಿತಜಿಯವರ ಉತ್ಕಟವಾದ ದೇವರು ಅವರ ಹೃದಯ ಕರಗಿದುದನ್ನು ತೋರಿಸುತ್ತಿತ್ತು.

—ನೇಪಾಳದಲ್ಲಿಯೂ ಭಯಂಕರ ಭೂಕಂಪನವಾಗಿದ್ದು ಒಂದು ಸಾವಿರ ಚದುರು ಮೈಲು ಪ್ರದೇಶದಲ್ಲೆಲ್ಲಾ ಉಸುಕು ಬಿದ್ದು ಭೂಮಿಯು ಬೇಸಾಯಕ್ಕೆ ಬರದಂತಾಗಿದೆ.

—ಕಾಶ್ಮೀರದಲ್ಲಿ ಮತ್ತೆ ಮುಸಲ್ಮಾನರ ದೊಂಬೆ ಪ್ರಾರಂಭವಾಗಿದೆ. ಸರಕಾರದಿಂದ ಸರಿಯಾದ ಸಂರಕ್ಷಣೆಯಾಗುವ ಸಿದ್ಧತೆಯಿದೆ.

ಪುಸ್ತಕ ಪರೀಕ್ಷಣ.

ಅಸ್ಪೃಶ್ಯತಾ ನಿವಾರಣೆ—ಇದನ್ನು ಶ್ರೀ. ಟಿ. ಬಿ. ಕೇಶವ ರಾಯರು ಬರೆದಿದ್ದಾರೆ. ಇವರು ಬಳ್ಳಾರಿ ಜಿಲ್ಲಾ ಆದಿಜನ ಸೇವಾ ಸಂಘದ ಕಾರ್ಯದರ್ಶಿಗಳು. ಪುಸ್ತಕವು ೩೨ ಪುಟಗಳುಳ್ಳದ್ದಾಗಿದೆ. ಬಹು ಅಂದವಾಗಿ ಅಚ್ಚಾಗಿದೆ. ಕ್ರಯ ೨ ಆಣೆ ಮಾತ್ರ. ಶ್ರೀ. ಕೇಶವರಾಯರು ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ತುಂಬಾ ಆಸಕ್ತರಾಗಿ ಕರ್ನಾಟಕದಲ್ಲಿಯೇ ಬಹು ಮುಂದಾಳುಗಳಾಗಿದ್ದಾರೆ. ಅದುದರಿಂದ ಇವರ ಲೇಖನ ಮತ್ತು ನಡತೆಗಳಲ್ಲಿ ಏಕತ್ವವಿದೆಯೇ ವಿನಾ ಭಿನ್ನತ್ವವಿಲ್ಲ.

ಕನ್ನಡದಲ್ಲಿ ಈ ಕಾಲಕ್ಕೆ ಇಂತಹ ಪುಸ್ತಕಗಳ ಅವಶ್ಯಕತೆ ವಿಶೇಷವಾಗಿದೆ. ಇಂತಹ ಪುಸ್ತಕಗಳು ಎಷ್ಟು ಸ್ವಕಟವಾಗಿ ಪ್ರಸಾರವಾದರೂ ಕಡಿಮೆಯೇ ಸರಿ. ಈ ಸ್ತುತ್ಯ ಕಾರ್ಯವನ್ನು ಮಾಡಿದುದಕ್ಕಾಗಿ ಶ್ರೀ. ಕೇಶವರಾಯರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ. ಜಿಜ್ಞಾಸುಗಳು ಆವಶ್ಯಕವಾಗಿ ಈ ಪುಸ್ತಕವನ್ನು ಓದಿ ತಮ್ಮ ಸಂಶಯಗಳನ್ನು ನಿವಾರಣೆ ಮಾಡಿಕೊಳ್ಳಬೇಕು.

ಈ ಪುಸ್ತಕದ ವಿಷಯವಾಗಿ ಒಂದೇ ಒಂದು ಮಾತನ್ನು ಹೇಳಬೇಕಾಗಿದೆ. ಹಿಂದು ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆಯೆಂಬುದನ್ನು ಸಿದ್ಧಗೊಳಿಸಲು ಶಾಸ್ತ್ರಗಳ, ಆಚಾರ್ಯರ ಬಸವಾದಿ ಪ್ರಮಥರ, ಮತ್ತು ಪುರಂದರಾದಿ ದಾಸರ ವಚನಗಳನ್ನು ಉದಾಹರಿಸಿರುವುದು ಸಮಂಜಸವಾಗಿಲ್ಲ. ಗಾಂಧೀಜಿಯವರು ಹೇಳುವ ಮತ್ತು ಈಗ ನಡೆಸಿರುವ ಅಸ್ಪೃಶ್ಯತಾ ನಿವಾರಣೆಯ ರೀತಿ ಬೇರೆ. ಶಾಸ್ತ್ರಗಳಲ್ಲಿಯೂ ಹಿಂದಣ ವಿಭೂತಿಗಳ ಆಚರಣೆಯಲ್ಲಿಯೂ ಇದ್ದ ಅಸ್ಪೃಶ್ಯತಾ ನಿವಾರಣೆ ಬೇರೆ. ಇವೆರಡನ್ನೂ ಕೂಡಿಸುವ ಹವ್ಯಾಸವೇಕೋ ತಿಳಿಯದು.

ಹಿಂದಣ ಎಲ್ಲ ಮತೋದ್ಧಾರಕರೂ ಆದಿ ಜನಗಳಿಗೆ ತಮ್ಮ ತಮ್ಮ ಮತದೀಕ್ಷೆಯೆಂಬ ಆಂಗಿಯನ್ನು ತೊಡಿಸಿ ಅನಂತರವೇ ಅವರಿಗಿದ್ದ ಅಸ್ಪೃಶ್ಯತೆಯನ್ನು ತೆಗೆದು ಹಾಕಿದ್ದಾರೆಯೇ ವಿನಾ ಈಗ ಗಾಂಧೀಜಿಯವರು ಹೇಳುವಂತೆ ಮನುಷ್ಯ ಜಾತಿಗಿರಬೇಕಾದ ಸಾಮಾಜಿಕ ಸ್ವಾತಂತ್ರ್ಯದ ದೃಷ್ಟಿಯಿಂದ ಅಸ್ಪೃಶ್ಯತೆಯನ್ನು ಭರತಖಂಡದಲ್ಲಿ ಈ ವರೆಗೆ ಯಾರೂ ತೆಗೆದು ಹಾಕಿಲ್ಲ. ಅದುದರಿಂದ ಹಿಂದಣವರ ತಪ್ಪನ್ನು ಒಪ್ಪುವುದೇ ವಿಹಿತವಲ್ಲದೆ ಅವರ ಕಾರ್ಯವನ್ನು ಈಗಿನ ಕಾರ್ಯಕ್ಕೆ ಜೋಡಿಸುವುದು ವಿಹಿತವಲ್ಲ. ಗಾಂಧೀಜಿಯವರ ತತ್ವದಂತೆ ಪೂರ್ವದವರೂ ಅಸ್ಪೃಶ್ಯತಾ ನಿವಾರಣೆಯನ್ನು ಮಾಡುತ್ತ ಬಂದಿದ್ದರೆ ಆ ವಿಷವು ಈವರೆಗೆ ಇಷ್ಟು ವ್ಯಾಪಕವಾಗಿದ್ದು ಇಂಥ ಭಯಂಕರವಾದ ಅನರ್ಥವನ್ನುಂಟು ಮಾಡುತ್ತಿರಲಿಲ್ಲ

ಶ್ರೀ. ಬಸವಣ್ಣನವರು— ಇದನ್ನು ಶ್ರೀ. ಬೆಟಗೇರಿ ಕೃಷ್ಣ ಶರ್ಮರು ಬರೆದಿದ್ದಾರೆ. ಮಕ್ಕಳಿಗಾಗಿ ಬರೆದ ಚಿಕ್ಕ ಪುಸ್ತಕ. ದೊಡ್ಡ ಅಕ್ಷರಗಳು. ಮುದ್ದಾದ ಮುದ್ರಣ. ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ತಮ್ಮ ನಾಡಿನ ಮಹಾಪುರುಷರ ಪರಿಚಯವಾಗುವದು ಒಳ್ಳೆಯದು. ಈ ಕಾರಣದಿಂದ ಈ ಪುಸ್ತಕವು ಫಲಕಾರಿಯಾದುದೇ ಸರಿ.

ಶ್ರೀ. ಬಸವಣ್ಣನವರು ಐತಿಹಾಸಿಕ ಪುರುಷರು. ಅಲ್ಲದೆ ಧರ್ಮೋದ್ಧಾರಮಾಡಿದ ಮಹಾಪುರುಷರು. ಆದುದರಿಂದ ಇವರ ಚರಿತ್ರೆಯನ್ನು ಬರೆಯುವಾಗ ಕಲ್ಪನೆಗೆ ಅವಕಾಶ ಕೊಡದೆ ಆಧಾರಗಳಿಗೇನೇ ಪ್ರಾಮುಖ್ಯತೆಯನ್ನು ಕೊಡುವುದುತ್ತಮ.

ಬಸವಣ್ಣನವರ ರಾಜಕಾರಣವನ್ನು ಲೇಖಕರು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಕೋಟೆ, ತೆರಿಗೆ, ಕರೆ, ಕಾಲುವೆ, ವ್ಯಾಪಾರ ಮೊದಲಾದವುಗಳ ಸುಧಾರಣೆ ಮಾಡಿದರೆಂದು ಬರೆದಿದ್ದಾರೆ. ಈ ಸಂಗತಿಗಳು ಕಲ್ಪನೆಯವೋ ಅಥವಾ ಎಲ್ಲಿಯಾದರೂ ಉಕ್ತವಾಗಿವೆಯೋ? ಬಸವಣ್ಣನವರು ದೇವ ಭಕ್ತರೇ ಜಂಗಮರು ಎಂದು ಮತ್ತು ಜಾತಿಯೊಂದೇ ಮಾನವಜಾತಿಯೆಂಬುದನ್ನು ಹೇಳುವುದಕ್ಕೆ ಹೆಣಗಿದರೆಂದು ಬರೆದಿದ್ದಾರೆ. ಅವರ ವಚನಾಭಿಪ್ರಾಯವನ್ನೂ ತಪ್ಪು ಬರೆದಿದ್ದಾರೆ. ಹೀಗೆ ಅನೇಕ ದೋಷಗಳವೆ. ಪರಮತೀಯರು ಈ ಪ್ರಕಾರ ಧಾರ್ಮಿಕ ಪುರುಷರ ಚರಿತ್ರೆಯನ್ನು ಬರೆಯುವುದು ಅಭಿನಂದನೀಯವಾಗಿದ್ದರೂ ಮತತತ್ವಗಳನ್ನರಿಯದೆ ಬರೆಯುವುದು ಅಹಿತಕರವಾದುದೇ ಸರಿ.

ಕಥಾಕುಂಜ— ಇದೊಂದು ಮಾಸಪತ್ರಿಕೆ. ವಾರ್ಷಿಕ ಚಂದಾ ೨-೪-೦ ಇದು ೪೦ ಪುಟಗಳುಳ್ಳದ್ದಾಗಿದೆ. ಅಂದವಾದ ಅಚ್ಚು. ಕಥೆಗಳ ಮೂಲಕ ಜನಗಳ ಸುಧಾರಣೆ ಮಾಡುವುದೇ ಈ ಪತ್ರಿಕೆಯ ಉದ್ದೇಶ ಶ್ರೀ. ವ್ಯಾಟ ರಾಮರಾಯರು ಸಂಪಾದಕರು. ಬೆಳಗಾವಿಯಲ್ಲಿ ಪ್ರಕಟವಾಗುತ್ತದೆ. ಕರ್ನಾಟಕದ ಪ್ರಸಿದ್ಧ ಲೇಖಕರಾದ ಶ್ರೀಯುತ ತಾರಾನಾಥರ "ಯಾರಿಗೆ?" ಎಂಬ ಕಥೆ ಮೊದಲು ಪ್ರಕಟವಾಗಿದೆ. ಸಂಗ್ರಾಹ್ಯವಾದ ಪತ್ರಿಕೆ. ಈ ಪತ್ರಿಕೆಯು ತನ್ನ ಉದ್ದೇಶದಂತೆ ಜನಸೇವೆಯನ್ನು ಚಿರಕಾಲ ನಡೆಯಿಸಲೆಂದು ಹಾರೈಸುತ್ತೇವೆ.

ಶ್ರೀ ಬಸವಣ್ಣನವರ ಚರಿತ್ರೆ— ಇದೊಂದು ಪದ್ಯಾತ್ಮಕ ಪುಸ್ತಕ. ಬನಹಟ್ಟಿಯ ಶ್ರೀಯುತ ತಾಕಾಮಪ್ಪ ರಕ್ಕಪ್ಪ ಕೋಪರಡೆ ಎಂಬುವವರು ರಚಿಸಿದ್ದಾರೆ. ಆರು ಸಂಧಿಗಳಲ್ಲಿ ೩೨೨ ಪದ್ಯಗಳಿಂದ ಮಹಾನುಭಾವರಾದ ಬಸವಣ್ಣನವರ ಚರಿತ್ರೆಯನ್ನು ವಿವರಿಸಿದ್ದಾರೆ. ಕ್ರಯ ೧೫೦ ಆಣೆ ಮಾತ್ರ. ಸಕಲರೂ ಆವಶ್ಯಕವಾಗಿ ಸಂಗ್ರಹಿಸಬೇಕು. ಓದಬೇಕು. ಮನನಮಾಡಿ ಆ ಬಸವ ಮಹಾತ್ಮನ ತತ್ವದಂತೆ ಆಚರಿಸಬೇಕು. ಕವಿಗಳು ಬಸವೇಶನ ವಿಷಯದಲ್ಲಿ ಬಹು ಭಕ್ತಿ ವಿಶ್ವಾಸಗಳುಳ್ಳವರಿದ್ದಾರೆಂದು ಅವರ ಕವನಗಳೇ ಸಾರುತ್ತವೆ. ಕಾಯಕ, ಪಂಚಸೂತಕ ನಿವಾರಣೆ, ಮತಪ್ರಸಾರ, ವೀರಶೈವ ಏಕೀಕರಣ ಮೊದಲಾದ ಸಂಗತಿಗಳನ್ನು ಬಹು ಚೆನ್ನಾಗಿ ವಿವರಿಸಿದ್ದಾರೆ. ಪದ್ಯ ರೂಪದಲ್ಲಿ ಈ ಪ್ರಕಾರ ಆ ಮಹಾನುಭಾವರ ಚರಿತ್ರೆಯನ್ನು ಹೃದಯಂಗಮವಾಗಿ ರಚಿಸಿದುದರಿಂದ ಇವರನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ.

[ಸಂಪಾದಕ.]

ಉಳಿವಿ ಕ್ಷೇತ್ರ ಯಾತ್ರೆ.

ಉಳಿವಿ ಯಾತ್ರೆಯ ಸುದ್ದಿಯನ್ನು ಅನೇಕ ಸಾರಿ ಕೇಳಿದ್ದೆ. ಹೋಗಿ ನೋಡಬೇಕೆಂಬ ಹಂಬಲವೂ ಇತ್ತು. ಆದರೆ ಅನುಕೂಲ ದೊರೆತಿರಲಿಲ್ಲ. ಅದೇಕೋ ಈ ಸಾರಿ ಕೂಡಿ ಬಂತು. ಹೋಗಿ ನೋಡಿ ಪರಮಾನಂದವಾಯಿತು. ಈ ಆನಂದದ ಸುದ್ದಿಯನ್ನು ಕೇಳಿ ಅನ್ಯರೂ ಹೋಗಿ ಸಂತೋಷ ಹೊಂದಲೆಂದು ಬರೆದಿದೆ.

ಉಳಿವಿ ಕ್ಷೇತ್ರವು ಉತ್ತರ ಕನ್ನಡ ಜಿಲ್ಲೆಯ ಹಳಯಾಳ ತಾಲೂಕಿನ ನಿಬಿಡಾರಣ್ಯದಲ್ಲಿ ಧಾರವಾಡದಿಂದ ಸಾಧಾರಣ ೭೫ ಮೈಲು ದೂರದಲ್ಲಿದೆ. ಉಳಿವಿಯ ಬಾಗಿಲವರೆಗೂ ಮೋಟಾರು ಗಳು ಹೋಗುವಂತಹ ಮಾರ್ಗ. ಹಳಯಾಳದಿಂದಲೇ ಗಟ್ಟದ ದಾರಿ. ಎರಡೂ ಮಗ್ಗಲು ಗಗನ ಚುಂಬಿತ ವೃಕ್ಷಶ್ರೇಣಿ. ನೂರಾರು ಅಡಿ ಆಳವಾದ ಕೊಳ್ಳಗಳು. ಅಲ್ಲಲ್ಲಿ ಜುಳುಜುಳು ಹರಿಯುವ ನೀರು. ತಟ್ಟನೆ ಕಂಡು ಕಣ್ಮರೆಯಾಗುವ ಕಾಡಹಂದಿ ಮತ್ತು ಅನೆಗಳ ಗುಂಪೂ ತೋರುವುದುಂಟು.

ಕೆಲವು ಯಾತ್ರಿಕರು ನಡೆದು ಅನೇಕರು ಬಂಡಿಯ ಮೇಲೆ ಕುಳಿತು ಉಳಿವಿಯನ್ನು ಸೇರುವರು. ಇವರು ಅಲ್ಲಲ್ಲಿ ಪಯಣಗಳನ್ನು ಮಾಡುತ್ತ ಬಹು ಆನಂದೋತ್ಸಾಹಗಳಿಂದ ಉಳಿವಿಗೆ ಬರುವರು. ಇವರು ಸೃಷ್ಟಿ ಸೌಂದರ್ಯವನ್ನು ನೋಡಿ ಪರಮಾತ್ಮನ ಅಗಾಧ ಲೀಲೆಯನ್ನು ನೆನೆದು ಯಾತ್ರೆಯ ಸಂಪೂರ್ಣ ಪ್ರಯೋಜನವನ್ನು ಹೊಂದುವರು. ಈಗ ಇಂತಹ ಯಾತ್ರಿಕರ ಸಂಖ್ಯೆ ಕಡಿಮೆಯಾಗಿದೆಯಂತೆ. ರಾಕ್ಷಸೀ ಸುಧಾರಣೆಯಲ್ಲೊಂದಾದ ಮೋಟಾರಿನಲ್ಲಿ ಕುಳಿತು ಹೋಗಿ ಬರುವವರೇ ಈಗ ಬಹು ಹೆಚ್ಚು.

ಉಳಿವಿಯು ಚಿಕ್ಕ ಹಳ್ಳಿ. ಮಾಘ ಶುದ್ಧ ೧೫ ನಿತಿಗೆ ಜಗದ್ಗುರು ಚನ್ನಬಸವ ಸ್ವಾಮಿಗಳ ರಥೋತ್ಸವವಾಗುತ್ತದೆ. ಆ ಒಂದು ವಾರವೇ ಇಲ್ಲಿ ಜನ ಸಂದಣಿ. ವೀರಶೈವರಿಗೆ ಇದು ಪವಿತ್ರ ಕ್ಷೇತ್ರವೇನೋ ಸರಿ. ವನದೇವತೆಯ ಭಕ್ತರಿಗೂ ಇದು ಮಹತ್ವದ ಸ್ಥಾನವಾಗಿಯೇ ಇದೆ. ಇಲ್ಲಿಯ ಸೃಷ್ಟಿ ಸೌಂದರ್ಯವನ್ನು ನೋಡಿದರೆ ಕರ್ನಾಟಕದಲ್ಲಿ ಇಂತಹ ರಮಣೀಯ ಸ್ಥಾನವಿದ್ದುದಕ್ಕೆ ಕನ್ನಡಿಗರೆಲ್ಲರೂ ಅಭಿಮಾನಪಡಬೇಕು. ಕನ್ನಡಿಗನು ತನ್ನ ತಾಯಿಯ ಸೊಬಗನ್ನು ಇಲ್ಲಿಗೆ ಬಂದು ಒಂದು ಸಾರೆಯಾದರೂ ನೋಡದಿದ್ದರೆ ಅತನ ಜೀವಿತದಲ್ಲೊಂದು ದೊಡ್ಡ ಕೊರತೆಯೇ ಸರಿ.

ಪ್ರತಿಯೊಬ್ಬ ಯಾತ್ರಿಕ ಎರಡಾಣೆ ತಲೆಪಟ್ಟಿಯನ್ನು ಕೊಡಬೇಕಾಗುವುದು. ಇದು ಸುಪಾಸೇತಾ ಮುನಸಿಪಾಲಿಟಿಗೆ ಸೇರುತ್ತದೆ. ಅವರು ರಥೋತ್ಸವ ಕಾಲದಲ್ಲಿ ಯಾತ್ರಿಕರ ಆರೋಗ್ಯ, ಸೌಕರ್ಯಗಳಿಗಾಗಿ ಆ ಹಣವನ್ನು ವಿನಿಯೋಗಿಸಬೇಕು. ಈ ಕಾರ್ಯವು ಶಾಸ್ತ್ರಿಕರವಾಗಿ ಜರುಗುವುದಿಲ್ಲವೆಂದು ಇಲ್ಲಿ ಸೇರಿದ ಸಭೆಯಲ್ಲಿ ತೀರ್ಮಾನವಾಯಿತು.

ಈ ಸಾರೆಯ ರಥೋತ್ಸವಕ್ಕೆ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಳಿ ರಾಜೇಂದ್ರ ಮಹಾಸ್ವಾಮಿಗಳವರು ಆಗಮಿಸಿದ್ದರು. ಇಲ್ಲಿಯ ಶ್ರೀ. ಜಗದ್ಗುರು ಚನ್ನಬಸವೇಶ್ವರ ಸ್ವಾಮಿಯ ಮಠವು ಆ ಮಹಾ ಸ್ವಾಮಿಗಳವರ ಅಧಿಪತ್ಯಕ್ಕೆ ಒಳಪಟ್ಟದ್ದಾಗಿರುವುದರಿಂದ ರಥೋತ್ಸವದ ಎಲ್ಲ ಏರ್ಪಾಟುಗಳೂ ಮಹಾಸ್ವಾಮಿಗಳ ಮೇಲ್ವಿಚಾರಣೆಯಿಂದಲೇ ನಡೆಯುತ್ತಿದ್ದವು. ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಬುಧವಾರ ಮತ್ತು ಗುರುವಾರ ಧಾರ್ಮಿಕ ಸಭೆ ಜರುಗಿ ಯಾತ್ರಿಕರಿಗೆ ಧರ್ಮೋಪದೇಶ ಮಾಡಲ್ಪಟ್ಟಿತು.

ಬುಧವಾರದ ಸಭೆಯಲ್ಲಿ ಶ್ರೀ. ಜಗದ್ಗುರು ಮಹಾ ಸ್ವಾಮಿಗಳವರು ಶಿವಾನುಭವದ ಮಹತ್ವವನ್ನೂ ಶಿವಶರಣರ ವಚನಾಧ್ಯಯನ ವಚನ ಪ್ರಸಾರಗಳನ್ನೂ ಕುರಿತು ಬಹು ಸ್ವಾರಸ್ಯವಾಗಿ ಬೋಧಿಸಿದರು. ಗುರುವಾರದ ಸಭೆಯಲ್ಲಿ ರಬಕವಿಯ ಶ್ರೀ. ಬಾಗೋಜಿ ಮುರಿಗಯ್ಯನವರು, ಧಾರವಾಡ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನ ಶ್ರೀ. ವಿರೂಪಾಕ್ಷ ಶಿವಾಚಾರ್ಯರು, ಶ್ರೀ. ಹರ್ಡೇಕರ ಮಂಜಪ್ಪನವರು ಮೊದಲಾದವರ ವ್ಯಾಖ್ಯಾನಗಳಾದವು. ವ್ಯಾಖ್ಯಾತರು ಕ್ಷೇತ್ರ ಮಹಿಮೆ, ವೀರಶೈವ ಮತತತ್ವ, ಯಾತ್ರಿಕರ ಸೌಲಭ್ಯ ಮೊದಲಾದ ವಿಷಯಗಳನ್ನು ಚನ್ನಾಗಿ ಹೇಳಿದರು.

ಶ್ರೀ. ಹರ್ಡೇಕರ ಮಂಜಪ್ಪನವರು ಈ ಕ್ಷೇತ್ರದ ಮಹತ್ವವನ್ನು ಐತಿಹಾಸಿಕ ದೃಷ್ಟಿಯಿಂದ ವಿವೇಚಿಸಿದಾಗ ಹೀಗೆ ಹೇಳಿದರು--ಶ್ರೀ ಚನ್ನಬಸವಣ್ಣನವರೇ ಮೊದಲಾದ ಶಿವಶರಣರು ಶಮ್ಮ ಅವತಾರ ಕಾರ್ಯ ಮುಗಿದ ನಂತರ ಈ ರಮ್ಯಪ್ರದೇಶದಲ್ಲಿ ವಾಸವಾಗಿದ್ದರೆಂತಲೂ ಆ ಶಿವಶರಣರು ಕ್ರಿ. ಶ. ೧೧೬೫ ರಲ್ಲಿ ಇಲ್ಲಿಗೆ ಪ್ರವೇಶಿಸಿದ್ದರಿಂದ ಸರಿಯಾಗಿ ೭೭೯ ವರುಷಗಳು ಪೂರೈಸಿ ೭೮೦ನೆಯ ವರುಷ ಪ್ರಾರಂಭವಾಯಿತೆಂತಲೂ ಶರಣರ ಕಾಲಜ್ಞಾನದಂತೆ ಇಂದಿನಿಂದಲೇ ಶಿವಶರಣರ ಆಗಮನವು. ಎಂದರೆ ಅವರ ತತ್ವ ಪ್ರಸಾರವು ಇಂದಿನಿಂದ ವಿಶೇಸವಾಗುವುದು. ಆ ಶಿವಶರಣರ ತತ್ವವನ್ನನುಸರಿಸಿದರೆ **ಉಳಿವಿ.** ಇಲ್ಲದಿದ್ದರೆ **ಅಳಿವಿ.** ಇದನ್ನೇ ಈ **ಉಳಿವಿ** ಕ್ಷೇತ್ರವು ನಮಗೆ ಬೋಧಿಸುತ್ತದೆ." ಜಗದ್ಗುರು ಮಹಾಸ್ವಾಮಿಗಳವರು ಈ ವಿವೇಚನೆಯ ಯಥಾರ್ಥತೆಯನ್ನು ಬಹು ಸ್ವಾರಸ್ಯವಾಗಿ ಅಪ್ಪಣೆ ಕೊಡಿಸಿದರು.

ಜಂಗಮ ಪುಂಗವರಾದ ಶ್ರೀ ಜಗದ್ಗುರು ಚನ್ನಬಸವದೇವರ ಸದುಪದೇಶವೆಂಬ ಚನ್ನಬಸವಣ್ಣನವರ ೩೭ ದಿವ್ಯ ವಚನಗಳ ಚಿಕ್ಕ ಪುಸ್ತಕವು "ಆಲಮಟ್ಟಿ ವೀರಶೈವ ವಿದ್ಯಾಲಯದಿಂದ" ಪ್ರಕಟವಾಗಿದೆ. ಅದರ ಸಾವಿರಾರು ಪ್ರತಿಗಳನ್ನು ಹಾವೇರಿಯ ಮಾಗಾವಿ ಶ್ರೀ. ಚನ್ನಬಸವಪ್ಪನವರು, ದಾವಣಗೆರೆ ಚಿಗಟೇರಿ ಶ್ರೀ. ಮುರಿಗೆಪ್ಪನವರು ಮತ್ತು ಧಾರವಾಡದವರು ಯಾತ್ರಿಕರಿಗೆ ಉಚಿತವಾಗಿ ಹಂಚಿದರು.

ಈ ಸಾರೆ ಯಾತ್ರೆಗೆ ೭ ಸಾವಿರ ಜನರು ಬಂದಿದ್ದರು. ಶ್ರೀವನ ನಿರಂಜನ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಮತ್ತು ಅಥಣಿ, ಮಿರ್ಜಿ, ಶಿರಸಿ ಮೊದಲಾದ ಸ್ಥಳಗಳ ವಿರಕ್ತ ಮಠದ ಸ್ವಾಮಿಗಳವರೂ ಮತ್ತು ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಬಾಗಲಕೋಟಿ,

ಶಿರಸಿ, ದಾವಣಗೆರೆ, ಹಾವೇರಿ, ಮುಂತಾದ ಮುಖ್ಯ ಸ್ಥಳಗಳ ವೀರ ಶೈವ ಪ್ರಮುಖರೂ ಯಾತ್ರೆಯಲ್ಲಿದ್ದರು.

ದಿವ್ಯ ದೃಶ್ಯ!

ಆಗ ಆಗಮಿಸಿದ್ದ ಶರಣರ ಬೀಡು ಇದಲ್ಲ ಅವರು ಇಲ್ಲಿಂದ ನಾಲ್ಕಾರು ಮೈಲುಗಳ ದೂರದಲ್ಲಿ ನಾಲ್ಕೂ ಕಡೆ ಘೋರಾರಣ್ಯದಲ್ಲಿ ವಾಸವಾಗಿದ್ದರು. ಪೂರ್ವ ದಿಕ್ಕಿಗೆ ಮೂರು ಗುಡ್ಡಗಳನ್ನು ದಾಟಿ ಹೋಗಬೇಕು. ಅದೆಂತಹ ವನ ಸೌಂದರ್ಯವೋ? ಭಯಾನಕ ದೃಶ್ಯವೋ? ಮೊದಲು ಬರುವುದು ಹರಳಯ್ಯನ ಕುಂಡ. ನೀರು ಬಹು ಝುಳ ಝುಳ. ಭೂಮಿಯಿಂದ ಪುಟಿದು ನೀರು ಬರುವದು. ಅದರಿಂದ ಗುಳ್ಳೆಗಳೇಳುತ್ತವೆ. ಭಾವಿಕರು ಅಕ್ಕಿಯನ್ನು ಹಾಕಿದರೆ ಅನ್ನವಾಗುತ್ತದೆಂದು ಅಕ್ಕಿಯನ್ನು ಹಾಕುತ್ತಾರೆ ಹರಳಯ್ಯನವರ ನಾಮವು ಎಷ್ಟು ಪವಿತ್ರವೋ ಅಷ್ಟೇ ಈ ತೀರ್ಥವೂ ಪವಿತ್ರವಾದುದರಿಂದ ಇಲ್ಲಿಗೆ ಬಂದ ಯಾತ್ರಿಕರು ಇಲ್ಲಿ ಸ್ನಾನವನ್ನು ಮಾಡಿ ಆ ಶರಣವರೇಣ್ಯನಾದ ಹರಳಯ್ಯನ ನಾಮಸ್ಮರಣೆ ಮಾಡುತ್ತಾರೆ.

ಅದರ ಮುಂದೆ ವಿಭೂತಿಯ ಬೆಟ್ಟ! ಅದೊಂದು ದೊಡ್ಡ ಗುಡ್ಡವೇ ಇದೆ. ಅಲ್ಲಿಯ ಮಣ್ಣು ಲೋಹವಿಶ್ರವಾದಂತಿದೆ. ಕಲ್ಲಿದ್ದಲೆಯಂತಿದೆ. ಹರಳಯ್ಯನ ಕುಂಡದ ತೀರ್ಥದಿಂದಲೇ ಅದನ್ನು ಕಟ್ಟಿಕೊಂಡು ಯಾತ್ರಿಕರು ಬಹು ಪ್ರೇಮಾದರಗಳಿಂದ ತರುತ್ತಾರೆ.

ಆ ಬೆಟ್ಟದ ಮುಂದೆ ಶ್ರೀ. ಅಕ್ಕ ನಾಗಮ್ಮನ ಗವಿ. ಶ್ರೀ. ಚನ್ನ ಬಸವಣ್ಣನವರ ತಾಯಿಯವರು ವಾಸವಾಗಿದ್ದ ಗುಹೆ ಅನಂತರ ವಿಭೂತಿ ಕಣಜ, ರುದ್ರಾಕ್ಷಿ ಮಂಟಪಗಳೆಂಬ ಘನವಾದ ಬಂಡಿಯಲ್ಲಿರತಕ್ಕ ಗುಹೆಗಳು. ಅಳಗವಿಯೆಂಬದೊಂದು ಬಹು ಘನವಾದ ಮತ್ತು ಅತಿ ವಿಸ್ತಾರವಾದ ಗುಹೆಯಿದೆ. ನೂರಾರು ಅಡಿ ಎತ್ತರವಾದ ಗುಡ್ಡದೊಳಾದಿಯಲ್ಲಿರತಕ್ಕ ಬಂಡಿಯ ನಡುವೆ ನೂರಾರು ಜನಗಳಿರಲು ಸಾಕಾಗುವಷ್ಟು ವಿಶಾಲವಾದ ಗುಹೆಯಿದೆ. ಒಳಗೆ ಹೋಗುವ ಬಾಗಿಲು ಒಂದೇ ಮೊಳ ಎತ್ತರವಾದುದಾಗಿರುವುದರಿಂದ ಸ್ಥೂಲ ದೇಹಿಗಳಿಗೆ ಶಕ್ಯವಿಲ್ಲ. ಬೇರೆಯವರು ಮಲಗಿಯೇ ಏಳೆಂಟು ಮೊಳ ಹೋಗಬೇಕಾಗುವುದು. ಅನಂತರ ವಿಶಾಲವಾದ ಪ್ರದೇಶವು ದೊರೆಯುತ್ತದೆ ಅಲ್ಲಿಗೆ ಎರಡು ಭಾಗಗಳಿಂದ ಸ್ಪಷ್ಟ ಬೆಳಕು ಬರುತ್ತದೆ. ಆ ಬೆಳಕಿನ ಕಿಂಡಿಯಲ್ಲಿ ಇಣಿಕಿ ನೋಡಿದರೆ ಆಕಾಶದ ವಿನಾ ಇನ್ನಾವ ಪದಾರ್ಥಗಳೂ ಕಾಣುವದಿಲ್ಲ. ಅದು ಅಷ್ಟು ಎತ್ತರದಲ್ಲಿದೆ. ಅದಕ್ಕೇನೇ ಕೈಲಾಸದ ಬಾಗಿಲೆಂದು ಹೇಳುತ್ತಾರೆ.

ಈ ಎಲ್ಲ ದಿವ್ಯ ದೃಶ್ಯಗಳನ್ನು ಯಾತ್ರೆಯ ಕಾಲದಲ್ಲಿ ನೋಡುವುದೇ ಅನುಕೂಲ. ಆಗ ಜನಸಮೂಹವಿರುತ್ತದೆ. ಕಾಲು ದಾರಿಯನ್ನೂ ಸರಿಮಾಡಿಸುತ್ತಾರೆ. ದೀಪವಿಲ್ಲದೆ ಗುಹೆಯನ್ನು ನೋಡಲಿಕ್ಕಾಗುವದಿಲ್ಲ ಇದು 'ಬ್ಯಾಟರಿ' ಕಾಲವಾದುದರಿಂದ ಬಹು ಅನುಕೂಲವಾಗಿತ್ತು. ಏಕಾಂತವಾಸಿಗಳು, ಆತ್ಮ ಚಿಂತಕರು, ನಿಸರ್ಗರಮಣೀಯತೆಯನ್ನು ನೋಡಲಿಚ್ಛಿಸುವವರು, ಪ್ರಕೃತಿಯ ಅದ್ಭುತ ಚಮತ್ಕಾರವನ್ನು ತಿಳಿದುಕೊಳ್ಳುವವರು ಬೇಸಿಗೆಯ ಕಾಲದಲ್ಲಿ ಇತ್ತಿಗೆ ಒಂದು ಬಾರಿ ಅತ್ಯವಶ್ಯಕ.

ಕಿರಣಾಲಂಕೃತವಾಗಿರುವ ಈ ರಮ್ಯ ಪ್ರದೇಶವು ಆತ್ಮ ಚಿಂತನೆಗೆ ಸಹಾಯವಾಗುವುದರಲ್ಲಿ ಸಂದೇಹವೇ ಇಲ್ಲವೆಂಬುದು ನೋಡಿದಾಗಲೇ ಮನವರಿಕೆಯಾಗುವುದು.

ಪ್ರವಾಸಿ.

ವೀರಶೈವ ತತ್ವ ನಿಷ್ಠರಿಗೆ
ಕೆಲವು ಪ್ರಶ್ನೆಗಳು.

ವೀರಶೈವ ಮತತತ್ವಗಳು ಶ್ರೀ. ಬಸವಾದಿ ಪ್ರಮಥರ ವಚನಗಳಲ್ಲಿ ವಿಸ್ತಾರವಾಗಿ ವಿವೇಚಿಸಲ್ಪಟ್ಟಂತೆ ಆಗಮಾದಿ ಗ್ರಂಥಗಳಲ್ಲಿ ವಿವರವಾಗಿ ಹೇಳಿಲ್ಲ. ಅವುಗಳಲ್ಲಿದ್ದ ಕೊರತೆಯನ್ನು ನಿವಾರಣೆ ಮಾಡುವುದಕ್ಕಾಗಿ ಬಸವಾದಿ ಪ್ರಮಥರು ತಾವು ಆಚರಿಸಿ ಅನುಭವಿಸಿದ ಆಗಮಾದಿ ಗ್ರಂಥಗಳಲ್ಲಿ ಬೀಜ ರೂಪದಲ್ಲಿದ್ದ ದಿವ್ಯ ತತ್ವಗಳನ್ನೇ ಲೋಕೋದ್ಧಾರಕ್ಕೋಸ್ಕರ ತಾಯಿ ನುಡಿಯಲ್ಲಿ ಪ್ರಸಾರಗೊಳಿಸಿದರು.

ಆದುದರಿಂದ ಪ್ರಮಥರ ವಚನಗಳಲ್ಲಿರುವ ತತ್ವಗಳೇ ವೀರಶೈವ ಮತದ ನಿಜ ತತ್ವಗಳು. ಇವುಗಳಿಗೆ ವಿರೋಧವಾದ ಉಕ್ತಿಗಳು ಆಗವಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿದ್ದರೆ ಅವು ಶೈವ ಮತೀಯರಿಗೆ ಹೇಳಿದವುಗಳೆಂದಾಗಲಿ ಅಥವಾ ಇತ್ತೀಚಿಗೆ ಸೇರಿಸಿದವುಗಳೆಂದಾಗಲಿ ತಿಳಿಯಬೇಕು

ಶ್ರೀ ಬಸವಾದಿ ಪ್ರಮಥರ ಆಚಾರವಿಚಾರಗಳು ವೀರಶೈವ ಮತಕ್ಕೆ ಸಂಬಂಧವಿಲ್ಲವೆಂಬ ಒಂದು ನೂತನ ಪಂಥವುಂಟಾಗಿದೆಯಷ್ಟೆ. ಆ ಪಂಥದ ವಿಷಯ ಹಾಗಿರಲಿ. ಬಸವಾದಿ ಪ್ರಮಥರ ಆಚಾರವಿಚಾರಗಳು ಯಾರಿಗೆ ಮಾನ್ಯವಾಗಿವೆಯೋ ಅವರೆಲ್ಲಿಯೂ ಭಿನ್ನಾಭಿಪ್ರಾಯವೇಕೆ? ಮುಸುಗಿನ ಡೊಣ್ಣೆಗಿಂತ ಬಹಿರಂಗದ ಕತ್ತಿಯೇ ಮೇಲಲ್ಲವೆ? ಆದುದರಿಂದ **ಶ್ರೀ ಬಸವಾದಿ ಪ್ರಮಥರ ವಚನಗಳ ಮೇಲಿಂದಲೇ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ವೀರಶೈವ ತತ್ವ ನಿಷ್ಠರು ಬರೆದು ಕಳುಹಿಸಿದರೆ** ಕೃತಜ್ಞತಾಪೂರ್ವಕ ಪ್ರಕಟಿಸುವೆವು.

(೧) ವೀರಶೈವರಲ್ಲಿ ಭಕ್ತ ಮತ್ತು ಮಾಹೇಶ್ವರ ಎಂಬೆರಡು ಜಾತಿಗಳಿವೆಯೇ ಹೇಗೆ?

(೨) ಗುರು ಮತ್ತು ಜಂಗಮತ್ವಗಳು ಯಾವುದೊಂದು ವಂಶದವರಿಗೆ ಮಾತ್ರವೇ ಪ್ರಾಪ್ತವಾಗುತ್ತವೆಯೇ? ಅಥವಾ ಅಂತಹ ಜ್ಞಾನ ಗುಣ ಶೀಲಾಚಾರಗಳುಳ್ಳ ಯಾವ ವೀರಶೈವರಿಗಾದರೂ ಪ್ರಾಪ್ತವಾಗುತ್ತವೆಯೇ?

(೩) ಅನ್ಯ ಮತೀಯರು ಲಿಂಗಾಂಗಿಗಳಾಗಿ ಬಳಕೆಯಲ್ಲಿ ಬರಬೇಕಾದರೆ ಅವರ ಆಚಾರವಿಚಾರಗಳ ವಿಷಯವಾಗಿ ಯಾವ ನಿಯಮಗಳಿರಬೇಕು? ಅವುಗಳನ್ನು ಪರೀಕ್ಷಿಸುವುದು ಹೇಗೆ?

(೪) ವೀರಶೈವರಿಗೆ ಸೂತ್ರ ಗೋತ್ರಾದಿಗಳಿವೆಯೇ? ಇಲ್ಲವೆ? ಇದ್ದಿದ್ದರೆ ಯಾವವು? ಇಲ್ಲದಿದ್ದರೆ ಆಗುವ ಹಿತಾಹಿತಗಳಾವುವು?

[ಸಂಪಾದಕ.]

ಪ್ರಚಾರಕರು ಬೇಕಾಗಿದ್ದಾರೆ.

ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಥವಾ ಅಲ್ಲಿಯವರೆಗೆ ಶಿಕ್ಷಣ ಹೊಂದಿದ ವೀರಶೈವ ಉಪದೇಶಕರು ಬೇಕಾಗಿದ್ದಾರೆ.

ವೀರಶೈವ ಮತ ತತ್ವಗಳ ಶಿಕ್ಷಣ ಹೊಂದಿ ಎಲ್ಲ ಕಡೆಗೂ ಅವುಗಳನ್ನು ಲೇಖನ ಮತ್ತು ಭಾಷಣಗಳ ಮೂಲಕ ಪ್ರಸಾರಗೊಳಿಸುವುದೇ ಅವರ ಮುಖ್ಯ ಕಾರ್ಯವು.

ವೇತನವು ತೃಪ್ತಿಕರವಾಗಿ ದೊರೆಯುವುದು. ಇಚ್ಛುಕರು ಕೆಳಗಿನ ವಿಳಾಸಕ್ಕೆ ಬರೆದು ಸಕಲ ಸಂಗತಿಗಳನ್ನೂ ತಿಳಿದುಕೊಳ್ಳಬೇಕು. ಮ್ಯಾನೇಜರ್— ಶರಣ ಸಂದೇಶ
ಆಲಮಟ್ಟಿ.

ವೀರಶೈವ ಏಕೀಕರಣದ ವಾದಭೂಮಿ.

ವಿರಕ್ತ ಸ್ವಾಮಿಗಳೇ ಜಂಗಮರು.

ಪಂಚಾಚಾರ್ಯ ಪ್ರಭಾ ಪತ್ರಿಕೆಯ ತಾ. ೨೨-೧-೩೪ನೇ ಸಂಚಿಕೆಯಲ್ಲಿ ದೈವಜ್ಞ ವಿನೋದ ಎಂಬ ಲೇಖಕರು ಸನ್ಯಾಸಿಗಳು ಜಂಗಮರಲ್ಲ ಎಂಬ ಲೇಖನವನ್ನು ಬರೆದು ವಿರಕ್ತ ಸ್ವಾಮಿಗಳನ್ನು ಮನಸ್ವೀ ನಿಂದಿಸಿದ್ದಾರೆ. ವಿರಕ್ತ ಸ್ವಾಮಿಗಳು ವೀರಶೈವಾಂತರ್ಗತ ಜಂಗಮರಲ್ಲವೆಂಬುದೇ ಇವರ ಅಭಿಪ್ರಾಯ. ಇದು ಹೇಗೆ ಅಸತ್ಯ ವಾದುದೆಂಬುದನ್ನು ಸ್ವಲ್ಪದರಲ್ಲಿಯೇ ವಿವರಿಸುತ್ತೇನೆ.

ಸ್ವಾಯಂಭುವ ಆಗಮದ ಲನೆಯ ಪಟಲದಲ್ಲಿ ಈ ಪ್ರಕಾರ ಇದೆ—

ಮಚ್ಛಿಖಾಚಕ್ರಮಧ್ಯಸ್ಥಂ ಚರಲಿಂಗಂ ನಿರಂಜನಂ
ಕೃತ್ವಾಬಹಿರ್ಗತಂ ತೇಭ್ಯಃ ಪಂಚೇಭ್ಯೋ ಮಯಾ ಪುರಾ
ಯುಷ್ಮಾಭಿಃ ಪೂಜ್ಯತಾಂ ನಿತ್ಯಮೇತಜ್ಜಂಗಮ ಲಿಂಗಕಂ
ಇತ್ಯುಕ್ತ್ವಾ ಮಯಾ ಪೂರ್ವಂ ಪ್ರೇಷಿತಂ ಧರಣೀತಲೆ
ಅವಿರ್ಭೂತಾ ಮಹೀಳಾಗೆ ಮದನುಜ್ಞಾನ ಸಾರತಃ ||

ಶಿವನು ಹೀಗೆ ಹೇಳುತ್ತಾನೆ—ನನ್ನ ಶಿಖಾಚಕ್ರದ ಮಧ್ಯ ದಲ್ಲಿರುವ ಚರಲಿಂಗವೆಂಬ ನಿರಂಜನ ಜಂಗಮನನ್ನು ಪಂಚಾ ಚಾರ್ಯರ ಸಲುವಾಗಿ ಹೊರಗೆ ತೆಗೆದು ಇವರನ್ನು ಪ್ರತಿನಿತ್ಯ ತಪ್ಪದೆ ಪೂಜಿಸಿರೆಂದು ಅವರಿಗೆ ಹೇಳಿ ಭೂಮಂಡಲಕ್ಕೆ ಕಳುಹಿಸಿಕೊಟ್ಟೆನು. ಶಿವನ ಈ ಉಕ್ತಿಯಿಂದ ಪಂಚಾಚಾರ್ಯರ ಸಂಗಡಲೇ ನಿರಂಜನ ಮೂರ್ತಿಯ ಅವತಾರವಾಗುತ್ತದೆಂತಲೂ ಆ ಆಚಾರ್ಯರು ನಿರಂ ಜನ ಮೂರ್ತಿಗಳಾದ ವಿರಕ್ತ ಸ್ವಾಮಿಗಳನ್ನು ಪ್ರತಿನಿತ್ಯ ಪೂಜಿಸ ಬೇಕೆಂತಲೂ ಸ್ಪಷ್ಟವಾಗುವುದಿಲ್ಲವೆ?

ಈ ಶಿವಾಗಮದ ಶಾಸನದಂತೆಯೇ ಜಂಗಮ ಮೂರ್ತಿಗಳಾದ ವಿರಕ್ತ ಸ್ವಾಮಿಗಳನ್ನು ಪಂಚಾಚಾರ್ಯರು ಮೊನ್ನೆ ಮೊನ್ನಿನವ ರೆಗೂ ಪೂಜಿಸುತ್ತಲೇ ಬಂದಿರಲಿಲ್ಲವೇ? ಪಂಚಾಚಾರ್ಯರು ಹೇಗೆ ಬೇರೆ ಬೇರೆ ಯುಗಗಳಲ್ಲಿ ಬೇರೆಬೇರೆ ಹೆಸರಿನಿಂದ ಅವತರಿಸುತ್ತಾ ಬಂದಿದ್ದಾರೆಯೋ ಹಾಗೆಯೇ ಆಯಾಯ ಯುಗದಲ್ಲಿ ನಿರಂಜನ ಮೂರ್ತಿಯೂ ಬೇರೆಬೇರೆ ಹೆಸರಿನಿಂದ ಅವತರಿಸಿದ್ದಾಗಿದೆ. ಕಲಿ ಯುಗದಲ್ಲಿ ರೇಣುಕಾಚಾರ್ಯರು ಆಗಮಿಸಿದಾಗಲೇ ಪ್ರಭುಸ್ವಾ ಮಿಯೂ ಅವತರಿಸಿರಲಿಲ್ಲವೇ?

ವಾತುಲಾಗಮದ ಉತ್ತರ ಭಾಗದಲ್ಲಿ ಶಿವನು ಪ್ರಮಥಂಗೆ ಈ ಪ್ರಕಾರ ಹೇಳಿದ್ದಾನೆ—

ಅದೌ ತಚ್ಚರಲಿಂಗಂತು ನಿರಂಜನ ಇತಿಸ್ಮೃತಂ | ತ್ರೇತಾ
ಯಾಂ ದೈವತಂ ಚೈತನ್ನಿರ್ವ್ಯಾಯ ಇತಿ ಕೀರ್ತಿತಂ| ದ್ವಾಪರೆ
ನಿಷ್ಕಲಶ್ಚೇತಿ ವಿಶ್ರುತಂಚ ತದೇವ ಹಿ | ಕಲೌ ಪ್ರಭುರಿತಿಖ್ಯಾತಂ
ತಸ್ಯ ನಾಮಾನಿ ವೈ ಶೃಮಾತ್||

ಎಂದರೆ ಚರಲಿಂಗವಾದ ಆ ಜಂಗಮ ಮೂರ್ತಿಯು ಕೃತ ಯುಗದಲ್ಲಿ ನಿರಂಜನ, ತ್ರೇತಾಯುಗದಲ್ಲಿ ನಿರ್ವ್ಯಾಯ, ದ್ವಾಪಾರ ಯುಗದಲ್ಲಿ ನಿಷ್ಕಲ ಮತ್ತು ಕಲಿಯುಗದಲ್ಲಿ ಪ್ರಭುದೇವ ಎಂಬ ಹೆಸರಿನಿಂದ ಅವತರಿಸುವುದು. ವಿರಕ್ತ ಮೂರ್ತಿಗಳು ಆ ಪ್ರಭು ವಂಶದವರಾದುದರಿಂದ ಇವರೇ ಜಂಗಮಮೂರ್ತಿಗಳೆಂದು ಆಗಮ ದಿಂದಲೇ ಸಿದ್ಧವಾಗುತ್ತದೆ.

ಏಕಮೂರ್ತಿಸ್ತ್ರಯೋಭಾಗಾ| ಗುರುಲಿಂಗಂತು ಜಂಗಮಃ|| ಎಂಬ ಪುರಾಣವನ್ನು ಆಧಾರವಾಗಿಟ್ಟುಕೊಂಡು ಗುರುವೇ ಜಂಗ ಮರೆಂದು ಈ ಲೇಖಕರು ಹೇಳಿದ್ದಾರೆ. ಹಾಗಾದರೆ ಗುರುವೇ ಲಿಂಗ ವಾಗಬಹುದಲ್ಲವೆ? ಗುರುವಿದ್ದರೆ ಜಂಗಮವೇ ಬೇಡವೆಂದಮೇಲೆ ಲಿಂಗವಾದರೂ ಏಕೆ ಬೇಕು? ಲಿಂಗಹೋದರೆ ಪ್ರಾಣತ್ಯಾಗವೇಕೆ? ಗುರುವನ್ನೇ ಧರಿಸಿಕೊಳ್ಳಬಹುದಲ್ಲಾ! ಒಂದೇ ಮೂರ್ತಿಯು ಗುರುಲಿಂಗ ಜಂಗಮವಾಗಿ ಪರಿಣಮಿಸಿದೆಯೆಂಬುದನ್ನು ಹೀಗೆ ಅರ್ಥಮಾಡುವುದು ಅನುಚಿತವು. ಈ ಗುರುಲಿಂಗ ಜಂಗಮಗಳಲ್ಲಿ ತಾರತಮ್ಯವಿದೆ.

ಹಣ್ಣು ಒಂದೇ ಆಗಿದ್ದರೂ ಅದರ ತೊಗಟೆ, ತಿರುಳು, ಬೀಜ ಗಳು ಬೇರೆಬೇರೆ ರೂಪ, ರುಚಿ, ಉಪಯೋಗಾದಿಗಳಿಂದ ತಾರತಮ್ಯ ಉಳ್ಳವುಗಳಾಗಿಲ್ಲವೆ? ಇಷ್ಟೋತ್ಪತ್ತಿರ್ಗುರೋಶ್ಚೈವ ಗುರೂತ್ಪತ್ತಿಸ್ತು ಜಂಗಮಾತ್| ಎಂಬ ಆಗಮ ವಾಕ್ಯದಂತೆ ಗುರುವಿನಿಂದ ಲಿಂಗವೂ ಜಂಗಮನಿಂದ ಗುರುವೂ ಉಂಟಾಗುತ್ತಾರೆಂದು ತಿಳಿಯಬೇಕು. ಎಂದಮೇಲೆ ಪಟ್ಟ ಚರಮೂರ್ತಿಗಳು ಹೇಗೆ ಜಂಗಮರಾಗುವರು? ತ್ಯಕ್ತಪ್ರವರ ಗೋತ್ರಶ್ಚ ಸೂತ್ರ ವರ್ಣಾದಿಕಂ ತಥಾ| ಎಂಬ ವಾತು ಲಾಗಮದ ಉಕ್ತಿಯಂತೆ ಈ ಪಟ್ಟ ಚರಂತೆಪ್ಪನವರು ಸೂತ್ರ ಗೋತ್ರ ವಿರಹಿತರಾಗಿದ್ದಾರೆಯೇ? ಇಲ್ಲವೇ ಇಲ್ಲ. ಎಂದಮೇಲೆ ಇವರೇ ಜಂಗಮರೆಂದು ಹೇಳುವದು ಶಾಸ್ತ್ರಕ್ಕೂ ಅನುಭವಕ್ಕೂ ವಿರೋಧವಲ್ಲವೆ?

ಅಂಘ್ರಿ ಪ್ರಕ್ಷಾಲಿತಂ ತೋಯಂ ರೇಣುಕಾದ್ಯಸನಾತನಾಃ|
ಕಾಂಕ್ಷಯಂತಿ ಸದಾಶಾಂತಿಂ ಕಿಮನ್ಯೇನರದೇವತಾಃ|| ಎಂಬ ಆಗ ಮೋಕ್ತಿಯಂತೆ ರೇಣುಕಾದಿ ಆಚಾರ್ಯರೇ ಜಂಗಮ ಪಾದ ತೀರ್ಥವ ನ್ನು ಅಪೇಕ್ಷಿಸಿರುವಾಗ ಈಗಿನ ಆಚಾರ್ಯರಿಗೂ ಆ ಪಾದ ತೀರ್ಥವು ಬೇಕೇಬೇಕಷ್ಟೆ. ಇವರು ಪಟ್ಟ ಚರಮೂರ್ತಿಗಳ ಪಾದ ತೀರ್ಥ ವನ್ನು ತೆಗೆದುಕೊಳ್ಳುವರೇ? ಇವರೇ ಜಂಗಮ ಮೂರ್ತಿಗಳಾ ಗಿದ್ದರೆ ಪಂಚಾಚಾರ್ಯರು ಅದೇಕೆ ಇವರ ಪಾದ ತೀರ್ಥವನ್ನು ಸೇವಿಸಬಾರದು?

ವಿರಕ್ತ ಸ್ವಾಮಿಗಳೇ ಜಂಗಮ ಮೂರ್ತಿಗಳಾಗಿದ್ದುದರಿಂದಲೇ ಪಂಚಾಚಾರ್ಯರು ಕೂಡಾ ಇವರನ್ನೇ ಮೊನ್ನೆಮೊನ್ನಿನವರೆಗೆ ತಮ್ಮ ಕ್ರಿಯಾಮೂರ್ತಿಗಳನ್ನಾಗಿ ಇಟ್ಟುಕೊಂಡು ಅವರ ಪಾದ ತೀರ್ಥವನ್ನು ಸೇವಿಸುತ್ತಿದ್ದರು. ಈ ಶಾಸ್ತ್ರ ಸಮ್ಮತವಾದ ರೂಢಿ ಯನ್ನು ಬಿಟ್ಟದ್ದರಿಂದಲೇ ಈ ಸಲ್ಲದ ಸೊಲ್ಲು ಎಲ್ಲೆಲ್ಲಿಯೂ ಹಬ್ಬಿದೆ. ದೈವಜ್ಞ ವಿನೋದ ಎಂಬ ಲೇಖಕರು ಬರೆದಿರುವ ಇಂಥ ಅನೇಕ ತಪ್ಪು ಅಭಿಪ್ರಾಯಗಳ ಕಡೆಗೆ ವೀರಶೈವ ಪ್ರಾಜ್ಞರು ಎಂದೂ ಲಕ್ಷಿಸುವುದಿಲ್ಲ. ಅನೇಕ ಪಟ್ಟ ಚರಮೂರ್ತಿಗಳು ಈಗಲೂ ವಿರಕ್ತ ಸ್ವಾಮಿಗಳೇ ಜಂಗಮರೆಂದು ತಿಳಿದು ನಿಜವಾದ ಮಾರ್ಗವೆಲ್ಲಿದ್ದು ಕೊಂಡು ತಾವೂ ಶಿಷ್ಯರಿಂದ ಪೂಜ್ಯರಾಗಿಯೇ ಇದ್ದಾರೆ. ಹೀಗಿರು ವುದೇ ಧರ್ಮವು. ವಿರಕ್ತರು ಜಂಗಮರಲ್ಲವೆಂಬುದೇ ಅಧರ್ಮವು.

ವೀರಶೈವ ಪ್ರಾಜ್ಞ.

ಶಾ. ಶ. ೧೮೫೫ ನೆಯ ಮಾಘ ಬ. ೧೩ ಸೋಮವಾರ.

ಆದಿಜನರೋ? ಹರಿಜನರೋ?

ಮಹಾತ್ಮಾ ಗಾಂಧೀಜಿಯವರು ಇಷ್ಟರಲ್ಲೇ ಬ್ರಿಟಿಶ್ ಕರ್ನಾಟಕಕ್ಕೆ ಆಗಮಿಸುವವರಿದ್ದಾರಷ್ಟೆ. ಆಗ ಕರ್ನಾಟಕದಿಂದ ಮಹಾತ್ಮಾಜಿಯವರು ಪ್ರಾರಂಭಿಸಿರುವ ಅಸ್ಪೃಶ್ಯತಾ ನಿವಾರಣೆಯ ಮಹತ್ಕಾರ್ಯಕ್ಕೆ ತುಂಬಾ ಧನಸಹಾಯವೂ, ಜನಸಹಾಯವೂ ಹರಿಯಬೇಕಾದುದು ಅತ್ಯಾವಶ್ಯಕವಾಗಿದೆ. ಹೀಗೆ ತನುಮನಧನ ಗಳಿಂದ ಸಹಾಯಮಾಡುವವರು ತಾವು ಯಾವ ಜನರಿಗೆ ನೆರವಾಗು ತ್ತಿದ್ದೇವೆಂಬುದನ್ನು ಬಲ್ಲರಷ್ಟೆ. ಅವರು ಆದಿ ಜನರೋ? ಹರಿ ಜನರೋ?

ಹೀನ ದೀನ ಸ್ಥಿತಿಗಳಲ್ಲಿರುವ ನಮ್ಮ ಧರ್ಮ ಮತ್ತು ದೇಶ ಬಾಂಧವರಾದ ಆ ಜನರನ್ನು ಕನ್ನಡಿಗರಾದ ನಾವು ಯಾವ ಹೆಸ ರಿನಿಂದ ಕರೆಯೋಣ? ನಾವು ಹೇಳುವ ಹೆಸರು ಸಾರ್ಥಕವಾದು ದಾಗಿರಬೇಕಲ್ಲವೆ? ಮೊದಲು ಅಸ್ಪೃಶ್ಯರೆಂದು ಹೇಳುತ್ತಿದ್ದೆವು. ಅದು ಹರಿಯಾಗಿಯೂ ಇತ್ತು. ಏಕೆಂದರೆ ಆಗ ಅವರನ್ನು ಮುಟ್ಟುವುದು ಮಹಾಪಾಪವೆಂಬ ತಪ್ಪು ತಿಳುವಳಿಕೆಯಿದ್ದಿತು. ಅದನ್ನು ತೆಗೆದು ಹಾಕಲು ನಾವು ಸಿದ್ಧರಾದ ನಂತರ ಆ ಹೆಸರನ್ನೂ ತೆಗೆದು ಹಾಕುವುದು ವಿಹಿತವೇ ಆಗಿದೆ.

ಇತ್ತಲಾಗಿ ಗಾಂಧೀಜಿಯವರು ಅವರಿಗೆ 'ಹರಿಜನ' ಎಂದು ಕೊಟ್ಟರು. ಸಕಲರೂ ಹಾಗೆಯೇ ಹೇಳಲಾರಂಭಿಸಿದರು. ಆ ಹೆಸರಿನ ಅರ್ಥವೇನು? 'ಹರಿಜನ' ಎಂದರೆ ವಿಷ್ಣು ಭಕ್ತರು ಎಂಬುದು ಯಾರಿಗಾದರೂ ತಿಳಿಯುವ ಅರ್ಥ. ಹಾಗೆ ಇವರನ್ನು ನ್ನು ಮೇಲೆ ವಿಷ್ಣುಪೂಜಕರನ್ನಾಗಿ ಮತಾಂತರಗೊಳಿಸಿದ್ದಾ ರೆಯೆ? ಇಲ್ಲವೇ ಇಲ್ಲ. ಹರಿ ಎಂದರೆ ವಿಷ್ಣು ಎಂಬ ಅರ್ಥವೇ ಅಲ್ಲ; ದೇವರು ಎಂಬ ಅರ್ಥ. ಆದಕಾರಣ ದೇವರ ಜನರೆಂಬುದೇ ಇದರರ್ಥವೆಂಬುದಾಗಿ ಗಾಂಧೀಜಿಯವರ ಅಭಿಪ್ರಾಯ.

ಅವರೇನೋ ಹಾಗೆ ಅರ್ಥ ಮಾಡಿಕೊಂಡಿರಬಹುದು. ಹರಿ ಎಂಬ ಶಬ್ದಕ್ಕೇನೇ ದೇವರೆಂದು ಅರ್ಥವಾಗುವುದೇ? ಯಾವ ಶಬ್ದ ವಾದರೂ ದೇವರೆಂದೇ ಅರ್ಥಮಾಡಬಹುದು. ಶಬ್ದವು ಅಕ್ಷರ ಗಳಿಂದಾಗುತ್ತದೆ. ಅಕ್ಷರವೆಂದರೇನೇ ದೇವರು. ಈ ವ್ಯಾಪಕಾರ್ಥ ದಲ್ಲಿನ ಸಾಮಾನ್ಯರ ಭಾವನೆಗೆ ನಿಲುಕುವುದೂ ಬಳಕೆಯಲ್ಲಿ ಬರುವುದೂ ಅಸಾಧ್ಯ. ಆದಕಾರಣ ಹರಿ ಶಬ್ದವು ಬಳಕೆಯಲ್ಲಿರುವೆ ವಿಷ್ಣು ವೆಂಬ ದೇವರನ್ನೇ ಸೂಚಿಸತಕ್ಕುದಾಗಿದೆ.

'ಹರಿ' ಎಂದರೆ ಸಿಂಹ. ಆ ಜನರು ಸಿಂಹನಂತೆ ಶೂರರಾದ ಕಾರಣ ಗಾಂಧೀಜಿಯವರು ಹೀಗೆ ಹೇಳಿರುವುದಾಗಿ ಕೆಲವರು ಪ್ರತಿ ಪಾದಿಸುವುದೂ ಉಂಟು. ಇವೆಲ್ಲ ಆ ಹೆಸರನ್ನು ಸ್ಥಿರಪಡಿಸುವು ದಕ್ಕಾಗಿ ಮಾಡುವ ಸಾಹಸಗಳೇ ವಿನಾ ನಿಜಾರ್ಥದ್ಯೋತಕ ಗಳಲ್ಲ. ಅವರು ಸಿಂಹನಂತೆ ಶೂರರಿದ್ದಿದ್ದರೆ ಇಲಿಯ ಹಾಗೆ ಅಡಗಿ ಕುಳಿತು ಕೊಳ್ಳುತ್ತಿರಲಿಲ್ಲ.

ಈ ಜನರಲ್ಲಿ ಬಹು ಸಂಖ್ಯಾಕರು ಹಿಂದುಸ್ಥಾನದ ಮೂಲ ನಿವಾಸಿಗಳು. ಆರ್ಯರು ಈ ದೇಶಕ್ಕೆ ಬಂದ ನಂತರ ಇವರನ್ನು ಈ ದುರವಸ್ಥೆಗೀಡುಮಾಡಿದರು. ಆರ್ಯರ ಅತ್ಯಂತ ಘಾತಕ ನಾದ ಚಾತುರ್ವರ್ಣಗಳಿಗೆ ಬಲಿಬಿದ್ದ ಈ ದೇಶದ ದ್ರಾವಿಡರೇ ಮೊದಲಾದಜನರೂ ಇವರನ್ನು ಮೂಲೆಗೊತ್ತಿದರು. ಹೊಲಿಯ, ಮಾದಿಗ, ಪರಿಯಾ, ಮೊದಲಾದ ಶಬ್ದಗಳೇ ಇವರು ಈ ದೇಶದ ಬಹು ಪ್ರಾಚೀನ ನಿವಾಸಿಗಳೆಂಬುದನ್ನು ಸ್ಪಷ್ಟಗೊಳಿಸುತ್ತವೆಂದು ತಹಸಿ ವಿಶ್ವಲರಾವುಜಿ ಶಿಂದೆ ಇವರು ಬರೆದಿರುವ "ಭಾರ ತೀಯ ಅಸ್ಪೃಶ್ಯತೆಯ ಪ್ರಶ್ನೆ" ಎಂಬ ಪುಸ್ತಕದಲ್ಲಿ ಅನೇಕ ಆಧಾ ರಗಳಿಂದ ದೃಢೀಕರಿಸಿದ್ದಾರೆ.

ಈ ಲೇಖಕರು ಅತ್ಯಂತ ವಿಷಾದದಿಂದ ಹೀಗೆ ಬರೆದಿದ್ದಾರೆ— "ಹತಭಾಗ್ಯರಾದ ಈ ಜನರ ಸ್ವಾತಂತ್ರ್ಯ ಸಂಪತ್ತುಗಳನ್ನು ನೊದಲು ಹರಣ ಮಾಡಿ ಆ ಮೇಲೆ ಅವರ ಇತಿಹಾಸವನ್ನೂ ನಾಶ ಗೊಳಿಸಿ ಕೊನೆಗೆ ಅವರ ಹೀನತ್ವಕ್ಕೆ ಸರಿಯಾಗಿ ನಿರಾಧಾರಗಳಿಂದ ಅವರ ಹೆಸರಿನ ವ್ಯಾಖ್ಯೆಯನ್ನು ಮಾಡುವುದು ಅತ್ಯಂತ ಅನುಕಂಪ ನೀಯವಾದುದು."

ಹಿಂದೆ ಅನೇಕ ಮಹಾತ್ಮರು ಈ ಜನರಿಗೆ ತಮ್ಮ ಮತಸಂಸ್ಥಾ ರಗಳನ್ನು ಮಾಡಿ ಅಸ್ಪೃಶ್ಯತೆಯನ್ನು ಕಳೆದಿರುವರು. ಈಗಿನ ಮಹಾತ್ಮರಾದರೋ, ಇವರಿಗೆ ತಮ್ಮ ಮತದ ನಾಮಕರಣ ಮಾಡಿ ಅಸ್ಪೃಶ್ಯತೆಯನ್ನು ಕಳೆಯುತ್ತಿದ್ದಾರೆಂದು ಬಹುಜನರು ತಿಳಿದು ಕೊಳ್ಳಲು ಅಸ್ಪದವಾಗುವ ರೀತಿಯಲ್ಲಿಯೇ ಹರಿಜನ ಶಬ್ದವಿರುವುದ ರಿಂದ ಹೇಗೆ ಅಸಂಗತವೋ ಹಾಗೆ ಅಹಿತಕರವೂ ಆಗಿದೆ. ಮೊದಲೇ ಹೆಚ್ಚಾಗಿರುವ ಮತಾಂತರಗಳಲ್ಲಿ ಇದೊಂದು ಗೊಂದಲವೇಕೆ?

ಗಾಂಧೀಜಿಯವರ ಚಟುವಟಿಕೆಯ ಮುಂಚೆಯೇ ಈ ಜನರು ಆದಿದ್ರಾವಿಡರು, ಆದಿಕರ್ನಾಟಕರು ಎಂದು ಹೇಳಿಕೊಳ್ಳುತ್ತಿರ ಲಿಲ್ಲವೇ? ಈ ಹೆಸರುಗಳಿಂದಲೂ ಇವರು ತಾವೇ ಈ ದೇಶಕ್ಕೆ ಆದಿ ಜನಗಳೆಂದು ತಿಳಿದಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇದು ನಿಜ ವಾಗಿಯೂ ಇದೆ. ಹೀಗೆ ನಿಜವಾದ ಸಂಗತಿಯೇ ಅವರಲ್ಲಿ ಬೇರೂರಿ ಅವರು ಈ ದೇಶದ ವಿಷಯವಾಗಿ ನಮಗಿಂತಲೂ ಹೆಚ್ಚು ಆದ ರಾಭಿಮಾನವುಳ್ಳವರಾಗುವಂತೆ ಅವರಿಗೆ ಆದಿಜನರೆಂದು ಹೇಳು ವುದೇ ಸಮಂಜಸವೂ ಹಿತಕರವೂ ಆಗಿಲ್ಲವೆ?

ಹೆಸರಿನಲ್ಲೇನಿದೆ? ಇದಕ್ಕೇಕೆ ಇಷ್ಟು ಚರ್ಚೆ? ಎಂದು ಕೆಲವರು ಕೇಳಬಹುದು. ಹಾಗಾದರೆ ಮೊದಲಿದ್ದ ಹೆಸರನ್ನೇಕೆ ತೆಗೆದರು? ಹೆಸರಿನಲ್ಲಿಯೂ ಅರ್ಥವಿದೆ. ಆ ಅರ್ಥವೇ ಮನುಷ್ಯನ ಭಾವನೆಗಳನ್ನು ರೂಪುಗೊಳಿಸುತ್ತದೆ. ಆ ರೂಪುಗೊಂಡ ಭಾವ ನೆಯೇ ಕಾರ್ಯಕ್ಕೆ ಮೂಲವು. ಆದುದರಿಂದ ಜನಾಂಗದ ಈ ಹೆಸರಿನಲ್ಲೇನಿದೆಯೆಂದು ಉಪೇಕ್ಷಿಸುವುದು ವಿಹಿತವಲ್ಲ.

ಈ ಎಲ್ಲ ಸಂಗತಿಗಳನ್ನು ನಮ್ಮ ಕನ್ನಡಿಗರು ನಿಷ್ಪಕ್ಷಪಾತ ವಾಗಿ ದೂರಯೋಚಿಸಿ ಗಾಂಧೀಜಿಯವರ ಮುಂದೆ ಸಹ ಆದಿಜನ ಎಂಬ ಶಬ್ದವನ್ನೇ ಉಪಯೋಗಿಸಿ ಆ ಮಹಾತ್ಮರು ಕೂಡಾ ಇತ್ತ ಲಕ್ಷಿಸುವಂತೆ ಮಾಡುವರೆಂದು ನಂಬಿದ್ದೇವೆ.

ಶರಣರಾಗಮನ!

೭೭೦ನೆಯ ವರುಷಕ್ಕೆ ಕುಲಗಿರಿಗಳು ಕಡುಗುವವು. ಗಂಗೆ ಗುಪ್ತಳಾಗುವಳು. ಆಂದು ಶರಣರು ಬರುವರು. ಎಂಬ ಹಿಂದಣ ಶಿವಶರಣ ಕಾಲಜ್ಞಾನ ಇಂದು ಫಲಿಜವಾಯಿತು. ಆದೇನು ಅತೀಂದ್ರಿಯ ಜ್ಞಾನೋಕ್ತಿಯೇ? ಗ್ರಹಮಂಡಲ ಜ್ಞಾನ ವಚನವೋ? ಮಾನವ ಪ್ರಾಣಿಯ ಚರಿತ್ರೆಯಲ್ಲಿ ಕಾಣದಂತಹ ಮೊನ್ನಿನ ಬಿಹಾರದ ಭೂಕಂಪದ ಕಾಲಕ್ಕೆ ಹಿಮಾಲಯವೂ ನಡುಗಿತು. ಗಂಗೆಯೂ ಗುಪ್ತಳಾದಳು.

ಬಸವಾದಿ ಶಿವಶರಣರು ಕ್ರಿ. ಶ. ೧೧೬೫ರಲ್ಲಿ ಬಯಲಾದರಷ್ಟೆ. ಇಂದಿಗೆ ೭೭೦ನೆಯ ವರುಷವೂ ಪ್ರಾರಂಭವಾಯಿತು. ಇದೇನು ಕಾಕತಾಲನ್ಯಾಯವೊ? ಸಹಜವೋ? ಇನ್ನು ಶರಣರು ಬರುವರೆಂದರೇನು? ಅವರ ಪಕ್ಷವೇ ಪ್ರಸಾರವಾಗಿ ವಿಜಯವಾಗುವುದು. ಜನ್ಮದಿಂದಲೇ ಮೇಲುಕೀಳುಗಳೆಂಬ ದುರ್ಭಾವನೆಯ ನಿವಾರಣೆ ಮಾಡುವುದೇ ಶರಣರ ಪಕ್ಷ. ಇದಕ್ಕಾಗಿಯೇ ಆಂದು ರಾಜ್ಯಕ್ರಾಂತಿಯಾಯಿತು. ಶರಣರೂ ಬಯಲಾದರು.

ಈಗ ಪುನಃ ಬಸವಾದಿಗಳ ಉಜ್ವಲ ತತ್ವ ವಿಶೇಷ ಪ್ರಸಾರವಾಗಲುಪಕ್ರಮಿಸಿರುವುದೂ ಅಸ್ಪೃಶ್ಯತಾ ನಿವಾರಣೆಯ ಕಾರ್ಯ ಪ್ರಚಂಡವಾಗಿ ಪ್ರಾರಂಭವಾಗಿರುವುದೂ ಆ ಶರಣರ ಪಕ್ಷವನ್ನೇ ಪುಷ್ಟಿಗೊಳಿಸುವುದಿಲ್ಲವೇ? ಅಸ್ಪೃಶ್ಯತೆಯ ಪಾಪವೇ ಬಿಹಾರದ ಭಯಂಕರ ಕ್ಷೋಭೆಗೆ ಕಾರಣವಾಯಿತೆಂದು ಗಾಂಧೀಜಿಯವರು ಹೇಳಿರುವುದರ ರಹಸ್ಯಾರ್ಥವೇನು? ಜನ್ಮದಿಂದಲೇ ಮೇಲುಕೀಳುಗಳೆಂಬ ಕುಸಂಸ್ಕಾರಜನ್ಯ ಪಾಪದಿಂದ ನಿವೃತ್ತರಾಗಿರೆಂದಲ್ಲವೆ? ಇದೇ ಶಿವಶರಣರ ಪಕ್ಷದ ಜೀವಾಳ.--ಈ ಪಕ್ಷದುದ್ಧಾರವೇ ಶರಣರಾಗಮಪ್ರ.

ಖಾದಿ ಸಂರಕ್ಷಣಾ ತಾಸನ

ಖಾದಿಯೆಂದರೆ ಕೈನೂಲು ಕೈಮಗ್ಗಗಳ ಬಟ್ಟೆಯೆಂದೇ ಸಕಲರ ತಿಳುವಳಿಕೆ. ಈ ತಿಳುವಳಿಕೆಯಿಂದ ಖಾದಿಯ ವಿಷಯದಲ್ಲಿರುವ ಜನರ ಪ್ರೇಮಾದರಗಳನ್ನು ನೋಡಿ ಕೆಲವು ಗಿರಣಿಯವರು ತಮ್ಮ ಗಿರಣಿಯ ಬಟ್ಟೆಗೂ ಖಾದಿಯೆಂದು ಹೇಳಿ ಜನರನ್ನು ಮೋಸಗೊಳಿಸಲಾರಂಭಿಸಿದ್ದಾರೆ. ಈ ಪ್ರಕಾರ ಮೋಸಗೊಳಿಸಲು ಅವಕಾಶವಾಗಬಾರದೆಂದು ಶ್ರೀ. ಗಯಾ ಪ್ರಸಾದ ಸಿಂಗ ಎಂಬುವವರು ಅಸೆಂಬ್ಲಿಯಲ್ಲಿ ಒಂದು ಗೊತ್ತುವಳಿಯನ್ನು ತಂದಿದ್ದರು. ಅದು ಕಳೆದ ಆಗಸ್ಟ ತಾರೀಖಿನ ದಿನ ಒಪ್ಪಿಗೆಯಾಯಿತು.

ಇನ್ನುಮೇಲೆ ಗಿರಣಿ ಬಟ್ಟೆಗೆ ಖಾದಿಯೆಂದು ಹೇಳಿ ಮಾರಿದರೆ ಅವರು ಶಿಕ್ಷೆಗೆ ಗುರಿಯಾಗುವರು. ಖಾದಿಯ ಪವಿತ್ರ ಹೆಸರನ್ನು ಈ ಪ್ರಕಾರ ಸಂರಕ್ಷಿಸಿ ಅದಕ್ಕೆ ಪ್ರೋತ್ಸಾಹ ದೊರೆಯುವಂತೆ ಮಾಡಿದುದರಿಂದ ಈ ಗಯಾ ಪ್ರಸಾದ ಸಿಂಗರನ್ನು ನಾವು ಮನಃಪೂರ್ವಕ ಅಭಿನಂದಿಸುತ್ತೇವೆ.

ಗಾಂಧೀಜಿಯವ ವಿಶ್ರಾಂತಿ

ಗಾಂಧೀಜಿಯವರು ಕಳೆದ ೨|| ತಿಂಗಳುಗಳಿಂದಲೂ ಸಂಚಾರದಲ್ಲಿದ್ದ ಕಾರಣ ಒಂದು ವಾರ ನೀಲಗಿರಿಯ ಬೆಟ್ಟದಲ್ಲಿ ಸಮುದ್ರದಿಂದ ೫೮೦೦ ಅಡಿ ಎತ್ತರದ ಮೇಲಿರುವ ಕುನ್ನೂರೆಂಬ ಅತ್ಯಂತ ರಮಣೀಯವಾದ ಸ್ಥಳದಲ್ಲಿರುವರು. ಇಲ್ಲಿಯೂ ಬಿಟ್ಟುಬಿಡದೆ ಕೆಲಸಗಳು ಇದ್ದೇ ಇವೆ. ಕಾರ್ಯಾಂತರವೇ ವಿಶ್ರಾಂತಿಯೆಂಬ ಲ್ಯೂಟಾರ್ಕರ ಅಭಿಪ್ರಾಯದಂತೆ ನಾನು ವಿಶ್ರಾಂತಿ ಹೊಂದುತ್ತಿದ್ದೇನೆಂದು ಗಾಂಧೀಜಿಯವರು ಹೇಳಿದ್ದಾರೆ.

ಗಾಂಧೀಜಿಯವರ ಕರ್ನಾಟಕ ಸಂಚಾರ.

ಈ ಮುಂಚೆ ಅನೇಕ ಸಾರೆ ಕಾರ್ಯಕ್ರಮ ಗೊತ್ತಾಗಿ ತಪ್ಪಿದ್ದಾಗಿದೆಯಷ್ಟೆ. ಇದು ಹಾಗಲ್ಲ. ಶ್ರೀ. ಪಾಟೇಲ ವೀರನ ಗೌಡರು ಗಾಂಧೀಜಿಯವರನ್ನು ಕಂಡು ಮಾತನಾಡಿ ೧೫ ದಿನಗಳ ಸಂಚಾರದ ಈ ವ್ಯಾಪಕ ಕಾರ್ಯಕ್ರಮವನ್ನು ಗೊತ್ತು ಮಾಡಿದ್ದಾರೆ ಇದರಲ್ಲಿ ವ್ಯತ್ಯಾಸವಾಗುವಂತಿಲ್ಲ. ಆದುದರಿಂದ ಆಯಾಯ ಸ್ಥಳಗಳ ಮಹಾಶಯರು ಈಗಿನಿಂದಲೇ ಗಾಂಧೀಜಿಯವರ ಸ್ವಾಗತದ ಸಿದ್ಧತೆಯನ್ನಿಟ್ಟುಕೊಂಡು ಈ ಸಂಚಾರವು ಸುಖಕರವೂ ಜಯಪ್ರದವೂ ಆಗುವಂತೆ ಪ್ರಯತ್ನಿಸಬೇಕು.

ಕೊಡಗು ಪ್ರಾಂತ— ತಾ. ೨೨, ೨೩-೨-೩೪.

೧ ಪನ್ನಂಪೇಟೆಗೆ ಗುರುವಾರ ಸಾಯಂಕಾಲ ಬಂದ ನಂತರ ಶುಕ್ರವಾರ ೨ ವೀರರಾಜೇಂದ್ರ ಪೇಟೆ ೩ ಮಡಿಕೆರೆ ೪ ಫ್ರೇಜರ ಪೇಟೆ ತಿರುಗಿ ಮಡಿಕೆರೆ.

ದಕ್ಷಿಣ ಕನ್ನಡ—ತಾ. ೨೪ ರಿಂದ ೨೭.

೧ ಪುತ್ತೂರು, ೨ ಮಂಗಳೂರು, ೩ ಮುಲ್ಕಿ, ೪ ಉಡುಪಿ, ೫ ಕುಂದಾಪುರ, ಇಲ್ಲಿಯೇ ಮಹಾತ್ಮರ ಸೋಮವಾರದ ಮೌನವ್ರತ, ಮಂಗಳವಾರದ ವಿಶ್ರಾಂತಿ.

ಉತ್ತರ ಕನ್ನಡ—ತಾ. ೨೭ರಿಂದ ಮಾರ್ಚ ೧.

೧ ಕುಂದಾಪುರದಿಂದ ಕಾರವಾರಕ್ಕೆ ಸಮುದ್ರದಲ್ಲಿ ಪ್ರಯಾಣ. ೨ ಅಂಕೋಲಾ, ೩ ಕುಮುರೆ, ೪ ಶಿರಸಿ, ೫ ಸಿದ್ದಾಪುರ.

ಹಾವೇರಿಧಾಗ ಮಾರ್ಚ ೧-೨.

೧ ಅಕ್ಕಿ ಆಲೂರು, ೨ ಹಾವೇರಿ, ೩ ರೇಲ್ವೆ ಮೂಲಕ ಬ್ಯಾಡಗಿ, ೪ ಬ್ಯಾಡಗಿಯಿಂದ ರೇಲ್ವೆ ಮೂಲಕ ರಾಣೆಬೆನ್ನೂರು ಸ್ಟೇಶನ್ನಿನಲ್ಲಿ ಸಭೆಯ ಕೆಲಸ ಮುಗಿಸಿ ದಾವಣಗೆರೆಗೆ ಪ್ರಯಾಣ.

ಬಳ್ಳಾರಿ ಜಿಲ್ಲಾ ತಾ. ೨-೩.

೧ ಹರಪನ ಹಳ್ಳಿ, ೨ ಕೊಟ್ಟೂರು, ೩ ಸೊಂಡೂರು, ೪ ಬಳ್ಳಾರಿ, ೫ ಹೊಸಪೇಟೆ ಸ್ಟೇಶನ್ನಿನ ಮೇಲೆ ಸಭೆ.

ಧಾರವಾಡ ಜಿಲ್ಲಾ— ತಾ. ೩-೪.

೧ ಹೊಸ ಪೇಟೆಯಿಂದ ಮಧ್ಯಾನ್ಹ ಗಾಡಿಯಲ್ಲಿ ಗದಗಿಗೆ ತಾ. ೩ನೆಯ ಸಾಯಂಕಾಲಕ್ಕೆ ಬರುವರು. ೨ ಜಕ್ಕಲಿ, ೩ ಸಾಯಂಕಾಲಕ್ಕೆ ರೇಲ್ವೆ ಮೂಲಕ ಹುಬ್ಬಳ್ಳಿಗೆ, ೪ ಧಾರವಾಡಕ್ಕೆ ತಾ. ೪ನೆಯ ಮುಂಜಾನೆ.

ಬೆಳಗಾವ ಜಿಲ್ಲಾ— ತಾ. ೪-೫.

೧ ಸವದತ್ತಿ, ೨ ಬೈಲಹೊಂಗಲ, ೩ ಬೆಳಗಾವ. ಸೋಮವಾರ ಮತ್ತು ಮಂಗಳವಾರ ಬೆಳಗಾಂವಿಯಲ್ಲಿಯೇ ಇರುವರು. ೪ ಹುಕ್ಕೇರಿ, ೫ ಸಂಕೇಶ್ವರ, ೬ ನಿಪ್ಪಾಣಿ, ೭ ಚಿಕ್ಕೋಡಿ ಇಲ್ಲಿಂದ ತಾ. ೬ನೆಯ ದಿವಸ ಮುಂಜಾನೆ ರೇಲ್ವೆ ಮೂಲಕ ಶೇಡಬಾಳ, ೮ ಅಥಣಿ.

ವಿಜಾಪುರ ಜಿಲ್ಲೆಯಲ್ಲಿ ಕಾಲು ತಾಸು!

ವಿಜಾಪುರಕ್ಕೆ ಅಥಣಿಯಿಂದ ತಾ. ೭ನೆಯ ಮಧ್ಯಾಹ್ನ ೧ ಗಂಟೆಗೆ ಬಂದು ೨|| ಇಂದ ೪|| ವರೆಗೆ ಸಭೆಯ ಕೆಲಸ ತೀರಿಸಿ ೫ ಗಂಟೆಗೆ ರೇಲ್ವೆ ಮೂಲಕ ಹುಬ್ಬಳಿಗೆ ಕಡೆ ತಿರಗುವರು.

ವಿವಿಧ ವಿಷಯ.

ತುರ್ಕಸ್ಥಾನದಲ್ಲಿ ಜಾಗೃತಿ.

ತುರ್ಕಸ್ಥಾನವು ಕೇಮಾಲ ಪಾಶಾರವರ ನೇತೃತ್ವದಲ್ಲಿ ಈಗ ಜಗತ್ತಿನ ರಾಷ್ಟ್ರಗಳಲ್ಲಿ ಉನ್ನತ ಸ್ಥಾನವನ್ನು ಹೊಂದಲು ಪ್ರಯತ್ನಿಸುತ್ತಲಿದೆ. ಇದಕ್ಕಾಗಿ ಅವರು ಸಾಮೂಹಿಕ ಚಟುವಟಿಕೆಯನ್ನು ವಿಶೇಷವಾಗಿ ಉಪಕ್ರಮಿಸಿದ್ದಾರೆ. ಕೆಲವು ದಿವಸಗಳ ಪೂರ್ವದಲ್ಲಿ ನಡೆದ ಲೋಕಸತ್ತೆಯ ೧೦ನೆಯ ವಾರ್ಷಿಕ ಸಮಾರಂಭವು ಮಹತ್ತರವಾದುದು. ತುರ್ಕಸ್ಥಾನದ ಪ್ರತಿಯೊಂದು ಹಳ್ಳಿಯಿಂದಲೂ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀ ಮತ್ತು ಒಬ್ಬ ಬಾಲಕ ಹೀಗೆ ಸರಕಾರದ ಅತಿಥಿಗಳೆಂದು ಆಯಾ ಮುಖ್ಯ ಪಟ್ಟಣಕ್ಕೆ ಕಳಿಸಬೇಕೆಂದು ಅಪ್ಪಣೆ ಮಾಡಿದ್ದರು. ಸಮಾರಂಭದ ಕಾಲದಲ್ಲಿ ರಾತ್ರಿ ೧೧ ಘಂಟೆಗೆ ಒಂದು ಮಿನಿಟಿನವರೆಗೆ ದೇಶದಲ್ಲೆಲ್ಲ ಸ್ತಬ್ಧತೆಯಿರುವ ವ್ಯವಸ್ಥೆ ಮಾಡಲ್ಪಟ್ಟಿತು. ೪೦೦ ವಿಮಾನಗಳು ಆಕಾಶದಲ್ಲಿ ಹಾರಾಡುತ್ತ ತುರ್ಕಸ್ಥಾನದ ತುಂಬೆಲ್ಲ ೫ ಕೋಟಿ ಪ್ರಕಟನಾ ಪತ್ರಿಕೆಗಳನ್ನು ಹಂಚಿದವು. ಅಂದು ಕೇಮಾಲ ಪಾಶಾರವರು ೧ ಲಕ್ಷ ಜನಸಮುದಾಯದ ಮುಂದೆ ಭಾಷಣ ಮಾಡುವಾಗ್ಗೆ— "ನಮ್ಮ ಕೆಲಸವಿನ್ನೂ ಅಪೂರ್ಣವಾಗಿದೆ. ನಮ್ಮ ಪಿತೃದೇಶಕ್ಕೆ ಜಗತ್ತಿನಲ್ಲಿ ಒಳ್ಳೇ ದೊಡ್ಡಿಸ್ತನ ಮತ್ತು ವೈಭವದ ಸ್ಥಾನವು ದೊರೆಯಬೇಕು." ಎಂದು ಹೇಳಿದರು. ಜಗತ್ತಿನ ರಾಷ್ಟ್ರಗಳೆಲ್ಲ ಈ ಪ್ರಕಾರವಾಗಿ ಜಾಗೃತವಾಗುತ್ತಿರಲು ಹಿಂದುಸ್ಥಾನವು ಎಲ್ಲಿ ಇದೆ?

ಔದ್ಯೋಗಿಕ ಕ್ರಾಂತಿ.

ಇಜಿಪ್ತ ದೇಶದಲ್ಲಿ ಸ್ವಯಂಪೂರ್ಣವಾಗುವ ಪರಿಸ್ಥಿತಿಯಿಲ್ಲ. ಅಲ್ಲಿಯ ಮುಖ್ಯ ಬೆಳೆಯು ಹತ್ತಿಯು. ಅಲ್ಲಿಯ ಹತ್ತಿಯು ಜಗತ್ತಿನಲ್ಲಿ ಮೂರನೆಯ ಸ್ಥಾನವನ್ನು ಪಡೆದಿರುತ್ತದೆ. ಈ ಹತ್ತಿಯನ್ನು ಪರದೇಶಗಳಿಗೆ ಮಾರಿ ಬಂದ ಹಣದಿಂದ ತಮಗೆ ಅವಶ್ಯಕವಾದ ಪದಾರ್ಥಗಳನ್ನು ಪರದೇಶಗಳಿಂದ ಕೊಂಡುಕೊಳ್ಳುತ್ತಾರೆ. ಆದರೆ ಸದ್ಯಕ್ಕೆ ಹತ್ತಿಯ ಬೆಳೆಯು ಬಹಳವಾಗಿ ಇಳಿದದ್ದರಿಂದ ಹತ್ತಿಯನ್ನು ಬೆಳೆಯುವದು ಬಹಳ ಹಾನಿಕಾರಕವಾಗಿದೆ. ಆದುದರಿಂದ ಅಲ್ಲಿಯ ಜನರು ಇನ್ನು ಮೇಲೆ ತಮ್ಮ ಜೀವನವು ನಡೆಯಬೇಕಾದರೆ ನಮ್ಮಲ್ಲಿ ಬೆಳೆಯುವ ಹತ್ತಿಯನ್ನು ನಾವೇ ಬಟ್ಟೆ ಮಾಡಿಕೊಂಡು ಹತ್ತಿಯ ಸರಕನ್ನು ವೆಚ್ಚಮಾಡಬೇಕೆಂಬ ವಿಚಾರವುಳ್ಳವರಾಗಿದ್ದಾರೆ. ಕೈರೋ ಮತ್ತು ಅಲೆಗ್ಜಾಂಡ್ರಿಯಾ ಪಟ್ಟಣಗಳಲ್ಲಿ ಬರಹೋಗುವ ಸರಕುಗಳ ವ್ಯಾಪಾರ ಮಾಡುವ "ದಿ ಇಜಿಪ್ಷಿಯನ್ ಮಿಸರ ಕಂಪನಿ" ಎಂಬ ವ್ಯಾಪಾರಿ ಸಂಸ್ಥೆಯವರ ಕೈಯಲ್ಲಿ ದೊಡ್ಡ ಹತ್ತಿಯ ಹೊಲಗಳೂ, ಹಿಂಜುವ ಗಿರಣಿಗಳೂ ಇರುತ್ತವೆ. ಲ್ಯಾಂಕಶಾಯರದಲ್ಲಿ ಕೆಲವು ಗಿರಣಿಗಳು ವ್ಯಾಪಾರಿ ದುರವಸ್ಥೆಯಿಂದ ಮೂಲೆಗುಂಪಾಗಿ ಬಿದ್ದಿದ್ದನುಗಳನ್ನು ಈ ಕಂಪನಿಯವರು ಕೊಂಡು ಕೊಂಡು ಜಗತ್ತಿನಲ್ಲಿ ಅತಿ ದೊಡ್ಡ ಅರಿವೆಯ ಗಿರಣಿಯನ್ನು ಸ್ಥಾಪಿಸಲು ನಿಶ್ಚಯಿಸಿರುವರು. ಈ ಕೆಲಸವನ್ನು ಒಂದು ವರುಷದಲ್ಲಿ ಪೂರ್ಣ ಮಾಡುವರು.

ಹತ್ತಿಯ ಉತ್ಪಾದನೆಯಲ್ಲಿ ತನ್ನ ಸ್ಥಾನವನ್ನು ಪಡೆದ ಹಿಂದುಸ್ಥಾನವು ತನ್ನ ಚಿಕ್ಕ ತಮ್ಮನನ್ನು ನೋಡಿಯಾದರೂ ಸ್ವಾವಲಂಬಿಯಾಗಬಾರದೇ?

ಜಪಾನದ ವ್ಯಾಪಾರ ವೃದ್ಧಿ.

ಕಳೆದ ವರುಷದಲ್ಲಿ ಜಪಾನದ ವ್ಯಾಪಾರದ ಬೆಳವಣಿಗೆಯು ಎಷ್ಟಾಗಿದೆಯೆಂಬುದು ಕೆಳಗಿನ ಅಂಕಗಳಿಂದ ಗೊತ್ತಾಗುತ್ತದೆ. ೧೯೩೩ನೆಯ ಇಸವಿಯಲ್ಲಿ ೩೯ ಕಾರ್ಯಾಲಯಗಳಿಗೆ ನೂರಕ್ಕೆ ೫.೭ ರಂತೆ ಲಾಭವಾಯಿತು. ಈ ಲಾಭವು ೧೯೩೪ನೆಯ ಇಸವಿಯಲ್ಲಿ ನೂರಕ್ಕೆ ೧೨.೫ಷ್ಟು ಬೆಳೆಯಿತು. ೧೯೩೩ನೆಯ ಇಸವಿಯಲ್ಲಿ ೫೭೧ ಲಕ್ಷ ಎನ್ (ಜಪಾನದ ನಾಣ್ಯ) ಬೆಲೆಯ ಸರಕುಗಳು ಪರದೇಶಕ್ಕೆ ಕಳುಹಿಸಲ್ಪಟ್ಟವು. ಮುಂದಿರಡು ವರುಷಗಳಲ್ಲಿ ಈ ವ್ಯಾಪಾರವು ೧೫೬ ಲಕ್ಷದವರೆಗೆ ಬೆಳೆಯಿತು. ಇದರಿಂದ ನಿರುದ್ಯೋಗತನವೂ ಕಡಿಮೆಯಾಯಿತು. ಅರಿವೆಯ ವ್ಯಾಪಾರದಲ್ಲಿ ಜಪಾನವು ಇಂಗ್ಲೆಂಡನ್ನು ಸೋಲಿಸಿಬಿಟ್ಟಿದೆ. ೧೯೨೯ನೆಯ ಇಸವಿಯಲ್ಲಿ ಇಂಗ್ಲೆಂಡ ದೇಶವು ೩೮೬೬೦ ಲಕ್ಷ ಗಜ ಬಟ್ಟೆಯನ್ನು ಪರದೇಶಗಳಿಗೆ ಕಳುಹಿಸಿತು. ಅದೇ ಕಾಲಕ್ಕೆ ಜಪಾನವು ೧೪೮೮೦ ಲಕ್ಷ ಗಜ ಅರಿವೆಯನ್ನು ಕಳಿಸಿತು. ಆದರೆ ೧೯೩೩ನೆಯ ಇಸವಿಯಲ್ಲಿ ಜಪಾನವು ಇಂಗ್ಲೆಂಡದಕಿಂತ ಹೆಚ್ಚು ಗಜ ಅರಿವೆಯನ್ನು ಕಳಿಸಿತು. ಅಕ್ಕಿಯ ವ್ಯಾಪಾರದಲ್ಲಂತೂ ಜಪಾನವು ಅಗ್ರೇಸರತ್ವವನ್ನು ಹೊಂದಿದೆ. ದೊಡ್ಡ ಗಿರಾಕಿಯಾದ ಚೀನ ದೇಶವು ಜಪಾನದ ಸರಕುಗಳಿಗೆ ತಡೆಯನ್ನು ಹಾಕಿದ್ದರೂ ಮತ್ತು ಅಮೇರಿಕಾ, ಇಂಗ್ಲೆಂಡದಂಥ ಪ್ರತಿಸ್ಪರ್ಧಿಗಳು ವ್ಯವಹಾರ ಕ್ಷೇತ್ರದಲ್ಲಿ ಮೇಲಾಟ ಮಾಡುತ್ತಿದ್ದರೂ ಜಪಾನವು ತನ್ನ ವ್ಯಾಪಾರಿ ಓಜಸ್ವಿತೆಯನ್ನು ಸ್ಥಿರವಾಗಿ ಕಾಯ್ದುಕೊಂಡಿದೆ. ಇದು ಅವರ ಕಾರ್ಯತೀಲತೆಯನ್ನು, ವ್ಯವಹಾರ ಚಾತುರ್ಯವನ್ನು ವ್ಯಕ್ತಪಡಿಸುವದಿಲ್ಲವೇ?

ಪುನಃ ಭೂಕಂಪ.

ಳನೆಯ ತಾರೀಖಿನ ದಿವಸ ಮೋಂಗೀರದಲ್ಲಿ ಅಲ್ಪ ಕಾಲಗಳವರೆಗೆ ೪ ಸಾರೆ ಭೂಕಂಪವಾಯಿತಂತೆ. ಅದರಿಂದ ಮೋಂಗೀರ ನಿರ್ಮಾಣದ ಪೂರ್ವ ಮತ್ತು ದಕ್ಷಿಣ ಭಾಗವು ಕಳಚಿಬಿದ್ದು ಕೆಳಗೆ ನಿಂತಿದ್ದ ಒಬ್ಬ ಕೂಲಿಯವನಿಗೆ ಭಯಂಕರ ಗಾಯಗಳಾಗಿವೆ. ಇದೇ ಕಾಲಕ್ಕೆ ಭೂಕಂಪದ ಹೊಡೆತದಿಂದಲೇ ಉತ್ತರ ಆಫ್ರಿಕೆಯಲ್ಲಿ ಸಮುದ್ರವು ಅಲ್ಲೋಲ ಕಲ್ಲೋಲವಾಗಿ ೫೦ ಫೂಟು ಎತ್ತರವಾದ ತೆರೆಗಳು ಏಳಹತ್ತಿದವು. ಇಂಥ ತೆರೆಗಳ ಹೊಡೆತಕ್ಕೆ ೧೦೦೦ ಫೂಟು ಉದ್ದವಾದ ಸಮುದ್ರ ದಂಡೆಯೆಲ್ಲ ಜಲಮಯವಾಗಿ ದಂಡೆಯ ಮೇಲಿದ್ದ ಮನೆಗಳಿಗೆಲ್ಲ ಬಹಳೇ ಹಾನಿಯಾಗಿದೆ. ಒಮ್ಮಿಂದೊಮ್ಮೆಲೇ ಉಂಟಾದ ಈ ಅಪಘಾತದಿಂದ ೩ ಜನರು ಮುಳುಗಿ ಸತ್ತರು. ಬರ್ಫವು ಬೀಳುತ್ತಿರುವುದರಿಂದಲೂ ಈ ಭಾಗದಲ್ಲಿ ಬಹಳೇ ಹಾನಿಯುಂಟಾಗಿದೆ.

ನೇಪಾಲದ ಜದನಗರ ಎಂಬ ಗ್ರಾಮದಲ್ಲಿ ಭೂಕಂಪದಿಂದ ಒಂದು ಪರ್ವತವು ಇಬ್ಭಾಗವಾಗಿ ಒಂದು ಭಯಂಕರ ಸಪ್ಪಳವು ಕೇಳಿಸಹತ್ತಿತು. ಇದರಿಂದ ಜನರ ಕಿವಿಗಳೆಲ್ಲ ಗಡಚಿಕ್ಕಿ ಹೋದವು. ಒಬ್ಬರಿಗೊಬ್ಬರ ಮಾತು ನಾಲ್ಕು ದಿವಸಗಳವರೆಗೆ ಕೇಳದಿದ್ದುದನ್ನು ಕಂಡು ಅವರು ತಾವು ಕಿವುಡರೇ ಆದೆವೆಂದು ತಿಳಿದುಕೊಂಡರು. ಆದರೆ ನಾಲ್ಕು ದಿವಸಗಳಾದಮೇಲೆ ಕಿವಿಗಳು ಕೇಳಿಸಹತ್ತಿದವು.

ಈ ಪ್ರಕಾರ ಹಿಂದುಸ್ಥಾನದಲ್ಲಿಯೇ ಏಕೆ ಜಗತ್ತಿನ ಇತಿಹಾಸದಲ್ಲಿಯೂ ಶಾಶ್ವತವಾಗಿ ಉಳಿಯುವಂತೆ ಭೂಕಂಪವು ಅಲ್ಲೋಲ ಕಲ್ಲೋಲವನ್ನುಂಟುಮಾಡಿತು.

ವಿಚಿತ್ರ ರೀತಿ

ಜಾವಾ ದ್ವೀಪದಲ್ಲಿ ಸುರಕರ್ತಾ ಎಂಬಲ್ಲಿ ಒಬ್ಬ ಸುಲ್ತಾನನು ರಾಜ್ಯವಾಳುತ್ತಾನೆ. ಅವನ ಅರಮನೆಯಲ್ಲಿ ರಾಜಮನೆತನದ ಸ್ತ್ರೀಯರನ್ನುಳಿದು ಎಲ್ಲ ಸ್ತ್ರೀಯರೂ ಸುಲ್ತಾನನಿಗೆ ತಮ್ಮ ಕಾಲುಗಳನ್ನು ತೋರಿಸಕೂಡದಂತೆ. ಅಂದರೆ ಸುಲ್ತಾನನು ಎದುರಿಗಿದ್ದಾಗ್ಗೆ ಸ್ತ್ರೀಯರು ಮೊಳಕಾಲುಗಳ ಮೇಲೆಯೇ ನಿಲ್ಲಬೇಕು. ಮತ್ತು ಅಡ್ಡಾಡುವಾಗ್ಗೆ ಮೊಳಕಾಲುಗಳಿಂದಲೇ ಅಡ್ಡಾಡಬೇಕು. ಸಾರ್ವಜನಿಕ ಸಮಾರಂಭಗಳಲ್ಲಿ ಸಹ ಸುಲ್ತಾನನು ಆಗಮಿಸಿದರೆ ಇದೇ ಪದ್ಧತಿಯೇ ಉಂಟಾಗಲಿಕ್ಕೇಬೇಕು. ಇಲ್ಲದಿದ್ದರೆ ಕಾಲು ತೋರಿಸಿದವರಿಗೆ ಮರಣ ಶಿಕ್ಷೆ. ಆದರೆ ಈ ನಿಯಮವು ನರ್ತಕಿಯರಿಗೆ ಮಾತ್ರ ಇಲ್ಲ.

ಇನ್ನೊಂದು ವಿಚಿತ್ರವಾದ ಕಟ್ಟಳೆಯು. ನಾಟಕದಲ್ಲಿ ಪಾತ್ರ ವಹಿಸುವ ನಟರು ತಮ್ಮ ತಮ್ಮ ಪಾತ್ರಗಳಷ್ಟೇ ಯೋಗ್ಯತೆಯುಳ್ಳವರಾಗಿರಬೇಕು. ಅಂದರೆ ರಾಜನ ಪಾತ್ರ ವಹಿಸುವವನು ರಾಜಮನೆತನದವನೇ ಇರಬೇಕು. ಸುಲ್ತಾನನು ಎದುರಿಗಿರುವಾಗ ಯಾರೂ ನೆಟ್ಟಗೆ ನಡೆಯಕೂಡದೆಂಬ ಕಟ್ಟಳೆಯಿದ್ದರೂ ನಾಟಕಗಳಲ್ಲಿ ಪಟನಟಿಯರು ನಡೆಯಬೇಕಾಗುವುದರಿಂದ ಅದಕ್ಕೊಂದು ಸಮಾಧಾನ ಮಾಡಿರುವನು. ಅದೇನಂದರೆ ಸುಲ್ತಾನನು ನಾಟಕವನ್ನು ನೋಡಲು ಬಂದರೆ ಅವನ ಪೀಠವನ್ನು ೩-೪ ಅಡಿ ಎತ್ತರ ಕಟ್ಟಬೇಕು. ಅದರ ಮೇಲೆ ಅವನು ಕೂತಾಗ್ಗೆ ಅಡ್ಡಾಡಿದರೆ ಅಡ್ಡಿಯಿಲ್ಲ.

ಇಂಥ ಕಟ್ಟಳೆಯನ್ನು ಸ್ವಪ್ನದಲ್ಲಿ ಸಹ ಯಾರಾದರೂ ಕೇಳಿರಬಹುದೇನು?

ಕಟುಕನ ದಯೆ

ಬಹ್ವೇರಿಯಾ ದೇಶದಲ್ಲಿ ಒಂದು ಹಳ್ಳಿಯಲ್ಲಿ ಪಿಟರ ಡ್ರೋನನ ಎಂಬ ಒಬ್ಬ ತರುಣ ಶಾಲೆಯ ಮಾಸ್ತರನು ಜೆಮ್ಮೆ ಗ್ರೇಟಲ್ ಎಂಬ ವಳ ಮೋಹ ಪಾಶದಲ್ಲಿ ಶಿಲ್ಕಿದನು. ಗ್ರೇಟಲಳು ಒಬ್ಬ ಶ್ರೀಮಂತ ಕಟುಕನ ಮಗಳು. ಅವಳ ಪ್ರೇಮದ ವಿಷಯವು ಅವಳ ತಂದೆಗೂ ವಿದಿತವಾಯಿತು.

ಕಟುಕನೆಂದಮೇಲೆ ಕರುಣೆಯೆಲ್ಲಿಂದ ಬರಬೇಕು? ನನ್ನ ಮನೆಗೆ ನೀನು ಪುನಃ ಬಂದೆ ಎಂದರೆ ಬರ್ಫದ ಪೆಟ್ಟಿಗೆಯಲ್ಲಿ ಹೂಳಿ ಬಿಡುತ್ತೇನೆಂದು ಡ್ರೋನನನಿಗೆ ಹೆದರಿಕೆ ಹಾಕಿದನು. ಡ್ರೋನನಿಗೆ ಆ ಹೆದರಿಕೆಯನ್ನು ಲಕ್ಷಿಸುವ ಲಕ್ಷವೆಲ್ಲಿ? ಸಂಪೂರ್ಣವಾಗಿ ಆವರಿಸಿಕೊಂಡಿದ್ದ ಮೋಹವು ಅವನನ್ನು ಹೇಗೆ ತಾನೆ ಬಿಟ್ಟು ಹೋದೀತು?

ಕೂಡಲೆ ಅವನು ಕಟುಕನ ಮನೆಗೆ ಹೊರಟೇಬಿಟ್ಟನು. ಗ್ರೇಟಲಳನ್ನು ವರಿಸಿಯೇ ತೀರಬೇಕೆಂಬ ಅವನ ಮನೀಷೆ. ಅದರ ಸಲುವಾಗಿ ಅವನು ಪ್ರಾಣಕೊಡಲಿಕ್ಕೆ ಸಹ ಸಿದ್ಧವಾದನು.

ಪಿಟರ ಡ್ರೋನನು ಕಟುಕನ ಮನೆಗೆ ಬಂದಾಗ್ಗೆ ಅವನು ಅಲ್ಲಿರಲಿಲ್ಲ. ಗ್ರೇಟಲಳೂ ಆವಳ ತಾಯಿಯೂ ಅವನಿಗೆ ವ್ಯರ್ಥ ಸಾಯ ಬೇಡವೆಂದು ಪರಿಪರಿಯಿಂದ ಬೇಡಿಕೊಂಡರು. ಕಾಮಜ್ವರದಿಂದ ಪೀಡಿತನಾದ ನನಗೆ ಶೀತದ ಬಾಧೆಯೆಲ್ಲಿ? ಎಂದು ಡ್ರೋನನು ಅಲ್ಲಿಯೇ ಕುಳಿತನು.

ಅಷ್ಟರಲ್ಲಿ ಕಟುಕನು ಬಂದು ಕರಕರ ಹಲ್ಲು ಕಡಿಯುತ್ತ ಡ್ರೋನನನ್ನು ಎತ್ತಿ ಬರ್ಫದ ಪೆಟ್ಟಿಗೆಯಲ್ಲಿ ಹಾಕಿ ಬಿಟ್ಟನು. ಗ್ರೇಟಲಳೂ ಅವಳ ತಾಯಿಯೂ ಅಳಹತ್ತಿದರು. ಅಷ್ಟರಲ್ಲಿಯೇ ಆ ಬರ್ಫದ ಪೆಟ್ಟಿಗೆಯ ಕರಗಿ ನೀರಾಗಿ ಡ್ರೋನನು ಹೊರಗೆ ಬಂದನು. ಇದೇನು ಸೋಜಿಗವೆಂದು ಕಟುಕನು ನೋಡಲು ಡ್ರೋನನು ವಿದ್ಯುಚ್ಛಕ್ತಿಯ ಯುಕ್ತಿಯಿಂದ ಪೆಟ್ಟಿಗೆಯನ್ನು ಕರಗಿಸಿಬಿಟ್ಟಿರುವುದು ಕಂಡುಬಂದಿತು. ಅವನ ಬುದ್ಧಿ ಚಾತುರ್ಯಕ್ಕೆ ಮೆಚ್ಚಿ ಕಟುಕನು ಅವನಿಗೆ ತನ್ನ ಮಗಳನ್ನು ಕೊಟ್ಟು ವಿಜೃಂಭಣೆಯಿಂದ ಲಗ್ನ ಮಾಡಿಕೊಟ್ಟನು. ಆ ಪೆಟ್ಟಿಗೆ ಕರಗಿದುದಕ್ಕಿಂತಲೂ ಆ ಕಟುಕನ ಹೃದಯ ಕರಗಿದುದು ಹೆಚ್ಚಿನದಲ್ಲವೇ?

ನೀರು ಹೇಗೆ ಗಟ್ಟಿಗೊಳ್ಳುವದು?

ನೀರನ್ನು ಗಟ್ಟಿಗೊಳಿಸಿ ಬರ್ಫ ಮಾಡುವ ಕೃತಿಯು ಬಹಳ ಸುಲಭವಾದುದಾಗಿದೆ. ಒಂದು ಕಡೆಯ ಬಾಯಿ ಮುಚ್ಚಿದ ಬಲವಾದ ಕಬ್ಬಿಣ ಕೊಳವೆಯಲ್ಲಿ ನೀರನ್ನು ತುಂಬಬೇಕು. ನೀರನ್ನು ಪೂರ್ಣವಾಗಿ ತುಂಬದೆ ಆ ಕೊಳವೆಯ ಅರ್ಧದಕಿಂತಲೂ ಸ್ವಲ್ಪ ಹೆಚ್ಚಿಗೆ ತುಂಬಬೇಕು. ಆ ಮೇಲೆ ಆ ಕೊಳವೆಯ ಬಾಯಿಗೆ ಒಳ್ಳೇ ಕಸ್ಟದಿಂದ ಮೇಲೆ ಕೆಳಗೆ ಸರಿದಾಡುವ ಬೆಣೆಯನ್ನು ಕೂಡ್ರಿಸಬೇಕು. ಈ ಬೆಣೆಯನ್ನು ಕೆಳಕ್ಕೆ ಒತ್ತಿದರೆ ಅದು ಮಧ್ಯದಲ್ಲಿರುವ ಹವೆಯನ್ನು ಒತ್ತಿ ಆಕುಂಚಿತ ಮಾಡುತ್ತದೆ. ಈ ಬೆಣೆಯೂ ಬಲವಾದದ್ದಿರಬೇಕು ಈ ಪ್ರಕಾರ ಸರಿದಾಡುವ ಬೆಣೆಯ ಮೇಲೆ ಸುತ್ತಿಗೆಯಿಂದ ಬಲವಾಗಿ ಹೊಡೆಯಬೇಕು. ಕೂಡಲೆ ಬೆಣೆಯು ಕೆಳಗಿನ ಹವೆಯನ್ನು ಒತ್ತುತ್ತದೆ. ಹವೆಯ ಆಘಾತವು ನೀರಿನ ಪಾತಳಿಗೆ ತಗಲಿ ಹಿಂದಿರುಗುತ್ತದೆ. ಹಿಂದಿರುಗುವ ಕಾಲಕ್ಕೆ ಅಂದರೆ ಹವೆಯು ವಿಸ್ತಾರವನ್ನು ಹೊಂದುವುದಕ್ಕಾಗಿ ಬೆಣೆಯನ್ನು ಹೊರಗೆ ದಬ್ಬಲು ಯತ್ನಿಸುವಾಗ್ಗೆ ಬೆಣೆಯು ಬಹು ಪ್ರಯಾಸದಿಂದ ಮುಂದೆ ಸರಿಯಲು ನೀರಿನ ಮೇಲಿನ ಹವೆಯ ಒತ್ತುವಿಕೆಯು ಒಮ್ಮೆಲೆ ಕಡಿಮೆಯಾಗುತ್ತದೆ. ಒಮ್ಮೆಲೆ ಒತ್ತುವಿಕೆಯು ಕಡಿಮೆಯಾಗುವುದರಿಂದ ನೀರಿನ ಉಷ್ಣತಾಮಾನವು ಅತಿಶಯವಾಗಿ ಇಳಿದು ನೀರು ಗಟ್ಟಿಗೊಳ್ಳುತ್ತದೆ.

ನೀರನ್ನು ಗುದ್ದಿ ಗಟ್ಟಿಮಾಡುವ ಈ ಪ್ರಯೋಗವು ಸುಲಭವಾದುದಲ್ಲವೇ?

ಚಿಕ್ಕವರ ಬೆಳವಣಿಗೆ

ಹುಡುಗರು ಬೆಳೆಯುವದನ್ನು ಯಾರು ಕಂಡಿರುವರು! ಅಥವಾ ಇಷ್ಟೇ ವರುಷದ ವಯಸ್ಸಿನಲ್ಲಿಯೇ ಬೆಳೆಯುವರೆಂದು ಯಾರು ಹೇಳಬಲ್ಲರು? ಕೆಲವರು ಚಿಕ್ಕವರಿದ್ದಾಗ ಬೆಳೆಯದೆ ಗಿಡ್ಡರಂತೆ ಕಾಣುತ್ತಿದ್ದರೂ ೧೭-೧೮ನೆಯ ವಯಸ್ಸಿಗೆ ಒಮ್ಮೆಲೆ ಬೆಳೆಯುತ್ತಾರೆ. ಕೆಲವರು ಪೂರ್ವದಲ್ಲಿಯೇ ಶೀಘ್ರವಾಗಿ ಬೆಳೆದು ಪ್ರಾಯಕ್ಕೆ ಬಂದಮೇಲೆ ಸಾವಕಾಶವಾಗಿ ಬೆಳೆಯುತ್ತಾರೆ. ಇತ್ತೀಚ್ಗೆ ಲಾಗಿ ಮಕ್ಕಳು ಬೆಳೆಯುವ ವಯಸ್ಸಿನ ವರುಷವನ್ನು ಕಂಡುಹಿಡಿಯುವರೆಲ್ಲದೆ ಅವರು ಬೆಳೆಯುವ ಪ್ರಮಾಣವನ್ನೂ ಹೇಳಬಲ್ಲರು. ವರ್ಷಗಳು ಕಳೆದು ಹೋದ ಹಾಗೆ ಬೆಳೆಯುವ ಪ್ರಮಾಣವು ಭಿನ್ನವಾಗಬಹುದು. ಉದಾಹರಣಾರ್ಥವಾಗಿ ಬೇಸಿಗೆ, ಚಳಿಗಾಲಗಳಿಗಿಂತ ಶರತ್ಕಾಲದಲ್ಲಿ ಮಕ್ಕಳು ಹೆಚ್ಚಿಗೆ ಬೆಳೆಯುತ್ತಾರೆ. ವಸಂತ ಋತುವಿನಲ್ಲಿ ಬೆಳೆಯುವದು ಬಹು ಕಡಿಮೆ. ಇದಕ್ಕೆ ಕಾರಣ ವೇನೋ ತಿಳಿದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಬೆಳವಣಿಗೆಯು ಮಕ್ಕಳು ಊಟಮಾಡುವ ಆಹಾರದ ಮೇಲೆಯೂ ಮತ್ತು ವಾಸಮಾಡುವ ರೀತಿಯಲ್ಲಿಯೂ ಇರುತ್ತದೆ.

ಗಿಡ್ಡ ಕುಲದವರೆಂದು ಹೇಳುವ ಹುಡುಗರನ್ನು ಪ್ರಯತ್ನದಿಂದ ಉದ್ದವಾಗಿ ಮಾಡಬಹುದು. ಅಥವಾ ಕಪ್ಪು ವರ್ಣದವರನ್ನು ಬಿಳಿಯರನ್ನಾಗಿ ಮಾಡಬಹುದು. ಆದರೆ ಗಿಡ್ಡ, ಉದ್ದ ಅಥವಾ ಕಪ್ಪು, ಬಿಳಿ ಎಂಬ ಮನಸ್ಸಿನಲ್ಲಿ ಬೇರೂರಿದ ದುರಭಿಮಾನವನ್ನು ಕಳೆಯುವದು ಯಾರಿಗೂ ಸಾಧ್ಯವಿಲ್ಲವಲ್ಲ!

ಸಮಾಚಾರ ಸಂಗ್ರಹ.

—ಪ್ಯಾರಿಸ ಪಟ್ಟಣದಲ್ಲಾದ ದೊಂಬೆಯನ್ನು ನಿಲ್ಲಿಸಲಿಕ್ಕೆ ಪೋಲೀಸರು ಗುಂಡು ಹೊಡೆಯಲು ೯ ಜನರು ಸತ್ತ್ವದಲ್ಲದೆ ೫೦೦ ಜನರು ಗಾಯಪಟ್ಟರು. ಹೆಚ್ಚಿನ ರಕ್ತಪಾತವನ್ನು ನಿಲ್ಲಿಸಲಿಕ್ಕೆ ಫ್ರಾನ್ಸ ಮಂತ್ರಿ ಮಂಡಲವು ತನ್ನ ಅಧಿಕಾರವನ್ನು ಬಿಟ್ಟುಕೊಟ್ಟಿತು.

—ದುಂಡುಮೇಜಿನ ಸರಿಸತ್ತಿಗೆ ಮಹಾತ್ಮಾಜಿಯವರು ಪೋದಾಗ್ಗೆ ಲಂಡನದಲ್ಲಿ ಅವರು ವಾಸವಾಗಿದ್ದ ಕೆಂಗ್ಸಲೆ ಹಾಲ ಎಂಬ ಭವನದ ಯಜಮಾನತಿಯಾದ ಮಿಸ್. ಮ್ಯುರೆಲ್ ಲೀಸ್ಟರ ಎಂಬವಳು ತಿರುಪುರದಲ್ಲಿ ಮಹಾತ್ಮಾಜಿಯವರಿಗೆ ಭೆಟ್ಟಿಯಾದಳು.

—ಗಿರಣಿ ಬಟ್ಟೆಯೂ ಖಾದಿಯಂದು ಮಾರಲ್ಪಡುತ್ತಿರುವುದರಿಂದ ಕೈನೂಲಿನ ಖಾದಿಯ ಸಂರಕ್ಷಣಾರ್ಥವಾಗಿ ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ಗಯಾಪ್ರಸಾದ ಸಿಂಗರವರು ತಂದ ಗೊತ್ತುವಳಿಯು ವಿರೋಧವಿಲ್ಲದೆ ಪಾಸಾಯಿತು. ಆ ಕಾಲಕ್ಕೆ ಶ್ರೀ. ರಂಗ ಅಯ್ಯರರು— "ಶ್ರೀ ಮೋತಿಲಾಲಜಿಯವರ ಉದ್ದೇಶವು ಪೂರ್ಣವಾಯಿತೆಂದು" ಉದ್ಗಾರ ತೆಗೆದರು.

—ಕ್ರಾಂತಿಕಾರಕರನ್ನು ಕಾಯಲು ಇಡಲ್ಪಟ್ಟಿದ್ದ ೩೦ ಗಡವಾಲಿ ಸೈನಿಕರು ಹುಲ್ಲಿನ ಮೇಲೆ ಮಲಗಿರಲು ಒಮ್ಮಿಂದೊಮ್ಮೆ ಆ ಹುಲ್ಲಿಗೆ ಬೆಂಕಿ ಹತ್ತಿ ೫ ಜನ ಸಿಪಾಯರು ಸುಟ್ಟುಕೊಂಡು ಸತ್ತರು.

—ರವೀಂದ್ರನಾಥ ಟಾಗೋರ ಇವರು ಒಂದು ಪತ್ರವನ್ನು ಹೊರಡಿಸಿ ಅದರಲ್ಲಿ ಮಹಾತ್ಮಾಜಿಯವರು ಪರಮೋಚ್ಚ ಕಾರ್ಯವನ್ನು ಕೈಕೊಂಡಿರುವುದರಿಂದ ಅವರನ್ನು ಟೀಕಾ ಮಾಡಬೇಡಿರೆಂದು ಟೀಕಾಕಾರರಿಗೆ ಎಚ್ಚರಿಕೆ ಕೊಟ್ಟದ್ದಾರೆ.

—ಮುಂಬಯಿಯಲ್ಲಿ H. O. H. Fete ಎಂಬ ಹೆಸರಿನ ಪ್ರದರ್ಶನವು ಆಸ್ಪತ್ರೆಗಳ ಸಹಾಯಾರ್ಥವಾಗಿ ಗವ್ಹರ್ನರರ ಹಸ್ತದಿಂದ ಪ್ರಾರಂಭವಾಯಿತು. ಆ ಕಾಲಕ್ಕೆ ಗವ್ಹರ್ನರರು— ವೈಜ್ಞಾನದ ಉಳಿತಾಯದಿಂದ ಸರಕಾರದವರು ಕಡಿಮೆ ಮಾಡಿದ ರುಗ್ಣಶಯ್ಯೆಗಳನ್ನು ಸಮಾಜದ ಉದಾರತನದಿಂದ ಪುನಃ ಪ್ರಾರಂಭಿಸಬಹುದೆಂದು ಹೇಳಿದರು.

—ಹಿಂಡಲಿಗಿ ಕಾರಾಗೃಹದಲ್ಲಿ ೩ ವರುಷ ಕಠಿಣ ಶಿಕ್ಷೆಯನ್ನು ಹೊಂದಿದ ಶ್ರೀ ರಂಗರಾವ ದಿವಾಕರ ಇವರ ಪ್ರಕೃತಿಯು ಅಸ್ವಸ್ಥವಾಗಿದೆ 'ಕ್ಷ' ಕಿರಣಗಳ ಮೂಲಕ ಪ್ರಕೃತಿಯನ್ನು ಪರೀಕ್ಷಿಸಿ ಯೋಗ್ಯ ಉಪಾಯವನ್ನು ತೀವ್ರವಾಗಿ ಮಾಡಬೇಕೆಂದು ವಿನಂತಿಮಾಡಿಕೊಳ್ಳಲಾಗಿದೆ.

—ಬಂಧಿಸಲ್ಪಟ್ಟ ಶ್ರೀ ಕಾಕಾ ಕಾಲೇಲಕರ ಇವರು ಪುನಃ ಮುಕ್ತ ಮಾಡಲ್ಪಟ್ಟರು.

—ಕಾನಕಾನ ಹಳ್ಳಿಯ ಶ್ರೀ ಕಾವೇರಮ್ಮ ಎಂಬುವವರನ್ನು ಶಾಸನೋಲ್ಲಂಘನೆಯ ಕಾರಣದಿಂದ ಬಂಧಿಸಿದರು.

—೬ನೆಯ ತಾರೀಖಿಗೆ ಶ್ರೀ. ರಾಜಗೋಪಾಲಾಚಾರ್ಯರವರ ಮುಕ್ತತೆಯಾಯಿತು. ಕೂಡಲೆ ಅವರು ಮಹಾತ್ಮಾಜಿಯವರನ್ನು ಕಾಣಲು ತಿರುಪುರದ ಕಡೆಗೆ ಪ್ರಯಾಣ ಬೆಳೆಸಿದರು.

—ಹಿಂದು ಪತ್ರಿಕೆಯ ಸಂಪಾದಕರಾದ ಮದ್ರಾಸದ ಮಿ. ರಂಗಸ್ವಾಮಿ ಅಯ್ಯಂಗಾರ ಇವರು ನಿಧನ ಹೊಂದಿದರು.

—ಪತಿಯಾಳ ಮಹಾರಾಜರ ವಿರುದ್ಧವಾಗಿ ತಮ್ಮ ದುಃಖಗಳನ್ನು ಹೇಳಲು ಪತಿಯಾಳ ಸಂಸ್ಥಾನದ ೧೩೧ ಶೀಖರು ದಿಲ್ಲಿ ಸೆಕ್ರೆಟರಿಯೇಟದ ಮುಂದೆ ಕೂಡಿರಲು ಪೋಲೀಸರು ಅವರನ್ನೆಲ್ಲ ಬಂಧಿಸಿದರು.

—ಗಾಂಧೀಜಿಯವರು ಉಡುಮಾಲ ಪೇಟೆ ಎಂಬ ಗ್ರಾಮದಲ್ಲಿ ೨೦ ಸಾವಿರ ಜನ ಸಮುದಾಯದ ಮುಂದೆ ಭಾಷಣ ಮಾಡಿದರು.

—ಪಂಜಾಬ ಗವ್ಹರ್ನರರ ಸ್ಥಾನಕ್ಕೆ ಸರ ಶಿಕಂದರ ಹಯಾತ ಖಾನ ಎಂಬ ಹಿಂದೀ ಗೃಹಸ್ಥರು ತಾತ್ಕಾಲಿಕವಾಗಿ ನಿಯಮಿಸಲ್ಪಟ್ಟಿದ್ದಾರೆ. ಅವರ ಶಪಥ ವಿಧಿಯು ಮುಖ್ಯ ನ್ಯಾಯಾಧೀಶ ಸರ್. ಶಾದಿಲಾಲ ಇವರ ಮುಂದೆ ಆಗುವದು.

—ಹೈದರಾಬಾದ ನಿವಾಸಿಯಾದ ಕೈಲಿ ಶಹಾ ಎಂಬವನು ಮುಂಬಯಿಯಲ್ಲಿಯ ಒಂದು ಮಸೀದೆಯಲ್ಲಿ ಬಂದಿದ್ದು ಅಲ್ಲಿ ತನ್ನ ಹೆಂಡತಿಯನ್ನು ಕೊಲೆ ಮಾಡಿರುವನು.

—ನೇಪಾಲದ ರಾಜಕುಮಾರರು ಅಮೇರಿಕೆಯ ಹೋಲೀವುಡ್ಡಿನ ಪ್ರಸಿದ್ಧ ನಟಿಯಾದ ಡರೋಥಿ ಎಂಬವಳನ್ನು ಲಂಡನ್ನಿನಲ್ಲಿ ಲಗ್ನಮಾಡಿಕೊಳ್ಳುವರು.

—ಸರದಾರ ವೀರನಗೌಡಾ ಪಾಟೀಲ ಇವರು ಈಗ ಕರ್ನಾಟಕದ ಮುಖ್ಯ ಪಟ್ಟಣಗಳಲ್ಲೆಲ್ಲ ಸಂಚರಿಸಿ ಸಿದ್ಧತೆ ಮಾಡಿರುವರು. ಇನ್ನು ಗಾಂಧೀಜಿಯವರನ್ನು ಬೆಂಗಳೂರಲ್ಲಿ ಕೂಡಿಕೊಂಡು ಅವರೊಡನೆ ಕರ್ನಾಟಕವನ್ನೆಲ್ಲ ಸಂಚರಿಸುವರು.

—ಸರ ಸುಲ್ತಾನ ಜಿನಾಯಿ ಎಂಬುವವರು ಮುಂಬಯಿ ಪಟ್ಟಣದ ನೆರೆಯಲ್ಲಿಯೂ ಮತ್ತು ಕಾಠೇವಾಡದಲ್ಲಿಯೂ ಎಣ್ಣೆಯ ಖಣಿಗಳಿರುವವೆಂದು ಕಂಡು ಹಿಡಿದಿದ್ದಾರೆ.

—ಸ್ಪೇನದಲ್ಲಿ ಇನ್ನು ಮೇಲೆ ಹತ್ತಿ ಬೆಳೆಯಿಸಬೇಕೆಂಬ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಹೊರಗಿನಿಂದ ಬರುವ ಹತ್ತಿಯ ಮೇಲೆ ಸುಂಕ ಕೂಡ್ರಿಸಬೇಕೆಂಬ ಪ್ರಯತ್ನವೂ ನಡೆದಿದೆ.

ಏಜಂಟರು ಬೇಕಾಗಿದೆ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶುರನ್ಸ ಕಂ. ಲಿಮಿಟೆಡ್

ಧಾರವಾಡ,

ಇವರು ಹೊಸ ಮಾದರಿಯ **ಜನನ, ಮದುವೆ, ಮತ್ತು ಮರಣ** ವಿಮೆಗಳನ್ನು ಸುರುವು ಮಾಡಿದ್ದಾರೆ. ಕರ್ನಾಟಕದ ಯಾವತ್ತೂ ಭಾಗಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಉತ್ಸುಕತೆಯಿಂದ ಕೆಲಸ ಮಾಡಶಕ್ಕವರು ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಕೊಳ್ಳಬಹುದು.

ಮ್ಯಾನೇಜಿಂಗ್ ಏಜಂಟ್ಸ

ಪತ್ರಗಳ ಸಾರಾಂಶ.

ಮಹಾತ್ಮಾಜಿಯವರೂ ಅದಿಜನರೂ.

ಮಹಾತ್ಮಾ ಗಾಂಧಿಯವರು ಅದಿಜನರ ಉದ್ಧಾರಕ್ಕಾಗಿ ತಮ್ಮ ಸರ್ವಸ್ವವನ್ನೇ ಖರ್ಚು ಮಾಡುತ್ತಿರುವದನ್ನು ನೋಡಿ ಪ್ರತಿಯೊಬ್ಬ ಹಿಂದುವಿಗೆ ಆತ್ಯಾನಂದವಾಗುತ್ತಿರುವದು ಸ್ವಾಭಾವಿಕವು. ಅದಿ ಜನರ ಹಿತಕ್ಕಾಗಿ ಅಪಾರ ದ್ರವ್ಯವನ್ನು ಕೂಡಿಸುತ್ತಿರುವರು. ಆದರೆ ಮಹಾತ್ಮಾಜಿಯವರು ಅದಿಜನರಿಗೆ 'ಹರಿಜನ' ರೆಂದು ಕರೆಯುತ್ತಿರುವುದನ್ನು ನೋಡಿ ವಿಷಾದವೆನಿಸುತ್ತದೆ ಅವರು "ಹರಿಜನ"ರೆಂದೇ ಯಾಕೆ ಅನ್ನುತ್ತಿರುವರು? ಹಿಂದುಸ್ಥಾನದಲ್ಲಿ 'ಹರಿ ಹರ' ಇವರಲ್ಲಿ ಭಯಂಕರ ಭೇದವನ್ನು ಮಾಡುತ್ತಿರುವುದು ಪ್ರತಿಯೊಬ್ಬರಿಗೂ ಗೊತ್ತಿದ್ದ ಸಂಗತಿಯಲ್ಲವೇ? ಹಿಂದುಸ್ಥಾನದ ಶೈವ ಮತ್ತು ವೈಷ್ಣವ ಎಂಬ ಎರಡು ದೊಡ್ಡ ಪಂಥಗಳಿರುತ್ತವೆ. ಹಿಂದುಸ್ತಾನದ ಜನರಲ್ಲಿ ಧರ್ಮ ಭಕ್ತಿ ಇದ್ದಷ್ಟು ದೇಶಭಕ್ತಿ ಇಲ್ಲದ ಕಾರಣದಿಂದಲೇ ಹಿಂದು ಜನರು ಮೊದಲಿನಿಂದ ತಮ್ಮ ದೇಶವನ್ನು ಕಳಕೊಳ್ಳುತ್ತ ಬಂದಿರುವರು. ಪ್ರತಿಯೊಬ್ಬರು ತಮ್ಮ ಪಂಥ ಮತ್ತು ತನ್ನ ಧರ್ಮದ ಜನರನ್ನು ಹೆಚ್ಚುಮಾಡಬೇಕೆಂದು ಪ್ರಯತ್ನ ಮಾಡಿ ವರು. ಮತ್ತು ಮಾಡುತ್ತಿರುವರು. ದೇಶ ಮತ್ತು ಧರ್ಮವನ್ನ ಮುಂದಿಟ್ಟರೆ ಧರ್ಮವನ್ನು ಅರಿಸಿಕೊಳ್ಳುವ ಜನರೇ ನಮ್ಮ ದೇಶ ದಲ್ಲಿ ವಿಶೇಷ ಇರುತ್ತಾರೆ. ಉಜ್ವಲವಾದ ದೇಶಭಕ್ತಿಯು ಇನ್ನೂ ಎಷ್ಟೋ ಜನರಲ್ಲಿ ಉದಯವಾಗಿಲ್ಲ. ಅದಿಜನರನ್ನು ಶೈವ ಪಂಥ ದಲ್ಲಿ ಸೇರಿಸಿಕೊಳ್ಳಬೇಕೆಂದು ಕೆಲವು ಮುಖಂಡರು ವೈಷ್ಣವ ಪಂಥ ದಲ್ಲಿ ಸೇರಿಸಿಕೊಳ್ಳಬೇಕೆಂದು" ಕೆಲವು ಮುಖಂಡರು ಪ್ರಯತ್ನ ಮಾಡುತ್ತಿರುವರು. ಸ್ವಲ್ಪ ದಿವಸಗಳಲ್ಲಿಯೇ ಅದಿಜನರ ಉತ್ಕರ್ಷದ ಕಾರ್ಯವನ್ನು ಬಿಟ್ಟು ತಮ್ಮ ತನ್ನ ಪಂಥಗಳ ಜನರನ್ನು ಹೆಚ್ಚು ಮಾಡುವ ಕಾರ್ಯಕ್ಕೆ ತೊಡಗುವ ಸಂಭವವಿರುತ್ತದೆ ಈಗಾಗಲೇ ಮಹಾತ್ಮಾಜಿಯವರು "ಹರಿಜನರು" ಎಂದು ಕರೆದರೆ ಕೆಲವು ಜನರು ಹರಜನರು ಎಂದು ಕರೆಯಲಿಕ್ಕೆ ಹತ್ತಿರುತ್ತಾರೆ. ಇದರಿಂದ ಅದಿಜನರಿಗೆ ತಾವು ಹರಿಪಂಥದಲ್ಲಿ ಕೂಡಬೇಕೋ ಹರ ಪಂಥದಲ್ಲಿ ಕೂಡಬೇಕೋ ಎಂಬುದು ತಿಳಿಯದಂತಾಗಿದೆ. ಈ ಪ್ರಕಾರ ಮಹಾತ್ಮಾಜಿಯವರು ಹರಿಜನರೆಂದೇ ಬೋಧಿಸುವದರಿಂದ ಈಗಾಗಲೇ ಸಾವಿರಾರು ಧರ್ಮ ಪಂಥಗಳಲ್ಲಿದ್ದ ಹಿಂದುಸ್ಥಾನದಲ್ಲಿ ಇದೊಂದು ಪಂಗಡವನ್ನು ಹೆಚ್ಚು ಮಾಡಿದಂತಾಗುವುದು. ಆದುದ ರಿಂದ ಮಹಾತ್ಮಾಜಿಯವರು ಹರಿಜನರೆಂದು ಅನ್ನದೆ ಅದಿಜನರೆಂದು ಅನ್ನಬೇಕು. ಇದರಿಂದ ಯಾವ ಪಂಥದವರಿಗೂ ಪಂಗಡದವ ರಿಗೂ ವಿಷಾದ ಅನಿಸುವದಿಲ್ಲ. ಮತ್ತು ಅವರೇ ಹಿಂದುಸ್ಥಾನದ ಮೂಲ ನಿವಾಸಿಗಳಿದ್ದುದರಿಂದ ಅವರಿಗೆ ಆದಿ ಜನರೆಂದು ಅನ್ನಲಿಕ್ಕೆ ಏನೂ ಸಂಕೋಚವಿರುವದಿಲ್ಲ.

ಮಹಾತ್ಮಾಜಿಯವರು ಕರ್ನಾಟಕದಲ್ಲಿ ಬಂದಾಗ್ಗೆ ಪ್ರತಿಯೊಬ್ಬ ದೇಶಾಭಿಮಾನಿಯೂ ಅದಿಜನ ಶಬ್ದವನ್ನು ತಾವು ಉಪಯೋಗಿಸಿ ಮಹಾತ್ಮಾ ಗಾಂಧಿಯವರಿಗೂ ಹಾಗೇ ಉಪಯೋಗಿಸಲು ವಿನಂತಿ ಮಾಡಿಕೊಳ್ಳಬೇಕು. ಗುರುಪಾದಪ್ಪ ಸಜ್ಜನ ಬಿ. ಎ.

ಸ್ಕೌಟ ದೀಕ್ಷಾ ಸಮಾರಂಭ

ಕಳೆದ ೫ನೆಯ ತಾರೀಖಿನ ದಿವಸದಿಂದ ಸೀತಿಮನಿಯಲ್ಲಿ ವಿಜಾಪುರ ಜಿಲ್ಲೆಯ ಕನ್ನಡ ಶಾಲೆಯ ಮಾಸ್ತರರಿಗೆ ಸ್ಕೌಟ ಶಿಕ್ಷ ಣವನ್ನು ಕೊಡಲು ಗುಡಾರಗಳು ಹೊಡೆಯಲ್ಪಟ್ಟವು. ಈ ಶಿಬಿ ರವು ಅಖಿಲ ಕರ್ನಾಟಕ ಸ್ಕೌಟ ಶಿಬಿರಗಳಲ್ಲಿ ೫ನೆಯದು ಮತ್ತು ವಿಜಾಪುರದಲ್ಲಿ ನಾಲ್ಕನೆಯದೂ ಆಗಿತ್ತು. ಇದಕ್ಕೂ ಮೊದಲು ವಿಜಾಪುರ ಜಿಲ್ಲೆಯಲ್ಲಿ ವಿಜಾಪುರ, ಗಲಗಲಿ ಮತ್ತು ಹಿಪ್ಪರಗಿ, ಈ ಮೂರು ಸ್ಥಳಗಳಲ್ಲಿ ಶಿಬಿರಗಳು ನಡೆಯಿಸಲ್ಪಟ್ಟವು. ಪ್ರಕೃತ ಶಿಬಿ ರಕ್ಕೆ ಉತ್ಸಾಹಿ ಕಾರ್ಯಕರ್ತರಾದಂಥ ಧಾರವಾಡದ ಸ್ಕೌಟ ಆರ್ಗ ನಾಯಿಝರ ಮಿ. ನೀಲಗಾರ ಹಾಗೂ ಗದಗಿನ ಡ್ರಿಲ್ ಮಾಸ್ತರ ಮಿ. ಸೂರಣಗಿ ಇವರು ಶಿಕ್ಷಣ ಕೊಡುತ್ತಿದ್ದರು. ಫೆಬ್ರುವರಿ ೫ನೆಯ ತಾರೀಖಿನ ದಿವಸ ಸ್ಕೌಟರುಗಳ ೫೪ ಗಂಟೆಗಳ ಸಂಚಾರ ವಿದ್ದಿತು ಆ ಕಾಲಕ್ಕೆ ಅವರು ತಾವೇ ಅಡಿಗೆ ಮಾಡಿಕೊಂಡು ೧೬-೨೦ ಮೈಲು ಸಂಚರಿಸಿ ತಮಗೆ ಅನುಭವವಾದ ಸಂಗತಿಗಳನ್ನು ಬರೆದಿಟ್ಟುಕೊಳ್ಳುತ್ತ ಮರುದಿವಸ ಬಂದರು. ೬ನೆಯ ತಾರೀಖಿನ ದಿವಸ ಅವರ ದೀಕ್ಷಾ ವಿಧಿ ಸಮಾರಂಭವು ಜಿಲ್ಲಾ ಲೋಕಲ್ ಬೋರ್ಡದ ಅಧ್ಯಕ್ಷರೂ ಮತ್ತು ಜಿಲ್ಲಾ ಸ್ಕೌಟ ಕಮಿಶನರರೂ ಆದ ಶ್ರೀ. ಆಲಮೇಲ ದೇಶಮುಖ ಸಾಹೇಬರವರ ಅಧ್ಯಕ್ಷತೆ ಯಲ್ಲಿ ನೆರವೇರಿತು. ಆ ಕಾಲಕ್ಕೆ ಶ್ರೀ ನೀಲಗಾರ ಇವರು ಸ್ಕೌಟು (Scout) ಎಂಬುದು ೫ ಇಂಗ್ಲೀಷ ಅಕ್ಷರಗಳಿಂದ ಕೂಡಿ ಆಗಿದ್ದು ಒಂದೊಂದು ಅಕ್ಷರವು ಸ್ಕೌಟನ ಒಂದೊಂದು ಸದ್ಗುಣವನ್ನು ಅಂದರೆ Sincerity, Carefulness, Obedience, Unity & Truthfulness ಎಂಬುದನ್ನು ತೋರಿಸುತ್ತದೆಂದೂ ಹೇಳಿ ದರು. ಈ ಸಮಾರಂಭದ ಕಾಲಕ್ಕೆ ಬಾಗಲಕೋಟೆಯ ಎಡ್ಜಿನ ಸ್ಟ್ರೇಟನ್ಟ್ ಆಫೀಸರರಾದ ಶ್ರೀ. ದೇವೂರ ಮತ್ತು ಶ್ರೀ. ಹರ್ಡೇ ಕರ ಮಂಜಪ್ಪನವರು ತಮ್ಮ ವಿದ್ಯಾರ್ಥಿಗಳೊಡನೆ ಬಂದಿದ್ದರು. ಸಭೆಯಲ್ಲಿ ಶ್ರೀ. ಹರ್ಡೇಕರ ಮಂಜಪ್ಪನವರು ಶಿಕ್ಷಣ ಪಡೆದ ೪೨ ಜನ ಸ್ಕೌಟರುಗಳಿಗೆ ಕಾಣಿಕೆಯಾಗಿ ಕೊಟ್ಟ "ವಿಜಯವಾಣಿ" ಎಂಬ ಪುಸ್ತಕದ ಪ್ರತಿಗಳನ್ನು ಹಂಚಲಾಯಿತು. ಸಮಾರೋ ಪದ ಕಾಲಕ್ಕೆ ಅಧ್ಯಕ್ಷರು ಸ್ಕೌಟರುಗಳ ನಿಷ್ಕಾಮಸೇವೆಯ ಬಗ್ಗೆಯೂ, ಸ್ಕೌಟ ಶಿಕ್ಷಣದ ಉಪಯುಕ್ತತೆಯ ಬಗ್ಗೆಯೂ ಭಾಷಣ ಮಾಡಿದರು

ಓರ್ವ ಪ್ರವಾಸಿ.

ಧಾರವಾಡ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘ ರಾಜೇಂದ್ರ ಫ್ರೀ ಬೋರ್ಡಿಂಗಿನ ಜನರಲ್ ಕಮಿಟಿಯು ಫೆಬ್ರುವರಿ ೨೫ನೆಯ ತಾರೀಖು ರವಿವಾರ ಪ್ರಾತಃಕಾಲ ೮॥ ಗಂಟೆಗೆ ಬೋರ್ಡಿಂ ಗಿನಲ್ಲಿ ಕೂಡುವುದರಿಂದ ಎಲ್ಲ ಮೆಂಬರರೂ ಬರಬೇಕಾಗಿ ಸೆಕ್ರೆಟರಿ ಗಳು ತಿಳಿಸುತ್ತಾರೆ.

ಶಹಾಪುರ.

ಶ್ರೀಮನ್ನಿರಂಜನ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಪುಣ್ಯ ದಿನೋತ್ಸವವು ದೆಳಗಾವ ಶಹಾಪೂರ ವೀರಶೈವ ಫ್ರೀ ಬೋರ್ಡಿಂಗಿನಲ್ಲಿ ತಾ. ೬ನೆಯ ದಿವಸ ಬಹು ಸಂಭ್ರಮದಿಂದ ಜರುಗಿತು.

ಶ್ರೀಗಳ ಭಾವ ಚಿತ್ರದ ಮೆರವಣಿಗೆ ಶ್ರೀ ಶಿವಯೋಗೀಶ್ವರ ಬಾಲ ಭಜನಾ ಸಂಘದ ಭಜನೆ ಶ್ರೀ. ಮಲ್ಲಿಕಾರ್ಜುನಪ್ಪನವರ ಮತ್ತು ಶ್ರೀ. ಚಿಕ್ಕೋಡಿ ಪಂಡಿತಪ್ಪನವರ ವ್ಯಾಖ್ಯಾನಗಳು ಜರು ಗಿದವು.

ಚ. ಸಿ. ಅಗಸನಗಿ.

ನಾರ ಸಂಹಾರಿ.

ಹೊಸ ಶೋಧ! ಅದ್ಭುತ ಚಮತ್ಕಾರ!!

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಒಂದೆರಡ ದಿವಸಗಳಲ್ಲಿಯೇ ಅತನಿಗೆ ನಾರು ಭಯಂಕರವಾದ ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣದಿಂದ ಆನಂದಿತರಾಗಿ ಬಾಳಬಾರದೇ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗೆ ೧ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ್,
ಗುಲಬರ್ಗಾ.

ಮಾರಿಕಾ ಸಂಜೀವಿನಿ.

ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!!

ಇದು ಮಾನವ ಚಿಕಿತ್ಸೆಗೆ ಮೂರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಿರಿ. ದಿವ್ಯ ವನಸ್ಪತಿಯು ಮಹಾ ತಪಶ್ವಿಗಳಿಂದ ಶೋಧವಾಗಿದೆ. **ಈ ಸಂಜೀವಿನಿ ಚೂರ್ಣವನ್ನು ಒಂದೇಸಾರಿ ತೆಗೆದು** ಕೊಂಡರೆ ಸಾಕು ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆತ್ಯಾಶ್ಚರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರೆಮ್ಮನ ಕಾಟವಿಲ್ಲ. ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ್
ಗುಲಬರ್ಗಾ.

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! ಬರೇ ೬ ತಾಸುಗಳಲ್ಲಿಯೇ ಗುಣ!!

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಿ ಜನರು ಸಾಯುತ್ತಿರುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು. ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಅರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ. ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಪಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತು ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದುದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಆದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಬ್ಬರಿಗೆ ಸಾಲುವಷ್ಟು ಔಷಧವನ್ನು ಮುಂಚಿತವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹಣದ ಅಡಚಣೆಯು ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ. ವ್ಹೀ. ಪಿ. ಚಾರ್ಜ ಬೇರೆ.

ಅನುಪಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.

REGISTERED No. B. 2891.

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾಧಿಗೂ ಅಂಜುವವನಲ್ಲ।

ಕೂಡಲಸಂಗಮದೇವರ ರಾಜಕೋಡಗಲ್ಲಿಪ್ಪನಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಎ. ಹರ್ಡೀಕರ ಮುಂಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೧೨ ನೆಯ ಮಾರ್ಚ ೧೯೩೪. | ಸಂಚಿಕೆ ೧೦.

ಜನಸೇವೆಯೇ ದೇವರಸೇವೆ.

ಬ್ರಿಟಿಶ್ ಕರ್ನಾಟಕದಲ್ಲಿ

ಗಾಂಧೀಜಿಯವರ ದಿವ್ಯ ಸಂಚಾರ.

೧೨ ದಿನಗಳಲ್ಲಿ ಸಾಧಾರಣ ೪೫ ಗ್ರಾಮಗಳಿಗೆ ಹೋಗಿ
ವ್ಯಾಖ್ಯಾನ ಮಾಡಿ,
ಲಕ್ಷಾಂತರ ಜನಗಳಿಗೆ ದರ್ಶನ ಕೊಟ್ಟು
ಆದಿಜನ ಸೇವಾ ನಿಧಿಗೆ ಅರ್ಪಿಸಲ್ಪಟ್ಟ ೪೯೨೬೭ರೂ. ೪೮. ೪ಪೈಗಳನ್ನು
ಮತ್ತು ಬಿಹಾರ ನಿರಾಶ್ರಿತರ ನಿಧಿಗೆ ಕೊಟ್ಟ ೨೫೫೬ರೂ. ಗಳನ್ನು
ಸ್ವೀಕರಿಸಿ ತಾ. ೮ ನೆಯ ರಾತ್ರೆ ಕರ್ನಾಟಕದಿಂದ
ಹೈದರಾಬಾದಿಗೆ ತೆರಳಿದರು.

ಜೈಹರಿ ಜೈಹರಿ.

SANGAM CLOTH STORES
Prop. M S Hundekar & Sons,
P.O: TERDAL – 587 313
Dt. Bijapur (Karnataka)

ಕಳಕುಟ್ಟಿನ ಮುದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಎ. ಎಂ. ದಿವಾಕರ
ಸರಾಫ ಕಹಾಪೂರ ಬೆಳಗಾಂವ

ಎ ಚೆನಬಸವಪ್ಪಾ
ಶ್ರೀಶೈಲಪ್ಪಾ ಗ್ವೊಟ್ಟಿ.
ರವಿವಾರಪೇಟೆ ಬೆಳಗಾಂವ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದ್ದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನನ್ನ ಧಾರವಾಡದಾಗ, ಗದ್ಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರಿ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ!

ಜಾಗ್ರತೆ ತರಿಸಿಕೊಳ್ಳಿರಿ!!

ಹರ್ದೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಿ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾನುಭಾವ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಮಾರ್ಚ್ ತಾರೀಖು ೧೨ ನೆಯ ಸೋಮವಾರ | ಸಂಚಿಕೆ ೩೦.

ಗಾಂಧೀಜಿಯವರ ಪ್ರಾತಃಕಾಲದ ಪ್ರಾರ್ಥನೆ.

ನಾರಾಯಣ ನಾರಾಯಣ ಜಯ ಗೋವಿಂದ ಹರಿ।
ನಾರಾಯಣ ನಾರಾಯಣ ಜಯ ಗೋಪಾಲ ಹರಿ ॥

ಕಳೆದ ಭಾನೆಯ ತಾರೀಖಿನ ಪ್ರಾತಃಕಾಲ ನಾಲ್ಕು ಗಂಟೆ ೨೦ ನಿಮಿಷಗಳಿಗೆ ಹುಬ್ಬಳ್ಳಿಯಲ್ಲಿ ಗಾಂಧೀಜಿಯವರ ಪ್ರಾತಃಕಾಲದ ಪ್ರಾರ್ಥನೆಯು ಜರುಗಿತು. ಆ ದಿವ್ಯ ದೃಶ್ಯವು ಚಿರಸ್ಮರಣೀಯವಾದುದು.

ವಿಶಾಲವಾದ ಬೈಲು ಬೆಳದಿಂಗಳು. ಬೆಳಗಿನ ಸುಳುಗಾಳಿ ಬನ್ನಿಯ ಗಿಡದ ಕೆಳಗೆ ಮಹಾತ್ಮಾಜಿಯವರು ತಮ್ಮ ಪರಿವಾರದೊಂದಿಗೆ ಕುಳಿತು ಪ್ರಾರ್ಥನೆಯನ್ನು ಪ್ರಾರಂಭಿಸಿದರು. ೫-೫ ಸಾವಿರ ಜನರು ಕೂಡಿದ್ದರೂ ಸ್ವಲ್ಪವಾದರೂ ಸದ್ದಾಗದೆ ಎಲ್ಲೆಲ್ಲಿಯೂ ಶಾಂತಿಯೇ ನೆಲೆಸಿತ್ತು. ಪ್ರಾರ್ಥನೆಯಲ್ಲಿ ಈ ಕೆಳಗಿನ ಶ್ಲೋಕಗಳೂ ಇದ್ದವು.

ಪ್ರಾತಃ ಸ್ಮರಾಮಿ ಹೃದಿ ಸಂಸ್ಫುರದಾತ್ಮ ತತ್ವಂ।
ಸಚ್ಚಿತ್ಸುಖಂ ಪರಮಹಂಸಗತಿಂ ತುರೀಯಂ॥
ಯತ್ ಸ್ವಪ್ನ ಜಾಗರ ಸುಷುಪ್ತಮವೈತಿ ನಿತ್ಯಂ।
ತದ್ ಬ್ರಹ್ಮ ನಿಷ್ಕಲಮಹಂ ನ ಚ ಭೂತಸಂಘಃ॥

ಸಮುದ್ರವಸನೆ ದೇವಿ ಪರ್ವತಸ್ತನ ಮಂಡಲೆ।
ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೆ॥

ಯಾ ಕುಂದೇಂದು ತುಷಾರಹಾರಧವಲಾ ಯಾ ಶುಭ್ರ ವಸ್ತ್ರಾವೃತಾ।
ಯಾ ವೀಣಾವರದಂಡಮಂಡಿತ ಕರಾ ಯಾ ಶ್ವೇತ ಪದ್ಮಾಸನಾ।
ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿಭಿರ್ದೇವೈಃ ಸದಾ ವಂದಿತಾ।
ಸಾ ಮಾಂ ಪಾತು ಸರಸ್ವತೀ ಭಗವತೀ ನಿಃಶೇಷ ಜಾಡ್ಯಾಪಹಾ॥

ವಕ್ರತುಂಡ ಮಹಾಕಾಯ। ಸೂರ್ಯಕೋಟಿ ಸಮಪ್ರಭ।
ನಿರ್ವಿಘ್ನಂ ಕುರುಮೇದೇವ ಶುಭಕಾರ್ಯೇಷು ಸರ್ವದಾ॥

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ।
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ।

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ।
ವಿಶ್ವಾಧಾರಂ। ಗಗನ ಸದೃಶಂ ಮೇಘವರ್ಣಂ ಶುಭಾಂಗಂ।
ಲಕ್ಷ್ಮೀ ಕಾಂತಂ। ಕಮಲನಯನಂ। ಯೋಗಿಭಿರ್ಧ್ಯಾನಗಮ್ಯಂ। ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ॥

ಕರಚರಣ ಕೃತಂ ವಾಕ್ಕಾಯಜಂ ಕರ್ಮಜಂ ವಾ।
ಶ್ರವಣ ನಯನಜಂ ವಾ ಮಾನಸಂ ವಾಪರಾಧಂ।
ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ। ಜಯ ಜಯ ಕರುಣಾಬ್ಧೆ ಶ್ರೀ ಮಹಾದೇವ ಶಂಭೋ॥

ಈ ಪ್ರಕಾರ ಕೆಲವು ಶ್ಲೋಕಗಳನ್ನು ಹೇಳಿದ ನಂತರ ಮಿರಾಬೆನ್‌ರವರು ತಮ್ಮ ಮಂಜುಳ ಮೃದುಮಧುರ ಸ್ವರದಲ್ಲಿ

ನಾರಾಯಣ ನಾರಾಯಣ ಜಯಗೋವಿಂದ ಹರಿ।
ನಾರಾಯಣ ನಾರಾಯಣ ಜಯಗೋಪಾಲ ಹರಿ ॥

ಎಂಬುದಾಗಿ ಭಜನೆ ಮಾಡಲುಪಕ್ರಮಿಸಿದರು. ಗಾಂಧೀಜಿಯವರು ಮತ್ತು ಅವರ ಪರಿವಾರದವರು ಮಿರಾಬೆನ್‌ರವರು ಹೇಳುವಂತೆ ಹೇಳುತ್ತಿದ್ದರು.

ಅನಂತರ ಭಗವದ್ಗೀತೆಯ ಭಾನೆಯ ಅಧ್ಯಾಯದ ಪಠಣವಾಯಿತು. ಜನರು ಶಾಂತವಾಗಿದ್ದುದಕ್ಕೋಸ್ಕರ ಗಾಂಧೀಜಿಯವರು ತಮ್ಮ ಧನ್ಯವಾದವನ್ನು ತಿಳಿಸಿದರು.

ಉತ್ತರ ಕರ್ನಾಟಕದಲ್ಲಿ
ಗಾಂಧೀಜಿಯವರ ಸಂಚಾರ.

ಬಳ್ಳಾರಿ ಜಿಲ್ಲೆ.

ತಾ. ೨ನೆಯ ಶುಕ್ರವಾರ ಪ್ರಾತಃಕಾಲ ದಾವಣಗೇರೆಯಿಂದ ಹೊರ ಮಾರ್ಗವಾಗಿ ಗಾಂಧೀಜಿಯವರು ಹರಪನಹಳ್ಳಿಗೆ ತೆರಳಿದರು. ಹರಿಹರದ ಆದಿಜನಗಳು ಮಾರ್ಗದಲ್ಲಿ ಗಾಂಧೀಜಿಯವರನ್ನು ಎರಡು ನಿಮಿಷಗಳವರೆಗೆ ಸತ್ಕರಿಸಿ ತಮ್ಮ ಭಕ್ತಿಯನ್ನು ವ್ಯಕ್ತಗೊಳಿಸಿದರು.

ಹರಪನಹಳ್ಳಿಯಲ್ಲಿ ಗಾಂಧೀಜಿಯವರಿಗೆ ಪುರಜನರು ತಮ್ಮ ಭಕ್ತಿ ವಿಶ್ವಾಸಗಳನ್ನು ವ್ಯಕ್ತಗೊಳಿಸಿದರು. ವೀರಶೈವರ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯೂ ಅರ್ಪಿಸಲ್ಪಟ್ಟಿತು. ಅನಂತರ ಕೊಟ್ಟೂರಿಗೆ ದಯಮಾಡಿಸಿದರು. ಅಲ್ಲಿ ದೀನ ಸೇವಾಶ್ರಮವನ್ನು ಅಡಿಗಲ್ಲನ್ನಿಡುವ ಸಮಾರಂಭ ಜರುಗಿತು. ವಿಶೇಷ ಜನಸಂದಣಿಯಿಂದ ಗಲಾಟೆ ಹೆಚ್ಚಾಯಿತು.

ಸಾಯಂಕಾಲ **ಸೊಂಡೂರಿ**ಗೆ ಗಾಂಧೀಜಿಯವರು ಆಗಮಿಸಲು ಆ ಪುರಜನರು ಬಹು ಆದರದಿಂದ ಬರಮಾಡಿಕೊಂಡರು. ಇಲ್ಲಿಯ ಅತಿ ಪುರಾತನವಾದ ಪುರಾಣ ಪ್ರಸಿದ್ಧವಾದ ಕಾರ್ತಿಕೇಯ ದೇವಾಲಯವು ಆದಿಜನರ ಪ್ರವೇಶಕ್ಕೆ ಅನುಕೂಲವಾಗಿದ್ದುದನ್ನು ಕೇಳಿ ಗಾಂಧೀಜಿಯವರು ಸಂತೋಷಪಟ್ಟರು. ಮತ್ತು ಆದಿಜನರ ಸುಧಾರಣೆಯ ವಿಷಯವಲ್ಲಿ ಈ ಸಂಸ್ಥಾನವು ಮಾದರಿಯಾದುದಾಗಲೆಂದು ಹಾರೈಸಿದರು.

ಬಳ್ಳಾರಿ.

ತಾ. ೩ನೆಯ ಶನಿವಾರ ಪ್ರಾತಃಕಾಲ ೮॥ ಗಂಟೆಗೆ ಗಾಂಧೀಜಿಯವರು ಬಳ್ಳಾರಿಗೆ ಆಗಮಿಸಿದರು. ಮೊದಲು ರಾವಸಾಹೇಬ ಶೆಟ್ಟರ ಪಾಪಯ್ಯನವರ ಭವನಕ್ಕೆ ಆಗಮಿಸಿ ಅನಂತರ ಸಾರ್ವಜನಿಕ ಸಭೆಗೆ ತೆರಳಿದರು. ಅಲ್ಲಿಯ ಕೆಲಸ ಮುಗಿದ ಮೇಲೆ ಆದಿಜನರ ಕೇರಿಯನ್ನೂ ಆದಿಜನ ವಿದ್ಯಾರ್ಥಿಗಳ ವಸತಿ ಗೃಹವನ್ನೂ ಸಂದರ್ಶಿಸಿದರು. ಇಲ್ಲಿಯ ಮುನಿಸಿಪಾಲ್ಟಿ, ಲೋಕಲ್ ಬೋರ್ಡುಗಳ ಮಾನಪತ್ರಗಳು ಅರ್ಪಿಸಲ್ಪಟ್ಟವು.

ಸಾರ್ವಜನಿಕ ಸಭೆಗೆ ವಿಶೇಷವಾಗಿ ಜನರು ಸೇರಿದ್ದರು. ಆದಿಜನ ಸೇವಾ ನಿಧಿಗೆ ಕೂಡಿಸಲ್ಪಡತಕ್ಕ ಹಣವು ದೇವಾಲಯ ಪ್ರವೇಶದ ಕಾರ್ಯಕ್ಕೆ ವಿನಿಯೋಗವಾಗುವುದೆಂಬ ಸಂಶಯದಿಂದ ಅನೇಕರು ಆ ನಿಧಿಗೆ ಧನ ಸಹಾಯ ಮಾಡಿರಲಿಲ್ಲವೆಂಬ ಸಂಗತಿಯು ಗಾಂಧೀಜಿಯವರಿಗೆ ಗೊತ್ತಾಯಿತು.

ಆಗ ಜನತೆ ಆ ಸಂದೇಹವನ್ನು ಗಾಂಧೀಜಿಯವರು ನಿವಾರಣೆ ಮಾಡಿದರು. ಆದಿಜನರ ವಿದ್ಯಾಭ್ಯಾಸ, ಸ್ವಚ್ಛತೆಯ ಸೌಕರ್ಯ ಮೊದಲಾದ ಅವರ ಸುಧಾರಣೆಗಾಗಿಯೇ ಈ ಹಣ ವಿನಿಯೋಗವಾಗುವುದೆಂಬ ಸಂಗತಿ ತಿಳಿದನಂತರ ಆ ಮಹಾಸಭೆಯಲ್ಲಿಯೇ ಈ ನಿಧಿಗೆ ಹೆಚ್ಚಾಗಿ ಹಣ ಸೇರಿತು. ಲೋಕಲ್ ಬೋರ್ಡಿನಿಂದ ೨೦೦ ರೂ. ಗಳು ಕೊಡಲ್ಪಡತಕ್ಕವುಗಳಿವೆಯೆಂತಲೂ ಒಂದು ವೇಳೆ ಹಾಗೆ ಕೊಡಲ್ಪಡದಿದ್ದರೆ ತಾವೇ ಸ್ವಂತವಾಗಿ ಕೊಡುವೆವೆಂತಲೂ ಬೋರ್ಡಿನ ಪ್ರೆಸಿಡೆಂಟರು ಶ್ರೀ. ಮಹಾಬಲೇಶ್ವರಪ್ಪನವರು ಗಾಂಧೀಜಿಯವರ ಮುಂದೆ ವಾಗ್ದಾನ ಮಾಡಿದರು. ಅನೇಕ ಮಹಿಳೆಯರು ತಮ್ಮ ಆಭರಣಗಳನ್ನು ಗಾಂಧೀಜಿಯವರಿಗೆ ಅರ್ಪಿಸಿದರು.

ಹೊಸಪೇಟೆ.

ಬಳ್ಳಾರಿಯಿಂದ ಉಗಿಬಂಡಿಯಲ್ಲಿ ಹೊಸಪೇಟೆಗೆ ಗಾಂಧೀಜಿಯವರು ಶನಿವಾರ ಮಧ್ಯಾಹ್ನಕ್ಕೆ ಆಗಮಿಸಿದರು. ರೇಲ್ವೆ ಸ್ಟೇಶನ್ನಿನಿಂದ ದೂರದಲ್ಲಿ ಸಭೆಯನ್ನು ಏರ್ಪಡಿಸಿದ ಕಾರಣ ಗಾಂಧೀಜಿಯವರು ಬಹು ಅಲ್ಪ ಕಾಲದಲ್ಲಿಯೇ ಅಲ್ಲಿಯ ಕಾರ್ಯವನ್ನು ಪೂರೈಸಿಕೊಂಡು ಹಿಂದಕ್ಕೆ ತೆರಳಿದರು.

ಧಾನಾಪುರ.

ಹೊಸಪೇಟೆಯಿಂದ ಉಗಿಬಂಡಿಯಲ್ಲಿ ಬರುವಾಗ ಕೊಪ್ಪಳ ಜಲ್ಲೆಯ ಪರವಾಗಿ ಗಾಂಧೀಜಿಯವರಿಗೆ ಧಾನಾಪುರ ಸ್ಟೇಶನ್ನಿನಲ್ಲಿ ಮಾನಪತ್ರವನ್ನೂ ೧೪೧ ರೂ. ಗಳನ್ನೂ ಅರ್ಪಿಸಿದರು. ಆಗ ಮಹಾತ್ಮರು ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಜನರಿಗೆ ಬೋಧಿಸಿದರು.

ಧಾರವಾಡ ಜಿಲ್ಲೆ.

ಜಕ್ಕಲಿ

ಗಾಂಧೀಜಿಯವರು ಶನಿವಾರ ೫ ಸಾಯಂಕಾಲ ೪ ಗಂಟೆಗೆ ಗದಗ ಸ್ಟೇಶನ್ನಿಗೆ ಬಂದೊಡನೆ ಹಾಗೆಯೇ ಜಕ್ಕಲಿಗೆ ತೆರಳಿದರು. ಶ್ರೀಯುತ ದೊಡ್ಡಮೇಟಿ ಅನ್ನದಾನಪ್ಪನವರು ಗಾಂಧೀಜಿಯವರ ಸ್ವಾಗತದ ಸಿದ್ಧತೆಯನ್ನು ಬಹು ಹೃದ್ಯಕರವಾಗಿ ಮಾಡಿದ್ದರು.

ಸುತ್ತಲಿನ ಗ್ರಾಮಗಳಿಂದ ಸಾಧಾರಣ ೫೦-೬೫ ಸಾವಿರ ಜನರು ಜಕ್ಕಲಿಗೆ ಬಂದಿದ್ದರು. ಈ ಜನರೆಲ್ಲ ಹೆಚ್ಚಾಗಿ ಚಕ್ಕಡಿಗಳ ಮೇಲೆಯೇ ಬಂದಿದ್ದರು. ಹಳ್ಳಿಗಳ ಜನರು ಇಲ್ಲಿಯೇ ವಿಶೇಷ ಸೇರಿದ್ದರು ದನಗಳಿಗೆ ಮೇವು ಜನಗಳಿಗೆ ಊಟದ ವ್ಯವಸ್ಥೆಯನ್ನು ಕೂಡಾ ಮಾಡಿಸಿದ್ದುದು ಇವರಿಗೆ ತುಂಬಾ ಭೂಷಣವಾದುದು

ಗಾಂಧೀಜಿಯವರು ಸಾಯಂಕಾಲ ೫ಗಂಟೆಗೆ ಇಲ್ಲಿಗೆ ಆಗಮಿಸಿದರು. ಮೊದಲು ಶ್ರೀ. ಅನ್ನದಾನಪ್ಪನವರ ಸಂಗಡ ಸ್ವಲ್ಪ ಸಂಭಾಷಿಸಿದನಂತರ ೬೦೦ ರೂ. ಗಳನ್ನು ಅನ್ನದಾನಪ್ಪನವರು ಗಾಂಧೀಜಿಯವರಿಗೆ ಅರ್ಪಿಸಿದರು. ಆ ಮೇಲೆ ಗಾಂಧೀಜಿಯವರು ತಮಗೆ ಅನ್ನದಾನಪ್ಪನವರ ಪರಿಚಯವು ಈ ಮುಂಚೆಯೇ ಯರವಡಾದಲ್ಲಿ ಆಗಿದ್ದಿತೆಂದು ಹೇಳಿ ಅಸ್ಪೃಶ್ಯತೆಯ ವಿಷಯವಾಗಿಯೂ ತ್ಯಾಗದ ವಿಷಯವಾಗಿಯೂ ಉಪನ್ಯಾಸ ಮಾಡಿದರು. ಇವರಿಗೆ ಅರ್ಪಿಸಿದ ಥೈಲಿಕ್ಕೆ ಮಾಲೆಯು ಒಂದು ನೂರು ರೂ. ಗಳಿಗೆ ವಿಕ್ರಯವಾಯಿತು.

ಗದಗ

ಜಕ್ಕಲಿಯಿಂದ ಗದಗಿಗೆ ಗಾಂಧೀಜಿಯವರು ಸಾಯಂಕಾಲ ೬॥ ಗಂಟೆ ಸಮಯಕ್ಕೆ ಆಗಮಿಸಿದರು. ಇಲ್ಲಿಯೂ ಸಾಧಾರಣ ೫೫ ಸಾವಿರದವರೆಗೆ ಜನರು ಸೇರಿದ್ದರು. ಸಭೆಯ ವ್ಯವಸ್ಥೆಯು ಬಹು ಚೆನ್ನಾಗಿದ್ದಿತು. ಕಾರ್ಯಗಳು ಶಾಂತತೆಯಿಂದ ಜರುಗಿದವು. ಮುನಸಿಪಾಲಿಟಿ ಮಾನಪತ್ರವು ಅರ್ಪಿಸಲ್ಪಟ್ಟ ನಂತರ

ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಭಾಷಣ ಮಾಡಿದರು. ಅನಂತರ ಅನೇಕ ಸ್ತ್ರೀಯರು ಆಭರಣ ಗಳನ್ನೂ ಅರ್ಪಿಸಿದರು. ಮಹಾತ್ಮರಿಗೆ ಅರ್ಪಿಸಲ್ಪಟ್ಟ ಅನೇಕ ವಸ್ತುಗಳು ಲಿಲಾವಿನಲ್ಲಿ ವಿಕ್ರಯವಾದವು.

ಲಿಲಾವು ನಡೆದಾಗ ಗಾಂಧೀಜಿಯವರು ಒಂದು ವಾರ್, ಎರಡು ವಾರ್, ಮೂರು ವಾರ್, ಎಂದು ಕನ್ನಡದಲ್ಲಿ ಹೇಳುತ್ತಿದ್ದುದು ಜನಗಳಿಗೆ ಅತ್ಯಾಶ್ಚರ್ಯವನ್ನುಂಟುಮಾಡುತ್ತಿದ್ದಿತು. ಕರ್ನಾಟಕಕ್ಕೆ ಆಗಮಿಸಿದ ನಂತರ ಮಹಾತ್ಮರು "ಗಾಂಧಿ" ಎಂಬುದಾಗಿ ಕನ್ನಡದಲ್ಲಿ ತಮ್ಮ ಹೆಸರು ಬರೆಯುವುದನ್ನು ಕಲಿತಿದ್ದಾರೆ. ಹೀಗೆ ಬರೆದುಕೊಡಲು ೫ ರೂ. ಗಳನ್ನು ಅದಿಜನ ಸೇವಾನಿಧಿಗೆ ಅರ್ಪಿಸಬೇಕಾಗುತ್ತದೆ. ಆ ಪ್ರಕಾರ ೫ ರೂ. ಗಳನ್ನು ಕೊಟ್ಟು ಅನೇಕರು ಇಲ್ಲಿ ಅವರ ಕನ್ನಡ ಹಸ್ತಾಕ್ಷರಗಳನ್ನು ಹೊಂದಿದರು.

ಹುಬ್ಬಳ್ಳಿ

ತಾ. ೩ನೆಯ ರಾತ್ರೆ ಗದಗಿನಿಂದ ಉಗಿಬಂಡಿಯಲ್ಲಿ ಹುಬ್ಬಳ್ಳಿಗೆ ಆಗಮಿಸಿದರು. ಮಾರ್ಗದಲ್ಲಿ ಪ್ರತಿಯೊಂದು ಸ್ಟೇಶನ್ನಿನಲ್ಲಿಯೂ ವಿಶೇಷವಾಗಿ ಜನರು ಸೇರಿದ್ದರು. ಅಣ್ಣಿಗೇರಿ ಸ್ಟೇಶನ್ನಿನಲ್ಲಂತೂ ವಿಪರೀತ ಜನ. ಹುಬ್ಬಳ್ಳಿ ಸ್ಟೇಶನ್ನಿನಲ್ಲಿ ವಿಶೇಷ ಜನ ಸೇರಿದ್ದರಿಂದ ಗಾಂಧೀಜಿಯವರು ಗಾಡಿಯಿಂದಿಳಿದು ಹೊರಗೆ ಹೋಗಲು ಬಹು ಪ್ರಯಾಸವಾಯಿತು.

ತಾ. ೪ನೆಯ ಸ್ಥಾತಃಕಾಲ ಅದಿಜನರ ಕೇರಿಗಳನ್ನು ನೋಡಿ ಮುನಸಿಪಾಲಿಟಿಗೆ ದಯಮಾಡಿಸಿದರು. ಅಲ್ಲಿ ಅರ್ಪಿಸಲ್ಪಟ್ಟ ಮಾನ ಪತ್ರಕ್ಕೆ ಉತ್ತರ ಹೇಳುವಾಗ ಇದು ಕರ್ನಾಟಕದಲ್ಲಿ ಒಂದನೆಯ ತರಗತಿಯ ಮುನಸಿಪಾಲಿಟಿಯಾಗಿದ್ದರೂ ಅದಿಜನ ಸುಧಾರಣೆಯ ವಿಷಯದಲ್ಲಿ ಮಾತ್ರ ಒಂದನೆಯ ತರಗತಿಯಲ್ಲ, ಎರಡನೆಯ ತರಗತಿಯಲ್ಲ, ಮೂರನೆಯ ತರಗತಿಯಲ್ಲ, ಇದಕ್ಕೆ ತರಗತಿಯೇ ಇಲ್ಲವೆಂದು ಸ್ಪಷ್ಟ ತಿಳಿಸಿದರು.

ತಾವು 'ಭಂಗಿ' ಕೆಲಸವನ್ನು ಸ್ವಂತ ಮಾಡಿರುವುದರಿಂದ ಆ ಕೆಲಸದ ಮತ್ತು ಜನರ ಸ್ಥಿತಿ ತಮಗೆ ಚೆನ್ನಾಗಿ ಅನುಭವವಿದೆಯೆಂತಲೂ ಈ ಜನರ ಸ್ವಚ್ಛತೆ, ಸುಧಾರಣೆಯ ಸೌಕರ್ಯ ಮೊದಲಾದವುಗಳ ಕಡೆಗೆ ಮುನಸಿಪಾಲಿಟಿಯು ಚೆನ್ನಾಗಿ ಲಕ್ಷಿಸಬೇಕೆಂತಲೂ ಸೂಚಿಸಿದರು.

ಅನಂತರ ಸಾರ್ವಜನಿಕ ಸಭೆಗೆ ಆಗಮಿಸಿದರು. ಸಭೆಗೆ ಸಾಧಾರಣ ೩೦ ಸಾವಿರ ಜನರು ಸೇರಿದ್ದರು. ಪುರಜನರ ಮತ್ತು ಕೂಲಿಕಾರರ ಮಾನಪತ್ರಗಳು ಅರ್ಪಿಸಲ್ಪಟ್ಟವು. ಅನಂತರ ಗಾಂಧೀಜಿಯವರು ಅಸ್ಪೃಶ್ಯತಾನಿವಾರಣೆ ಮತ್ತು ಕೂಲಿಕಾರರ ಚಟುವಟಿಕೆಯ ಸಂಬಂಧವಾಗಿ ಮಹತ್ವದ ಭಾಷಣ ಮಾಡಿದರು.

ಗಾಂಧೀಜಿಯವರಿಗೆ ಅರ್ಪಿಸಿದ ವಸ್ತುಗಳ ಲಿಲಾವು ಇಲ್ಲಿ ಬಹು ತೃಪ್ತಿಕರವಾಗಿ ಜರುಗಿತು. ಜನರು ಪೋಟಾಪೋಟಿಯಿಂದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು.

ಧಾರವಾಡ

ಹುಬ್ಬಳ್ಳಿಯಿಂದ ಮೋಟಾರಿನಲ್ಲಿ ಧಾರವಾಡಕ್ಕೆ ಗಾಂಧೀಜಿಯವರು ಆಗಮಿಸಿದರು. ಇಲ್ಲಿಯ ಸಭೆಗೆ ಸಾಧಾರಣ ೧೫ ಸಾವಿರ ಜನರು ಸೇರಿದ್ದರು. ಸಭೆಯ ವ್ಯವಸ್ಥೆಯನ್ನು ಬಹು ಚೆನ್ನಾಗಿ ಮಾಡಿದ್ದರು. ಗಾಂಧೀಜಿಯವರು ಕುಳಿತುಕೊಳ್ಳುವ ಸ್ಥಾನವನ್ನು ಬಹು ಎತ್ತರವಾಗಿ ಏರ್ಪಡಿಸಿದ್ದರಿಂದ ಆ ಮಹಾಸಭೆಗೆ ಈ ದಿವ್ಯ ಮೂರ್ತಿಯು ಎಲ್ಲ ಕಡೆಗೂ ಕಾಣುತ್ತಿದ್ದಿತು. ಆದಕಾರಣ ಬೇರೆ ವಿಶೇಷ ಕಡೆಗಳಲ್ಲಿ ಗೊಂದಲವಾದಂತೆ ಇಲ್ಲಿ ಸ್ವಲ್ಪವೂ ಆಗಲಿಲ್ಲ.

ಮುನಸಿಪಾಲಿಟಿ ಮತ್ತು ಲೋಕಲ್‌ಬೋರ್ಡುಗಳ ಬಿನ್ನಹ ಪತ್ರಿಕೆಗಳು ಅರ್ಪಿಸಲ್ಪಟ್ಟವು. ಗಾಂಧೀಜಿಯವರು ವಿದ್ಯಾರ್ಥಿಗಳ ಮತ್ತು ಸನಾತನವಾದಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟರು. ಅನೇಕ ವಸ್ತುಗಳ ಲಿಲಾವು ಜರುಗಿತು.

ಬೆಳಗಾವ ಜಿಲ್ಲೆ.

ಸವದತ್ತಿ

ತಾ. ೪ನೆಯ ರವಿವಾರ ಸಾಯಂಕಾಲ ೪ ಗಂಟೆ ಸಮಯಕ್ಕೆ ಧಾರವಾಡದಿಂದ ಗಾಂಧೀಜಿಯವರು ಸವದತ್ತಿಗೆ ಆಗಮಿಸಿದರು. ಇಲ್ಲಿಯ ಸಭೆಗೆ ೫-೬ ಸಾವಿರ ಜನರು ಸೇರಿದ್ದರು ಇವರು ಸ್ಥಾತಃಕಾಲ ೧೦ ಗಂಟೆಯಿಂದಲೂ ಗಾಂಧೀಜಿಯವರ ಆಗಮನ ನಿರೀಕ್ಷಣೆಯಲ್ಲಿಯೇ ಇದ್ದರು. ಸವದತ್ತಿ ತಾಲೂಕಿನ ಜನರ ಮತ್ತು ಕರಿಕಟ್ಟೆ ಜನರ ಮಾನಪತ್ರಗಳು ಅರ್ಪಿಸಲ್ಪಟ್ಟವು. ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಕರಿಕಟ್ಟೆಯವರು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಬಹು ತೃಪ್ತಿಕರವಾಗಿ ಕೆಲಸ ಮಾಡಿದುದು ತಮಗೆ ತಿಳಿದಿದೆಯೆಂದು ಸೂಚಿಸಿದರು. ಕರಿಕಟ್ಟೆಯ ಎಲ್ಲ ದೇವಾಲಯಗಳೂ ಜಲಾಶಯಗಳೂ ಅದಿಜನರ ಪ್ರವೇಶಕ್ಕೆ ಅನುಕೂಲವಾಗಿರುವುದು ಆ ಸ್ಥಳದವರಿಗೆ ಬಹು ಭೂಷಣಪ್ರದವಾದ ಸಂಗತಿಯು.

ಬೈಲ ಹೊಂಗಲ

ಸವದತ್ತಿಯಿಂದ ಬರುವಾಗ ಮಾರ್ಗದಲ್ಲಿ ಉಳ್ಳಿಗೆರೆ ಎಂಬಲ್ಲಿ ಗಾಂಧೀಜಿಯವರು ದೇವಾಲಯ ಪ್ರವೇಶದ ಸಮಾರಂಭವನ್ನು ಜರುಗಿಸಿದರು. ಅನಂತರ ಸಾಯಂಕಾಲ ಬೈಲಹೊಂಗಲಕ್ಕೆ ಆಗಮಿಸಲು ಅಲ್ಲಿಯ ಬಹು ಮುಖ್ಯ ಮತ್ತು ಪ್ರಾಚೀನವಾದ ಕರೇಗುಡಿ ಎಂಬ ಊರಮಧ್ಯದಲ್ಲಿರುವ ಶಿವಾಲಯದಲ್ಲಿ ಅದಿಜನ ಪ್ರವೇಶದ ಸಮಾರಂಭವು ಗಾಂಧೀಜಿಯವರಿಂದ ಮೊದಲು ಜರುಗಿತು. ವೀರ ಶೈವ ಶಾಸ್ತ್ರಿಗಳೂ ಪಟ್ಟದ ಸ್ವಾಮಿಗಳೂ ಈ ಸಮಾರಂಭದಲ್ಲಿ ಮುಂದಿದ್ದು ವಿಧಿವತ್ತಾಗಿ ಜರುಗಿಸಿದರು.

ಅನಂತರ ಹೆಣ್ಣುಮಕ್ಕಳ ಪ್ರತ್ಯೇಕವಾದ ಸಭೆ ಜರುಗಿತು. ಈ ಸಭೆಗೆ ೪-೫ ಸಾವಿರ ಹೆಣ್ಣುಮಕ್ಕಳು ಸೇರಿದ್ದರು. ಈ ವಿಧವಾದ ಪ್ರತ್ಯೇಕ ಸಭೆಯನ್ನಿಟ್ಟುದು ಬಹು ಅನುಕೂಲವೂ ಹಿತಕರವೂ ಆಗಿದ್ದಿತು.

ಅನಂತರ ಸಾರ್ವಜನಿಕ ಸಭೆಗೆ ಗಾಂಧೀಜಿಯವರು ಆಗಮಿಸಿದರು. ಇಲ್ಲಿಯ ಸ್ವಯಂಸೇವಕರು ಬಹು ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದರು. ಸ್ವಲ್ಪವೂ ಗದ್ದಲವಾಗದೆ ಎಲ್ಲ ಕಾರ್ಯಗಳೂ ತೃಪ್ತಿಕರವಾಗಿ ಜರುಗಿದವು. ಮುನಸಿಪಾಲಿಟಿಯವರು ವಿಜ್ಞಾಪನಾ ಪತ್ರಿಕೆಯನ್ನರ್ಪಿಸಿದರು. ಗಾಂಧೀಜಿಯವರು ಹರಿಜನ ಶಬ್ದ ಪ್ರಯೋಗದ ವಿಷಯವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ ಹರಿ, ಹರ, ಶಿವ, ಆದಿ, ಮೊದಲಾದ ಬೇಕಾದ ಶಬ್ದ ಉಪಯೋಗಿಸಿರೆಂದು ಹೇಳಿದರು.

ಬೆಳಗಾವ.

ತಾ. ೪ನೆಯ ರಾತ್ರೆ ೯॥ ಗಂಟೆಯ ಸಮಯಕ್ಕೆ ಬೆಳಗಾವಿಗೆ ಗಾಂಧೀಜಿಯವರು ಆಗಮಿಸಿದರು. ಸೋಮವಾರವು ಅವರ ಮೌನ ದಿನವಾಗಿದ್ದುದರಿಂದ ಯಾವ ಕಾರ್ಯಗಳೂ ಜರುಗಲಿಲ್ಲ. ಆ ದಿನ ಸಾಯಂಕಾಲದ ಪ್ರಾರ್ಥನೆಯ ಕಾಲಕ್ಕೆ ವಿಶೇಷ ಗಲಾಟೆಯಾಯಿತು. ಮಂಗಳವಾರ ವಿಶ್ರಾಂತಿಯ ದಿನವಾದುದರಿಂದ

ಬೇರೆ ಬೇರೆ ಜನಗಳ ಸಂಗಡ ಸಂಭಾಷಣೆಗಳು ಜರುಗಿದವು.

ಸಾಯಂಕಾಲದ ಪ್ರಾರ್ಥನೆ ಮುಗಿದನಂತರ ಸಾರ್ವಜನಿಕ ಸಭೆಗೆ ಗಾಂಧೀಜಿಯವರು ಆಗಮಿಸಿದರು. ಸಭೆಗೆ ೩೫ ಸಾವಿರ ದವರೆಗೆ ಜನರು ಸೇರಿದ್ದರು. ಈ ಉತ್ತರ ಕರ್ನಾಟಕದಲ್ಲಿ ಇಷ್ಟು ಜನರು ಯಾವ ಸಭೆಯಲ್ಲಿಯೂ ಸೇರಿರಲಿಲ್ಲ. ಸಭೆಯ ವ್ಯವಸ್ಥೆಯು ಬಹು ಕ್ರಮವಾಗಿಯೂ ಗಂಭೀರವಾಗಿಯೂ ಇಡಲ್ಪಟ್ಟಿದ್ದಿತು. ಗಾಂಧೀಜಿಯವರ ಪೀಠದ ಎಡಬಲಗಳಲ್ಲಿ ಮುನಿಸಿಪಾಲ್ಟಿ ಮತ್ತು ಲೋಕಲ್‌ಬೋರ್ಡಿನ ಪ್ರತಿನಿಧಿಗಳಿದ್ದರು. ಮೊದಲು ಇವರ ಪರಿಚಯವನ್ನು ಮಾಡಿಕೊಟ್ಟರು. ಈ ಏರ್ಪಾಟು ರಾಜನ ಓಲಗದಂತೆ ಬಹು ಗಂಭೀರವಾದುದಾಗಿದ್ದಿತು.

ಬೆಳಗಾವಿ-ಶಹಾಪುರಗಳ ಪುರ ಜನರಿಂದ ೫ ಸಾವಿರ ರೂ. ಗಳು ಅರ್ಪಿಸಲ್ಪಟ್ಟವು. ಉತ್ತರ ಕರ್ನಾಟಕದಲ್ಲಿ ಇಷ್ಟು ಹಣವು ಒಂದು ಯಾವ ಸ್ಥಳದಲ್ಲಿಯೂ ಅರ್ಪಿಸಲ್ಪಟ್ಟಿಲ್ಲ. ಇಲ್ಲಿಯ ಈ ಮಹತ್ಕಾರ್ಯಗಳಿಗೆ ಶ್ರೀಮಾನ್, ದೇಶಪಾಂಡೆ ಗಂಗಾಧರರಾಯರ ದಿ|| ಬಿ|| ಲರ್ನೆಯವರ ಪ್ರಯತ್ನ ವಿಶೇಷವೇ ಮುಖ್ಯ ಕಾರಣವಾಗಿದ್ದಿತು.

ಗಾಂಧೀಜಿಯವರು ಇಲ್ಲಿ ಕನ್ನಡದಲ್ಲಿ ಭಾಷಣವನ್ನು ಮಾಡಿದರು. ಶ್ರೀ ಕಾಕಾ ಕಾಲೇಲ್ಕರರು ಇಲ್ಲಿರತಕ್ಕ ತಮ್ಮ ಆಸ್ತಿಯನ್ನು ಆದಿಜನ ಸೇವಾ ನಿಧಿಗೆ ಅರ್ಪಿಸಿದ್ದಾರೆಂತಲೂ ಇದಕ್ಕಾಗಿ ಒಂದು ಟ್ರಸ್ಟ ಸಂಸ್ಥೆವು ಏರ್ಪಡುವುದೆಂತಲೂ ಸೂಚಿಸಿದನಂತರ ಸನಾತನಿಗಳ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟರು. ಆ ಮೇಲೆ ಇಷ್ಟರಲ್ಲಿಯೇ ಬೆಳಗಾವಿಯಲ್ಲಿ ಜರುಗಲಿರುವ ಪಶುಬಲಿಯು ಅಧರ್ಮವಾದುದೆಂತಲೂ ತಮ್ಮ ದಿವ್ಯ ಭಾಷಣದಲ್ಲಿ ಸೂಚಿಸಿದರು.

ಆ ಮೇಲೆ ಅನೇಕ ವಸ್ತುಗಳ ಲಿಲಾವು ಜರುಗಿತು. ಉತ್ತರ ದೇಶದಿಂದ ಬಂದಿದ್ದ ಬಹು ಸುಂದರವಾದ ಚಿತ್ರಗಳ ಎರಡು ತಾಟುಗಳು ವಿಕ್ರಯವಾಗಲಿಲ್ಲ. ಅವುಗಳಲ್ಲಿ ದೊಡ್ಡದಾಗಿದ್ದವರ ಮೂಲ ಬೆಲೆಯೇ ೩೫ ರೂ ಇದ್ದಿತು. ಅಷ್ಟಕ್ಕು ಕೂಡ ಯಾರೂ ಅಲ್ಲಿ ತೆಗೆದುಕೊಳ್ಳಲಿಲ್ಲ. ಅಲ್ಲಿಯ ಚಿನಿವಾಲರಿಗಿಂತ ಗಾಂಧೀಜಿಯವರು ಹೆಚ್ಚಿನ ಚಿನಿವಾಲರಾಗಿದ್ದುದರಿಂದ ಹಾಗೇ ತೆಗೆದುಕೊಂಡೇ ಹೋದರು.

ಬೆಳಗಾವಿಯಿಂದ ಬುಧವಾರ ಪ್ರಾತಃಕಾಲ ಹುಕ್ಕೇರಿಗೆ ಹೊರಟರು. ಯಮಕನಮರ್ಡಿ ಮತ್ತು ಹುಕ್ಕೇರಿಗಳಲ್ಲಿ ಆದಿಜನರು ದೇವಾಲಯಗಳಲ್ಲಿ ಪ್ರವೇಶಿಸುವ ಸಪ್ತಾರಂಭವು ಗಾಂಧೀಜಿಯವರ ಮೂಲಕ ಜರುಗಿತು. ಸಂಕೇಶ್ವರ, ನಿಪ್ಪಾಣಿ, ಚಿಕ್ಕೋಡಿಗಳಿಗೆ ತೆರಳಿ ಅಲ್ಲಿಯ ಜನರು ಅರ್ಪಿಸಿದ ದ್ರವ್ಯ ಮತ್ತು ವಸ್ತುಗಳನ್ನು ಸ್ವೀಕರಿಸಿ ಆ ರಾತ್ರಿ ಶೇಡಬಾಳದಲ್ಲಿ ವಾಸವಾಗಿದ್ದರು.

ಅಥಣಿ ಜನರು ಶೇಡಬಾಳದಲ್ಲಿ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದರು. ಅಲ್ಲಿ ಪ್ರಾತಃಕಾಲದ ವಿಧಿಗಳನ್ನು ಪೂರೈಸಿಕೊಂಡು ಅಥಣಿಗೆ ೮|| ಗಂಟೆಯ ಸಮಯಕ್ಕೆ ಆಗಮಿಸಿದರು. ಅಲ್ಲಿ ಮುನಸಿಪಾಲಿಟಿಯವರು ವಿಜ್ಞಾಪನಾ ಪತ್ರಿಕೆಯನ್ನರ್ಪಿಸಿದರು.

ವಿಜಾಪುರ

ತಾ. ೧೪ನೆಯ ಗುರುವಾರ ಪ್ರಾತಃಕಾಲ ೧೧ ಗಂಟೆ ಸಮಯಕ್ಕೆ ಗಾಂಧೀಜಿಯವರು ವಿಜಾಪುರಕ್ಕೆ ಆಗಮಿಸಿದರು. ಇಲ್ಲಿಯ ಶಹರ್ದ ಭವನದಲ್ಲಿ ಗಾಂಧೀಜಿಯವರ ವಸತಿಗೆ ಬಹು ಅನುಕೂಲವಾದ ಸೌಲಭ್ಯಗಳನ್ನುಂಟುಮಾಡಿದ್ದರು. ಗಾಂಧೀಜಿಯವರು ತಮ್ಮ ಪರಿವಾರದೊಂದಿಗೆ ಇಲ್ಲಿಯೇ ವಾಸವಾಗಿದ್ದು ಮಧ್ಯಾನ್ಹದ ತಮ್ಮ ಊಟೋಪಚಾರಗಳನ್ನು ನೆರವೇರಿಸಿದರು.

ಅನಂತರ ಸಾಯಂಕಾಲ ೩ ಗಂಟೆಯ ಸಮಯಕ್ಕೆ ಇಲಮಟ್ಟೆ ವೀರಶೈವ ವಿದ್ಯಾಲಯದವರ ಆ ಮೇಲೆ ಸನಾತನಿಗಳ ಅನಂತರ ಅನೇಕ ಪ್ರಮುಖರ ಸಂಗಡ ಪ್ರತ್ಯೇಕವಾದ ಸಂಭಾಷಣೆಗಳನ್ನು ಜರುಗಿಸಿ ಆದಿಜನರ ಪರಿಷತ್ತಿಗೆ ತೆರಳಿದರು. ಅಲ್ಲಿ ಆದಿಜನರಿಗೆ ನೀವು ಹರಿಜನ, ಹರಜನ ಅಥವಾ ಬೇಕಾದ ಜನರೆಂದು ಹೇಳಿಕೊಳ್ಳಿರೆಂತಲೂ ಮದ್ಯಪಾನ, ಸತ್ತ ಪ್ರಾಣಿಗಳ ಮತ್ತು ಗೋಮಾಂಸ ಭಕ್ಷಣ ತ್ಯಜಿಸಿ ಶುಚಿಯಾಗಿ ನಡೆಯಿರೆಂತಲೂ ಉಪದೇಶ ಮಾಡಿದರು.

ಆ ಒಳಿಕ ಸಾರ್ವಜನಿಕ ಸಭೆಗೆ ಆಗಮಿಸಿದರು. ಸಭೆಯಲ್ಲಿ ೧೫-೧೬ ಸಾವಿರದವರೆಗೆ ಜನರು ಸೇರಿದ್ದರು. ಸರಿಯಾದ ಏರ್ಪಾಟು ಇಲ್ಲದಿದ್ದುದರಿಂದ ವಿಶೇಷ ಗಲಾಟೆಯಾಯಿತು. ಮುನಸಿಪಾಲಿಟಿ, ಲೋಕಲ್‌ಬೋರ್ಡ, ದೇವಾಂಗಸಮಾಜ, ಆದಿಜನ ಸಂಘ, ಪುರ ಜನರ ವಿಜ್ಞಾಪನಾ ಪತ್ರಿಕೆಗಳು ಅರ್ಪಿಸಲ್ಪಟ್ಟವು. ಇವುಗಳನ್ನು ಸಭೆಯಲ್ಲಿ ಓದಿದ್ದರಿಂದ ಸುಮ್ಮನೆ ಕಾಲ ಕಳೆದಂತಾಯಿತಲ್ಲದೆ ಗಲಾಟೆಗೂ ಅವಕಾಶವಾಯಿತು.

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಹೇಳಿದುದಲ್ಲದೆ ನೀವು ಆ ಜನರಿಗೆ ಹರಿಜನರೆನ್ನಿರಿ, ಹರಜನರೆನ್ನಿರಿ ಅಥವಾ ಅಲ್ಲಾ ಜನರೆನ್ನಿರಿ, ಯಾವ ಹೆಸರನ್ನಿಟ್ಟರೂ ಅಭ್ಯಂತರವಿಲ್ಲವೆಂದು ಹೇಳಿದರು. ಅನಂತರ ಲಿಲಾವಿನ ಕೆಲಸ ಪ್ರಾರಂಭವಾಯಿತು. ವಿಶೇಷ ಗಲಾಟೆಯಾದ ಕಾರಣ ಅದನ್ನು ನಿಲ್ಲಿಸಿ ಗಾಂಧೀಜಿಯವರು ಸಾಯಂಕಾಲದ ಪ್ರಾರ್ಥನೆಗೆ ತೆರಳಿದರು

ಪ್ರಯಾಣ.

ಗುರುವಾರ ಸಾಯಂಕಾಲದ ಪ್ರಾರ್ಥನೆಯನ್ನು ಪೂರೈಸಿಕೊಂಡು "ಸ್ಪೆಶಲ್ ಟ್ರೇನಿನಲ್ಲಿ" ರಾತ್ರಿ ೮ ಗಂಟೆಗೆ ವಿಜಾಪುರದಿಂದ ಹೈದರಾಬಾದಿಗೆ ಪ್ರಯಾಣ ಮಾಡಲು ಸ್ಟೇಶನ್ನಿಗೆ ಬಂದರು. ಈ ಕರ್ನಾಟಕದ ತಮ್ಮ ಸಂಚಾರವು ಸಮಾಧಾನಕರವಾಗಿ ನೆರವೇರಿತೆಂದು ಗಾಂಧೀಜಿಯವರು ಶ್ರೀಮಾನ್ ಹಳಕಟ್ಟಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಅನಂತರ ಗಾಡಿಯು ಹೊರಟಿತು. ಜಯ ಗಾಂಧೀ ಮಹಾರಾಜಕೀ ಜಯ ಎಂಬ ಜಯ ಧ್ವನಿಯಾಗುತ್ತಿರುವಾಗ ಗಾಂಧೀಜಿಯವರ ಗಾಡಿಯು ಸ್ಟೇಶನ್ನಿನಿಂದ ಮುಂದೆ ಸಾಗಿತು. ಕನ್ನಡ ನಾಡು ಈ ಪ್ರಕಾರ ಗಾಂಧೀಜಿಯವರನ್ನು ಸತ್ಕರಿಸಿ ಕಳುಹಿಸಿಕೊಟ್ಟಿತು.

ಕರ್ನಾಟಕದಲ್ಲಿ ಆದಿಜನ ಸೇವಾನಿಧಿಗೆ ಅರ್ಪಿಸಲ್ಪಟ್ಟ ಒಟ್ಟು ನಿಧಿ.

	ರೂಪಾಯಿ
ಮಂಗಳೂರು ಜಿಲ್ಲೆ	೯೦೯೬
ಕಾರವಾರ ಜಿಲ್ಲೆ	೨೯೧೦
ಧಾರವಾಡ ಜಿಲ್ಲೆ	೧೦೯೯೦
ಬಳ್ಳಾರಿ ಜಿಲ್ಲೆ	೩೧೪೬
ಸೊಂಡೂರು ಸಂಸ್ಥಾನ	೪೫೦೦
ಬೆಳಗಾವ ಜಿಲ್ಲೆ	೧೨೪೦೯
ವಿಜಾಪುರ ಜಿಲ್ಲೆ	೧೪೪೭೨
ಒಟ್ಟು	೪೯೩೪೬

ಜಗದ್ಗುರುಗಳ ಮತ್ತು ಜಗದ್ವಂದ್ಯರ ಸಂಭಾಷಣೆ.

ಮಹಾತ್ಮಾ ಗಾಂಧಿಯವರು ತಾ. ೧ ನೆಯ ದಿವಸ ಪೂನೇ ರಿಗೆ ಆಗಮಿಸಿದನಂತರ ಮೊದಲು **ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರ** ಸಂಗಡ ಸಂಭಾಷಿಸಲು ಮಠಕ್ಕೆ ದಯಮಾಡಿಸಿದರು. ಅಲ್ಲಿ ಜಗದ್ಗುರುಗಳಿಗೂ ಜಗದ್ವಂದ್ಯರಾದ ಮಹಾತ್ಮರಿಗೂ ಕುಳಿತುಕೊಳ್ಳಲು ಬೇರೆ ಬೇರೆ ಪೀಠಗಳು ಏರ್ಪಡಿಸಲ್ಪಟ್ಟಿದ್ದವು.

ಉಭಯ ವಿಭೂತಿಗಳೂ ತಮ್ಮ ತಮ್ಮ ಪೀಠಗಳಲ್ಲಿ ಕುಳಿತ ನಂತರ ಗಾಂಧೀಜಿಯವರು ಮೊದಲು ತಾವು ಬರೆಯಿಸಿ ಕಳುಹಿಸಿದ್ದ ಸಂಗತಿಗಳನ್ನು ಓದಿದ್ದೇನೆಂದು ಹೇಳಿದರು. ಅನಂತರ ಜಗದ್ಗುರುಗಳು ತಾವು ಪೂರ್ವಾಶ್ರಮದಲ್ಲಿ ಕಾಶಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲು ಕೂಡಾ ತಮ್ಮಲ್ಲಿದ್ದ ಅಪಿಜನರ ಸಂಬಂಧವಾದ ಸಹಾನುಭೂತಿಯ ವಿಚಾರಗಳನ್ನು ವ್ಯಕ್ತಗೊಳಿಸಿ ನೀವು ಮಾಡುತ್ತಿರುವ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಅತ್ಯಂತ ಮಹತ್ವವಾದುದೆಂದೂ ಗುರುಪೀಠಗಳು ಮಾಡಬೇಕಾಗಿರುವ ಈ ಧರ್ಮ ಕಾರ್ಯವನ್ನೇ ತಾವು ಮಾಡುತ್ತಿರುವುದರಿಂದ ಈ ಕಾರ್ಯದಲ್ಲಿ ನಾವು ತುಂಬಾ ಸಹಾನುಭೂತಿಯುಳ್ಳವರಾಗಿದ್ದೇವೆಂದೂ ಇಷ್ಟೇ ಅಲ್ಲ; ನಮ್ಮ ಸಂಚಾರದಲ್ಲಿ ಈ ಕಾರ್ಯವನ್ನು ನಾವು ಮಾಡುತ್ತಲೇ ಬಂದಿದ್ದೇವೆಂದೂ ಗಾಂಧೀಜಿಯವರಿಗೆ ತಿಳಿಸಲು ಅವರು ತುಂಬಾ ಸಂತೋಷಪಟ್ಟರು.

ಆ ಮೇಲೆ ಜಗದ್ಗುರುಗಳು ಎರಡು ಸಂಗತಿಗಳನ್ನು ಗಾಂಧೀಜಿಯವರಿಗೆ ತಿಳಿಸಿದರು— (೧) ಅಪಿಜನರು ಮದ್ಯವಾನ ಬಿಡುವಂತೆಯೂ ಸ್ವಚ್ಛವಾಗಿರುವಂತೆಯೂ ತಾವು ತಿಳಿಸಿ ಅವರು ಸದಾಚಾರಿಗಳಾಗುವಂತೆ ಮಾಡಿದರೆ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಜಾಗ್ರತೆ ಫಲಕಾರಿಯಾಗುತ್ತದೆ. (೨) ಅಸ್ಪೃಶ್ಯರಲ್ಲಿ ಬಹುಜನರು ಶಿವಭಕ್ತರಿರುವುದರಿಂದ ಅವರು ಹರಿಜನ ಎಂದು ಹೇಳಿಸಿಕೊಳ್ಳಲು ಇಷ್ಟ ಪಡದೆ ತಮಗೆ ಅಪಿಜನರೆಂದು ಹೇಳಬೇಕಾಗಿ ನಮಗೆ ಈ ದಿನ ಇಲ್ಲಿ ವಿಜ್ಞಾಪಿಸಿಕೊಳ್ಳುವುದಾಗಿ ನಮಗೆ ಅರಿಕೆ ಮಾಡಿಕೊಂಡಿದ್ದಾರೆ. ಅಪಿಜನ ಎಂಬ ಹೆಸರೇ ನಮಗೂ ವಿಹಿತವೆಂದು ತೋರುತ್ತದೆ.

ಅನಂತರ ಅಪಿಜನ ಸೇವಾ ನಿಧಿಗೆ ಜಗದ್ಗುರುಗಳು ೧೦೧ ರೂ. ಗಳ ಸಹಾಯ ಮಾಡಿದುದಲ್ಲದೆ ಹಾನೇರಿಯಲ್ಲಿ ಏರ್ಪಡುವ ಅಪಿಜನರ ರಾತ್ರೆಯ ಶಾಲೆಯ ಕಟ್ಟಡವನ್ನು ಈ ಸಂಭಾಷಣೆಯ ಸ್ಮರಣಾರ್ಥವಾಗಿ ಜಗದ್ಗುರು ಪೀಠದಿಂದಲೇ ಕಟ್ಟಿಸಿಕೊಡಲ್ಪಡುವುದೆಂತಲೂ ಗಾಂಧೀಜಿಯವರಿಗೆ ತಿಳಿಸಿದ್ದಾಯಿತು. ಈ ಸಂಭಾಷಣೆಯು ಹಿಂದಿ ಭಾಷೆಯಲ್ಲಿ ಜರುಗಿತು. ಈ ಮಹಾ ಗುರುಪೀಠದವರು ಈ ಪ್ರಕಾರ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿದ್ದುದು ತಿಳಿದು ಗಾಂಧೀಜಿಯವರಿಗೆ ತುಂಬಾ ಸಂತೋಷವಾಗಿ ತಮ್ಮ ಸಮಾಧಾನವನ್ನು ವ್ಯಕ್ತಗೊಳಿಸಿದರು.

ಬರವಣಿಗೆಯಲ್ಲಿದ್ದುದೇನು?

ಗಾಂಧೀಜಿಯವರು ಜಗದ್ಗುರುಗಳ ಹತ್ತಿರ ಬಂದೊಡನೆ ತಮ್ಮ ಕಡೆಯಿಂದ ಬಂದ ಬರವಣಿಗೆಯನ್ನು ಓದಿದ್ದೇನೆಂದು ಹೇಳಿದರಷ್ಟೆ. ಆ ಬರವಣಿಗೆಯಲ್ಲಿ ಈ ಕಳಗಿನ ಸಂಗತಿಗಳಿದ್ದವೆಂದು ತಿಳಿದಿದೆ— ವೀರಶೈವ ಮತವು ಜನ್ಮಕ್ಕೆ ಮಹತ್ವ ಕೊಡದೆ ಶಿವಭಕ್ತಿ-ಸದ್ಗುಣ, ಸದಾಚಾರಗಳಿಗೇನೇ ಮಹತ್ವವನ್ನು ಕೊಡುತ್ತದೆಂತಲೂ ೧೨ ನೆಯ ಶತಮಾನದಲ್ಲಿ ಶ್ರೀ ಬಸವಾದಿ ಪ್ರಮುಥರು ಈ ತತ್ವದಂತೆಯೇ ವೀರಶೈವ ಮತವನ್ನು ಪ್ರಸಾರಗೊಳಿಸಿದರೆಂತಲೂ ಶಿವಭಕ್ತರಾದ ಹರಳಯ್ಯ ಮಧುವಯ್ಯಗಳ ಶರೀರ ಸಂಬಂಧವನ್ನು ಕೂಡಾ ಜರುಗಿದ್ದಿತೆಂತಲೂ ಈ ಜಗದ್ಗುರು ಪೀಠವು ಅಂದಿನಿಂದಲೂ ವೀರಶೈವ ಸಮಾಜದೇಳ್ಗೆಗೆ ಕಾಲ ಕಾಲಕ್ಕೆ ಆವಶ್ಯಕವಾದ ಅನೇಕ ಏರ್ಪಾಟುಗಳನ್ನು ಮಾಡುತ್ತಾ ಬಂದಿದೆಯೆಂತಲೂ ಈ ಪೀಠದ ನೂರಾರು ಶಾಖೋಪಶಾಖೆಗಳ ಮಠಗಳು ದೇಶ ಮಧ್ಯದಲ್ಲಿವೆಯೆಂತಲೂ ಈ ಪೀಠಕ್ಕೆ ಈಗಿನ ಮಹಾಸ್ವಾಮಿಗಳು ಬಂದನಂತರ ೩೦ ವರ್ಷಗಳಲ್ಲಿ ಜನಾಂಗದ ವಿದ್ಯಾಭಿವೃದ್ಧಿಗಾಗಿ ಲಕ್ಷಾಂತರ ರೂ. ಗಳು ಪೀಠದಿಂದ ವೆಚ್ಚವಾಗಿವೆಯೆಂತಲೂ ತಿಳಿಸಲ್ಪಟ್ಟಿದ್ದಿತಾಗಿ ತಿಳಿದಿದೆ.

ವೀರಶೈವ ಮಠಕ್ಕೆ ಮಹಾತ್ಮಾಜಿಯವರೆ ಆಗಮನ.

(ತಾ. ೯-೩-೩೪ನೆಯ **ಹರಿಜನ ಪತ್ರಿಕೆಯಲ್ಲಿ ಮಿ. ಜೆ. ಡಿ. ಎಂಬುವವರು ಹೀಗೆ ಬರೆದಿದ್ದಾರೆ.**)

"ಗಾಂಧೀಜಿಯವರು ವೀರಶೈವ ಅಥವಾ ಲಿಂಗಾಯತ ಜಗದ್ಗುರುಗಳಾದ ಮಹಾಸ್ವಾಮಿಗಳವರ ಸಂಗಡ ಮಾತುಕಥೆಯಾಡಿದರು. ಮಹಾಸ್ವಾಮಿಗಳವರು ೧೩ ವರುಷಗಳವರೆಗೆ ಕಾಶಿಯಲ್ಲಿ ಅಭ್ಯಾಸವಾಡಿರುವುದರಿಂದ ಒಳ್ಳೇ ವಿದ್ವಾಂಸರಿರುವರು. ಅಸ್ಪೃಶ್ಯತೆಗೆ ಶಾಸ್ತ್ರಗಳಲ್ಲಿ ಆಧಾರವಿಲ್ಲವೆಂಬ ಗಾಂಧೀಜಿಯವರ ಅಭಿಪ್ರಾಯಕ್ಕೆ ಇವರೂ ಅನುಕೂಲ ಅಭಿಪ್ರಾಯದವರಾಗಿದ್ದಾರೆ. ಮತ್ತು ಇವರು ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಯಲ್ಲಿ ಅನೇಕ ಮಹತ್ವದ ಕಾರ್ಯಗಳನ್ನು ಮಾಡಿವ್ವಾರೆ.

ಹರಿಜನರೋ? ಹರಜನರೊ?

"ಜಗದ್ಗುರುಗಳು ಗಾಂಧೀಜಿಯವರಿಗೆ ಹರಿಜನರು ಹಿಂದು ಸಂಸ್ಕೃತಿಗೆ ಆವಶ್ಯವಾವಂಥವುಗಳನ್ನು ಪಾಲಿಸುವವರಾಗಲು, ಮುಖ್ಯವಾಗಿ ಕುಡಿಯುವದನ್ನು ಬಿಟ್ಟು ಬಿಡಲು, ವಿಶೇಷ ಒತ್ತಿ ಹೇಳಿರೆಂದು ತಿಳಿಸಿದರು. ಇದೆಲ್ಲದೆ ನಿರಂಜನ ಮಹಾಸ್ವಾಮಿಗಳು ವೀರಶೈವ ಮತಾನುಯಾಯಿಗಳಾದ ಅಸ್ಪೃಶ್ಯರು ಹರಿಜನರೆಂದು ಕರೆಯಿಸಿಕೊಳ್ಳಲು ಇಷ್ಟವುಳ್ಳವರಾಗಿಲ್ಲವೆಂದು ಸೌಮ್ಯವಾಗಿ ತಿಳಿಸಿದರು. ಗಾಂಧೀಜಿಯವರು ಪ್ರತ್ಯುತ್ತರ ಹೀಗೆ ಹೇಳಿದರು— "ಹರಿಜನ ಅಥವಾ ಹರಜನನೆಂಬುದರಲ್ಲಿ ನನಗೆ ಭಿನ್ನ ಭೇದ ತೋರುವುದಿಲ್ಲ. ಕಡೆಗೆ ನೋಡಲಾಗಿ ಹರಿ, ಮತ್ತು ಹರ ಎಂಬ ಭಿನ್ನ ಹೆಸರುಗಳು ಒಬ್ಬನೇ ಪರಮಾತ್ಮನ ಹೆಸರುಗಳಾಗಿವೆ." ಹರಿಜನ ಎಂಬುವರ ಅರ್ಥವು ಹರಿ ಅಥವಾ ವಿಷ್ಣುವಿನಿಂದ ಉಪಕೃತರು ಎಂದಾಗುತ್ತಿರುವುದರಿಂದಲೂ ಲಿಂಗಾಯತರು ಶಿವಭಕ್ತರಾದುದರಿಂದಲೂ ಅವರಿಗೆ ಅದು ಅಷ್ಟೊಂದು ರುಚಿಸಲಿಲ್ಲ. ಆದರೆ ಅವರು ನಿಜವಾಗಿಯೂ ದೇವನಿಂದ ಉಪಕೃತರಾದವರು. ಯಾಕಂದರೆ ಯಾರನ್ನು ಮನುಷ್ಯರು ತಿರಸ್ಕರಿಸುವರೊ ಮತ್ತು ಅಲಕ್ಷಿಸುವರೊ ಅವರನ್ನು ದೇವರು ಕಾಯುತ್ತಾನೆ."

ಶಾ. ಶ. ೧೮೫೫ ನೆಯ ಫಾಲ್ಗುಣ ಬ ೧೨ ಸೋಮವಾರ.

ಗಾಂಧೀಜಿಯವರ ಅಭಿಪ್ರಾಯ.

ಗಾಂಧೀಜಿಯವರ ಸುಖಾಗಮನವು ಅಸ್ಪೃಶ್ಯತಾ ನಿವಾರಣೆಗೆ ತುಂಬಾ ಸಹಾಯವಾಯಿತು ಜನಜಾಗೃತಿಯೂ ವಿಶೇಷವಾಯಿತು. ಕರ್ನಾಟಕವು ತನ್ನ ಧನತೆಗೆ ತಕ್ಕಂತೆಯೇ ಅದಿಜನ ಸೇವಾನಿಧಿಗೆ ಧನವನ್ನೂ ತೃಪ್ತಿಕರವಾಗಿಯೇ ಸಲ್ಲಿಸಿತು. ಈ ಪ್ರಕಾರ ಸಕಲ ಸಂಗತಿಗಳಲ್ಲಿಯೂ ಗಾಂಧೀಜಿಯವರ ಈ ಸಂಚಾರವು ಶ್ರೇಯಸ್ಕರವಾಗಿಯೇ ಪರಿಣಮಿಸಿತೆಂದು ಧಾರಾಳವಾಗಿ ಹೇಳಬಹುದು.

ಗಾಂಧೀಜಿಯವರು ಹಾವೇರಿಗೆ ಆಗಮಿಸಿದೊಡನೆ ಅವರಿಗೆ ಒಂದು ಹೊಸ ಸಂಗತಿಯು ತಿಳಿಯಿತು. ಅಲ್ಲಿನ ಅದಿಜನರು ಗಾಂಧೀಜಿಯವರಿಗೆ ಅರ್ಪಿಸಿದ ವಿಜ್ಞಾಪನಾ ಪತ್ರಿಕೆಯಲ್ಲಿ ಈ ಪ್ರಕಾರ ಇದ್ದಿತು. "ನಾವು ಶಿವಭಕ್ತರು. ಆದಕಾರಣ ನಮಗೆ ಹರಿಜನರೆಂದು ಹೇಳುವುದು ಸಮಂಜಸವಾಗಿಲ್ಲ. ನಮಗೆ ಶಿವಜನರೆಂದು ಹೇಳಬೇಕಾಗಿಯೂ ನಾವು ಕೇಳಿಕೊಳ್ಳುವುದಿಲ್ಲ. ಏಕೆಂದರೆ ನಮ್ಮಲ್ಲಿ ಅನೇಕರು ಹರಿಪೂಜಕರೂ ಇರಬಹುದು. ಅವರ ಮನಸ್ಸನ್ನು ನೋಯಿಸುವುದು ನಮಗೆ ಇಷ್ಟವಿಲ್ಲ. ಆದಕಾರಣ ನಮಗೆ ಆದಿಜನರೆಂದು ಹೇಳಬೇಕು"

ಈ ಆದಿಜನರು ತಾವು ಗಾಂಧೀಜಿಯವರಿಗೆ ತಿಳಿಸಿದ ಈ ಸಂಗತಿಯನ್ನು ಅಲ್ಲಿದ್ದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳಿಗೂ ಅರಿಕೆ ಮಾಡಿಕೊಂಡು ಗಾಂಧೀಜಿಯವರಿಗೆ ಈ ಸಂಗತಿಯನ್ನು ತಿಳಿಸಬೇಕಾಗಿ ಪ್ರಾರ್ಥಿಸಿಕೊಂಡಿದ್ದರು. ಆ ಪ್ರಕಾರ ಶ್ರೀ ಜಗದ್ಗುರುಗಳು ಗಾಂಧೀಜಿಯವರಿಗೆ ತಮ್ಮ ಸಂಭಾಷಣೆಯಲ್ಲಿ ಈ ಸಂಗತಿಯನ್ನು ತಿಳಿಸಿದರು.

ಅನಂತರ ಗಾಂಧೀಜಿಯವರು ಬ್ಯಾಡಗಿ ಮತ್ತು ಹಾನೇರಿಗಳ ಸಾರ್ವಜನಿಕ ಸಭೆಗಳಲ್ಲಿ ಈ ಪ್ರಕಾರ ಹೇಳಿದರು. "ಹರಿ ಮತ್ತು ಹರ ಈ ಹೆಸರುಗಳಲ್ಲಿ ನನಗೇನೂ ವ್ಯತ್ಯಾಸ ತೋರುವುದಿಲ್ಲ. ಒಬ್ಬ ಪರಮಾತ್ಮನಿಗೇನೇ ಈ ಪ್ರಕಾರ ಬೇರೆ ಬೇರೆ ಹೆಸರುಗಳಿವೆ. ಆದ ಕಾರಣ ಯಾವ ಹೆಸರನ್ನಾದರೂ ಹೇಳಬಹುದು."

ಸುದ್ದಿಗಾರರ ತಪ್ಪು ತಿಳುವಳಿಕೆ

ಗಾಂಧೀಜಿಯವರು ದಾವಣಗೆರೆಗೆ ದಯಮಾಡಿಸಲು ಅಲ್ಲಿಯ ವಿಜ್ಞಾಪನಾ ಪತ್ರಿಕೆಯಲ್ಲಿಯೂ ಅದಿಜನ ಎಂಬ ಹೆಸರಿದ್ದಿತು ಆಗ ಗಾಂಧೀಜಿಯವರು ಹೀಗೆ ಹೇಳಿದರು "ಆದಿಜನ ಎಂಬ ಹೆಸರು ಅರ್ಥ ಪೂರ್ಣವಾದುದಲ್ಲ ಹರಿಜನ ಎಂಬುದು ಅರ್ಥ ಪೂರ್ಣವಾದುದಾಗಿದೆ. ಏಕೆಂದರೆ, ಹರಿಜನ ಎಂದರೆ ದೇವರ ಜನರು ಎಂಬರ್ಥ. ಯಾರನ್ನು ಜನರು ಬಲಾತ್ಕಾರಗಳಿಂದ ತಪ್ಪಿಬಿಟ್ಟರು ತ್ತಾರೆಯೋ ಅವರನ್ನು ದೇವರೇ ಕಾಯುತ್ತಾನೆ. ಆದಕಾರಣ ಇವರಿಗೆ ಹರಿಜನ ಎಂಬುದೇ ವಿಹಿತ."

ಸಂಯುಕ್ತ ಕರ್ನಾಟಕ ಪತ್ರಿಕೆಯ ಸುದ್ದಿಗಾರರು ಈ ಸಂಗತಿಯನ್ನು ತಾ. ೭ನೆಯ ಸಂಚಿಕೆಯಲ್ಲಿ ವಿವರಿಸುವಾಗ ಆದರಲ್ಲಿ ಈ ಪ್ರಕಾರ ತಿಳಿಸಿದ್ದಾರೆ— "ಆದಿಜನ ಶಬ್ದವನ್ನು ಬಳಿಸಬೇಕೆಂಬುದಕ್ಕೆ ಗಾಂಧಿಯವರು ಜೊಕ್ಯವಾಗಿ ತಿಳಿಸಿದರು. ಆಗ ಈ ವಾದದ ಮೂಲ ಪ್ರವರ್ತಕರಾದ ಶ್ರೀ. ಹರ್ಡೇಕರ ಮಂಜಪ್ಪನವರೂ ಅಲ್ಲಿದ್ದರು." ಹೀಗೆ ಬರೆದುದರ ಉದ್ದೇಶವೇನು? ಅದೇನು ವಿವಾದದ ಸಭೆಯಾಗಿದ್ದಿತೆ? ನಾವು ಆಗ ಅದಕ್ಕೆ ಉತ್ತರಕೊಡಬೇಕಾಗಿತ್ತೆಂದು ಈ ಸುದ್ದಿಗಾರರು ತಿಳಿದಿರುವರೇ? ಅಥವಾ ನಾವು ಗಾಂಧೀಜಿಯವರ ಅಭಿಪ್ರಾಯಕ್ಕೆ ಒಪ್ಪಿದೆವೆಂದು ಜನರು ತಿಳಿದುಕೊಳ್ಳಲೆಂಬುದು ಇವರ ಇಂಗಿತವೆ? ಇಂತಹ ತಪ್ಪು ತಿಳುವಳಿಕೆಯುಳ್ಳವರಾಗಿ ಜನರಲ್ಲಿಯೂ ತಪ್ಪು ತಿಳುವಳಿಕೆಯನ್ನುಂಟುಮಾಡುವುದು ವಿಹಿತವಲ್ಲ.

ಹರಿಜನ ಮತ್ತು ಆದಿಜನ.

ಅನಂತರ ಗಾಂಧೀಜಿಯವರಿಗೆ ಅವರು ಹೊಸಪೇಟೆಯಿಂದ ಬರುವಾಗ ಕೊಪ್ಪಳ ಜಿಲ್ಲೆಯವರು ಅರ್ಪಿಸಿದ ವಿಜ್ಞಾಪನಾ ಪತ್ರಿಕೆಯಲ್ಲಿಯೂ ಸವದತ್ತಿ ತಾಲೂಕಿನವರು ಮತ್ತು ಬೈಲಹೊಂಗಲ ಮುನಸಿಪಾಲಿಟಿಯವರು ಅರ್ಪಿಸಿದ ವಿಜ್ಞಾಪನಾ ಪತ್ರಿಕೆಗಳಲ್ಲಿಯೂ ಆದಿಜನ ಎಂಬ ಹೆಸರಿದ್ದುದು ನೋಡಿ ಈ ಹೆಸರು ಅನೇಕ ಕಡೆ ಬಳಕೆಯಲ್ಲಿ ಬಂದಿದೆಯೆಂಬುದು ಅವರಿಗೆ ಗೊತ್ತಾಗಿರಬೇಕು. ಆದ ಕಾರಣ ಬೈಲಹೊಂಗಲದ ಸಾರ್ವಜನಿಕ ಸಭೆಯಲ್ಲಿ ಆದಿಜನರನ್ನುದ್ದೇಶಿಸಿ ಹೀಗೆ ಹೇಳಿದರು—

"ನೀವು ಹರಿಜನ ಎಂದು ಹೇಳಿಕೊಳ್ಳಿರಿ ಅಥವಾ ಆದಿಜನ ಎಂದು ಹೇಳಿಕೊಳ್ಳಿರಿ. ಯಾವ ಹೆಸರನ್ನು ನೀವು ಇಟ್ಟುಕೊಂಡರೂ ನೀವು ಮದ್ಯಪಾನವನ್ನು ಬಿಡಬೇಕು. ಸತ್ತ ಪ್ರಾಣಿಗಳ ಮತ್ತು ಆಕಳ ಮಾಂಸವನ್ನು ಸೇವಿಸಬಾರದು."

ಈ ಮುಂಚೆ ಹಾವೇರಿಯಲ್ಲಿ ಗೊತ್ತಾದಂತೆ ಬೆಳಗಾವಿಯಲ್ಲಿ ತಾ ೬ನೆಯ ಸಾಯಂಕಾಲ ಗಾಂಧೀಜಿಯವರ ಸಂಗಡ ಈ ವಿಷಯವಾಗಿ ನಡೆದ ಸಂಭಾಷಣೆಯಲ್ಲಿಯು ಕೂಡಾ ಆದಿಜನ ಎಂದು ಹೇಳಿದರೆ ನನ್ನ ಅಡ್ಡಿ ಇಲ್ಲವೆಂದೇ ತಿಳಿಸಿದರು. ಈ ಸಂಭಾಷಣೆಯ ಸಂಗತಿಗಳನ್ನು ಮುಂದೆ ವಿವರಿಸುವೆವು.

ಹರಿಜನ ಮತ್ತು ಅಲ್ಲಾಜನ.

ಗಾಂಧೀಜಿಯವರು ಈ ವಿಷಯವನ್ನು ಮತ್ತೆ ವಿಜಾಪುರದಲ್ಲಿ ಸೇರಿದ ಆದಿಜನ ಸಭೆಯಲ್ಲಿಯೂ ಸಾರ್ವಜನಿಕ ಸಭೆಯಲ್ಲಿಯೂ ಪ್ರಸ್ತಾಪಿಸಿದರು. ಕರ್ನಾಟಕದ ಒಬ್ಬ ಪ್ರಸಿದ್ಧ ಮುಂದಾಳುಗಳು ಗಾಂಧೀಜಿಯವರಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಆದಿಜನ ಅಥವಾ ದೇವಜನ ಎಂಬ ಹೆಸರನ್ನಿಡಿರೆಂದು ತಿಳಿಸಿದ್ದರೆಂದು ಗೊತ್ತಾಗಿದೆ. ಅದುದರಿಂದಲೇ ಗಾಂಧೀಜಿಯವರು ಪುನಃ ಅಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕಾಯಿತು ಸಾರ್ವಜನಿಕ ಸಭೆಯಲ್ಲಿ ಈ ಪ್ರಕಾರ ಹೇಳಿದರು.

"ಹರಿಜನರೆನ್ನಿರಿ, ಹರಜನರೆನ್ನಿರಿ, ಅಲ್ಲಾಜನರೆನ್ನಿರಿ, ಯಾವ ಹೆಸರನ್ನಾದರೂ ಹೇಳಿರಿ," ಗಾಂಧೀಜಿಯವರ ಈ ಎಲ್ಲ ಅಭಿಪ್ರಾಯಗಳ ಮೇಲಿಂದ ಹೆಸರಿನ ವಿಷಯದಲ್ಲಿ ಇಂಥಾದ್ದೇ ಇರಬೇಕೆಂಬ ಆಗ್ರಹವೇನೂ ಅವರದು ಇಲ್ಲವೇ ಇಲ್ಲವೆಂದು ಸ್ಪಷ್ಟವಾಗುವುದಿಲ್ಲವೆ? ಹೀಗೆ ಅವರವರ ಇಷ್ಟದಂತೆ ಹೆಸರನ್ನಿಡಲು ಅವಕಾಶವುಂಟಾಗಿರುವುದು ವಿಕಮುಖವಾಗಿ ಕಾರ್ಯ ನಡೆಯಲು ಎಷ್ಟೋ ಕೊರತೆಯಲ್ಲವೆ? ಗಾಂಧೀಜಿಯವರು ಹರಿಜನ ಎಂಬ ಹೆಸರನ್ನೇ ಉಪಯೋಗಿಸುವುದರಿಂದ ಬಹು ಜನರು ಅದೇ ಪ್ರಕಾರ ಹೇಳುವುದು ಮತ್ತು ಆ ಸಂಘಕ್ಕು ಕೂಡಾ ಅದೇ ಹೆಸರಿರುವುದು ಸ್ವಾಭಾವಿಕವಷ್ಟೆ? ಈ ಎಲ್ಲ ಸಂಗತಿಗಳನ್ನು ಕುರಿತು ಮುಂದಣ ಸಂಚಿಕೆಯಲ್ಲಿ ವಿವರಿಸುವೆವು.

ಆದಿಜನ ಸೇವೆಯ ಸುಸಮಯ.

ಸಾವಿರಾರು ವರುಷಗಳವರೆಗೆ ತಲತಲಾಂತರಗಳಿಂದ ಕೊಳೆಯುತ್ತಿರುವ ಈ ಅಸ್ಪೃಶ್ಯತೆಯ ಕೊಳೆಯನ್ನು ತೊಳೆದುಹಾಕಲು ಅನೇಕ ವೀರಾದಿ ವೀರರು ಶ್ರಮಪಟ್ಟಿರುವರಷ್ಟೆ. ಆದರೆ ಈ ಮಾಯೆಯು ಮಾತೆಯ ನೇಪವನ್ನು ಧರಿಸಿದ ರಕ್ಷಸಿಯಂತೆ ಧರ್ಮದ ನೇಪವನ್ನು ಹಾಕಿಕೊಂಡು ಪುನಃ ಪುನಃ ಹಿಂದುಗಳನ್ನು ಮೂರ್ಛಿತಗೊಳಿಸುತ್ತಲಿದ್ದಾಳೆ.

ಅಸ್ಪೃಶ್ಯತಾ ವಿಷಯಕವಾದ ವಿವಾದವೂ, ಪರಿಶೀಲನವೂ ಸದ್ಯದ ಕಾಲದಲ್ಲಿ ಸವಿಸ್ತಾರವಾಗಿ ಮಾಡಲ್ಪಟ್ಟಿದೆ. ಇದು ತರ್ಕದ ಒರೆಗೆ ಹಚ್ಚಿಲ್ಲ. ವ್ಯವಹಾರದ ಮಾತಿಗೆ ನಿಂತಿಲ್ಲ. ನೀತಿ ನೆಲೆಯಂತೂ ಮೊದಲೇ ಇಲ್ಲ. ಅಂದಮೇಲೆ ಧರ್ಮದ ಮರ್ಮವಾಗಲಿ, ಆಧ್ಯಾತ್ಮದ ಅನುಭವವಾಗಲಿ ಎಲ್ಲಿಂದಿರಬೇಕು? ಹಾಗಾಗಿದ್ದರೆ ಅಸ್ಪೃಶ್ಯತೆಯೆಂದರೆ ಏನಿರಬೇಕು? ಹೇಗೆ ಉದ್ಭವಿಸಿರಬೇಕು?

ಇದೊಂದು ಹಿಂದಿನವರ ರಾಜಕೀಯ ಕುಯುಕ್ತಿಯೆಂದು ಆದಿಜನ ಮುಂದಾಳುಗಳನ್ನುವದು ತಪ್ಪಲ್ಲ. ಇದರ ಸುಳುವನ್ನು ಕಂಡುಹಿಡಿಯುವದು ಸದ್ಯಕ್ಕೆ ಅಸಾಧ್ಯವಾದುದೇನೂ ಅಲ್ಲ. ಸಾವಿರಾರು ವರುಷಗಳಿಂದ ಹಿಂದು ಜನರು ರಾಜಕೀಯ ಪಾರತಂತ್ರ್ಯದಲ್ಲಿ ಬಳಲುತ್ತಿರುವರೇಕೆಂಬುದನ್ನು ಸೂಕ್ಷ್ಮ ರೀತಿಯಿಂದ ಅಳವಾಗಿ ನೋಡುವ ಪ್ರತಿಯೊಬ್ಬ ಮನುಷ್ಯನಿಗೂ ಇದರ ಹೊಳಪು ಹೊಳೆಯದೆ ಇರದು. ಇದೊಂದು ಅಶಕ್ತರ ಮೇಲೆ ಶಕ್ತಿವಂತರು ಮಾಡುವ ಅನನ್ವಿತ ಬಲಾತ್ಕಾರ. ಸೋತ ಜನಾಂಗವನ್ನು ವಂಶ ಪರಂಪರಾಗತವಾಗಿ ದಾಸಾನುದಾಸರನ್ನಾಗಿ ಮಾಡಿಕೊಳ್ಳುವ ಅಸುರೀಯ ಹಿಂಸೆ. ಈ ವಿಚಿತ್ರ ಹೀನಾವಸ್ಥೆಯನ್ನು ಧರ್ಮಭೂಮಿಯೆಂದೆನಿಸುವ ಈ ಹಿಂದುಸ್ಥಾನದಲ್ಲಿ ಕಾಣಬಹುದಲ್ಲದೆ ಮತ್ತೆಲ್ಲಿ ಕಾಣಬಹುದು?

ಅಸ್ಪೃಶ್ಯತೆಯನ್ನು ನಿಜವಾಗಿ ಹೋಗಲಾಡಿಸಬೇಕಾದರೆ ಅದರ ನಿಜಸ್ವರೂಪವನ್ನು ಕಂಡುಹಿಡಿದು ಬೇರೊರಿಸಿ ಕಿತ್ತೊಗೆಯಬೇಕು. ಭಗವಾನ್ ಬುದ್ಧ ದೇವನು ಅಸ್ಪೃಶ್ಯತೆಯ ಕೈಯೊಳಗಿಂದ ಅನೇಕರನ್ನು ಬಿಡಿಸಿಕೊಂಡನೇನೊ ಸರಿ. ಆದರೆ ಅಸ್ಪೃಶ್ಯತೆಯು ಸಾಯಲಿಲ್ಲ ಬೌದ್ಧ ಧರ್ಮವು ನಿಶ್ಯಕ್ತವಾದ ಕೂಡಲೆ ಪುನಃ ಉಗ್ರ ರೂಪವನ್ನು ಧರಿಸಿ ಇಮ್ಮಡಿ ಉತ್ಸಾಹದಿಂದ ಹಿಂದು ಸ್ಥಾನವನ್ನೆಲ್ಲ ಆಕ್ರಮಿಸಿತು.

ಧರ್ಮದೀಕ್ಷೆಯಿಂದ ಹಲಕೆಲವರ ರೋಗವಾಸಿಯಾದ ಮಾತ್ರದಲ್ಲಿ ಅಸ್ಪೃಶ್ಯತೆಯೇ ನಾಮಶೇಷವಾಗುವುದೆನ್ನಲು ಬರುವಂತಿಲ್ಲ. ಹಾಗಾದರೆ ಈ ಅಸ್ಪೃಶ್ಯತಾ ದೇವಿಯು ಹೇಗೆ ತಾನೇ ಹೋಗುವಳು? ಹೇಗೆ ಹುಟ್ಟಿರುವಳೋ ಹಾಗೆಯೇ ಹೋದರೆ ನೆಟ್ಟಗೆ. ಇವಳು ಜಿತ ಜನಾಂಗದ ರಕ್ತವನ್ನು ಹೀರಿ ಕೊಬ್ಬಿರುವಳು. ಮುಗ್ಗರಿಸಿದ ಜನಾಂಗಗಳ ಸಂಸ್ಕೃತಿಯನ್ನು ಸುಲಿದು ಅಂಗಕ್ಕೆಲ್ಲ ಲೇಪಿಸಿಕೊಂಡಿರುವಳು. ಆದರೆ ಇವಳ ಮುಖದಲ್ಲಿ ಪಾತ್ರ ಶಾಲೀನತೆ, ಧಾರ್ಮಿಕ ಒನಪು ಸರ್ವಾಂಗದಲ್ಲೆಲ್ಲ; ಇವಳ ನಾಶವಾಗಬೇಕಾದರೆ ಜನಾಂಗದಲ್ಲೆಲ್ಲ ವಿಶ್ವಪ್ರೇಮವೇ ಧರ್ಮವೆಂಬುದರ ಅರಿವಾಗಬೇಕು. ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆಂಬ ಸೋಗನ್ನು ಹಾಕಿ ಆಶಿಬುರುಕ ತನದಿಂದ ಹಿಂದು ದೀನರನ್ನು ಹೊಟ್ಟೆಯೊಳಗೆ ಹಾಕಿಕೊಳ್ಳುತ್ತಿರುವ ಪಾದ್ರಿಗಳನ್ನು ಸಹ ಈ ದೇವಿಯು ಸಾವಕಾಶವಾಗಿ ಮೋಹಿಸುತ್ತಿರುವಳೆಂಬುದು ಅವರಿಗೂ ತಿಳಿಯದಾಗಿದೆ. ಆದುದರಿಂದ ಪ್ರತಿಯೊಂದು ವ್ಯಾಣಿಯ ಜೀವನ ಪ್ರವಾಹವನ್ನು ಅಡ್ಡಗಟ್ಟಿದಿರುವುದೇ ಧರ್ಮದ ಲಕ್ಷಣವೆಂಬ ಅರಿವಾಗಬೇಕು. ಅಂದರೇನೇ ಜಿತರಾಷ್ಟ್ರಗಳೆಲ್ಲ ಚೇತರಿಸಿಕೊಳ್ಳುವವು. ಪ್ರತಿಯೊಂದು ಪ್ರಾಣಿಯು ಸಂರಕ್ಷಣವಾಗಿ ಅಸ್ಪೃಶ್ಯತೆಯು ನಿರ್ಮೂಲವಾಗುವುದು.

ಇದನ್ನೇ ಮಹಾತ್ಮಾಜಿಯವರು ಸಾರುತ್ತಿರುವದು. ವಿಶ್ವ ಪ್ರೇಮವನ್ನು ಗಳಿಸಿರಿ. ವಿಶ್ವಪ್ರೇಮದಿಂದಲೇ ಅಸ್ಪೃಶ್ಯತೆಯ ನಿರ್ಮೂಲವಾಗುವದು. ಅಸ್ಪೃಶ್ಯತೆಯ ನಿರ್ವಂಶವೇ ಸರ್ವ ಸಮಾನತೆಯ ಸುಪ್ರಭಾತವು. ಎಂದು ಹಲವು ರೀತಿಯಿಂದ ಅವರು ಬೋಧಿಸುತ್ತಿಲ್ಲವೆ? ಈ ಪಾಪದ ನಿವಾರಣೆಯಾದರೆ ಜಗತ್ತಿನಲ್ಲಿ ಅದೊಂದು ಮಾನವ ಬಂಧುತ್ವದ ಕ್ರಾಂತಿಯೇ ಆಗುವುದಲ್ಲವೇ?

ಸನಾತನಿಗಳಾಗಲಿ ಸುಧಾರಕರಾಗಲಿ ಸದ್ಯದ ಸುಸಮಯವನ್ನು ವ್ಯರ್ಥಮಾಡಿಕೊಳ್ಳಬಾರದು. ಸನಾತನ ಧರ್ಮಕ್ಕೆ ಈ ಅಸ್ಪೃಶ್ಯತಾ ನಿವಾರಣೆಯೇ ತರುಣೋಪಾಯವು. ಶಿಕ್ಷಣ ಪ್ರಸಾರಣೆಯಿಂದಲೂ, ಅನ್ಯ ಧರ್ಮಗಳ ಸಂಸರ್ಗದಿಂದಲೂ ಆದಿಜನರಲ್ಲಿಯೂ ಆತ್ಮೋದ್ಧಾರದ ಅರಿವುಂಟಾಗಿದೆ. ಇನ್ನುಮೇಲೆ ಅವರನ್ನು ಅಷ್ಟೇ ಹಿಂದೂಕರಿಬೇಕೆಂದರೂ ಸಾಧ್ಯವಾಗದು. ಭಾವೀ ಸಂತತಿಯು ಕೂಡಾ ಈಗಿನವರಿಗೆ, ಎಂಥ ಹುಚ್ಚರವರು ಧರ್ಮರಕ್ಷಣೆ ಮಾಡುತ್ತೇವೆಂದು ಧರ್ಮ ನಾಶ ಮಾಡಿದರು ಎಂದು ಅಂದೀತೆಂಬುದನ್ನು ಸನಾತನಿಗಳೆಂದು ಹೇಳಿಕೊಳ್ಳುವವರು ಲಕ್ಷದಲ್ಲಿಡಲಿ.

ಇನ್ನು ಸುಧಾರಕರ ಮುಖ್ಯ ಕರ್ತವ್ಯವೆಂದರೆ ಆದಿಜನರಿಗೆ ತಾವಾರೆಂಬುವ ಕಲ್ಪನೆಯಾಗುವಂತೆ ಮಾಡಬೇಕು. ಆತ್ಮನ ಅರಿವಾಗದೆ ಮನುಷ್ಯನ ಉದ್ಧಾರವಾಗುವುದಿಲ್ಲ. ಹಣ ಕಾಸುಗಳನ್ನಾಗಲಿ, ದೇವಾಲಯ ಪ್ರವೇಶವನ್ನಾಗಲಿ ಮುಕ್ತ ಮಾಡಿದ ಕ್ಷಣಕ್ಕೆ ಅವರ ವಿಧಿಯು ತೊಲಗದು. ತಮ್ಮ ಭೂಮಿ, ಪೂರ್ವಜರ ಸಂಸ್ಕೃತಿ ಮೊದಲಾದವುಗಳ ಅರಿವುಂಟಾಗಬೇಕು. ಅಂದರೇನೇ ಅವರು ತಾವಿದ್ದ ಹಾಗೆಯೇ ತಮ್ಮ ಅಸ್ಪೃಶ್ಯತೆಯನ್ನು ಹೊಡೆದೋಡಿಸಲು ಸಮರ್ಥರಾಗುವರು.

ಆದುದರಿಂದ ಅಸ್ಪೃಶ್ಯತೆಯ ಪೂರ್ಣ ನಾಶವಾಗಬೇಕಾದರೆ ಆದಿಜನರಿಗೆ ಆತ್ಮನ ಅರಿವಾಗಬೆಕು. ಅಂಥ ಅರಿವನ್ನುಂಟುಮಾಡುವ ಸುಸಮಯವೇ ಈಗ ಬಂದಿದೆ. ಇದನ್ನು ಆದಿಜನ ಪ್ರೇಮಿಗಳು ಸರಿಯಾಗಿ ಉಪಯೋಗಿಸಿಕೊಳ್ಳಲಿ. **ಲಿ. ಪಾಟೀಲ.**

ಸ್ತುತ್ಯ ದೇಣಿಗೆ.

ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಒಂದು ಕೋಣೆಯನ್ನು ಕಟ್ಟಿಸಲು ಬೈಲಹೊಂಗಲದ ಶ್ರೀಮತಿ ಮಹಾಲಿಂಗವ್ವ ಮೆಟಗುಡ್ಡ ಇವರು ೨೦೦ ರೂ. ಗಳನ್ನು ತಾ. ೫-೩-೩೪ ನೆಯ ದಿವಸ ಕೊಟ್ಟುದನ್ನು ಅತ್ಯಂತ ಕೃತಜ್ಞತಾಪೂರ್ವಕ ಸ್ವೀಕರಿಸಿದ್ದಾಗಿದೆ.

ಸಹಾಯಾರ್ಥಿಯೂ.

ಶರಣ ಸಂದೇಶ

ಪತ್ರಿಕೆಯು ಯುಗಾದಿ ಹಬ್ಬದ ನಿಮಿತ್ತವಾಗಿ ಮುಂದಿನ ವಾರ ಪ್ರಕಟವಾಗದೆ ತಾ. ೨೬-೩-೩೪ನೆಯ ದಿವಸ ಪ್ರಕಟವಾಗುವುದು.

ಮ್ಯಾನೇಜರ್

ಗಾಂಧೀಜಿಯವರು ಮತ್ತು ವೀರಶೈವ ವಿದ್ಯಾಲಯ.

ಗಾಂಧೀಜಿಯವರು ನಿಜಾಮಪುರದಲ್ಲಿ ವಾಸವಾಗಿದ್ದ ಶಫರ್ಡ್ ಭವನದಲ್ಲಿ ತಾ. ೨೬ನೆಯ ಸಾಯಂಕಾಲ ೬॥ ಗಂಟೆಯಿಂದ ೩ ಗಂಟೆಯವರೆಗೆ ಅಲಮಟ್ಟಿ ವೀರಶೈವ ವಿದ್ಯಾಲಯದವರಿಗೆ ಪ್ರತ್ಯೇಕ ವಾಗಿ ಸಂಭಾಷಣೆಗೆ ಅವಕಾಶವನ್ನು ಕೊಟ್ಟಿದ್ದರು. ಎಲ್ಲ ವಿದ್ಯಾರ್ಥಿಗಳೂ ಇದ್ದರು. ಸಂಭಾಷಣೆಯು ಹಿಂದಿ ಭಾಷೆಯಲ್ಲಿ ಜರುಗಿತು. ಅದರ ಮುಖ್ಯಾಂಶವು ಈ ಪ್ರಕಾರ ಇದ್ದಿತು.

ಗಾಂಧೀಜಿಯವರು ಒಂದು ಚಿಕ್ಕ ಕೋಣೆಯಲ್ಲಿ ನೂಲುತ್ತಾ ಕುಳಿತಿದ್ದರು. ಅವರ ಹತ್ತಿರ ಕುಮಾರಿ ಉಮಾದೇವಿ ಬಜಾಜ ಇವರು ಮಾತನಾಡುತ್ತಿದ್ದರು. ವಿದ್ಯಾಲಯದವರು ಹೋದೊಡನೆಯೇ ಅವರು ಹೊರಗೆ ಬಂದರು. ಮೊದಲು ಶ್ರೀ. ಹರ್ಡೀಕರ ಮಂಜಪ್ಪನವರು ವಿದ್ಯಾಲಯದ ಅಧಿಪತಿಗಳಾದ ಶ್ರೀಮನ್ನಿರಂಜನ ಬಂಥನಾಳ ಸ್ವಾಮಿಗಳ ಅನಂತರ ಅಧ್ಯಾಪಕರ ಮತ್ತು ಬೇರೆ ಕಾರ್ಯ ಕರ್ತರ ಪರಿಚಯ ಮಾಡಿ ಕೊಟ್ಟ ಮೇಲೆ ಗಾಂಧೀಜಿಯವರು ಈ ಕೆಳಗಿನ ಪ್ರಶ್ನೆಗಳನ್ನು ಕೇಳಿದರು. ವಿದ್ಯಾಲಯವು ಇಲ್ಲಿಂದ ಎಷ್ಟು ದೂರದಲ್ಲಿದೆ? ವಿದ್ಯಾರ್ಥಿಗಳು ಎಷ್ಟು ಜನರಿದ್ದಾರೆ? ವಿದ್ಯಾಲಯಕ್ಕೆ ಜಮೀನು ಎಷ್ಟಿದೆ? ಕಟ್ಟಡಗಳು ಗಟ್ಟಿನವೊ ಮಣ್ಣಿನವೊ? ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಕೊಡತಕ್ಕ ಆಹಾರ ಪದಾರ್ಥಗಳಾವುವು? ಹಾಲು ತುಪ್ಪಗಳೆಷ್ಟು? ವಿದ್ಯಾರ್ಥಿಗಳು ವರುಷಕ್ಕೆ ಕೊಡಬೇಕಾದ ಹಣವೆಷ್ಟು? ಅವರಿಗೆ ಯಾವ ತರದ ಶಿಕ್ಷಣ ದೊರೆಯುತ್ತದೆ? ಕಲಿಯುವ ಭಾಷೆಗಳಾವುವು? ಸಂಸ್ಕೃತವನ್ನು ಕಲಿಸುವದಿಲ್ಲವೆ? ಮುದ್ರಣಯಂತ್ರದಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ? ಮುದ್ರಣ ಯಂತ್ರದ ಆಕಾರವೆಷ್ಟು? ಅದರ ಕ್ರಯವೆಷ್ಟು? ಒಂದು ತಾಸಿಗೆ ಎಷ್ಟು ಪ್ರತಿಗಳು ಅಚ್ಚಾಗುತ್ತವೆ? ಮುಂತಾದ ಸಂಗತಿಗಳನ್ನು ಬಹು ಪ್ರೇಮದಿಂದ ಕೇಳಿದರು. ಇವುಗಳಿಗೆಲ್ಲ ಶ್ರೀ ಮಂಜಪ್ಪನವರು ಉತ್ತರ ಕೊಟ್ಟ ನಂತರ ಈ ಕೆಳಗಿನ ಸಂಭಾಷಣೆ ಜರುಗಿತು.

ಪ್ರಶ್ನೆ—ಲಿಂಗಾಯತ ಮತಗ್ರಂಥಗಳು ಕನ್ನಡದಲ್ಲಿಯೇ ಇವೆಯೇ? ಸಂಸ್ಕೃತದಲ್ಲಿಯೂ ಇವೆಯೆ? ಉತ್ತರ— ಅಗಮಾಡಿ ಸಂಸ್ಕೃತ ಗ್ರಂಥಗಳಲ್ಲಿಯೂ ಈ ಮತವು ಹೇಳಲ್ಪಟ್ಟಿದೆ. ಆದರೆ ಬಸವಾದಿ ಪ್ರಮಥರು ಕನ್ನಡದಲ್ಲಿ ಹೆಚ್ಚು ವಿವೇಚಿಸಿದ್ದಾರೆ. ಪ್ರಶ್ನೆ— ಲಿಂಗಾಯತ ಮತವು ಮಾಂಸಾಹಾರವನ್ನು ನಿಷೇಧಿಸುತ್ತದೆಯೇ? ಉತ್ತರ— ಮದ್ಯಮಾಂಸಗಳನ್ನು ಸಂಪೂರ್ಣ ನಿಷೇಧಿಸುತ್ತದೆ. ಇಷ್ಟೇ ಅಲ್ಲ; ಹಿಂಸಾಯುಕ್ತವಾದ ಯಜ್ಞವನ್ನೂ ನಿಷೇಧಿಸುತ್ತದೆ.

ಅನಂತರ ಶಿವನಾಗಪ್ಪನೆಂಬ ಚಿಕ್ಕ ವಿದ್ಯಾರ್ಥಿಯು ವಿದ್ಯಾರ್ಥಿಗಳ ಪರವಾಗಿ ಕೈನೂಲಿನ ಸುಂದರ ಹಾರವನ್ನೂ ೫ ರೂ. ಗಳನ್ನೂ ಗಾಂಧೀಜಿಯವರಿಗೆ ಅರ್ಪಿಸಿದನು. ಈ ರೂ. ಗಳು ನಿನಗೆ ಹೇಗೆ ಬಂದವೆಂದು ಕೇಳಲು ವಿದ್ಯಾಲಯದಿಂದ ಕೊಟ್ಟಿಡೆಯಿಂತಲೂ ವಿದ್ಯಾಲಯದ ಕಟ್ಟಿಗೆಗಳನ್ನು ವಿದ್ಯಾರ್ಥಿಗಳು ಒಡೆದು ೧೦ ರೂ. ಗಳನ್ನು ಬಿಹಾರ ಫಂಡಿಗೆ ಕಳಿಸಿದ್ದಾರೆಂತಲೂ ತಿಳಿಸಲು ಬಹು ಸಂತೋಷಪಟ್ಟು ಹಾಗಾದರೆ ನೀವು ''ವಸ್ತಾದ'' ಇದ್ದೀರಿ ಎಂದು ಹೇಳಿದರು. ಪ್ರಿಯ ನಾರಾಯಣನೆಂಬ ಕಂಪಾಜಿಟರ್ ೨ ರೂ. ಗಳನ್ನು ಅರ್ಪಿಸಿದನು. ವಿದ್ಯಾರ್ಥಿಗಳಿಗೆ ಒಂದು ಉಪದೇಶದ ವಾಕ್ಯವನ್ನು ಬರೆದು ಕೊಡಬೇಕಾಗಿ ಶ್ರೀ. ಮಂಜಪ್ಪನವರು ಕೇಳಲು ಕಡೆಗೆ ಬರೆದು ಕೊಡುವೆನೆಂದು ಹೇಳಿದರು. ವಿದ್ಯಾಲಯಕ್ಕೆ ತಾವು ಬರುವುದು ಶಕ್ಯವಿಲ್ಲದಿದ್ದರೂ ವಿದ್ಯಾಲಯವು ಈ ರೀತಿ ತಮ್ಮ ಹತ್ತಿರ ಬರಲು ಅವಕಾಶ ಕೊಟ್ಟುದಕ್ಕಾಗಿ ನಾವು ಧನ್ಯವಾದವನ್ನು ಅರ್ಪಿಸುತ್ತೇವೆಂದು ಶ್ರೀ. ಮಂಜಪ್ಪನವರು ಹೇಳಲು ಗಾಂಧೀಜಿಯವರು ನಕ್ಕು ನಿರೂಪ ಕೊಟ್ಟರು.

ವಿದ್ಯಾರ್ಥಿಗಳಿಗಾಗಿ ಕಡೆಗೆ ಬರೆದುಕೊಟ್ಟ ವಾಕ್ಯ ಹೀಗಿದೆ—
''ಸತ್ಯಹಿ ಪರಮೇಶ್ವರ ಹೈ'' (ಸತ್ಯವೇ ಪರಮೇಶ್ವರ)
ಮೊ.ಕ. ಗಾಂಧಿ (ಹಿಂದಿ ಲಿಪಿ)
ಗಾಂಧಿ (ಕನ್ನಡ ಲಿಪಿ)
ಪಾಟೀಲ ಲಿಂಗನಗೌಡ.

೫೦೦ ರೂಪಾಯಿಗಳು!

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಜನಾನುರಾಗಿಗಳೂ, ಸುಪ್ರಸಿದ್ಧರೂ, ಪರಿಪಕ್ವವಾದ ಬುದ್ಧಿಯುಳ್ಳವರೂ ಮತ್ತು ಸಮರ್ಥರಾದ ಡೈರೆಕ್ಟರುಗಳುಳ್ಳ

ಉತ್ತಮವಾದ ಸಂಸ್ಥೆ.

ಇದರಲ್ಲಿ ಹೆಂಡತಿ ಮಕ್ಕಳಾದಿಯಾಗಿ **ತನ್ನನ್ನೇ** ಆಶ್ರಯಿಸಿರುವ ಪ್ರತಿಯೊಬ್ಬರಿಗೂ ಆಪದ್ಧನವನ್ನು ಕೂಡಿಡುವುದು ಮೊದಲನೆಯ ಕಾರ್ಯವಲ್ಲವೇ?

ಹೌದು!!

ಅಂದಮೇಲೆ **ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂಪನಿ ಲಿಮಿಟೆಡ್ ಧಾರವಾಡ** ಇವರು ಏರ್ಪಾಟು ಮಾಡಿರುವ **ಮದುವೆ, ಜನನ ಮತ್ತು ಮರಣ** ಎನ್ನುವ ಮೂರು ತರಹದ ವಿಮಾ ಶಾಖೆಗಳಲ್ಲಿ ಜಾತಿ, ಮತಭೇದವಿಲ್ಲದೆ ಗಂಡಸರು ಮತ್ತು ಹೆಂಗಸರು ಎಂಬ ವ್ಯತ್ಯಾಸವಿಲ್ಲದೆ ೧೫ ರಿಂದ ೫೫ ವಯಸ್ಸಿನೊಳಗಿರುವ ಪ್ರತಿಯೊಬ್ಬರೂ ವಿಮೆಯನ್ನು ಇಳಿಸಿ

೫೦೦ ರೂಪಾಯಿವರೆವಿಗೂ

ಪ್ರತಿಫಲ ಹೊಂದಲು ಮುಂದುವರಿಯಬೇಕಾದದ್ದು ಮುಖ್ಯ ಕರ್ತವ್ಯ.

ಪ್ರವೇಶ ಫಿ ೫-೦-೦ ಮಾಸಿಕ ಚಂದಾ ೧-೦-೦
ವಾರ್ಷಿಕ ರುಸುಂ ೧-೦-೦

ಮ್ಯಾನೇಜಿಂಗ್ ಏಜಂಟ್ಸ್—
ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂ. ಲಿಮಿಟೆಡ್ ಧಾರವಾಡ.

ಪತ್ರಗಳ ಸಾರಾಂಶ.

ಶ್ರೀ ಶಿವರಾತ್ರಿ ಮಹೋತ್ಸವ ಅಥಣಿ.

ಪದ್ಧತಿಯಂತೆ ಇದೇ ಮಾಘ ಬ. ೧೪ ಸೋಮವಾರ ತಾ. ೨-೩-೩೪ರ ದಿವಸ ಶ್ರೀ ಗಚ್ಚಿನ ಮಠದಲ್ಲಿ ಶ್ರೀ ಶಿವಯೋಗಿಗಳ ಪರ ಗದ್ದಿಗೆ ರುದ್ರಾಭಿಷೇಕ ಬಿಲ್ವಾರ್ಚನೆ ನಡೆದು ಬೆಳಿಗಿನ ೮ ಗಂಟೆಗೆ ಶ್ರೀಗಳ ಭಾವಚಿತ್ರದ ಉತ್ಸವವು ಶೃಂಗಾರಿಸಿದ ಅಷ್ಟಪಲ್ಲಕ್ಕಿ ವಾದ್ಯಸನ ತೋಳು, ನಂದಿ ಧ್ವಜ, ಛತ್ರ ಚಾಮರ ಮೊದಲಾದ ಸಕಲ ವಿರುದಾವಳಿಗಳಿಂದಲೂ ಭಜನೆ ಬಾಜಾಭಜಂತ್ರೆ ವಾದ್ಯ ವೈಭವ ಗಳಿಂದಲೂ ಗಚ್ಚಿನ ಮಠದಿಂದ ಮುಖ್ಯ ಮುಖ್ಯ ಬೀದಿ ಗಳಲ್ಲಿ ಹಾಯ್ದು ೧೨ ಘಂಟೆಗೆ ಮಠವನ್ನು ಸೇರಿತು. ಮುಂದೆ ೪ ಘಂಟೆಯಿಂದ ಸ್ಥಲ ಪರಸ್ಥಲದಿಂದ ಬಂದ ಅನಂತ ಭಕ್ತ ಮಾಹೇ ಶ್ವರರ ಲಿಂಗಕ್ಕೆ ಪಂಚಾಮೃತಾಭಿಷೇಕವಾಗಿ ಫಲಹಾರವು ನಡೆದು ರಾತ್ರಿವರೆಗೂ ೨-೩ ಸಾವಿರ ಜನರಿಗೆ ತೃಪ್ತಿ ಪಡಿಸಿದರು. ರಾತ್ರಿ ೭ ಗಂಟೆಯಿಂದ ಬನಹಟ್ಟಿ ಶಿವಸಂಗಯ್ಯನವರಿಂದ ಶಿವಕೀರ್ತನವು ಆ ೧೨ ಗಂಟೆಯಿಂದ ಭಜನೆಯು ಪ್ರಾರಂಭವಾಯಿತು ಮಧ್ಯ ರಾತ್ರಿ ಡಾವಣಗೇರಿ ಶ್ರೀ. ಮೃತ್ಯುಂಜಯ ಸ್ವಾಮಿಗಳವರು ತಮ್ಮ ಪ್ರಸಾದ ವಾಣಿಯಿಂದ ವೈರಾಗ್ಯಪರವಾದ ತತ್ವಪದಗಳನ್ನು ಹೇಳಿ ಜನರನ್ನು ಪ್ರೋತ್ಸಾಹಗೊಳಿಸಿದಲ್ಲದೆ ಆನಂದ ಸಾಗರದಲ್ಲಿ ತೇಲಾಡಿಸುತ್ತಿದ್ದರು. ಹೀಗೇ ರಾತ್ರಿಯೆಲ್ಲ ನಡೆದು ಬೆಳಿಗಿನ ೫ ಗಂಟೆಗೆ ಮುಗಿದು ಸಮಾಪ್ತಿ ಮಂಗಳವಾದ ಕೂಡಲೆ ಇಲ್ಲಿಯ ಶಾಲೆಯ ಉಪಾಧ್ಯಾಪಕ ಪಂ, ಬಸವಲಿಂಗ ಶಾಸ್ತ್ರಿಗಳು ಗುಡಗೇರಿ ಇವರು ಶಿವರಾತ್ರಿ, ಶಿವ ಇವುಗಳ ಅರ್ಥವನ್ನು ಸಪ್ರಮಾಣವಾಗಿ ಬಹು ಗಂಭೀರವಾಗಿ ಜನ ಮನೋರಂಜನವಾಗುವಂತೆ ಪ್ರತಿಪಾದಿ ದರು. ಮುಂದೆ ಶ್ರೀಗಳ ಭಕ್ತಿಯ ವಿಷಯಕವಾಗಿ ಹೇಳಿ ಜಯ ಘೋಷಮಾಡೊಡನೆ ಕಾರ್ಯಾಸಮಾಪ್ತಿಯಾಯಿತು. ಈ ವರುಷ ಜಲ್ಲಿ ಹವೆಯು ದೂಷಿತವಾಗಿದ್ದು ಜನಗಳು ಉತ್ಸವಕ್ಕೆ ಸೇರುವರೋ ವ್ಯಾಗೋ ಎಂಬ ಚಿಂತೆಯು ಕೆಲವರಿಗೆ ವ್ಯಾಪಿಸಿತ್ತು ಸ್ವಾಮಿ ಪ್ರಾಬಲದಿಂದ ಈ ಸರಿ ಪ್ರತಿ ವರುಷಕ್ಕಿಂತಲೂ ಬಹು ಆನಂದ ದಿಂದ ಕಾರ್ಯವು ಜರುಗಿತು. ಈ ಮಹೋತ್ಸವಕ್ಕೆ ಡಾವಣಗೇರಿ, ದಗ, ಬಾಗೇವಾಡಿ, ನರಗುಂದ, ಮುನವಳ್ಳಿ, ಬನಹಟ್ಟಿ, ರಬಕವಿ, ಗುಣಸಿ, ಬೆಳಗಾವಿ, ಹುಕ್ಕೇರಿ ಕಡೆಯಿಂದ ವರ್ಷ ಬರುವಂತೆ ಜನ ಳು ಬಂದಿದ್ದು ಸ್ವಾಮಿ ಸೇವೆಯನ್ನು ಮಾಡಿದರಲ್ಲದೆ ಸ್ಥಲ ಪರ ಲದ ಸರ್ವರೂ ಯಥಾವತ ಸ್ವಾಮಿ ಸೇವೆ ಮಾಡಿ ಕೃತಾರ್ಥರಾ ರು. ಇದೆಲ್ಲವು ಆ ಮಹಾ ಮಹಿಮರ ತಪಃಪ್ರಭಾವವು ಹಾಗೂ ರಮಪೂಜ್ಯರೂ ಜ್ಞಾನವೃದ್ಧರೂ ತಪೋವೃದ್ಧರೂ ಪರಮ ವೈರಾಗ್ಯ ಶಿಲಿಗಳೂ ಆದ ಶ್ರೀ ಸಿದ್ಧಲಿಂಗ ಮಹಾ ಸ್ವಾಮಿಗಳವರು ದಾಸೋ ಹಾದಿ ಸಕಲ ಕಾರ್ಯಗಳನ್ನು ಮೊದಲಿನಂತೆ ಆನಂದದಿಂದ ಜರು ಸುತ್ತಿರುವರಲ್ಲದೆ ಭಕ್ತರ ಮನೋರಥವನ್ನು ಪೂರೈಸುತ್ತ ಆನಂದ ದಿಂದ ಇರುವರು. ಹಾಗೂ ಮರುದಿವಸ ಇಲ್ಲಿಯ ರಾತ್ರಿ ಸಾಪ್ತಾ ಹಿಕ ಶಿವಾನುಭವ ಶಾಲೆಯ ಪರೀಕ್ಷೆಯನ್ನು ಶ್ರೀ ಡಾವಣಗೇರಿ ಶ್ರೀ. ಮೃತ್ಯುಂಜಯ ಸ್ವಾಮಿಗಳವರು ತೆಗೆದುಕೊಂಡು ಸರ್ವರಿಗೂ ಪ್ರೋತ್ಸಾಹಗೊಳಿಸಿದರು. ನೋಡಿ ಧನ್ಯನಾದ,

ಅಥಣಿ
ತಾ. ೧೪-೩-೧೯೩೪. } ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಶಿವರಾತ್ರಿ ಮಹೋತ್ಸವ ತಾಂಡೂರ.

ಶ್ರೀ ಭದ್ರೇಶ್ವರ ಮಂದಿರದಲ್ಲಿ ತಾ. ೧೨-೩-೧೯೩೪ನೇ ಮಾಘ ಬಹುಳ ಚತುರ್ದಶಿ ಸೋಮವಾರ ಮಹಾ ಶಿವರಾತ್ರಿ ಉತ್ಸವ ಕ್ರಮ ಬೆಳಿಗ್ಗೆ ೧೦ ಘಂಟೆಕ್ಕೆ ಪಂಚಾಮೃತ ಅಭಿಷೇಕ ಹಾಗೂ ಭಜನಾ ಪ್ರಾರಂಭ, ನಂತರ ರಾತ್ರಿ ೮ ಘಂಟೆಕ್ಕೆ ಏಕಾದಶ ರುದ್ರ ಹಾಗೂ ಸಹಸ್ರ ದೀಪಾರಾಧನ ಪ್ರಾರಂಭ ವಾತ್ತು ಸಹಸ್ರ ಬಿಲ್ವಾರ್ಚನ ಹಾಗೂ ಶ್ರೀ ಮದ್ ವೀರಶೈವ ವೈದಿಕ ಪಾಠ ಶಾಲಾ ವಿದ್ಯಾರ್ಥಿಗಳಿಂದ ಭಜನಾ ಮತ್ತು ಜಾಗರಣ ಫಲಾಹಾರ ತಾರೀಕು ೧೪-೩-೩೪ನೇ ಮಂಗಳವಾರ ದಿವಸ ಬೆಳಿಗ್ಗೆ ೧೦ ಘಂಟೆಗೆ ಭಜನಾ ಸಮಾಪ್ತ. ಮಹಾ ಪ್ರಸಾದ ಈ ಪ್ರಕಾರ ಉತ್ಸವವು ವೇ. ಮಹಂತಯ್ಯ ಸ್ವಾಮಿ ಇಟಗಿ ಮಠ ಇವರಿಂದ ಮತ್ತು ಪುರ ಜನ ರಿಂದ ಮಹಾ ಆನಂದದಿಂದ ಜರುಗಿತು.

ತಮ್ಮ ತಾಂಡೂರು ತರುಣಸಂಘದ
ಓರ್ವ ತರುಣ.

ನೀವು ಸಾಯುವದು ಯಾವ ಗಂಟೆಗೆ?

ಡಾಕ್ಟರರ ಅಭಿಪ್ರಾಯವೇನೆಂದರೆ ಅನೇಕ ಮನುಷ್ಯರು ಸಾಧಾರಣವಾಗಿ ಮುಂಜಾನೆ ಸಾಯುವದೇ ಹೆಚ್ಚು. ಮಧ್ಯಾಹ್ನ ದಲ್ಲಾಗಲಿ ಮಧ್ಯ ರಾತ್ರಿಯಲ್ಲಾಗಲಿ ಸಾಯುವದು ಕಡಿಮೆ. ಆದರೆ ಹಗಲು ೩ ಗಂಟೆಯಾದಮೇಲೆ ರಾತ್ರಿ ೧೨ ರ ಮೇಲೆ ಮೃತ್ಯು ಸಂಖ್ಯೆಯು ಬೆಳೆಯುತ್ತದೆ. ಮುಂಜಾನೆ ೬ಕ್ಕೆ ಮಧ್ಯಾಹ್ನ ೧೨ಕ್ಕೆ ಸಂಜೆಯ ೬ ಗಂಟೆಗೆ ಮತ್ತು ರಾತ್ರಿ ೧೨ಕ್ಕೆ ಮರಣ ಪ್ರಮಾಣವ ಕಡಿಮೆಯಾಗಬೇಕಾದರೆ ಏನಾಗುತ್ತಿರಬಹುದು?

ಇದಕ್ಕೆ ಅನ್ನವೇ ಕಾರಣವಿರಬಹುದು. ಮಧ್ಯರಾತ್ರಿಯ ಲ್ಲಿಯೇ ರೋಗಿಗಳಿಗೆ ಬಹುಧಾ ಅನ್ನವು ಕೊಡಲ್ಪಡುತ್ತಿದೆ' ಮರ ಣವು ಪ್ರಾಪ್ತವಾಗಬೇಕಾದರೆ ರೋಗಿಗೆ ಆಯುಷ್ಯದಲ್ಲಿ ಇನ್ನು ಮೇಲೆ ತಥ್ಯವಿಲ್ಲೆಂದು ಯಾವಾಗ್ಗೆ ಕಂಡುಬರುವದೊ ಆವಾಗ್ಗೇ ಮರಣವು ಒಂದು ಆವರಿಸುವದು. ರೋಗಿಯು ಸಾಯುವ ಮುಂಚೆ ಅವನ ಜೀವನ ಶಕ್ತಿಯು ಮೊದಲೇ ನಷ್ಟವಾಗಿದ್ದರೂ ಅವನು ಅನ್ನವನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆವೆ ಪತ್ನಿ ಪುತ್ರರನ್ನು ಕಾಣಬೇಕೆಂಬ, ಡಾಕ್ಟರರಿಂದ ಏನಾದರೂ ಅಭಿಪ್ರಾಯ ಕೇಳ ಬೇಕೆಂಬ ವಿಚಾರವುಳ್ಳವನಾಗಿ ಮರಣವನ್ನು ಮುಂದಕ್ಕೆ ನೂಕು ತ್ತಾನೆ. ಆದರೆ ಮಧ್ಯರಾತ್ರಿಯಲ್ಲಿ ಯಾರೂ ಇಲ್ಲದಾಗ ರೋಗಿಯು ತನ್ನ ಉತ್ತರ ಗತಿಯನ್ನು ವಿಚಾರಿಸುತ್ತ ಶಾಂತನಾಗಿ ಆಶೆಯನ್ನು ತೊರೆದಾಗ ಮರಣವು ಪ್ರಾಪ್ತವಾಗುತ್ತದೆ. ಅಂತ ಯಾವ ಕಾಲಕ್ಕೆ ಆಯುಷ್ಯದ ಹೋರಾಟವು ಶಾಂತವಾಗುತ್ತದೆಯೋ ಆವಾಗ್ಗೇ ಸಾವು ಬರುವದಲ್ಲವೇ?

ಹೈದರಾಬಾದಿನಲ್ಲಿ ಗಾಂಧೀಜಿಯವರು

ಗಾಂಧೀಜಿಯವರು ಗುರುವಾರ ರಾತ್ರಿ ೮ ಗಂಟೆಗೆ ವಿಜಾಪುರ ದಿಂದ ಹೊರಟು ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ವೈದರಾಬಾದ ಪಟ್ಟಣವನ್ನು ಸೇರಿದರು. ಸೌ. ಸರೋಜಿನಿ ದೇವಿಯವರು ಮೊದ ಲಾದ ಪ್ರಮುಖರು ಗಾಂಧೀಜಿಯವರಲ್ಲಿಗೆ ಸ್ವೇಶನ್ನಿಗೆ ಬಂದಿದ್ದರು.

ಗಾಂಧೀಜಿಯವರು ಸೌ. ಸರೋಜಿನಿ ದೇವಿಯವರ ಭವನದಲ್ಲಿ ವಾಸವಾಗಿದ್ದು ಅಲ್ಲಿಯ ಆದಿಜನಸೇವಕರ ಸಂಗಡ ಸಂಭಾಷಣೆ ಮಾಡಿ ಅದಿನ ಸಾಯಂಕಾಲ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಮತ್ತು ಸ್ತ್ರೀಯರ ಪ್ರತ್ಯೇಕವಾದ ಸಭೆಯಲ್ಲಿಯೂ ಭಾಷಣ ಮಾಡಿ ಶಿಕಂದರಾಬಾದಿನ ಕಾರ್ಯ ಪೂರೈಸಿಕೊಂಡು ಆ ದಿನ ರಾತ್ರಿ ಸಾಬರಮತಿ ಕಡೆಗೆ ತೆರಳಿದರು.

ಶ್ರೀ ಸರ್ವಭೂಷಣ ಶಿವಯೋಗಿ ಮತದ ಶ್ರೀ ಮಹಾದೇವ ಸ್ವಾಮಿಗಳವರ
ವಚನ ಪ್ರವಚನ ಸಾರಾಂಶ.

(ಬೆಂಗಳೂರು ಶ್ರೀ ವೀರಶೈವ ಸಮಾಜೋತ್ಕರ್ಷ ಸಾಧಕ ಸಂಘದವರಿಂದ)

ವೀರಶೈವ ಸಮಾಜ ಬಾಂಧವರೇ, ನಮ್ಮಿ ಉದಾತ್ತ ಸಮಾಜವು ಗುರುಜಂಗಮರ ಐಕ್ಯೈಕ್ಯಮತ್ಯದಿಂದ ಇಬ್ಬಾಗವಾಗಿ ಒಡೆದು ಒಂದರೊಡನೆ ಒಂದು ಕಾದಾಡಿ ಬೆಂದು ಬಳಲಿ ಬೆಂಡಾಗಿರುವುದು ಎಂತಹ ಶೋಚನೀಯವಾದ ಸ್ಥಿತಿ! ಬೇರೆ ಬೇರೆ ಮತದವರು ತನ್ನ ಭೇದಭಾವಗಳನ್ನು ಮರೆತು ಭ್ರಾತೃಭಾವದಿಂದ ವರ್ತಿಸುತ್ತಿರುವ ಈ ಸುಶಿಕ್ಷಿತ ಕಾಲದಲ್ಲಿ ನಮ್ಮ ಸಮಾಜದಲ್ಲಿಯೇ ಸಂಕುಚಿತಭಾವ ದಿಂದ ಇಲ್ಲದ ಒಳವಂಗಡಗಳನ್ನು ಪುಷ್ಟೀಕರಿಸಿ ನಾವು ಹೆಚ್ಚು ಜ್ಞಾನ ಹೆಚ್ಚೆಂದು ಬಹು ಸಗರ್ವ ಶಿರೋಮಣಿಗಳಾಗಿರುವರಲ್ಲವೆ? ಅಹಾ ಎಂಥ ಸಮತತ್ವ! ಎಂಥ ವಿನೀತ ಭಾವಗಳನ್ನು ದೂಡಿಬಿಟ್ಟು ನಮ್ಮ ಮತ ಹೆಚ್ಚು ನಮ್ಮ ಮತ ಬಹು ಶ್ರೇಷ್ಠವೆಂದು ಬರೀ ಮಾತಿ ನಲ್ಲಿ ಜಂಬಕೊಚ್ಚಿಕೊಂಡರೆ ನಿಮ್ಮನ್ನು ಕೇಳುವವರಾರು? ನೀವು ಹೆಚ್ಚೆಂಬುದನ್ನು ನಿಮ್ಮ ತತ್ವಗಳನ್ನ ನಿಮ್ಮ ಕಾರ್ಯದಲ್ಲಿ ಹೆಚ್ಚಿ ತೋರಿಸಿದರಲ್ಲವೆ ನಿಮ್ಮ ಶ್ರೇಷ್ಠತೆಯು ಹೊರಬೀಳುವುದು? ಅಂಥ ವೀರಶೈವ ತತ್ವಗಳನ್ನು ಆಚರಿಸಿ ತೋರಿಸತಕ್ಕ ಒಬ್ಬ ವ್ಯಕ್ತಿ ಯಾದರೂ ಸಾಕು! ಆದರೆ ಅಂಥ ಒಬ್ಬ ಮಹಾಪುರುಷನು ಉಚ್ಚ ನೀಚಗಳೆಂಬ ನಿಮ್ಮ ರೊಚ್ಚಿಯ ಕೆಸರಿನಿಂದ ಹೇಗೆ ಉದ್ಭವಿಸಿ ಯಾನು? ಈಗಲಾದರೂ ಜಾಗೃತರಾಗಿರಿ! ಅವನ ಬರುವಿಗೆ ಎಂಗ ಣನ್ನು ಶುದ್ಧಗೊಳಿಸಿರಿ. ನಮ್ಮ ಮತವೂ ಜಗದ್ವಿಖ್ಯಾತ ಮತ ಗಳಲ್ಲಿ ಒಂದೆಂದು ಧ್ವಜವನ್ನು ಎತ್ತಿ ಹಿಡಿಯಲಿ!

ಮತಬಾಂಧವರೇ, ಗುರುಮೂಲ ನದಿಮೂಲಗಳನ್ನೆಣಿಸ ಬಾರದೆಂದು ಆರ್ಯ ವಚನವಿರುವಾಗ, ತಾವು ಬಸವನು ಒಬ್ಬ ಹಾಳಕೆಟ್ಟ ಬ್ರಾಹ್ಮಣನು, ಯೋನಿಜನು ಎಂದು ಜರಿಯುವುದೊಂದು ದೊಡ್ಡ ಶ್ರೀ. ರೇಣುಕರು ಕಲ್ಲಿನಲ್ಲಿ ಮೂಡಿದವರಂತೆ, ಅವರ ಅಂಥಹ ಮಾನುಷ ಶಕ್ತಿಯು ನಮಗೆಲ್ಲಿಂದ ಬರಬೇಕೆಂದು ಹಿಂಜರಿಯುವುದು ಕಾಂದು ಕಾಣೆ. ಅಹಾ! ಮಹಾಪುರುಷರು ಯೋನಿಜರಾದರೇನು? ಥವಾ ಅಯೋನಿಜರಾದರೇನು? ಅವರು ಮೊದಲು ಅವತರಿಸಿದ ನು? ಅಥವಾ ಇವರು ಮೊದಲು ಉದ್ಭವಿಸಿದರೇನು? ಮಹಾಪು ಷರ ಮಹಿಮೆಯನ್ನು ಉಚ್ಚನೀಚತೆಯನ್ನೂ ನೋಡಬೇಕಾದರೆ ವರ ಯೋನಿಜತ್ವ ಅದರ ಅಯೋನಿಜತ್ವದಲ್ಲಿಲ್ಲ. ಅವರ ಅಲಿಂಗೋ ದ್ಭವತ್ವ ಲಿಂಗೋದ್ಭವತ್ವದಲ್ಲಿಲ್ಲ; ಹಿರಿಯ ಕಿರಿಯ ತನದಲ್ಲಿಲ್ಲ. ದರೆ ಅವರ ಪ್ರೇಮಮಯವಾದ ಅಂತಃಕರಣ ಬಳಕೆಯಲ್ಲಿ ಅವರ ಆರ್ಯ ಕಾಯಕಗಳಲ್ಲಿ ನೋಡಬೇಕು. ಶ್ರೀಮತ್ ಮಹಾಭಾರತ ವನ್ನು ಬರೆದ ಶ್ರೀ ವ್ಯಾಸಮುನಿಗಳು ಅವರ ತಾಯಿಯು ಕೆಸ್ತಿಕೆ ಯಾಗಿರುವಾಗಲೇ ಹುಟ್ಟಿದರೂ ತಮ್ಮ ಕೃತಿಯಿಂದ ಜಗತ್ಪೂ ಜ್ಯರೂ ಲೋಕವಂದ್ಯರೂ ಆಗಿಲ್ಲವೇ? ಕರ್ಣನೂ ಇದೇ ರೀತಿಯ ಯೇ ಹುಟ್ಟಿದರೂ ಬಹು ಪರಾಕ್ರಮಿಯೂ ದಾನಶೂರನೆಂಬ ರುದಾಂಕಿತನೂ ಆಗಿ ಚಿರಸ್ಥಾಯಿಯಾಗಿಲ್ಲವೆ? ಆದ್ದರಿಂದ ಇವರು ೀಷ್ಮರು ಕನಿಷ್ಕರು ಎಂಬುದನ್ನು ಅವರ ಹುಟ್ಟಿನಿಂದ ಹೇಳುವುದು ದ್ಧ ತಪ್ಪಲ್ಲವೆ? ಒಂದು ಸುವಾಸನೆಯನ್ನು ಕೊಡುವಂಥ ಹೂವಿನ ಕವು ಎಂಥ ರೊಚ್ಚಿಯ ಕೆಸರಿನಲ್ಲಿ ಹುಟ್ಟಿ ಬೆಳೆದು, ಪಲ್ಲವಿಸಿ, ಸು ಮಿತವಾದರೂ ತನ್ನ ಸುವಾಸನೆ ಕೊಡುವುದನ್ನು ಬಿಟ್ಟೀತೆ? ಆದ್ದರಿಂದ ಇವನು ಸ್ಪೃಶ್ಯನು ಅಥವಾ ಅಸ್ಪೃಶ್ಯ ಎಂಬ ಅಂಶವನ್ನು ನಿರ್ಧರಿಸುವಾಗಲೂ ಅವನ ಹುಟ್ಟಿನಿಂದ ನಿ ರವಬೇಡಿ. ಅವನ ಕೃತಿಗಳಿಂದ ನಿರ್ಧರಿಸಿರಿ. ಒಬ್ಬ ಮನುಷ್ಯ ಶ್ರೇಷ್ಠ ಜನ್ಮವನಾಗಲಿ ಕನಿಷ್ಠ ಜನ್ಮದವನಾಗಲಿ ಅವನ ಕಾಯ ದಿಂದ ಅವನ ಆಧ್ಯಾತ್ಮಿಕ ಶಕ್ತಿಯಿಂದ ಮಹಾಮಹಿಮನೂ ಜಗ ತ್ಪೂಜ್ಯನೂ ಪರಲೋಕ ಸುಖಿಯೂ ಆಗಬಲ್ಲನೆಂಬ ಅತ್ಯನಂಬಿಕೆ ಪ್ರತಿಯೊಬ್ಬ ಮಾನವನಿಗೂ ಇದ್ದೇ ಇರಬೇಕು.

ಅನುಭವಿಗಳೆ, ಇಹಲೋಕ ಪರಲೋಕವೆಂಬ ಎರ ಲೋಕಗಳಿರುವವೆ? ಆ ಪರಲೋಕವನ್ನು ತಾವಾರಾದರೂ ನೋ ದ್ದರೆ, ಅದರ ಲಕ್ಷಣವಾದರೂ ಯಾವುದು? ಅಲ್ಲಿನ ಸುಖವಾದ ಎಂಥಾದ್ದೆಂಬುದನ್ನು ತಿಳಿಸಲಾಗುತ್ತದೆಯೇ? ಪರಲೋಕವೆಂಬು ನಮ್ಮಂತೆಯೇ ಮೂರ್ತಿಮತ್ಕಾರಾದ ಶಿವ, ವಿಷ್ಣು, ಬ್ರಹ್ಮಾದಿಗಳು ಇಂದ್ರ ಚಂದ್ರರೇ ಮೊದಲಾದ ದೇವತೆಗಳೂ ಇರುವ ಯಾವಾಗಲೂ ಸುಖಮಯವಾದ ಬೇರೆ ಒಂದು ಲೋಕವೆಂಬುದನ್ನು ಮರೆಯಿ ಈ ಕಟ್ಟು ಕಥೆಯು ಸಾಮಾನ್ಯ ಜನರ ಮನಸ್ಸನ್ನು ಆಕರ್ಷಿಸು ಸಲುವಾಗಿ ಮಾಡಿದ ಒಂದು ಕಲ್ಪನೆಯು. ಇದೇ ನಿಜವೆಂ ಬರೀ ಯೋಚನೆಯಿಂದ ಭ್ರಾಂತರಾಗಿ ಬರಿ ಜಪಮಾಲೆಗಳನ್ನ ಎಣಿಸುವುದರಿಂದ ಏನೂ ಪ್ರಯೋಜನವಾಗಲಾರದು. ನಮ್ಮ ಪುರಾತನರು ಸ್ವರ್ಗ ನರಕಗಳನ್ನು ಹಿಡಿದು ಕೈಗೆ ಕೊಟ್ಟರುತ್ತಾ ಅಯ್ಯಾ ಎಂಬುದೆ ಸ್ವರ್ಗ, ಎಲವೊ ಎಂಬುದೆ ನರಕ; ಮತ್ತೊಂ ಕಡೆ ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರಿ ಸತ್ಯವ ನುಡಿವುದೆ ದೇವಲೋಕ ಅಸತ್ಯವ ನುಡಿವುದೆ ಮರ್ತ್ಯಲೋ ಆಚಾರವೇ ಸ್ವರ್ಗ ಅನಾಚಾರವೇ ನರಕ. ಇದಕ್ಕೆ ನೀವೆ ಪ್ರಮಾ ಕೂಡಲ ಸಂಗಮದೇವ ಅಂದರೆ ಪರಲೋಕವೆಂದರೆ ಬೇರೆ ಒಂ ಲೋಕವಿಲ್ಲ. ಪರಲೋಕವೆಂದರೆ ಪಾರಮಾರ್ಥಿಕ ಲೋಕ ಅಂದ ಇಹಲೋಕ ಸಂಬಂಧಿಯಾದ ವಿಷಯೋಪಭೋಗಗಳ ವಾಸನೆಯನ ಅಳಿದು ಭಗವಂತನ ವಿಷಯವಾದ ಪಾರಮಾರ್ಥಿಕ ಸುಖವನ ಅನುಭವಿಸುವವರೆ ಪರಲೋಕ ಸುಖಿಗಳು ಅಂಥ ಪರಲೋಕ ಸು ಗಳನ್ನು ನಮ್ಮಲ್ಲಿ ಹಲಕೆಲವರನ್ನು ನೋಡಬಹುದು. ಪರಮಾತ್ಮ ವಿಷಯವನ್ನು ಅನುಭವದಲ್ಲಿ ತಂದು ಹೇಳುತ್ತಿರುವಾಗ ಇದರ ಒಂದು ಆನಂದ ಲಹರಿಯು ಕಂಡುಬರುವುದಿಲ್ಲವೆ? ಅಷ್ಟೈಶ್ವರ್ಯ ಗಳಿಂದ ಕೂಡಿದ ಶ್ರೀಮಂತನಾದರೂ ವಿಷಯೋಪಭೋಗೇಚ್ಛೆ ಯಿಂದ ನರಕಯಾತನೆಯನ್ನು ಅನುಭವಿಸುತ್ತಿರುವಾಗ, ತಿನ್ನು ವುದಕ್ಕೆ ಒಂದೊತ್ತಿಗೆ ಗತಿಯಿಲ್ಲದ ಕೌಪೀನಧಾರಿಯಾದರೂ ಆ ಪಾ ಮಾರ್ಥಿಯು ದಿವ್ಯ ತೇಜಃಪುಂಜನೂ ಶಾಂತಚಿತ್ತನೂ ಆಗಿ ಲೌಕಿ ರಿಗೆ ಅಸೂಯೆಯನ್ನು ಹುಟ್ಟಿಸುವಂಥ ಸುಖವನ್ನು ಅನುಭವಿಸುತ್ತಿ ರುವನಲ್ಲವೆ? ಇಂಥ ಪಾರಮಾರ್ಥಿಗಳನ್ನು ಹೊಟ್ಟೆದೆಶೆಗಾ ಭೂಷಣಗಳನ್ನು ತೊಟ್ಟು ಕಂಥಕಮಂಡಲಗಳನ್ನು ಧರಿಸಿರು ಹೊಟ್ಟೆಹೊರಕ ಬೂದಿ ಬಡಕ ಯೋಗಿ ಜೋಗಿಗಳಲ್ಲಿ ನೋಡಬೆ ಡಿರಿ. ಅಂಥವರು ಅನೇಕರು ಸಂಸಾರಿಗಳಾಗಿಯೇ ಇರಬಹುದು. ಇಂಥವರು ಲೋಕದಲ್ಲಿ ಇದ್ದೂ ಇಲ್ಲದಂತಿರುವರು. ಇಂಥಹ ಪಾರಮಾರ್ಥಿಗಳನ್ನೂ ಲೋಕೋದ್ಧಾರಕ್ಕಾಗಿ ಲೋಕಜನರಂತೆ ಒಡ ನಾಡಿ ತನುಮನಧನಗಳನ್ನು ಅಹೋ ರಾತ್ರಿಯೂ ಸವೆಸುತ್ತಿ ರುವ ಶುದ್ಧ ಬ್ರಹ್ಮಚಾರಿಗಳಲ್ಲಿಯೂ ನೋಡಬಹುದು. ಲೋಕ ನಿಂದೆ ಅಪವಾದಗಳಿಗೆ ಸಿಲುಕದೆ, ಪ್ರೋತ್ಸಾಹಕ್ಕೆ ಮರುಳಾಗದೆ, ಸದಾ ಸತ್ಕಾರ್ಯಗಳಲ್ಲಿ ನಿರತರಾಗಿ ಪ್ರತಿಯೊಬ್ಬರಿಂದಲೂ ಶ್ರೇಷ್ಠ ರೆಂದು ಹೊಗಳಿಸಿ ಕೊಳ್ಳುವವರೇ ಅಲ್ಲವೆ ಪರಲೋಕ ಸುಖಿಗಳು?

N. Shanmugam
For Secretary.

ವಿವಿಧ ವಿಷಯ.

ಕಂಜೀವರಮ್.

["ಹರಿಜನ" ಪತ್ರಿಕೆಯಲ್ಲಿ ಮೀರಾಬೆನ್‌ರವರು ಹೀಗೆ ಬರೆದಿದ್ದಾರೆ.]

ನಾನು: — ಬಾಪು ಇದು ದಕ್ಷಿಣ ಕಾಶಿಯು. ಈ ವೈಭವಸಂಪನ್ನ ದೇವಾಲಯಗಳು ನೋಡತಕ್ಕಂಥವಿರುತ್ತವೆ.

ಬಾಪು:— ಹರಿಜನರು ನೋಡದ ದೇವಾಲಯಗಳನ್ನು ನೋಡುವದು ಅಷ್ಟೊಂದು ಚಂದವಲ್ಲ.

ನಾನು:— ಒಳ್ಳೆದು ಹರಿಜನರು ಎಲ್ಲಿಯ ವರೆಗೆ ಹೋಗುವರೋ ನಾನೂ ಅಲ್ಲಿಯ ವರೆಗೆ ಹೋಗುವೆನು.

ಬಾಪು:—(ಮುಗುಳು ನಗೆಯಿಂದ) ಹೆಚ್ಚಿಗೇನೂ ನೋಡಲಾರೆ ಹೋಗು, ಅನುಭವವಾದರೂ ಬಂದೀತು.

ನಾನು ಇಬ್ಬರು ಸವರ್ಣ ಹಿಂದೂಗಳನ್ನೂ ಒಬ್ಬ ಯೂರೋಪಿಯನ್ ಕ್ರಿಶ್ಚನನನ್ನೂ ಕರೆದುಕೊಂಡು ಹೋದೆನು. ನಾವು ತೇರಿನ ಹೊರಗೆ ದೇವಾಲಯದ ಮಹಾದ್ವಾರದ ಹತ್ತಿರ ಹೋದೆವು. ಆ ಮೇಲೆ ನಾನು ಹರಿಜನರು ಎಲ್ಲಿಯವರೆಗೆ ಹೋಗಬೇಕು? ಎಂದು ಕೇಳಿದೆ. ಅದಕ್ಕೊಬ್ಬನು ಮುಂದೆ ಒಂದು ಹೆಜ್ಜೆ ಸಹ ಹೋಗಕೂಡದು. ಎಂದನು. ನಾನು ಅಲ್ಲೇ ನಿಂತೆ. ನನ್ನ ಸಂಗಡ ಬಂದವರು ಒಳಗೆ ಹೋದರು. ಅವರು ಒಳಗಿನ ಪಟಾಂಗಣವನ್ನು ದಾಟಿ ಭವ್ಯವಾದ ಸ್ತಂಭಗಳಲ್ಲಿ ಮರೆಯಾದರು. ದೇವಾಲಯವು ಎಷ್ಟು ಮನೋಹರ! ಸುವರ್ಣ ಪ್ರಾಯವಾದ ಸೂರ್ಯರಶ್ಮಿಯಲ್ಲಿ ಥಳಥಳ ಹೊಳೆಯುವ ಸರ್ವೋತ್ಕೃಷ್ಟವಾದ ಕಲಾಕೌಶಲ್ಯತೆ! ತಲೆಯನೇಲೆ ನೀಲ ವರ್ಣದ ಮುಗಿಲು! ಸಾವಿರಾರು ವರುಷದ ಭಕ್ತಿ ರಸವನ್ನು ಮತ್ತು ಕಲೆಯ ಸೌಂದರ್ಯವನ್ನು ತಣಿಯುವಂತೆ ಉಣ್ಣಬೇಕೆಂದು ಒಳಹೋಗಲು ಆತ್ಮವೆಲ್ಲ ಮರುಗಿತು! ಆದರೆ ಹರಿಜನರು ಹೊರಗೆ ನಿಲ್ಲಬೇಕಲ್ಲವೇ?

ಅಷ್ಟರಲ್ಲೊಂದು ಹೆಂದಿಬರಲು ನಾನು—'ಹಂದಿಯೇ ನಾನು ನೀನೂ ಬಹಿಷ್ಕೃತರು!' ಅಂದು ಬಿಟ್ಟೆ. ಆದರೆ ಅದು ತನ್ನ ಬಲ ಜಾಡಿಸುತ್ತ ರೊಂಕೆ ಹೊಡೆಯುತ್ತ ಮಹಾದ್ವಾರದೊಳಗಿಂದ ಓಡಿ ಹೋಯಿತು. ಮನುಷ್ಯನ ಮನುಷ್ಯ ವಿಷಯಕ ಈ ಅನ್ಯಾಯವನ್ನು ನೆನೆಯುತ್ತ ನಾನು ಅಲ್ಲಿಯೇ ನಿಂತು ಬಿಟ್ಟೆ.

ಮೀರಾ.

ಬೋಧಪ್ರದ ಅಂಗಡಿ.

ಅಮೇರಿಕೆಯಲ್ಲಿ 'ಊಲವರ್ಥ ಸ್ಟೋರ್ಸ' ಎಂಬ ಹೆಸರಿನ ಪ್ರಖ್ಯಾತವಾದ ಅಂಗಡಿಯುಂಟು, ಇದನ್ನು ನೋಡಿದರೆ ಕೌತುಕವಾಗದಿರದು. ಸರಕುಗಳನ್ನು ಕೊಳ್ಳುವದು, ಮಾರುವದು ಹುಟ್ಟಿಸುವದು ಹೇಗೆ ಇರಬೇಕೆಂಬದು ಇಲ್ಲಿ ಕಲಿಯುವಂತಿದೆ.

ನ್ಯೂಯಾರ್ಕದಲ್ಲಿರುವ ಈ ಭಾಂಡಾರಕ್ಕೆ ಮಿ ಸ್ಪಿಂಗಲ್ ಎಂಬವನು ಅಡಳಿತೆಗಾರನು. ೨೪ ವರುಷಗಳ ಹಿಂದೆ ಸ್ಪಿಂಗಲನು ಆವನೊಬ್ಬ ಹೀನ ಕೆಲಸ ಮಾಡುವ ಹುಡುಗನಿದ್ದನು. ಈಗ ಅವನ ಕೆಳಗೆ ನೂರಾರು ಜನರು ದುಡಿಯುತ್ತಿದ್ದಾರೆ. ಅವನೊಂದು ಸುಶೋಭಿತ ಕೋಣೆಯಲ್ಲಿ ಕುಳಿತು ಕಾರ್ಯ ಮಾಡುವುದಿಲ್ಲ. ಯಾವಾಗಲೂ ಅಂಗಡಿಯಲ್ಲಿ ತಿರುಗುತ್ತ ಪ್ರತಿಯೊಂದು ಕಾರ್ಯವನ್ನು ನೋಡುತ್ತಿರುತ್ತಾನೆ.

ಊಲವರ್ಥ ಭಂಡಾರದಲ್ಲಿ ೨೮ ಖಾತೆಗಳಿರುತ್ತವೆ ಇವುಗಳಲ್ಲಿ ಸರಕುಗಳನ್ನು ಕೊಳ್ಳುವವರು ೨೪ ಜನರಿರುವರು, ಇವರಲ್ಲಿ ಪ್ರತಿಯೊಬ್ಬನ ಕಡೆಗೆ ಪ್ರತಿ ದಿವಸ ೩೦-೪೦ ಕಾರ್ಯಾಲಯದವರು ಬರುತ್ತಾರೆ ಕೊಳ್ಳುವವರು ಕೇವಲ ಅಗ್ಗವಾದ ಸಾಮಾನುಗಳನ್ನೆಷ್ಟೇ ವಿಚಾರಿಸುವುದಿಲ್ಲ. ಆದರೆ ಯಾವ ಅಗ್ಗವಾದ ಪದಾರ್ಥಗಳನ್ನು ಸಯೋಗಿಸಿದರೆ ಆ ಸಾಮಾನುಗಳನ್ನು ಅಗ್ಗವಾಗಿ ಸಿದ್ಧಪಡಿಸಬಹುದೆಂಬುದನ್ನೂ ವಿಚಾರಿಸಿ ಕಾರ್ಯಾಲಯದವರಿಗೆ ತಿಳಿಸುತ್ತಾರೆ. ಹಾಗೆಯೇ ಮಾರಾಟದ ಕಾಲಕ್ಕೆ ವಸ್ತುಗಳು ಚೆನ್ನಾಗಿದ್ದ ಮಾತ್ರಕ್ಕೆ ನಡೆಯುವದಿಲ್ಲ. ಅವು ಚೆನ್ನಾಗಿ ಕಾಣುತ್ತವೋ ಇಲ್ಲವೋ ಎಂಬುದನ್ನೂ ಅವರು ವಿಚಾರಿಸುತ್ತಾರೆ. ಕೊಳ್ಳುವವರು ಮತ್ತು ಮಾರುವವರು ಈ ಪ್ರಕಾರದ ಸೂಚನೆಗಳನ್ನು ಕಾರ್ಯಾಲಯದವರಿಗೆ ಮಾಡದಿದ್ದರೆ ಅವರು ನಿರುಪಯೋಗವೆಂದೇ ನಿರ್ಣಯಿಸಲ್ಪಡುತ್ತಾರೆ.

೧೯೧೭ನೆಯ ಇಸವಿಯಲ್ಲಿ ಊಲವರ್ಥ ಕಂಪನಿಯವರು ಒಂದು ವಿಶಿಷ್ಟ ಪ್ರಕಾರದ ಕಾಗದವನ್ನು ಮಾಡಿದರು. ಅದಕ್ಕೆ 'Fifth Avenue Linen' ಎಂಬ ಹೆಸರು. ಅದರ ಸುಣುವು ಆವರ ಸೌಂದರ್ಯ ಇವುಗಳ ಪ್ರಸಿದ್ಧಿಯಾದುದರಿಂದ ಒಂದೇ ವರುಷದಲ್ಲಿ ೨| ಕೋಟಿ ಕಾಗದದ ಗಂಟುಗಳು ಮಾರಲ್ಪಟ್ಟವು. ಅನ್ಯರು ಅದರಂತೆ ಮಾಡ ಹೋದರೂ ಸಾಧ್ಯವಾಗಲಿಲ್ಲ. ಈ ಭಂಡಾರದಲ್ಲಿ ೪-೫ ಸಾವಿರ ಭಿನ್ನ ಭಿನ್ನ ಪದಾರ್ಥಗಳು ದೊರೆಯುತ್ತಿದ್ದರೂ ಆವುಗಳಿಗೆಲ್ಲ ಇದೇ ಪ್ರಕಾರವಾಗಿ ಲಕ್ಷವು ಪೂರೈಸಲ್ಪಡುತ್ತಿದೆ. ಇದು ಬೋಧಪ್ರದವಾಗಿಲ್ಲವೇ?

ಮೋಟಾರು ಕಳ್ಳರು.

ಅಮೆರಿಕೆಯಲ್ಲಿ ಪ್ರತಿವರುಷ ೨೫ ಕೋಟಿ ರೂ. ಗಳ ಮೋಟಾರುಗಳು ಕಳವಾಗುತ್ತವಂತೆ. ಕಳೆದ ವರುಷ ಕಡೆಯ ೬ ತಿಂಗಳುಗಳಲ್ಲಿ ೭೨ ಪಟ್ಟಣಗಳಲ್ಲಿ ೩೬ ಸಾವಿರ ಮೋಟಾರುಗಳು ಕಳವಾದವು. ಅಂದರೆ ೬ ಮಿನಿಟಿಗೆ ೧ ಮೋಟಾರಿನಂತೆ ಕಳವಾಯಿತು, ಇವುಗಳನ್ನು ಕಳವು ಮಾಡುವವರ ಸಾಹಸ, ಬುದ್ಧಿ ಸುಳ್ಳು ಹೇಳು ವಿಕೆಗಳು ಆಕಥನೀಯವಾಗಿವೆ' ಅವುದೊಂದು ನೀಲೀ ಬಣ್ಣದ ಮೋಟಾರನ್ನು ಓಡಿಸಿಕೊಂಡು ಹೋಗುತ್ತಿರುವ ಕಳ್ಳರು ಹೋಗ ಹೋಗುತ್ತಲೇ ಅದರ ನಂಬರನ್ನು ಬದಲಿಸುವರು ಮತ್ತು ನಡೆಯಿಸುವ ಕಬ್ಬಿಣ ಗಾಲಿಯನ್ನು ತೆಗೆದು ಕಟ್ಟಿಗೆಯ ಗಾಲಿಯನ್ನು ಹಾಕುವರು. ನೀಲಿ ಬಣ್ಣದ ಮೇಲೆ ಹಚ್ಚಿದ ಕೂಡಲೇ ಅರುವ ಬಿಳಿ ಬಣ್ಣವನ್ನು ಹಚ್ಚಿ ಗುರುತು ತಪ್ಪಿಸುವರು. ೫ ನಿಮಿಷಗಳ ನಂತರವೇ ಪೋಲೀಸರು ಬೆನ್ನಟ್ಟಿದರೂ ಅವರಿಗೆ ಕಳವಿನಮೋಟಾರು ತಿಗಲಾರದು. ಇದಲ್ಲದೆ ಕೆಲವರು ಕೃತ್ರಿಮ ಮೋಟಾರ ಏಜನ್ಸಿ ಮಾಡಿಕೊಳ್ಳುವಿನ ಮೋಟಾರವನ್ನು ಮಾರುವವರೆಷ್ಟೋ. ಇನ್ನು ಕೆಲವರು ಹಳೆಯ ಮೋಟಾರು ತೆಗೆದುಕೊಂಡು ಸುಳ್ಳು ಹುಂಡಿಗಳನ್ನು ಕೊಟ್ಟು ಮೋಸಗೊಳಿಸುವವರೆಷ್ಟೋ.

ಇನ್ನೊಂದು ಮಾತು. ಅಮೇರಿಕೆಯಲ್ಲಿ ಸ್ತ್ರೀಪುರುಷರಿಲ್ಲ, ಬಾಲಬಾಲಕಿಯರು ಸಹ, ದೇಶದವರೆಲ್ಲರೂ ಒಂದೇ ಕ್ಷಣಕ್ಕೆ ಒಬ್ಬರೊಂದೊಂದು ಮೋಟಾರಿನಲ್ಲಿ ಪ್ರವಾಸ ಮಾಡಬಹುದಾದಷ್ಟು ಮೋಟಾರುಗಳಿದ್ದರೂ ಇಂಥ ಭಯಂಕರ ಕಳವುಗಳೇಕೆ?

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! ಬರೇ ೬ ತಾಸುಗಳಲ್ಲಿಯೇ ಗುಣ!!

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಲೆ ಜನರು ಸಾಯುತ್ತಿರುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುತ್ತದೆ. ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಆರೇ ತಾಸುಗಳಲ್ಲಿಯೇ ಪ್ರಾಣಾ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಪಾಪಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನೇಕಾನೇಕ ಪತ್ರಿಕೆಗಳಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೆನ್ನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮೆತ್ನಿ ಆಯುರ್ವೇದದ ಪುರಾತನ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಆದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬಬ್ಬರಿಗೆ ಸಾಲುವಷ್ಟು ಔಷಧವನ್ನು ಜೋಪಾನವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಸಣದ ಅಡಚಣೆಯ ಈ ಕಷ್ಟಕಾಲದಲ್ಲಿ ಬಡಬಗ್ಗರಿಗೆ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಣ್ಯಾತ್ಮರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಿಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ. ವ್ಹೀ. ಪಿ. ಚಾರ್ಜ ಬೇರೆ.
ಅನುಮಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ತೀವ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.

ನಾರ ಸಂಹಾರಿ.

ಹೊಸ ಶೋಧ! ಅದ್ಭುತ ಚಮತ್ಕಾರ!!

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ಘಾಸಿಗಳಲ್ಲಿಯೇ ಭಯಂಕರ ಯಾತನೆಯನ್ನನುಭವಿಸುತ್ತಿರುವ ಮನುಷ್ಯನು ಹುಲಿಯ ಬಾಯಿಂದ ಉಳಿದ ಬಕರಿಯಂತೆ ಆನಂದಿಭರಿತನಾಗುವನು. ಮತ್ತು ಮುಂದೆ ಒಂದೆರಡ ದಿನಸಗಳಲ್ಲಿಯೇ ಆತನಿಗೆ ನಾರು ಭಯಂಕರವಾದ ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣದಿಂದ ಆನಂದಿತರಾಗಿ ಬಾಳಬಾರದೇ? ತೀವ್ರವೇ ಇದರ ಲಾಭವನ್ನು ತೊಂದಿ ಸುಖಿಗಳಾಗಿರಿ.

ನಾರಿ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮಾತ್ರ ಸಾದು ಹಾಲ್ಮೆನ ಮಲಾಮಿನ ಗುಳಿಗೆಗೆ ೧ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ್,
ಗುಲಬರ್ಗಾ.

ಮಾರಿಕಾ ಸಂಜೀವಿನಿ.

ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!!

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಿರಿ. ದಿವ್ಯ ವನಸ್ಪತಿಯು ಮಹಾ ತಪಶ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇಸಾರಿ ತೆಗೆದು ಕೊಂಡರೆ ಸಾಕು ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆತ್ಯಾಶ್ಚರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ. ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ

ಕ್ರಯ ೧ ರೂ. ೫ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ್
ಗುಲಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ . .. . ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವ ಗುವಂತೆ ಕಡಿಮೆ ಮಾಡಿದ ಸಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ **ಈ** ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ **ಈ** ತರದ ರೋಗಗಳಿಗೆ ನಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ ಸಿ ತುಮ್ಮಿನಕಟ್ಟಿ**, ಎಂ. ಎಸ್‌ಸಿ., **ಪಿಎಚ್. ಡಿ.** ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಶ್ಚಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಯುರ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಪ್ರಾತ್ಯಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಜೇಕಪ್ಪು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಅದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಅದುದರಿಂದ ನಿರಾಕೆಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯವೂ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೀ ೧ ರೂಪಾಯಿ!

--೧೦೦೦--

ನೀಲೀ ಮುಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಕತ್ತುಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಲಿ.
ತಾ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The

Sharana Sandesh.

ನ್ಯಾಯಸಿಂಹಂ| ದಾಕ್ಷಿಣ್ಯಾಪಗನಾಸಲ್ಲ| ಲೋಕವಿರೋಧಿ| ಶರಣನಾರಾಧಿಗೂ ಅಂಜುವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೩. | ಆಲಮಟ್ಟಿ- ಸೋಮವಾರ ತಾರೀಖು ೨೩ ನೆಯ ಎಪ್ರಿಲ್ ೧೯೩೪. | ಸಂಚಿಕೆ೩

ಜನಸೇವೆಯೇ ದೇವರಸೇ.

ಬಸವೇಶನ ಮಹತ್ಕಾರ್ಯ.

ಶರಣವರೇಣ್ಯರಾದ

ಮಾಚಿದೇವರ ಸತ್ಯ ವಚನ.

ಮಾಚಿ ದೇವರು

"ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ। ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು। ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ।

ಆಯತವು ಬಸವಣ್ಣನಿಂದ, ಸ್ವಾಯತವು ಬಸವಣ್ಣನಿಂದ, ಸನ್ನಿಹಿತವು ಬಸವಣ್ಣನಿಂದ, ಗುರುವು ಬಸವಣ್ಣನಿಂದ, ಲಿಂಗವು ಬಸವಣ್ಣನಿಂದ, ಜಂಗಮವು ಬಸವಣ್ಣನಿಂದ, ಪಾದೋದಕವು ಬಸವಣ್ಣನಿಂದ, ಪ್ರಸಾದವು ಬಸವಣ್ಣನಿಂದ. ಅತ್ತ ಬಲ್ಲರೆ ನೀವು ಹೇಳಿರೆ, ಇತ್ತ ಬಲ್ಲರೆ ನೀವು ಕೇಳಿರೆ, ಬಸವ ಬಸವ ಬಸವ ಮಜ್ಜನಕ್ಕೆರೆಯುದವನ ಭಕ್ತಿ ಶೂನ್ಯ ಕಾಣಾ ಕಲಿದೇವರ ದೇವ.''

ದೇಹವೇ ದೇವಾಲಯ.

SANGAM CLOTH STORES
Prop: M. S Hundekar & Sons,
P.O: TERDAL - 587 315

ಕಳಪುಳ್ಳುವ ಮೊದಲು.

ಎಚ್ಚರಾಗಿರಿ!



ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಒ ಎ. ಎಂ. ದಿನಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರನತ್ತಿ
ಬ್ರದರ್ಸ, ಡಾವಣಗೇರಿ.
ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಕ್ಕೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಛಲಾವರಿವಾ, ಇದಕ ನ್ಹೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದೆ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತವ್ವಾ ರಾಮಜಿ, ಗಟ್ಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

ಬಸವ ಸಪ್ತಾಹ ಪ್ರಾರಂಭವಾಗಲಿ.

ಮಹಾನುಭಾವರಾದ ಶ್ರೀ ಬಸವಣ್ಣನವರ ಜಯಂತಿಯು ಕಳೆದ ಇಪ್ಪತ್ತು ವರುಷಗಳಿಂದ ವೀರಶೈವ ಸಮಾಜದಲ್ಲಿ ದಿನೇ ದಿನೇ ಹೆಚ್ಚಿನ ಸ್ಥಿತಿಯಲ್ಲಿಯೇ ನಡೆಯುತ್ತ ಬಂದಿದೆಯಷ್ಟೆ. ಇದರಿಂದ ಆ ಮಹಾನುಭಾವನ ವಿಷಯವಾಗಿ ಜನರಲ್ಲಿ ಎಷ್ಟೋ ವಿಚಾರ ಕ್ರಾಂತಿಯಾಗಿದೆ. ನಿಷ್ಪಕ್ಷವಾತಿಗಳಾದ ಅನ್ಯ ಮತೀಯ ವಿದ್ವಾಂಸರು ಕೂಡಾ ಬಸವೇಶನ ಅದ್ವಿತೀಯ ಆತ್ಮ ಶಕ್ತಿಯನ್ನು ಸ್ತುತಿಸುತ್ತಿದ್ದಾರೆ. ಆ ಮಹಾತ್ಮನ ಅನೇಕ ದಿವ್ಯ ವಚನಗಳು ಬಹುಜನರ ಮುಖದಲ್ಲಿ ಬೆಳಗುತ್ತಿವೆ. ಇವೆಲ್ಲವುಗಳಿಗೆ ಬಸವಜಯಂತಿಯ ಉತ್ಸವವೂ ಬಹು ಮಟ್ಟಿಗೆ ಕಾರಣವಾಗಿದೆ.

ಬಸವೇಶನನ್ನು ಸರಿಯಾಗಿ ತಿಳಿದುಕೊಳ್ಳುವ ಕಾರ್ಯವು ಇನ್ನೂ ಅತ್ಯಲ್ಪವಾಗಿಯೇ ಆಗಿದೆ. ಬಸವೇಶನು ಮಹಾ ಪುರುಷನೆಂಬುದು ಮಾತ್ರ ತಿಳಿದಂತಾಗಿದೆಯೇ ವಿನಾ ಎಲ್ಲರೂ ಮಹಾ ಪುರುಷರಾಗಲು ಬಸವೇಶನು ಬೋಧಿಸಿದುದೇನೆಂಬುದು ಇನ್ನೂ ನಮಗೆ ಸರಿಯಾಗಿ ತಿಳಿದಿಲ್ಲ. ಎಂದಮೇಲೆ ನಡೆಯಲ್ಲಿ ಬರುವುದೆಂತು? ಆದಕಾರಣ ಬಸವೇಶನು ಲೋಕಕ್ಕೆ ಬೋಧಿಸಿದ ದಿವ್ಯ ಮಾರ್ಗವನ್ನು ಮೊದಲು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಇದೇ ಬಸವ ಜಯಂತಿಯನ್ನು ಮಾಡುವುದರ ಉದ್ದೇಶ. ಮತ್ತು ಮಾಡಿದ್ದರ ಮೊದಲನೆಯ ಫಲ. ಮೊದಲು ಸರಿಯಾಗಿ ತಿಳಿದರಲ್ಲವೇ ಅನಂತರ ನಡೆಯಲ್ಲಿ ಬರುವುದು?

ಈ ಮಹತ್ಕಾರ್ಯವು ವರುಷದಲ್ಲಿ ಒಂದು ದಿನ ಮಾತ್ರ ಜಯಂತಿಯನ್ನಾಚರಿಸಿದರಾಗುವುದು ಶಕ್ಯವಿಲ್ಲ. ಆ ಒಂದು ದಿನವಾದರೂ ಉತ್ಸವ, ಆರಾಧನೆ ಮೊದಲಾದವುಗಳಲ್ಲಿಯೇ ಕಳೆದು ಹೋಗುವುದು ಹೆಚ್ಚು. ಎಂದ ಮೇಲೆ ಬಸವೇಶನ ದಿವ್ಯೋಪದೇಶಗಳು ಸರಿಯಾಗಿ ತಿಳಿಯುವುದು ಹೇಗೆ? ತಿಳಿಯದಿದ್ದ ಮೇಲೆ ಆಚರಣೆಯಲ್ಲಿ ಬರುವುದೆಂತು? ಈ ಪ್ರಕಾರ ಬಸವೇಶನ ವಿಚಾರ ಆಚಾರಗಳು ನಮ್ಮಲ್ಲಿ ನೆಲೆಸಲು ಅನುಕೂಲವಿಲ್ಲದ ಜಯಂತ್ಯುತ್ಸವವು ಎಷ್ಟು ವರುಷ ಎಷ್ಟು ವೈಭವದಿಂದ ನಡೆದರೇನು? ನೋಡಲು ರಂಜನೆಯಾಯಿತೇ ವಿನಾ ಸುಖಶಾಂತಿಗಳ ಧರ್ಮ ಜೀವನಕ್ಕೇನೂ ಫಲವಾಗಲಿಲ್ಲ.

ಆದುದರಿಂದ ಇನ್ನು ಮೇಲೆ ಬಸವ ಸಪ್ತಾಹವನ್ನು ಪ್ರಾರಂಭಿಸಬೇಕು. ಹೇಗೆ ರಾಮ ಸಪ್ತಾಹ, ರಾಷ್ಟ್ರೀಯ ಸಪ್ತಾಹ ಮೊದಲಾದ ಧಾರ್ಮಿಕ ಮತ್ತು ರಾಷ್ಟ್ರೀಯ ಸಪ್ತಾಹಗಳು ನಡೆಯುತ್ತಲಿವೆಯೋ ಹಾಗೆಯೇ ಬಸವಸಪ್ತಾಹವೂ ನಡೆಯಬೇಕು. ವರುಷದಲ್ಲಿ ಒಂದು ವಾರವನ್ನಾದರೂ ಆ ಬಸವ ಮಹಾನುಭಾವನ ತತ್ವಗಳನ್ನು ತಿಳಿದುಕೊಳ್ಳಲಿಕ್ಕೂ ಪ್ರಸಾರಗೊಳಿಸಲಿಕ್ಕೂ ಪ್ರಯತ್ನಿಸಬೇಕು. ಏಳು ದಿನಗಳನ್ನು ಈ ಪುಣ್ಯ ಕಾರ್ಯಕ್ಕೆ ಕಾದಿಟ್ಟರೆ ಬೇರೆ ಬೇರೆ ವಿದ್ವಾಂಸರನ್ನು ಕರೆಯಿಸಿ ಬಸವೇಶನ ನಡೆನುಡಿಗಳನ್ನು ತಿಳಿದುಕೊಳ್ಳಲಿಕ್ಕೂ ಅನುಕೂಲವಾಗುತ್ತದೆ. ಈಗ ಒಂದೇ ದಿನವಿರುವುದರಿಂದ ಅನೇಕ ಮಹಾಶಯರ ವಿಚಾರಗಳು ಬಹುಜನರಿಗೆ ಬೇರೆಬೇರೆ ಸ್ಥಳಗಳಲ್ಲಿ ತಿಳಿಯಲು ಅನುಕೂಲವಾಗುವುದಿಲ್ಲ.

ಸಪ್ತಾಹದ ಕಾರ್ಯಕ್ರಮ.

ಈ ವರುಷ ನಿಜ ವೈಶಾಖ ಶುದ್ಧ ೨ ಮಂಗಳವಾರ (ತಾ. ೧೫-೫-೩೪) ಕ್ಕೆ ಬಸವಜಯಂತಿಯಿದೆಯಷ್ಟೆ. ಅಂದಿಗೆ ಒಂದು ವಾರವಾಗುವಂತೆ ಅಧಿಕ ವೈಶಾಖ ಬ. ೧೦ (ತಾ. ೯-೫-೩೪) ಬುಧವಾರದಿಂದ ಬಸವ ಸಪ್ತಾಹ ವ್ಯಾರಂಭವಾಗಬೇಕು.

ಈ ಏಳು ದಿವಸ ಪ್ರತಿನಿತ್ಯ ಪ್ರಾತಃಕಾಲ ನಗರ ಸಂಕೀರ್ತನೆಯಾಗಬೇಕು. ಬಸವೇಶನ ಉದಾತ್ತ ತತ್ವಗಳನ್ನೊಳಕೊಂಡ ಪದ್ಯಗಳನ್ನು ಆ ನಗರ ಸಂಕೀರ್ತನೆಯ ಕಾಲಕ್ಕೆ ಹೇಳುವಾದಲ್ಲದೆ ಗ್ರಾಮದ ಮುಖ್ಯ ಮುಖ್ಯ ಸ್ಥಳಗಳಲ್ಲಿ ನಿಂತು ಆ ಸಂಕೀರ್ತನೆಯನ್ನು ಪ್ರತಿದಿವಸವೂ ಬಸವೇಶನ ದಿವ್ಯವಾದ ನೈತಿಕ ಮತ್ತು ಸಮಭಾವನೆಯ ವಚನಗಳನ್ನು ಅರ್ಥಸಹಿತವಾಗಿ ಹೇಳಬೇಕು. ಈ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಹೆಚ್ಚಾಗಿ ಕೂಡಿಸಬೇಕು.

ಈ ನಗರ ಕೀರ್ತನೆಗೆ ಹೋಗುವಾಗ ಕೆಲವರು ದೊಡ್ಡಕ್ಷರಗಳಲ್ಲಿ ಬರೆದ ಆ ಬಸವೇಶನ ದಿವ್ಯ ವಚನಗಳ ಪಟಗಳನ್ನು ಹಿಡಿದುಕೊಂಡಿರಬೇಕು. ಈ ವಿಧವಾದ ನಗರ ಸಂಕೀರ್ತನೆಯು ಜನಜಾಗೃತಿಗೂ ವಿಚಾರ ಕ್ರಾಂತಿಗೂ ಎಷ್ಟೋ ಸಹಾಯವಾಗುತ್ತದೆ.

ಪ್ರಾತಃಕಾಲ ೮ ಗಂಟೆಯೊಳಗಾಗಿ ಈ ಕಾರ್ಯ ಪೂರೈಸಿ ಪ್ರತಿನಿತ್ಯ ಸಾಯಂಕಾಲ ಬಸವೇಶನ ತತ್ವಗಳ ವಿಷಯವಾಗಿ ವಾಖ್ಯಾನಗಳನ್ನು ಮಾಡಿಸಬೇಕು.

ಈ ಪವಿತ್ರ ಸಪ್ತಾಹದಲ್ಲಿ ವೀರಶೈವ ಒಳಪಂಗಡಗಳ ಏಕೀಕರಣ, ಬಳಕೆಯಲ್ಲಿರದ ವೀರಶೈವ ಸದಾಚಾರ ಶೀಲರಿಗೆ ದೀಕ್ಷೆ, ಈ ಮತಕ್ಕೆ ಬರಲಪೇಕ್ಷಿಸುವ ಸದಾಚಾರಶೀಲರಿಗೆ ಲಿಂಗಧಾರಣೆ ಮೊದಲಾದ ಧಾರ್ಮಿಕ ಕಾರ್ಯಗಳು ನಡೆಯಬೇಕು.

ಆರಾಧನೆ, ಉತ್ಸವ ಮೊದಲಾದವುಗಳಿಗೆ ಹಣವನ್ನು ಹೆಚ್ಚು ವೆಚ್ಚ ಮಾಡದೆ ಬಸವೇಶನ ವಚನ ಪ್ರಸಾರ, ಆತನ ದಿವ್ಯ ಜೀವನ ದೇಶಗಳನ್ನು ತಿಳಿಸುವ ಮಹಾಶಯರನ್ನು ಕರೆಯಿಸುವ ಕಾರ್ಯ ಮೊದಲಾದವುಗಳಿಗೇನೇ ಹಣವನ್ನು ವೆಚ್ಚಮಾಡಬೇಕು.

ಈ ಕಾರ್ಯಗಳಿಗೆಲ್ಲಾ ಪ್ರತಿಯೊಂದು ಕಡೆ ಬಸವಜಯಂತಿಯ ಕಾರ್ಯಕಾರಿ ಮಂಡಲವು ಏರ್ಪಟ್ಟು ಆ ಮಂಡಲದವರು ಕ್ರಮವಾಗಿಯೂ ಶಾಂತತೆಯಿಂದಲೂ ಪರಿಣಾಮಕಾರಿಯಾಗುವಂತೆ ಕಾರ್ಯ ನಡೆಯಿಸಬೇಕು. ಈ ಪ್ರಕಾರ ಈ ಸಾರಿ ಬಸವ ಸಪ್ತಾಹ ಪ್ರಾರಂಭಿಸುವ ಬುದ್ಧಿಶಕ್ತಿಗಳನ್ನು ಆ ಬಸವೇಶನು ಸಕಲ ವೀರಶೈವರಿಗೂ ಅನುಗ್ರಹಿಸಲಿ.

—ಸಂಪಾದಕ.

—ಕೃತ್ರಿಮ ೫ ರೂಪಾಯಿಯ ನೋಟನ್ನು ಯಾರೋ ತಯಾರಿಸಿ ಮದ್ರಾಸಿನಲ್ಲಿ ಹೊರಡಿಸಿದ್ದಾರೆ. ಎಚ್ಚರಿಕೆಯಿಂದ ಪರೀಕ್ಷಿಸಿದರೆ ಇವು ಕೃತ್ರಿಮವೆಂದು ಕಂಡು ಹಿಡಿಯಬಹುದಂತೆ.

—ಗಾಂಧೀಜಿಯವರು ಒಬ್ಬ ಪತ್ರಿಕಾ ಪ್ರತಿನಿಧಿಗೆ ಉತ್ತರ ಕೊಡುವಾಗ ಸರದಾರ ಪಟೇಲ ಮತ್ತು ಪಂಡಿತ ಜವಾಹರಲಾಲರವರು ಇಲ್ಲದೆ ನಡೆಯುವ ತೀರ್ಮಾನಗಳೆಲ್ಲಾ ಅಪೂರ್ಣವಾದವುಗಳೇ ಸರಿಯೆಂದು ಹೇಳಿದರು.

—ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಮೇ ತಿಂಗಳ ೨ನೆಯ ತಾರೀಖಿನ ದಿನ ರಾಂಚಿಯಲ್ಲಿ ಕೂಡುವುದು.

ಹಿಂದು ತರುಣಿಯರು
ಮುಸಲ್ಮಾನ ತರುಣರ ಬೆನ್ನು ಹತ್ತುವುದೇಕೆ?
ಇನ್ನಾದರೀಕೃತಿಗೆ ಹೇಸಬಾರದೆ?

ಪಂಜುಸ್ಥಾನದ ವಾಯವ್ಯ ಗಡಿನಾಡು, ಆಸಾಂ, ಪೂರ್ವ ಬಂಗಾಲ ಮೊದಲಾದ ಭಾಗಗಳಲ್ಲಿ ಹಿಂದು ಯುವತಿಯರನ್ನು ಎತ್ತಿ ಕೊಂಡು ಹೋಗುವುದು ಹೆಚ್ಚಾಗಿದೆ. ಅನೇಕ ಹಿಂದು ತರುಣಿಯರು ಮುಸಲ್ಮಾನ್ ತರುಣರ ಬೆನ್ನು ಹತ್ತಿ ತಾವೇ ಹೋಗುವುದೂ ಉಂಟು.

ಕಳೆದ ಗುರುವಿನ ತಾರೀಖಿನ ದಿನ ತಾಂಬರಂ ಎಂಬ ಸ್ಟೇಶನ್ನಿನಲ್ಲಿ ಅಹಮ್ಮದ ಸಾಹೇಬ ಎಂಬ ತರುಣನ ಬೆನ್ನು ಹತ್ತಿ ನಾಗಮ್ಮ ಎಂಬ ೧೮ ವರುಷಗಳ ತರುಣಿಯು ಹೋಗುತ್ತಿದ್ದ ಅತ್ಯಂತ ವಿಷಾದ ಕರವಾದ ಸಂಗತಿಯನ್ನು ಬೇರೆ ಕಡೆ ಇದೇ ಪತ್ರಿಕೆಯಲ್ಲಿ ಕೊಟ್ಟಿದೆ.

ಬಾಲ್ಯವಿವಾಹದಿಂದ ವಿಧವೆಯರಾದ ಆ ನಮ್ಮ ತಂಗಿಯರಿಗೆ ಪುನರ್ವಿವಾಹಕ್ಕೆ ಅವಕಾಶ ಕೊಡದೆ ಅವರಿಗೆ ಬಲಾತ್ಕಾರವಾಗಿ ಸನ್ಯಾಸ ದೀಕ್ಷೆಯನ್ನು ಕೊಟ್ಟರೆ ಮುಸಲ್ಮಾನ್ ತರುಣರ ಬೆನ್ನು ಹತ್ತಿ ಹೋಗದೇನು ಮಾಡುವರು? ಬ್ರಹ್ಮಚರ್ಯ ವ್ರತವು ಐಚ್ಛಿಕ ವಿಷಯವೇ ವಿನಾ ಮನುಷ್ಯನು ಆಚರಿಸಲೇಬೇಕಾದ ಅವಶ್ಯಕ ವಿಷಯವೇನೂ ಅಲ್ಲ.

ಪರಧರ್ಮದವರ ಮತ್ತು ಪರದೇಶದವರ ಸಹವಾಸ ಸಂಬಂಧಗಳಿಲ್ಲದ ಮತ್ತು ಈಗಿನಂತೆ ಆಚಾರವಿಚಾರಗಳಿಗೆ ಸ್ವಾತಂತ್ರ್ಯವಿಲ್ಲದ ಒಂದು ಕಾಲದಲ್ಲಾವ ನಿಯಮಗಳನ್ನೇ ಈಗಲೂ ಅನುಸರಿಸಿ ಅನರ್ಥಕ್ಕೀಡಾಗುತ್ತಿರುವ ನಮ್ಮ ಜನರ ಅಜ್ಞಾನವನ್ನು ನೋಡಿ ಆಧುನಿಕ ಪ್ರಪಂಚವು ನಗುವದಿಲ್ಲವೆ?

ಅನ್ಯಾಯವಾದ ಮತ್ತು ಅಧರ್ಮವಾದ ಅನೇಕ ಸಾಮಾಜಿಕ ದೋಷಗಳಿಂದ ಹಿಂದು ಜನಾಂಗವು ಬೆಂದು ಬೆಂಡಾಗುತ್ತಲಿದೆ. ಜನ್ಮದ ಮೇಲುಕೀಳುಗಳೆಂಬ ಹೀನ ವಿಚಾರಗಳಿಂದ ನಮ್ಮ ಅಸಂಖ್ಯ ಧರ್ಮ ಬಾಂಧವರನ್ನು ಕೀಳಾಗಿ ಕಾಣುತ್ತಿದ್ದ ಕಾರಣ ಅವರು ಪರ ಧರ್ಮಗಳಲ್ಲಿ ಸೇರುತ್ತಿದ್ದಾರೆ. ಬಾಲ್ಯ ವಿವಾಹ ವೃದ್ಧ ವಿವಾಹ ಮೊದಲಾದ ಅನಾಚಾರಗಳಿಂದ ಹಿಂದು ಜನಾಂಗದ ಅನೇಕ ತರುಣಿಯರು ಪರಧರ್ಮಗಳ ತುತ್ತಾಗುತ್ತಿದ್ದಾರೆ. ಇನ್ನಾದರೂ ಈ ಕೇಳು ನಡತೆಗಳ ವಿಷಯವಾಗಿ ಹೇಸಿಗೆಯುಂಟಾಗದಿದ್ದುದು ಆಶ್ಚರ್ಯವಲ್ಲವೆ?

ಹಿಂದುಗಳ ಸ್ವಾಭಿಮಾನ ಉಳಿಯಿತೆ? ಹಿಂದು ಧರ್ಮದ ದಿವ್ಯ ಜ್ಯೋತಿ ಸೊರಿದಿತೆ? ಹಿಂದುಗಳ ವಿಸ್ತೀರ್ಣವೆ ನಷ್ಟವಾಯಿತೆ? ಇವೆಲ್ಲವೂ ಯಾವುದೋ ಕಾಲದಲ್ಲಿ ಯಾರೋ ಬರೆದ ಶ್ಲೋಕಗಳಿಗೆ ಆಹುತಿಯಾದವೆ? ನಮ್ಮ ತಂಗಿಯರು ನಾವು ಈ ವೈಧವ್ಯದಿಂದ ಬಳಲಲಿ ಪರಧರ್ಮಗಳ ತರುಣರನ್ನು ಬೆನ್ನುಹತ್ತಿ ಹೋಗತ್ತಿದ್ದೇನೆಂದು ಹೇಳುತ್ತ ಹೋಗುತ್ತಿರುವುದನ್ನು ನೋಡಿ ನಮ್ಮ ಕಣ್ಣಿನಲ್ಲಿ ನೀರಲ್ಲ, ರಕ್ತವೇ ಸುರಿಯಬೇಕು. ಆ ದೀನ ಸ್ಥಿತಿ ಕೇಳಿ ನಮ್ಮ ಕವಿಯಲ್ಲಿ ಕಾಸಿದ ಸೀಸವನ್ನು ಹೊಯ್ದಂತಾಗಬೇಕು. ಆದೀಗ ನಮ್ಮ ಸ್ವಾಭಿಮಾನ, ನಮ್ಮ ಧರ್ಮಾಭಿಮಾನಗಳೆಲ್ಲವೆ?

ಬಾಲ್ಯವಿವಾಹವು ಅತ್ಯಂತ ನಿಂದ್ಯವಾದುದು. ಪ್ರೌಢವಿವಾಹವೇ ಈ ಕಾಲದಲ್ಲಿ ಅತ್ಯಾವಶ್ಯಕ. ವಿಧವಾ ವಿವಾಹಕ್ಕೆ ಯಾವ ಪ್ರತಿಬಂಧವೂ ಇರಬಾರದು. ವಿಧವೆಯರಿಗೆಲ್ಲಾ ಬಲಾತ್ಕಾರದಿಂದ ಲಗ್ನ ಮಾಡಬೇಕೆಂದು ನಮ್ಮ ಅಭಿಪ್ರಾಯವಲ್ಲ. ಆದರೆ ವಿಧವೆಯರೆಲ್ಲರೂ ಬ್ರಹ್ಮಚರ್ಯದಿಂದಲೇ ಇರಬೇಕೆಂದು ಮಾತ್ರ ಬಲಾತ್ಕಾರ ಪಡಿಸಿ ಹೀಗೆ ಅವರು ಪರಧರ್ಮಗಳ ವಶವಾಗುವಂತೆ ಮಾಡಬಾರದು.

ಆಹಾರ ಸೇವಿಸದೆ ನೀರನ್ನೇ ಕುಡಿದು ಜೀವಿಸೆಂದಾಗಲಿ, ಅಥವಾ ದಿವಸಕ್ಕೆ ಒಂದೇ ತಾಸು ನಿದ್ದೆ ಮಾಡೆಂದಾಗಲಿ ಇಲ್ಲವೆ ಕಾಲಲ್ಲಿ ಸರ್ಪವನ್ನು ಬಿಟ್ಟಿದ್ದೇನೆ ಅಂಜಲೇಬೇಡೆಂದಾಗಲಿ ಯಾರಿಗಾದರೂ ನಾವು ಒತ್ತಾಯ ಮಾಡುವುದು ನ್ಯಾಯವೆ? ಅದು ಧರ್ಮವೆ? ಆಹಾರ, ನಿದ್ರೆ ಮತ್ತು ಭಯಗಳು ಹೇಗೆ ಪ್ರಾಣಿಯ ಸ್ವಭಾವವಾಗಿವೆಯೋ ಹಾಗೆಯೇ ವೈಧವ್ಯನೂವ ನೀವು ಹೇಳುವ ಶಾಸ್ತ್ರದಲ್ಲಿಯೇ ಮನುಷ್ಯನ ಸ್ವಭಾವವೆಂದೇ ಹೇಳಿಲ್ಲವೆ?

ಮನುಷ್ಯನು ಆಹಾರ, ನಿದ್ರೆ ಭಯಗಳ ವಿಷಯದಲ್ಲಿ ತನ್ನ ಇಚ್ಛಾನುಸಾರ ಹೇಗೆ ನಿಗ್ರಹಿಯಾಗುವುದು ಆತನಿಗೆ ಸಂಬಂಧಿಸಿದೆಯೋ ಹಾಗೆಯೇ ಆ ಬ್ರಹ್ಮಚರ್ಯದ ನಿಗ್ರಹವೂ ಪ್ರತಿಯೊಂದು ವ್ಯಕ್ತಿಯ ಐಚ್ಛಿಕ ವಿಷಯವಾಗಿದೆ. ಲಗ್ನವು ಅದನ್ನು ಕ್ರಮಗೊಳಿಸುವಲ್ಲಿ ಸರ್ವಸಮ್ಮತವಾದ ಒಂದು ನಿಯಮವು. ಅದನ್ನು ನಿಮಿತ್ತ ಮಾತ್ರವಾಗಿ ಮಾಡಿ ಆಯುಷ್ಯವನ್ನೆಲ್ಲಾ ಬ್ರಹ್ಮಚರ್ಯ ವ್ರತದಲ್ಲಿಯೇ ಕಳೆಯುವಂತೆ ಎಲ್ಲ ವಿಧವೆಯರನ್ನೂ ಬಲಾತ್ಕರಿಸುವುದು ಎಲ್ಲಿಯ ನ್ಯಾಯ? ಅಂತಹ ವಿವಾಹಗಳು ನಿಜವಾದ ವಿವಾಹಗಳೇ ಆಗುವ ಪಕ್ಷದಲ್ಲಿ ಕಟ್ಟಿಗೆಯ ಗೊಂಬೆಗೇಕೆ ತಮ್ಮ ಮಕ್ಕಳನ್ನು ಕೊಟ್ಟು ಲಗ್ನಮಾಡಬಾರದು?

ಈಗಲಾದರೂ ಪುರಾಣ ಮತವಾದಿಗಳು ಎಚ್ಚತ್ತು ಧರ್ಮದ ಹೆಸರಿನಿಂದ ನಡೆದಿರುವ ಬಾಲ್ಯ ವಿವಾಹ, ಜರಠ ವಿವಾಹ, ವಿಧವಾ ವಿವಾಹ ಪ್ರತಿಬಂಧ ಮೊದಲಾದ ಅಧರ್ಮ ನಡತೆಗಳನ್ನು ಬಿಟ್ಟು ಬಿಡಬೇಕು. ಹಿಂದು ಧರ್ಮವನ್ನು ರಕ್ಷಿಸಬೇಕೆಂಬ ಯುವಕರು ಬಾಲ ವಿಧವೆಯರಲ್ಲಿ ಯಾರು ವಿವಾಹಕ್ಕೆ ಸಿದ್ಧರಿರುವರೋ ಅವರನ್ನೇ ವಿವಾಹವಾಗಬೇಕು. ಇಂತಹ ವಿಧವಾ ವಿವಾಹವೇ ಈ ಕಾಲದಲ್ಲಿ ಪರಮಪವಿತ್ರವಾದ ವಿವಾಹವೆಂದು ಭಾವಿಸಬೇಕು. ಹೀಗೆ ಮಾಡಿದ ವಿನಾ ನಮ್ಮ ಅಸಂಖ್ಯ ತಂಗಿಯರ ಕಣ್ಣೀರು ನಿಲ್ಲುವುದಿಲ್ಲ. ಅನೇಕ ತಂಗಿಯರು ಪರಧರ್ಮದವರ ಬಲೆಯಲ್ಲಿ ಬೀಳುವುದೂ ತಪ್ಪುವದಿಲ್ಲ. ಹಿಂದುಗಳ ಮಾನ ಹಾನಿ ಮತ್ತು ಧರ್ಮಹಾನಿಗಳಾಗದೆ ಹೋಗುವುದಿಲ್ಲ.

—ಶ್ರೀ. ಸ್ವರೂಪರಾಣಿ ನೆಹರು ಇವರ ಎದೆಯಲ್ಲಿ ನೋಯುವದನ್ನು ಡಾ. ಬಿಧನಚಂದ್ರ ರಾಯ ಇವರು ಕ್ಷ ಕಿರಣಗಳಿಂದ ಶೋಧಿಸಿದರು. ಶ್ರೀ. ಕಮಲಾನೆಹರುರವರು ಅಲಿಪುರ ಕಾರಾಗೃಹದಲ್ಲಿ ಪಂ. ಜವಾಹಿರಲಾಲರಿಗೆ ಭೆಟ್ಟಿಯಾದರು.

—ನಿಜಾಮ ಸಾಹೇಬರು ತಮ್ಮ ಯುವರಾಜನನ್ನು ತಮ್ಮ ಸೈನ್ಯದ ಸೇನಾಪತಿಯನ್ನಾಗಿ ಬಹುಮಾನಾರ್ಥವಾಗಿ ನಿಯಮಿಸಿದ್ದಾರೆ.

ವೀರಶೈವ ವಾದಭೂಮಿ.

'ವರ್ಗ' ಶಬ್ದಕ್ಕೆ ಯಾವ ಅರ್ಥ?

ಈ ಪತ್ರಿಕೆಯ ಕಳೆದ ೯ನೆಯ ತಾರೀಖಿನ ಸಂಚಿಕೆಯಲ್ಲಿ ಶ್ರೀ. ಮಲ್ಲಭದ್ರಪ್ಪನವರು ಮತ್ತು ಶ್ರೀ ಹತ್ತಿಬಸವದಾಸರು ಬರೆದ ಲೇಖನಗಳು ಪ್ರಕಟವಾಗಿನೆಯಸ್ಟೆ. ವೀರಶೈವ ಪಂಡಿತ ಮಂಡಲಿಯವರು ವೀರಶೈವರಲ್ಲಿ ಗುರುವರ್ಗವೆಂತಲೂ ಭಕ್ತ ವರ್ಗವೆಂತಲೂ ಎರಡು ವರ್ಗಗಳವೆಯೆಂದು ತೀರ್ಮಾನಿಸಿರುವುದು ಶ್ರೀ ಮಲ್ಲಭದ್ರಪ್ಪನವರು ಖಂಡಿಸಿದ್ದಾರೆ. ಶ್ರೀ. ಬಸವದಾಸರಾದರೋ ವೀರಶೈವರಲ್ಲಿ ಜಾತಿಗಳಿಲ್ಲ; ಭಕ್ತ ಮತ್ತು ಮಾಹೇಶ್ವರ ಎಂಬೆರಡು ವರ್ಗಗಳವೆಯೆಂದು ಹೇಳಿದ್ದಾರೆ.

ವೀರಶೈವರಲ್ಲಿ ಬ್ರಾಹ್ಮಣಾದಿ ನಾಲ್ಕು ಜಾತಿಗಳಿವೆಯೆಂದು ಕೆಲವರು ಹೇಳುತ್ತಿದ್ದಾರೆ. ಈ ಮಹಾಶಯರು ವರ್ಗ ಶಬ್ದಕ್ಕೆ ಯಾವ ಅರ್ಥವನ್ನು ಹೇಳುತ್ತಿದ್ದಾರೆ? ವರ್ಗ ಶಬ್ದವು ಮುಖ್ಯವಾಗಿ ಜಾತಿವಾಚಕವಾಗಿಯು ಮತ್ತು ತರಗತಿಯ ಅರ್ಥದಲ್ಲಿಯು ಉಪಯೋಗಿಸಲ್ಪಡುತ್ತಲಿದೆ. ಇವುಗಳಲ್ಲಿ ಯಾವ ಅರ್ಥವು ಇವರಿಗೆ ಮಾನ್ಯ?

ವನೌಷಧಿ ವರ್ಗ, ಮನುಷ್ಯವರ್ಗ ಈ ಮೊದಲಾದ ಅನೇಕ ಶಬ್ದ ಪ್ರಯೋಗಗಳನ್ನು ನೋಡಿದರೆ ವರ್ಗ ಶಬ್ದವು ಜಾತಿವಾಚಕವಾಗಿದ್ದಂತೆ ಸ್ಪಷ್ಟ ತೋರುತ್ತದೆ.

ಉತ್ತಮ ವರ್ಗ ಮಧ್ಯಮ ವರ್ಗಗಳೆಂದು ಅನೇಕ ಸಂದರ್ಭಗಳಲ್ಲಿ ವರ್ಗ ಶಬ್ದವನ್ನು ತರಗತಿಯ ಅರ್ಥದಲ್ಲಿಯೂ ಉಪಯೋಗಿಸುತ್ತಿದ್ದಾರೆ. ಭಕ್ತ ಮತ್ತು ಗುರುಗಳೆಂಬವರು ಈ ಪ್ರಕಾರ ಎರಡು ತರಗತಿಯವರೆಂಬರ್ಥದಲ್ಲಿ ಇವರು ಈ ವರ್ಗ ಶಬ್ದವನ್ನುಪಯೋಗಿಸಿರುವರೆ? ಈ ಅರ್ಥದಲ್ಲಾದರೆ ಎಷ್ಟೋ ಉತ್ತಮ. ವೀರಶೈವರಲ್ಲಿ ಈ ಪ್ರಕಾರ ಎರಡೇ ವರ್ಗಗಳಿಲ್ಲ ಭಕ್ತ, ಗುರು, ಜಂಗಮ ಅಥವಾ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಮೂರು ವರ್ಗಗಳವೆ. ಇವು ಕ್ರಿಯಾಭೇದದಿಂದಿರುವವೇ ವಿನಾ ಜನ್ಮದಿಂದಲ್ಲ. ಒಂದನೆಯ ವರ್ಗದ ವಿದ್ಯಾರ್ಥಿಯು ಶನ್ನ ವಿದ್ಯಾಬಲದಿಂದ ಹೇಗೆ ಎರಡು ಮೂರು ಮುಂತಾದ ಮುಂದಣ ವರ್ಗಗಳಿಗೆ ಹೋಗುತ್ತಿದ್ದಾನೆಯೋ ಹಾಗೆಯೇ ಶಿವಭಕ್ತಿ, ಜ್ಞಾನ ಕ್ರಿಯಾದಿಗಳ ಹೆಚ್ಚುವಿಕೆಯಿಂದ ಭಕ್ತನೇ ಗುರು ಮತ್ತು ಜಂಗಮ ವರ್ಗಗಳಿಗೆ ಹೋಗುತ್ತಿದ್ದಾನೆ. ಇದೇ ವೀರಶೈವ ನಿಜ ಸಿದ್ಧಾಂತ.

ಪ್ರಮಥ ವಿರೋಧಿಗಳು ನಾಲ್ಕು ಜಾತಿಗಳಲ್ಲಿ ಭಕ್ತ ಮತ್ತು ಗುರು ಎಂಬೆರಡೇ ಭಾಗಗಳನ್ನು ಮಾಡಿ ನಿರಾಭಾರಿ ಅಥವಾ ಜಂಗಮ ಇಲ್ಲವೆ ವಿರಕ್ತ ವರ್ಗವನ್ನೇ ವೀರಶೈವದಿಂದ ತೆಗೆದುಹಾಕಿ ಗುರುವರ್ಗವೇ ಗುರು ಮತ್ತು ಜಂಗಮವೆಂದು ಹೇಗೆ ಹೇಳುತ್ತಿದ್ದಾರೆಯೋ ಹಾಗೆಯೇ ಇವರೂ ವಿರಕ್ತವರ್ಗವನ್ನು ಬಿಡುವ ಪೂರ್ವ ಸಿದ್ಧತೆಗಾಗಿ ಹೀಗೆ ಎರಡು ಹೇಳಿರುವರೇ? ವರ್ಗ ಶಬ್ದವು ಜಾತಿವಾಚಕದಲ್ಲಿದ್ದರೆ ಅದು ಅನುಲ್ಲಂಘನೀಯವಾದ ಅರ್ಥವನ್ನು ಸೂಚಿಸುತ್ತದೆ. ತರಗತಿಯ ವಾಚಕವಾಗಿದ್ದರೆ ಉಲ್ಲಂಘನೀಯವಾದ ಅರ್ಥವನ್ನು ತೀಸುತ್ತದೆ. ಇವುಗಳಲ್ಲಿ ವರ್ಗ ಶಬ್ದಕ್ಕೆ ಯಾವ ಅರ್ಥವೆಂಬುದನ್ನು ದಯವಿಟ್ಟು ಸ್ಪಷ್ಟ ತಿಳಿಸಬೇಕಾಗಿ ಪಂಡಿತ ಮಂಡಲಿಯಲ್ಲಿ ಹೀಗೆ ತೀರ್ಮಾನ ಮಾಡಿದವರಿಗೂ, ಶ್ರೀ ಬಸವದಾಸರಿಗೂ ನಮ್ಮ ಪ್ರೇಮದ ವಿಜ್ಞಾಪನೆ.

ಬಸವಣ್ಣನವರು ಗದ್ದುಗೆಯ ಮೇಲೆ ಕುಳಿತು ಕರುಣ ಪ್ರಸಾದವನ್ನು ಕೊಟ್ಟದ್ದೆಲ್ಲಿದೆ? ಎಂದು ಶ್ರೀ ಬಸವದಾಸರು ಕೇಳಿದ್ದಾರೆ. ಬಸವಣ್ಣನವರ ಅಪಾರವಾದ ಭಕ್ತಿಯನ್ನು ಇವರು ಗುರು ಸ್ಥಳಕ್ಕೆ ಅಪಾತ್ರಂಗಾಗಿದ್ದುದರ ದ್ಯೋತಕವಾದುದಾಗಿ ಇವರು ತೀರ್ದುದು ತುಂಬಾ ವಿಷಾದದ ಸಂಗತಿ. ಇಷ್ಟೇ ಅಲ್ಲ; ಅನ್ನದಾನವನ್ನು ಹೀಗೆ ಅಸಮರ್ಥತೆಯ ದ್ಯೋತಕವಾಗಿ ತಿಳಿಯುವುದು ಅಜ್ಞಾನತೆಯ ಲಕ್ಷಣ.

ಗುರುಗಳಿಗೆ ಗುರುವಾದ ಆ ಬಸವೇಶನು ಭಕ್ತಿ ಸೇವೆಯಲ್ಲಿರುವುದನ್ನು ಜಗತ್ತಿಗೆ ತೋರಿಸಿದ್ದಾನೆ. ಆದರಿಂದ ಆತನನ್ನು ಭಕ್ತನೆಂಬ ಕಡಿಮೆ ವರ್ಗದವನನ್ನಾಗಿ ತಿಳಿಯಬಾರದು ಜಂಗಮೋತ್ತಮನಾದ ಚನ್ನಬಸವೇಶನಿಗೆ ಬಸವಣ್ಣನೇ ಲಿಂಗಧಾರಣ ಮಾಡಿಲ್ಲವೇ? ಆದುದರಿಂದಲೇ ''ಕೂಡಲ ಚನ್ನಸಂಗನೆಂಬ ಲಿಂಗವ ತೋರಿ ಬಸವಣ್ಣ ಗುರುವೇ ಶರಣು'' (ಶೂನ್ಯಸಂಪಾದನೆ ಪುಟ ೭೭) ಎಂದು ನಾನಾ ರೀತಿಯಾಗಿ ಆ ಬಸವ ಸ್ವಾಮಿಯನ್ನು ಚನ್ನಬಸವೇಶ ಸ್ತುತಿಸಿಲ್ಲವೇ?

ಲಿಂಗಧಾರಣೆ ಮತ್ತು ಗದ್ದುಗೆಯ ಮೇಲೆ ಕುಳಿತುಕೊಳ್ಳುವುದು, ಇವು ವಂಶದಿಂದಲೇ ಬರುತ್ತಿದ್ದರೆ ಬಸವೇಶನೇಕೆ ಲಿಂಗಧಾರಣ ಮಾಡಿ ಗುರುವಾದನು? ಮೊದಲು ಹೊಲೆಯರ ಜಾತಿಯಲ್ಲಿ ಹುಟ್ಟಿದ್ದರೂ ಅಪಾರವಾದ ಶಿವಭಕ್ತಿ, ಸದಾಚಾರಗಳಿಂದ ಶಿವನಾಮಯ್ಯನವರು ಎಲ್ಲ ಗುರು ಜಂಗಮರಿಗೆ ಗದ್ದುಗೆಯ ಮೇಲೆ ಕುಳಿತು ಪಾದೋದಕ ಪ್ರಸಾದಗಳನ್ನು ಕೊಡಲು ಹೇಗೆ ಸಮರ್ಥರಾದರು? ಆದಕಾರಣ ವೀರಶೈವರಲ್ಲಿ ಜನ್ಮ ಅಥವಾ ವಂಶದಿಂದ ವೆ ಲುಕೇಳುಗಳ ಯಾವ ವರ್ಗ ಅಥವಾ ಜಾತಿಭೇದಗಳೂ ಇಲ್ಲವೇ ಇಲ್ಲ ವೀರಶೈವರಲ್ಲಿ ನಾಲ್ಕು ಜಾತಿಗಳಿವೆಯೆಂಬುವವರು ನಾಲ್ಕಾಣೆ ವೀರಶೈವರಿಂತಲೂ ಜನ್ಮವಿಶಿಷ್ಟವಾದ ಎರಡು ಜಾತಿ ಅಥವಾ ವರ್ಗಗಳಿರುತ್ತವೆಂಬುವವರು ಎಂಟಾಣೆ ವೀರಶೈವರಿಂತಲೂ ಆ ಬಸವಾದಿ ಪ್ರಮಥರ ತತ್ವವೆಂಬ ಒರೆಗಲ್ಲಿಗೆ ಹಚ್ಚಿ ನೋಡಿದರೆ ಯಾವ ನಿಷ್ಪಕ್ಷಪಾತಿಗಾದರೂ ಸ್ಪಷ್ಟ ತಿಳಿಯದಿರಲಾರದು.

ಸಂಪಾದಕ.

—ಕಳೆದ ತಾ. ೧೫ನೆಯ ದಿವಸ ಕಲಘಟಗಿಯಲ್ಲಿ ಧಾರವಾಡ ಜನ ಸ್ತ್ರೀಪುರುಷರಿಗೆ ಹಿಂದು ಧರ್ಮ ದೀಕ್ಷೆ ಕೊಡುವ ಸಮಾರಂಭವು ಮೈಸೂರು ಬ್ರಹ್ಮಚರ್ಯಾಶ್ರಮದ ಕಾರ್ಯಕರ್ತರಿಂದ ಜರುಗಿತು. ಇವರೆಲ್ಲರೂ ಯಾವದೋ ಒಂದು ಕಾರಣದಿಂದ ಹಿಂದು ಧರ್ಮವನ್ನು ನಿರಾಕರಿಸಿ ಕ್ರಿಸ್ತ ಧರ್ಮವನ್ನು ಸ್ವೀಕರಿಸಿದವರಾಗಿದ್ದರು.





ಶಂ. ಶ. ೧೮೫೭ ನೆಯ ಅ. ವೈಶಾಖ ಶು ೯ ಸೋಮವಾರ.

ಅಸೆಂಬ್ಲಿಯ ಆಯುಷ್ಯ.

ಈಗಿನ ಲೆಜಿಸ್ಲೇಟಿವ್ ಅಸೆಂಬ್ಲಿಯ ಆಯುಷ್ಯವನ್ನು ಕುರಿತು ಭಾರತೀಯ ರಾಜಕಾರಣದ ಭವಿಷ್ಯವಾದಿಗಳು ನಾನಾ ಬಗೆಯಾಗಿ ಯೋಚಿಸುತ್ತಿದ್ದಾರೆ. ಸ್ವರಾಜ್ಯ ಪಂಗಡದ ಪುನರಾವ ತಾರದಿಂದ ಇದರ ಆಯುಷ್ಯವು ಸ್ವಲ್ಪ ಹೆಚ್ಚಬಹುದೆಂದು ಕೆಲವರ ಯೋಚನೆ. ಹಾಗೆ ಹೆಚ್ಚುವುದು ಸ್ವರಾಜ್ಯ ಪಂಗಡದ ಘನತೆಯ ದ್ಯೋತಕವಾದುದರಿಂದ ಈ ಮುಂಚೆ ಅನುಗ್ರಹ ಮಾಡಿದುದ ಕ್ಕಿಂತ ಹೆಚ್ಚು ಆಯುಷ್ಯವು ಇದಕ್ಕೆ ಬರುವುದಿಲ್ಲವೆಂದು ಕೆಲವರ ಊಹೆ.

ಅಸೆಂಬ್ಲಿಯ ಅಧ್ಯಕ್ಷರಾದ ಸರ್. ಷಣ್ಮುಖಂ ಚೆಟ್ಟಿಯವರು ಕಳೆದ ತಿಂಗಳಿನ ತಾರೀಖಿನ ದಿವಸ ಅಸೆಂಬ್ಲಿಯಲ್ಲಿ ಹೀಗೆ ಹೇಳಿದರು—

"ಲೆಜಿಸ್ಲೇಟಿವ್ ಅಸೆಂಬ್ಲಿಯನ್ನು ನಿಲ್ಲಿಸುವ ವಿಚಾರವಾಗಿ ಹಿಂದುಸ್ಥಾನ ಸರಕಾರದವರಿಗೂ ವಿಲಾಯತಿ ಸರಕಾರದವರಿಗೂ ಪತ್ರವ್ಯವಹಾರಗಳು ನಡೆದಿವೆ. ಈ ತಿಂಗಳ ಕೊನೆಯಲ್ಲಿ ಈ ಸಂಬಂಧವಾದ ನಿರ್ಣಯವು ಪ್ರಕಟ ಮಾಡಲ್ಪಡಬಹುದು."

ಈ ಸಂಗತಿಯು ಮೇಲಿಂದ ಈ ತಿಂಗಳ ಅಂತ್ಯದಲ್ಲಿ ಅಸೆಂಬ್ಲಿಯ ಆಯುಷ್ಯವು ಗೊತ್ತಾಗುವುದು. ಅನೇಕರು ಇದರ ಮುಂದಣ ಸ್ಥಿತಿಯ ಸಂಬಂಧವಾಗಿ ನಾನಾ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಸ್ವರಾಜ್ಯ ಪಕ್ಷದವರು ಬರುವ ತಿಂಗಳು ಮೊದಲನೆಯ ವಾರದಲ್ಲಿ ಗೊತ್ತು ಮಾಡುವ ಕಾರ್ಯಕ್ರಮವೇ ಮುಖ್ಯವಾದುದು.

ಬರುವ ನವಂಬರ್ ತಿಂಗಳಲ್ಲಿ ಅಸೆಂಬ್ಲಿಗೆ ಪುನರ್ಜನ್ಮ ಪ್ರಾಪ್ತ ವಾಗಲೆಂತಲೂ ಆಗ ಅದು ಸ್ವರಾಜ್ಯ ಪಕ್ಷದಿಂದ ಪೋಷಿತವಾಗಿ ರಾಷ್ಟ್ರಕ್ಕೆ ಪ್ರಯೋಜನವನ್ನುಂಟುಮಾಡಲೆಂತಲೂ ಅನೇಕರು ಹಾರೈಸುತ್ತಿದ್ದಾರೆ.

ಶ್ರೀ ರಂಭಾಪುರೀ ಮಹಾಸ್ವಾಮಿಗಳ ಬೆಂಗಳೂರು ಸ್ವಾಗತ ಸಂಘದ ಕರ್ತವ್ಯ.

(ಕಳೆಯ ಪುಟದಿಂದ ಬಂದುದು)

ಕ್ರಿ. ಶ. ೧೯೧೫ರಲ್ಲಿ ಕಾಶಿಯಲ್ಲಿ ಪಂಚಾಚಾರ್ಯರ ಸಮ್ಮೇಲನ ೧೯೧೯ರಲ್ಲಿ ಪಟ್ಟಚರಾಧಿಕಾರಿಗಳ ಸಮ್ಮೇಲನ ೧೯೩೦ರಲ್ಲಿ ಗುರುವಿರ್ಗೋತ್ತೇಜಕ ಸಂಘಗಳು ಸೇರಿ ಮಾಡಿದ ಕಾರ್ಯಗಳು ಈ ಸ್ವಾಗತ ಸಂಘದವರಿಗೆ ಗೊತ್ತಿಲ್ಲವೆ? ಇದೇ ಶ್ರೀಗಳು ಬಾಳೆಹಳ್ಳಿ ಪೀಠಕ್ಕೆ ಬಂದ ನಂತರವೇ ಉಜ್ಜಯಿನಿಯಲ್ಲಿ ಪಟ್ಟಚರಾಧಿಕಾರಿಗಳ ಸಭೆ ಸೇರಿದಾಗ ಶ್ರೀ ಕಾಶೀನಾಥ ಶಾಸ್ತ್ರಿಗಳು ಪಂಚಾಚಾರ್ಯರ ಮತ ಪ್ರಸಾರಕ್ಕೊಸ್ಕರ ಪಂಚಾಚಾರ್ಯ ಪ್ರಭಾ ಪತ್ರಿಕೆಯನ್ನು ಹೊರಡಿಸಲು ೫೫ ಸಾವಿರ ರೂ. ಗಳವರೆಗೆ ಕೂಡಿಸಿದುದು, ಪಂಚಾಚಾರ್ಯ ಪ್ರಭಾಪತ್ರಿಕೆಯು ಪಂಚಾಚಾರ್ಯರ ಮುಖಪತ್ರವಾಗಿರುವುದು, ಅದರಲ್ಲಿ ಬಸವಾದಿ ಪ್ರಮಥರನ್ನು ಕೇಳಲಸದಳವಾದ ರೀತಿಯಲ್ಲಿ ನಿಂದಿಸುತ್ತಿರುವುದು ಈ ಸಂಘದವರಿಗೆ ಗೊತ್ತೇ ಇಲ್ಲವೇ?

ಕತ್ತಿಯಿಂದ ಕೊಲೆ ಮಾಡುವವನಂತೆಯೇ ಕೊಲೆಮಾಡುವುದಕ್ಕೆ ಕತ್ತಿಯನ್ನು ತಂದುಕೊಡುವವನೂ ಅಪರಾಧಿಯೆಂದೇ ಈಗಿನ ರಾಜ ಶಾಸನಗಳನ್ವಯ ಈ ಸ್ವಾಗತ ಸಂಘದವರಿಗೆ ವಿವರಿಸಿ ಹೇಳಬೇಕೆ? ಬಸವಾದಿ ಪರಮ ಪೂಜ್ಯ ವಿಭೂತಿಗಳ ವಿಷಯ ವಾಗಿ ಲಕ್ಷಾಂತರ ಜನಗಳ ಹೃದಯದಲ್ಲಿರುವ ಭಕ್ತಿ ಭಾವನೆಗಳ ಕೊಲೆ ಮಾಡುವ ಘೋರ ಕಾರ್ಯವನ್ನು ಈ ಪಂಚಾಚಾರ್ಯರು ತಮ್ಮ ಹೆಸರಿನ ಪಂಚಾಚಾರ್ಯ ಪ್ರಭಾ ಪತ್ರಿಕೆಯಿಂದ ಅವ್ಯಾಹತ ವಾಗಿ ಮಾಡಿಸುತ್ತಿರುವುದು ರಾಜಕಾರಣ ಪ್ರವೀಣರಿಂದ ಕೂಡಿದ ಈ ಸ್ವಾಗತ ಸಂಘದವರಿಗೆ ಗೊತ್ತಿಲ್ಲವೆ?

ನಿದ್ದೆ ಹೋದವರನ್ನು ಎಚ್ಚರಗೊಳಿಸಬಹುದು. ಆದರೆ ನಿದ್ದೆ ಹೋದವರಂತೆ ನಟಿಸುವವರನ್ನು ಎಚ್ಚರಗೊಳಿಸುವುದು ಕಷ್ಟ ವಲ್ಲವೆ? ಸ್ವಾಗತ ಸಂಘವು ನಿದ್ದೆ ಹೋಗಿದ್ದಿತೇ? ಅಥವಾ ಹಾಗೆ ನಟಿಸುತ್ತಿದೆಯೇ? ಎಂಬಂಶವು ಈ ಮೇಲಣ ಎಲ್ಲ ಸಂಗತಿಗಳನ್ನು ಕುರಿತು ಸ್ವಾಗತ ಸಂಘದವರು ತಮ್ಮ ಮೇಲಿರುವ ಹೊಣೆಗಾರಿಕೆಯ ಪ್ರಕಾರ ಜಾಗ್ರತೆ ಸ್ಪಷ್ಟವಾಗಿ ಪ್ರಕಟಗೊಳಿಸುವುದರ ಮೇಲೆಯೇ ಅವಲಂಬಿಸಿದೆ.

ಭಕ್ತಿಯ ಬೆಳಕು.

ಶ್ರೀ ಬಸವ ಜಯಂತಿಯ ಕಾಣಿಕೆಯ ಈ ಪುಸ್ತಕವು ಮುದ್ರಿತವಾಗುತ್ತಲಿದೆ. ಈ ಮುಂಚೆ ಬರೆದ ಮಹಾಶಯರಿಗೆಲ್ಲರಿಗೂ ಮೇ ತಿಂಗಳ ಮೊದಲನೆಯ ತಾರೀಖಿನಿಂದ ಕಳುಹಿಸಲಾರಂಭವಾಗುವುದು. ಮೇ ಮೊದಲನೆಯ ವಾರದಲ್ಲಿಯೇ ಸಕಲರಿಗೂ ಮುಟ್ಟುವಂತೆ ತಪ್ಪದೆ ವ್ಯವಸ್ಥೆ ಮಾಡಲಾಗುವುದು. ಆದುದರಿಂದ ದಯವಿಟ್ಟು ಜಾಗ್ರತೆ ತಮ್ಮ ತಮ್ಮ ಹಣವನ್ನು ಈ ವರೆಗೂ ಕಳುಹಿಸದಿದ್ದವರು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಿಸಬೇಕಾಗಿ ಪ್ರಾರ್ಥನೆ.

ವ್ಯಾನೇಜರ.

—ಇದೇ ತಿಂಗಳು ೭ನೆಯ ತಾರೀಖಿನಿಂದ ಜೂನ್ ತಿಂಗಳ ಮೊದಲನೆಯ ತಾರೀಖಿನ ವರೆಗೆ ವೀರಶೈವ ವಿದ್ಯಾಲಯಕ್ಕೆ ಪದ್ಧತಿಯಂತೆ ಬೇಸಿಗೆ ವಿಶ್ರಾಂತಿ ಕೊಡಲಾಗಿದೆ.

ಸಹಾಯಾಧಿಪತಿ.

ಶ್ರೀ ರಂಭಾಪುರೀ ಮಹಾಸ್ವಾಮಿಗಳ

ಬೆಂಗಳೂರು ಸ್ವಾಗತ ಸಂಘದ ಕರ್ತವ್ಯ.

ಈ ಸಂಘದವರು ಶ್ರೀಯುತ ಕಂಬಿ ಶಿವಪ್ಪನವರಿಗೆ ತಾರೀಖು ೧೫-೪-೩೪ನೆಯ ದಿವಸ ಕೊಟ್ಟ ಬಹಿರಂಗವಾದ ಉತ್ತರದಲ್ಲಿ ಈ ಕೆಳಗಿನ ಸಂಗತಿಗಳಿವೆ.—

(೧) ನಿಮ್ಮ ಅರ್ಜಿಯಲ್ಲಿ ಕಾಣಿಸಿದ್ದ ಪ್ರಶ್ನೆಗಳು ಮತಸ್ಥಾಪನಾಚಾರ್ಯ ಶ್ರೀ ಗುರುವರ್ಗದವರಿಗೂ ವಿಶ್ವ ಶ್ರೀ ಮಹಾ ವಿರಕ್ತ ವಿಹಾಸ್ವಾಮಿಗಳವರಿಗೂ ತಲಾಂತರಗಳಿಂದ ಅನುಸರಿಸಿಕೊಂಡು ಬಂದ ಚರ್ಚಾಸ್ಪದವಾದ ವಿಷಯಗಳು.

(೨) ಇಂಥ ಚರ್ಚಾಸ್ಪದವೂ ಮತ್ತು ಸಾರ್ವಜನಿಕವೂ ಆದ ವಿಷಯಗಳಿಗೂ ಪ್ರಕೃತದಲ್ಲಿ ಜರುಗಿರುವ ಸ್ಥಳೀಯ ಸ್ವಾಗತ ಕಾರ್ಯಕ್ಕೂ ಯಾವ ಸಂಬಂಧವೂ ಇರಲಾರದು.

(೩) ಶ್ರೀ ಬಸವೇಶ್ವರರ ವಿಷಯದಲ್ಲಿ ನಿಮ್ಮ ಹಾಗೆಯೇ ನಮಗೂ ಪೂಜ್ಯ ಭಾವವುಂಟು. ಶ್ರೀ ರಂಭಾಪುರೀ ವಿಹಾ ಸ್ವಾಮಿಗಳವರು ಶ್ರೀ ಬಸವೇಶ್ವರರನ್ನು ನಿಂದನೆ ಮಾಡಿಕೊಂಡು ಬಂದಿರುತ್ತಾರೆಂಬ ಅಪಾದನೆಯನ್ನು ನಾವು ನಂಬಲಾರೆವು.''

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರಂತಹ ಕಾಲಜ್ಞಿತಿಯನ್ನರಿತ ಸುಶಿಕ್ಷಿತ ಪ್ರಮುಖರು ಒಂದು ಪಕ್ಷವನ್ನೇರ್ಪಡಿಸಿಕೊಂಡು ಹೀಗೆ ಪ್ರಕಟಿಸಿರುವುದರಿಂದ ಮಾತ್ರ ಈ ಸ್ವಾಗತ ಸಂಘದ ಕರ್ತವ್ಯವನ್ನು ಕುರಿತು ಪ್ರಸ್ತಾಪಿಸಬೇಕಾಯಿತು.

ಮೇಲಣ ಮೊದಲನೆಯ ಸಂಗತಿಯಿಂದ ಶ್ರೀ ಗುರುವರ್ಗದವರಿಗೂ ಶ್ರೀ ವಿರಕ್ತ ಸ್ವಾಮಿಗಳಿಗೂ ಮತಭೇದವುಂಟೆಂಬುದು ಸ್ವಾಗತ ಸಂಘದವರಿಗೆ ಗೊತ್ತಿದೆಯೆಂಬುದು ಸ್ಪಷ್ಟವಾಗುತ್ತದೆ. ಎಂದಮೇಲೆ ಸ್ವಾಗತ ಸಂಘದವರಿಗೆ ಉಭಯ ಮತಗಳಲ್ಲಿ ಯಾವುದು ಮಾನ್ಯ? ಈಗ ಇವರು ಬರಮಾಡಿಕೊಳ್ಳುವ ಸ್ವಾಮಿಗಳು ಗುರುವರ್ಗದ ಪ್ರಮುಖರಷ್ಟೆ? ಎಂದಮೇಲೆ ಅವರ ಮತವು ಈ ಸಂಘಕ್ಕೆ ಮಾನ್ಯವಿದ್ದುದರಿಂದಲೇ ಬರಮಾಡಿಕೊಳ್ಳುತ್ತಲಿದೆಯೆಂದು ಸ್ಪಷ್ಟವಾಗುವುದಿಲ್ಲವೆ?

ಶ್ರೀ ವಿರಕ್ತ ಸ್ವಾಮಿಗಳ ವಿಷಯವಾಗಿ ಪಂಚಾಚಾರ್ಯರು ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ಅವರು ೧೯೩೦ನೆಯ ಇಸವಿಯಿಂದ ಬೇರೆ ಬೇರೆ ಕಾಲಗಳಲ್ಲಿ ವ್ಯಕ್ತಗೊಳಿಸಿದ ಸಂಗತಿಗಳ ಒಂದು ಪ್ರಕಟನೆಯು ಈ ಮುಂಚೆಯೇ ಪ್ರಕಟವಾಗಿದೆಯಷ್ಟೆ. ಅದರಲ್ಲಿ ಹೀಗಿದೆ—

''ಧರ್ಮ ಶಾಸ್ತ್ರಾನುಸಾರವಾಗಿ ಆ ಗುರುವರ್ಗದವರ ಧರ್ಮಾಧಿಕಾರಕ್ಕೊಳಪಟ್ಟಿರುವ ಅಂಥ ಶಿಷ್ಯ ವರ್ಗದಲ್ಲಿ ಸೇರ್ಪಡೆಯಾದ ಉರುವಕೊಂಡೆ, ಗದಗ, ದುರ್ಗ, ಹುಬ್ಬಳ್ಳಿ, ಕೊಪ್ಪಳ, ಹಾನಗಲ್ಲ, ಚಿಕ್ಕಸೂಗೂರು, ನೇರಡಗಂಬ, ಗುಲ್ಬರ್ಗಾ, ಸೊಲ್ಲಾಪುರ, ಚಿತ್ರಿಗಿ, ಕಲ್ಯಾಣ, ಹಾಲ್ಕಿ, ಬೆಂಗಳೂರು, ಬಳ್ಳಾರಿ, ಬೀಳೂರು ಮೊದಲಾದ ಗ್ರಾಮಗಳ ಸನ್ಯಾಸಿಗಳು ಗುರುವರ್ಗದವರ ಅಧಿಕಾರಗಳನ್ನು ಅಕ್ರಮಿಸಬೇಕೆಂಬ ದುರುದ್ದೇಶದಿಂದ ಆ ಗುರುವರ್ಗದವರಲ್ಲಿ ಭಕ್ತಿಶೂನ್ಯರಾಗಿ ಶಿಷ್ಯತ್ವವಂ ದೂರೀಕರಿಸಿ ಮೋಸಗೊಳಿಸುತ್ತಾ ಡಾಂಭಿಕತನದಿಂದ ಸ್ವೇಚ್ಛಾವಿಹಾರಿಗಳಾಗಿರುವರೆಂಬುದು ಸರ್ವರಿಗೂ ವಿದಿತವಾಗಿದೆಯಷ್ಟೆ,''

ಈಗ ಬೆಂಗಳೂರಿಗೆ ಬರುವ ಸ್ವಾಮಿಗಳ ಬಾಳೆಹಳ್ಳಿ ಪೀಠದ ಒಪ್ಪಿಗೆಯೂ ಇದಕ್ಕಿದೆ. ನಂ. ೭೩. ತಾ. ೧೭-೧೨-೩೧ ಮುಕ್ಕಾಂ ಬಾಳೆಹೊನ್ನೂರು ದರ್ಬಾರಾಗಿ ಸಂಸ್ಥಾನ ಶ್ರೀ ವೀರಸಿಂಹಾಸನದ ಧೀಸಚಿವ ಎಸ್. ಕೆ. ಎಂ. ರುದ್ರಾರಾಧ್ಯ ಎಂಬುದಾಗಿ ಆ ಪ್ರಕಟನೆಯಲ್ಲಿ ಸ್ಪಷ್ಟವಾಗಿದೆ.

ವಿರಕ್ತ ಸ್ವಾಮಿಗಳು ಗುರುವರ್ಗದವರ ಶಿಷ್ಯರೆಂಬುದು ಈ ಸ್ವಾಗತ ಸಂಘಕ್ಕೆ ಮಾನ್ಯವಿದ್ದುದರಿಂದಲೇ ಹೀಗೆ ಹೇಳುವವರನ್ನು ಬರಮಾಡಿಕೊಳ್ಳುತ್ತಿದ್ದಾರೆಂದು ಜನರು ತಿಳಿದರೆ ಅದು ತಪ್ಪಾಗಲಾರದಷ್ಟೆ. ಅದಕಾರಣ ಈ ವಿಷಯದಲ್ಲಿ ಸ್ವಾಗತ ಸಂಘದವರು ಯಾವ ಅಭಿಪ್ರಾಯದವರೆಂಬುದನ್ನು ಪ್ರಸಿದ್ಧಗೊಳಿಸುವುದು ಇವರ ಮೊದಲನೆಯ ಕರ್ತವ್ಯವಲ್ಲವೆ?

ಮೇಲಣ ಎರಡನೆಯ ಸಂಗತಿಯಲ್ಲಿ ಈ ಉಭಯರ ಚರ್ಚಾಸ್ಪದವಾದ ವಿಷಯವು ಸಾರ್ವಜನಿಕವಾದುದೆಂದು ಸ್ವಾಗತ ಸಂಘವೇ ಹೇಳಿದೆ. ಆದರೆ ಇದು ಸ್ಥಳೀಯ ಸ್ವಾಗತ ಸಂಘಕ್ಕೆ ಸೇರಿದ್ದಲ್ಲವಂತೆ. ಈಗ ಶ್ರೀಗಳು ತಾವು ವೀರಶೈವ ಗುರುಗಳೆಂದೇ ಬರುತ್ತಿದ್ದಾರೆ. ಅವರನ್ನು ಬರಮಾಡಿಕೊಳ್ಳುವವರು ಬೆಂಗಳೂರು ವೀರಶೈವ ಸಮಾಜದವರೆಂದೇ ಹೇಳಿಕೊಳ್ಳುತ್ತಿದ್ದಾರೆ. ಬರುವವರು ತಮ್ಮ ವ್ಯಕ್ತಿಗತವಾದ ಸ್ಥಿತಿಯಲ್ಲಿ ಬರುವುದಿಲ್ಲ. ಕರೆದುಕೊಂಡು ಬರುವವರು ತಮ್ಮ ಇಷ್ಟಮಿತ್ರರೆಂದು ತಿಳಿದು ಕರೆತರುವುದಿಲ್ಲ. ಎಂದಮೇಲೆ ಶ್ರೀಗಳ ಈ ಬರುವಿಕೆಯು ವೀರಶೈವರಿಗೆ ಸಾರ್ವಜನಿಕವಲ್ಲದೆ 'ಖಾಸಗಿ' ಯಾದುದೆ? ರಾಜಕಾರಣ ಪ್ರವೀಣರಿಂದ ಕೂಡಿದ ಈ ಸ್ವಾಗತ ಸಂಘಕ್ಕೆ ಸಾರ್ವಜನಿಕನೆಂಬುದರ ಅರ್ಥವು ತಿಳಿದಿಲ್ಲವೆಂಬುದು ಹೇಳಲಿಕ್ಕಾಗುವುದೆ?

ಸ್ವಾಗತ ಸಂಘದವರು ಹೀಗೆ ಹೇಳಿ ಈ ವಿಷಯದಿಂದ ಪಾರಾಗುವ ಪ್ರಯತ್ನ ಮಾಡಿದುದನ್ನು ಮತ್ತು ಶ್ರೀ. ಕಂಬಿ ಶಿವಪ್ಪನವರಿಗೆ ಅವರಂತೆಯೇ ಬಸವೇಶ್ವರರ ವಿಷಯದಲ್ಲಿ ತಮಗೂ ಪೂಜ್ಯ ಭಾವವುಂಟೆಂದು ತಿಳಿಸಿದಂತೆ ಶ್ರೀ. ವಿರಕ್ತ ಸ್ವಾಮಿಗಳ ವಿಷಯದಲ್ಲಿ ಮಾತ್ರ ಆ ವಿಧವಾದ ಅಭಿಪ್ರಾಯ ವ್ಯಕ್ತಗೊಳಿಸದಿದ್ದುದನ್ನು ನೋಡಿದರೆ ಸ್ವಾಗತ ಸಂಘದವರು ಶ್ರೀ ವಿರಕ್ತ ಸ್ವಾಮಿಗಳ ವಿಷಯದಲ್ಲಿ ಗುರುವರ್ಗದವರಂತೆಯೇ ಅಭಿಪ್ರಾಯವುಳ್ಳವರಾಗಿದ್ದಾರೆಂದು ತಿಳಿಯಲವಕಾಶವಿದೆ. ಅದಕಾರಣ ಈ ಸಂಘದವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವುದು ಪ್ರಥಮ ಕರ್ತವ್ಯವಲ್ಲವೆ?

ಶ್ರೀ ರಂಭಾಪುರೀ ಸ್ವಾಮಿಗಳು ಶ್ರೀ ಬಸವೇಶ್ವರನನ್ನು ನಿಂದನೆ ಮಾಡಿಕೊಂಡು ಬಂದಿರುತ್ತಾರೆಂಬ ಅಪಾದನೆಯನ್ನು ನಾವು ನಂಬಲಾರೆವೆಂದು ಸ್ವಾಗತ ಸಂಘದವರು ಹೇಳಿರುವುದು ವಿಚಿತ್ರವಾದುದು. ವೀರಶೈವ ಸಮಾಜದಲ್ಲಿ ಕಳೆದ ೧೫ ವರುಷಗಳಿಂದ ಈ ಪಂಚಾಚಾರ್ಯರು ಶ್ರೀ ಬಸವಾದಿ ಪ್ರಮಥರ ವಿಷಯವಾಗಿ ಎಂಥ ಹೇಯವಾದ ಭಯಂಕರ ಚಟುವಟಿಕೆಯನ್ನು ಪ್ರಾರಂಭ ಮಾಡಿದ್ದಾರೆಂಬುದು ಇವರಿಗೆ ಗೊತ್ತೇ ಇಲ್ಲವೆ? ಅಷ್ಟು ಇವರು ಸಮಾಜದ ಸಂಗತಿಗಳಿಂದ ಅಲಿಪ್ತರಾಗಿದ್ದಾರೆಯೇ?

(೮ನೆಯ ಪುಟದ ೨ನೆಯ ಕಾಲಂನಿನ ಮುಂದುವರಿದುದು)

ವಿ ವಿ ಧ ವಿ ಷ ಯ

ಕುಹಕರ ಕುತಂತ್ರ

ಮೈಸೂರು ಸಂಸ್ಥಾನದಲ್ಲಿ ನರಸೀಪುರ ತಾಲೂಕು ಹ್ಯಾಕನೂರು ಎಂಬಲ್ಲಿ ಆದಿಜನರಲ್ಲಿಯೂ ಉಳಿದ ಹಿಂದುಗಳಲ್ಲಿಯೂ ಭಯಂಕರ ಹೊಡೆದಾಟವಾಯಿತು. ಇದಕ್ಕೆ ಕಾರಣವೆಂದರೆ ಇಬ್ಬರು ಆದಿಜನರು ಹೊನ್ನೂರಿನಿಂದ ಶವ್ಮ ಗ್ರಾಮದ ಕಡೆಗೆ ಬರುತ್ತಿರುವಾಗ ನೀರಡಿಸಿ ಬಾಯಾರಿಕೆಯ ಬಳಲಿಕೆಯಿಂದ ಹ್ಯಾಕನೂರು ಗ್ರಾಮದ ಸಾರ್ವಜನಿಕ ಕೆರೆಯಲ್ಲಿ ನೀರು ಕುಡಿದುದು. ಈ ಸಮಾಚಾರವು ಗ್ರಾಮದಲ್ಲಿ ತಿಳಿದ ಕೂಡಲೇ ಪಟೇಲ ಮಲ್ಲಯ್ಯನವರೂ, ಶಾನುಭೋಗ ನಾರಣಪ್ಪನವರೂ ಮತ್ತು ಗೌಡ ಪುಟ್ಟಬಸವಯ್ಯನವರೂ ಆ ಇಬ್ಬರನ್ನು ಹಿಡಿತರಿಸಿ ಚೆನ್ನಾಗಿ ಹೊಡಿಸಿದರು.

ಮೂರನೆಯ ದಿನ ಮೇಲ್ಜಾತಿಯವರೆಲ್ಲ ಒಂದಾಗಿ ಗೊಬ್ಬರವನ್ನು ತುಂಬುತ್ತಿದ್ದ ಆದಿಕರ್ನಾಟಕರ ಮೇಲೆ ಡೊಣ್ಣೆಗಳಿಂದ ಎರಿಬಿದ್ದು ಅಮಾನುಷವಾಗಿ ಹಿಂಸಿಸಿದರು. ಆಗ ಆದಿಕರ್ನಾಟಕರೆಲ್ಲ ಒಂದಾಗಿ ಡಿ. ಪೋಲೀಸ್ ಸುಪರಿಂಟೆಂಡೆಂಟರಿಗೆ ಮತ್ತು ಸ್ಥಳೀಯ ಪೋಲೀಸರಿಗೆ ಅರ್ಜಿಹಾಕಿಕೊಂಡರು. ಇದನ್ನು ಕೇಳಿ ರೊಚ್ಚಿಗೆದ್ದ ಈ ಮೇಲ್ಜಾತಿಯವರು ಒಟ್ಟುಗೂಡಿ ಆದಿಜನರ ಗುಡಿಸಲುಗಳಿಗೂ ಕಣ ಬಣಿವೆಗಳಿಗೂ ಬೆಂಕಿ ಹಚ್ಚಿ ಸುಟ್ಟು ಧ್ವಂಸ ಮಾಡಿದರು. ಆದಿಜನರು ಪುನಃ ಈ ಹಿಂಸೆಯನ್ನೆಲ್ಲ ವಿವರವಾಗಿ ಬರೆದು ಪೋಲೀಸರಿಗೆ ತಿಳಿಸಿರುವರು.

ಯಾವ ಸಂಸ್ಥಾನದಲ್ಲಿ ಶ್ರೀ ಜಗದ್ಗುರುಗಳಂಥ ಧರ್ಮಾಧಿಕಾರಿಗಳು ಆದಿಜನರನ್ನು ಉದ್ಧಾರ ಮಾಡಿರುವರೋ ಮತ್ತು ಯಾವ ಸಂಸ್ಥಾನದಲ್ಲಿ ರಾಜ್ಯಾಧಿಪತಿಗಳಾದ ಶ್ರೀಮನ್ಮಹಾರಾಜರವರು ಸಹ ಆದಿಜನರಿಗೆ ಬೆಂಬಲವಿಯುತ್ತಿರುವರೋ ಅಲ್ಲಿ ಅವನೊಬ್ಬ ಕುಹಕನ ಮಾತು ಕೇಳಿ ಊರ ಜನರು ಈ ಹಿಂಸೆ ಮಾಡಿದುದೆಂದರೆ ಬಹಳೇ ಅನ್ಯಾಯ. ಇದಕ್ಕಾಗಿ ಪ್ರಚಾರಕರು ಆ ಸ್ಥಳದಲ್ಲಿ ಅಸ್ಪೃಶ್ಯತಾ ನಿವಾರಣೆಯ ಮಹಾತ್ಮರ ದೈವೀ ಸಂದೇಶವನ್ನು ಪ್ರಸಾರ ಮಾಡುವರೋ?

ವೀರಬಾಲಾ ಹರನಾಮ ಕುಮಾರಿ.

ಲಾಲ ಸಿಂಗನು ಹೆಸರಾದ ಸುಲಿಗೆಗಾರನು. ಇವನು ಮೊದಲು ಸೈನ್ಯದಲ್ಲಿ ಕೆಲಸ ಮಾಡಿದವನು. ಕಳೆದ ಆಸೆಯ ತಾರೀಖಿನ ದಿವಸ ಚೌದರಿವಾಲಾ ಎಂಬ ಹಳ್ಳಿಯನ್ನು ತನ್ನ ಮೂವರು ಸಂಗಡಿಗರೊಡನೆ ನುಗ್ಗಿ ಸಂತು ಜಾಟ ಎಂಬವನ ಮನೆಗೆ ಕೊಳ್ಳಿ ಹೊಡೆದನು. ಸಂತುಸಿಂಗನ ಹೆಣ್ಣು ಮಕ್ಕಳು ಮತ್ತು ಸೊಸೆಯು ಅನೇಕಾಲಂಕಾರಗಳನ್ನಿಟ್ಟುಕೊಂಡಿದ್ದರಿಂದ ಅವನ್ನು ಅಪಹರಿಸಬೇಕೆಂದು ಲಾಲಸಿಂಗನ ಕಣ್ಣು ಇತ್ತು. ತಮ್ಮ ಮನೆ ಮುತ್ತಿದ ವರ್ತಮಾನ ತಿಳಿದು ಸಂತುಸಿಂಗನ ಕುಮಾರಿಯರು ನೆರೆಮನೆಯ ಗುರುಮುಖಸಿಂಗನ ಮನೆಯಲ್ಲಿ ಅಡಗಿಕೊಂಡರು. ಆದರೆ ಒಬ್ಬ ಕಳ್ಳನು ಪ್ರಯತ್ನಪಟ್ಟು ಸೊಸೆಯನ್ನು ಹಿಡಿದು ಅವಳ ಆಭರಣಗಳನ್ನೆಲ್ಲ ಅಪಹರಿಸಿದನು. ಕುಮಾರಿಯರು ನೆರೆಮನೆಯಲ್ಲಿರುವುದನ್ನು ತಿಳಿದು ಅವರೆಲ್ಲರು ಆ ಗುರುಮುಖಸಿಂಗನ ಮನೆ ನುಗ್ಗಿ ಅವನ ಮಗಳಾದ ಹರನಾಮ ಕುಮಾರಿಯನ್ನು ಹಿಡಿದರು. ಅಷ್ಟರಲ್ಲಿ ಆವಳ ತಮ್ಮನು ತಪ್ಪಿಸಿಕೊಂಡು ಹೋಗಿ ಹೊಲದಲ್ಲಿದ್ದ ತನ್ನ ತಂದೆಗೆ ಈ ಸುದ್ದಿಯನ್ನು ತಿಳಿಸಲು ಅವರು ನಾಲ್ಕೈದು ಜನರು ಬಂದರು. ಆದರೆ ಸುಲಿಗೆಗಾರರಲ್ಲಿ ಬಂದೂಕು ಬರ್ಚಿಗಳಿದ್ದುದರಿಂದ ತಾವು ಬಂದರೆ ತಮ್ಮ ಮಕ್ಕಳಿಗೆಲ್ಲಿ ಅಪಾಯ ಮಾಡುವರೊ ಎಂದು ಬರಲಿಲ್ಲ. ಅಷ್ಟರೊಳಗೆ ಹರನಾಮ ಕುಮಾರಿಯು ಮಿಂಚಿನಂತೆ ಅವರ ಕೈಯಿಂದ ಜಾರಿದವಳೇ ಒಬ್ಬ ಕಳ್ಳನ ಕೈಯಲ್ಲಿಯ ಬಂದೂಕನ್ನು ಕಸಿದುಕೊಂಡವಳೇ ಹತ್ತಿರದಲ್ಲಿದ್ದ ಮತ್ತೊಬ್ಬ ಕಳ್ಳನಮೇಲೆ ಗುಂಡು ಹಾರಿಸಿ ಕೊಂದಳು. ಇಷ್ಟರಲ್ಲಿ ಲಾಲಸಿಂಗನು ಒಳಮಾಳಿಗೆಯಲ್ಲಿ ಕುಳಿತು ಅಲ್ಲಿಂದಲೇ ಗುಂಡು ಸುರಿಸಿದನು. ಒಂದು ಆ ವೀರ ಕುಮಾರಿಯ ತೊಡೆಗೆ ಬಡಿಯಿತು. ಮತ್ತೊಂದು ಅವಳ ಎದೆಗೆ ತಾಗಿತು. ಇಷ್ಟಾದರೂ ಅವಳು ಅವೇಶದಿಂದ ಕೈಯಲ್ಲಿಯ ಒಂದು ಕಟ್ಟಿಗೆಯ ಮಣೆಯನ್ನು ಢಾಲು ಮಾಡಿಕೊಂಡು ಲಾಲಸಿಂಗನು ಕುತ್ತಿಗೆಯಲ್ಲಿ ಧರಿಸಿದ ಬಂಗಾರದ ಸರಪಳಿಯನ್ನು ಚಪಲತನದಿಂದ ಹಿಡಿದು ಶಿರುವಲು ವಿಸಿಹೊತ್ತ ಗಂಡಸಾದ ಆಂಥ ಕಳ್ಳನು ಸಹ ಬಿಕ್ಕ ಹತ್ತಿದನು. ಇಷ್ಟರಲ್ಲಿ ಹರನಾಮ ಕುಮಾರಿಯ ಅಣ್ಣನು ಹಾರಿಬಂದವನೇ ಕೊಡಲಿಯಿಂದ ಲಾಲಸಿಂಗನ ಶಿರಚ್ಛೇದ ಮಾಡಿದನು. ಉಳಿದ ಜನರೆಲ್ಲ ಕೂಡಿ ಇನ್ನುಳಿದ ಸುಲಿಗೆಗಾರರನ್ನು ಬಂಧಿಸಿದರು. ದುಃಖದ ಸಂಗತಿಯೆಂದರೆ ಆ ಕಳ್ಳರು ಗುಂಡಿನ ಮಳೆಗರೆಯಲು ಹರನಾಮ ಕುಮಾರಿಯ ಸಹಾಯಕ್ಕೆ ಬಂದ ಅವಳ ತಂದೆಗೂ ಗುಂಡು ಬಡಿದದ್ದರಿಂದ ಅವನು ತತ್ಕ್ಷಣವೇ ಸತ್ತನು.

ಪೋಲೀಸ ಸುಪರಿಂಟೆಂಡೆಂಟರು ಆ ವೀರ ಬಾಲೆಯನ್ನು ಬಹುವಾಗಿ ಮನ್ನಿಸಿ ಅವಳು ಉಪಚಾರ ಹೊಂದುವ ವೆಚ್ಚವನ್ನು ಸ್ವತಃ ಕೊಟ್ಟುದಲ್ಲದೆ ಅವಳ ಜೀವನಾಂಶವನ್ನೂ ಕೊಡಿಸಿರುವರು.

ಧನ್ಯ! ಹರನಾಮಕುಮಾರಿ ಧನ್ಯ! ಹಿಂದೂ ಸಮಾಜದಲ್ಲಿ ಇಂಥ ನಾರೀಮಣಿಗಳಿರುವುದು ಹಿಂದು ಮಾತೆಗೆ ಅದೆಷ್ಟು ಭೂಷಣವು! ನಮ್ಮ ಹಿಂದು ಭಗಿನಿಯರು ಈ ವೀರ ಬಾಲೆಯ ಸಾಹಸವನ್ನು ಕಣ್ಣಮುಂದಿಟ್ಟುಕೊಳ್ಳುವ ಹಾಗೆಯೇ ವಸ್ತ್ರಾಭರಣಗಳು ಸ್ತ್ರೀಯರ ಮಾನಪ್ರಾಣಗಳ ಭಯಂಕರ ಶತ್ರುಗಳೆಂಬುದನ್ನು ಮರೆಯಕೂಡದು.

ಕಡ್ಡಿಯಿಂದ ಗುಡ್ಡದಷ್ಟು ಹಾನಿ.

ಅಲಹಾಬಾದ ನಗರದ ಸುಪ್ರಸಿದ್ಧ ಸಭಾಮಂದಿರವಾದ 'ಮೇಯೋ ಹಾಲ್' ಭಸ್ಮೀ ಭೂತವಾಯಿತು.

ಭವಭಗೋಪುರದಲ್ಲಿ ಜೇನ್ನೊಣಗಳು ಗೂಡುಕಟ್ಟಿದ್ದವು. ಅವುಗಳನ್ನೋಡಿಸುವುದಕ್ಕಾಗಿ ಹಚ್ಚಿದ ದೊಂದಿಯನ್ನು ಹಿಡಿದುಕೊಂಡ ಕೂಲಿಯೊಬ್ಬನು ಗೋಪುರವನ್ನೇರಿದನು. ಏರುತ್ತಿರುವಾಗ ಗೋಪುರದ ಮರದ ಮುಚ್ಚಿಗೆಗೆ ಬೆಂಕಿ ತಾಕಿದುದು ಅವನಿಗೆ ಗೊತ್ತಾಗಲೇ ಇಲ್ಲ. ಬೆಂಕಿಯ ಜ್ವಾಲೆಯು ಬೀಸುತ್ತಿರುವ ಗಾಳಿಗೆ ಪ್ರಬಲವಾಯಿತು. 'ಮೇಯೋ ಹಾಲ್' ಸುಟ್ಟು ಹೋಯಿತು.

ಅಂದಮಾನ್ ದ್ವೀಪ ಸಂದರ್ಶನಾರ್ಥವಾಗಿ ಹೋಗಿದ್ದಾಗ ಕೈದಿಯಿಂದ ಕೊಲೆಮಾಡಲ್ಪಟ್ಟ ಲಾರ್ಡ ಮೇಯೋ ಎಂಬ ಇಂಡಿಯಾದ ಮಾಜಿ ವೈಸರಾಯಿಗಳ ಸ್ಮಾರಕಕ್ಕಾಗಿ ೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ ಭವನವಿದು. ಅಲಹಾಬಾದ ನಗರದಲ್ಲಿ ಯಾವ ಮಹಾಸಭೆ ನಡೆಯಬೇಕಾದರೂ ಈ ಭವನವೇ ಪ್ರಶಸ್ತ ಕೇಂದ್ರವಾಗಿತ್ತು.

ತಾನು ಮಾಡುವದೊಂದು ದೈವ ಮಾಡುವದಿನ್ನೊಂದು!

ಶಿವಮೊಗ್ಗ ದೊಂಬೆಯ ಪ್ರತಿಧ್ವನಿ!

"ಕಳೆದ ಅನೇಕ ತಿಂಗಳುಗಳಿಂದ ಶಿವಮೊಗ್ಗಾ ಶೆಸನ್ಸ ಕೋರ್ಟ್‌ನಲ್ಲಿ ನಡೆದ ಶಿವಮೊಗ್ಗಾ ದೊಂಬೆಯ ತೀರ್ಪು ೧೨ನೆಯ ತಾರೀಖಿಗೆ ಹೇಳಲ್ಪಟ್ಟತು. ಆ ಕಾಲಕ್ಕೆ ಶೆಸನ್ಸ ಜಜ್ ಮಿ. ಎಚ್. ಎಂ. ಕೃಷ್ಣ ಸ್ವಾಮಿ ಇವರು ಹೇಳಿದ ಮುಖ್ಯಾಂಶವೇನಂದರೆ—

"೬-೫-೩೩ನೆಯ ರಾತ್ರಿ ಶಿವಮೊಗ್ಗೆ ದೊಡ್ಡಪೇಟೆ ದೊಂಬೆಯಲ್ಲಿ ಕೆಲವು ಹಿಂದು ವರ್ತಕರ ಮನೆಗಳು ಸುಟ್ಟವು. ೩ ಜನ ಮುಸಲ್ಮಾನರಿಗೆ ವಿಪರೀತ ಗಾಯವಾದದ್ದಲ್ಲದೆ ಒಬ್ಬನ ಮರಣವೂ ಉಂಟಾಯಿತು. ಇದು ಹಿಂದು ಮುಸಲ್ಮಾನರ ದಸ್ತಗಿರಿ ಗರಡಿ ವ್ಯಾಜ್ಯಗಳಿಂದುತ್ಪನ್ನವಾಯಿತೆಂದು ಹೇಳುತ್ತಾರೆ. ಆದರೆ ಇದು ಸಂಯಾದ ಕಾರಣವೆಂದು ಹೇಳಲಾಗುವುದಿಲ್ಲ. ಚಟ್ನಿ ಶೀರೀಫನೆಂಬವನು ಆದಿನ ರಾತ್ರಿ ಹಿಂದುಗಳ ಮೇಲೆ ಹೀನವಾಗುವಂಥ ಗಜಲ ಪದವನ್ನು ಹೇಳಿದ್ದೇ ಅಲ್ಲಿ ನೆರೆದಿದ್ದ ಹಿಂದುಗಳಿಗೆ ಉದ್ರೇಕವುಂಟಾಗಿ ಕೈಗೆ ಕೈ ಹತ್ತಿ ಗಲಭೆಯಾಯಿತು.

ಸರಕಾರದ ಕಡೆಯ ವಕೀಲರು ಹಿಂದುಗಳಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಪೋಲೀಸರು ಸರಿಯಾದ ವ್ಯವಸ್ಥೆ ಮಾಡಲಿಲ್ಲವೆಂದು ಹೇಳುವದನ್ನು ನಂಬಲಾಗುವದಿಲ್ಲ. ಆದರೂ ಪೋಲೀಸರು ತಮಗೆ ಯಶ ಬರುವಷ್ಟು ಪ್ರಯತ್ನ ಮಾಡಿಲ್ಲ. ದೊಂಬೆಯಾದ ಬಸವಣ್ಣ ಜೌಕವು ಪೋಲೀಸ ಸ್ಥಾನದಿಂದ ೨ ಫರ್ಲಾಂಗ ಅಂತರದಲ್ಲಿದ್ದರೂ ದೊಂಬೆಯಾದುದು ಕಟ್ಟಳಿಗೂ ಅಧಿಕಾರಕ್ಕೂ ತಿರಸ್ಕಾರವನ್ನು ತೋರಿಸುತ್ತದೆ." ಬಂಧಿಸಲ್ಪಟ್ಟ ೪೪ ಜನ ಮುಸಲ್ಮಾನರಲ್ಲಿ ೪ ಜನರನ್ನು ಬಿಟ್ಟುಕೊಟ್ಟು ಉಳಿದವರಿಗೆ ೪ ವರುಷದಿಂದ ೧೫ ವರುಷಗಳವರೆಗೆ ಕಠಿಣ ಶಿಕ್ಷೆ ವಿಧಿಸಿರುವರು. ಹಿಂದುಗಳಲ್ಲಿ ೧೭ ಜನ ಬಂಧಿಸಲ್ಪಟ್ಟವರಲ್ಲಿ ೧೧ ಜನರನ್ನು ಬಿಟ್ಟುಕೊಟ್ಟು ಉಳಿದವರಿಗೆ ಕಠಿಣ ಶಿಕ್ಷೆ ವಿಧಿಸಲಾಯಿತು.

ಕೋಟ್ಯಾಧೀಶರ ಕೋಟಲೆ.

ಅಮೇರಿಕನ್ ಸರಕಾರಕ್ಕೆ ತಿಳಿಯದಂತೆ ತಲೆ ಮರೆಸಿಕೊಂಡು ಯುರೋಪಿಯನ್ ರಾಷ್ಟ್ರಗಳಲ್ಲಿ ಅಲೆದಾಡುತ್ತಿದ್ದ ಕೋಟ್ಯಾಧೀಶರಾದ ಸಾಮ್ಯುಅಲ್ ಇನ್‌ಸಲ್‌ರವರು ತುರ್ಕಿ ಸರಕಾರದಿಂದ ಅಮೇರಿಕಕ್ಕೆ ಕಳುಹಿಸಲ್ಪಟ್ಟರು.

ಈ ಮಹಾಶಯರು ಅಮೇರಿಕನ್ ಸರಕಾರಕ್ಕೆ ಕೋಟ್ಯಾಂತರ ಡಾಲರುಗಳ ಮೋಸ ಮಾಡಿದ್ದಾರೆ ಇವರೂ, ಇವರ ತಮ್ಮಂದಿರಾದ ಮಾರ್ಟಿನ್ ಎಂಬುವವರೂ ಸೇರಿ, ದೊಡ್ಡ ದೊಡ್ಡ ಕಂಪನಿಗಳನ್ನೂ, ಬ್ಯಾಂಕುಗಳನ್ನೂ ಸ್ಥಾಪಿಸಿದರು. ಕೋಟ್ಯಾಂತರ ದ್ರವ್ಯಗಳನ್ನು ಮುಳುಗಿಸಿದರು. ಒಂದು ದಿನ ಹೇಳದೇ ಕೇಳದೆ ಅಮೇರಿಕಾದ ಚಿಕಾಗೋ ನಗರದಿಂದ ಪರಾರಿಯಾದರು. ಇವರನ್ನು ಅರೆಸ್ಟ್ ಮಾಡಲಿಕ್ಕಾಗಿ ಅಮೇರಿಕನ್ ಸರಕಾರದ ವಾರಂಟು ಹೊರಟು ಬಹಳ ವರ್ಷಗಳಾದವು. ಇವರು ಇಂಥಲ್ಲಿಯೇ ಇದ್ದಾರೆಂದು ತಿಳಿಯದೇ ಹೋಗಿತ್ತು. ಪತ್ನಿ ಸನೇತರಾಗಿ, ಯುರೋಪಿನ ಮುಖ್ಯ ಪಟ್ಟಣಗಳಲ್ಲಿ ಇವರು ಹೆಸರು ಬದಲಾಯಿಸಿಕೊಂಡು ಸುಖ ಭೋಗ ಸುಖವಾಸಗಳನ್ನು ನಿರಾತಂಕವಾಗಿ ಅನುಭವಿಸಿದರು. ಇವರು ಗ್ರೀಸ್ ದೇಶದಲ್ಲಿದ್ದುದು ಅಮೇರಿಕನ್ ಸರಕಾರಕ್ಕೆ ತಿಳಿಯಿತು. ಅಮೇರಿಕನ್ ಸರಕಾರವು ಇವರನ್ನು ಕಳುಹಿಸಬೇಕೆಂದು ಗ್ರೀಕ್ ಸರಕಾರಕ್ಕೆ ವಿನಂತಿ ಮಾಡಿತು. ಇದನ್ನು ತಿಳಿದು, ಇನ್‌ಸಲ್ ದೊರೆಗಳು ಅಲ್ಲಿಂದ ತಲೆತಪ್ಪಿಸಿದರು. ತುರ್ಕಿಯ ಇಸ್ತಾಂಬೋಲಿನಲ್ಲಿ ತಲೆದೋರಿದರು. ತುರ್ಕಿ ಸರಕಾರವು ಅವರನ್ನೀಗ ನಿರ್ಬಂಧದಿಂದ ಅಮೇರಿಕಕ್ಕೆ ಸಾಗಿಸಿದೆ. ಅಮೇರಿಕಾ ತೀರಕ್ಕೆ ಕಾಲಿಟ್ಟ ಕೂಡಲೇ ಇನ್‌ಸಲ್ ದೊರೆಗಳಿಗೆ ಕಾರಾಗೃಹದ ಸ್ವಾಗತ ವಾಗುವುದು.

"ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು" ಎಂಬಂತೆ ಕೋಟ್ಯಾಧೀಶರಾದರೇನು? ಪೂರ್ವದ ಗುಣವೆಲ್ಲಿ ಹೋಗುವುದು?

ದುಷ್ಟ ರೂಢಿಯ ಕೆಟ್ಟ ಪರಿಣಾಮ!

೧೨ನೆಯ ತಾರೀಖಿನ ಮಧ್ಯಾಹ್ನ ತಾಂಬರಂ ರೇಲ್ವೆ ಬಂಡಿಯಲ್ಲಿ ಸೆಕಂಡ್ ಕ್ಲಾಸ್ ಬರ್ತಿಯಿಂದ ಅಹಮ್ಮದ್ ಸಾಹೇಬ ಎಂಬ ಯುವಕನೂ ನಾಗಮ್ಮ ಎಂಬ ೧೮ ವರ್ಷ ವಯಸ್ಸಿನ ಸುಂದರ ತರುಣಿಯೂ ಇಳಿದರು. ತಾರುಣ್ಯ ಭರಿತೆಯಾದ ಹಿಂದೂ ಸುಂದರಿಯೊಬ್ಬಳು ಮಹಮ್ಮದೀಯ ಯುವಕನನ್ನು ಹಿಂಬಾಲಿಸಿರುವದು ಜನಗಳಲ್ಲಿ ಸಂಶಯವನ್ನುಂಟುಮಾಡಿತು. ರೈಲ್ವೇ ಪೋಲೀಸರು ಆಗಂತುಕರಿಬ್ಬರನ್ನೂ ಸುತ್ತುವರಿದು, ಎಲ್ಲಿಂದ ಬಂದುದು? ಎಲ್ಲಿಗೆ ಹೋಗುವುದು? ಎಂಬುದಾಗಿ ಪ್ರಶ್ನಿಸಿದರು. ಅವರೊಡನೆ ಭಾರವಾದ ಒಂದು ಟ್ರಂಕ್ ಇತ್ತು. ಅದನ್ನು ತೆರೆದು ನೋಡಲಾಗಿ ೧೦೦೦ ರೂಪಾಯಿಗಳ ನಾಣ್ಯಗಳೂ, ೩೬೦ ರೂ. ಗಳ ನೋಟುಗಳೂ, ಸುಮಾರು ೫೦೦ ರೂಪಾಯಿ ಬೆಲೆಬಾಳುವ ಆಭರಣಗಳೂ ಸಿಕ್ಕವು. ಅಹಮ್ಮದ ಸಾಹೇಬರನ್ನು ಪ್ರಶ್ನಿಸಲಾಗಿ, ತಾನೂ ನಾಗಮ್ಮನೂ ಮದ್ರಾಸಿಗೆ ಸಮೀಪದ ಅರಂಬಾಕ್‌ಮಿನವರೆಂದೂ, ಪರಸ್ಪರ ಪ್ರೇಮ ಪ್ರಣಯಗಳು ವೃದ್ಧಿಗೊಂಡು, ತಾವಿಬ್ಬರೂ ಈಗ ಮಧುರಾಂತಕಮ್ಮಿಗೆ ಹೋಗಿ ಅಲ್ಲೇ ವಾಸವಾಗಿರುವುದಾಗಿಯೂ ಆತನು ಹೇಳಿದನು.

ನಾಗಮ್ಮನು ತನ್ನ ಕಥೆಯನ್ನು ಕೇಳಿದಳು. ತಾನೊಬ್ಬ ಅಬ್ಕಾರಿ ಇಲಾಖೆಯ ದೊಡ್ಡ ಅಧಿಕಾರಿಗಳ ಮಗಳೆಂದೂ, ತನ್ನನ್ನು ತಂದೆಯು ೫ ವರುಷ ವಯಸ್ಸಿನಲ್ಲೇ ಮದುವೆ ಮಾಡಿದ್ದನೆಂದೂ ತನ್ನ ಗಂಡನ್ಯಾರೆಂದು ತನಗಿನ್ನೂ ತಿಳಿದಿಲ್ಲವೆಂದೂ, ಈಗ ಎರಡು ವರುಷಗಳಿಂದಲೂ ತನಗೂ ಅಹಮ್ಮದನಿಗೂ ಪ್ರಣಯ ಸಂಬಂಧವುಂಟಾಯಿತೆಂದೂ, ತಮ್ಮೂರಿನಲ್ಲೇ ಇರುವುದು ಅಪಾಯಕರವಾದ್ದರಿಂದ ತಾವು ಮಧುರಾಂತಕಕ್ಕೆ ಹೊರಟಿರುವುದಾಗಿಯೂ ಆಕೆಯು ಹೇಳಿದಳು.

ಇದಲ್ಲವೇ ದುಷ್ಟರೂಢಿಯ ಕೆಟ್ಟ ಪರಿಣಾಮ!

ಕೇಳಿರಿ!

(೧) ಈಗ ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ಅಶಾಶ್ವತವಾದುದಾಗಿದೆ. ಆದರೆ ಆರ್ಥಿಕ ಸಂಪತ್ತಿಗಿಂತ ಹೃದಯದ ಸಂಪತ್ತೇ ಮೇಲಾದುದು.

ಹಾಲ್‌ಬ್ರೂಕ್ ಜಾಕ್ಸನ್.

(೨) ಮನುಷ್ಯನ ಶೀಲ ಗುಣ ಸ್ವಭಾವಗಳು ವಿಪತ್ತಿನ ಕಾಲದಲ್ಲಿಯೇ ಗೊತ್ತಾಗುವವು.

ಗೆಟೆ.

(೩) ಸಮಾಧಾನವೇ ಸಕಲ ಸುಖಗಳ ಮೂಲವು.

ಸಾದಿ.

(೪) ನೀವು ಎಷ್ಟು ಮುಪ್ಪಿನವರೆಂಬುದು ನಿಜವಾದ ಪ್ರಶ್ನೆಯಲ್ಲ. ನೀವು ಹೇಗೆ ಮುಪ್ಪಿನವರಾದಿರೆಂಬುದೇ ನಿಜವಾದ ಪ್ರಶ್ನೆಯು.

ಮೇರಿ ಡ್ರೈಸಲರ್.

(೫) ನಾವು ಸೇವಿಸುವ ಆಹಾರದ ಮೂರು ಭಾಗಗಳಲ್ಲಿ ಒಂದು ಭಾಗದಷ್ಟೆ ಪಾತ್ರವೇ ನಮ್ಮ ಜೀವನಕ್ಕೆ ಸಾಕು. ಉಳಿದ ಎರಡು ಭಾಗಗಳಿಂದಲೇ ಡಾಕ್ಟರರು ಜೀವಿಸುತ್ತಿದ್ದಾರೆ.

ರಾಯಲ್ ಕೋಪಲಂಡ್.

(೬) ನಾನೇನು ಮಾಡಿದರೂ ಜನರು ನನ್ನನ್ನು ನೋಡುವುದಿಲ್ಲವೆಂಬುದು ಗೊತ್ತಿದ್ದರೂ ಆಗ ಆತನು ಮಾಡುವ ಕಾರ್ಯಗಳಿಂದಲೇ ಆತನ ಯೋಗ್ಯತೆಯು ಗೊತ್ತಾಗುತ್ತದೆ.

ಥಾಮಸ್ ಕಾರ್ಲೆ.

(೭) ಯಾವ ಕಾರ್ಯವೂ ಕಠಿಣವಾದುದಲ್ಲ. ಅದರ ಬೇರೆ ಬೇರೆ ಭಾಗಗಳನ್ನು ವಿಂಗಡಿಸಿ ಮಾಡಿದ್ದಾದರೆ ಸುಲಭವಾಗಿ ಸಾಗುತ್ತದೆ.

ಹೆನ್ರಿ ಫೋರ್ಡ್

(೮) ಪುರುಷನ ಸ್ವರೂಪವನ್ನು ಇದ್ದುದಕ್ಕಿಂತ ದೊಡ್ಡದಾಗಿ ಮಾಡಿ ತೋರಿಸುವುದೆಂದರೆ ಸ್ತ್ರೀಯಳೆಂಬ ಕನ್ನಡಿ.

ವರ್ಜಿನಿಯ ಉಲ್ಫ್.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶುರನ್ಸ ಕಂಪನಿಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಆಕ್ಟಾನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

ತಿಂಗಳು		ಪಾಲಿಯ ಒಟ್ಟು ಕಿಮ್ಮತ್ತು.
ಜನವರಿ ೧೯೩೪		೩೫೦೦ ರೂ.
ಫೆಬ್ರುವರಿ	,,	೧೨೦೦೦ ರೂ.
ಮಾರ್ಚ	,,	೩೦೫೦೦ ರೂ.
	ಒಟ್ಟು.	೪೬೦೦೦ ರೂ.

ತಡಮಾಡಬೇಡಿರಿ, ಸ್ವರಾಜ್ಯ ಕಂಪನಿಯ ಜನನ ಮರಣದ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ ತಿಂಗಳಿಗೆ ೧೫೦೦ರಿಂದ ೧೫೦೦ರವರೆಗೆ ಕಮಿಶನ್ ಕೊಡಲಾಗುವದು.

Managing Agents.

ಪತ್ರಗಳ ಸಾರಾಂಶ

ಪ್ರಕಟನೆ.

ನಿಜಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜಿಗೆ ಪದ್ಮಶಿಯ ಪುರಸ್ಕಾರವಾಗಿ ೧೯೩೪ ಇಸ್ವಿ ಎಪ್ರೇಲ ತಾ. ೧೭ ರಿಂದ ಮೇ ತಿಂಗಳ ಕಡೆಯವರೆಗೆ ಬೇಸಿಗೆಯ ರಜೆಯು ಕೊಡಲ್ಪಟ್ಟಿರುತ್ತದೆ ೧೯೩೪ ಇಸವಿ ಜೂನ ೧೬ನೇ ತಾರೀಖಿನಿಂದ ಕಾಲೇಜಿನ ಪಾಠ ಪ್ರವಚನಗಳು ಪ್ರಾರಂಭಿಸಲ್ಪಡುತ್ತವೆ. ತಪ್ಪಿಯುಕ್ತವಾಗಿ ಸದರ ತಾರೀಖಿಗೆ ಸರ್ವ ವಿದ್ಯಾರ್ಥಿಗಳು ಹಾಜರಾಗತಕ್ಕದ್ದು. ಜೂನ ೧೬ ನೆಯ ತಾರೀಖಿನ ತರುವಾಯ ಬಂದ ಹಳೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದಿಲ್ಲ. ಹೊಸ ವಿದ್ಯಾರ್ಥಿಗಳು ಜೂನ ಅಖೈರದೊಗಾಗಿ ಬರಬಹುದು. ಈ ವರುಷದಿಂದ ಮದ್ರಾಸ್ ಯುನಿವ್ಹರ್ಸಿಟಿಯ ಪರೀಕ್ಷೆಯ ಪಾಠ ಪ್ರವಚನವು ಕಾಲೇಜಿನಲ್ಲಿ ನಡೆಯುತ್ತಿರುವುದರಿಂದ ಕನ್ನಡ, ಅಥವಾ ಸಂಸ್ಕೃತ, ಇಂಟರ ಮತ್ತು ವಿದ್ವಾನ ಪರೀಕ್ಷೆಯ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳು ಈ ಕಾಲೇಜಿಗೆ ಬಂದು ಹೆಚ್ಚಿನ ಲಾಭವನ್ನು ಪಡಯತಕ್ಕದ್ದು. ಉರ್ದು ಮತ್ತು ಇಂಗ್ಲೀಷ ವೈದಿಕ ಇವುಗಳನ್ನು ಸಂಸ್ಕೃತದ ಜೊತೆಗೆ ಅಭ್ಯಾಸ ಮಾಡಲಿಚ್ಛೆಯುಳ್ಳ ನೈಜಾಂ ಪ್ರಾಂತದ ವಿದ್ಯಾರ್ಥಿಗಳು ಭಿನ್ನರಾದರೂ ಕೂಡ ಸೇರಬಹುದು. ಈ ನಿಯಮಿತ ಸಮಯವನ್ನು ಮೀರಿ ಬಂದ ಪಕ್ಷದಲ್ಲಿ ಏನೊಂದೂ ಅಭ್ಯಾಸ ಮಾಡದೆ ಬಂದ ಪಕ್ಷ ಗ್ರಹಿಸಲಾಗುವುದಿಲ್ಲವೆಂಬುವದನ್ನು ಸರ್ವರೂ ಲಕ್ಷದಲ್ಲಿಡತಕ್ಕದ್ದು.

ಕರ್ನಾಟಕದ ಐತಿಹಾಸಿಕ ಪರಿಷತ್ತು.

ಧಾರವಾಡದ ಕರ್ನಾಟಕ ಐತಿಹಾಸಿಕ ಸಂಶೋಧನ ಸಂಘ ಯವರು ೧೯೩೫ನೆಯ ಇಸವಿ ಮೇ ತಿಂಗಳ ಕೊನೆಯ ವಾರದ ಧಾರವಾಡದಲ್ಲಿ ಐತಿಹಾಸಿಕ ಪ್ರದರ್ಶನವನ್ನು ನೆರೆಯಿಸಲು ನಿಣಯಿಸಿದ್ದಾರೆ. ಆದುದರಿಂದ ಕರ್ನಾಟಕ ಇತಿಹಾಸ ಪ್ರೇಮಿಗಳು ಕರ್ನಾಟಕ ಇತಿಹಾಸವನ್ನು ಕುರಿತು ಅನೇಕ ವಿಷಯಗಳ ಪತ್ರಿಕೆಗಳನ್ನು ಪರಿಷತ್ತಿನಲ್ಲಿ ಓದುವದಕ್ಕಾಗಿ ಕಳುಹಿಸಿ ಪರಿಷತ್ತಿನ ಕಾಯವನ್ನು ಯಶಸ್ವಿಯಾಗಿ ಮಾಡುವಿರೆಂದು ವಿಜ್ಞಾಪನೆ. ಒಂದು ವೇಳೆ ಆಯಾ ವಿಷಯಗಳ ಪತ್ರಿಕಾ ಕರ್ತರು ಸ್ವತಃ ತಾವೇ ಓದಿದಲ್ಲಿ ಹೆಚ್ಚು ಅಭಿರುಚಿಯಾಗುವದಲ್ಲದೆ ಪರಿಷತ್ತಿನಲ್ಲಿ ಚರ್ಚಿಸಲೂ ಒಳ್ಳೇ ಅನುಕೂಲವಾಗುವುದು.

ಪರಿಷತ್ತಿನ ಕಾಲಕ್ಕೆ ಒಂದು ಪ್ರದರ್ಶನವು ಸಹ ಏರ್ಪಡಿಸಲ್ಪಡುವದು. ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಐತಿಹಾಸಿಕ ಮಹತ್ವದ ಪ್ರಾಚೀನ ಗ್ರಂಥಗಳು, ಕೈಬರಹಗಳು, ತಾಡವಾಲಿಯ ಬರಹಗಳು, ಹಳೇ ನಾಣ್ಯಗಳು ಮತ್ತು ತಾಮ್ರ ಪಟಗಳು ಹೇರಳವಾಗಿ ದೊರೆಯುತ್ತವೆ ಆದುದರಿಂದ ಈ ಪದಾರ್ಥಗಳುಳ್ಳ ಮಹಾಶಯರು ಇವುಗಳನ್ನು ಕಳುಹಿಸಿಕೊಟ್ಟು ಪರಿಷತ್ತನ್ನು ಯಶಸ್ವಿ ಪೂರ್ಣವಾಗಿ ಮಾಡಬೇಕೆಂದು ಕಾರ್ಯದರ್ಶಿಗಳು ಬಿನ್ನಹ ಮಾಡಿಕೊಂಡಿದ್ದಾರೆ.

ಕರ್ನಾಟಕದಲ್ಲಿ ವಾಸಿಸುವ ಸಂಶೋಧನಪಟುಗಳು ಪರಿಷತ್ತಿನ ಜಯಕೋರಿಕೆಗಾಗಿ ತಮ್ಮ ಐತಿಹಾಸಿಕ ಪತ್ರಗಳನ್ನು ಕಳುಹಿಸುವರೆಂಬುವದರಲ್ಲಿ ಸಂಶಯವಿಲ್ಲ. ಮತ್ತು ಕರ್ನಾಟಕ ಇತಿಹಾಸದ ವಿಷಯದಲ್ಲಿ ಅಭಿರುಚಿಯುಳ್ಳ ಅನೇಕ ಸಂಶೋಧನಾಭ್ಯಾಸಿಗಳು

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ... . ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟ ಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆವುಲ್ಲಿ**ನ ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ, ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಯೂ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಎಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಧಳಧಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪ್ಪಸ್ತ
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಸ್ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ಸನ್ನೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮುಶಿಜೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಜೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೆಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೆಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The

Sharana Sandesh.

ನಾಮಳು ಶ್ಮುರ| ದಾಕ್ಷಿಣ್ಯಪರನಾನಲ್ಲ| ಲೋಕವಿಡೂಢಿ| ಶರಣನಾರಾಂಗೂ ಅಂಜುವೆನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೪ ॥ ಮಹಾಪ್ರಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೆಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯು ವೆಚ್ಚ ಸೇರಿ ೩ರು

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩.	ಹಲಮಟ್ಟಿ- ಸೋಮವಾರ ತಾರೀಖು ೩೦ ನೆಯ ಎಪ್ರಿಲ್ ೧೯೩೪.	ಸಂಚಿಕೆ ೩೬.

ಜನಸೇವೆಯೇ ದೇವರಸೇವೆ.

ಬಸವಣ್ಣನ ಘನವು ಹಸುಳರಿಗೆ ತಿಳಿವುದೇ?

ಅಕ್ಕಗಳ ವಚನವ ಅಕ್ಕರದಿ ಕೇಳಿ.



ಅಕ್ಕ ಮಹಾದೇವಿ.

"ನಿನ್ನ ಅಂಗದ ಆಚಾರವ ಕಂಡು ಎನಗೆ ಲಿಂಗಸಂಗವಾಯಿತ್ತಯ್ಯ ಬಸವಣ್ಣ. ನಿನ್ನ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತಯ್ಯ ಬಸವಣ್ಣ. ನಿನ್ನ ಸದ್ಭಕ್ತಿಯ ತಿಳಿದು ಎನ್ನ ನಿಜ ಸಾಧ್ಯವಾಯಿತ್ತಯ್ಯ ಬಸವಣ್ಣ. ಚನ್ನಮಲ್ಲಿಕಾರ್ಜುನನ ಹೆಸರಿಟ್ಟ ಗುರು ನೀನಾದ ಕಾರಣ ನಾನೆಂಬುದಿಲ್ಲವಯ್ಯ ಬಸವಣ್ಣ."

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL – 587 315
Dt. Bijapur, (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!



ಗಂಡಾಂತರಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಠಿ ಎ. ಎಂ. ಜವಳಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಠಿ. ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಡಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗುಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕದ್ದು ಮಾಡಾಕ ಮುರಿದರೆ ಸಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು —ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳಪದಲ್ಲನೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತ?

ಶೆಟ್ಟರು—ಏನು ಹೇಳಲೆವ್ವಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇಮು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕದಾಗ** ಬ್ಯಾಂಕಿನವರ ಎನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನವರು ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತವ್ವಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಪಡಿಸಲ್ಪಟ್ಟಿದೆ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀನಿವಾಸ ಪುಸ್ತಕಾಲಯ
ಗದಗ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಎಪ್ರಿಲ್ ತಾರೀಖು ೩೦ ನೆಯ ಸೋಮವಾರ | ಸಂಚಿಕೆ ೩೬.

ಬಸವೇಶನ ಭಕ್ತಿಯ ಝರಿ.

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ| ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ| ಓ ಎನ್ನಲಾಗದೆ ಅಯ್ಯ! ಆವಾಗಲೂ ನಿಮ್ಮ ಕರೆವುತ್ತಲಿದ್ದೇನೆ.ಓ ಎನ್ನದೆ ಮೌನವೇ ಕೂಡಲಸಂಗಮದೇವ?

ಶಿಶುವು ತನ್ನ ತಾಯ ಬಯಸುವಂತೆ ಬಸವೇಶನು ಹಸುಳೆಯ ಹಾಗೆ ಈಶನನು ಕರೆಯುತ್ತಲಿದ್ದಾನೆ. ಶಿಶುವೇನು ಬಲ್ಲುದು ಜಗದ ಒಳಿತು ಕೆಡುಕುಗಳ? ಶಿಶುವೇನು ಬಲ್ಲುದು ಸ್ವಂತ ಅಭಿಮಾನವ? ತಾಯಿಯೇ ಅದರ ಜಗತ್ತು, ತಾಯಿಯೇ ಅದರ ಆನಂದ ವಿಹಾರ, ತಾಯಿಯ ಬಯಕೆಯೇ ಅದರ ಏಕ ಮಾತ್ರ ಬಯಕೆ, ತಾಯಿಯಿಲ್ಲದಿರೆ ಅದಕ್ಕೆ ಜಗವೆಲ್ಲ ಶೂನ್ಯ, ಭಕ್ತಸ್ಥಲದ ಬಾಲ್ಯಾವಸ್ಥೆಯಲ್ಲಿ ಸಂಸಾರದ ಎದರು ಕಂಟಕಗಳು ಭೀಕರವಾಗಿರಲು ಕಾಯುವವರು ಪರಮಾತ್ಮನಲ್ಲದೆ ಅನ್ಯರಾರು? ಅನ್ಯರನು ಕರೆಯುವ ಆಶೆಯಲ್ಲಿ? ಪುನಃ ಪುನಃ ಆ ಪರಮಾತ್ಮನಿಗೆ ಮೊರೆ ಹೋಗದೆ ಗತ್ಯಂತರವಿಲ್ಲ. ಪರಮಾತ್ಮನೇನೋ ಮೌನಧಾರಿ. ಅವನ ಒಳಮಾತುಗಳು ಹೃದಯಕ್ಕೆ ತಾಗುವವಲ್ಲದೆ ಕರ್ಣಕ್ಕೆ ಕೇಳಿಸುವದೆಂತು? ಪರಮಾತ್ಮನ ಮುಗ್ಧ ವಾಣಿಯಿಂದ ಹೃದಯವು ಕಂಪನ ಹೊಂದಿ ತಲ್ಲೀನತೆಯನ್ನು ಹೊಂದುವವರೆಗೆ ಅಯ್ಯಾ ಅಯ್ಯಾ ಎಂದು ಕರೆಯುವುದೊಂದೇ ಕೆಲಸ. ಅಯ್ಯನ ಓ ಎಂಬ ಶಬ್ದವನು ಕರ್ಣದಲ್ಲಿ ಕೇಳಿದರೆ ಭಕ್ತಿಗೆ ಕೊರತೆ. ಅಯ್ಯನು ಓ ಎಂದರೆ ಆತನ ಪ್ರೀತಿಗೆ ಹಾನಿ. ಯಾಕಂದರೆ ಆ ಪ್ರಭುವು ಆವಾಗಲೂ ಹೃದಯ ಪ್ರೇರಕನಲ್ಲವೇ?

ಮಾತೆಯೆ, ನೀನೇ ನನ್ನನ್ನು ಹೆತ್ತವಳು. ನೀ ಕೊಟ್ಟುದನ್ನುಂಡು ಆಡುವುದು ನನ್ನ ಕೆಲಸವೆಲ್ಲದೆ ಅನ್ಯಬಯಕೆ ನನಗೇಕೆ? ನೀ ಕೊಟ್ಟುದನ್ನು ಬಿಟ್ಟು ನಾನು ಅನ್ಯವ ಬೇಡಿದರೆ ನನ್ನ ಮೇಲಿನ ನಿನ್ನ ಪ್ರೇಮಕ್ಕೆ ಭಂಗವಲ್ಲವೇ? ನೀನು ಅಮೃತವನ್ನಾದರೂ ಕೊಡು; ವಿಷವನ್ನಾದರೂ ಕೊಡು; ಮಾತೆಯ ಹಸ್ತದಿಂದ ಬಂದುದೆಂದು ನಾನು ಅತ್ಯಾನಂದದಿಂದ ಸ್ವೀಕರಿಸುವೆನೆಂದು ಶಿಶುವು ಅನ್ನಲು ಅದಾವ ಮಾತೆಗೆ ಪ್ರೇಮ ಬಾರದಿರದು! ಅದಾವ ಮಾತೆಯು ತನ್ನ ಮುದ್ದು ಮಗುವನ್ನು ಎತ್ತಿ ಮುದ್ದಾಡದಿರಳು!

ವಿಷಯವೆಂಬ ಹಸರನ್ನೆನ್ನ ಮುಂದಿ ತಂದು ಪಸರಿಸಿದೆಯಯ್ಯ! ಪ್ರಭುವೇ ಪಬಲುದು ಹೆಸುರಿಂದಿಳೆಸುವದು! ವಿಷಯರಹಿತನೆ ಮಾಡಿ. ಭಕ್ತಿರಸವ ದಣಿಯ ಮೆಯಿಸಿ ಸುಬುದ್ಧಿ ಎಂಬ ಉದಕವ ನೆರೆದು, ನೋಡಿ ಸಲಹಯ್ಯ ಕೂಡಲ ಸಂಗಮದೇವ|

ಶಿಶುವು ಒಲ್ಲೆನು ಒಲ್ಲೆನೆನ್ನುತ್ತಿರಲು ಅದರ ಬಾಯಿಯಲಿ ಒತ್ತಿ ಹಾಲು ಹಾಕಿದರೆ ಅದಕ್ಕೆ ಸಂತೋಷವಾಗಬಹುದೆ? ಅಲ್ಲಿ ತಾಯಿಯು ಪ್ರೇಮದ ಶಿಟ್ಟಿನಿಂದ ಕೊಡುವುದಿಲ್ಲವೆನ್ನುತ್ತಿರಲು ಮತ್ತು ಶಿಶುವು ಬಿಡುವುದಿಲ್ಲವೆಂದು ಹಗಲೆಲ್ಲ ಹಲುಬಿಯಾದರೂ ತಾಯಿಯನು ಒಲಿಸಿ ಮೊಲೆಯುಂಡರೆ ಕಡೆಗೆ ತಾನೇ ಗೆದ್ದೆನೆಂದು ಶಿಶುವಿಗೆಷ್ಟು ಆನಂದ. ತನ್ನ ಶಿಶುವಿಗಾಗಿ ಕಡೆಗೆ ತಾನೇ ಸೋತೆನೆಂದು ತಾಯಿಗೆಷ್ಟು ಆನಂದ!

ಎನ್ನ ವಾಮಕ್ಷೇಮ ನಿನ್ನದಯ್ಯ! ಎನ್ನ ಹಾನಿವೃದ್ಧಿ ನಿನ್ನ ದಯ್ಯ! ಎನ್ನ ಮಾನಾಪಮಾನವು ನಿನ್ನದಯ್ಯ! ಬಳ್ಳಿಗೆ ಕಾಯಿ ದಿನ್ನಿತ್ತೆ ಕೂಡಲ ಸಂಗಮದೇವ!

ಇದೊಂದು ಭಕ್ತಿಯ ಪರಿಯು. ಪ್ರಾಥ ವಯಸ್ಸಿನಲ್ಲಿ ಶಿಶುವು ತನ್ನ ತಾಯಿಯ ಹೊಲಬನ್ನು ತಿಳಿದು, ತಾಯಿಯೇ, ನೀನು ಬಳ್ಳಿ, ನಾನು ಕಾಯಿ; ನೀನು ಕೊಟ್ಟ ಪೋಷಣೆಯ ರಸವೇ ನನ್ನಲ್ಲಿರುವುದಲ್ಲದೆ ಬೇರೆ ನಾನೆಲ್ಲಿಂದ ತಂದೆನು? ಬಳ್ಳಿಯಲ್ಲಿದ್ದುದೇ ಕಾಯಿಯಲ್ಲಿ ಬಂದಿದೆ, ಕಾಯಿಯು ಕಗ್ಗಾಯಿಯಾದರೆ ಬಳ್ಳಿಯು ಕಗ್ಗಾಗದೆ? ಕಾಯಿಯು ರುಚಿ ಎಂದರೆ ಬಳ್ಳಿಯೂ ರುಚಿಯಾಗದೆ? ಅಂದಮೇಲೆ ನನ್ನಲ್ಲಿರುವ ಹೆಚ್ಚು ಕುಂದು ನಿನ್ನದಲ್ಲವೆ? ನಾನು ನಿನ್ನನ್ನೇ ಅಂಟಿಕೊಂಡಿರುವೆನೆಂದ ಮೇಲೆ ನಿನಗೆ ಬಲ್ಲುವ ರೀತಿಯಲ್ಲಿ ನೀನು ಪೋಷಿಸಲಾರೆಯಾ? ಅದರ ಒಣ ಅಭಿಮಾನ ನನಗೇಕೆ?

ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟರೆ, ನಿಮ್ಮ ನಗುವರಯ್ಯ! ಶಿವಬಿಟ್ಟಿಯಲೆನ್ನನು ಇರಿಸಯ್ಯ! ಹರನೇ, ಹೊಲಬು ಗೆಟ್ಟೆನು. ಬಟ್ಟೆಯ ತೋರಯ್ಯ. ಹುಯ್ಯಲಿಟ್ಟೆನು. ಗಣಂಗಳು ಕೇಳರಯ್ಯ! ಕೂಡಲ ಸಂಗಮದೇವಯ್ಯ ಕಾಡಿಹನಯ್ಯ!

ಅವ್ವಾ ನನಗೆ ಬೇಕಾದುದನ್ನು ಕೊಡು; ಇಲ್ಲದಿದ್ದರೆ ಅಣ್ಣನ ಮುಂದೆ ಹೇಳೇನು ಎಂದರೆ ತಾಯಿಯೇನು ಉತ್ತರ ಕೊಟ್ಟಾಳು? ಅವನ ಹೆದರಿಕೆಯಾದರೂ ಆಕೆಗೆ. ಅವನ ಅಣ್ಣನ ಹೆದರಿಕೆಯಾದರೂ ಆಕೆ.. ಆದರೆ ತಾಯಿಯಾದಮೇಲೆ ಒಲಿಯದೇ ಇರುವಳೆ?

ಪಂಚಾಚಾರ್ಯರ ಹೆಸರಿನವರಿಗೆ ಪಂಚ ಪ್ರಶ್ನೆಗಳು.

(ಲೇಖಕರು:— ವೀರಪ್ಪ ಬಸಪ್ಪ ಬಿಳಿ ಅಂಗಡಿ ಬಿ ಎ. ಎಲೆಲ್. ಬಿ. ಹುಬ್ಬಳ್ಳಿ.)

ಭಕ್ತಸೇವಾಸಮಂ ಪುಣ್ಯಂ ನಾಸ್ತಿ ನಾಸ್ತಿ ನಗಾತ್ಮಜೆ!
ಭಕ್ತದ್ರೋಹ ಸಮಂ ಪಾಪಂ ನಭೂತಂ ನ ಭವಿಷ್ಯತಿ॥

ಶ್ರೀಮದ್ವೃಷಭಾದಿ ಪ್ರಮಥರ ಸಾಂಪ್ರದಾಯವನ್ನು ಅಕ್ಷರಶಃ ಪಾಲಿಸಿ ವೀರಶೈವ ಸಮಾಜವನ್ನು ಶೋಭೆಗೊಳಿಸಿದ ರೇಣುಕ ಆಥ ರೇವಣಸಿದ್ಧ ಮರುಳಸಿದ್ಧ ಮೊದಲಾದ ಆದಿ ಪಂಚಾಚಾರ್ಯರ ಸಮಯದಲ್ಲಿ ಯಾವ ಪ್ರಶ್ನೆಯು ಸಂಭವಿಸುವುದಿಲ್ಲ. ಅವರು ವೀರ ಶೈವರಲ್ಲಿ ಚಾತುರ್ವರ್ಣಗಳೆಲ್ಲಿಂದೂ ಅದು ಪೈತಾಮಹ ಧರ್ಮಕ್ಕೆ ವಿರುದ್ಧವಾಗಿಲಾದದ್ದೆಂದೂ ಸಾರಿ ಸಮಾಜವನ್ನು ಒಕ್ಕಟ್ಟಿನಲ್ಲಿರಿಸಿ ಅದರ ಏಳಿಗೆಯನ್ನು ಹೆಚ್ಚಿಸಿದರು. ಆದರೆ ಅವರ ಈಗಿನ ಸ್ಥಾನಾಪನ್ನರು ಮಾತ್ರ ತಮ್ಮ ಪೂರ್ವಜರ ಹೆಸರಿಗೆ ಕಲಂಕ ತರುವಂಥ ಆಚರಣೆ ಯನ್ನಿಟ್ಟುಕೊಂಡು, ಬ್ರಾಹ್ಮಣ್ಯಕ್ಕೆ ಮೋಹಿತರಾಗಿ ವೀರಶೈವ ರಲ್ಲಿ ಅವೈದಿಕ ಚಾತುರ್ವರ್ಣಗಳು ಇರುತ್ತವೆಂದು ಪದೆಪದೆ ಭ್ರಮಾತ್ಮಕ ಲೇಖನಗಳನ್ನು ಪ್ರಕಟಿಸುತ್ತಿರುವದರಿಂದ ಅವರನ್ನು ಎರಿತು ಪ್ರಶ್ನೆಗಳು ಉದ್ಭವಿಸುತ್ತವೆ. ಮತ್ತು ಈ ಪ್ರಶ್ನೆಗಳು ಯುಗಾಗಮಗಳಲ್ಲಿ ಮತ್ತು ಶಿವಶರಣರ ವಚನಗಳಲ್ಲಿ ಪ್ರತಿಪಾದಿತ ವಾದ ಲಕ್ಷಣ ಬದ್ಧ ವೀರಶೈವರಲ್ಲಿ ಅಂದರೆ ಅವೈದಿಕ ಸ್ವರೂಪದ ವೀರಧರ್ಮದಲ್ಲಿ ನಾಲ್ಕು ವರ್ಣಗಳು ಉಂಟೋ ಎಂಬುದರ ಬಗ್ಗೆ ಈಗಿನ ವಿಚಾರ ಪ್ರಾಂಪ್ರತ ಕಾಲದಲ್ಲಿ ಜಾತಿ ಕುಲ ಧರ್ಮಗಳನ್ನು ಕುರಿತು ಜರ್ಜರಿತ ವೀರಶೈವರ ವಿಷಯವಾಗಿದ್ದು ಈ ಪ್ರಶ್ನೆಗಳಲ್ಲಿ ಇವ ನ್ನು ಚೆನ್ನಾಗಿ ನೆನಪಿನಲ್ಲಿಡಬೇಕು.

ಒನೆಯ ಪ್ರಶ್ನೆ— ಅವೈದಿಕ ಚಾತುರ್ವರ್ಣಕ್ಕೂ ವೈದಿಕ ಚಾತುರ್ವರ್ಣಕ್ಕೂ ಏನು ವ್ಯತ್ಯಾಸವಿದೆ? ಸಾಮಾನ್ಯವಾಗಿ ಚಾತು ರ್ವರ್ಣವು ವೈದಿಕ ಶರೀರ, ಜಾತಿಗೆ ಸಂಬಂಧವಿರುವುದಲ್ಲವೆ? ಕುಲಾಜಾತ್ಯಾದಯೋಭಾವಾ ಧರ್ಮಾ ದೇಹಸ್ಯ ನಾತ್ಮನಃ) ಲಿಂಗ ಧಾರಣ ದೀಕ್ಷೆಯಾದ ಗುರುಕರಜಾತನಿಗೆ ಪುನಃ ವರ್ಣಗಳ ಅವಶ್ಯ ಕತೆ ಏನು? ಶಿವದೀಕ್ಷೆಯಿಂದ ಆಣವಮಲ, ಮಾಯಾಮಲ, ಕಾರ್ಮಿ ಕಮಲ ಹೀಗೆ ಮಲತ್ರಯಗಳು ನಾಶಹೊಂದುತ್ತವೆಂದು ಶಿವಧ ರ್ಮವು ಸಾರುತ್ತಿರುವಾಗ ಆ ಮಲತ್ರಯ ಸೂಚಕವಾದ ವರ್ಣ ಧರ್ಮಗಳ ಬಳಕೆ ಏಕೆ? ನಾನು ನನ್ನದು ಎಂಬ ಭೇದ ಬುದ್ಧಿಯು ದು, ತಾನು ಲಿಂಗ ಲಿಂಗದ ಸೇವಕನು ತಾನು ಎಂಬ ಮತಿಯುಂ ಟಾದ ವೀರಶೈವನಿಗೆ ವರ್ಣಗಳ ವಿಚಾರವೇಕೆ? ವೀರಶೈವ ಭಕ್ತರಲ್ಲಿ ಉಚ್ಚನೀಚ ಕಲ್ಪನೆ ಎಂಬ ಭಕ್ತದ್ರೋಹವು ಸಾಧಿಸಿಯಿಸ್ಯವಾ ಗಿದ್ದೆಂದು ಮೇಲಿನ ಸೂಕ್ಷ್ಮಾಗಮ ವಚನಕ್ಕೆ ನಿಮ್ಮ ಉತ್ತರ ವೇನು?

ಎರಡನೆಯ ಪ್ರಶ್ನೆ— ಪಟ್ಟಸ್ಥಳಗಳಲ್ಲಿ ಒಂದಾದ ಮಾಹೇಶ್ವರ ಸ್ಥಳದಲ್ಲಿ ಪೂರ್ವಾಶ್ರಯ ನಿರಸನ ಸ್ಥಳವೆಂಬುದೊಂದು ಸ್ಥಳವಿರು ವದು. ಅದರಲ್ಲಿ ಲಿಂಗದೀಕ್ಷಾ ಸಂಪನ್ನನು ತನ್ನ ಪೂರ್ವದ ಕುಲ ಜಾತಿ ವರ್ಣ ಮುಂತಾದ್ದನ್ನು ಮನಸ್ಸಿನಿಂದ ಕಿತ್ತೊಗೆದು ತಾನು ಇರಿಸುತ್ತಿರುವ ಶಿವಪ್ರಪಂಚದಲ್ಲಿ ಶಿವಸಹೋದರರೊಡನೆ ತನ್ನ ಬಳಕೆ ಭೋಜನ ಹೆಣ್ಣು ಕೊಡತಕೊಳ್ಳುವದು ಮೊದಲಾದದ್ದನ್ನು ಸಂಶಯ ವಿರಹಿತನಾಗಿ ಮಾಡಬೇಕೆಂದೂ ಮತ್ತು ಭಕ್ತಿಮಾರ್ಗ ಕ್ರಿಯಾಸ್ಥಳದಲ್ಲಿ ಲಿಂಗಭಕ್ತನು ಮರೆತಾದರೂ ತನ್ನ ಪ್ರಾಕೃತ ಬಂಧುಗಳೊಡನೆ (ಅಂದರೆ ಅವರು ಭವಿಗಳಾದ್ದರಿಂದ) ಯಾವತ ರದ ಬಳಕೆ ಭೋಜನ ಮುಂತಾದ್ದನ್ನು ಮಾಡಬಾರದೆಂದೂ ರೇಣುಕ ರು ಅಗಸ್ತ್ಯರಿಗೆ ಮಾಡಿದ ಉಪದೇಶವೆಂದು ಹೇಳ ಪ ಸಿದ್ಧಾಂತಶಿಖಾ ಮಣಿ ಗ್ರಂಥವೇ ಷಣ್ಣಾಡಂಗುರವಾಗಿ ಸಾರುತ್ತಿರುವಾಗ ಪುನಃ ಚಾತುರ್ವರ್ಣಗಳ ಗಾಧವು ವೀರಶೈವರಿಗೆಲ್ಲಿಂದ ಬರಬೇಕು? ಶೈವ ಭೇದಗಳಲ್ಲಿ ಒಂದಾದ ಮಾರ್ಗಶೈವದಲ್ಲಿ ಮಾತ್ರ ಚಾತುರ್ವರ್ಣಗ ಳನ್ನು ಗ್ರಹಿಸಿ ಶೈವ ಧರ್ಮ ಅಂದರೆ ಲಿಂಗಧಾರಣವು ಹೇಳಿದೆ. ಈ ಮಾರ್ಗಶೈವದ ಉತ್ತರಪದವಾದ ವೀರಶೈವದಲ್ಲಿ ವರ್ಣಗಳ ಕಾಟ ವಿಲ್ಲದ್ದರಿಂದಲೇ ಅದು ಅಪ್ರಾಕೃತ ಧರ್ಮವೆಂದೂ ಮತ್ತು "ನವೀರ ಶೈವ ಸದೃಶಂಮತಮಸ್ತಿ ಜಗತ್ರಯೇ" ಎಂದು ಪಾರಮೇಶ್ವರಾಗಮ ವು ಸ್ಪಷ್ಟವಾಗಿ ಹೇಳುವದಿಲ್ಲವೆ? ವೀರಶೈವಕ್ಕೆ ಚಾತುರ್ವರ್ಣ್ಯವನ್ನು ಅಂಟಿಸಿದರೆ ಅದಕ್ಕೂ ಮಾರ್ಗಶೈವಕ್ಕೂ ಭೇದವೇನು?

ಮೂರನೆಯ ಪ್ರಶ್ನೆ— ವೀರಶೈವ ಮತವು ಜಾತಿಸೂತಕ ಜನನ ಸೂತಕಾದಿ ಪಂಚ ಸೂತಕಗಳನ್ನು ನಿರಾಕರಿಸುವುದಿಲ್ಲವೇ? ನೀವು ಹೇಳುವಂತೆ ಅದರಲ್ಲಿ ಚಾತುರ್ವರ್ಣಗಳಿದ್ದರೆ ಅದು ಪಂಚಸೂತಕ ವಿರಹಿತ ಅಪ್ರಾಕೃತ ಧರ್ಮವು ಹೇಗಾದೀತು? ಪಂಚಸೂತಕಗಳಾ ಗಲಿ ಅಥವಾ ಚಾತುರ್ವರ್ಣವಾಗಲಿ ವೀರಶೈವರಲ್ಲಿ ಉಂಟೆಂದರೆ ಅದು ವೀರಶೈವವಲ್ಲ. ಹೀಗೆ ಸಾಧಿಸುವವರು ವೀರಶೈವರಲ್ಲ; ಈ ಸಾಂಪ್ರದಾಯದ ಗುರುಗಳೂ ವೀರಶೈವ ಗುರುಗಳಲ್ಲ. ಇದಕ್ಕೆ ನಿಮ್ಮ ಮತವೇನು?

ನಾಲ್ಕನೆಯ ಪ್ರಶ್ನೆ— ಬ್ರಾಹ್ಮಣ್ಯಕ್ಕೆ ಉಪನಯನ ಸಂಸ್ಕಾರವೇ ಮುಖ್ಯವಾದದ್ದು. ಅದಿಲ್ಲದೇ ಯಾವನೂ ಬ್ರಾಹ್ಮಣನಾಗನು. ಅಂದ ವೇಲೆ ಮೌಂಜೀ ಬಂಧನ ಸಂಸ್ಕಾರವಿಲ್ಲದ ನೀವು ಬ್ರಾಹ್ಮಣರು ಹೇಗೆ? ಲಿಂಗಧಾರಣ ದೀಕ್ಷೆಯಿಂದ ಗುರುಕರ ಜಾತನಿಗೆ ದ್ವಿಜತ್ವ (ಬೇರೊಂದು ಜನ್ಮ, ಎರಡನೆಯ ಜನ್ಮ) ಒದಗುವದುಂಟು. ಇದು ಎಲ್ಲ ಲಿಂಗಧಾರಣ ದೀಕ್ಷಾ ಸಂಪನ್ನರಿಗೂ ಅನ್ವಯಿಸುತ್ತದೆ. ಆದರೆ ಅವರಿಗೆ ಬ್ರಾಹ್ಮಣವು ಬರುವದಿಲ್ಲ. ಜಾತಿ ಬ್ರಾಹ್ಮಣರಿಗೆ ಉಪನಯನದ ಜೊತೆಗೆ ಶಿಖಾ ಜುಟ್ಟವೊಂದು ಬೇಕು. ನಿಮ್ಮ ಪೂರ್ವದ ಪಂಚಾಚಾರ್ಯರಿಗೆ ಜುಟ್ಟು ಜನಿವಾರಗಳಿದ್ದುದು ತೋರಿಸಿ ಕೊಡುವಿರೋ? ಅವರು ಜಟಾಧಾರಿಗಳಾಗಿದ್ದರು ಅಥವಾ ಬೋಳು ತಲೆಯುಳ್ಳವರು ಇರಬೇಕು. ಬ್ರಾಹ್ಮಣರು ಗಂಡ ಸತ್ತವರನ್ನು ತಲೆಬೋಳಿಸಿ ಅಮ್ಮಗಳಾಗಿ ಮಾಡುವರು. ರಜಸ್ವಲೆಯನ್ನು ಮುಟ್ಟರು. ಬ್ರಾಹ್ಮಣರೆನಿಸಿಕೊಳ್ಳುವ ನೀವು ನಿಮ್ಮ ವಿಧವೆಯರ ತಲೆಬೋಳಿಸಿರುವಿರೋ? ನಿಮ್ಮ ರಜಸ್ವಲೆಯನ್ನು ಮುಟ್ಟದೆ ಆಕ ಯಿಂದ ಆಡಿಗೆ ಮಾಡಿಸದೆ, ಮೂಲೆಗೆ ಕೂಡ್ರಿಸಿ ಕೂಳುಹಾಕು ತ್ತೀರೋ? ಇವರ ವಿಷಯವಾಗಿ ನೀವು ಜಾತಿ ಬ್ರಾಹ್ಮಣರಂತೆ ನಡೆ ದಿರುತ್ತೀರೋ? ಹಾಗಿಲ್ಲದಿದ್ದರೆ ನೀವು ಅರ್ಧಮರ್ಧ ಹಾರುವರು ಎಂದು ಅನ್ನಬಾರದೇಕೆ?

೫ನೆಯ ಪ್ರಶ್ನೆ—ಜೀತಕ್ಕೆ ಬ್ರಾಹ್ಮಣರು ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಊಟೋಪಚಾರ ಮುಂತಾದ ಯಾವ ವ್ಯವಹಾರವನ್ನು ಮಾಡುವದಿಲ್ಲ. ಆದರಂತೆ ಬ್ರಾಹ್ಮಣರೆನಿಸಿಕೊಳ್ಳುವ ನೀವು ಬ್ರಾಹ್ಮಣರಲ್ಲದ ಇತರ ಲಿಂಗಾಯತರಲ್ಲಿ ಊಟೋಪಚಾರ ಮಾಡ ಕೂಡದು. ಆದರೆ ನಿಮ್ಮ ಹಿಂದಿನ ಸ್ಥಾನಾಪನ್ನರು ಜಾತಿಯ ಗೊಂದಲದಲ್ಲಿ ಬೀಳದೆ ಎಲ್ಲ ವೀರಶೈವರಲ್ಲಿ ಉಂಡುಟ್ಟು ಮೆರೆದರು. ಆದರಂತೆ ನೀವಾದರೂ ಕೆಲವುಸಾರ ಈಗ್ಯೂ ಉಳಿದ ವೀರಶೈವರಲ್ಲಿ (ನಿಮ್ಮ ತಿಳುವಳಿಕೆಯ ಪ್ರಕಾರ ಬ್ರಾಹ್ಮಣರಲ್ಲದವರಲ್ಲಿ) ಉಣ್ಣುತ್ತೀರಿ. ಮತ್ತು ಗುರುಗಳೆಂಬ ನೀವು ಗುರುಗಳಲ್ಲದ ಪಂಚಮಸಾಲಿ ಬಣಜಿಗ ಮುಂತಾದವರಲ್ಲಿ ಹೆಣ್ಣುಕೊಡತಕ್ಕೊಳ್ಳುವದನ್ನು ಮಾಡುತ್ತೀರಿ. ಅಂದಮೇಲೆ ನಿಮ್ಮ ಬ್ರಾಹ್ಮಣ ಜಾತಿಗೆ ಭ್ರಷ್ಟತೆ ಬರಲಿಲ್ಲವೇ! ಬ್ರಾಹ್ಮಣರಂತೆ ಇದಕ್ಕೇನಾದರೂ ಪ್ರಾಯಶ್ಚಿತ್ತ ತಕ್ಕೊಳ್ಳಬೇಕಾಗುವದು. ಹಾಗೆ ಪ್ರಾಯಶ್ಚಿತ್ತ ನಿಮಗ ಯಾವ ಶುದ್ಧ ಗುರುಗಳು ಕೊಟ್ಟರು ಹೇಳಿರಿ ಈ ರುದ್ಧಿ ಸಂಸ್ಕಾರವನ್ನು ನೀವು ಎಂದು ಹೊಂದಿದಿರಿ? ದಯವಿಟ್ಟು ನಮಗೆ ತಿಳಿಸಬೇಕು. ಈಗಾದರೂ ನೀವು ನಿಮ್ಮ ಗುರುವಂಶದವರಲ್ಲದ ಭಕ್ತರು ಚೆತನಕ್ಕೆಂದು ಕರೆದರೆ ಹೋಗುವುದಿಲ್ಲವೇ? ಒಂದು ವೇಳೆ ಚೆತನಕೊಟ್ಟರೆ ಹೋಗುತ್ತೀವೆ ಕನ್ಯೆಯನ್ನು ಕೊಡತಗೊಂಬುವದನ್ನು ಅವರ ಕೂಡ ಮಾಡುತ್ತೀವೆಂದರೆ, ಆ ಭಕ್ತರು ಬ್ರಾಹ್ಮಣರೋ ಅಥವಾ ಇತರ ತ್ರೈವರ್ಣಿಗಳೋ? ಈಗಿನ ನಿಮ್ಮ ಲಿಂಗಾಯತ ಶಿಷ್ಯರಲ್ಲಿ ಯಾವ ಯಾವ ಪಂಗಡದವರು ಬ್ರಾಹ್ಮಣರು? ಯಾರ್ಯಾರು—ಕ್ಷತ್ರಿಯರು ಯಾರ್ಯಾರು—ವೈಶ್ಯರು ಯಾರ್ಯಾರು ಶೂದ್ರರು? ಇದನ್ನು ಸ್ಪಷ್ಟವಾಗಿ ಜಾಹೀರುಮಾಡಿ ನೀವು ಅವರ ಮನೆಯ ಅನ್ನ ಗ್ರಹಿಸಬೇಕು. ಹೀಗೆ ಹೇಳದೆ ಉಂಡರೆ ಭವಿಯಲ್ಲಿ ಉಂಡಂತೆ ಎಂದು ನಾವು ತಿಳಿಯುತ್ತೇವೆ ಜಾಗ್ರತೆಯಾಗಿ ಸ್ಪಷ್ಟವಾಗಿ ಹೇಳಬೇಕು.

ಈ ಪ್ರಕಾರ ಮೇಲಿನ ೫ ಪ್ರಶ್ನೆಗಳಲ್ಲಿ ಅಡಕವಾದ ಸರ್ವ ಸಂಶಯಗಳಿಗೆ ಸಮರ್ಪಕ ಉತ್ತರಗಳನ್ನು ಬರವಣಿಗೆಯ ಮೂಲಕ ಪ್ರಸಿದ್ಧ ಪಡಿಸಿ ಅವು ಸರಿಯಾದ ಉತ್ತರಗಳೆಂದು ವೀರಶೈವ ವಿದ್ವಾಂಸರು ಒಪ್ಪುವಂತೆ ಮಾಡಿ ನೀವು ಅಂದೋಲಿಕೋತ್ಸವದಲ್ಲಿ ಮೆರೆಯಬೇಕು. ನಮ್ಮ ಹಿಂದಿನ ಮಹಾನುಭಾವರಾದ ಶ್ರೀ. ವಾಲ್ಮೀಕಿಕೆ ನೋಮಾರಾಧ್ಯರು, ಶ್ರೀ ತೋಂಟದ ಸಿದ್ಧಲಿಂಗ ಯತಿವರೇಣ್ಯರು, ಶ್ರೀ ಬಸವೇಶ್ವರ, ಶ್ರೀ. ಮಲ್ಲಿಕಾರ್ಜುನ ಪಂಡಿತರು, ಶ್ರೀ. ಕೆರೆಯ ಪದ್ಮರಸರು, ಶ್ರೀ ರೇವಣಸಿದ್ಧ ಯೋಗಿನಾಥರು ಇವರೇ ಮೊದಲಾದ ಇನ್ನೂ ಅನೇಕ ವೀರಶೈವ ವಿಭೂತಿಗಳು ನಾವಿಗಳ ಪ್ರಶ್ನೆಗೆ ಸರಿಯಾದ ಶಾಸ್ತ್ರೋಕ್ತ ಸಮಾಧಾನ ಪೂರ್ವಕ ಉತ್ತರಗಳನ್ನಿತ್ತು ನಾವದಲ್ಲಿ ಅವರನ್ನು ಸೋಲಿಸಿ ವೀರಶೈವ ಮತಪ್ರಜೆಯನ್ನು ನಿಲ್ಲಿಸಿದರು. ಗುರುಗಳೆನ್ನಿಸಿಕೊಳ್ಳುವ ನೀವು ಮಾಡಬೇಕು. ಹಾಗೆ ಮಾಡದಿದ್ದರೆ ನಿಮ್ಮ ಮೊರವಾಟಕ್ಕೆ ಬಲ್ಲವರೇನು ಬೆಲೆ ಕೊಡುವರು?

ಕರ್ತಾರಿಲ್ಲರೂ ತಮ್ಮ ಪತ್ರಿಕೆಗಳಲ್ಲಿ ಜಯಂತಿಯೊಳಗಾಗಿಯೇ ಪ್ರಕಟಿಸಬೇಕಾಗಿ ಕೋರಿಕೆ.

೨. ಜಯಂತಿಯ ದಿವಸ ಎಲ್ಲ ಊರವರೂ ತಮ್ಮ ಗ್ರಾಮದೊಳಗೆ ದೇವಾಲಯ ಅಥವಾ ಮಠದಲ್ಲಿ ಸಭೆಸೇರಿಸಿ, ಆಗ ಭಗವಾನ್ ಬಸವೇಶ್ವರನ ಮುಂದೆ ಎಲ್ಲರೂ ಎದ್ದು ನಿಂತು, ಈ 'ಪ್ರಾರ್ಥನೆ'ಯನ್ನು ಭಕ್ತಿಪೂರ್ವಕ ಅನ್ನಬೇಕಾಗಿ ಬೇಡಿಕೆ.

ಭಗವಾನ್ ಬಸವೇಶ್ವರನಲ್ಲಿ ಪ್ರಾರ್ಥನೆ.

(ರಚಿಸಿದವರು:—ಶ್ರೀ ಕಲ್ಲಿನಾಥ ಶಾಸ್ತ್ರಿ ವೀ. ಹಿರೇಮಠ ದ್ಯಾಂಪುರ)

ರುಂಪಾ.

ನೀನೆ ಇನ್ನೊಮ್ಮೆ ಭುವಿಗಿಳಿದು ಬಾರೋ|
ನೀನು ಹೇಳಲಿ ಬಸನ ನಮ್ಮ ಕಷ್ಟವನು ನೀನೆ ||ಪಲ್ಲ||

ನಿನ್ನ ಮತದೊಂದೊಂದೆ ತತ್ವವನು ಕೈಕೊಂಡು|
ನನ್ನುತರು ಜಿನ, ಬುದ್ಧ, ಮಧ್ವ, ಶಂಕರರು||
ಪನ್ನತಿಕೆಯಾಂತರಲು ನಮ್ಮ ಜನರರಿಯದಲೆ|
ಭಿನ್ನ ಮತಧರ್ಮಗಳ ಸೇರುತಿಹರಕಟಾ! ನೀನೆ ||೧||

ವೀರಶೈವವು ಸಕಲ ಮತಧರ್ಮ ಸಾರವಿದೆ|
ವೀರಶೈವವು ವಿಶ್ವ ಧರ್ಮವಿರಲು||
ವೀರಶೈವಕೆ ಪರರು ಮುಕುತಿ ಪಡೆಯಲು ಬರಲು|
ಘೋರ ಕೋಟಿಯ ಕಟ್ಟುತಿಹರೆನ್ನವರಹಾ ನೀನೆ ||೨||

ಕೆಟ್ಟಜನ ಕೆಲರು ಕಲಿತವರು ತಾವಿರ್ದುಂ|
ನೆಟ್ಟು ಕಲಹದ ಬೀಜವನು ನಮ್ಮೊಳಮಮಾ|
ಜುಟ್ಟು, ಜನಿವಾರ, ಸೂತಕ, ಹೋಮ, ವರ್ಣಗಳ|
ಕಟ್ಟನಲಿ ಬಿಗಿಬಿಗಿದು ಬಂಧಿಸುವರಯ್ಯೋ! ನೀನೆ ||೩||

'ಕಾಯಕವೆ ಕೈಲಾಸ'ವೆಂದು ನೀ ನಡೆತ|
ವೀಯುತ್ತೆ ಜಗಕೆಲ್ಲ ಬೋಧಿಸಿರಲು||
ಕಾಯಕಗಳೊಳು ಮೇಲು ಕೀಳುಗಳ ಕಲ್ಪಿಸಿತೆ|
ಸಾಯಲಾದೆವಸೈಕಮತ್ಯದಿಂದಪಹಾ! ನೀನೆ ||೪||

ಪರದೇಶ ಪರಭಾಷೆ ಪರರ ಸಂಸ್ಕೃತಿಯಂಗಳ|
ಮರುಳಾದೆವೈ ವಿದೇಶದ ವಸ್ತುಗಳಿಗೆ||
ಎರವಾಗಿ ನಾಂಪತ್ತಿಕೋದ್ಯಮು ಸ್ವತಂತ್ರತೆಗೆ|
ಪರತಂತ್ರ ಪಂಕದಲಿ ಕೊಳೆಯುತಿಹೆವಯ್ಯೋ! ನೀನೆ ||೫||

ನೀನು ಗ್ರಂಥಂಗಳಿಗೆ ದಾಸನಾದವನಲ್ಲ|
ನೀನೇ ವಿಚಾರ ಸ್ವಾತಂತ್ರ್ಯ ಶೀಲಂ||
ಜ್ಞಾನನಿಧಿ ದೇಶಕಾಲಂಗಳಂಗನುಸರಿಸಿ|
ಪ್ರಾಣಸ್ವರೂಪ ಧರ್ಮೋದ್ಧಾರಕನು ನೀಂ ನೀನೆ ||೬||

ಇಂತು ದುಃಖಾಬ್ಧಿಯಲಿ ಮುಳುಗಿರುವ ನಮ್ಮನು|
ಅಂತಕಾಂತಕ ವೀರ ಗಣಪ ಪಣ್ಮುಖರು||
ಸಂತವಿಸಲೆಂದು ಬರೆ ಬೇಡೆಮಗ! ಏಕೆನಲು|
ಸಂತ, ನೀನೋರ್ವನೇ ಸದ್ಧರ್ಮರೂಪ ನೀನೆ ||೭||

ಹಿಂದೊಂದು ಕಾಲದಲಿ ನಮ್ಮ ಮಧ್ಯ ಭಾರತ ನಾಡು|
ಕುಂದುವಡೆದಿರೆ, ಅಂದು ನೀನೆ ಬಂದು||
ಅಂದಗೊಳಿಸುತೆ ಜಗವ ಕೈಲಾಸವೆಸಗುತಲಿ|
ಚೆಂದದಿಂ ನಮ್ಮನ್ನು ಪೊರೆದೆ ಎತ್ತ ನೀನೆ ||೮||

ಇಂದು ನಿನ್ನೀ ಜಯಂತಿಯ ಶುಭ ಸಮಯದಲಿ|
ಒಂದುಗೂಡುತೆ ನಾವು ನಿನ್ನ ಪದತಲವ|
ಚೆಂದದಿಂದಿಮ್ಮ ಹೃನ್ಮಂದಿರದಿ ಪೂಜಿಸುತೆ|
ತಂದೆ, ಬೆಳ್ಳೆವು ಕಲ್ಲಿನಾಥ ಸ್ವರೂಪ| ನೀನೆ ||೯||

ಸೂಚನೆ:—೧ ಈ ಪ್ರಾರ್ಥನೆಯನ್ನು ವೀರಶೈವ ಪತ್ರಿಕಾ

ಶಿವಶರಣರ ಆದರ್ಶಜೀವನ.

ಜಾತಿಯೆಂಬುದೇ ಭವಕ್ಕೆ ಇನ್ನೊಂದು ಹೆಸರು. ಅಖಿಲ ಜನಾಂಗದಲ್ಲಿ ಈ ಜಾತಿಯ ಕಲ್ಪನೆಯೇ ಭಿನ್ನ ಭಿನ್ನ ರೂಪಗಳನ್ನು ತಳೆದು ತನ್ನ ಜಾಲದಲ್ಲಿ ಶಿಲುಕಿದವರನ್ನೆಲ್ಲ ಭವಕ್ಕೆ ಹೊರಳಿಸಿ ಹಾಕುತ್ತಿದೆ. ಬಡತನ ಶ್ರೀಮಂತಿಕೆಗಳಲ್ಲಿ ಜಾತಿ, ಕಂ ಬಿಳಿ ವೈ ದೊಗಲುಗಳಲ್ಲಿ ಜಾತಿ, ವಿದ್ಯೆ ಅವಿದ್ಯೆಗಳಲ್ಲಿ ಜಾತಿ, ಹೀಗೆ ಎಲ್ಲ ಕಡೆ ಯಲ್ಲಿಯೂ ಜಾತಿಯುದ್ಭವಿಸಿ ವಿಷಮತೆಯೆಂಬ ವಿಷವಾಯುವನ್ನು ಪಸರಿಸಿ ಲೋಕದ ತನು, ಮನ, ಪ್ರಾಣಗಳನ್ನು ಛಿದ್ರವಿಚ್ಛಿದ್ರವಾಗಿ ಮಾಡುತ್ತಿರುವುದು.

ಜಾತಿಯ ತೊಡಕಿದ್ದಲ್ಲಿ ಎಲ್ಲ ಕಾರ್ಯಗಳೂ ತೊಡಕು. ರಾಜಕೀಯ ಪ್ರಗತಿಗೆ ಅಡ್ಡಿ, ಸಾಮಾಜಿಕ ಪ್ರಗತಿಗೆ ಸೊನ್ನೆ, ಧಾರ್ಮಿಕ ಪ್ರಗತಿಗಂತೂ ದೊಡ್ಡದೊಂದು ಸೊನ್ನೆ ಹೀಗೆ ಜಾತಿ ಯುಂಟಾದಲ್ಲಿ ಎಲ್ಲಕ್ಕೂ ಸೊನ್ನೆಯೇ. ಐಕ್ಯದ ಮಾತಂತೂ ಕೇಳಲೇ ಬಾರದು. ಸಮಾಧಾನ ಶಾಂತಿಗಳಂತೂ ಶಾಪ್ತಗಳಲ್ಲೆ.

ಜಾತಿಯು ಸ್ವಾರ್ಥಿಗಳ ಪ್ರಬಲವಾದ ಬಾಣವು. ಜಾತಿಯ ಕಲ್ಪನೆಯಿಲ್ಲದಿರಿಂದಲೇ ಸಾವಿರಾರು ವರ್ಷಗಳವರೆಗೆ ಒಂದು ಕುಲವು ಹೋಳಿಗೆ ತಿಂದರೆ ಮತ್ತೊಂದಕ್ಕೆ ತುಣುಕು ರೊಟ್ಟಿ ಸಹ ಸಿಗದಾಗಿದೆ. ಒಂದು ವ್ಯಕ್ತಿಯು ಸಾವಿರಾರು ಕೊಡ ನೀರಿನಿಂದ ಅಭ್ಯಂಗ ಸ್ನಾನ ಮಾಡುತ್ತಿದ್ದರೆ ಮತ್ತೊಂದಕ್ಕೆ ಗುಟುಕು ನೀರಿ ಗಾಗಿ ಸಾವಿರ ಜನರ ಕಾಲು ಹಿಡಿಯಬೇಕಾಗುತ್ತದೆ. ಶಹಬಾಸ ಜಾತಿಯೆ!

ಈ ಜಾತಿಯ ಭೂತವನ್ನು ಹೊಡೆದಟ್ಟುವದಕ್ಕಾಗಿಯೇ ನಮ್ಮ ಶರಣರು ಅವತರಿಸಿದರು. ಜನ್ಮದಿಂದಲೇ ಮೇಲು ಕೀಳು ಗಳೆಂಬ ಕುಕಲ್ಪನೆಗಳನ್ನು ಕಳೆಯುವುದಕ್ಕಾಗಿಯೇ ಶರಣರು ತಮ್ಮ ಜೀವನವನ್ನು ಸವೆಸಿದರು. ಯಾವ ಪ್ರಕಾರವಾಗಿ ದುಃಖಿತರ ದುಃಖವನ್ನು ಕಳೆಯುವದಕ್ಕಾಗಿಯೇ ಜಗತ್ತಿನಲ್ಲಿ ಅವತರಿಸಿ ಏಸು ಕ್ರಿಸ್ತನು ಕಡೆಗೆ ಜನರಿಗೆ ತನ್ನ ಜೀವನ ಸ್ವಾರಸ್ಯವನ್ನು ಅರುಹಿ ಕೊಡುವದಕ್ಕಾಗಿಯೇ ಶಿಲುಬೆಯನ್ನು ಸಹ ಏರಿದನೋ, ಯಾವ ಪ್ರಕಾರ ಭಗವಾನ್ ಬುದ್ಧದೇವನು ಹಿಂಸೆಯ ಕ್ರೌರ್ಯವನ್ನು ತಗ್ಗಿಸುವದಕ್ಕಾಗಿಯೇ ರಾಜ್ಯ, ಕೋಶ, ಪತ್ನಿ, ಪುತ್ರಾದಿಗಳನ್ನು ಬಿಟ್ಟು ಕೊಟ್ಟು ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದನೋ ಹಾಗೆಯೇ ಶಿವಶರಣರಲ್ಲಿ ಮುಖ್ಯವಾಗಿ ಹರಳಯ್ಯ ಮಧುವಯ್ಯಗಳು ಮುಂದಿನ ವೀರಶೈವ ಸಮಾಜಕ್ಕೆ ಮಾರ್ಗದರ್ಶಿಯಾಗುವದಕ್ಕಾ ಗಿಯೇ ತಮ್ಮ ತನುಗಳನ್ನು ಅರ್ಪಿಸಿದರು. ವೀರಶೈವರ ವೀರತ್ವವೆ ಲ್ಲಿದೆ? ಹರಳಯ್ಯ ಮಧುವಯ್ಯಗಳ ವೀರ ಕಾರ್ಯಾರ್ಪಣೆಯಲ್ಲಿದೆ. ವೀರಶೈವರ ಕಲ್ಯಾಣವೆಲ್ಲಿದೆ? ಅದು ಜಾಳಾದ ಕಲ್ಯಾಣದಲ್ಲಿಯೇ ಇದೆ.

ಶರಣರು ಸುರಿಯುವ ರಕ್ತಧಾರೆಯಿಂದ ವೀರಶೈವರಲ್ಲಿ ಜಾತಿ ಭೇದವಿಲ್ಲವೆಂಬುದನ್ನೇ ಕೆಂಪು ಅಕ್ಷರಗಳಿಂದ ಪ್ರತಿಯೊಬ್ಬ ವೀರ ಶೈವನ ಹೃದಯದಲ್ಲಿ ಆಚ್ಚೊತ್ತಿದ್ದಾರೆ. ಇದೇ ಶರಣರ ಕೊನೆಯ ಸಂದೇಶ. ಅವನೊಬ್ಬ ವಿಭೂತಿಯ ಆನ್ಯನಾಯಿಯಾದರೂ ತನ್ನ ಮಹಾ ಪುರುಷನ ಕೊನೆಯ ಸಂದೇಶವನ್ನು ಇಂಥ ಆನಸ್ಥೆಯಲ್ಲಿಯೇ ಕಾಣುತ್ತಾನೆ. ಆ ಸಂದೇಶವೆ ಅವನ ಧರ್ಮದ ತಳಹದಿಯಾಗಿರುತ್ತದೆ. ಆ ಸಂದೇಶವೇ ಅವನಲ್ಲಿ ನವಚೈತನ್ಯವನ್ನು ಕೊಟ್ಟು ಕಾರ್ಯರಂಗಕ್ಕೆ ತರಿಸುತ್ತದೆ. ಕ್ರೈಸ್ತರು ಕ್ರಿಸ್ತನ ಸಂದೇ ಶವನ್ನು ಯಾವ ಪ್ರಕಾರವಾಗಿ ಗ್ರಹಿಸಿರುವರೆಂಬುದನ್ನು ನೋಡಿರಿ—

When I survey the wondrous cross,
On which the Prince of Glory died,
My richest gain I count but a loss,
And poor contempt on all my pride,
See from his head, his hands, his feet,
Sorrow and love flow mingled down,
Did ever such love and sorrow meet,
Or thorns compose so rich a crown?
Were the whole realm of nature mine,
That were an offering far too small,
Love so amazing, so divine,
Demands my soul, my life my all.

(Bible.)

ಇದೇ ಪ್ರಕಾರವಾಗಿ ವೀರಶೈವರೆ, ಶರಣರ ಜೀವಿತದ ಉದ್ದೇಶ ವೇನೆಂಬುದನ್ನು ಕಂಡುಕೊಳ್ಳಿರಿ. ಶರಣರು ಪಟ್ಟ ಕಷ್ಟವು ಆರಿ ಗಾಗಿ? ವಿಶ್ವಶೈವ ಧರ್ಮದ ವೀರತ್ವವನ್ನು ನಿಮ್ಮ ಮನದಲ್ಲಿ ಬಿಂಬಿ ಸುವದಕ್ಕಾಗಿಯೇ ಅಲ್ಲವೆ? ಇಂಥ ಉಜ್ವಲವಾದ ಶರಣರ ಜೀವನ ಚರಿತ್ರೆಗಳು ನಿಮ್ಮ ಮುಂದಿರಲು ನೀವು ಇನ್ನೂ ಕುಲ ಛಲವನ್ನು ಹಿಡಿದು ಜಾತಿ ಭೂತಕ್ಕೆ ವಶವಾಗುವಿರಾ? ಸ್ವಾರ್ಥಿಗಳ ತುತ್ತಿಗೆ ಆಹುತಿಯಾಗುವಿರಾ? ಜಗತ್ತಿನಲ್ಲೆಲ್ಲ ಉಂಟಾಗಿರುವ ಕೋಲಾಹಲ ವೆಲ್ಲ ಈ ಜಾತಿಯಿಂದಲೇ ಎಂಬುದನ್ನು ವೀರಶೈವರು ನೆನಪಿನಲ್ಲಿ ಡಲಿ ಆದುದರಿಂದ ನಮ್ಮ ಪುರಾತನರು ಆವ ಧೈರ್ಯದಿಂದ ಈ ಜಾತಿಯನ್ನು ಎದುರಿಸಿದರೋ ಅದೇ ಧೈರ್ಯದಿಂದ ವೀರಶೈ ವರು ಎದೆಗೊಡಲಿ. "ಮಡದಿಯ ಪ್ರಾಣಕ್ಕೆ ನೊಲೆ ಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ? ನೀತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ" ಎಂಬ ಮಾ ತನ್ನು ಸದಾ ನೆನಪಿನಲ್ಲಿಡಲಿ. [ಹಾಟೇಲ ಲಿಂಗನಗೌಡ]

ಮುಂಬಯಿಯಲ್ಲಿ ಕೂಲಿಕಾರರ ಕಟ್ಟು.

ಕಳೆದ ಕೆಲವು ದಿವಸಗಳಿಂದ ಮುಂಬಯಿಯಲ್ಲಿ ಕೂಲಿಕಾರರ ಕಟ್ಟು ಬಲವಾಗಿ ನಡೆದಿದೆ. ೫೧ ಗಿರಣಿಗಳಲ್ಲಿ ೪೬ ಗಿರಣಿಗಳು ನಿಂತಿವೆ. ೬೦೦೦೦ ಜನರು ಉದ್ಯೋಗ ಬಿಟ್ಟಿದ್ದಾರೆ. ಕೂಲಿ ಕಾರ ಮುಂದಾಳುಗಳನ್ನೆಲ್ಲ ಸೆರೆಮಾಡಿದ್ದಾರೆ. ದೊಣ್ಣೆ ಪ್ರಹಾರದಿಂದ ಕೂಲಿಕಾರ ಸಮೂಹವನ್ನು ಚದುರಿಸುತ್ತಿದ್ದಾರೆ. ತೀನೆಯ ತಾರೀ ಖಿನ ದಿನ ಕೂಲಿಕಾರರು ಹಿಮ್ಮೆಟ್ಟಿದ್ದರಿಂದ ಗುಂಡು ಹಾರಿಸಲಾ ಯಿತು. ಆದರೆ ಯಾರಿಗೂ ಅಪಾಯವಾಗಲಿಲ್ಲ. ಗಿರಣಿಯ ಒಡೆ ಯರಲ್ಲಿ ಮತ್ತು ಕೂಲಿಕಾರರಲ್ಲಿ ಸಂಧಾನ ಮಾಡುವದಕ್ಕಾಗಿ ಕೆ. ಎಫ್ ನರಿಮನ್ ಮೊದಲಾದವರು ಮೇಯರರಿಗೆ ಅರ್ಜಿ ಕಳಿಸಿರು ವರು.

ಭಾರಭೂತ ಗುರುಗಳ ಅವಶ್ಯಕತೆಯಾದರೂ ಏನು?

(ಲೇಖಕರು:— ವಿ. ಆ. ಮಾಳಗೆ ಸೊಲ್ಲಾಪುರ)

ವೀರಶೈವ ಧರ್ಮವು ಅನಾದಿ ಕಾಲದಿಂದ ಬಂದುದಾಗಿದೆ. ಇದಕ್ಕೆ ಅನೇಕ ವಿಪತ್ಪರಂಪರೆಗಳೂ ಉಂಟಾಗಿವೆ. ಯಾವದೇ ಧರ್ಮವಾಗಲಿ, ಅದಕ್ಕೆ ಕ್ಷೀಣದೆಸೆಯು ಪ್ರಾಪ್ತವಾಗಲು ಪರಮಾತ್ಮನು ಅವತರಿಸಿ ಪುನಃ ಉದ್ಧರಿಸುತ್ತಾನೆ. ಹಾಗೆಯೇ ಗತಿಸಿದ ಶತಮಾನದಲ್ಲಿ ವೀರಶೈವ ಮತವು ಅತ್ಯಂತ ಕ್ಷೀಣವಾಗಲು ವಿಶೇಷವಾಗಿ ಜೈನ ರಾಜರ ಆಡಳಿತದಲ್ಲಿ ವೀರಶೈವ ಧರ್ಮದ ಹ್ರಾಸವಾಗಹತ್ತಲು ಪರಮಾತ್ಮನೇ ಶ್ರೀ ಬಸವೇಶನ ಅವತಾರದಿಂದ ರಕ್ಷಣೆ ಮಾಡಿದನು. ಆ ಕಾಲಕ್ಕೆ ಧರ್ಮ ಸಂಸ್ಥಾಪಕರು ನಾವು, ಇಲ್ಲಿ ನಾವು, ಎಂದು ಹೊಡೆದಾಡುವವರ ಸುಳುವು ಸಹ ಇದ್ದಿಲ್ಲ. ಶ್ರೀ ಬಸವೇಶ್ವರನು ಲಿಂಗಾಂಗಿಗಳಿಗೆ ಲಿಂಗದೀಕ್ಷೆಯನ್ನು ಕೊಟ್ಟು ಅಲಿಂಗಿಗಳಿಗೆ ಲಿಂಗಧಾರಣ ಮಾಡಿಸಿ ಸರ್ವ ಸಮಾನತೆಯ ನೀತಿ ಧರ್ಮವನ್ನು ಬೋಧಿಸಿ ಲಿಂಗಾಯತರನ್ನು ಸುಸಂಘಟಕರನ್ನಾಗಿ ಮಾಡಿದನು. ಚತುರ್ವರ್ಣದ ಸೀಮೆಯ ಆಚೆಗಿದ್ದ ಜನರನ್ನು ಲಿಂಗಾಯತ ಧರ್ಮದೊಳಗೆ ಸೇರಿಸಿಕೊಂಡು ವೀರಶೈವರೆಲ್ಲರಲ್ಲಿ ಭೇದವನ್ನು ಎಣಿಸದೆ ಅವರಿಗೆ ಲಿಂಗದೀಕ್ಷೆಯನ್ನು ಕೊಟ್ಟು ಸಮಾಜವನ್ನು ಪುಷ್ಟಗೊಳಿಸಿದನು.

ಪೂರ್ವ ಪರಂಪರೆಯು ಹೀಗಿರುತ್ತಿರಲು ನಿಷ್ಕಾರಣವಾಗಿ ಈ ವಿರಕ್ತ ಪಂಚಾಚಾರ್ಯ ವಾದವನ್ನು ಎಲ್ಲಿಂದ ಹೊಸ ಹೊಸ ರೂಢಿಗಳು ತಲೆದೋರುತ್ತ ಪುನಃ ಅವುಗಳನ್ನು ಆಧಾರಪಡಿಸುವದಕ್ಕೆ ಹೊಸ ಗ್ರಂಥಗಳು ಸಹ ನಿರ್ಮಾಣವಾದವು. ಇವರಿಂದ ಭಕ್ತ ವರ್ಗದವರ ಮನವು ಭಿನ್ನವಾಗಿ ಪ್ರೇಮಬಂಧನವು ಕತ್ತರಿಸಹತ್ತಿತು ದೊಡ್ಡಿಸ್ತನವನ್ನು ಹೊಂದಬೇಕೆಂಬ ಪೈಪೋಟಿದಿಂದ ನಾನೇ ಧರ್ಮ ಗುರು, ನಾನೇ ಜಗದ್ಗುರು, ನಾನೇ ಧರ್ಮಪೀಠದ ಕಾರಭಾರಿ ಇತ್ಯಾದಿಯಾಗಿ ತಮ್ಮ ಜೊಳ್ಳು ಆಡಂಬರವನ್ನು ಅನೇಕರು ಮೆರೆಯಿಸುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಸದ್ಯಕ್ಕೆ ಸಮಾಜದ ನಿಜವಾದ ಶ್ರೇಯೋಭಿಲಾಷೆಯುಳ್ಳ ಸಾಮರ್ಥ್ಯವುಳ್ಳ ನಾಯಕರು ಮುಂದೆ ಬಂದು ಈ ಆಡಂಬರಕಾರರನ್ನೆಲ್ಲ ಹಿಂದಕ್ಕೆ ಸರಿಸಿ ಹಳೆಯ ಮೂಢ ವಿಚಾರಗಳನ್ನೆಲ್ಲ ಹಿಂಪೊಡಿ ಶ್ರೀ ಬಸವಾದಿ ಪುಮಥರ ವಿಚಾರಗಳನ್ನು ತಿಳಿಸಿದರೆ ಸಮಾಜವು ಶೀಘ್ರವಾಗಿ ಜಾಗೃತವಾಗುವದು. ಒಮ್ಮೆ ಈ ಪ್ರಕಾರದ ಜಾಗೃತಿಯಾಯಿತೆಂದರೆ ಈ ಆಡಂಬರ ಪ್ರಿಯ ಧರ್ಮ ಗುರುಗಳ ಅನಾವಶ್ಯಕತೆಯು ತಾನೇ ತೋರಹತ್ತುವದು.

ಗುರುಗಳೆಂಬವರಿಗೆ ಭಕ್ತರ ಕಷ್ಟನಷ್ಟಗಳು ತಿಳಿದಿಲ್ಲ. ಹಾಗಿದ್ದರೆ ಅವರು ಈ ವಾದವನ್ನು ಮಾಡುತ್ತಲೇ ಇರಲಿಲ್ಲ ನಿಜವಾದ ಧರ್ಮ ಸುಧಾರಣೆ ಮತ್ತು ಭಕ್ತೋದ್ಧಾರಕ್ಕಾಗಿ ಇವರ ಜೀವನವು ತಳಮಳಿಸುತ್ತಿದ್ದರೆ ಭಕ್ತರಾದರೂ ಅವರಸಲುವಾಗಿ ಬೇಕಾದ ತ್ಯಾಗವನ್ನು ಮಾಡಲು ಸಿದ್ಧರಿರುವರು. ಆದರೆ ಅವರ ವಾದವು ಸ್ವಂತ ಧನತೆಗಾಗಿ ನಡೆದಿದೆ. ಇದರಿಂದಲೇ ಅವರ ಮೇಲಿರುವ ಭಕ್ತರ ನಿಜವಾದ ಪ್ರೇಮಭಾವವು ನಷ್ಟವಾಗಿದೆ ಸ್ವಾಮಿಗಳೆ, ದೊಡ್ಡಿಸ್ತನದ ದುರಾಶೆಯಿಂದ ನೀವು ನಿಮ್ಮದಿಷ್ಟೇ ಅಲ್ಲ; ನಮ್ಮ ಧರ್ಮವನ್ನೂ ನಾಶಮಾಡುತ್ತಿರುವಿರಿ. ಇದು ನಿಮ್ಮ ಅಸೂಯಾಪರ ನಡತೆಯಿಂದಲೇ ಕಾಣಿಸುತ್ತಿದೆ. ನಾವು ನಿಮ್ಮವರೇ ಇದ್ದೇವೆ, ನಿಮ್ಮ ಅಭಿಪ್ರಾಯದವರೇ ಇದ್ದೇವೆ ಎಂದು ಬಣ್ಣದ ಮಾತುಗಳಿಂದ ಭಕ್ತರನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಿರುವಿರಿ. ಧರ್ಮದಲ್ಲಿ ನಿಜವಾದ ಏನೊಂದೂ ಸುಧಾರಣೆಯನ್ನು ಮಾಡದೆ ಉಂಡಾಡಿಗರಂತೆ ಸ್ವಸ್ಥವಾಗಿ ಗಾದಿ ಗಿರ್ದಿಗಳ ಮೇಲೆ ಉರುಳಾಡುತ್ತ ಭಕ್ತರು ಮಠಗಳಲ್ಲಿ ವರ್ಷಾನುವರ್ಷ ಕಾಲ ಕಳೆಯುತ್ತಿರುವುದು ನಾಚಿಕೆಗೇಡಿತನವಲ್ಲವೆ? ಜಟಾವಟಕ್ಕೆ ಎಣ್ಣೆ ಹಚ್ಚಬಾರದೆಂದು ಶಾಸ್ತ್ರಾಜ್ಞೆಯಿರುತ್ತಿರಲು ಸಾವಿರಾರು ಕಾಮಿನಿಯಾ ಸುಗಂಧದೆಣ್ಣೆಯ ಬಾಟ್ಲಿಗಳ ಹಾರುತ್ತಿರುವುದನ್ನು ನೋಡಿದರೆ ಏನನ್ನಬೇಕು? ಇದರಿಂದ ನಿಮಗೆ ಕ್ಷಣಿಕ ಸುಖವೆನಿಸಬಹುದು. ಆದರೆ ನಿಮ್ಮ ಕೈಯಿಂದ ಉಂಟಾದ ಪಾಪವು ನಿಮ್ಮನ್ನು ಸ್ಪಷ್ಟವಾಗಿ ಅನುಸರಿಸಿದೆ ಸಮೋಕ್ಷಭೋಗಕ್ಕಾಗಿಯೇ ನಿಮ್ಮ ಜೀವನವಿರದೆ ಧರ್ಮ ಸುಧಾರಣೆಗಾಗಿಯೆಂಬುದು ನಿಮ್ಮ ಮುಂದ ಬುದ್ಧಿಗೆ ಹೇಗೆ ತಾನೆ ಗೋಚರಿಸಬೇಕು. ನಿಮ್ಮ ಜಗಳದಿಂದ ಅನೇಕ ಭಿನ್ನ ಭಿನ್ನ ಧರ್ಮ ಶಾಸ್ತ್ರಗ್ರಂಥಗಳಾದರ ಪರಿಣಾಮವು ಚಂಡಿಕೆಯವರೆಗೆ ಬಂದಿದೆ ಇನ್ನು ಲಿಂಗವನ್ನು ತೆಗೆದು ಜನಿವಾರವನ್ನು ಹಾಕಿಕೊಳ್ಳುವ ಸರತಿಯೆಲ್ಲಿ ಬರುವದೊ ತಿಳಿಯದು, ವಿಭೂತಿ ರುದ್ರಾಕ್ಷಿಗಳನ್ನು ಬಿಡಿಸಿ ಗಂಧ ತುಲಸಿ ಮಾಲೆಯನ್ನು ಉಪಯೋಗಿಸಲು ಹೇಳುವ ಎತ್ತನಾದರೂ ಹುಟ್ಟಿ ಬಹುದು. ನಿಮ್ಮ ಹಸ್ತಕರಾದ ಅನೇಕ ಶಾಸ್ತ್ರಿಗಳು ನಿಮಗೆ ಅನುಕೂಲವಾಗಿರಲು ಹೊಸ ಹೊಸ ಶಾಸ್ತ್ರ ಪುರಾಣಗಳು ಹುಟ್ಟಲು ಅದೆಷ್ಟು ಕಾಲ ಬೇಕು? ಆದರೆ ಇದರಿಂದ ನಿಜವಾದ ವೀರಶೈವ ಮತವು ವಿಧ್ವಂಸವಾಗುತ್ತಿದೆ. ಕೊಡಲಿಯ ಕಾವು ಕುಲಕ್ಕೇ ಮೂಲ ವೆಂಬಂತೆ ನಮ್ಮ ಧರ್ಮ ಗುರುಗಳ ಘೋರಣೆಯಿದ್ದರೆ ಅವರ ಅವಶ್ಯಕತೆಯಾದರೂ ಏನು?

ರಾ ಸಾ. ಹಳಕಟ್ಟಿಯವರು ವಾಂಙ್ಮಯಸೇವೆಗೆ ಕಂಕಣ ಬದ್ಧರಾಗಿ ಸಮಾಜವನ್ನು ಸಾಕ್ಷರವಾಡುವದಕ್ಕಾಗಿ ಅಹರ್ನಿಶ ಪ್ರಯತ್ನಿಸುತ್ತಿರುತ್ತಾರೆ ಆದರೆ ನಮ್ಮ ಧರ್ಮಗುರುಗಳು ಮಾಡಿದ್ದೇನು? ಹುಬ್ಬಳ್ಳಿಯ ಶ್ರೀ ವಾವಟಿಯವರು ನಮ್ಮ ಧರ್ಮತತ್ವ ಮೀಮಾಂಸೆಯ ಪರಿಶೀಲನ ಮಾಡುತ್ತಿದ್ದರೆ ನಮ್ಮ ಧರ್ಮ ಗುರುಗಳು ಏನು ಮಾಡುತ್ತಿದ್ದಾರೆ? ಜಗದ್ಗುರು ಮುರುಘಾರಾಜೇಂದ್ರ ಮಹಾ ಸ್ವಾಮಿಗಳು ಅತ್ಯಂತ ಉದಾರತನದಿಂದ ಶಿಕ್ಷಣ ವೃದ್ಧಿಗಾಗಿ ಧನ ಸಹಾಯ ಮಾಡಿದಂತೆ ಯಾವ ಧರ್ಮ ಗುರುವಿಗಾದರೂ ಅಂಥ ಬುದ್ಧಿ ಹುಟ್ಟಿರುವದೇನು? ಯಾವ ಪುಣ್ಯ ಕಾರ್ಯವನ್ನು ಇವರು ಮಾಡಬೇಕಾಗಿದ್ದಿತೋ ಅದನ್ನು ಮಾಡದೆ ಹೋದಲ್ಲಿ ಈ ಭಾರಭೂತ ಗುರುಗಳ ಅವಶ್ಯಕತೆಯಾದರೂ ಏನು?

—ದೇವಘರ ಎಂಬ ಗ್ರಾಮದಲ್ಲಿ ಎರಡುಸಾರೆ ಸನಾತನಿಗಳು ಮಹಾತ್ಮಾಜಿಯವರ ಮೋಟಾರಿನ ಮೇಲೆ ಆಕ್ರಮಣಮಾಡಿ ಅದರ ಕನ್ನಡಿ ಒಡೆದಿರುವರು. ಮತ್ತು ಒತ್ತಾರ ಎಂಬಲ್ಲಿ ಸ್ವಯಂಸೇವಕರ ಮೇಲೆ ಏರಿ ಹೋಗಿ ಮೂರುಜನರ ತಲೆ ಒಡೆದಿರುವರು. ಸನಾತನಿಗಳ ದುಷ್ಕೃತ್ಯಕ್ಕಾಗಿ ಅವಶ್ಯ ಕಂಡರೆ ದೇವಘರದಲ್ಲಿ ಮಹಾತ್ಮಾಜಿಯವರು ಉಪವಾಸ ಪ್ರಾರಂಭಿಸುವರು.





ಶಾ. ಶ. ೧೮೫೬ ನೆಯ ಆ. ವೈಶಾಖ ಬ ೧ ಸೋಮವಾರ.

ಅನುಕರಣೀಯ ಅಸಹಕಾರ.

ಬೆಂಗಳೂರಿಗೆ ಶ್ರೀ ಬಾಳೆಹಳ್ಳಿ ಸ್ವಾಮಿಗಳನ್ನು ಬರಮಾಡಿ ಕೊಳ್ಳುವ ವಿಚಾರದಲ್ಲಿ ನಡೆದ ಭಿನ್ನಾಭಿಪ್ರಾಯಗಳ ಪರ್ಯವಸಾನವು ಕೊನೆಗೆ ಅಸಹಕಾರದಲ್ಲಿ ಪರಿಣಮಿಸಿದುದು ತುಂಬಾ ವಿಷಾದಕರವು. ಅದರಲ್ಲಿಯೂ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರಂತಹ ಸಮಾಜ ಪ್ರಮುಖರು ಒಂದು ಪಕ್ಷದವರಾಗಿ ಪರಿಣಮಿಸಿ ಹೀಗೆ ಅಸಹಕಾರಕ್ಕೆ ಅವಕಾಶವನ್ನುಂಟುಮಾಡಿದುದು ಅವರ ಘನತೆಗೂ ಶ್ರೀ ಬಾಳೆಹಳ್ಳಿ ಗುರುಪೀಠದ ಶ್ರೇಷ್ಠತೆಗೂ ಬೆಂಗಳೂರು ವೀರಶೈವ ಸಮಾಜದ ಗೌರವಕ್ಕೂ ಕೊರತೆಯನ್ನುಂಟುಮಾಡಿದುದು ದುಃಖವಾದುದು.

ವ್ಯಕ್ತಿಯ ಮಹತ್ವವಾಗಲಿ ಅಥವಾ ಪೀಠದ ಮಹತ್ವವಾಗಲಿ ಹೆಚ್ಚಿನದಲ್ಲ. ತತ್ವ ನಿಷ್ಠೆಯೇ ಶ್ರೇಷ್ಠವಾದುದೆಂದು ಬೆಂಗಳೂರಿನ ವೀರಶೈವ ಮಹಾಜನರು ತಿಳಿದು ಶ್ರೀ ಬಾಳೆಹಳ್ಳಿ ಸ್ವಾಮಿಗಳು ತಮ್ಮ ಪಟ್ಟಣಕ್ಕೆ ಬರುವಾಗ ತಾವು ಆ ಪಟ್ಟಣವನ್ನು ಪರಿತ್ಯಾಗ ಮಾಡಿದುದು ವೀರಶೈವರ ಆಧುನಿಕ ಚರಿತ್ರೆಯಲ್ಲಿಯೇ ಒಂದು ಅಪೂರ್ವವಾದುದೂ ಅನುಕರಣೀಯವಾದುದೂ ಆಗಿದೆ. ಈ ಪ್ರಕಾರ ವೀರಶೈವ ತತ್ವಗಳ ವಿಷಯದಲ್ಲಿ ಉಜ್ವಲವಾದ ಅಭಿಮಾನವನ್ನು ವ್ಯಕ್ತಗೊಳಿಸಿದ ವೀರಶೈವ ಮಹಾಜನಗಳನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಈ ಶಾಂತಿಯುಕ್ತವಾದ ಅಸಹಕಾರದಿಂದಲಾದರೂ ಬಸವ ತತ್ವ ವಿರೋಧಕರು ಎಚ್ಚತ್ತು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದು ಯುಕ್ತವಲ್ಲವೆ? ಹಾಗೆ ತಪ್ಪುಗಳನ್ನು ತಿದ್ದಿಕೊಂಡು ಆ ಬಸವಾದಿ ಪ್ರಮಥರ ತತ್ವಗಳಿಗೆ ತಲೆಬಾಗಿ ನಡೆಯದಿದ್ದರೆ ತಾವು ಹೋಗುವಲ್ಲೆಲ್ಲಾ ಹೀಗೆಯೇ ಅಸಹಕಾರವೂ ಅನೈಕಮತ್ಯಗಳೂ ಉಂಟಾಗುವವೆಂದು ಈಗಲಾದರೂ ಪ್ರಮಥ ವಿರೋಧಿಗಳು ತಿಳಿದುಕೊಂಡರೆ ಅವರಿಗೆ ಘನತೆಯಲ್ಲದೆ ಸಮಾಜಕ್ಕೂ ಹಿತಕರವು.

ಶ್ರೀ ಬಸವಾದಿ ಪ್ರಮಥರ ಮತ್ತು ಶ್ರೀ ರೇಣುಕಾದಿ ಗುರು ವರ್ಯರ ನಡೆನುಡಿಗಳಿಗೆ ವಿರೋಧವಾದ ಚಟುವಟಿಕೆಗಳು ಇತ್ತೀಚೆಗೆ ಹೆಚ್ಚುತ್ತಾ ಬಂದಿರುವುದರಿಂದ ಜನಗಳಲ್ಲಿ ಅಸಂತೋಷವುಂಟಾಗಿ ಅದು ಈ ಪ್ರಕಾರ ಶಾಂತಿಯುಕ್ತ ಅಸಹಕಾರವನ್ನು ಕೂಡಾ ವ್ಯಕ್ತಗೊಳಿಸುತ್ತಿದ್ದುದನ್ನು ನೋಡಿದರೆ ಆ ಬಸವಾದಿ ಪ್ರಮಥರ ಶ್ರೇಷ್ಠತರವಾದ ತತ್ವಗಳಲ್ಲಿ ಜನಗಳಿಗಿರುವ ಅಪಾರವಾದ ಪ್ರೇಮಾದರಗಳು ಗೊತ್ತಾಗುತ್ತವೆ. ತಮಗೆ ಪ್ರಿಯವಾದ ತತ್ವಗಳನ್ನು ವಿರೋಧಿಸುವವರು ಎಂತಹ ಪೀಠವನ್ನೇರಿದ್ದರೂ ಅವರಲ್ಲಿ ಸಹಕರಿಸಿ ನಡೆಯಲು ಈಗ ಜನರು ಸಿದ್ಧರಿಲ್ಲವೆಂಬಂಶವು ಬೆಂಗಳೂರಿನ ವೀರಶೈವ ಮಹಾಜನಗಳ ಈ ಅಸಹಕಾರದಿಂದ ಸ್ಪಷ್ಟ ಗೊತ್ತಾಗುತ್ತದೆ.

ರಾಜಕಾರಣದಲ್ಲಿ ಪ್ರಜೆಗಳ ಅಭಿಪ್ರಾಯವನ್ನನುಸರಿಸಿಯೇ ಸರಕಾರವು ನಡೆಯಬೇಕಾದುದು ಹೇಗೆ ಯುಕ್ತವೋ ಹಾಗೆಯೇ ಧಾರ್ಮಿಕ ವಿಷಯದಲ್ಲಿಯೂ ಸತ್ಯ ತತ್ವಗಳನ್ನನುಸರಿಸಿ ನಡೆಯಬೇಕಾದುದೇ ಗುರುಗಳ ಕರ್ತವ್ಯವು. ಅದನ್ನು ಅವರು ಅತಿಕ್ರಮಿಸಿದ್ದಾದರೆ ಅವರೊಂದಿಗೆ ಸಹಕರಿಸಿ ನಡೆಯಲು ಪ್ರಜೆಗಳು ಸಿದ್ಧರಿಲ್ಲವೆಂಬ ವ್ಯಕ್ತಿಸ್ವಾತಂತ್ರ್ಯದ ತತ್ವವನ್ನು ಧಾರ್ಮಿಕ ವಿಷಯದಲ್ಲಿಯೂ ಈ ಪ್ರಕಾರ ಬೆಂಗಳೂರಿನ ವೀರಶೈವ ಮಹಾಜನರು ಆಚರಿಸಿ ತೋರಿಸಿದುದು ಅನುಕರಣೀಯವಾದುದು.

ಜನರು ಧಾರ್ಮಿಕ ಮೂಢ ಕಲ್ಪನೆಯನ್ನು ತೆಗೆದುಹಾಕಿ ಗುರುಗಳೆಂಬುವರು ಹೇಳಿದಂತೆ ಕುಣಿದಾಡದೆ ನಿಜ ತತ್ವವನ್ನರಿತುಕೊಂಡು ಇದೇ ಪ್ರಕಾರ ನಡೆಯುವ ಧೈರ್ಯವನ್ನು ಹೀಗೆಯೇ ಎಲ್ಲಕಡೆಗೂ ಜನರು ತೋರಿಸಿದ್ದಾದರೆ ಸತ್ಯ ಪ್ರಕಾಶ ಬೆಳಗಲು ಬಹುಕಾಲ ಬೇಕಾಗಿಲ್ಲ. ಈ ಅಸಹಕಾರಕ್ಕೆ ಶಾಂತಿಯೇ ಮೂಲವು. ವಿರುದ್ಧ ಪಕ್ಷದವರು ಹೇಗೆ ಆಚರಿಸಿದರೂ ಅವುಗಳನ್ನೆಲ್ಲಾ ಈ ಅಸಹಕಾರದ ಪಂಗಡದವರು ಶಾಂತತೆಯಿಂದಲೇ ಸೈರಿಸಬೇಕು.

ಇರಿಸಿಕೊಂಡು ಭಕ್ತರಾದರೆನ್ನುವರು, ಜರಿಸಿಕೊಂಡು ಭಕ್ತರಾದರೆನ್ನುವರು, ಎಂಬ ಆ ಬಸವ ಮಹಾನುಭಾವನ ದಿವ್ಯ ವಾಣಿಯನ್ನು ಯಾವಾಗಲೂ ಸ್ಮರಣೆಯಲ್ಲಿಟ್ಟುಕೊಂಡು ಶಾಂತಿಯುಕ್ತವಾದ ರೀತಿಯಲ್ಲಿಯೇ ಈ ಅಸಹಕಾರಿಗಳು ಮುಂದೆಯೂ ನಡೆದು ಧಾರ್ಮಿಕ ವಿಷಯದಲ್ಲಿಯ ಈ ಅನುಕರಣೀಯವಾದ ಅಸಹಕಾರವು ತುಂಬಾ ಫಲಕಾರಿಯಾಗುವಂತೆ ಮಾಡುವರೆಂದು ನಾವನುನಂಬಿದ್ದೇವೆ.

(೯ ನೆಯ ಪುಟದಿಂದ ಬಂದುದು)

ನಿರ್ಣಯಗಳು.

(೧) ತಾ. ೭-೪-೧೯೩೪ನೆಯ ದಿವಸ ಮಹಾಂತಿನ ಮಠದಲ್ಲಿ ಶ್ರೀ ಬಾಳೆಹಳ್ಳಿ ಸ್ವಾಮಿಗಳವರನ್ನು ಬೆಂಗಳೂರಿಗೆ ಕರೆಯಿಸುವ ವಿಚಾರವಾಗಿ ಯೋಚಿಸಲು ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯ ಕಾಲಕ್ಕೆ ನಾವು ಕೊಟ್ಟ ಸೂಚನಾ ಪತ್ರದ ತೀರ್ಮಾನವು ತೃಪ್ತಿಕರವಾಗಿ ಆಗದೇ ಇದ್ದದ್ದರಿಂದ ಆಗಲೇ ಸಭೆಯನ್ನು ಪರಿತ್ಯಾಗ ಮಾಡಿದ್ದು ಸರಿಯಷ್ಟೆ.

ಅನಂತರ ತಾ. ೭-೪-೧೯೩೪ನೆಯ ದಿವಸ ಗೌಡರ ವೀರಭದ್ರಪ್ಪನವರ ಛತ್ರದಲ್ಲಿ ಮ. ರಾ. ಕಂಬಿ ಶಿವಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ತೀರ್ಮಾನವಾದ ಪ್ರಕಾರ ನಮ್ಮ ಸೂಚನಾ ಪತ್ರದಲ್ಲಿ ತಿಳಿಸಿದ ವಿಷಯಗಳಿಗೆ ಉತ್ತರವನ್ನು ತರಿಸಿಕೊಳ್ಳದಿದ್ದ ಪಕ್ಷದಲ್ಲಿ ಶ್ರೀ ಸ್ವಾಮಿಗಳ ಸ್ವಾಗತದ ಕಾರ್ಯದಲ್ಲಿ ನಾವು ಭಾಗಿಗಳಾಗುವುದಿಲ್ಲವೆಂಬುದನ್ನು ತಿಳಿಸಿದ ಮೇರೆಗೆ ಸ್ವಾಗತ ಸಂಘಾಧ್ಯಕ್ಷರಿಂದ ಸಮಂಜಸವಾದ ಉತ್ತರ ಬಾರದಿದ್ದುದರಿಂದ ಆ ದಿನ ತೀರ್ಮಾನ ಮಾಡಿದ ಮೇರೆಗೆ ಬೆಂಗಳೂರು ನಿವಾಸಿಗಳಾದ ನಾವು ಈ ದಿನ ಪ್ರಾತಃಕಾಲ ೮ ಗಂಟೆಗೆ ಸ್ಪೇಶಲ್ ಟ್ರೇನಿನಿಂದ ಹೊರಟು ಈ ಸಿದ್ಧಗಂಗಾ ಕ್ಷೇತ್ರಕ್ಕೆ ಬಂದಿದ್ದೇವೆ.

ಶ್ರೀ ಬಾಳೆಹಳ್ಳಿ ಶ್ರೀಗಳವರನ್ನು ಈ ದಿನ ಪ್ರಾತಃಕಾಲ ಬೆಂಗಳೂರಿಗೆ ಬರಮಾಡಿಕೊಂಡ ಕಾರ್ಯವು ಬೆಂಗಳೂರು ವೀರಶೈವ ಜನಗಳಲ್ಲಿ ಅಲ್ಪ ಸಂಖ್ಯಾಕರಾದ ಒಂದು ಪಕ್ಷದವರಿಂದ ನಡೆದುದಾಗಿದೆಯೇ ವಿನಾ ಬೆಂಗಳೂರು ಇಡೀ ವೀರಶೈವ ಸಮಾಜದವರಿಂದ ನಡೆದುದಲ್ಲ.

ಬೆಂಗಳೂರು

ವೀರಶೈವ ಮಹಾಜನರ ಅಸಹಕಾರ!

ಪ್ರಮಥರ ವಿಷಯವಾಗಿ ಉಜ್ವಲವಾದ ಅಭಿಮಾನ.

ಶ್ರೀ ಬಾಳೆಹಳ್ಳಿ ಸ್ವಾಮಿಗಳ ಆಗಮನದ ನಿಷೇಧ.

ಶ್ರೀ ಬಸವೇಶ್ವರ ಸ್ಪೆಶಲ್ ಟ್ರೈನ್! — **ಸಿದ್ಧಗಂಗೆಯ ಪ್ರಚಂಡ ಸಭೆ!!**

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಸಿದ್ಧಗಂಗಾ ಕ್ಷೇತ್ರ ತಾ. ೨೭-೪-೩೪.

ಬೆಂಗಳೂರಿನ ಶ್ರೀ ಬಾಳೆಹಳ್ಳಿ ಸ್ವಾಮಿಗಳವರು ಆಗಮಿಸುವ ವಿಚಾರವಾಗಿ ಅಲ್ಲಿಯ ವೀರಶೈವ ಮಹಾಜನರಲ್ಲುಂಟಾದ ಎರಡು ಪಕ್ಷಗಳಲ್ಲಿ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಏರ್ಪಟ್ಟ ಸ್ವಾಗತ ಸಂಘದ ಪಕ್ಷವೊಂದು. ಆ ಪಕ್ಷದವರು ಬಹು ಜನರಿಂದ ಕೂಡಿದ ಇನ್ನೊಂದು ಪಕ್ಷದವರ ನ್ಯಾಯವಾದ ಸೂಚನೆಗಳನ್ನು ಮಾನ್ಯಮಾಡದಿರಲು ಅಲ್ಲಿಯ ವೀರಶೈವ ಪ್ರಮುಖರು ಬಾಳೆಹಳ್ಳಿ ಶ್ರೀಗಳ ಆಗಮನದ ವಿಚಾರದಲ್ಲಿ ಅಸಹಕಾರವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಲು ಈ ದಿನ ಆ ತಮ್ಮ ಪಟ್ಟಣವನ್ನೇ ಪರಿತ್ಯಾಗ ಮಾಡಿ ಶ್ರೀ ಬಸವೇಶ್ವರ ಸ್ಪೆಶಲ್ ಟ್ರೈನಿನಲ್ಲಿ ಪ್ರಾತಃಕಾಲ ೮॥ ಗಂಟೆಗೆ ಬೆಂಗಳೂರಿಂದ ಸಾಧಾರಣ ೬೦೦ ಜನರು ಹೊರಟು ಸಿದ್ಧಗಂಗಾ ಕ್ಷೇತ್ರಕ್ಕೆ ಪ್ರಾತಃಕಾಲ ೧೦ ಗಂಟೆ ೨೦ ನಿಮಿಷಗಳಿಗೆ ಬಂದರು.

ಶ್ರೀ ಬಸವೇಶ್ವರ ಸ್ಪೆಶಲ್ ಟ್ರೈನ್ ಕ್ಯಾತಸಂದ್ರ ಸ್ಟೇಶನ್ನಿಗೆ ಬಂದೊಡನೆ ಶ್ರೀ ಬಸವೇಶ್ವರ ಮಹಾರಾಜಕಿ ಜೈ. ಶಾಂತಿ ಸಂಘಕಿ ಜೈ. ಅಸಹಕಾರ ಸಂಘಕಿ ಜೈ. ಎಂಬ ಜಯಘೋಷದಿಂದ ಮಹಾಜನರು ಗಾಡಿಯನ್ನಿಳಿದ ನಂತರ ಈ ಅಸಹಕಾರವೀರರ ಫೋಟೋ ತೆಗೆಯಲ್ಪಟ್ಟಿತು. ಅನಂತರ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಈ ಮಹಾಜನ ಸಮೂಹವು ಜಯಘೋಷದೊಡನೆ ಬಂದಿತು.

ಆ ಮೇಲೆ ಈ ಅಸಹಕಾರಿಗಳ ವಿಷಯದಲ್ಲಿ ಸಹಾನುಭೂತಿಯುಳ್ಳ ಅನೇಕ ಮಹಾಶಯರೊಂದಿಗೆ ಸೇರಿದ ಘನವಾದ ಸಮೂಹದ ಫೋಟೋ ತೆಗೆಯಲ್ಪಟ್ಟಿತು. ಬೆಂಗಳೂರಿಂದ ಬಂದ ಮಹಾಜನರಲ್ಲಿ ಕೆಲವು ಮಹಾಜನರ ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ.

೧ ಬೇಲಿ ಮಠದ ಸ್ವಾಮಿಗಳವರು ೨ ಗಂಜಾಮ ಮಠದ ಸ್ವಾಮಿಗಳವರು ೩ ಗುರುವಣ್ಣ ದೇವರ ಮಠದ ಸ್ವಾಮಿಗಳು ೪ ಮರಿಸ್ವಾಮಿಗಳ ಮಠದ ಸ್ವಾಮಿಗಳು ೫ ಮಾವಳ್ಳಿ ಸ್ವಾಮಿಗಳೇ ಮೊದಲಾದ ಶ್ರೀಗಳವರೂ ೬ ಕಂಬಿ ಶಿವಪ್ಪನವರು ೭ ಎಂ. ನಾಗಪ್ಪನವರು ೮ ಗೌಡರ ರುದ್ರಪ್ಪನವರು ೯ ಯಜಮಾನ್ ಎಂಡ್ ಸನ್ ಮಾದಪ್ಪನವರು ೧೦ ಸರಾಫ್ ಚನ್ನಬಸಪ್ಪ ಎಂಡ್ ಸನ್ಸ್ ೧೧ ಗರಡಿ ಸಿದ್ಧವೀರಪ್ಪನವರು ೧೨ ಗರಡಿ ಗುರುಬಸಪ್ಪನವರು ೧೩ ಜಿ. ಮಲ್ಲಪ್ಪನವರು ೧೪ ಟಿ. ಎನ್. ಚನ್ನಪ್ಪನವರು ೧೫ ಬಾಣಾವರ ಹುಚ್ಚಪ್ಪನವರು ೧೬ ಎನ್. ಜಶೆಟ್ಟೆಪ್ಪನವರು ೧೭ ಸೂಳಮರಿಯಪ್ಪನವರು ೧೮ ಪಲ್ಲೆಗೊಂಡ ದುರ್ಗಪ್ಪನವರು ೧೯ ಯಜಮಾನ್ ಜಿ. ಶ್ಯಾಮಣ್ಣನವರು ೨೦ ರೇವಣ್ಣ ರುದ್ರಪ್ಪನವರು ೨೧ ತೂಬಗೆರೆ ಶ್ರೀಕಂಠಪ್ಪನವರು ೨೨ ಡೈರಿ ಕೆಂಚಪ್ಪ ಎಂಡ್ ಸನ್ ೨೩ ಯು. ಎಸ್. ಕಾಳಪ್ಪನವರ ಮಕ್ಕಳು ಷಣ್ಮುಖಪ್ಪನವರು ೨೪ ಅಲಸೂರು ರುದ್ರಪ್ಪನವರು ೨೫ ಅಲಸೂರು ನಾಗಪ್ಪನವರು ೨೬ ಕಾಯಂಗಡಿ ಗುಬ್ಬಣ್ಣನವರ ಮಕ್ಕಳು ಶಂಕರಪ್ಪನವರು ೨೭ ಅಪ್ಪಣ್ಣನವರ ಮಲ್ಲಶೆಟ್ಟೆಪ್ಪನವರು ೨೮ ಬಿ! ಗುರುಶಾಂತಪ್ಪನವರು ೨೯ ಕಂಬಿ ರೇವಣ್ಣನವರು ೩೦ ಅಪ್ಪಾಜಪ್ಪನವರ ಹೊನ್ನ ಗಂಗಪ್ಪನವರು ೩೧ ಚೆನ್ನಶೆಟ್ರು ೩೧ ಜೀರಿಗೆ ಬಸವಲಿಂಗಪ್ಪನವರು ಇವರೇ ಮೊದಲಾದ ಪ್ರಮುಖ ಮುಂದಾಳುಗಳೂ ೩೨ ಜಿ. ಶಾಂತವೀರಪ್ಪನವರು ಬಿ. ಎ. ರಿಟಾಯರ್ಡ್ ಅ. ಪೋಲೀಸ್ ಸುಪರಿಂಟೆಂಡೆಂಟ್ ೩೩ ಕ್ಯಾ ಡಾ. ವಾಯು. ವಿ ಅಯ್ಯರವರು ೩೪ ಬಿ. ಎಂ. ಬಸಪ್ಪನವರು ಬಿ. ಎ. ಎಲ್. ಎಲ್. ಬಿ. ೩೫ ಸಿ. ಬಿ, ರುದ್ರಪ್ಪನವರು ಬಿ. ಎ. ಎಲ್. ಎಲ್. ಬಿ. ೩೬ ಬಂಡೆಪ್ಪನವರು ಬಿ ಎ. ಎಲ್. ಎಲ್. ಬಿ. ಇವರೇ ಮೊದಲಾದ ಪದವೀಧರರೂ ೩೭ ಮುನಿಸಿಪಲ್ ಕೌನ್ಸಿಲರ್ ಎಸ್ ಶಂಕರಪ್ಪ ಶೆಟ್ಟ ಇವರೂ ಇದ್ದರು.

ಬೆಂಗಳೂರಿನಿಂದ ಬಂದ ಈ ಅಸಹಕಾರಿಗಳ ವಿಷಯದಲ್ಲಿ ಸಹಾನುಭೂತಿಯುಳ್ಳ ತುಮಕೂರು ಗುಬ್ಬಿ ಮೊದಲಾದ ಸ್ಥಳಗಳಿಂದ ನೂರಾರು ಜನ ಪ್ರಮುಖರು ಇಲ್ಲಿಯ ಸಭೆಯ ಕಾರ್ಯಕ್ಕೆ ಬಂದಿದ್ದರು.

ಮಧ್ಯಾನ್ಹ—೨ ಗಂಟೆಯ ಸುಮಾರಿಕ್ಕೆ ಅಂದವಾಗಿ ತಳಿರು ತೋರಣಗಳಿಂದ ಶೃಂಗರಿಸಿದ ಭವ್ಯ ಮಂಟಪದಲ್ಲಿ ಶ್ರೀ. ಮ. ನಿ. ಬೇಲಿಮಠದ ಶ್ರೀ ಚರಮೂರ್ತಿ ಶಿವಮೂರ್ತಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ನೊರಲು ಶ್ರೀ ಶಿರಾಳಕೊಪ್ಪ ಚನ್ನಮಲ್ಲಪ್ಪನವರ ವ್ಯಾಖ್ಯಾನವಾಯಿತು. ಅವರು ತಮ್ಮ ಭಾಷಣದಲ್ಲಿ ವೀರಶೈವ ತತ್ವಜ್ಞಾನದ ವಿಷಯವಾಗಿ ಅನೇಕ ಆಧಾರಗಳಿಂದ ವಿವರಿಸಿದರು, ಅನಂತರ ಅಕ್ಕಲಕೋಟೆಯ ಶ್ರೀರೇವಣಸಿದ್ಧ ಶಿವಶರಣರು ೧೫ ನಿಮಿಷಗಳವರೆಗೆ ಅತ್ಯಂತ ಸ್ವಾರಸ್ಯವಾಗಿ ಭಾಷಣಮಾಡಿ ಜನಗಳ ಮನಾನಂದಗೊಳಿಸಿದರು. ಬೆಂಗಳೂರಿನಿಂದ ಬಸವಾದಿ ಪ್ರಮಥರ ಮೇಲಿರುವ ಪ್ರಬಲವಾದ ಪ್ರೇಮದಿಂದ ಹೊರಟ ಸ್ಪೇಶಲ್ ಟ್ರೇಕ್ ಕೇವಲ ಸಿದ್ಧಗಂಗಾ ಕ್ಷೇತ್ರವನ್ನು ಮುಟ್ಟಿ ಹಿಂದಿರುಗಿ ಹೋಗದೆ ಅದು ಬಸವಾದಿ ಪ್ರಮಥರ ಉಜ್ವಲವಾದ ತತ್ವಗಳ ಸೀಮೆಯನ್ನು ಸೇರಬೇಕೆಂದು ವಿವರಿಸಿದರು. ಅನಂತರ ಶ್ರೀ. ಹರ್ಡೇಕರ ಮಂಜಪ್ಪನವರು ಭಾಷಣವನ್ನು ಪ್ರಾರಂಭಿಸಿ ಬಸವಾದಿ ಪ್ರಮಥರ ಮಹತ್ಕಾರ್ಯ ಮತ್ತು ಗುರುಲಿಂಗ ಜಂಗಮರ ತಾರತಮ್ಯವನ್ನು ಕುರಿತು ಸುಮಾರು ಅರ್ಧ ತಾಸಿನವರೆಗೆ ಪರಿಣಾಮಕಾರಿಯಾಗಿ ಭಾಷಣ ಮಾಡಿದರು. ಅನಂತರ ಶ್ರೀಯುತ ಟಿ. ಎಂ. ಶ್ರೀಕಂಠಯ್ಯನವರು ಬಿ. ಎ. ಎಲ್. ಎಲ್. ಬಿ. ಅಡ್ವೋಕೇಟ್ ಇವರು ತಂದ ನಿರ್ಣಯವು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು. ಆ ನಿರ್ಣಯವು ಈ ಪ್ರಕಾರ ಇದೆ—

(ಎನೆಯ ಪುಟದ ೨ನೆಯ ಕಾಲಂಮಿನ ಮುಂದುವರಿದುದು)

ವಿವಿಧ ವಿಷಯ.

ಆಕಾಶ ಪಾತಾಳಗಳಲ್ಲಿ ಹಿಮದ ರಾಶಿ.

ಭೂಮಿಯ ಗರ್ಭದಲ್ಲಿ ಹಿಮವಿರುವದೆಂದರೆ ಯಾರಿಗೆ ತಾನೆ ಆಶ್ಚರ್ಯವಾಗದಿರದು! ಏಕೆಂದರೆ ಭೂಮಿಯ ಗರ್ಭದಲ್ಲಿ ಲಾವಾ ಎಂಬ ಕಾಯ್ದು ಹೊಯ್ದಾಡುವ ರಸವಿದ್ದು ಅದು ಭೂಮಿಯ ಪೃಷ್ಠ ಭಾಗಕ್ಕೆ ಚಿಮ್ಮಲ್ಪಟ್ಟರೆ ಹಳ್ಳ ಪಟ್ಟಣಗಳೆಲ್ಲ ಸುಟ್ಟು ಹೋಗುವವು ಹೀಗಿದ್ದರೂ ಭೂಗರ್ಭದಲ್ಲಿ ಹಿಮದ ತರವಿಗುವದೆಂದು ಅಮೇರಿಕೆಯ ವೋಂಟಾನಾ ಭೂಗರ್ಭ ಶಾಸ್ತ್ರಜ್ಞರು ಶೋಧಿಸಿದ್ದಾರೆ. ಈ ತರವು ಭೂಮಿಯೊಳಗೆ ಬಹು ಆಳದಲ್ಲಿ ೨೦ ಅಡಿ ಆಳ ಮತ್ತು ೫೦ ಅಡಿ ಅಗಲವಿರುತ್ತದೆ. ಇದು ಬಹುತರವಾಗಿ ಅನುದೊಂದು ನಿಯತಿಯ ಕ್ರಮದಿಂದ ಉಂಟಾಗುತ್ತಿರಬಹುದೆಂದು ಅನರು ಊಹಿಸುತ್ತಾರೆ.

ಇನ್ನು ಉತ್ತರ ಧ್ರುವದ ಹಿಮಾಚ್ಛಾದಿತ ಭೂಪೃಷ್ಠದಿಂದ ೬೦ ಮೈಲು ಅಂತರದ ಮೇಲೆ ಆಕಾಶದಲ್ಲಿ ಹಿಮದ ರಾಶಿಯು ಇರುವದಂತೆ. ಇದು ಘನರೂಪದಲ್ಲರದೆ ಹಿಮದ ಸಣ್ಣ ಸಣ್ಣ ಕಣಗಳ ರೂಪದಲ್ಲಿ ವಾತಾವರಣದಲ್ಲಿ ತೇಲಾಡುತ್ತಿರುವುದು. ಇದು ಬಹುತರವಾಗಿ ಬಿರುಗಾಳಿಗಳ ಹೊಡೆತದಿಂದ ಉಂಟಾಗಿರಬಹುದೆಂದು ತರ್ಕಿಸಲಾಗಿದೆ. ನೈಸರ್ಗಿಕ ಚಮತ್ಕಾರಗಳನ್ನು ಬಲ್ಲವರಾರು?

ಮಿಂಚು ಭೂಮಿಯಿಂದಲೇ ಹೊರಡುತ್ತದೆಯೇ?

ಮಿಂಚುವುದನ್ನು ನಾವು ಯಾವಾಗಲೂ ಆಕಾಶದಲ್ಲಿಯೇ ನೋಡುತ್ತೇವಷ್ಟೆ. ಆದುದರಿಂದ ಮಿಂಚು ಮೋಡಗಳ ಘರ್ಷಣದಿಂದಲೇ ಹುಟ್ಟುತ್ತಿರಬಹುದೆಂದು ಬಹುಜನರು ತಿಳಿದುಕೊಂಡಿರಬಹುದು. ಆದರೆ ನಿಜವಾಗಿಯೂ ಪೃಥ್ವಿಯೇ ಮಿಂಚನ್ನು ಎಸೆಯುತ್ತದೆ. ಇದಕ್ಕೆ ಕಾರಣವೇನೆಂದರೆ ಋಣ ವಿದ್ಯುಚ್ಛಕ್ತಿಯೇ (Negative) ಚಲಿಸುವಂಥದು. ಮತ್ತು ಧನ ವಿದ್ಯುಚ್ಛಕ್ತಿಯು (Positive) ಚಲಿಸದೆ ಸ್ಥಾಯಿಯಾಗಿರುವದು. ಈ ಧನ ವಿದ್ಯುಚ್ಛಕ್ತಿಯು ಮೋಡಗಳಲ್ಲಿರುವದು. ಮತ್ತು ಋಣ ವಿದ್ಯುಚ್ಛಕ್ತಿಯು ಪೃಥ್ವಿಯಲ್ಲಿರುವದು. ಈ ಋಣ ವಿದ್ಯುಚ್ಛಕ್ತಿಯ ಕಣಗಳ ಧನವಿದ್ಯುಚ್ಛಕ್ತಿಯ ಕಡೆಗೆ ಚಲಿಸಿ ಮಿಂಚನ್ನುಂಟುಮಾಡುತ್ತವೆ. ಆದರೆ ಮಿಂಚು ಆಕಾಶದಲ್ಲಿ ತೀವ್ರವಾಗಿ ಪ್ರಕಾಶಿಸುವದರಿಂದ ಭೂಮಿಯಲ್ಲಿ ಕಾಣಿಸದೆ ಆಕಾಶದಲ್ಲಿ ಕಾಣಿಸುವುದು.

ಡಾ. ಸತ್ಯಮೂರ್ತಿಯವರು 'ಹ್ಯಾಟ್'ನ ಮೇಲೆ ರೇಗಿದರು.

ಶ್ರೀ. ಸತ್ಯಮೂರ್ತಿಯವರು ಬಹಾರ ಯುವಕ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆವಾಗ್ಗೆ ಅವರು ಅಂದದ್ದೇನಂದರೆ "ಹಿಂದು ಸ್ಥಾನದಲ್ಲಿರುವ ಹಿಂದೀಯನು ಬಹಿರಂಗವಾದ ಕಾರ್ಯವನ್ನೇನೂ ನಾಡದೆ ಮನೆತನದ ಕೆಲಸಗಳಲ್ಲಿ ತೊಡಗಿದ ಕಾಲದಲ್ಲಿಯಾದರೂ ಹ್ಯಾಟ್ ಧರಿಸಿದರೆ ಅವನಲ್ಲಿ ರಾಷ್ಟ್ರೀಯತೆಯು ಅಭಾವವಿರುವ ನೆಂದಾಗಲಿ ಅಥವಾ ಅವನು ಸ್ವಾಭಿಮಾನಶೂನ್ಯನೆಂದಾಗಲಿ ನನಗೆ ತೋರುತ್ತದೆ." ಇದನ್ನು ಕಂಡು ಈ ಕಾಲದಲ್ಲಿ ಜನರೇಕರಿಗೆ ಆತ್ಯಾಶ್ಚರ್ಯವಾಗಬಹುದು. ಏಕೆಂದರೆ ಸ್ವದೇಶಾಭಿಮಾನವೆಂಬುದು ವಿಶೇಷದ ವಿಶಿಷ್ಟ ರೀತಿಯಲ್ಲಿಯೂ ಇದೆ ಏನೆಂಬುದೇ ಪ್ರಶ್ನೆ. ಅಲಸೊಂದು ರಾಷ್ಟ್ರಕ್ಕೆ ಕೆಲಪೊಂದು ಸುಧಾರಣೆಯ ಪೈಶಿಷ್ಟ್ಯವಿರುವುದೆಂಬುದೇನೋ ನಿಜ. ಆದರೆ ಹ್ಯಾಟ್ ಧರಿಸುವವರೆಲ್ಲ ದೇಶಾಭಿಮಾನ ಶೂನ್ಯರೆಂದು ಹೇಳಲಿಕ್ಕಾಗದು. ಇನ್ನು ಕೆಲವು ಜನ ಹ್ಯಾಟು ಒಂದು ವಿಶೇಷ ಗೌರವದ ಸಾಧನವೆಂದು ತಿಳಿದು ತಮ್ಮ ಚಿಕ್ಕ ಚಿಕ್ಕ ಮಕ್ಕಳಿಗೆ ಧರಿಸಲು ಕಲಿಸುವರಲ್ಲದೆ ತಾವೂ ಸಹ ಧರಿಸುವರು. ಇಂಥವರಿಗೆ ಶ್ರೀ. ಸತ್ಯಮೂರ್ತಿಯವರ ಉಗ್ರ ಟೀಕೆಯು ಅನ್ವಯಿಸುತ್ತದೆಂದು ನಮಗೆ ತೋರುತ್ತದೆ.

ತ್ರಾವಣಕೋರದಲ್ಲಿ ಅದಿಜನೋದ್ಧಾರ.

ಮಲಬಾರದಲ್ಲಿ ಅಸ್ಪೃಶ್ಯತೆಯು ಒಳ್ಳೇ ಭೀಕರ ಸ್ವರೂಪದಲ್ಲಿರುವದೆಂಬುದು ಸರ್ವವಿದಿತವಿದೆ. ಇಲ್ಲಿ ಸ್ಪರ್ಶ ದೋಷವಲ್ಲದೆ ದೃಷ್ಟಿ ದೋಷವು ಸಹ ಇರುತ್ತದೆ. ಅಂದರೆ ಅಸ್ಪೃಶ್ಯನು ಕಣ್ಣಿಗೆ ಸಹ ಬೀಳಬಾರದಂತೆ. ಆದುದರಿಂದ ಇಲ್ಲಿಯ ಒಳ್ಳೇ ಸುಧಾರಿಸಿದ ಸಂಸ್ಥಾನವೆಂದು ಹೆಸರುವಾಸಿಯಾದ ತ್ರಾವಣಕೋರ ಸಂಸ್ಥಾನವು ಈ ಅಸ್ಪೃಶ್ಯತೆಯೊಂದರಿಂದ ಕಲಂಕಿತವಾಗಿತ್ತು. ಇದನ್ನು ಹೋಗಲಾಡಿಸುವದಕ್ಕಾಗಿ ಸಂಸ್ಥಾನ ಸರಕಾರದವರು ಒಂದು ಸಮಿತಿಯನ್ನೆರ್ಪಡಿಸಿದ್ದರು. ಅವರು ಒಳ್ಳೇ ಕಷ್ಟದಿಂದ ವಿಚಾರ ಮಾಡಿ ಕಡೆಗೆ ಅದಿಜನರಿಗೆ ದೇವಾಲಯ ಪ್ರವೇಶವನ್ನು ಕೊಡಲು ಎಲ್ಲ ತರದ ಸೌಭ್ಯಗಳನ್ನು ಕೊಡಬೇಕೆಂದು ಸೂಚಿಸಿರುವರು. ಮತ್ತು ದೇವಾಲಯಗಳಲ್ಲಿ ಕೆಲವು ಮುಖ್ಯ ದೇವಾಲಯಗಳನ್ನುಳಿದು ಉಳಿದವುಗಳನ್ನು ಮುಕ್ತ ಮಾಡಬೇಕೆಂದು ಸೂಚಿಸಿರುವರು.

ಯಾವ ಪ್ರದೇಶವು ಅಸ್ಪೃಶ್ಯತೆಯ ತೌರು ಮನೆಯೆಂದೆನಿಸಿಕೊಳ್ಳುತ್ತದೆಯೋ ಅಲ್ಲಿ ಇಷ್ಟು ಪ್ರಗತಿಪೂರ್ವಕವಾದ ಸೂಚನೆಗಳನ್ನು ಕಂಡು ಸಂತೋಷವಾಗದಿರದು. ಈ ಪ್ರದೇಶದಲ್ಲಿರುವವರಿಗೆ ಇವು ಅಪ್ಪೊಂದು ವಿಶೇಷವಾಗಿ ಕಾಣಿಸಲಿಕ್ಕಿಲ್ಲ. ಆದರೆ ಅಸ್ಪೃಶ್ಯತೆಯ ವಿಷಯದಲ್ಲಿ ಇಷ್ಟೇ ಮಾಡಿದರೂ ತ್ರಾವಣಕೋರ ಸಂಸ್ಥಾನವು ಮುಂದರಿದುದೇ ಎಂದು ತಿಳಿಯಬಹುದು.

ಸರಕಾರದವರು ಅಂಜಿದರೆ?

ಅಸೆಂಬ್ಲಿಗೆ ಇನ್ನೊಂದು ವರುಷ ಜೀವದಾನವನ್ನು ಕೊಡುವ ಸರಕಾರದವರ ಧೋರಣವನ್ನು ಕುರಿತು ಡಾ. ಅನ್ಸಾರಿಯವರು ಅಂದದ್ದೇನಂದರೆ—ಸರಕಾರದವರು ಒಂದು ಕಡೆ ದಬ್ಬಾಳಿಕೆ ಮತ್ತೊಂದು ಕಡೆ ಸುಧಾರಣೆಗಳ ದಾನ ಈ ತಮ್ಮ ದ್ವಿದಲ ಪದ್ಧತಿಯ ಧೋರಣವನ್ನಿಟ್ಟುಕೊಂಡುದನ್ನು ಬಹುಭಾಗ ಹಿಂದೀಯರು ಅನುಮೋದಿಸುತ್ತಿರುವರೆಂದು ಹೇಳುತ್ತಾರೆ. ಅವರ ಈ ಹೆಮ್ಮೆಯನ್ನು ಪರೀಕ್ಷಿಸುವದಕ್ಕಾಗಿಯೇ ಕೇಂದ್ರ ಶಾಸನ ಸಭೆಯ ಆಯ್ಕೆಗೆ ಹುರಿಯಾಗಿ ನಿಲ್ಲುವದು ಸ್ವರಾಜ್ಯ ಪಾರ್ಟಿಯ ಉದ್ದೇಶವಾಗಿದ್ದಿತು. ಆದರೆ ಸರಕಾರದವರು ಈ ಆಯ್ಕೆಯನ್ನು ಮುಂದೆ ಹಾಕಿದ್ದಾದರೆ ಅವರು ತಮ್ಮ ಪೊಳ್ಳುತನವು ಹೊರ ಬೀಳಬಹುದೆಂದೂ, ದೇಶವು ಸ್ವರಾಜ್ಯ ಪಾರ್ಟಿಯ ಕಡೆಗೇ ಒಲಿಯಬಹುದೆಂದು ಅಂಜಿರುವರೆಂದೂ ತಾನೇ ಸಿದ್ಧವಾಗುತ್ತದೆಂದು ಪ್ರಕಟಿಸಿರುವರು.

ಡಾ. ಅನ್ಸಾರಿಯವರ ಸ್ವರಾಜ್ಯ ಪಾರ್ಟಿಗೆ ನಿಜವಾಗಿಯೂ ಸರಕಾರದವರು ಅಂಜಿರುವರೆ?

ಬೈರಮ್ಮನ ಅಪೂರ್ವ ಸಾಹಸ.

ಬೆಂಗಳೂರಿನ ಸಂಗೀತ ವಿದ್ವಾನ್ ಶ್ರೀ. ಶಿವಲಿಂಗಪ್ಪನವರ ಕುಮಾರಿ ೧೫ ವರುಷ ವಯಸ್ಸಿನ ಬೈರಮ್ಮನೆಂಬ ಬಾಲಿಕೆಯು ಈಸುವ ಶರ್ಯತ್ತಿನಲ್ಲಿ ಅದ್ವಿತೀಯಳಾಗಿದ್ದಾಳೆ. ಈಗ ಕೆಲವು

ದಿವಸಗಳ ಹಿಂದೆಯೇ ಅವಳು ಕಿಂಪಾಂಬುಧಿ ಕೆರೆಯಲ್ಲಿ ೧೦ ಗಂಟೆಗಳ ವರೆಗೆ ಈಸಿ ಪ್ರಥಮ ಸ್ಥಾನವನ್ನು ಪಡೆದಿದ್ದಳು. ಆದರೆ ಕಳೆದ ೨೨ನೆಯ ತಾರೀಖಿನ ದಿವಸ ಅವಳು ಅದೇ ಕೆರೆಯಲ್ಲಿ ೧೨ ಗಂಟೆಗಳ ವರೆಗೆ ಈಸಿ ಜಗತ್ತಿನ ಈಸುವ ಶರ್ಯತ್ತಿನ ಲೆಕ್ಕವನ್ನು ಮೀರಿದಳು. ಇವಳು ಈಜುವ ಕಾಲವೆಲ್ಲೆಲ್ಲ ೪-೬ ಜನ ಪ್ರಸಿದ್ಧ ಈಜುಗಾರರು ಇವಳ ಹತ್ತಿರವೇ ಇರುತ್ತಿದ್ದರು. ಬಾಲಿಕೆಯು ಅವರೊಡನೆ ಚಕ್ಕಂದ ವಾಡುತ್ತ, ನೀರಿನವೇಲೆ ಮಲಗುತ್ತ ಕಾಲ ಕಳೆದಳು. ನಿಯಮಿಸಿದ ಅವಧಿಯು ಮುಗಿದರೂ ತಾನು ಇನ್ನೂ ಕೆಲ ಗಂಟೆಗಳವರೆಗೆ ಈಸುವೆನೆಂದು ಕೇಳಿಕೊಂಡಳು. ಆದರೆ ಪಂಕ್ಷಕರು ಒಪ್ಪಲಿಲ್ಲ.

ಇವಳ ಸಾಹಸವನ್ನು ಪರೀಕ್ಷಿಸಲು ಮಿ. ಎಸ್. ಪಿ. ರಾಜ ಗೋಪಾಲಾಚಾರಿ ಮತ್ತು ಮಿ. ಬಿ. ಕೆ. ಗರುಡಾಚಾರ್ಯ ನಗರ ಸಭಾಧ್ಯಕ್ಷ, ಇವರುಗಳಿಂದ ಕೂಡಿದ ಒಂದು ಸವಿತಿಯು ನಿರ್ಮಿಸಲ್ಪಟ್ಟಿತು. ಶ್ರೀ. ರಾಜಗೋಪಾಲಾಚಾರ್ಯರು ಒಳ್ಳೇ ಸಂತುಷ್ಟರಾಗಿ ಅವಳಿಗೆ ಒಂದು ಬೆಳ್ಳಿಯ ಕಪ್ಪನ್ನು ಬಹುಮಾನ ಕೊಡುವುದಾಗಿ ಹೇಳಿದರು. ಮತ್ತು ನಗರ ಸಭಾಧ್ಯಕ್ಷರು ಏಪ್ರಿಲ್ ೨೯ನೆಯ ತಾರೀಖಿನ ದಿವಸ ಉಳಿದ ಕಪ್ಪುಗಳೊಡನೆ ಅವನ್ನೂ ಸಾರ್ವಜನಿಕಸಭೆಯಲ್ಲಿ ಕೊಡುವುದಾಗಿ ತಿಳಿಸಿದರು.

ಈ ಪ್ರಕಾರ ಈ ಚಿಕ್ಕ ಬಾಲಿಕೆಯು ಹಿಂದುಸ್ಥಾನದಲ್ಲಿಯೇ ಏಕೆ? ಜಗತ್ತಿನ ಸ್ತ್ರೀಯರಲ್ಲೆಲ್ಲ ಹೆಚ್ಚು ಗಂಟೆಗಳವರೆಗೆ ಈಜುವುದರಲ್ಲಿ ಅಗ್ರಸ್ಥಾನವನ್ನು ಪಡೆದುದು ಕರ್ನಾಟಕಕ್ಕೆ ಭೂಷಣವಲ್ಲವೆ?

ಪರಮೇಶ್ವರನು ಕಾಣದಿದ್ದುದಕ್ಕೆ ನ್ಯಾಯಾಧೀಶರಿಗೆ ಅರಿಕೆ.

ಹೊಶಿಯಾರಪುರ ಜಿಲ್ಲೆಯಲ್ಲಿಯ ನೇತಾರಸಿಂಗ ಎಂಬ ಹೆಸರಿನ ಮೋಟಾರ ಡ್ರಾಯವ್ಹರನು ರಾಧಾಸ್ವಾಮಿ ಪಂಥದ ಸರದಾರ ಸವೀಣ ಸಿಂಗ ಎಂಬವರ ಮೇಲೆ ೮ ಸಾವಿರ ರೂಪಾಯಿ ಹಾನಿಯನ್ನು ತುಂಬಿಕೊಡಬೇಕೆಂದು ವ್ಯಾಜ್ಯ ನಡೆಯಿಸಿರುವನು. ಇವರ ವ್ಯಾಜ್ಯದ ಕಾರಣವೇನೆಂದರೆ ಡ್ರಾಯವ್ಹರನಿಗೆ ಪರಮೇಶ್ವರನನ್ನು ತೋರಿಸುತ್ತೇನೆಂದು ಸವೀಣ ಸಿಂಗನು ೮ ವರುಷಗಳ ಹಿಂದೆಯೇ ಅವನ ನೌಕರಿ ಬಿಡಿಸಿದನು. ಡ್ರಾಯವ್ಹರನು ಈ ೮ ವರುಷಗಳವರೆಗೆ ಸವೀಣ ಸಿಂಗನು (ಗುರುವು) ಹೇಳಿದುದನ್ನೆಲ್ಲ ಮಾಡಿದರೂ ಪರಮೇಶ್ವರನ ದರ್ಶನವಾಗಲಿಲ್ಲ. ಇಷ್ಟು ವರುಷಗಳಲ್ಲಿ ಡ್ರಾಯವ್ಹರನವು ೨೦ ಸಾವಿರ ರೂಪಾಯಿಗಳು ವೆಚ್ಚವಾಗಿವೆಯಂತೆ.

ಮೋಟಾರ ಡ್ರಾಯವ್ಹರರಿಂದರೆ ಇಂದಿನ ಮಿತಿಯವರೆಗೆ ಸುಧಾರಿಸಿದವರು. ಈ ಮೋಟಾರ ಡ್ರಾಯವ್ಹರನು ಈ ಕಾಲದಲ್ಲಿ ಈ ತನ್ನ ವೃತ್ತಿಯಲ್ಲಿ ಇಂಥ ಮೂರ್ಖ ನಂಬಿಕೆಯಿಂದ ಗುರುಜಾಲದಲ್ಲಿ ಬೀಳಬೇಕೆಂದರೆ ಆ ಜಾಲವೆಷ್ಟು ಪ್ರಬಲವಿರಬೇಕು! ಸತ್ಯ ಪ್ರಾಣಿಗಳಿದ್ದಲ್ಲಿ ಹದ್ದುಗಳು ಔತಣಕೊಡದೆ ಬರುವಂತೆ ಇಂಥ ಮಹಾ ಮೂರ್ಖರಿರುವುದರಿಂದಲೇ ಸಮಾಜದಲ್ಲಿ ಗುರು ಜಾಲವು ನಡೆದಿದೆ. ಇತ್ತಕಡೆಗೂ ಮಂತ್ರವನ್ನು ಹೇಳಿಕೊಟ್ಟು ಪಂಚಮುಖ ಪರಮೇಶ್ವರನನ್ನು ತೋರಿಸುತ್ತೇನೆಂದು ಅನೇಕ ನೀಚರು ಮೋಸಗೊಳಿಸುತ್ತಿದ್ದಾರೆ. ಇಂಥ ಉದಾಹರಣೆಗಳಿಂದ ಹಿಂದು ಸಮಾಜದಲ್ಲಿ ಗುರುಗಳೆಂಬವರು ಯಾವ ಅವಸ್ಥೆಯಲ್ಲಿರುವರೆಂಬುದು ತಿಳಿಯದೆ?

ಜನಖಂಡಿಯಲ್ಲಿ ಕನ್ನಡ ಮರಾಠಿ ವಾದ.

ಕರ್ನಾಟಕದಲ್ಲಿರುವ ದಕ್ಷಿಣ ಮಹರಾಷ್ಟ್ರ ಸಂಸ್ಥಾನಗಳಲ್ಲಿ ಜಮಖಂಡಿ ಸಂಸ್ಥಾನವೇ ಒಳ್ಳೇ ಪ್ರಜಾನುರಾಗಿ ಸರಕಾರವೆಂದು ಮುಂದೆ ಬಂದಿದೆ. ಪ್ರಜೆಗಳ ಮಾತೃಭಾಷೆಯಾದ ಕನ್ನಡಕ್ಕೆ ಇಲ್ಲಿಯೇ ಆಶ್ರಯವು ದೊರೆತಿದೆ. ಆದರೆ ಕೆಲವು ದಿವಸಗಳ ಪೂರ್ವದಲ್ಲಿ ಕೂಡಿದ ಪ್ರತಿನಿಧಿಕ ಶಾಸನ ಸಭೆಯ ಅಧಿವೇಶನದಲ್ಲಿ ಸಂಸ್ಥಾನದಲ್ಲಿ ೧೦೦ಕ್ಕೆ ೯೦ ರಂತೆ ಕನ್ನಡ ಮಾತೃ ಭಾಷೆಯುಳ್ಳ ಪ್ರಜೆಗಳಿರುವುದರಿಂದ ಸರಕಾರದ ದಪ್ತರುಗಳೆಲ್ಲ ಕನ್ನಡದಲ್ಲಿಯೇ ಇರಬೇಕೆಂಬ ಗೊತ್ತುವಳಿಯನ್ನು ಒಬ್ಬ ಸಭಾಸದರು ತಂದರು. ಅದಕ್ಕೆ ಜವತಾನಿಯುಕ್ತ ಪ್ರತಿನಿಧಿಗಳ ವಿಶೇಷ ಬೆಂಬಲವು ದೊರೆತರೂ ಸರಕಾರ ನಿಯುಕ್ತ ಸಭಾಸದರು ಅದಕ್ಕೆ ವಿರೋಧಿಸಿದರು. ಮರಾಠಿಯು ಒಂದಾನೊಂದು ಕಾಲಕ್ಕೆ ದಿಲ್ಲಿಯಿಂದ ಮೈಸೂರಿನವರೆಗೆ ಹಬ್ಬಿತ್ತೆಂದೂ ಸದ್ಯದ ಮರಾಠಿ ಭಾಷೆಯು ಅದರ ಅವಶೇಷವೆಂದೂ ಅದಿಲಶಾಹಿ ಕಾಲದಲ್ಲಿ ಕೂಡಾ ದಪ್ತರವು ಮರಾಠಿಯಲ್ಲಿಯೇ ನಡೆಯುತ್ತಿದ್ದಿತೆಂದೂ, ಕನ್ನಡವು ದೇಶಭಾಷೆಯಾದರೆ ಏನಾಯಿತು? ಮರಾಠಿಗೇ ಅಗ್ರಸ್ಥಾನವು ದೊರೆಯಬೇಕೆಂದೂ ಪ್ರತಿಪಾದಿಸಲಾಯಿತು. ಕಡೆಗೆ ಮತಗಳನ್ನೆಣಿಸಲು ವಿರೋಧಿಗಳ ಬಹುಮತವಾಗಿ ಈ ಗೊತ್ತುವಳಿಯು ಬಿದ್ದು ಹೋಯಿತು. ಇದರಲ್ಲಿ ವಿಶೇಷವೇನಂದರೆ ಶೈವರು ನಿರಕ್ಷರರಿರುವುದರಿಂದ ಅವರಿಗೆ ಕನ್ನಡವೂ ಅಷ್ಟೆ ಮತ್ತು ಮರಾಠಿಯೂ ಅಷ್ಟೆ ಎಂದು ಸಮರ್ಥಿಸಿದುದೂ ಮತ್ತು ಮರಾಠಿಗೆ ಚಕ್ರ ಕೊಡುವದಕ್ಕಾಗಿ ಉಂಟಾದ ಚಟುವಟಿಕೆಯೇ ಈ ಗೊತ್ತುವಳಿಯ ಪ್ರೇರಕವೆಂದು ಟೀಕಿಸಿದುದೂ ಸಮಂಜಸವಾಗಿಲಾರವು. ಈ ಪ್ರಕಾರದ ಸ್ಥಿತಿಯುಳ್ಳ ಅನೇಕ ಸಂಸ್ಥಾನಗಳಲ್ಲಿ ಜಮಖಂಡಿ ಸಂಸ್ಥಾನವು ಮಾದರಿಯಾಗಿ ಪ್ರಜೆಗಳ ಹಿತವನ್ನೇ ಸಾಧಿಸಲು ಅವರ ಭಾಷೆಯನ್ನು ಪ್ರಚುರಪಡಿಸಬೇಕೆಂದೇ ಜನಗಳ ಕಾಂಕ್ಷೆ.

ಅಥಣಿ ಶ್ರೀ ಮುರಘೇಂದ್ರ ಸ್ವಾಮಿಗಳವರ ಜಾತ್ರೆಯು.

ಶ್ರೀ ಶಿವಯೋಗಿಗಳವರ ಪುಣ್ಯ ತಿಥಿಯು ಈ ವರುಷ ೨೯ನೆಯ ಮಾರ್ಚದಿಂದ ೫ ದಿವಸಗಳವರೆಗೆ ಜರುಗಿಸಲ್ಪಟ್ಟಿತು. ಬಾಲಕರ ಕಬಡಿನವಾದವು ಜನರ ಮನಾಕರ್ಷಣೆ ಮಾಡುವದಾಗಿತ್ತು. ೧-೪-೧೯೩೪ನೆಯ ದಿವಸ ವ್ಯಾಸನ ತೋಳು ಮೆರಿಸಲಾಯಿತು. ಶ್ರೀ ಸಿದ್ಧೇಶ್ವರ ದೇವಾಲಯದ ಮುಂಭಾಗದಲ್ಲಿ ದನಗಳ ಪ್ರದರ್ಶನವು ನಡೆದಿದ್ದಿತು. ಉತ್ತಮ ದನಗಳನ್ನು ಸಾಕಿದವರಿಗೆ ಮೆ. ಸಿಮ್ಸ ಸಾಹೇಬರು ಪಾರಿತೋಷಕ ಕೊಟ್ಟರು. ದೇ. ಭ. ಅಂಬಾಬಾಯಿ ಬೋಂಗಾಳೆ ಇವರು ೫ ದಿವಸಗಳವರೆಗೆ ಜಾತ್ರೆಗೆ ಬಂದ ಜನರಿಗೆ ಊಟದ ವ್ಯವಸ್ಥೆ ಮಾಡಿಸಿದ್ದರು. ಶ್ರೀ. ಯಮಾಜಿ ಮಾಸ್ತರ ಜಿ. ಜಿ. ಹುಲಕುಂದ, ಪರಪ್ಪಣ್ಣ ಪಿಶೆ ಹಾಗೂ ಶಿವರುದ್ರಪ್ಪಣ್ಣ ಕಿತ್ತೂರ ಇವರು ಜಾತ್ರೆಯನ್ನು ಯಶಶ್ವಿಯನ್ನಾಗಿ ಮಾಡುವದಕ್ಕೆ ಒಳ್ಳೇ ಪರಿಶ್ರಮ ಪಟ್ಟರು. ಬಿ. ಎ. ಲೋಣಿ.

—ಹಿಂಡಲಿಗಿ ಕಾರಾಗೃಹದಲ್ಲಿರುವ ದೇ. ಭ. ದಿವಾಕರ ರಂಗರಾಯರ ಪ್ರಕೃತಿಯು ಪುನಃ ಚಿಂತಾಜನಕವಾಗಿದೆ. ಜ್ವರ ಬರುತ್ತಿದೆ. ಕಾಲು ನೋವು ಹಾಗೇ ಇದೆ.

—ಬಿಹಾರ ಭೂಕಂಪನಿಧಿ ವಿಷಯಕ್ಕೆ ವೈಸರಾಯರ ಫಂಡು ೪೯ ಲಕ್ಷದ ಮೇಲೆ ಹೋಗಿದೆ.

ಪತ್ರಗಳ ಸಾರಾಂಶ

ವೀರ ಪ್ರಭಾ.

(ಸಂಪಾದಕರು:— ಶ್ರೀ. ಹಾವಳಗಿ ಮಲ್ಲಿಕಾರ್ಜುನಶೆಟ್ಟಿಯವರು)

ಶ್ರೀಮದ್ವೀರಶೈವ ಮತೋದ್ಧಾರಕರಾದ ಶ್ರೀ ಬಸವೇಶ್ವರರ ಜಯಂತಿಯ ದಿವಸ (ಮಂಗಳವಾರ ಮೇ ೧೫ ತಾ||) ಈ ನವ ವಾರಪತ್ರಿಕೆಯು ಬಾಗಲಕೋಟೆಯಲ್ಲಿ ಹೊರಡುವದು. ನಮ್ಮ ಕನ್ನಡನಾಡು ಹಾಗೂ ನುಡಿ ಇವುಗಳ ಏಳಿಗೆಗಾಗಿ ವಿಕಸಿತ್ಯೆಯಿಂದ ಸತತ ಯತ್ನವಾಡುವನೆಂ ಈ ಪತ್ರಿಕೆಯ ಧ್ಯೇಯವಾಗಿದೆ. ತಾತ್ವಿಕ, ಧಾರ್ಮಿಕ, ನೈತಿಕ ವಿಷಯಗಳನ್ನು ವಿವೇಚನಾತ್ಮಕವಾಗಿಯೂ ಸಮದೃಷ್ಟಿಯಿಂದಲೂ ಚರ್ಚಿಸುವದು ಈ ಪತ್ರಿಕೆಯ ಮುಖ್ಯಕಾರ್ಯವು. ರಾಜಕೀಯ ವಿಷಯಗಳನ್ನು ಇವ್ವಕ್ಕೆದ್ದಹಾಗೆಯೇ ಇವುಗಳಿಗೆ ಯಾವ ಪಂಗಡಗಳ ಬಣ್ಣವನ್ನು ಕೊಡದೆ ಜನತಾ ಜನಾರ್ದನನ ಮುಂದೆ ಮಂಡಿಸುವುದು.

ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ.

ಮುಂದಿನ ಏಪ್ರಿಲ್ ೧೯೩೫ರಲ್ಲಿ
ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು
ಮಾಡಿದ ಗೊತ್ತುವಳಿ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಈ ಅಧಿವೇಶನವು ಬಳ್ಳಾರಿ ಜಿಲ್ಲೆಯಲ್ಲಿಯ, ಆದೋನಿ, ಆಲೂರು, ರಾಯದುರ್ಗ ಮೊದಲಾದ ಕಡೆಗಳಲ್ಲಿ ಇರುವ ಕನ್ನಡ ಪಾಠಶಾಲೆಗಳನ್ನು ತೆಗೆದು ಹಾಕಿಸಲು ಆಂಧ್ರರು ಪ್ರಯತ್ನಿಸುತ್ತಿರುವರೆಂಬುದನ್ನು ಕೇಳಿ ವಿಷಾದಿಸುತ್ತದೆ. ಮತ್ತು ಮದರಾಸು ಸರಕಾರದವರೂ ಬಳ್ಳಾರಿ ಜಿಲ್ಲೆಯ ವಿದ್ಯಾಖಾತೆಯ ಅಧಿಕಾರಿಗಳೂ ಇಂಥ ಪ್ರಯತ್ನಗಳ ವಿಷಯದಲ್ಲಿ ಅಸಮ್ಮತಿಯನ್ನು ತೋರಿಸಬೇಕೆಂದೂ ಬಳ್ಳಾರಿ ಜಿಲ್ಲೆಯ ಕನ್ನಡ ಸ್ವರೂಪವನ್ನು ಕಾಪಾಡಬೇಕೆಂದೂ ಪ್ರಾರ್ಥಿಸುತ್ತದೆ. ಕನ್ನಡ ಪಾಠಶಾಲೆಗಳನ್ನು ಕೆತ್ತುಹಾಕುವುದಕ್ಕೆ ಆಥವಾ ದುರ್ಬಲಪಡಿಸುವುದಕ್ಕೆ ಪ್ರತಿಯಾಗಿ, ಮದರಾಸು ಸರಕಾರವು ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಕನ್ನಡದ ವಿದ್ಯಾ ಸೌಕರ್ಯಗಳನ್ನು ಬಲಪಡಿಸಿ ವಿಸ್ತಾರಪಡಿಸಲು ಹೆಚ್ಚು ಗಮನಕೊಡಬೇಕೆಂದು ಈ ಮಂಡಲಿಯು ಅಭಿಪ್ರಾಯ ಪಡುತ್ತದೆ. ಹೊಸಪೇಟೆಯಲ್ಲಿರುವ ಕನ್ನಡ ಟ್ರೇನಿಂಗ್ ಸ್ಕೂಲನ್ನು (ಶಿಕ್ಷಣ ಸಂಸ್ಥೆಯನ್ನು) ಮುಚ್ಚಿಬಿಡಬೇಕೆಂದು ಬಳ್ಳಾರಿ ಜಿಲ್ಲೆಯ ಕೆಲವು ಮಂದಿ ವಿದ್ಯಾ ಇಲಾಖೆಯ ಅಧಿಕಾರಿಗಳು ಶಿಫಾರಸು ಮಾಡಿರುವರೆಂಬ ವರ್ತಮಾನದ ವಿಚಾರದಲ್ಲಿ ಈ ಮಂಡಲಿಯು ತನ್ನ ಅಗ್ರಹ ಪೂರ್ವಕವಾದ ಅಸಮಾಧಾನವನ್ನು ಸೂಚಿಸುತ್ತದೆ. ಈ ಮೇಲ್ಕಂಡ ವಿಚಾರದಲ್ಲಿ ಕರ್ನಾಟಕ ವಣಿಕ ಸಂಘವು ಕೊಪ್ಪಳದಲ್ಲಿ ೧೯೩೪ನೆಯ ಮಾರ್ಚಿ ೩೦ ರಲ್ಲಿ ಮಾಡಿದ ಮಾಡಿದ ಗೊತ್ತುವಳಿಯನ್ನು ಈ ಮಂಡಲಿಯು ಪುಷ್ಟೀಕರಿಸುತ್ತದಲ್ಲದೆ ಇದೇ ವಿಚಾರದಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನವು ಹುಬ್ಬಳ್ಳಿಯಲ್ಲಿ ಇಳೆದ ಡಿಶೆಂಬರನಲ್ಲಿ ಅಂಗೀಕಾರ ಮಾಡಿದ ನಿರ್ಣಯಗಳಿಗೆ ಮದರಾಸು ಸರಕಾರದ ಗಮನವನ್ನಪೇಕ್ಷಿಸುತ್ತದೆ. ಮನಂತಾಸಾಧಿಸಕ್ಯದ ಕನ್ನಡ ಪ್ರದೇಶಗಳ ಭಾಷಾ ಸಂಸ್ಕೃತಿಗಳ ಐಕ್ಯತೆಯನ್ನು ಒಡೆಯದಂತೆ ಕಾಪಾಡಲು ಮದರಾಸು ಸರಕಾರವನ್ನು ಈ ಮಂಡಲಿಯು ನಂಬಿಕೊಂಡಿರುತ್ತದೆ.

ವಿಶೇಷ ಸೂಚನೆ.

ಶ್ರೀಮತ್ ಪರಮಪಾವನ ಭೂಸುಕ್ಷೇತ್ರ ಉಳವೆ ಶ್ರೀ ಚನ್ನ ಬಸವೇಶ್ವರ ಸಂಸ್ಥೆಯ ಮುಖ್ಯ ಮುಕ್ತೇಸರ ಮಹಾಬಳೇಶ್ವರ ಗುರಪ್ಪಾ ಪಾಟೀಲ ಇವರಿಂದ ಸಮಸ್ತ ಸದ್ಭಕ್ತಾದಿಗಳಿಗೆ ಸವಿನಯ ಪೂರ್ವಕವಾದ ಸೂಚನೆ ಏನಂದರೆ—

ಶ್ರೀ ಉಳವೆ ಚನ್ನಬಸವೇಶ್ವರ ಸ್ವಾಮಿಯ ಪೂಜೆಗಾಗಿ ನೇಮಿಸಿದ್ದ ಕಲ್ಲಯ್ಯಾ ತಂದಿ ಕಲ್ಲಯ್ಯಾ ಪುಣತಶೆಟ್ಟಿ ಈತನು ಸದರಿ ಪೂಜೆ ಮಾಡುವ ವಿಷಯದಲ್ಲಿ ರಾಜಿನಾಮೆ ಕೊಟ್ಟಿದ್ದರಿಂದ ಶ್ರೀ. ಸ್ವಾಮಿ ಪೂಜೆಗಾಗಿ ಬೇರೆ ಅರ್ಚಕನನ್ನು ನೇಮಿಸಲಾಗಿದೆ. ಸದರಿ ಕಲ್ಲಯ್ಯನು ಉಳವೆ ಸ್ವಾಮಿ ಅರ್ಚಕನೆಂದು ಕೆಲವು ಕಡೆ ಹೇಳಿಕೊಂಡು ಭಿಕ್ಷಾ ಮಾಡುತ್ತಾನಾಗಿ ತಿಳಿದು ಬಂದಿದೆ. ಸದರಿಯವನನ್ನು ಮೇಲೆ ಕಂಡ ಪೂಜಾರಿ ಕೆಲಸದಿಂದ ಬಿಡಿಸಿರುತ್ತಾರಾದ್ದರಿಂದ ಸದರಿ ಕಲ್ಲಯ್ಯನು ಉಳವೆ ಹೆಸರಿನಲ್ಲಿ ಭಿಕ್ಷಾ ವಸ್ತ್ರೆರೆ ಕೇಳಲಿಕ್ಕೆ ಎಲ್ಲಿಯಾದರು ಬಂದರೆ ಸದರಿಯವನಿಗೆ ಅವಕಾಶ ಕೊಡದೆ ಕೂಡಲೆ ನಮಗೆ ತಿಳಿಸಬೇಕಾಗಿ ಸೂಚಿಸುತ್ತೇವೆ.

—ರಾಷ್ಟ್ರೀಯ ಸಭೆಯ ಭೂತಪೂರ್ವ ಅಧ್ಯಕ್ಷರಾದ ಸರ್ ಶಂಕರನ್ ನಾಯರರು ಕಾಲವಶರಾದರು.

—ಮಹಾತ್ಮಾಜಿಯವರ ಚಿ|| ದೇವಿದಾಸರಿಗೆ ಒಂದು ಕನ್ಯಾರತ್ನವು ಹುಟ್ಟಿದೆ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ವೆಸ್ಟ್‌ಮೆಂಟ್ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

ತಿಂಗಳು	ಪಾಲಿಯ ಒಟ್ಟು ಕಿಮ್ಮತ್ತು.
ಜನವರಿ ೧೯೩೪	೩೫೦೦ ರೂ.
ಫೆಬ್ರುವರಿ ,,	೧೨೦೦೦ ರೂ.
ಮಾರ್ಚ ,,	೩೦೫೦೦ ರೂ.
ಒಟ್ಟು.	೪೮೦೦೦ ರೂ.

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮದುವೆ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ ತಿಂಗಳಿಗೆ ೧೦೦ರಿಂದ ೧೫೦೦ರವರೆಗೆ ಕಮಿಶನ್ ಶಿಗುವದು.

Managing Agents.

ನಾ. ವ್ಹಾಯಿಸರಾಯರಿಗೆ
ಕರ್ನಾಟಕ ಏಕೀಕರಣ ಸಂಘದ ಬಿನ್ನವತ್ತಳಿ.

ವ್ಹಾಯಿಸರಾಯರ ಕಡೆಗೆ ಕರ್ನಾಟಕ ಏಕೀಕರಣಕ್ಕಾಗಿ ಒಂದು ಶಿಷ್ಟ ಮಂಡಲವನ್ನು ಕಳುಹಿಸುವೆನೆಂದು ಕೇಳಿಕೊಂಡುದಕ್ಕೆ ಕಾಲಾಭಾವದ ಮೂಲಕ ವ್ಹಾಯಿಸರಾಯರು ನಕಾರವನ್ನೇಯಲು ಸದ್ಯಕ್ಕೆ ಏಕೀಕರಣ ಸಂಸ್ಥೆಯವರು ವಿಚಾರಣೆಗಾಗಿ ಒಂದು ಬಿನ್ನವತ್ತಳೆಯನ್ನು ಕಳುಹಿಸಿರುವರು. ಇದರ ಮೇಲೆ ಸಂಘದ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರ ಮತ್ತು ರಾವ ಬಹದ್ದೂರ ಬಿ. ಎಲ್. ಪಾಟೀಲ, ಪ್ಹಿ. ಎನ್. ಜೋಗ, ಆರ್. ಆರ್. ದಿವಾಕರ್, ಎಸ್. ಡಿ. ನಾಡಕರ್ಣಿ ಇನ್ನೂ ಕೆಲವರ ಸಹಿ ಗಳಿವೆ. ಬಿನ್ನವತ್ತಳೆಯ ಸಾರಾಂಶವು ಈ ಪ್ರಕಾರವಾಗಿ ಇದೆ —

೧೯೧೯ನೆಯ ಇಸವಿಯಲ್ಲಿ ಆ ಕಾಲಕ್ಕೆ ಗವ್ಹರ್ನರ ಜನರಲ್ಲರಾಗಿದ್ದ ಲಾರ್ಡ ಹಾರ್ಡಿಂಜರವರು ಭಾಷಾನುಗುಣವಾಗಿಯೇ ಪ್ರಾಂತಗಳನ್ನೇರ್ಪಡಿಸವುದು ಯುಕ್ತವೆಂದು ಹೇಳಿರವರು. ಇದನ್ನೇ ಮಾಂಟಫೋರ್ಡ ವರದಿಯಲ್ಲಿ ಸ್ಥಳೀಯ ಪ್ರಜೆಗಳ ಅನುಮತಿಯಿಂದ ಭಾಷಾನುಗುಣವಾಗಿ ಪ್ರಾಂತ ರಚನೆ ಮಾಡಬೇಕೆಂದು ಹೇಳಲಾಗಿದೆ. ಸಾಯಮನ್ ಕಮಿಶನ್ನಿನವರು ಕೂಡ ಇದನ್ನೇ ಸಮರ್ಥಿಸಿದ್ದಾರೆ. ಸದ್ಯದ ಸರಕಾರದವರು ಕೂಡಾ ಈ ತತ್ವಕ್ಕೆ ಬೆಂಬಲವಾಗಿಯೇ ಸಿಂಧ ಮತ್ತು ಒಡಿಸಾ ಇವುಗಳನ್ನು ಸ್ವತಂತ್ರ ಪ್ರಾಂತಗಳನ್ನಾಗಿ ಮಾಡಲಿಚ್ಛಿಸುತ್ತಿದ್ದಾರೆ.

ಕರ್ನಾಟಕದ ಸದ್ಯದ ಸ್ಥಿತಿಯು ಬಹು ಅನನುಕೂಲವಾದುದಾಗಿದೆ. ಇದರ ತುಂಡುಗಳು ಮುಂಬೈ ಮದ್ರಾಸ ಇಲಾಖೆಗಳ ಅವುದೊಂದು ಮೂಲೆಯಲ್ಲಿರುವದರಿಂದ ಅವುಗಳ ಬೆಳವಣಿಗೆಗೆ ಮತ್ತು ವೈಶಿಷ್ಟ್ಯ ರಕ್ಷಣೆಗೆ ಬಾಧೆಯುಂಟಾಗುತ್ತಿದೆ. ಮುಂಬಯಿ ಇಲಾಖೆಯಲ್ಲಿ ೧೦ಂಕ್ಕೆ ೧೫ರಂತೆ ಮತ್ತು ಮದ್ರಾಸ ಇಲಾಖೆಯಲ್ಲಿ ಕೇವಲ ೧೦ಂಕ್ಕೆ ೫ರಂತೆ ಕನ್ನಡಿಗರಿರುವುದರಿಂದ ಕನ್ನಡ ಭಾಷೆಯ ವಿಷಯಕ್ಕೆ ದುರ್ಲಕ್ಷವುಂಟಾಗಿ ಮುಂಬಯಿಯಲ್ಲಿ ಮರಾಠಿಗರು, ಮದ್ರಾಸ ಪ್ರಾಂತದಲ್ಲಿ ಆಂಧ್ರರು ಪ್ರಬಲರಾಗಿ ಕರ್ನಾಟಕ ಭಾಗಗಳ ಹಿತಗಳನ್ನು ಹತ್ತೊತ್ತುತ್ತಿದ್ದಾರೆ. ಮತ್ತು ಇದರ ಆದಾಯವನ್ನೆಲ್ಲ ಅವರೇ ತಿಂದು ಬಿಡುತ್ತಿದ್ದಾರೆ.

ಕರ್ನಾಟಕದ ಸದ್ಯದ ಪರಿಸ್ಥಿತಿಯಿಂದ ಕರ್ನಾಟಕಕ್ಕೂ ಮತ್ತು ಹಿಂದುಸ್ತಾನದ ಮಧ್ಯವರ್ತಿ ಸರಕಾರಕ್ಕೂ ಏನೂ ಶ್ರಯೋಜನವಿಲ್ಲ. ಆದರೆ ಕರ್ನಾಟಕದ ಹಂಚಿಹೋದ ಭಾಗಗಳನ್ನೆಲ್ಲ ಒಂದುಗೂಡಿಸಿದರೆ ಸ್ವಸಂರಕ್ಷಕ ಸ್ವಾವಲಂಬನವುಳ್ಳ ಪ್ರಾಂತವಾಗುವುದು. ಇದರಿಂದ ಈ ಪ್ರಾಂತದ ಏಳ್ಗೆಯೂ ಆಗುವದಲ್ಲದೆ ಮಧ್ಯವರ್ತಿ ಸರಕಾರಕ್ಕೆ ಅನೇಕ ವಿಧಗಳಿಂದ ಪ್ರಯೋಜನವಾಗುವದು.

ಸಿಂಧದಲ್ಲಿ ೩೩ ಲಕ್ಷ ಜನವಸತಿಯುಂಟು. ಮತ್ತು ಅದರ ವಾರ್ಷಿಕ ಉತ್ಪನ್ನವು ೧೫ ಲಕ್ಷ ರೂ. ಗಳುಂಟು. ಆದರೆ ಸರಕಾರವು ಅದಕ್ಕೆ ೨೨೧ ಲಕ್ಷ ರೂ. ವೆಚ್ಚ ಮಾಡುತ್ತದೆ. ಕರ್ನಾಟಕದ ಜಿಲ್ಲೆಗಳೆಲ್ಲ ಒಂದುಗೂಡಿದರೆ ಅವರ ಜನವಸತಿಯು ೩೩ ಲಕ್ಷವಾಗುವದು. ಸರಕಾರದವರು ಇದರಿಂದ ೨೫೮ ಲಕ್ಷ ರೂ. ಉತ್ಪನ್ನವನ್ನು ಎತ್ತಿ ೨೦೯ ಲಕ್ಷ ರೂ. ವೆಚ್ಚಮಾಡುತ್ತಾರೆ. ಇಂಥ ಕಠಿಣ ಕಾಲದಲ್ಲಿಯು ಕೂಡಾ ಕರ್ನಾಟಕವು ಸ್ವಾವಲಂಬಿಯಾಗಿದ್ದು ಇನ್ನೂ ತನ್ನ ಉತ್ಪನ್ನದಲ್ಲಿ ಉಳಿತಾಯವನ್ನೇ ತೋರಿಸುತ್ತಿದ್ದರೂ ಇದರ ಸ್ವತಂತ್ರ ಪ್ರಾಂತ ರಚನೆಗೆ ಅಲಕ್ಷ ಮಾಡಲ್ಪಡುತ್ತಿದೆ.

ಕರ್ನಾಟಕದ ಪ್ರಾಂತರಚನೆಗಾಗಿ ಕರ್ನಾಟಕದಲ್ಲಿ ಭಿನ್ನಮತವಿಲ್ಲ. ಎಲ್ಲ ಮತದವರೂ, ಎಲ್ಲ ಪಂಗಡದವರೂ ಒಮ್ಮನಸಿನಿಂದ ಸ್ವತಂತ್ರ ಪ್ರಾಂತವನ್ನು ಬೇಡುತ್ತಿದ್ದಾರೆ. ಈ ಏಕೀಕರಣವನ್ನು ಶೀಘ್ರವಾಗಿಯೇ ಮಾಡಬೇಕೆಂದು ಮದ್ರಾಸ ಪ್ರಾಂತಿಕ ಶಾಸನ ಸಭೆಯವರು ಪ್ರಚಂಡ ಬಹುಮತದಿಂದ ಎರಡು ಸಾರೆ ಪಾಸು ಮಾಡಿದ್ದಾರೆ. ಮತ್ತು ಮುಂಬಯಿ ಶಾಸನ ಸಭೆಯಲ್ಲಿ ಕರ್ನಾಟಕ ನಿಯುಕ್ತ ಸಭಾಸದರು ಒಮ್ಮನಸಿನಿಂದ ಸಮರ್ಥಿಸಿದ್ದಾರೆ.

ಕೊಡಗು ಪ್ರಾಂತಿಕ ಶಾಸನ ಸಭೆಯವರೂ ತಮ್ಮನ್ನು ಕರ್ನಾಟಕ ಸ್ವತಂತ್ರ ಪ್ರಾಂತಕ್ಕೆ ಜೋಡಿಸಬೇಕೆಂದು ನಿರ್ಣಯಿಸಿದ್ದಾರೆ. ಕರ್ನಾಟಕದಲ್ಲಿಯ ಸರ್ವ ಸಂಸ್ಥೆಗಳೂ ಕರ್ನಾಟಕ ಸ್ವತಂತ್ರ ಪ್ರಾಂತವನ್ನೇರ್ಪಡಿಸಬೇಕೆಂದು ಕೇಳುತ್ತಲಿವೆ.

ನೆಹರು ವರದಿಯವರೂ ಕರ್ನಾಟಕ ಬೇಡಿಕೆಯನ್ನು ಪರಿಶೀಲಿಸಿ ಮನ್ನಿಸಿದ್ದಾರೆ. ಕೊಡಗಿನ ಮುಂದಿನ ಸ್ಥಿತಿಯನ್ನು ಕುರಿತು ಮಧ್ಯವರ್ತಿ ಸರಕಾರವು ಬಹು ಯೋಚಿಸುತ್ತಿದೆ. ಆದರೆ ಕೊಡಗರು ಕರ್ನಾಟಕಕ್ಕೆ ಸೇರಲು ಇಚ್ಛೆಯುಳ್ಳವರಾಗಿದ್ದಾರೆ. ಕೊಡಗಿನ ಭೂಮಿಯೊಡೆಯರ ಸಂಘವು ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂದೂ ಮತ್ತು ಕೊಡಗು ಪ್ರಾಂತವನ್ನು ಕರ್ನಾಟಕದಲ್ಲಿಯೇ ಸೇರಿಸಬೇಕೆಂದೂ ೨ ಸಾರೆ ಗೊತ್ತುವಳಿಯನ್ನು ಪಾಸು ಮಾಡಿದೆ. ಸದ್ಯದ ಪ್ರಾಂತವಿಭಜನೆಯಿಂದ ಕರ್ನಾಟಕದ ಉದ್ಧಾರವಾಗುವುದಿಲ್ಲ. ಮತ್ತು ಮುಂದೆ ಯಾವದೇ ರಾಜ್ಯದಾಡಳಿತೆಯುಂಟಾದರೂ ಅದು ಕರ್ನಾಟಕ್ಕರಿಗೆ ಅನುಕೂಲವಾಗದು. ಆದುದರಿಂದ ಕರ್ನಾಟಕವು ಶೀಘ್ರದಲ್ಲಿಯೇ ಸ್ವತಂತ್ರ ಪ್ರಾಂತವಾಗಬೇಕಾದುದು ಅತ್ಯಂತಾವಶ್ಯಕವಾಗಿದೆ.

ಜಾಹೀರ ನೋಟೀಸು.

ನಾನು ಬಸಯ್ಯ ಅಯ್ಯಪ್ಪ ಗಣಾಚಾರಿ ಸಾ. ತಂಗಡಗಿ ತಾಲೂಕ ಮುದ್ದೇಬಿಹಾಳ ಜಿಲ್ಲಾ ವಿಜಾಪುರ ಈತನು ಈ ಮೂಲಕ ಸಕಲ ಜನರಿಗೂ ತಿಳಿಸುವದೇನಂದರೆ—

ವೀರಭದ್ರಯ್ಯ ತಂದಿ ಬಸಯ್ಯ ಗಣಾಚಾರಿ ತಂಗಡಗಿ ವಯ. ಅಜಮಾಸ ೩೦ ಈತನು ನನ್ನ ಖಾಸ ಮಗನಿದ್ದು ಈತನಿಗೆ ಎರಡನೇ ಲಗ್ನವಾಗಿ ಮೂರು ವರುಷಗಳಾಗುತ್ತ ಬಂದವು. ಅಂದಿನಿಂದ ಈತನು ನನ್ನ ಆಜ್ಞೆಯಲ್ಲಿಲ್ಲದೆ ಸ್ವೇಚ್ಛಾಚಾರಿಯಾಗಿ ಅನೇಕ ರೀತಿಗಳಿಂದ ಮನೆಯ ಆಭರಣ ಮೊದಲಾದವುಗಳನ್ನು ಅಪಹರಣ ಮಾಡಿ ಅನೇಕರಿಗೆ ಮನಬಂದಂತೆ ಪ್ರಾಮಿಶರೀ ನೋಟ ಬರೆ ಕೊಟ್ಟು ಹಣತಂದು ಅನಾವ್ರಯ ಮಾಡುತ್ತಿದ್ದಾನೆ. ನನ್ನ ಸ್ಥಿರ ಚರಾಸ್ತಿಗಳು ನಾನು ಸ್ವಂತ ಗಳಿಸಿದವುಗಳಾಗಿರುವುದರಿಂದ ಈತನಿಗೆ ಹೀಗೆ ಮಾಡಲು ಯಾವ ರೀತಿಯಿಂದಲೂ ಅಧಿಕಾರವಿಲ್ಲ.

ಆದಕಾರಣ ಈತನ ಮಾತಿಗೆ ಯಾರೂ ಮೋಸ ಹೋಗಿ ಇವನಿಗೆ ಯಾವದೇ ರೀತಿಯಿಂದ ದೇಣಿ ಕೊಟ್ಟರೂ ಅದಕ್ಕೆ ನಾನೇನೂ ಜವಾಬ್ದಾರನಲ್ಲ. ಆದ್ದರಿಂದ ಯಾರೂ ಯಾವದೇ ಕಾರಣದಿಂದಲೂ ಈತನಿಗೆ ದೇಣಿ ಕೊಟ್ಟು ವೃಥಾ ಕಷ್ಟ ನಷ್ಟಗಳಿಗೆ ಗುರಿಯಾಗಬಾರದೆಂದು ಈ ಮೂಲಕ ತಿಳಿಸಿದ್ದೇನೆ. ಅಂತಾ ಕೊಟ್ಟ ಜಾಹೀರ ನೋಟೀಸು ತಾ. ೨೧-೪-೧೯೩೪.

ಸಹಿ.

ಬಸಯ್ಯ ತಂದಿ ಅಯ್ಯಪ್ಪ ಗಣಾಚಾರಿ ತಂಗಡಗಿ.

ದ|| ಮುದ್ದ.

ಪ್ಲೇಗ ಸಂಜೀವಿನಿಯ ಡಂಗುರ!

ಪ್ಲೇಗಿನ ಭಯವೇ ಇಲ್ಲ! - ಹೊಸ ಶೋಧ!! ಮರಣಭಯವೇ ಇಲ್ಲ!!!

ಪ್ಲೇಗ ಬೇನೆಯ ಪೂರ್ವ ಲಕ್ಷಣಗಳು.

ದೇಹದ ಯಾವದಾದರೊಂದು ಭಾಗದಲ್ಲಿ (ಕೊರಳು, ಬಗಲು, ಗೆಜ್ಜೆಗಳಲ್ಲಿ) ಚಟ್ ಎಂದು ಗಡ್ಡೆಯು (ಗಂಟು) ಏಳಲಿಕ್ಕೆ ಪ್ರಾರಂಭವಾದರೆ ಅಥವಾ ತಲೆಯು ನೋಯುತ್ತಲೇ, ಕಣ್ಣುಗಳು ಕೆಂಪಾಗಲಿಕ್ಕೆ ಹತ್ತಿದರೆ ಇದಕ್ಕೆ ಪ್ಲೇಗ ರೋಗದ ಪ್ರಾರಂಭ ಲಕ್ಷಣಗಳೆಂದು ತಿಳಿದು ಕೂಡಲೇ ಪ್ಲೇಗ ಸಂಜೀವನಿಯ ಉಪಯೋಗ ಮಾಡಬೇಕು.

ಸಂಜೀವಿನಿಯನ್ನು ಸೇವಿಸುವ ಕಾಲ.

ಪ್ಲೇಗ ತಗಲಿದ ೬ ತಾಸುಗಳ ಮೇಲೆ ಸಂಜೀವಿನಿಯನ್ನು ಕೊಟ್ಟರೆ ಗುಣವಾಗುವುದಿಲ್ಲ. ಗ್ರಾಮದಲ್ಲಿ ಪ್ಲೇಗವು ಪ್ರಾರಂಭವಾಗುವುದಕ್ಕಿಂತಲೂ ಮೊದಲೇ (ಇಲಿಗಳು ಬೀಳಲಿಕ್ಕೆ ಪ್ರಾರಂಭವಾದ ಕೂಡಲೇ) ಸಂಜೀವಿನಿಯ ಬಾಟ್ಲಿಗಳನ್ನೂ ಮಲಾಮ ಡಬ್ಬಿಗಳನ್ನೂ ಮನೆಯಲ್ಲಿಟ್ಟುಕೊಂಡಿರಬೇಕು. ಪ್ಲೇಗ ರೋಗದ ಸದರೀ ಪೂರ್ವ ಲಕ್ಷಣಗಳು ಕಂಡ ಕೆಲವು ಮಿನಿಟುಗಳಲ್ಲಿಯೇ ಸಂಜೀವಿನಿಯನ್ನು ಉಪಯೋಗಿಸಬೇಕು. ಆದರೆ ಮೊದಲು ಅಲಕ್ಷ ಮಾಡಿ ಯಾರಿಗೂ ಹೇಳದೆ ೪-೬ ತಾಸುಗಳನ್ನು ಹಾಗೂ ಹೀಗೂ ಕಳೆದ ಮೇಲೆ ರೋಗಾಧಿಕ್ಯದಿಂದ ಜಾಸಿಗೆಯನ್ನು ಹಿಡಿದು ಆ ಮೇಲೆ ಸಂಜೀವಿನಿಯನ್ನು ಉಪಯೋಗಿಸಿದರೆ ನಿಜವಾಗಿಯೂ ಗುಣವಾಗುವದಿಲ್ಲವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು ಯಾಕಂದರೆ ಹಾವು ಕಚ್ಚಿದ ಕೂಡಲೇ ವಿಷವು ಹ್ಯಾಗೆ ಶೀಘ್ರವಾಗಿ ದೇಹದಲ್ಲಿ ವ್ಯಾಪಿಸಿ ಅವನನ್ನು ಕೊಲ್ಲುವದೊ? ಹಾಗೆಯೇ ಪ್ಲೇಗ ತಗಲಿದ ಕೂಡಲೇ ಮನುಷ್ಯನ ದೇಹದಲ್ಲಿ ಪ್ಲೇಗಿನ ವಿಷಕ್ರಿಮಿಗಳು ಭಯಂಕರ ಸ್ವರೂಪದಿಂದ ಬೆಳೆದು ಪ್ರಾಣಘಾತಕವಾಗುವದು. ಆದ್ದರಿಂದ ಹಾವು ಕಚ್ಚಿದ ಮನುಷ್ಯನನ್ನು ಉಳಿಸಿಕೊಳ್ಳಲು ಎಷ್ಟು ಆತುರತೆಯಿಂದ ಓಡಾಡಿ ಪ್ರಯತ್ನ ಮಾಡುವರೊ, ಹಾಗೆಯೇ ಪ್ಲೇಗ ತಗಲಿದವರಿಗಾದರೊ ಅದಕ್ಕೂ ಹೆಚ್ಚಿನ ಆತುರತೆಯಿಂದ ಸಂಜೀವಿನಿಯನ್ನು ಹೊಟ್ಟೆಯಲ್ಲಿ ಹಾಕುವ ಪ್ರಯತ್ನ ಮಾಡಬೇಕು. ಈ ದಿವ್ಯೌಷಧದ ಉಪಯೋಗ ಮಾಡಿ ನೋಡಬೇಕೆನ್ನುವವರು ಮೊದಲು ಸದರಿ ಮಹತ್ವದ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ಉಪಯೋಗಿಸುತ್ತ ನಡೆದರೆ ಆ ಊರಲ್ಲಿ ಯಾರೂ ಪ್ಲೇಗ ರೋಗದಿಂದ ಸಾಯುವುದೇ ಇಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.

ಪ್ರಚಾರ ಕಾರ್ಯ.

ಲಕ್ಷದಲ್ಲಿಡುವ ಸದರಿ ಸಂಗತಿಗಳು ಸರ್ವ ಜನರಿಗೆ ತಿಳಿಯಬೇಕಾಗಿದ್ದುದು ಅವಶ್ಯವಿದ್ದ ಕಾರಣ ಗ್ರಾಮ ಹಿತ ಚಿಂತಕ ತರುಣರು ಮನೆ ಮನೆಗೆ ಹೋಗಿ ಈ ವಿಷಯಗಳನ್ನು ಚೆನ್ನಾಗಿ ತಿಳಿಸಿ ಹೇಳಿ, ಅವರ ನೆನಪಿನಲ್ಲಿ ಉಳಿಯುವಂತೆ ಮಾಡಬೇಕು. ಗ್ರಾಮಾಧಿಕಾರಿಗಳು ಡಂಗುರಹೊಡೆಸಿ ಜನಜಾಗೃತಿಯನ್ನುಂಟುಮಾಡಬೇಕಲ್ಲದೆ ಸರಕಾರಕ್ಕೆ ಸಂಜೀವಿನಿಯು ಎಲ್ಲ ಕಡಿಗೂ ದೊರಿಯುವಂತೆ ವ್ಯವಸ್ಥೆಯನ್ನಿಡಬೇಕು.

ಪ್ಲೇಗ ಸಂಜೀವಿನಿಯು ಇತರ ರೋಗಗಳಿಗೂ ಬರುವದು.

ಆಕಸ್ಮಾತ್ತಾಗಿ ಸಣ್ಣವರಿಗೂ ದೊಡ್ಡವರಿಗೂ ಆಗುವ ಹೊಟ್ಟೆಬೇನೆಗೂ ಧಡೆದ ಬೇನೆಗೂ ಪಕ್ಕೆ ಶೂಲೆಗೂ ಶೀತಜ್ವರಕ್ಕೂ ವಾತ ಮತ್ತು ಶೀತದಿಂದಾದ ರೋಗಗಳಿಗೂ ಬಹು ಉಪಯೋಗವಾಗುವದು. ಪ್ಲೇಗ ರೋಗಿಗಳಿಗೆ ಕೊಡುವಂತೆಯೇ ಇವರಿಗೂ ಕೊಡಬೇಕು. ಅನುಷಾನ ಪತ್ರಿಕೆಯು ಔಷಧದ ಸಂಗಡಿರುತ್ತದೆ.

ಇಂಥ ಅಮೂಲ್ಯವಾದ ಔಷಧದ ಕಿಮ್ಮತ್ ಒಬ್ಬ ಮನುಷ್ಯನಿಗೆ ಸಾಲುವಷ್ಟಕ್ಕೆ ರೂ ೧-೫-೦ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಮಿಶನ್ ಏಜಂಟರು ಬೇಕಾಗಿದ್ದಾರೆ. ಅಪೇಕ್ಷಿಸುವವರು ವಿಶೇಷ ಸಂಗತಿಗಳ ಬಗ್ಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ,

ಪ್ಲೇಗ ಸಂಜೀವಿನಿ ಆಫೀಸು,

ಮಹಬೂಬ ಬಜಾರ ಗುಲಬರ್ಗಾ ಶರೀಫ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ ಪಡುತ್ತಿರುವಿರೋ?

ಹಾಗಾದರೆ **ಈ** ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚೆರ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕೆಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳಿವಿನ, ಅಂದಚಂದದ,

ಧ್ಯಾನಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಧಳಧಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟುವ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಆದರಿಂದಲೇ ಇದಕ್ಕೆ 'ರಮಲವಿದ್ಯಾರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತೆ ರಮಲಜ್ಞರು ಈ ಪುಸ್ತಕವನ್ನು ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮುತ್ತಿಚೀಟು— ೪ ರೂಪಾಯಿ
ಧಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾತಕ— ೧೧ ,,
ಚೇಳಿನ ನಾತ— ೧೧ ,,
೧೨ ತಗಣಿ ಶತ್ರು ಬಾಟ್ಲಿ— ೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಧಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ತಾ. ರಾಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವೇಶ್ವರ ಮುದ್ರಣಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೀಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 28

ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣಸಾರಂಗನು ಅಂಜುವವನಲ್ಲ|
ಗೂಪಲಸಂಗನುಜೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೯ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ

ಪ್ರ ಸೋಮವಾರವೂ ಪ್ರಕಟವಾಗುವುದು.

ಸಂಪುಟ೩. | ಆಲಮಟ್ಟಿ- ಸೋಮವಾರ ತಾರೀಖು ೨೮ ನೆಯ ಮೇ ೧೯೪೪. | ಸಂಚಿಕೆ೨೯.

ಜನಸೇವೆಯೇ ದೇವರಸೇವೆ.

ಡಾ. ಅನ್ಸಾರಿಯವರ ಪ್ರಯಾಣ!

ನಾನು ೧೦ಂಕ್ಕೆ ೯ಂರಷ್ಟು ಸಮಾಜಸತ್ತಾವಾದಿಯಿದ್ದೇನೆ.
ಒಂದು ವರುಷದಲ್ಲಿ ಮಾಡದ ಕಾರ್ಯವನ್ನು ೬ ವಾರಗಳಲ್ಲಿ ಮಾಡಿದ್ದಾಗಿದೆ.

ಡಾ. ಅನ್ಸಾರಿಯವರು ಯುರೋಪ ಖಂಡಕ್ಕೆ ಪ್ರಯಾಣ ಬೆಳೆಸುವ ಮೊದಲು ಮುಂಬಯಿಯಲ್ಲಾದ ಭೆಟ್ಟಿಯಲ್ಲಿ "ಆರು ತಿಂಗಳು ಇಲ್ಲವೆ ಒಂದು ವರುಷದಲ್ಲಿ ಯಾವ ಕಾರ್ಯವಾಗಬಹುದೆಂದು ನಮ್ಮಲ್ಲಿ ಅತ್ಯಂತ ಆಶಾವಾದಿಗಳಿಗು ಸಹ ಅನಿಸುತ್ತಿದ್ದಿಲ್ಲವೊ ಅದನ್ನು ಆರು ವಾರಗಳಲ್ಲಿಯೇ ಮಾಡಿದ್ದಾಗಿದೆ.

ಅದೇನೆಂದರೆ ದೇಶದಲ್ಲಿ ಎಲ್ಲಕ್ಕೂ ದೊಡ್ಡದಾದ ರಾಷ್ಟ್ರೀಯ ಸಭೆಯ ಮಾನ್ಯತೆಯನ್ನು ಮತ್ತು ರಾಜಕೀಯ ಮತ್ತು ನೈತಿಕ ಬೆಂಬಲವನ್ನು ದೊರಕಿಸುವದು. ಇದು ಅ. ಭಾ. ರಾಷ್ಟ್ರೀಯ ಸಮಿತಿ, ಮಹಾತ್ಮಾ ಗಾಂಧಿ ಮತ್ತು ಮೂಲವೀಜಿಯವರ ಬೆಂಬಲದಿಂದಲೇ ಸಾಧ್ಯವಾಯಿತು" ಎಂದು ಹೇಳಿದರು.

ದೇವತೆ ದೇವಾಲಯ.
SANGAM CLOTH STORES
Prop: M. S. Hundekar & Sons,
P.O: TERDAL – 587 318

ಕಳಕೊಳ್ಳುವ ಮೊದಲು.

ಎಚ್ಚೆರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಇ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿ ಚೆನಬಸನಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣಿಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಧಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆವ್ವಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇವಕ ನೋಡ್ರಿ ನೀವು ಎಂಧಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ, ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದವ್ರ್ಯ ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತವ್ವಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀನಿವಾಸ ಪುಸ್ತಕಾಲಯ
ಗದಗ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಮೇ ತಾರೀಖು ೨೮ ನೆಯ ಸೋಮವಾರ | ಸಂಚಿಕೆ ೪೯

ಅರಭಾವಿಯ ಶ್ರೀ ದುರದುಂಡೇಶ್ವರ ಸ್ವಾಮಿಗಳ

ಭವ್ಯ ಮಠದ ದಿವ್ಯ ನೋಟವು!



ಬೆಳಗಾವ ಜಿಲ್ಲೆಯಲ್ಲಿ ಗೋಕಾಕದಿಂದ ೪ ಮೈಲಿನ ಅಂತರದಲ್ಲಿ ಅರಭಾವಿ ಎಂಬ ಒಂದು ಗ್ರಾಮವಿದೆ. ಅಲ್ಲಿ ಶ್ರೀ ದುರದುಂಡೇಶ್ವರರೆಂಬ ಮಹಾ ಸ್ವಾಮಿಗಳು ಸುಮಾರು ೨೦೦ ವರ್ಷಗಳ ಹಿಂದೆ ಇದ್ದು ತಮ್ಮ ತಪಃಪ್ರಭಾವದಿಂದ ದ ಸರ್ವರಿಗೂ ಅತ್ಯಂತ ಪೂಜ್ಯರಾಗಿದ್ದರು. ಈ ಮಹಾತಿವಶರಣರ ಗದ್ದುಗೆಯು ಮೇಲೆ ಚಿತ್ರಿಸಿದ ಭವ್ಯ ಮಠದಲ್ಲಿದೆ.

ಅಲ್ಲಲ್ಲಿಯ ಬಸವ ಜಯಂತಿಗಳು.

ತೇರದಾಳ—ಶ್ರೀಮದನಾದಿ ಅಲ್ಲಮ ಪ್ರಭುದೇವರ ಬೃಹನ್ಮಠದಲ್ಲಿ ಶ್ರೀ ಬಸವಜಯಂತಿಯು ಬಹು ನಿಜೃಂಭಣೆಯಿಂದ ನಡೆಯಿತು. ಮುಂಜಾನೆ ೮ ಗಂಟೆಗೆ ಬಸವ ನಾಮಕರಣವಾಗಿ ಮಧ್ಯಾಹ್ನಕ್ಕೆ ೫೦೦ ಜನರ ಗಣಾರಾಧನೆಯಾಯಿತು. ಸಂಜೆಗೆ ಶ್ರೀ ಬಸವಣ್ಣನವರ ಮಹತ್ವ ಈ ವಿಷಯದ ಮೇಲೆ ರಾ. ಸಿದ್ಧಪ್ಪ ಬಿಜ್ಜಂಗಿ ಮತ್ತು ಶಿವಪ್ಪ ಕಬ್ಬೂರು ಇವರ ವ್ಯಾಖ್ಯಾನಗಳಾದವು. ಸಭೆಗೆ ಎಲ್ಲ ಜಾತಿಯ ಜನರು ಸೇರಿದ್ದರು. ಅಧ್ಯಕ್ಷರಾದ ಶ್ರೀ ಕುಬೇರಪ್ಪ ಹಜೇರಿ ಬಿ. ಎ. ಇವರು ಪರಿಣಾಮಕಾರವಾಗಿ ಭಾಷಣ ಮಾಡಿದರು

—ಬಸಪರಯ್ಯ ದೊಡ್ಡಮನಿ.

ಗದಗ—ಇಲ್ಲಿಯ ವೀರಶೈವ ತರುಣ ಸಂಘದವರಿಂದ ಏರ್ಪಡಿಸಲ್ಪಟ್ಟ ಬಸವ ಜಯಂತಿಗೆ ತುಮಕೂರಿನ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ದಯಮಾಡಿಸಿ "ಮಹಾಕವಿ ರಾಘವಾಂಕ ಪಂಡಿತ" ಈ ವಿಷಯದ ಮೇಲೆ ಭಾಷಣ ಮತ್ತು "ಈಶ್ವರಾನುಗ್ರಹ" "ಬಸವಾವತಾರ" ಈ ವಿಷಯಗಳಮೇಲೆ ಕೀರ್ತನ ಮಾಡಿದರು. ಜಯಂತಿಯ ದಿವಸ ಬಸವೇಶನ ಪಲ್ಲಕ್ಕಿಯ ಉತ್ಸವವು ಒಳ್ಳೇ ವಿಜೃಂಭಣೆಯಿಂದ ಹೊರಟು ರಾಜೋಟೆ ವೀರಭದ್ರ ದೇವಸ್ಥಾನಕ್ಕೆ ಬಂದಿತು. ಅಲ್ಲಿ ಶಾಸ್ತ್ರಿಗಳವರು "ವೀರಶೈವ ಧರ್ಮದಲ್ಲಿ ಶ್ರೀ ಬಸವೇಶ್ವರನ ಸ್ಥಾನ" ಎಂಬ ವಿಷಯವಾಗಿ ವ್ಯಾಖ್ಯಾನ ಮಾಡಿದರು. ಕಲ್ಯಾಣಶೆಟ್ಟಿ ಗುರುಪಾದಪ್ಪನವರು ಶ್ರೀ ಬಸವೇಶ್ವರರ ಗುಣಗಾನ ಮಾಡಿದರು. ಶ್ರೀ. ಗುರುಸಿದ್ದಪ್ಪನವರು ವೀರಶೈವಾವತಾರವಾದ ಶ್ರೀ ಬಸವೇಶ್ವರನ ಜಯಂತಿಯನ್ನಾಚರಿಸಲೇ ಬೇಕೆಂದೂ ಮತ್ತು ಒಂದು ವೇಳೆ ಆಚರಿಸದೆ ಬಿಟ್ಟರೆ ಅವರಂಥ ಕೃತಘ್ನರು ಮತ್ತಾರೂ ಇಲ್ಲವೆಂದೂ ಒತ್ತಿ ಹೇಳಿದರು. ಆ ಮೇಲೆ ಅವರು ಬಸವೇಶ್ವರನಂತೆಯೇ ಗುರುಗಳು ಶಿಷ್ಯರನ್ನು, ಪ್ರಾಕೃತಿಯನ್ನು ಪ್ರೇಮಿಸುವುದರಿಂದ ಅವರೇ ಎಲ್ಲರಿಗೂ ಮೊದಲು ಬಸವ ಜಯಂತಿಯನ್ನಾಚರಿಸಬೇಕೆಂದು ಹೇಳಿದರು.

—ಪ್ರೇಕ್ಷಕ.

ಆಲೂರು (ಹಾಸನ ತಾಲೂಕು)— ಆಲೂರು ವೀರಶೈವ ಮಹಾಜನಗಳು ಶ್ರೀ ನಂಜುಂಡಪ್ಪನವರ ದರ್ಬಾರ ಹಾಲಿನಲ್ಲಿ ಬಸವ ಜಯಂತಿಯ ದಿವಸ ಸಭೆಯನ್ನೇರ್ಪಡಿಸಿದ್ದರು. ಕರ್ನಾಟಕ ಕಾಂಧ್ರ ಕವಿಗಳೂ, ಸುಪ್ರಸಿದ್ಧ ಕೀರ್ತನಕಾರರೂ ಆದ ಭೀಮರಾಜ ಇವರು ಬಸವೇಶನ ರಾಜನೀತಿ ನೈಪುಣ್ಯ, ಸತ್ಯ, ಸದಾಚಾರ, ಕರ್ನಾಟಕ ವಾಙ್ಮಯ ಸೇವಾ, ಅಸ್ಪೃಶ್ಯೋದ್ಧಾರ ವಿಷಯವಾಗಿ ಭಾಷಣ ಮಾಡಿ ಶ್ರೀ ಬಸವೇಶನು ಬರೀ ವೀರಶೈವರಿಗೆ ಮಾತ್ರವಲ್ಲ ಇಡೀ ಕರ್ನಾಟಕ, ಜಗತ್ತಿಗೇ ಮಾನ್ಯ ಸದ್ಗುರುವೆಂದು ಹೇಳಿ ಆದೇ ಕಾಲಕ್ಕೆ ರಚಿಸಿದ ಕಂದ ಪದ್ಯಗಳನ್ನು ಹೇಳಿದರು.

ಕಂದತ್ರಯ

ಆವಂ ಸಿರಿಗನ್ನಡನುಡಿ| ಜೀವವ ತಾನುಳಿಸಿ ಹೊಳಪಸಿತ್ತನೊ ಮತ್ತೀ ॥ ಪಾವನ ನಾಡಿನೊಳುನ್ನತ| ಶೈವ ಸಮಾಜವನು ಬೆಳಿಸಿ ಕಳೆಗೊಳಿಪಿದನೋ ॥೧॥

ಆ ಬಸವೇಶ್ವರನೇ ಶ್ರೀ| ಶೋಭನ ಮೂರುತಿಯು ಮತ್ತು ಮುತ್ತನುದೇವಂ ॥ ಪ್ರಾಭವ ವೈಭವ ವರ್ಜಿತ | ನೀಭುವಿಗೈತಂದ ವಂದಿಕೇಶನುದಾತ್ತಂ ॥೨॥

ಮಾನವರೊಳಗಸ್ಪೃಶ್ಯಂ| ಹೀನಂ ಕಲುಷಿತ ಸಮಾಜ ಘಾತುಕಮೆನುತಂ॥ ತಾನುಳಿದು ಧೀರತನದಿಂ| ದೀನೋದ್ಧಾರಕ ಸುನಾಮಮಂ ನಿಲ್ಲಿಸಿದಂ ॥೩॥

—ಬಿ. ಲಕ್ಷ್ಮೀಕಾಂತ.

ಲಚ್ಯಾಣ— ಬಂಥನಾಳ ಸ್ವಾಮಿಗಳವರ ಪೋಷಣೆಯ ಕೆಳಗೆ ಸ್ಥಾಪಿತವಾದ ಗ್ರಾಮ ಸು. ಸಂಘವು ಈ ೨ ತಿಂಗಳಲ್ಲಿ ತೃಪ್ತಿಕರವಾಗಿ ಕಾರ್ಯಮಾಡಿದೆ, ಭಗವಾನ್ ಬಸವೇಶ್ವರರ ಜಯಂತಿಯ ಪುಣ್ಯಕಾಲದಲ್ಲಿ ಬಂಥನಾಳ ಶಿವಯೋಗಿಗಳ ಮಠದಲ್ಲಿ ಗುರುಕುಲವು ಸ್ಥಾಪಿಸಲ್ಪಟ್ಟಿತು. ಈ ಎಲ್ಲ ಕಾರ್ಯಗಳ ಶ್ರೇಯಸ್ಸಿಗೆ ಇಲ್ಲಿಯ ಶ್ರೀ ವಿನಾಯಕರಾವ ಕುಲಕರ್ಣಿಯವರೇ ಕಾರಣರಾಗಿದ್ದಾರೆ. ಭಗವಾನ್ ಬಸವೇಶ್ವರನು ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಿ.

—ಗ್ರಾ. ಸು. ಸಂಘ. ಲಚ್ಯಾಣ.

ಗುಳೇದಗುಡ್ಡ—ಇಲ್ಲಿಯ ವ್ಯಾಯಾಮ ಮಂದಿರದ, ಹುರಿಯಾಳುಗಳೆಲ್ಲರೂ ಹುರುಪಿನಿಂದ ಬಸವ ಜಯಂತಿಯ ಉತ್ಸವವನ್ನು ಯಶಸ್ವಿಯಾಗಿ ಕೊನೆಗಾಣಿಸಿದರು. ಪ್ರಮುಖ ನಾಗರಿಕರೆಲ್ಲರು ಭಾಗವಹಿಸಿದ್ದರು. ವ್ಯಾಯಾಮ ಮಂದಿರದಲ್ಲಿ ಶ್ರೀ. ಮ. ನಿ. ಒಪ್ಪತ್ತಿನ ಸ್ವಾಮಿಗಳವರ ನೇತೃತ್ವದಲ್ಲಿ ಮಿ॥ ಪಟ್ಟಣಶೆಟ್ಟಿ ಮಡಿವಾಳಪ್ಪನವರ ಭಾಷಣವಾಯಿತು.

—ದತ್ತಾತ್ರೇಯ ವ್ಯಾಯಾನು ಮಂದಿರ

ಮಿರಜ—ಇಲ್ಲಿಯ ಬಸವೇಶ್ವರ ಜಯಂತಿಯ ಉತ್ಸವ ಮಂಡಳದವರು ೬ ದಿವಸಗಳವರೆಗೆ ಬಸವ ಜಯಂತಿಯ ಕಾರ್ಯಕ್ರಮವನ್ನಿಟ್ಟಿದ್ದರು. ಶ್ರೀ. ಡಿ. ಎಸ್. ಬನ್ನೆ ಬಿ. ಎ. ಎಲ್. ಎಲ್. ಬಿ. ವಕೀಲ ಕೊಲ್ಹಾಪುರ ಶ್ರೀ ಗುರುಶಾಂತದೇವರು ವಿರಕ್ತ ಮಠ, ಶ್ರೀ. ಪರಾಂಜಪೆ ವೈದ್ಯ ಹರಿಪೂರಕರ ಮೊದಲಾದವರ ವ್ಯಾಖ್ಯಾನಗಳನ್ನು ಮಾಡಿಸುವ ವ್ಯವಸ್ಥೆಯಾಗಿದ್ದಿತು. ಇವಲ್ಲದೆ ಈ ಮಂಗಳ ದಿನಗಳಲ್ಲಿ ಶ್ರೀ ಬಸವೇಶ್ವರ ಪುರಾಣ ಮತ್ತು ವಚನ ಪ್ರವಚನ ಗಣಾರಾಧನೆ ಮೊದಲಾದವುಗಳು ಜರುಗಿದವು.

—ವ್ಯವಸ್ಥಾಪಕ.

ಚಡಚಣ—ಶ್ರೀ ಬಸವೇಶ್ವರನಭಾವಚಿತ್ರವನ್ನು ಶಾಸ್ತ್ರೋಕ್ತವಾಗಿ ಪೂಜಿಸಿದ ಮೇಲೆ ಸಭೆಯಲ್ಲಿ ಶ್ರೀ ವೆಂಕಟರಾವ ಆಗರಖೇಡ ಮಾಸ್ತರರು ಶರಣಸಂದೇಶದಲ್ಲಿ ಪ್ರಕಟವಾದ ಬಸವೇಶ್ವರ ಸ್ತೋತ್ರಗಳನ್ನು ವಿದ್ಯಾರ್ಥಿಗಳ ಕಡೆಯಿಂದ ಇಂಪಾಗಿ ಗಾಯನ ಮಾಡಿಸಿದ ನಂತರ ಶ್ರೀ ನಾರಾಯಣಾಚಾರ್ಯ ಯಜುರ್ವೇದಿ ಹೆಡ್ ಮಾಸ್ತರ ಇವರ ಅಧ್ಯಕ್ಷತೆಯ ಕೆಳಗೆ ಶ್ರೀ ಧರ್ಮರಾವ ಪಾಟೀಲ, ಶ್ರೀ. ವೆಂಕಟರಾವ ಮಾಸ್ತರ; ಶ್ರೀ ವೀರಯ್ಯ ಮರಪತಿ ಮಾಸ್ತರ ಶ್ರೀ ಮಳ್ಳಪ್ಪ ಎಳಮೇಲಿ ಮೊದಲಾದವರು ಶ್ರೀ ಬಸವ ಮಹಾತ್ಮನ ಉದಾತ್ತ ತತ್ವಗಳ ಮೇಲೆ ಭಾಷಣ ಮಾಡಿದರು. ಸಭೆಯಲ್ಲಿ "ಭಕ್ತಿಯ ಬೆಳಕು" ಎಂಬ ಪುಸ್ತಕಗಳನ್ನು ಪ್ರಚಲಾಯಿತು.

—ಪ್ರತ್ಯಕ್ಷದರ್ಶಿ.

ಬಸವನ ಬಾಗೇವಾಡಿ— ಇಲ್ಲಿ ೭ ದಿವಸ ಮುಂಚಿತವಾಗಿಯೇ ಶ್ರೀ ಬಸವೇಶ್ವರ ದೇವಾಲಯದಲ್ಲಿ ಅಹೋ ರಾತ್ರಿ ಭಜನೆಯನ್ನು ನಡೆಸಿ ಬಸವ ಜಯಂತಿಯ ದಿವಸ ರುದ್ರಾಭಿಷೇಕ, ಗಣಾರಾಧನೆ ಮಾಡಲಾಯಿತು. ಸಭೆಗೆ ಶ್ರೀ. ಮ. ನಿ. ಬಂಥನಾಳ ಸ್ವಾಮಿಗಳು ಶ್ರೀ. ಮ. ನಿ. ಚನ್ನಬಸವ ಸ್ವಾಮಿಗಳು ಗಚ್ಚಿನಮಠ ಇವರೂ ದಯಮಾಡಿಸಿದ್ದರು. ಮೊದಲು ಮಿ. ಹೂಗಾರ ಇವರು ಬಸವೇಶ ಸ್ತುತಿಯನ್ನು ಮಾಡಿದರು. ಕಲಗುರ್ಕಿಯ ಮಾಸ್ತರರು ದುಷ್ಟ ಚಟಗಳನ್ನು ಬಿಡುವ ಬಗ್ಗೆ ಕೀರ್ತನರೂಪವಾಗಿ ಹೇಳಿದರು. ಪಂ|| ರಾಜಶೇಖರ ಶಾಸ್ತ್ರಿಗಳು ಜಯಂತಿಯ ಬಗ್ಗೆಯೂ ಶ್ರೀ ಬಂಥನಾಳ ಶ್ರೀಗಳು 'ಬಸವೇಶ್ವರನೂ ಆತನ ತತ್ವಗಳೂ' ಈ ವಿಷಯವಾಗಿ ಸಭಿಕರಿಗೆ ಬೋಧವಾಗುವಂತೆ ಬಹು ಸರಸವಾಗಿ ಉಪದೇಶ ಮಾಡಿದರು.

—ಸಂಗನಗೌಡ ಹಾಟೇಲ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮೀಜಿಯವರ ಶ್ರೀಮಚ್ಛಿವ್ಯಾದ್ರಿ ಬೃಹನ್ಮಠ ಮಹಾ ಸಂಸ್ಥಾನದಿಂದ—

ಪರಸ್ಥಳದಿಂದ ಕೊಲ್ಲಾಪೂರ ಕಾಲೇಜಿಗೆ ಅಭ್ಯಾಸ ಮಾಡಲು ಬರತಕ್ಕ ಬಡವರಾದ ವೀರಶೈವ ವಿದ್ಯಾರ್ಥಿಗಳಿಗೆ, ಈ ಮೂಲಕ ಸೂಚಿಸುವದೇನಂದರೆ—

ಕೊಲ್ಲಾಪುರದಲ್ಲಿರತಕ್ಕ ಶ್ರೀ ಜಗದ್ಗುರು ಚಿತ್ರದುರ್ಗ ಮಠದಲ್ಲಿರಲು ಇಚ್ಛಿಸುವ ಬಡವರಾದ ವೀರಶೈವ ವಿದ್ಯಾರ್ಥಿಗಳು ಇದೇ ಮೇ ತಿಂಗಳು ಆಖೈರದೊಳಗಾಗಿ ತಮ್ಮ ಅರ್ಜಿಗಳನ್ನು ಶ್ರೀ ಮಹಾಸನ್ನಿಧಿಗೆ ಹಾವೇರಿ ಮುಕ್ಕಾಮಿಗೆ ಕಳುಹಿಸುವದು. ತಾವು ಬಡವರೆಂಬ ಬಗ್ಗೆ ತಮ್ಮ ತಮ್ಮ ಗ್ರಾಮಗಳ ಪ್ರಮುಖಜನರ ಸರ್ಟಿಫಿಕೇಟನ್ನು ಲಗ್ತು ಕಳುಹಿಸಿ ಕೊಡತಕ್ಕದ್ದು. ಕೊಲ್ಲಾಪೂರ ಶ್ರೀ ಮಠಕ್ಕೆ ಹೋದ ತೂಡಲೇ ಅಲ್ಲಿಯ ಕಾರಭಾರಿಯವರ ಕಡೆಯಿಂದ ಪ್ರಿಂಟ್ ಫಾರಂ ತೆಗೆದುಕೊಂಡು ತುಂಬಾ ನೂಹಿತಿಯನ್ನು ತುಂಬಿಕೊಡುವದು. ಮತ್ತು ಕಾರಭಾರಿಯವರು ಹೇಳುವ ಪ್ರೋಲಿಯಲ್ಲಿರತಕ್ಕದ್ದು. ಇನೇ ಅಂತಸ್ತಿನ ೧೧ ಪ್ರೋಲಿಗಳಲ್ಲಿ ೩೩ ಜನ ವಿದ್ಯಾರ್ಥಿಗಳಿಗೆ ಮಾತ್ರ ಅನುಕೂಲವುಂಟು. ಮೇ ತಿಂಗಳ ವೇಲ್ಪಟ್ಟು ಬರತಕ್ಕ ಅರ್ಜಿಗಳಿಗೆ ನಿಗಾ ಕೊಡಲಾಗುವುದಿಲ್ಲ. ಕಾಲೇಜ ವಿದ್ಯಾರ್ಥಿಗಳಲ್ಲಿ ಮೇಲ್ತರಗತಿಯವರಿಗೆ ಜಾಗಾ ಕೊಟ್ಟು ಉಳಿದ ಜಾಗೆಯನ್ನು ಇತರ ಕ್ಲಾಸಿನವರಿಗೆ ಕೊಡುವದರಲ್ಲಿ ಬರುತ್ತೆ.

ಸಿದ್ಧಾಪುರ.
ತಾ. ೧೭-೫-೩೪.
ಜಿ. ಧಾರವಾಡ. } ಏಜಂಟ್

ಯಾಡಗಿರಿ—ಬಸವ ಜಯಂತಿಯ ದಿವಸ ಮಹಿಳಾ ಪರಿಷತ್ತನ್ನು ಕೂಡಿಸಿ ನಾಮಕರಣ ಮಾಡಿದ ನಂತರ ಇಲ್ಲಿಯ ಗರ್ಲ್ಸ್ ಸ್ಕೂಲ ಉಪಾಧ್ಯಾಯಿನಿಯರಾದ ಪ್ರೇಮ ಬಾಯಿಯವರು 'ಲಿಂಗ' ಈ ವಿಷಯವಾಗಿ ಶ್ರೋತೃಗಳಿಗೆ ಆನಂದವಾಗುವಂತೆ ಭಾಷಣ ಮಾಡಿದರು. ನಂತರ ಪಟ್ಟಣದ ಬೀದಿಗಳೆಲ್ಲೆಲ್ಲ ಶ್ರೀ ಬಸವೇಶ್ವರ ಭಾವಚಿತ್ರದ ಮೆರವಣಿಗೆಯು ತಳಿರು ತೋರಣಾದಿ ಭವ್ಯವಾದ ಕಮಾನುಗಳಿಂದಲಂಕರಿಸಲ್ಪಟ್ಟ ಬಾಜಾರದಲ್ಲಿ ಹೊರಟಿತು. ಅಲ್ಲಲ್ಲಿ ಸುಮಂಗಲೆಯರು ಆರತಿ ಮಾಡಿ ಫಲಗಳನ್ನರ್ಪಿಸುತ್ತಿದ್ದರು. ೮ ವರ್ಷಗಳಿಂದ ಉತ್ಸಾಹದಿಂದ ಬಸವ ಜಯಂತಿಯನ್ನು ನಡೆಸುತ್ತ ಬಂದ ಶ್ರೀ ಗುರುಸಿದ್ಧಪ್ಪ ಇಂಡಿ, ರಾಯಲ್ ಕಂಪನಿ ಏಜಂಟ ಇವರಿಗೂ ಇವರ ಸಹಾಯಕರಾದ ವೀರಶೈವ ವ್ಯಾಪಾರ ಮಂಡಳಿಯವರಿಗೂ ಶ್ರೀ ಬಸವೇಶನು ಆಯುರಾರೋಗ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

—ಬಸವಭಕ್ತ

ಯಲಬುರ್ಗಿ— ಸಾಹಿತ್ಯ ವರ್ಧಕ ವಾಚನಾಲಯದವರು 'ಬಸವೇಶನ ಭಕ್ತಿಯ ಬೆಳಕು' ಗ್ಯಾಸಿನ ಬೆಳಕಿನಲ್ಲಿ ಯಾರ ಕೈಯಕ್ಷರವನ್ನೂ ನೋಡಿದರೂ ಎದ್ದು ಕಾಣಿಸುತ್ತಿರಲು, ಒನೆಯ ಭವಾಂತರದ ಬಸವಣ್ಣನ ಭಾವಚಿತ್ರದ ಬಳಿಯಲ್ಲಿ ಆನೆಯ ಭವಾಂತರದ ಬಸವಣ್ಣನೆಂದು ಖ್ಯಾತಿ ಹೊಂದಿದ ಮ. ಗಾಂಧೀಜಿಯವರ ಭಾವಚಿತ್ರದ ಅಚ್ಚುಳ್ಳ ಬಟ್ಟೆಯು ಶೋಭಿಸುತ್ತಿರಲು ಶೃಂಗರಿಸಿ ಬಸವಣ್ಣಗಳು ಮುಂದೆ ಮುಂದೆ ಬಾಜಾ ಬಜಂತ್ರಿಗಳೊಡನೆ ಹೆಜ್ಜೆಯಿಡುತ್ತಾ ಸಾಗಿರಲು ಛತ್ರ ಚಾಮರಗಳಿಂದೊಪ್ಪುವ ಬಸವ ಭಾನುವಿನ ಮುಂಭಾಗದಲ್ಲಿ ಮೈಲಾರ ಲಿಂಗಪ್ಪಾಸಾದಿಕ ಪಾಠಶಾಲೆಯ ವಿದ್ಯಾರ್ಥಿಗಳು ಮಂಜುಳ ಸ್ವರದಿಂದ ಜಯಘೋಷಪೂರ್ವಕ ಹೇಳುತ್ತಿದ್ದ ಬಸವೇಶನ ವಚನಗಳು ಕಿವಿಗಿಂಪಾಗಿ ಕೇಳಿಸುತ್ತಿರಲು ಇಲ್ಲಿಯ ನುರಿತ ಭಜನಾ ಸಂಘದವರು ಸುನಾದಗಳೊಡನೆ ಹಾಡುತ್ತಿದ್ದ ಬಸವ ಗೀತೆಗಳು ಅದಿಜನ ಬಾಂಧವರಿಂದ ಮಿಳಿತರಾಗಿ ಉತ್ಸುಕತೆಯಿಂದ ಕಿಕ್ಕಿರಿದು ನಿಂತಿದ್ದ ಪ್ರೇಕ್ಷಕರಿಗೆ ಮನಾನಂದಗೊಳಿಸುತ್ತಿರಲು ಕಲಶಕನ್ನಡಿಗಳಿಂದ ಆಬಾಲವೃಂದವು ಸಾಗಿರಲು, ತಳಿರು ತೋರಣಗಳಿಂದ ಅಂದವಾಗಿ ತೋರುವ ಮುಖ್ಯ ಮುಖ್ಯ ಬೀದಿಗಳಲ್ಲಿ ಭಗವಾನ್ ಬಸವೇಶನ ಮೆರವಣಿಗೆಯು ಸಾಗಿ ಹೊರಟಿತ್ತು. ಸ್ಥಳಕ್ಕೆ ಜಯಜಯಕಾರದಿಂದ ಮುಟ್ಟಿದ್ದನ್ನು ಕಂಡು ಸಂತೋಷವಾಯಿತು. —ಪ್ರತ್ಯಕ್ಷದರ್ಶಿ

ಸದಾಶಿವಪೇಟೆ—ನಗರ ಮಧ್ಯ ಪ್ರದೇಶದಲ್ಲಿ ರಜತಾದ್ರಿ ಪರ್ವತದಂತೆ ಶೋಭಿಸುವ ಶ್ರೀ ಬಸವೇಶ್ವರ ದೇವಾಲಯವು ತಳಿರು ತೋರಣ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟು ತರುಣ ಸಂಘದವರ ಪ್ರಾರ್ಥನೆಯ ಮೇರೆಗೆ ಪುರ ಮಹಾಜನಗಳು ಕಾರ್ಯಕ್ರಮ ನಿರ್ಣಯ ಮಾಡಿದ ವಿವರ—೧೦ ಗಂಟೆಗೆ ಜಗದ್ಗುರು ದ್ವಿತೀಯ ಶಂಭು ಶ್ರೀ ಬಸವೇಶ್ವರರ ರುದ್ರಾಭಿಷೇಕ ೧೨ ಗಂಟೆಯವರೆಗೆ ಗಣಾರಾಧನೆ ೩ ಗಂಟೆಯವರೆಗೆ ಪುರ ನರ ನಾರಿಯರ ದೇವದರ್ಶನ ಸಮಾರಂಭ. ೩ರಿಂದ ೬ ಗಂಟೆಯವರೆಗೆ ಪಂ. ನಿರಂಜನ ಮಹಾಸ್ವಾಮಿಗಳವರ ಸಭಾಧ್ಯಕ್ಷತೆಯ ಕೆಳಗೆ ಬಸವ ಮಹಾನುಭಾವನು ನಮ್ಮ ವೀರಶೈವರಿಗೆ ಮಾಡಿದ ಉದ್ಧಾರ ಸ್ಮಾರಕ ವ್ಯಾಖ್ಯಾನಗಳು ಜರುಗಿದವು. ಮಿ. ಚನ್ನಬಸವಪ್ಪನವರು ಹೈಕೋರ್ಟ ವಕೀಲ ಇವರು ಉಪಾಧ್ಯಕ್ಷರೂ ಮಿ. ರೇವಣ ಸಿದ್ಧಪ್ಪ ಶೆಟಗಾರ ಇವರು ವ್ಯವಸ್ಥಾಪಕರು ಮತ್ತು ಶ್ರೀಮಂತ ದೇಸಿಟ್ಟಿ ಶಾಂತವೀರಪ್ಪನವರು ವ್ಯವಸ್ಥಾಪಕರಾಗಿದ್ದರು. ಸಾಯಂಕಾಲ ಸಕಲ ವಿರುದಾವಳಿಗಳಿಂದ ಜಗದ್ಗುರು ಬಸವೇಶನ ಮೆರವಣಿಗೆಯ ಉತ್ಸವವಾಯಿತು.

—ಪ್ರತ್ಯಕ್ಷದರ್ಶಿ

ಬೆಳಗಾವಿ— ಪ್ರಚಂಡ ಮೆರವಣಿಗೆಯಾಯಿತು. ಶ್ರೀ ಚಿಕ್ಕೋಡಿ ಪಂಡಿತಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಅಲವಟ್ಟಿಯ ಶ್ರೀ. ಹರ್ದೇಕರ ಮಂಜಪ್ಪನವರ ಮನನೀಯ ಭಾಷಣವಾಯಿತು. ವೀರಶೈವ ಮತತತ್ವಗಳನ್ನು ವಿರೋಧಿಸುವ ಪಂಚಾಚಾರ್ಯ ಪತ್ರಿಕೆಯನ್ನು ನಿಷೇಧಿಸುವ ಗೊತ್ತುವಳಿಯು ಸ್ವೀಕೃತವಾದದ್ದೊಂದು ಇಲ್ಲಿಯ ಉತ್ಸವದ ವಿಶೇಷ. ಶ್ರೀ ಮಂಜಪ್ಪನವರ ಭಕ್ತಿಯ ಬೆಳಕು ಎಂಬ ಪುಸ್ತಕಗಳು ಸಭೆಯಲ್ಲಿ ಹಂಚಲ್ಪಟ್ಟವು.

ರಾಷ್ಟ್ರದ ಪ್ರಮುಖರ ಕಾರ್ಯ ಚಟುವಟಿಕೆಗಳು

ರಾಜಕೀಯ ಪರಿವರ್ತನ.

ಲಾಹೋರಿನಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ನಿರ್ಣಯಿಸಿದ ಮೇರೆಗೆ ಶಾಸನೋಲ್ಲಂಘನೆಯ ಚಟುವಟಿಕೆಯು ೩ ವರ್ಷಗಳವರೆಗೆ ಸಾಗಿಸಲ್ಪಟ್ಟು ಕೊನೆಗೆ ವೈಯಕ್ತಿಕ ಶಾಸನೋಲ್ಲಂಘನೆಯ ಸ್ವರೂಪದಲ್ಲಿ ಪರಿಣಮಿಸಿ ಕಳೆದ ಎಪ್ರಿಲ್ ೬ನೆಯ ತಾರೀಖಿನ ದಿವಸ ಮಹಾತ್ಮಾಜಿಯವರು ಹೊರಡಿಸಿದ ಪತ್ರಕದ ಮೇರೆಗೆ ಮಹಾತ್ಮಾಜಿಯವರ ಮಟ್ಟಿಗೇನೇ ಉಳಿಯಿತಷ್ಟೆ. ಇಲ್ಲಿಂದ ಮುಂದೆ ರಾಷ್ಟ್ರವನ್ನು ಕಾರ್ಯ ಮುಖವಾಗಿ ಮಾಡುವುದಕ್ಕೆ ಆವ ಯೋಜನೆಯನ್ನು ಕೈಕೊಳ್ಳಬೇಕೆಂದು ರಾಷ್ಟ್ರ ಧುರೀಣರ ಯೋಚನೆಗಳಾದವು. ಆ ಕಾಲದಲ್ಲಿ ಮಹಾತ್ಮಾಜಿಯವರು ರಾಷ್ಟ್ರವ ಮುಂದಿಟ್ಟ ಅದಿಜನ ಸೇವಾ ಕಾರ್ಯವು ದೇಶದ ಕಾರ್ಯಕರ್ತರೆಲ್ಲರ ಮನವನ್ನು ಆಕರ್ಷಿಸಲು ಶಕ್ತವಾಗಲಿಲ್ಲ. ಗ್ರಾಮಸೇವೆ, ವಿಧಾಯಕ ಕಾರ್ಯ ಮೊದಲಾದವುಗಳೂ ಬಹು ಸ್ವಲ್ಪ ಜನರಿಗೆ ಮಾನ್ಯವಾದವು. ದೇಶದ ಕೆಲಕೆಲವು ಭಾಗಗಳಲ್ಲಿ ಸಮಾಜ ಸತ್ತಾವಾದದ ತತ್ವವು (Socialism) ಪ್ರಸಾರವಾಗಹತ್ತಿತ್ತು. ಆದರೆ ಇದರ ತತ್ವಗಳು ದೇಶದ ಅಳವಿಗೆ ನಿಲುಕದಿದ್ದುದರಿಂದ ಡಾ. ಅನ್ಸಾರಿ, ಡಾ. ಬಿಧನಚಂದ್ರ ರಾಯ ಮೊದಲಾದವರು ಸ್ವರಾಜ್ಯ ಪಾರ್ಟಿಯನ್ನು ಪುನಃ ಉದ್ಧರಿಸಿದರು.

ರಾಷ್ಟ್ರೀಯ ಮುಂದಾಳುಗಳು ಪ್ರಾಂತಿಕ ಶಾಸನ ಸಭೆ, ಕೇಂದ್ರ ಶಾಸನ ಸಭೆ ಮೊದಲಾದವನ್ನು ಪ್ರವೇಶಿಸಿ ತನ್ಮೂಲಕ ರಾಷ್ಟ್ರಹಿತಕಾರಕ ಕಾರ್ಯಗಳನ್ನು ಕೈಕೊಳ್ಳಬೇಕೆಂಬುದೇ ಸ್ವರಾಜ್ಯ ಪಾರ್ಟಿಯ ಧ್ಯೇಯವು. ಇದಕ್ಕೆ ಮಹಾತ್ಮಾಜಿಯವರ ಒಪ್ಪಿಗೆಯಾಗಬೇಕಾದುದು ಅವಶ್ಯಕ. ಮಹಾತ್ಮಾಜಿಯವರಿಗೆ ಶಾಸನ ಸಭಾ ಪ್ರವೇಶದಲ್ಲಿ ಎಳ್ಳಷ್ಟಾದರು ನಂಬಿಗೆ ಇಲ್ಲದಿದ್ದರೂ ಬಹುಜನ ಕಾರ್ಯಕರ್ತರ ಒಲವು ಶಾಸನ ಸಭಾ ಪ್ರವೇಶದ ಕಡೆಗೇನೇ ವಿಶೇಷವಾಗಿದ್ದುದರಿಂದ ಅವರು ಒಪ್ಪಿಕೊಳ್ಳಬೇಕಾಯಿತು. ಮತ್ತು ಈ ನೂತನ ಸ್ಥಾಪಿತ ಪಾರ್ಟಿಗೆ ಶಕ್ಯವಿದ್ದಷ್ಟು ಸಹಾಯ ಮಾಡಲು ಅಭಯವನ್ನಿತ್ತರು. ಆದರೆ ಈ ಸ್ವರಾಜ್ಯ ಪಾರ್ಟಿಯು ರಾಷ್ಟ್ರೀಯ ಸಭೆಯಿಂದೇ ಪ್ರವೇಶಿಸಬೇಕೆಂದು ಕೆಲವರ ಮತ. ಮಹಾತ್ಮಾಜಿಯವರು ಇದಕ್ಕೆ ಒಪ್ಪಲಿಲ್ಲ. ರಾಷ್ಟ್ರೀಯ ಸಭೆಯೇ ಶಾಸನ ಸಭೆಗೆ ಶರಣು ಹೋಗುವುದು ಅವರಿಗೆ ಸಂಬೀಳಲಿಲ್ಲ. ಸ್ವರಾಜ್ಯ ಪಾರ್ಟಿಯು ಶಾಸನ ಸಭೆಯನ್ನು ಪ್ರವೇಶಿಸುವದು ರಾಷ್ಟ್ರಸಭೆಗಿರುವ ಜನತೆಯ ಬೆಂಬಲವನ್ನು ನಿದರ್ಶಿಸುವದಕ್ಕಾಗಿಯೇ ಇದೆ. ಆದಕ್ಕಾಗಿಯೇ ರಾಷ್ಟ್ರೀಯ ಸಭೆಯೂ ಸ್ವರಾಜ್ಯ ಪಾರ್ಟಿಗೆ ಬೇಕಾದ ಸಹಾಯವನ್ನೀಯಲು ಅಭಯವನ್ನಿತ್ತುದು.

ಅಖಿಲಭಾರತ ರಾಷ್ಟ್ರೀಯ ಸಮಿತಿ

ಕಳೆದ ಗಲಭೆಯ ತಾರೀಖಿನ ದಿವಸ ಅ. ಭಾ. ರಾಷ್ಟ್ರೀಯ ಸಮಿತಿಯು ಪಾಟನಾದಲ್ಲಿ ಕೂಡಿದ್ದಿತು. ಪಂ. ಮಾಲವೀಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮೊದಲು ನಿಧನ ಹೊಂದಿದ ಪ್ರಮುಖ ರಾಷ್ಟ್ರೀಯ ಪುರುಷರ ವಿಷಯವಾಗಿ ದುಃಖ ಪ್ರದರ್ಶನವು ಮಾಡಲಾಯಿತು. ಆ ಮೇಲೆ ಡಾ. ಅನ್ಸಾರಿಯವರು ಮಹಾತ್ಮಾಜಿಯವರ ಪತ್ರಕ್ಕೆ ಮಾನ್ಯತೆ ಕೊಡಬೇಕೆಂಬ ಗೊತ್ತುವಳಿಯನ್ನು ಸಭೆಯಲ್ಲಿ ತಂದರು. ಆ ಕಾಲಕ್ಕೆ ಅವರು—"ಶಾಸನೋಲ್ಲಂಘನೆಯಂಥ ಪರಿಣಾಮಕಾರಕ ಸಾಧನವನ್ನು ಮಹಾತ್ಮಾಜಿಯವರಂತಹ ಮಹಾ ವಿಭೂತಿಗಳೊಬ್ಬರೇ ಇಟ್ಟುಕೊಳ್ಳಲು ಶಕ್ಯವಿದೆ. ಅವರ ಈ ನಡವಳಿಕೆಯನ್ನು ನಾವೆಲ್ಲರೂ ಅನುಮೋದಿಸಬೇಕು. ಇದನ್ನೇ ಬಾಬು ರಾಜೇಂದ್ರ ಪ್ರಸಾದರವರು ಅನುಮೋದಿಸಿದರು. ಈ ಗೊತ್ತುವಳಿಯು ಸರ್ವಾನುಮತದಿಂದ ಪಾಸಾಯಿತು. ಇದಕ್ಕೆ ಬ್ಯಾ. ಅಭ್ಯಂಕರ ಮತ್ತು ಪಂ. ಕೃಷ್ಣಕಾಂತ ಮಾಲವೀಯರು ವಿರೋಧಿಸಿದರು. ಆದರೆ ಅವರ ಸೂಚನೆಗಳು ಬಿದ್ದುಹೋದವು.

ಮರುದಿವಸ ಕೂಡಿದ ಸಭೆಯಲ್ಲಿ ಮಹಾತ್ಮಾಜಿಯವರು ಒಂದು ಗೊತ್ತುವಳಿಯನ್ನು ತಂದರು. ಆದರಲ್ಲಿ ಡಾ. ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ೩೪ ಜನ ಸದಸ್ಯರುಗಳಿಂದ ಕೂಡಿದ ಒಂದು ಪಾರ್ಲಿಮೆಂಟರಿ ಬೋರ್ಡು ಸ್ಥಾಪಿಸಲ್ಪಟ್ಟು ಶಾಸನ ಸಭೆಗಳನ್ನು ಪ್ರವೇಶಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಮತ್ತು ಹಿಂದಿನ ಗೊತ್ತುವಳಿಯ ವಿಷಯವಾಗಿ ಭಾಷಣ ಮಾಡುತ್ತ ಮಹಾತ್ಮಾಜಿಯವರು—"ಶಾಸನೋಲ್ಲಂಘನೆಯ ಗೊತ್ತುವಳಿಯು ಪುನಃ ಗೊತ್ತುವಳಿಯ ತಿದ್ದುಪಡಿಯಾಗಿದೆ. ಆ ಕಾಲಕ್ಕೆ ಅದು ವೈಯಕ್ತಿಕವಾಗಿದ್ದು ಈಗ ಒಂದೇ ಒಂದು ವ್ಯಕ್ತಿಯ ಕಡೆಗೆ ಬಂದಿದೆ. ನಾನೂ ಶಾಸನ ಭಂಗವನ್ನು ವಹಿಸಬಾರದೆಂದು ನೀವು ಹೇಳುವದು ನನ್ನ ಆಚಾರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕೆಂದಂತೆಯೇ ಸರಿ. ನನ್ನೊಬ್ಬನ ಕಾರ್ಯದಿಂದಲೇ ನಾನು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ದೊರಕಿಸಿ ಕೊಡಬಲ್ಲೆನು.

ಪಾರ್ಲಿಮೆಂಟರಿ ಬೋರ್ಡು

ಅ. ಭಾ. ರಾಷ್ಟ್ರೀಯ ಸಮಿತಿಯ ೩ನೆಯ ಗೊತ್ತುವಳಿಯಲ್ಲಿ ಪಾರ್ಲಿಮೆಂಟರಿ ಬೋರ್ಡು ಸ್ಥಾಪಿತವಾಯಿತಷ್ಟೆ. ಇದಕ್ಕೆ ಡಾ. ಅನ್ಸಾರಿಯವರು ಅಧ್ಯಕ್ಷರು. ಅವರಿಲ್ಲದ ಕಾಲದಲ್ಲಿ ಪಂ. ಮಾಲವೀಯರು ಅಧ್ಯಕ್ಷರ ಕಾರ್ಯವನ್ನು ಮಾಡುವರು. ಡಾ. ರಾಯ ಮತ್ತು ಎ. ಭುಲಾಭಾಯಿ ದೇಸಾಯಿ ಇವರು ಜನರಲ್ ಸೆಕ್ರೆಟರಿಗಳು. ಇದಲ್ಲದೆ ಬೋರ್ಡಿನ ಜಮಾ ಖರ್ಚಿನ ಸಮಿತಿ ಮತ್ತು ಮತ ಪ್ರಚಾರಕ ಸಮಿತಿಗಳು ಏರ್ಪಡಿಸಲ್ಪಟ್ಟವು. ಈ ಎರಡನೆಯ ಗೊತ್ತುವಳಿಯನ್ನು ತಂದಾಗ್ಗೆ ಮಹಾತ್ಮಾಜಿಯವರು ತಮ್ಮ ಭಾಷಣದಲ್ಲಿ ಈ ಪ್ರಕಾರ ಹೇಳಿದರು—"೧೯೨೦ನೆಯ ಇಸ್ವಿಯಲ್ಲಿ ನನ್ನ ಸಲಹೆಯಿಂದಲೆ ರಾಷ್ಟ್ರೀಯ ಸಭೆಯು ಶಾಸನ ಸಭೆಗಳ ಮೇಲೆ ಬಹಿಷ್ಕಾರವನ್ನು ಹಾಕಿದ್ದಿತು. ಆದುದರಿಂದಲೇ ಈ ಗೊತ್ತುವಳಿಯನ್ನು ತರುವ ಕಾರ್ಯವು ನನ್ನ ಕಡೆಗೆ ಒಪ್ಪಿಸಲ್ಪಟ್ಟರಬೇಕು. ಶಾಸನ ಸಭೆಗಳ ಬಹಿಷ್ಕಾರದಿಂದ ದೇಶಕ್ಕೆ ಹಾನಿಯಾಯಿತೆಂದು ಕೆಲವರಿಗೆ ಅನಿಸುತ್ತಿದೆ. ಆದರೆ ಅದು ನನಗೆ ಮಾನ್ಯವಿಲ್ಲ. ಬಹಿಷ್ಕಾರದಿಂದ ರಾಷ್ಟ್ರೀಯ ಸಭೆಯ ಬಲವು ಬೆಳೆದಿದೆ, ಪುನೆಯ ಪಂಚಹತ್ತಿನ ತರುವಾಯ ಕೆಲವು ರಾಷ್ಟ್ರೀಯ

ಕಾರ್ಯಕರ್ತರಿಗೆ ತಿರುಗಿ ಶಾಸನ ಸಭೆಗೆ ಹೋಗಬೇಕೆಂದನಿಸಿತು. ಹಾಗೆ ಅವರನ್ನು ಹೋಗಬಿಡಬೇಕೆಂದು ನನಗೂ ಅನಿಸಿತು. ಆದುದರಿಂದ ಈ ಬೋರ್ಡು ಸ್ಥಾಪಿಸಲ್ಪಟ್ಟಿದೆ. ಇದು ಆ. ಭಾ. ಚರಖಾ ಸಂಘದಂತೆಯೇ ಸ್ವಯಂ ಸತ್ತಾತ್ಮಕವಾಗಿರುವುದು. ಶಾಸನ ಸಭೆಗಳಲ್ಲಿಯ ಕಾರ್ಯಗಳನ್ನು ಯಾವ ಪದ್ಧತಿಯಿಂದ ನಡೆಯಿಸಬೇಕೆಂಬುದನ್ನಷ್ಟೇ ಅ. ಭಾ. ರಾಷ್ಟ್ರೀಯ ಸಮಿತಿಯು ನಿರ್ಣಯಿಸುವುದು.

ರಾಷ್ಟ್ರೀಯ ಸಭೆಯ ಮುಂದಿನ ಅಧಿವೇಶನ

ಅ. ಭಾ. ರಾಷ್ಟ್ರೀಯ ಸಮಿತಿಯಲ್ಲಿ ಈ ಎರಡು ಮಹತ್ವದ ಗೊತ್ತುವಳಿಗಳು ಪಾಸಾದ ಮೇಲೆ ಮಹಾತ್ಮಾಜಿಯವರು ರಾಷ್ಟ್ರೀಯ ಸಭೆಯ ಮುಂದಿನ ಅಧಿವೇಶನವನ್ನು ಅಕ್ಟೋಬರ ತಿಂಗಳದ ಮೊದಲನೆಯ ವಾರದಲ್ಲಿ ಮುಂಬಯಿಯಲ್ಲಿ ನೆರೆಯಿಸಬೇಕೆಂಬ ಗೊತ್ತುವಳಿಯನ್ನು ತಂದರು. ಅದು ಸರ್ವಾನುಮತದಿಂದ ಪಾಸಾಯಿತು. ಈ ಅಧಿವೇಶನವು ಅಷ್ಟನೆಯದೊ ಅಥವಾ ಒಳನೆಯದೊ ಎಂದು ರಾಜೇಂದ್ರ ಪ್ರಸಾದರು ಕೇಳಿದರು. ಅದಕ್ಕೆ ಪಂ. ಮಾಲವೀಯವರು "ದಿಲ್ಲಿ ಮತ್ತು ಕಲಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಅಧಿವೇಶನಗಳನ್ನು ಕೂಡಿಸಲು ಸರಕಾರದವರು ಪ್ರತಿಬಂಧಿಸಿದ್ದರೂ ಅವು ಸದ್ಯದ ಅಧಿವೇಶನದಂತೆಯೇ ಮಹತ್ವದವಾಗಿದ್ದವು. ಆದುದರಿಂದ ಈ ಸಾರಿಯ ಅಧಿವೇಶನವು ಒಳನೆಯದು" ಎಂದರು.

ಪಾಟಣಾದಲ್ಲಿ ಸಮಾಜ ಸತ್ತಾವಾದಿಗಳ ಪರಿಷತ್ತು

ಬಂಗಾಲ, ಪಂಜಾಬ, ಮಧ್ಯಪ್ರಾಂತ, ಮುಂಬಯಿ, ಸಂಯುಕ್ತಪ್ರಾಂತ ಮೊದಲಾದ ಕಡೆಗಳಿಂದ ಅನೇಕ ಜನ ಸಮಾಜ ಸತ್ತಾವಾದಿಗಳು ಪಾಟಣಾ ಇಸ್ಲಾಮಿಯಾ ಹಾಲಿನಲ್ಲಿ ಶ್ರೀ ನರೇಂದ್ರದೇವ ಇವರ ಅಧ್ಯಕ್ಷತೆಯಲ್ಲಿ ಕೂಡಿದ್ದರು. ಇವರು ಅನ್ನುವದೇನಂದರೆ—ಲಾಹೋರಿನಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಏಕಕಂಠವಾಗಿ ತೀರ್ಮಾನಿಸಲ್ಪಟ್ಟ ಶಾಸನಭಂಗ ಚಟುವಟಿಕೆಯನ್ನು ಪುನಃ ರಾಷ್ಟ್ರೀಯ ಅಧಿವೇಶನವು ಕೂಡಿಯೇ ತೆಗೆದುಹಾಕಬೇಕು. ಅ. ಭಾ. ರಾಷ್ಟ್ರೀಯ ಸಮಿತಿಗೆ ಈ ಬದಲಾವಣೆ ಮಾಡುವ ಅಧಿಕಾರವಿಲ್ಲ. ಇವರ ಅಧಿವೇಶನದಲ್ಲಿ ರಾಷ್ಟ್ರೀಯ ಸಭೆಯು ಸಮಾಜ ಸತ್ತಾವಾದಿಗಳ (Socialist) ಕಾರ್ಯಕ್ರಮವನ್ನು ಮಾನ್ಯ ಮಾಡಬೇಕೆಂದೂ, ಸಮಾಜಸತ್ತಾವಾದವೇ ನಮ್ಮ ಧ್ಯೇಯವೆಂದೂ ರಾಷ್ಟ್ರೀಯ ಸಭೆಯು ಪ್ರಕಟಪಡಿಸಬೇಕೆಂದೂ ಮಿ. ಮಸಾಣಿಯವರು ತಂದ ಗೊತ್ತುವಳಿಯು ಅಂಗೀಕೃತವಾಯಿತು.

ಸ್ವರಾಜ್ಯ ಪಕ್ಷ ಮತ್ತು ಜಾತಿ ನಿರ್ಣಯ.

ಸ್ವರಾಜ್ಯ ಪಕ್ಷದವರು ಜಾತಿ ನಿರ್ಣಯದ ಮೇಲೆ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವುದೇ ಇಲ್ಲ. ಹಿಂದು ಮಹಾ ಸಭೆಯವರು ಸರಕಾರದವರು ಸಿದ್ಧಪಡಿಸಿದ ಜಾತಿ ನಿರ್ಣಯವನ್ನು ಯಾವಾಗಲೂ ಅಲ್ಲಗಳೆಯುತ್ತಿದ್ದಾರೆ. ಅವರೆ ಸ್ವರಾಜ್ಯ ಪಕ್ಷದ ಮುಂದಾಳುಗಳಾದ ಪಂ. ಮಾಲವೀಜಿಯವರು ಈ ವಿಷಯಕ್ಕೆ ಅನ್ನುವದೇನಂದರೆ— "ಸ್ವತಂತ್ರ ಜಾತಿವಾರಿಕ ಸಂಘದ ಶತ್ರುವನ್ನು ಯಾವ ರಾಷ್ಟ್ರೀಯ ಪುರುಷನೂ ಮಾನ್ಯಮಾಡಲಾರನು. ಇದರಿಂದ ಹಿಂದೀ ರಾಷ್ಟ್ರವು ಒಂದೇಯಾಗುವುದು ಶಕ್ಯವಿಲ್ಲ. ಆದರೆ ಜಾತಿ ನಿರ್ಣಯದಂತೆ ಭಿನ್ನಭಿನ್ನ ಜಾತಿಗಳಿಗೆ ಪ್ರಾತಿನಿಧ್ಯವನ್ನು ಕೊಡಲು ನನ್ನ ವಿರೋಧವಿಲ್ಲ.! ಈ ಪ್ರಕಾರವಾಗಿ ಸ್ವರಾಜ್ಯ ಪಕ್ಷದ ಅಂಬೋಣವು ಸ್ಪಷ್ಟವಾಗವಿದ್ದುದರಿಂದಾಗಿ ಬರುವ ಅಯ್ಕೆಯಲ್ಲಿ ಹಿಂದು ಮಹಾ ಸಭೆಯ ವತಿಯಿಂದ ಸದಸ್ಯರನ್ನು ನಿಲ್ಲಿಸಬೇಕೆಂದು ಅಧ್ಯಕ್ಷರಾದ ಭಾಯಿ ಪರಮಾನಂದರು ಒಂದು ಪ್ರಸಿದ್ಧಿ ಪತ್ರಿಕೆಯನ್ನು ಹೊರಡಿಸಿದ್ದಾರೆ.

ನರೇಂದ್ರ ಮಂಡಲದ ಪುನರ್ಘಟನೆ.

ಸದ್ಯಕ್ಕಿರುವ ನರೇಂದ್ರ ಮಂಡಲದ ಘಟನೆಯು ಹೈದರಾಬಾದ ಮೈಸೂರು, ಬಡೋದೆ, ಕಾಶ್ಮೀರ ಮೊದಲಾದ ದೊಡ್ಡದೊಡ್ಡ ಸಂಸ್ಥಾನಗಳಿಗೆ ಮಾನ್ಯವಿಲ್ಲ. ಯಾಕಂದರೆ ಇಲ್ಲಿ ಸಣ್ಣ ದೊಡ್ಡ ಸಂಸ್ಥಾನಗಳ ಸಮಾವೇಶವಾಗಿ ಅವುಗಳ ಯೋಗ್ಯತೆಯೂ ಒಂದೇಯಾಗಿದೆ. ಆದುದರಿಂದ ಈ ದೊಡ್ಡ ಸಂಸ್ಥಾನಗಳು ಈ ಮಂಡಲದಲ್ಲಿ ಸೇರಿರುವುದಿಲ್ಲ. ಈಗ ಒಂದು ಯೋಜನೆಯ ಮೂಲಕ ಎಲ್ಲ ಸಂಸ್ಥಾನಗಳನ್ನೂ ಒಟ್ಟುಗೂಡಿಸಿ ಅದಕ್ಕೆ ಬಲವನ್ನುಂಟುಮಾಡಬೇಕೆಂದು ಭೋಪಾಲ ಮೊದಲಾದ ಸಂಸ್ಥಾನಿಕರು ಯತ್ನಿಸುತ್ತಿರುವರು. ಇದಕ್ಕಾಗಿಯೇ ದೊಡ್ಡ ಸಂಸ್ಥಾನಾಧಿಪತಿಗಳ ದಿವಾಣರಾದ ಸರ ಅಕಬರ ಹೈದರಿ, ಸರ್ ಮಿರ್ಜಾ ಇಸ್ಮಾಯೆಲ್, ಮೊದಲಾದವರು ಯೋಜನೆ ನಡೆಸಿರುವರು. ಸರ್. ಅಕಬರ್ ಹೈದರಿಯವರು ಈ ಕಮಿಟಿಯ ಮುಂದೆ ಒಂದು ಯೋಜನೆಯನ್ನು ಸಿದ್ಧಪಡಿಸಿರುವರು. ಇವರ ಯೋಜನೆಯಂತೆ ದೊಡ್ಡದೊಡ್ಡ ಸಂಸ್ಥಾನಾಧಿಪತಿಗಳ ದಿವಾಣರೂ ಮತ್ತು ಸಣ್ಣ ಸಣ್ಣ ಸಂಸ್ಥಾನಿಕರ ಗುಂಪುಗಳಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿಗಳೂ ಕೂಡಿ ಒಂದು ಮಂಡಲವನ್ನೇರ್ಪಡಿಸತಕ್ಕದ್ದು. ಈ ಘಟನೆಯನ್ನುಂಟುಮಾಡಲು ಒಂದು ಸಮಿತಿಯು ನಿರ್ಪಡಿಸಲ್ಪಟ್ಟಿತು.

—ಸಿಂಗಾಪುರದಿಂದ ಆಸ್ಟ್ರೇಲಿಯಾಕ್ಕೆ ಹೋಗುವ ಒಂದು ಟಪಾಲ ವಿಮಾನವನ್ನು ಬ್ರಿಟಿಶರು ಸಿದ್ಧಗೊಳಿಸಿದ್ದಾರೆ. ಅದು ೨೦೦ ಅಶ್ವ ಶಕ್ತಿಯುಳ್ಳದ್ದಿದ್ದು ಗಂಟೆಗೆ ೧೭೫ ಮೈಲು ವೇಗ ಹೋಗುತ್ತದೆ.

—ಒಬ್ಬ ಬಂಗಾಲಿ ತರುಣಿಯು ತನ್ನ ಪತಿಯು ಮರಣೋನ್ಮುಖನಾದ ಕಾಲದಲ್ಲಿ ಅವನು ಸತ್ತನೇಲೆ ತನಗೆ ವೈಧವ್ಯವು ಪ್ರಾಪ್ತವಾಗುವುದೆಂದು ತಿಳಿದು ತನ್ನ ಸೀರೆಯಮೇಲೆ ರಾಕೆಲ್ ಸುರುವಿ ಮೊದಲೇ ಸುಟ್ಟುಕೊಂಡು ಸತ್ತಳು ಆ ಮೇಲೆ ಪತಿಪತ್ನಿಯರ ಶವ ಸಂಸ್ಕಾರವಾಯಿತು. ಇವಳು ಆಧುನಿಕ ಸತಿಯಲ್ಲವೇ?

—ಟೋಕಿಯೋದಲ್ಲಾಗುವ ಒಲಂಪಿಯೆ ಬುದ್ಧ ಜಯಂತಿಗೆ ಹಿಂದು ಮಹಾಸಭೆಯ ಕಾರ್ಯಕರ್ತರಾದ ಪಂ. ಧರ್ಮವೀರರು ಹೋಗುವರು.

—ಕಳೆದ ಅತ್ಯಾಚಾರದ ಪರಿಣಾಮವಾಗಿ ದಾರ್ಜಿಲಿಂಗದಲ್ಲಿ ೧೪ರಿಂದ ೨೫ ವಯಸ್ಸಿನ ಹಿಂದು ತರುಣತರುಣಿಯರು ತಾವು ಬರುವಾಗ್ಗೆ ತಮ್ಮ ಭಾವಚಿತ್ರ ಮತ್ತು ಗುರ್ತುಹತ್ತುವ ಕಾರ್ಡುಗಳನ್ನು ತರಬೇಕೆಂದು ನ್ಯಾಯಾಧೀಶರ ಅಪ್ಪಣೆಯಾಗಿದೆ.

—ರಶಿಯಾದೇಶದ ರೆಡ್‌ಕ್ರಾಸ್ ಸಂಸ್ಥೆಯವರು ಬಿಹಾರ ಭೂಕಂಪದ ಸಹಾಯಾರ್ಥವಾಗಿ ೫೫ ಸಾವಿರ ಡಾಲರ್ಸ ನಾಣ್ಯಗಳನ್ನು ಕಳಿಸಿರುವರು. (ಡಾ. ೨|| ರೂ.)

—ಹೈದರಾಬಾದ ಸಂಸ್ಥಾನದ ವರಂಗಲ್ಲದ ಒಂದು ಸಾಗವಾನಿಯ ಅಡ್ಡೆಗೆ ಮತ್ತು ಬೀದರದಲ್ಲಿ ಒಂದು ಎಣ್ಣೆಯ ಗಿರಣಿಗೆ ಹಾಗೆಯೇ ಶಿರಪುರದಲ್ಲಿ ೬೦ ಮನೆಗಳಿಗೆ ಬೆಂಕಿ ಹತ್ತಿ ಬಹಳ ಹಾನಿಯಾಗಿದೆ.





ಶಾ. ಶ. ೧೮೫೬ ನೆಯ ನಿ. ವೈಶಾಖ ಶು. ೧೫ ಸೋಮವಾರ.

ಶಸ್ತ್ರಸನ್ಯಾಸ ಪರಿಷತ್ತು ವಿಫಲವಾಯಿತು.

ಕಳೆದ ಮಹಾಯುದ್ಧದ ಅನಿಷ್ಟ ಪರಿಣಾಮದಿಂದ ಯುರೋಪ ಖಂಡಕ್ಕಷ್ಟೇ ಅಲ್ಲದೆ ಜಗತ್ತಿಗೇನೇ ಒಂದು ಬಲವಾದ ಆಘಾತವಾದುದರಿಂದ ಎಲ್ಲ ರಾಷ್ಟ್ರಗಳೂ ಯುದ್ಧವು ಸಾಕು ಸಾಕು ಎಂದು ಅನ್ನುತ್ತಿದ್ದರೂ ಸಂಶಯವು ಕಲುಷಿತ ಹೃದಯವನ್ನವಲಂಬಿಸುವದೆಂಬಂತೆ ಪರಸ್ಪರ ಭೀತಿಯಿಂದ ಅವು ಶಸ್ತ್ರಾಸ್ತ್ರೋಪಕರಣಗಳನ್ನು ಇನ್ನೂ ಹೆಚ್ಚಿಸುತ್ತಲೇ ಇವೆ. ಶಸ್ತ್ರ ವರ್ಧನೆಯು ಯುದ್ಧ ಸೂಚಕವೇ ಹೊರತು ಶಾಂತಿದ್ಯೋತಕವಲ್ಲವೆಂದು ಶಸ್ತ್ರ ಸನ್ಯಾಸವನ್ನು ಬಳಿಕೆಯಲ್ಲಿ ತರಲು ಜಿನೇವಾ ಶಸ್ತ್ರಸನ್ಯಾಸ ಪರಿಷತ್ತು ಕೆಲವು ವರುಷಗಳಿಂದ ಪ್ರಯತ್ನಿಸುತ್ತ ಬಂದಿತು. ಆದರೆ ವ್ಯತ್ಯಸ್ತ ಪರಿಸ್ಥಿತಿಯ ಮೂಲಕ ಅದರ ಚಟುವಟಿಕೆಯು ಕುಂಠಿತವಾಗಹತ್ತಿ ಈಗ ತೀರ ಮುರುಕಳಿಯ ಸ್ಥಿತಿಗೆ ಬಂದಿದೆ. ಶಸ್ತ್ರ ಸನ್ಯಾಸ ಸಮ್ಮೇಲನವನ್ನು ಚೆನ್ನಾಗಿ ಬಲ್ಲವರಾದ ಸರ್ ಜಾನ ಸಾಯಿಮನ್‌ರವರು, "ಶಸ್ತ್ರ ಸನ್ಯಾಸ ಸಮ್ಮೇಲನದ ಅವಸ್ಥೆ ತೀರಿತು; ಎಲ್ಲಿ ನೋಡಿದರೂ ಯುದ್ಧವೆ. ಇನ್ನೊಮ್ಮೆ ನಾನು ಜಿನೇವಾಕ್ಕೆ ಹೋಗಿ ಕೊನೆಯ ಪ್ರಯತ್ನವನ್ನು ತೀರಿಸಿಬಿಡುತ್ತೇನೆ" ಎಂದು ಹೇಳಿದರು. ಇದರಿಂದ ಶಸ್ತ್ರ ಸನ್ಯಾಸದ ವಿಫಲತೆಯ ವಿಷಯವಾಗಿ ಮುತ್ಸದ್ದಿಗಳು ಎಷ್ಟು ನಿರಾಶರಾಗಿರುವುದೆಂಬುದು ಸ್ಪಷ್ಟವಾಗಿದೆ.

ಈ ನಿರಾಶೆಗೆ ಅನೇಕ ಕಾರಣಗಳಿದ್ದರೂ ಫ್ರಾನ್ಸ ದೇಶದ ಧೋರಣವು ಒಂದು ಬಲವಾದ ಕಾರಣವಾಗಿದೆ. ಜರ್ಮನಿಯು ಸ್ವಸಂರಕ್ಷಣೆಯ ಮಟ್ಟಗಾದರೂ ಶಸ್ತ್ರಗಳನ್ನಿಟ್ಟುಕೊಳ್ಳಲು ಇದಕ್ಕೆ ಒಪ್ಪಿಗೆಯಿಲ್ಲ. ಹಾಗೆಯೇ ತಾನು ಮಾತ್ರ ಭೌಮಿಕ, ನಾವಿಕ ಮತ್ತು ನೈಮಾನಿಕ ದಳಗಳನ್ನು ಹೆಚ್ಚಿಸುತ್ತಲೇ ಇದೆ. ಈ ಸಾಶಂಕ ವೃತ್ತಿಯು ಇಂಗ್ಲೆಂಡಕ್ಕೆ ಒಪ್ಪಿಗೆಯಿಲ್ಲದಿದ್ದುದರಿಂದ ಸ್ವಾಭಾವಿಕವಾಗಿಯೇ ಅದು ಜರ್ಮನಿಯ ಕಡೆಗೆ ಕಾರುಣ್ಯ ದೃಷ್ಟಿಯಿಂದ ನೋಡುತ್ತಲಿದೆ.

ಇನ್ನು ಜರ್ಮನಿಯಾದರೊ ಸ್ವಾಭಿಮಾನಪೂರಿತವಾದುದು. ಸುತ್ತಲಿನ ರಾಷ್ಟ್ರಗಳೆಲ್ಲ ಸ್ವಸಂರಕ್ಷಣೆಯ ಮತ್ತು ಪ್ರಸಂಗ ಬಂದರೆ ವಿರೋಚಿಸುವ ಸನ್ನಾಹವನ್ನು ಮಾಡುತ್ತಿರಲು ತಾನು ಮಾತ್ರ ಸುಮ್ಮನೆ ಇದ್ದುಕೊಳ್ಳುವದು ಅದಕ್ಕೆ ಎಂದೂ ಸೇರದು. ಇದಕ್ಕಾಗಿಯೇ ಅದು ಶಸ್ತ್ರ ಸನ್ಯಾಸ ಪರಿಷತ್ತಿಗೆ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಬೇಡುವ ಪೂರ್ವದಲ್ಲಿಯೇ ಶಸ್ತ್ರ ಸನ್ನಾಹವನ್ನು ಮಾಡುತ್ತಿದೆ. ಅದು ಹಡಗುಪಡೆಗಾಗಿ ೧೧ ಕೋಟಿ ೫೦ ಲಕ್ಷ ಮಾರ್ಕ್ ಗಳನ್ನೂ ಭೂದಲಕ್ಕಾಗಿ ೧೭॥ ಕೋಟಿ ಮಾರ್ಕುಗಳನ್ನೂ ಮತ್ತು ವಿಮಾನ ದಲಕ್ಕಾಗಿ ೧೩ ಕೋಟಿ ೨೦ ಲಕ್ಷ ಮಾರ್ಕುಗಳನ್ನೂ ವೆಚ್ಚ ಮಾಡಲು ಯೋಜನೆ ಮಾಡಿದೆ. ಇದನ್ನು ಕಂಡು ಫ್ರಾನ್ಸನ ಸಾಶಂಕ ವೃತ್ತಿಯು ಮತ್ತಷ್ಟು ದೃಢವಾಗಿ ಶಸ್ತ್ರ ಸನ್ಯಾಸದ ವಿಷಯದಲ್ಲಿ ಅದರ ವಿಶ್ವಾಸವು ಹಾರಿಹೋಗಹತ್ತಿದೆ.

ನವಯುಗಾಚಾರ್ಯ ಶ್ರೀ ಬಸವೇಶ.

(೯ನೆಯ ಪುಟದಿಂದ ಬಂದುದು.)

ರಾದರು. ತೂಕಡಿಸುತ್ತಿದ್ದ ನಮ್ಮ ನಾಡು ಎಚ್ಚತ್ತುಕೊಂಡಿತು. ಕುರಿಗಳಂತೆ ಅರಚುತ್ತಿದ್ದವರು ಸಿಂಹಗಳಂತೆ ಘರ್ಜಿಸಹತ್ತಿದರು. ಆಗ ಬೀಸಿದ ಕ್ರಾಂತಿಯ ಬಿರುಗಾಳಿಯು ಬೂದಿ ಮುಚ್ಚಿದ ಕೆಂಡದಂತೆ ಮಂಕು ಕವಿದುಕೊಂಡಿದ್ದ ಜನಾಂಗವನ್ನು ಊದಿ, ಊದಿ ಎಚ್ಚರಗೊಳಿಸಿತು. ಇದ್ದಲಿನಂತಿದ್ದವರು ಕೆಂಗೆಂಡಗಳಾದರು. ಮೂಕರಾಗಿದ್ದವರು ವಾಗ್ಮಿಗಳಾದರು. ಕುರುಡರಂತಿದ್ದವರಿಗೆ ಕಣ್ಣು ಬಂದಂತಾಯಿತು. ದುರ್ಬಲರಂತಿದ್ದವರಿಗೆ ಭೀಮ ಬಲ ಬಂದಿತು. ಕ್ಲೈಬ್ಯವು ಮಾಯವಾಗಿ ಎದೆಯಲ್ಲಿ ಕೆಚ್ಚುದಿಸಿತು. ಬಗೆಯಲ್ಲಿ ನೆಚ್ಚುಮಾಡಿತು.

ಹೀಗೆ ಅಂಧಕಾರವನ್ನು ಹೋಗಲಾಡಿಸಿ, ನವಯುಗದ, ಅರುಣೋದಯದ ಕಾರುಣ್ಯ ಕಿರಣಗಳ ಹೊಂಬೆಳಕನ್ನು ಬೀರಿ ಧರ್ಮವನ್ನೂ ಜನಾಂಗವನ್ನೂ ಉದ್ಧರಿಸಿದ ಆ ಮಹಾಪುರುಷನನ್ನು ಮರೆತು ಬಿಡುವುದು ಕೃತಘ್ನತನದ ಪರಮಾವಧಿಯಲ್ಲವೇ? ಇಂದು ಸಮಸ್ತ ಮತ, ಧರ್ಮ, ಪಂಥಗಳಲ್ಲಿಯೂ ಮುಖ್ಯಾನುಷ್ಠೇಯವೆನಿಸಿರುವ ಭಕ್ತಿಯನ್ನು ಸ್ವತಃ ತಾನು ಅನುಷ್ಠಿಸಿ ಲೋಕವೆಲ್ಲವೂ ಅದನ್ನನುಸರಿಸುವಂತೆ ಮಾಡಿ ಭಕ್ತಿಯ ಪ್ರಾಧಾನ್ಯತೆಯನ್ನೆತ್ತಿ ಹಿಡಿದು ಭಕ್ತಿಯೋಗದ ಪ್ರಥಮಾಚಾರ್ಯನಾಗಿರುವನಾ ಬಸವೇಶನು (ಮೊದಲು ಭಕ್ತಿಯಿರಲಿಲ್ಲವೆಂದಲ್ಲ ಆದರೆ ನಮ್ಮ ನಾಡಿನಲ್ಲಿ ನಮ್ಮ ನುಡಿಯಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಆ ಭಕ್ತಿಯ ಸುಧಾರಸವನ್ನು ಬೆರೆಸಿ ಅದನ್ನು ಸೇವಿಸಿದ ಲೋಗರಿಗೆ ವಂಶ ಪಾರಂಪರ್ಯವಾಗಿ ಆ ಭಕ್ತ್ಯಾಚರಣೆಯ ಸುಖದ ಇಂಪಿನ ಕಂಪನ್ನೊದಗಿಸಿದ ಸತ್ಕೀರ್ತಿಯು ಚಿತ್ಕಲಾಂಶೀಭೂತನಾದ ಆ ಪರಮಪೂಜ್ಯನ ಹೊರತು ಇತರರಿಗೆ ಸಲ್ಲದು.) ಇಂದಿನ ಮಹಾತ್ಮರೂ, ಸುಧಾರಕರೂ, ಪ್ರಾರಂಭಿಸಿರುವ ಸ್ತ್ರೀ ಸುಧಾರಣೆ, ಸಾಹಿತ್ಯಸೇವೆ, ಧರ್ಮ ಸುಧಾರಣೆ, ಸಮಾಜ ಸಂಸ್ಕರಣ ಇತ್ಯಾದಿ ಸಮಸ್ತ ನವ ನವೀನ ವಿಚಾರಗಳನ್ನೂ ನಮ್ಮ ನಾಡಿನಲ್ಲಿ ಅಂದೇ ಪ್ರಾರಂಭಿಸಿ ಇಂದಿನ ನವಯುಗಕ್ಕೆ ಅಂದೇ ಪ್ರಥಮಾಚಾರ್ಯನಾಗಿ ನವಯುಗಾಚಾರ್ಯನಾಗಿರುವನಾ ಬಸವ ಮಹಾನುಭಾವನು.

ನವಯುಗಾಚಾರ್ಯ ಶ್ರೀ ಬಸವೇಶ.

(ಲೇಖಕ:—ಮಾ. ನಂ. ನಂಜಪ್ಪ ಬೆಂಗಳೂರು ನಗರ)

ಡಾಂಭಿಕ ವೃತ್ತಿ, ಅರ್ಥವಿಲ್ಲದ ಆಚರಣೆ, ಸ್ವಾರ್ಥಿಗಳ ಕುಟಿಲ ಶಾಸ್ತ್ರ, ಪರಧರ್ಮದ ಮೇಲಣ ದ್ವೇಷ ಇತ್ಯಾದಿ ಕಾರ್ಮೋಡಗಳ ಕಗ್ಗತ್ತಲೆಯಲ್ಲಿ ನರಳಿ ನಡೆಯುತ್ತಿದ್ದ ನಮ್ಮೀ ಪವಿತ್ರ ಕನ್ನಡ ನಾಡಿನ ಮತ್ತು ಸುಧಾರಣೆಯ ಸಂಸ್ಕಾರಗಳಿಲ್ಲದೆ ಬಹುಕಾಲದ ಕಿಲುಬಿನ ಕೊಳೆಯಿಂದ ಮಲಿನವಾಗಿದ್ದ ಪವಿತ್ರ ಲಿಂಗಾಂಗಿ ಧರ್ಮದ ಉದ್ಧಾರದ ಸಲುವಾಗಿಯೇ ಹನ್ನೆರಡನೆಯ ಶತಮಾನದಲ್ಲಿ ಬಸವೇಶನೆಂಬ ಚಾರು ಚಂದ್ರಮನ ಶುಭೋದಯವಾದುದು.

ಆ ಮಹಾಪುರುಷನು ಜನ್ಮಿಸಿದ ಕಾಲದಲ್ಲಿ ನಮ್ಮ ನಾಡೇ ಏಕೆ ಅಖಿಲಭಾರತವೂ, ಸ್ವಾರ್ಥಿಗಳ ಪೈಶಾಚಿಕ ಶಾಸ್ತ್ರಗಳಲ್ಲಿ ಸಿಲುಕಿ ನರಳುತ್ತಿದ್ದಿತು. ನಮ್ಮ ಕನ್ನಡ ನಾಡೇನೂ ಅದಕ್ಕೆ ಹೊರತಲ್ಲ. ಭರತಖಂಡದಲ್ಲಿ ಮತಕಲಹವೆಂಬುದೇನೂ ಹೊಸದಲ್ಲ. ಅದರಲ್ಲಿಯೂ ದಕ್ಷಿಣ ಭಾರತವು ಮತಕಲಹಗಳಲ್ಲಿಯೂ, ಧರ್ಮದ ಹೆಸರನ್ನು ಹೇಳಿಕೊಂಡು ಸ್ವಾರ್ಥವನ್ನು ಸಾಧಿಸಿಕೊಳ್ಳುವ ಜನರ ಸಂಖ್ಯೆಯಲ್ಲಿಯೂ, ಅಗ್ರಸ್ಥಾನಂಬೂಲಕ್ಕರ್ಹವೆನಿಸಿದುದು. ಇಂತಹ ದಕ್ಷಿಣಭಾರತದ ನೆರೆಯ ನಾಡಾದ ನಮ್ಮ ನಾಡೇನು ಅದರ ವಾಸನೆಯನ್ನು ತಡೆಗಟ್ಟೀತೆ? ಈ ವರೆಗೆ ಎಷ್ಟೋ ಸುಧಾರಣೆ ಸಂಸ್ಕರಣೆಗಳು ನಡೆದು ಇಂದು ಮಹಾತ್ಮಾ ಗಾಂಧೀಜಿಯವರ ಅದ್ಭುತ ಫಲಪ್ರದಾಯಕವೆನಿಸುವ ಆಧ್ಯಾತ್ಮಯುಕ್ತ ರಾಜಕೀಯ ತಪಶ್ಚರಣದಿಂದ ದೇಶವೂ, ಧರ್ಮವೂ, ಜನಾಂಗವೂ ಇಷ್ಟೊಂದು ಪ್ರಗತಿಗಾಮಿಯಾಗಿರುವ ಈ ಕಾಲದಲ್ಲಿಯೂ, ನಮ್ಮ ನಾಡು ಇಷ್ಟೊಂದು ಮೂಢ ರೂಢಿಯ ಅಂಧಾನುಕರಣದಲ್ಲಿ ತೊಳಲುತ್ತಿರುವಾಗ ಈ ಯಾವ ಕ್ರಾಂತಿ ವಿಪ್ಲವಗಳೊಂದೂ ಇಲ್ಲದೆ ಶಾಂತಿಯೂ ಇಲ್ಲದೆ ಅರ್ಥವಿಲ್ಲದ ಆಚರಣೆಗಳಿಗೆ ಧರ್ಮದ ಮುಸುಕನ್ನು ಹಾಕಿ, ಅದೊಂದು ಬಗೆಯ ಕಳವಳಕೆಯಿಲ್ಲದ ಆವೇಶದಿಂದ ಅದನ್ನೆಸಗುತ್ತಿದ್ದ ಜನಸಂಖ್ಯೆಯೇ ಹೆಚ್ಚಾಗಿದ್ದ ಆ ಕಾಲದಲ್ಲಿ ಆ ಜನತೆಯ ಮೌಢ್ಯವನ್ನು ತೊಲಗಿಸಿ, ಧರ್ಮದಲ್ಲಿ ಸುಧಾರಣೆಯನ್ನು ನಡೆಯಿಸಿ ಸಮಾಜವನ್ನು ಸಂಸ್ಕರಿಸಿ, ನಾಡನ್ನುದ್ಧರಿಸಿ, ನವಯುಗವನ್ನು ಸ್ಥಾಪಿಸಲು ಆ ಮಹಾಪುರುಷನು ಪಟ್ಟರುವ ಶ್ರಮವನ್ನು ಅನುಭವಿಗಳಾದ ಸುಧಾರಕರು ಮಾತ್ರ ಊಹಿಸಬಲ್ಲರೇ ಹೊರ್ತು ಎಲ್ಲರಿಗೂ ಸಾಧ್ಯವಲ್ಲ.

ಅಷ್ಟೇಕೆ ಇಂದು ಕೇವಲ ಅಸ್ಪೃಶ್ಯತೆಯೊಂದರ ನಿವಾರಣೆಗಾಗಿ ನಮ್ಮ ಮಹಾತ್ಮಾಜಿಯವರು ಅದೆಷ್ಟು ಕಷ್ಟನಿಷ್ಠುರಗಳನ್ನನುಭವಿಸಬೇಕಾಗಿದೆಯೆಂಬುದನ್ನು ನೆನೆಸಿಕೊಂಡರೆ ಅಂದು ಆ ಮಹಾತ್ಮುಧಾವನು ಎಷ್ಟು ಸಂಕಟಗಳನ್ನು ಸೈರಿಸಿರಬಹುದೆಂಬುದು ಸ್ಮರಣೆಗೆ ಬರುತ್ತದೆ. ಇಂದಿನ ಸುಧಾರಕರು ಅಸ್ಪೃಶ್ಯತಾನಿವಾರಣೆ ಸ್ವದೇಶಿ ವ್ರತ ಇತ್ಯಾದಿ ಯಾವುದಾದರೊಂದರಿಂದ ನಾಡನ್ನುದ್ಧರಿಸಲು ಹೊರಟಿದ್ದರೆ ಅಂದು ಸುಧಾರಕ ಜಗದ್ಗುರುವಾದ ಆ ಬಸವಮಹಾನುಭಾವನು ಸ್ವದೇಶಿ ವ್ರತ, ಅಂತ್ಯಜೋದ್ಧಾರಗಳ ಜೊತೆಗೆ ಅತ್ಯಂತ ಕಠಿಣತರವೆನಿಸಿದ ಸಮಾಜ ಸುಧಾರಣಾವ್ರತ (ಅಂದರೆ ಲಿಂಗಧಾರಣೆಯ ಮೂಲಕ ಪವಿತ್ರಗೊಳಿಸಲ್ಪಟ್ಟವರೆಲ್ಲರಿಗೂ) ಸರ್ವ ಸಮಾನತ್ವ, ಸಹಪಂಕ್ತಿ ಭೋಜನ, ಮಿಶ್ರ ವಿವಾಹ ಮುಂತಾದ ಕಠಿಣ ಕಾರ್ಯಗಳನ್ನೂ ಸ್ವತ: ಮಾಡಿಸಿ ಮೊದಲು ಸಮಾಜವನ್ನೂ ನಂತರ ಜನಾಂಗವನ್ನೂ ಸಮತೆ ಮತ್ತು ಶಾಂತ ಸ್ಥಿತಿಗಿಳಿಸಿ ಮಾನವ ಜನ್ಮದ ಮುಖ್ಯ ಧ್ಯೇಯವಾದ ಅಕ್ಕ ಶಾಂತಿ ಅಥವಾ ಮೋಕ್ಷ ಸುಖಕ್ಕೆ ಪವಿತ್ರ, ಸರಳ ಸುಂದರ ಧಾರ್ಮಿಕ ವಚನಗಳ ಮೂಲಕ ಶ್ರೇಷ್ಠ ಸೋಪಾನಗಳನ್ನು ನಿರ್ಮಿಸಿ, ಪವಿತ್ರ ಲಿಂಗಾಂಗಿ ಧರ್ಮವನ್ನುದ್ಧರಿಸಿ ನಮ್ಮ ನಾಡನ್ನು ಕಾಪಾಡಿದನು. ಆ ಮಹಾನುಭಾವನಿಗೆ ನೇಳೆಯು ದೊರೆತಿದ್ದರೆ ಅಖಿಲ ಭಾರತವನ್ನೂ ಭೂಕೈಲಾಸದಂತೆ ಮಾಡುತ್ತಿದ್ದನು.

ವಿಶಾಲ ಮತಿಗಳಾದ ಕನ್ನಡಿಗರೇ, ಮುಖ್ಯವಾಗಿ ಲಿಂಗಾಂಗಿಗಳೆ, ಇಪ್ಪತ್ತನೇ ಶತಮಾನದ ಬಸವಣ್ಣನ (ಗಾಂಧೀಜಿಯ)ವರ ಕೃತಿಯ ಗೌರವಕ್ಕಾಗಿಯಾದರೂ ಹನ್ನೆರಡನೆಯಶತಮಾನದ ಅಂಧಕಾರಯುಗವನ್ನು ತೊಡೆದು ಹಾಕಿ ಸುಧಾರಣೆಯ ನವಯುಗದ ಹೊಂಬೆಳಕನ್ನು ಬೀರಿದ ನವಯುಗದ ಪ್ರಥಮಾಚಾರ್ಯನೂ, ಸುಧಾರಕರ ಜಗದ್ಗುರುವೂ, ಆದ ಆ ಭಗವಾನ್ ಬಸವ ಮಹಾನುಭಾವನ ಜನ್ಮೋತ್ಸವನ್ನು ಯುಕ್ತ ರೀತಿಯಲ್ಲಿ ಆಚರಿಸಿರಿ. ಮಹಾಪುರುಷರಾದ ಬಸವಣ್ಣನವರು ತಮ್ಮ ಆಧ್ಯಾತ್ಮ ಬಲದಿಂದ ಪಾಶವೀ ಶಕ್ತಿಯನ್ನೂ, ಸತ್ಯದಿಂದ ಅಸತ್ಯವನ್ನೂ, ಜ್ಞಾನದಿಂದ ಅಜ್ಞಾನವನ್ನೂ, ಕೃತಿಯಿಂದ ಕರ್ಮವನ್ನೂ, ಅಕ್ಕಜ್ಞಾನದಿಂದ ಭವವನ್ನೂ ಗೆದ್ದ ಮಹಾಪುರುಷರಾಗಿದ್ದಾರೆ, ಆ ಮಹಾನುಭಾವರು ಮೂಢರೂಢಿಯ ಅಂಧ ಯುಗವನ್ನು ಹೋಗಲಾಡಿಸಿ, ಸಂಸ್ಕರಣಯುಕ್ತ ನವಯುಗವನ್ನು ಸ್ಥಾಪಿಸುವ ಲೋಕ ಕಲ್ಯಾಣ ಕಾರ್ಯಕ್ಕಾಗಿ ತಮ್ಮ ಜೀವಿತವನ್ನು ಹುಲ್ಲಿಗಿಂತ ಕಡೆಯಾಗಿ ಪರಿಗಣಿಸಿ ಲೋಕಸೇವೆ ಮಾಡಿದರು. ಆ ಮಹಾನುಭಾವರಲ್ಲಿ ಮಹಮ್ಮದ ಪೈಗಂಬರನ ಶಾಂತಿಯೂ, ಏಸುಕ್ರಿಸ್ತನ ದಯೆ, ತಾಳ್ಮೆಯೂ, ಬೌದ್ಧನ ಅಹಿಂಸೆಯೂ, ಏಕೈಕವಾಗಿ ಎರಕಗೊಂಡು ನೆಲೆಸಿದ್ದವು.

ಇಂದು ಜಗತ್ತಿನ ಸರ್ವ ಧರ್ಮಿಯರಿಗೂ ಮಾನ್ಯ ಕನ್ನಡ ಭಾಷೆಯ ಅಧ್ಯಾಸವಿದ್ದಿದ್ದರೆ ಆ ಮಹಾನುಭಾವರ ಚಿಂತ್ರೈಯನ್ನರಿತು ಆವರೇ ನಮ್ಮ ಧರ್ಮದ ಆದಿಪುರುಷರೆಂದು ಹೆಮ್ಮೆಯಿಂದ ವಾದಿಸುತ್ತಿದ್ದರು. (ಆಯಾ ಧರ್ಮಿಯರಿಗೆ ಆಯಾ ಭಾಷೆಯಿಂದ ಬಸವ ತತ್ವವನ್ನೆರುಹುವ ಭಾರವು ಇಂದು ಸುಶಿಕ್ಷಿತ ಕನ್ನಡಿಗರನ್ನವಲಂಬಿಸಿದೆ.) ಆ ಮಹಾನುಭಾವನು ನಡೆಸಿದ ವಿಪ್ಲವದ ಪ್ರತಿಧ್ವನಿಯು ಅಂದು ನಮ್ಮ ನಾಡಿನ ತುಂಬಾ ವ್ಯಾಪಿಸಿ ನಿಶ್ಚೇಷ್ಟಿತವಾಗಿದ್ದ ಪ್ರಗತಿಯನ್ನು ಸಚೇತನಗೊಳಿಸಿ ಬಿಟ್ಟಿತು. ಆಗ ನಮ್ಮ ನಾಡಿಗೊಂದು ಪರಿವರ್ತನೆಯ ಕಾಲವೊದಗಿತು. ಆ ಪರಮಪುಣ್ಯಪ್ರದ ನಾಮಾನ್ವಿತನಾದ ಬಸವ ಪ್ರಭುವೂ, ಅವನ ಅನುಯಾಯಿಗಳಾದ ಶಿವಶರಣರೆಂಬ ಮಹಾ ವ್ಯಕ್ತಿಗಳೂ, ಅದ್ಭುತ ಫಲಪ್ರದಾಯಕಗಳಾದ ಮಹಾ ಶಕ್ತಿವಾಹಿನಿಗಳನ್ನು ನಾಡಿನ ಮತ್ತು ಜನಾಂಗದ ಮೇಲೆ ಹರಿಯಬಿಟ್ಟರು. ಅದೇನು ಸಾಮಾನ್ಯ ಪ್ರವಾಹವಲ್ಲ. ಪ್ರಚಂಡ ಪ್ರವಾಹ, ಆ ಬಲ್ಮೆಯ ಹೊನಲು ನಾಡಿನ ಸಂದುಗೊಂದುಗಳಲ್ಲಿಯೂ, ಜನತೆಯ ಹೃದಯ ಕುಹರಗಳಲ್ಲಿಯೂ, ಭೇದಭಾವವಿಲ್ಲದೆ ಎಲ್ಲೆಡೆಯಲ್ಲಿಯೂ ನುಗ್ಗಿ ಜಡಜೀವನವನ್ನು ಕೊಚ್ಚಿಹಾಕಿತು. ಅದರ ವಿದ್ಯುದ್ವೇಗದ ಸ್ಪರ್ಶದಿಂದ ಜೀವಶ್ರವಗಳಂತಿದ್ದವರೂ ಸಹ ಸಚೇತನರಾಗಿ ಕಾರ್ಯೋನ್ಮುಖರಾ

(ಆ ನೆಯ ಪುಟದ ೨ ನೆಯ ಕಾಲಂನಿನ ಮುಂದರಿದಿದೆ.)

ಬೆಳಗಾವಿಯಲ್ಲಿ ಶಿವ ಜಯಂತ್ಯುತ್ಸವ.

ಬೆಳಗಾವಿಯ ಶಿವ ಜಯಂತ್ಯುತ್ಸವದ ಕಾಲದಲ್ಲಿ ಶ್ರೀ ಕ್ಷಿತ್ರ ಜಗದ್ಗುರುಗಳು ಮಾಡಿದ ಭಾಷಣದ ಸಾರಾಂಶ—

ಶಿವಾಜಿಯ ಜಯಂತಿಯನ್ನು ನಾವು ಏಕೆ ಮಾಡುತ್ತೇವೆ? ಶಿವರಾಯನ ಕೃತಿಯನ್ನು ಮತ್ತು ಸ್ಮೃತಿಯನ್ನು ಯಾವಾಗಲೂ ನಮ್ಮ ಕಣ್ಣುಮುಂದಿಟ್ಟುಕೊಂಡು ದೇಶಭಕ್ತಿಯನ್ನು ಕಲಿಯಬೇಕೆಂದಲ್ಲವೆ? ಶಿವಾಜಿ ರಾಜನನ್ನು ಕೆಲವರು ಪರಮೇಶ್ವರನ ಅವತಾರವೆಂದು ತಿಳಿದು ಅವನು ಮಾಡಿದ ಕಾರ್ಯವು ಅವನಿಗೇ ಸಾಧ್ಯವೆಂದು ಹೇಳುತ್ತಾ ಏನೂ ಮಾಡದೆ ಕೂಡ್ರುತಕ್ಕುದಲ್ಲ. ಆವ ನೊಬ್ಬ ಮಹಾಪುರುಷನ ಯೋಗ್ಯತೆಯನ್ನು ತಿಳಿಯಬೇಕಾದರೆ ಅವನು ಉದಯವಾಗುವ ಪೂರ್ವದಲ್ಲಿ ಸಮಾಜವು ಯಾವ ಸ್ಥಿತಿಯಲ್ಲಿದ್ದಿತು ಮತ್ತು ಆ ಮಹಾಪುರುಷನು ತನ್ನ ಜನ ಕಾರ್ಯದಿಂದ ಸಮಾಜವನ್ನು ಎಲ್ಲಿಗೆ ತಂದು ಮುಟ್ಟಿಸಿದನೆಂಬುದನ್ನು ತಿಳಿಯಬೇಕು. ಈ ಎರಡೂ ಸಮಾಜ ಸ್ಥಿತಿಗಳ ಮಧ್ಯದ ಅಂತರವೇ ಆ ಮಹಾಪುರುಷನ ಹೆಚ್ಚಳದ ಅಳತೆಯು.

ಮಹಾಪುರುಷರಲ್ಲಿ ಯಾವಾಗಲೂ ಸಂಶೋಧಕ ದೃಷ್ಟಿಯಿರುತ್ತದೆ. ಗುಡ್ಡದ ಇಲಿಗಳೆಂದು ಕ್ಷುದ್ರವಾಗಿ ತಿಳಿಯಲ್ಪಡುತ್ತಿದ್ದ ಮಹಾರಾಷ್ಟ್ರದ ಬಡ ಒಕ್ಕಲಿಗರಲ್ಲಿ ಅಪಾರವಾದ ಶಕ್ತಿಯಿರುವುದೆಂದು ಅವನು ಕಂಡುಕೊಂಡನು. ಮಹಾರಾಷ್ಟ್ರದ ಭಾಗವತ ಧರ್ಮದ ಜನರು ಅವನಿಗಿಂತ ಮೊದಲು ಸ್ವರಾಜ್ಯ ಸಂಸ್ಥಾಪನೆಗೆ ಯೋಗ್ಯವಾದ ಭೂಮಿಕೆಯನ್ನು ಸಿದ್ಧಗೊಳಿಸಿದ್ದರೆಂದೂ ಶಿವಾಜಿಯು ನಿಮಿತ್ತ ಮಾತ್ರವೆಂದೂ ಕೆಲವರು ಹೇಳುತ್ತಾರೆ. ಈ ನಿವೃತ್ತಿಪರ ಭಾಗವತ ಧರ್ಮದ ಜನರು ಶಿವಾಜಿಯ ಸ್ವರಾಜ್ಯ ಸಂಪಾದನೆಗೆ ಸಹಾಯಕರಾದರೆಂಬುದು ಮುಂಬಯಿಯ ಜಪಾನಿ ಅಥವಾ ಯುರೋಪಿಯನ್ ಗಿರಣಿಗಳು ಈ ದೇಶದ ಸ್ವದೇಶಿ ಚಟುವಟಿಕೆಗೆ ಉತ್ತೇಜನ ಕೊಟ್ಟವೆಂಬ ಮಾತಿನಂತೆಯೇ ಆಗುತ್ತದೆ.

ಶಿವಾಜಿಯು ಮೊದಲೂ ಭಾಗವತ ಧರ್ಮವಿದ್ದಿತು ಆದರೆ ನಿಮಿತ್ತಮಾತ್ರವಾಗಿ ಇನ್ನೊಬ್ಬ ಶಿವಾಜಿಯು ಯಾಕೆ ಉಂಟಾಗಲಿಲ್ಲ? ಶುದ್ಧಿಯನ್ನು ಆರ್ಯಸಮಾಜದವರೇ ಉಂಟುಮಾಡಿದರೇ? ಇಲ್ಲ. ಇದಕ್ಕೂ ಮೊದಲು ಶಿವಾಜಿಯೂ ಈ ಕಾರ್ಯವನ್ನು ಮಾಡಿದ್ದನು.

ಎಂಟುಮೂಲೆಯ ವಜ್ರದ ಹರಳುಗಳು ಹೇಗೆ ಎತ್ತ ನೋಡಿದರೂ ಪ್ರಕಾಶಮಾನವಾಗಿಯೇ ಇರುತ್ತವೆಯೋ ಹಾಗೆಯೇ ಶಿವಾಜಿರಾಯನ ಗುಣಗಳಿವೆ. ಅವನ ಸ್ವಭಾಷಾಭಿಮಾನವು ಅವರ್ಣನೀಯವಾದದ್ದು, ಅವನೇ ಮರಾಠಿ ಭಾಷೆಯಲ್ಲಿಯ ಫಾರ್ಸಿ, ಅರಬ್ಬಿ, ಉರ್ದು ಶಬ್ದಗಳನ್ನು ಹೊಡೆದೋಡಿಸುವದಕ್ಕಾಗಿ ರಾಜಕೋಶವನ್ನುಂಟುಮಾಡಿಸಿದನು. ಜಗವನ್ನು ಗೆಲ್ಲುವವರು ಅನೇಕರುಂಟು. ಆದರೆ ಮನವನ್ನು ಗೆಲ್ಲುವವರು ಕಡಿಮೆ, ಶಿವಾಜಿರಾಜನು ಸ್ವಧರ್ಮ, ಸ್ವಭಾಷಾ ಮತ್ತು ಸ್ವಮನವನ್ನು ಸುಸಂಸ್ಕೃತವನ್ನಾಗಿ ಮಾಡಿದನು."

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೈಲ್ಲಾಸಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಾಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪಂಚಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನುಭಾವಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನುಭವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಪಾಣಾಂತಿಯರು ಸ್ನಾನಾನಂತರ ತಲೆ ಕಾಯಿಸಲು ಪೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಆರಳೇ ಪೇಟೆ,

ತುಮಕೂರು (ಮೈಸೂರು ಸ್ಟೇಟ್.)

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ವೆಸ್ಟ್‌ಮೆಂಟ್ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

ತಿಂಗಳು	ಪಾಲಿಯ ಒಟ್ಟು ಕಿಮ್ಮತ್ತು.
ಜನವರಿ ೧೯೩೪	೩೫೦೦ ರೂ.
ಫೆಬ್ರುವರಿ ,,	೧೨೦೦೦ ರೂ.
ಮಾರ್ಚ ,,	೩೦೫೦೦ ರೂ.
ಒಟ್ಟು.	೪೬೦೦೦ ರೂ.

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮದುವೆ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ; ತಿಂಗಳಿಗೆ ೧೦೦ರಿಂದ ೧೫೦ರವರೆಗೆ ಕಮಿಶನ್ ಸಿಗುವದು.

Managing Agents.

ಪ ತ್ರ ಗ ಳ ಸಾ ರಾ ಂ ಶ

ಕರ್ನಾಟಕ ಸಾಹಿತ್ಯ ಪರಿಷತ್ತು.

ಕರ್ನಾಟಕ ಸಾಹಿತ್ಯ ಪರಿಷತ್ತು ಕೈಕೊಂಡಿದ್ದ ಆಧುನಿಕ ಜಾನೋಪನ್ಯಾಸಗಳು ಮತ್ತು ಕನ್ನಡ ಗ್ರಂಥ ಪ್ರದರ್ಶನ ಎಂಬ ರಡು ಸಮಾರಂಭಗಳು ಬಹು ಜನಗಳ ಪ್ರೋತ್ಸಾಹ ಸಹಕಾರಗಳಿಂದ ಯಶಸ್ವಿಯಾಗಿ ನಡೆದುವೆಂದು ತಿಳಿಸಲು ಸಂತೋಷಿಸುತ್ತೇವೆ. ಇದಕ್ಕಾಗಿ ಎಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಮರ್ಪಿಸುತ್ತೇವೆ.

ಗ್ರಂಥಪ್ರದರ್ಶನಕ್ಕಾಗಿ ಕಳುಹಿಸಿದ ಕೆಲವು ಗ್ರಂಥಗಳನ್ನು ಗ್ರಂಥಕರ್ತರು ಮತ್ತು ಪ್ರಕಾಶಕರು ಪರಿಷತ್ತಿನ ಸರಸ್ವತಿ ಭಾಂಡಾರಕ್ಕೆ ಉಚಿತವಾಗಿ ಕೊಟ್ಟು ಉಪಕಾರ ಮಾಡಿದ್ದಾರೆ. ಭಂಡಾರಕ್ಕೆ ಸೇರಿಸಿಕೊಳ್ಳಬಹುದೆಂಬುದಾಗಿ ಈಗಲೂ ಪತ್ರಗಳು ದಿನವೂ ಪರಿಷತ್ತಿಗೆ ಬರುತ್ತಿವೆ. ಇವರುಗಳಿಗೆಲ್ಲ ಪರಿಷತ್ತು ಕೃತಜ್ಞತೆಯನ್ನು ಸೂಚಿಸುತ್ತದೆ. ಉಚಿತವಾಗಿದೆಂದೆರಗುವ ಗ್ರಂಥಗಳನ್ನೂ ಮಾರಾಟವಾಗಿರುವ ಗ್ರಂಥಗಳನ್ನೂ, ಸರಸ್ವತೀ ಭಾಂಡಾರಕ್ಕೆ ಸೇರಿಸಿಕೊಳ್ಳಬೇಕಾದ ಗ್ರಂಥಗಳನ್ನೂ ವಿಂಗಡಿಸುವ ಕೆಲಸ ಆರಂಭವಾಗಿದೆ. ಇನ್ನೂ ಕೆಲವು ದಿವಸಗಳಿಗಾಗಿ ಮಾರಾಟದಿಂದ ಬಂದ ಹಣವನ್ನೂ ಉಳಿದ ಪುಸ್ತಕಗಳನ್ನೂ ಹಿಂದಕ್ಕೆ ಕಳುಹಿಸಿಕೊಡುತ್ತೇವೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ಕನ್ನಡದ ಪ್ರತಿಯೊಂದು ಗ್ರಂಥವೂ ಇರಬೇಕಾದುದು ಅವಶ್ಯಕ. ನಾಷಾ ಸಾಹಿತ್ಯಗಳ ಬೆಳವಣಿಗೆಯನ್ನು ಶೋಧಿಸಿ ತಿಳಿಯತಕ್ಕ ವಿದ್ವಾಂಸರಿಗೆ ಅನುಕೂಲ್ಯಗಳನ್ನು ಒದಗಿಸಿಕೊಡಬೇಕೆಂಬುದಾಗಿ ಪರಿಷತ್ತು ಆಲೋಚಿಸುತ್ತಿದೆ. ಈ ಆಲೋಚನೆ ಕಾರ್ಯರೂಪಕ್ಕೆ ಬಂದು ಫಲಕಾರಿಯಾಗಬೇಕಾದರೆ ಪುಸ್ತಕ ಭಂಡಾರದಲ್ಲಿ ಎಲ್ಲ ಪುಸ್ತಕಗಳು ಇದ್ದೇ ಇರಬೇಕು. ಪರಿಷತ್ತಿನ ಆರ್ಥಿಕ ಸ್ಥಿತಿ ನಿತ್ಯಮವಾಗಿಲ್ಲವೆಂಬುದು ಮಹಾಜನಗಳಿಗೆಲ್ಲ ತಿಳಿದ ವಿಷಯ. ಇಂತಹ ಸಂದರ್ಭದಲ್ಲಿ ಪುಸ್ತಕಗಳನ್ನು ಶೀಘ್ರದಿಸಬೇಕಾದರೆ ಗ್ರಂಥಕರ್ತರ ಮತ್ತು ಪ್ರಕಾಶಕರ ಸಹಾಯ ಅತ್ಯಾವಶ್ಯಕವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪರಿಷತ್ತು ಇಂತಹ ಸಹಾಯಗಳನ್ನು ಬಹಳ ಕೃತಜ್ಞತೆಯಿಂದ ಅಂಗೀಕರಿಸಿ ಉಪಕಾರ ಮಾಡಿದವರ ಹೆಸರುಗಳನ್ನು ಪುಸ್ತಕ ಭಂಡಾರದಲ್ಲಿ ಇಡುವ ಏರ್ಪಾಟನ್ನು ಮಾಡುತ್ತದೆ. ಪುಸ್ತಕಗಳನ್ನು ಉಚಿತವಾಗಿ ಕೊಡಲಾಗದವರು ಸಾಧಾರಣವಾದ ರಿಯಾಯಿತಿಯನ್ನು ತೋರಿಸಿದರೂ ಬಹಳ ಉಪಕಾರವಾಗುತ್ತದೆ. ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಬೆಳೆಸಿಕೊಂಡು ಬರುವುದು ಎಲ್ಲ ಕನ್ನಡಿಗರ ಕರ್ತವ್ಯವೇ ಆಗಿರುವುದರಿಂದ ಹೆಚ್ಚು ಬರೆಯಲಾವಶ್ಯಕವಿಲ್ಲವೆಂದು ತಿಳಿಯುತ್ತೇನೆ.

ಎಂ. ಆರ್. ಶ್ರೀನಿವಾಸಮೂರ್ತಿ.

ಶ್ರೀಮನ್ನಿರಾಢಾರಿ ಚರಪಟ್ಟಾಭಿಷೇಕ ಮಹೋತ್ಸವ.

ಕೊಳಟನೂರು ಗ್ರಾಮದ ಶ್ರೀ ಮಡಿವಾಳೇಶ್ವರ ಮಠದ (ಗದ್ದುಗೆ ಮಠದ) ಶ್ರೀ ಸಿದ್ಧಲಿಂಗದೇವರಿಗೆ ಸಮಸ್ತ ಭಕ್ತ ಮಹೇಶ್ವರರ ಇಚ್ಛಾನುಸಾರವಾಗಿ ಶ್ರೀಮನ್ನಿರಾಢಾರಿ ಚರ ಪಟ್ಟಾಧಿಕಾರವನ್ನು ಮಾಡುವ ಕಾರ್ಯಕ್ರಮಗಳ ವಿವರವು—

(೧) ಕರ್ತೃ ಗದ್ದುಗೆಯ ರುದ್ರಾಭಿಷೇಕವು, ಪಟ್ಟಸ್ಥಲ ಬ್ರಹ್ಮೋಪದೇಶವು ಇದೇ ವೈಶಾಖ ಬ|| ೮ ತಾ. ೫-೬-೧೯೩೪ನೇ ದಿವಸ ಮಂಗಳವಾರ ಮುಂಜಾನೆ ೭ ಗಂಟೆಗೆ ನಡೆಯುವವು ಮತ್ತು ೧೦ ಗಂಟೆಗೆ ಶಿವಾನುಭವ ಶಾಸ್ತ್ರೋಪದೇಶವು ಜರಗುವುದು.

(೨) ನಿರಾಢಾರಿ ಚರಪಟ್ಟಾಭಿಷೇಕವು ಮತ್ತು ಅನ್ನ ಸಂತರ್ಪಣೆಯು ವೈಶಾಖ ಬ|| ೯ ತಾ|| ೬-೬-೩೪ನೆಯ ಬುಧವಾರ ಮುಂಜಾನೆ ೯ ಗಂಟೆಗೆ ಜರಗುವವು.

(೩) ಮತ್ತು ಇದೇ ದಿನ ರಾತ್ರಿ ೮ ಗಂಟೆಗೆ ಶೂನ್ಯ ಸಿಂಹಾಸನಾರೋಹಣವು ಮತ್ತು ಪಲ್ಲಕ್ಕಿ ಮಹೋತ್ಸವವು ಜರುಗುವವು.

(೪) ಮೇಲಿನ ಎರಡು ದಿವಸಗಳಲ್ಲಿ ಶಿವಕೀರ್ತನ, ಧರ್ಮ ಪ್ರವಚನ ಮತ್ತು ಧರ್ಮಾರ್ಥ ಆಯ್ಯಾಚಾರಗಳು ಜರುಗುವವು. ಪ್ರಯುಕ್ತ ಎಲ್ಲ ಮಹಾಶಯರು ಈ ಮಂಗಲಕಾರ್ಯಕ್ಕೆ ಆಗಮಿಸಿ ಪುಣ್ಯಭಾಗಿಗಳಾಗಬೇಕೆಂಬುದಾಗಿ ಕೋರುತ್ತೇನೆ.

ವ್ಯವಸ್ಥಾಪಕ ಮಂಡಳಿ,
ಕೊಳಟನೂರು

ವಿದ್ಯಾರ್ಥಿಗಳಿಗೆ ಸೂಚನೆ

ಬಾಗಲಕೋಟೆ ಬಸವೇಶ್ವರ ಹೈಸ್ಕೂಲಿನಲ್ಲಿ ಮುಲ್ಕೀ ಪರೀಕ್ಷೆ ಪಾಸಾದವರ ಸಲುವಾಗಿ ಒಂದೇ ವರುಷದಲ್ಲಿ ಮೊದಲಿನ ಮೂರು ಇಂಗ್ಲೀಷ ಇಯತ್ತೆಗಳನ್ನು ಕಲಿಸುವ ಸ್ಪೆಶಲ್ ಕ್ಲಾಸವು ಹೋದ ವರುಷದಿಂದಲೇ ಪ್ರಾರಂಭಿಸಲ್ಪಟ್ಟಿರುತ್ತದೆ. ಈ ವರುಷದ ಪತ್ರಿಕೆಯಲ್ಲಿ ಈ ಕ್ಲಾಸಿನ ಎಲ್ಲ ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿರುತ್ತಾರೆ. ಫೀ ತಿಂಗಳೊಂದಕ್ಕೆ ಮೂರು ರೂಪಾಯಿಗಳು ಮಾತ್ರ. ಬಡ ಮತ್ತು ಹುಷಾರ ವಿದ್ಯಾರ್ಥಿಗಳಿಗೆ ಯೋಗ್ಯ ಸೌಕರ್ಯಗಳು ದೊರೆಯುವವು. ಈ ಕ್ಲಾಸಿಗೆ ಬರಲಿಚ್ಛಿಸುವವರು ಅರ್ಜಿಗಳನ್ನು ಜೂನ ತಿಂಗಳ ಆರಂಭದೊಳಗಾಗಿ ಕಳಿಸಬೇಕು. ತಡ ಮಾಡಿ ಬಂದವರಿಗೆ ಪ್ರವೇಶ ದೊರೆಯಲಾರದು.

ಬಾಗಲಕೋಟೆ
ತಾ. ೧೪-೩-೩೪.

C. S. Bagi,
ಹೆಡ್‌ಮಾಸ್ತರ, ಬಸವೇಶ್ವರ ಹೈಸ್ಕೂಲ.



ವಿವಿಧ ವಿಷಯ.

ಗೋದಿಯು ಪ್ರತಿಸ್ಪರ್ಧಿ.

ಗೋದಿಯು ಪಿಷ್ಟಯುಕ್ತ ಧಾನ್ಯಗಳಲ್ಲಿ ಒಳ್ಳೇ ಮೇಲಾದುದೆಂದು ಹೆಸರಾಗಿದೆ. ಆದರೆ ಈ ಹುಲ್ಲಿನ ಬೇರುಗಳು ಉದ್ದವಿರುವದರಿಂದ ಭೂಮಿಯೊಳಗಿನ ಸಾರವನ್ನು ಆಳವಾಗಿ ಪ್ರವೇಶಿಸಿ ಹೀರಿಕೊಳ್ಳಲು ಸಾಧ್ಯವಾಗದು. ಈ ವಿಷಯದಲ್ಲಿ ಇದಕ್ಕೂ ಹೆಚ್ಚು ಉಪಯುಕ್ತವಾದ ಮಿಜೆಲ್ ಎಂಬ ಧಾನ್ಯವು ಆಸ್ಟ್ರೇಲಿಯಾ ಖಂಡದಲ್ಲಿ ಬೆಳೆಯುತ್ತಿದೆ. ಇದರ ಕಾಳುಗಳೂ ಗೋದಿಯಷ್ಟೇ ಪೌಷ್ಟಿಕವಿದ್ದು ಇದರ ಘಟಕಾ ದ್ರವ್ಯಗಳೂ ಗೋದಿಯೊಳಗಿನಂತೆಯೇ ಇರುತ್ತವೆ. ಇಷ್ಟೇ ಅಲ್ಲ. ಇದು ಕೆಲವು ವಿಶಿಷ್ಟ ಗುಣಗಳ ಮೂಲಕ ಬಡತನ ಸ್ಥಿತಿಗೆ ಒಳ್ಳೇ ಸಹಾಯಕಾರಿಯಾಗಿದೆ. ಇದರ ಬೇರುಗಳು ಮೂರು ನಾಲ್ಕು ಅಡಿ ಆಳವಾಗಿ ಭೂಮಿಯಲ್ಲಿ ಹೋಗುತ್ತವೆ. ಇದರಿಂದ ಅವು ತಳ ಹಸಿಯವರೆಗೆ ಮುಟ್ಟಿ ಒಂದು ವೇಳೆ ಮಳೆಬೀಳದಿದ್ದರೂ ಅಗಿಯನ್ನು ಪೋಷಿಸುತ್ತವೆ. ಮತ್ತು ಭೂಮಿಯ ಮೇಲೆ ವಿಸ್ತಾರವಾಗಿ ಪಸರಿಸಿ ಹೆಚ್ಚು ಕಾಳುಗಳನ್ನು ಕೊಡುತ್ತವೆ. ಇದರ ಕಾಳುಗಳು ಗೋದಿಯಕಿಂತಲೂ ಚೆನ್ನಾಗಿ ಇರುತ್ತವೆ.

ಅಂದಮೇಲೆ ಈ ಮಿಜೆಲ್ ಧಾನ್ಯವು ಹಿಂದುಸ್ಥಾನಕ್ಕೆ ಬಂದರೆ ಗೋದಿಗೂ ಅದಕ್ಕೂ ಸರಿಯಾಗಿ ಸ್ಪರ್ಧೆಯುಂಟಾಗಬಹುದಲ್ಲವೇ?

ಹಿಂದು ಸಂಶೋಧಕರು

ಶಿದ್ಧಪ್ಪ ಮತ್ತು ಸುಬ್ರಹ್ಮಣ್ಯಂ ಎಂಬ ಇಬ್ಬರು ಸಂಶೋಧಕರು ಒಂದು ಉಪಯುಕ್ತವಾದ ಶೋಧನೆಯನ್ನು ಮಾಡಿದ್ದಾರೆ. ಕೆಲವೊಂದು ಅಗಿಗಳಲ್ಲಿ ನೊರೆಯನ್ನು ಚುಚ್ಚಿ ಹಾಕಿದರೆ ಆ ಅಗಿಗಳು ಸಾಧಾರಣ ಕ್ರಮದಕಿಂತಲೂ ಒಳ್ಳೇ ಒತ್ತರದಿಂದ ಬೆಳೆಯುತ್ತವೆ. ಉದಾಹರಣಾರ್ಥವಾಗಿ ಸೂರ್ಯಪಾನ ಗಿಡಕ್ಕೆ ಈ ನೊರೆಯನ್ನು ಹಾಕಿದರೆ ಅದರ ಹೂವುಗಳು ಇಮ್ಮಡಿಯಾಗುವವು. ಇದೇ ಪ್ರಯೋಗವನ್ನು ಯುರೋಪದ ಫಿನ್‌ಲ್ಯಾಂಡ್ ದೇಶದ ಇಬ್ಬರು ಶೋಧಕರೂ ಮಾಡಿರುವರು. ಇವರು ಹಿಂದೀ ಶೋಧಕರಂತೆ ನೊರೆಯನ್ನು ಅಗಿಗಳಿಗೆ ಚುಚ್ಚಿ ಹಾಕದೆ ಬೇರುಗಳಿಗೆ ಉಣಿಸುವ ಪ್ರಯೋಗ ನಡೆಯಿಸಿದರು. ಅವರು ಒಟಾಣಿಗಳಿಗೆ ಇದನ್ನು ಹಾಕಲು ಅವು ತೀವ್ರವೇ ಹೂ ಬಿಟ್ಟವು. ಮತ್ತು ಉಳಿದ ಒಟಾಣಿಯ ಅಗಿಗಳಿಗಿಂತಲೂ ಒಂದುವರೆ ಪಟ್ಟು ಹೆಚ್ಚಿಗೆ ಕಾಳು ಕೊಟ್ಟವು. ಅತ್ಯುತ್ತಮವಾದ ಭೂಮಿಯಲ್ಲಿ ಬೆಳೆಯುವ ಧಾನ್ಯದಕಿಂತಲೂ ಈ ನೊರೆಯನ್ನುಂಡ ಧಾನ್ಯವು ಹೆಚ್ಚು ಬೆಳೆಯುತ್ತದೆ. ಮತ್ತು ಶೀಘ್ರವಾಗಿ ಬೆಳೆಯುತ್ತದೆ.

ಇಂಗ್ಲೀಷ ಶಬ್ದಗಳ ಅಕ್ಷರ ಜೋಡಣೆ.

ಇಂಗ್ಲೀಷ ಭಾಷೆಯು ಜಗತ್ತಿನ ವ್ಯಾವಹಾರಿಕ ಭಾಷೆಯಾಗಿದೆ. ಇದನ್ನು ಕಲಿಯುವವರು ಜಗತ್ತಿನ ಬಹು ವಿಸ್ತಾರವಾದ ಕ್ಷೇತ್ರವನ್ನು ವ್ಯಾಪಿಸಿದ್ದಾರೆ. ಇದು ಅನೇಕ ಭಾಷೆಗಳ ಶಬ್ದಗಳನ್ನೊಳಗೊಂಡು ಒಳ್ಳೇ ಪ್ರೌಢ ಭಾಷೆಯಾಗಿದ್ದರೂ ಇದರ ಶಬ್ದಗಳ ಅಕ್ಷರ ಜೋಡಣೆಯೇ (Spelling) ಒಳ್ಳೇ ಕ್ಲಿಷ್ಟವಾಗಿದೆ. ಅಮೇರಿಕೆಯಲ್ಲಿ ಈ ಅಕ್ಷರ ಜೋಡಣೆಯ ವಿಷಯವಾಗಿ ಹೋರಾಟವೇ ನಡೆದಿದೆ. Beauty ಎಂಬುದು Buty ಎಂದಿಷ್ಟೇ ಇದ್ದರೆ ತಪ್ಪೇನಾಗುವದು? ಎಂಬುದೇ ಅವರ ಶಂಕೆ. ಪ್ರೊ. ಕಾಯಿಸ್ಲಂಟ ಎಂಬವರು ಹೇಳುವದೇನಂದರೆ ಇಂಗ್ಲೆಂಡದ ಪೂರ್ವದ ರಾಜನಾದ ಗಿನೆಯ ಉಲಿಯಮನು ತನ್ನ ಸಂಗಡ ಅನೇಕ ಫ್ರೆಂಚರನ್ನು ಕರೆತಂದನು. ಅವರು ಇಂಗ್ಲೀಷ ಶಬ್ದಕ್ಕೆ ಅನೇಕ ನಿರರ್ಥಕ ಅಕ್ಷರಗಳನ್ನು ಕೂಡಿಸಿದರು. ಇದಾದ ಮೇಲೆ ಹಾಲಂಡದ ಮುದ್ರಣಕಾರರು ಬಂದು ಶಬ್ದಗಳನ್ನು ಮತ್ತೂ ಕೆಡಿಸಿದರು. Ghostದಲ್ಲಿಯ h ಅಕ್ಷರವನ್ನೂ Through ದೊಳಗಿನ ough ಇಷ್ಟು ಅಕ್ಷರಗಳನ್ನೂ ಡಚ್ಚರೇ ಕೂಡಿಸಿದರು. ಆದುದರಿಂದ ಸದ್ಯದ ಇಂಗ್ಲೀಷ ಶಬ್ದಗಳ ಅಕ್ಷರ ಜೋಡಣೆಯು ಅನೈತಿಹಾಸಿಕವೂ, ಅಶಾಸ್ತ್ರೀಯವೂ, ಅವಿದ್ಯಾಭೂತವೂ, ಅಸ್ವಾಭಾವಿಕವೂ ಅತರ್ಕ್ಯವೂ, ಅಗಮ್ಯವೂ ಆಗಿದೆಯೆಂದು ಅಮೇರಿಕನ್ನರು ಭಾವಿಸುತ್ತಾರೆ. ಅಮೇರಿಕೆಯಲ್ಲಿ ಸಹಚಾಕ್ಷರಯುಕ್ತ ಶಬ್ದಗಳೇ ಬಹು ಪ್ರಚಾರದಲ್ಲಿವೆ.

ಇದೇ ಕ್ರಮವು ಹಿಂದುಸ್ಥಾನದಲ್ಲಿಯೂ ಉಂಟಾದರೆ ಇಂಗ್ಲೀಷ ಕಲಿಯುವವರ ಒಂದು ಮಹಾ ಸಂಕಟವು ಪರಿಹಾರವಾದಂತಾಗಲಿಕ್ಕಿಲ್ಲವೇ?

ಸುಧಾರಕ ಅಮೇರಿಕೆ.

ಅಮೇರಿಕೆಯು ಒಳ್ಳೇ ಸುಧಾರಿಸಿದ ರಾಷ್ಟ್ರವೆಂದು ಖ್ಯಾತಿಯನ್ನು ಹೊಂದಿದ್ದರೂ ಅಲ್ಲಿ ಪಶುತ್ವಕ್ಕೆ ಯೋಗ್ಯವಾದ ಅನೇಕ ಕ್ರೂರ ನಡತೆಗಳು ಇನ್ನೂ ಬಳಕೆಯಲ್ಲಿವೆ. ಕಪ್ಪು ವರ್ಣದ ನಿಗ್ರೋನು ಶ್ವೇತ ವರ್ಣದ ಬಾಲಿಕೆಗೆ ಏನಾದರೊಂದು ಅವಮಾನ ಮಾಡಿದರೆ ಅವನಿಗೆ ದೇಹಾಂತ ಶಾಸನವೇ. ಕೆಲಕೆಲವು ಸಾರೆ ಇಂಥ ದುರ್ದೈವಿಗಳನ್ನು ಗಿಡಕ್ಕೆ ತೂಗಹಾಕಿ ಸುತ್ತಲೂ ನಿಂತು ಗುಂಡು ಸುರಿಸಿ ಕೊಲ್ಲುವದುಂಟು. ಮಿಸಿಸಿಪಿ ಪರಗಣೆಯಲ್ಲಿ ಒಬ್ಬ ಸಭ್ಯ ಗೃಹಸ್ಥನ ಮಗಳ ಸಂಗಡ ಮೂವರು ನಿಗ್ರೋ ಜನರು ಅಸಭ್ಯರೀತಿಯಿಂದ ವರ್ತಿಸಿದರಂತೆ. ಆ ಕಾರಣದಿಂದ ಆ ಮೂವರಿಗೂ ಮರಣದಂಡನೆಯು ವಿಧಿಸಲಾಯಿತು. ಆ ಕಾಲಕ್ಕೆ ಆ ಶ್ವೇತ ಬಾಲಿಕೆಯು ಆ ಮೂವರನ್ನೂ ಸ್ವಹಸ್ತದಿಂದಲೇ ಕೊಲ್ಲಲು ಅಪ್ಪಣೆ ಕೊಡಬೇಕೆಂದು ನ್ಯಾಯಾಧೀಶರಿಗೆ ಕೇಳಿಕೊಂಡಳು. ಆದರೆ ಅದಾವ ಪುಣ್ಯದಿಂದಲೋ ನ್ಯಾಯಾಧೀಶರು ಹಾಗೆ ಮಾಡಲು ಒಪ್ಪಲಿಲ್ಲ. ಹಿಂದುಸ್ಥಾನದ ಸಂದಿ ಗೊಂದಿಗಳಲ್ಲಿಯ ಹುಳುಕು, ಕಸುಕುಗಳನ್ನಾರಿಸುವ ಮಿಸ್ ಮೇಯೋ ದೇವಿಯು ತನ್ನ ಸುಧಾರಕ ದೇಶದ ಸ್ಥಿತಿಯನ್ನಾದರೂ ನೋಡಬಾರದೇ! ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿ ಹಿಂದುಸ್ಥಾನದಲ್ಲಿ ದಯಾಮಯ ಏಸೂ ಕ್ರಿಸ್ತನ ಶಾಂತಿತತ್ವವನ್ನು ಪುಸಾರಗೊಳಿಸಲು ಜನರನ್ನು ಕಳುಹಿಸುವ ಅಮೇರಿಕನ್ನರು ಈ ತರದ ಪದ್ಧತಿಗಳಿಗೆ ಏನನ್ನುವರು?

"ಸ್ವದೇಶಿ" ಶಬ್ದದ ಸ್ಪಷ್ಟೀಕರಣ.

ಸ್ವದೇಶೀ ಚಟುವಟಿಕೆಯನ್ನು ಪುರಸ್ಕರಿಸುವದಕ್ಕಾಗಿಯೂ ಮತ್ತು ಸ್ವದೇಶೀ ಕಾರ್ಯಾಲಯಗಳಿಗೆ ಉತ್ತೇಜನ ಕೊಡುವದಕ್ಕಾಗಿಯೂ ಅ. ಭಾ. ಸ್ವದೇಶಿ ಸಂಘವು ಮುಂಬಯಿಯಲ್ಲಿ ಸ್ಥಾಪಿತವಾಗಿದೆ. ಈ ಸಂಘದವರು ಮೊದಲು ಸ್ವದೇಶಿ ವಸ್ತುವೆಂದರೆ ಯಾವುದು? ಪರದೇಶಿ ಎಂದು ಯಾವುದಕ್ಕೆ ಅನ್ನಬೇಕು ಎಂಬುದನ್ನು ನಿರ್ಧರಿಸುವುದು ಅಗತ್ಯವಾಗಿದೆ ಅದಕ್ಕಾಗಿ ಶ್ರೀಮತಿ ಲೀಲಾವತಿ ಮುನಸಿಯವರು ಸ್ವದೇಶಿಯ ವ್ಯಾಖ್ಯೆಯನ್ನು ತಿಳಿಸಲು ಮಹಾತ್ಮಾಜಿಯವರಿಗೆ ವಿನಂತಿ ಮಾಡಿಕೊಂಡರು. ಆ ಪ್ರಕಾರವಾಗಿ ಮಹಾತ್ಮಾಜಿಯವರು: ಸ್ವದೇಶೀ ವಸ್ತುವು ಈ ನಿಯಮಗಳಿಗೆ ಅನುಕೂಲವಾದುದಿರಬೇಕೆಂದು ತಿಳಿಸಿದರು. (೧) ಆ ವಸ್ತುವು ಉಪ

ಹಿಂದು ಧರ್ಮವು ಉಳಿಯುವದೆ?

ಹಿಂದು ಧರ್ಮವು ಶ್ರೀಮತ್ತಾವೇನೋ ಸರಿ; ಅದರ ತತ್ವ ಜ್ಞಾನವು ಸರ್ವಶ್ರೀಷ್ಠವೆಂಬುದೂ ನಿಜ. ಆದರೆ ಆ ಧರ್ಮವೂ ಆ ತತ್ವಜ್ಞಾನವೂ ಬರೆ ಗ್ರಂಥಗಳಲ್ಲಿ ಮಾತ್ರ ಉಳಿದು ಬಿಟ್ಟಿದೆ. ಈಗಿನ ಹಿಂದು ಧರ್ಮವು ಅನೈಕಮತ್ಯದಿಂದ ಕಿಡಿದು ಸಡಿಲಾಗಿರುವುದರಿಂದ ಪರಧರ್ಮಿಯರ ಹೊಡೆತಕ್ಕೆ ಪುಡಿಪುಡಿಯಾಗಹತ್ತಿದೆ. ಪೌರಾಣಿಕ ಕಥೆಗಳನ್ನೇ ಮೂಲವಾಗಿಟ್ಟುಕೊಂಡು ಅನೇಕ ರೀತಿಯಿಂದ ತಮ್ಮ ತಮ್ಮೊಳಗೆ ಹಿಂದುಗಳು ಹೊಡೆದಾಡುತ್ತಿರುವುದರಿಂದ ಸದ್ಯದ ಸುಧಾರಕರಿಗೆ ಇವರ ಧರ್ಮವೊಂದು ಕಟ್ಟುಕಥೆಯಾಗಿದೆ. ಪರಧರ್ಮಿಯರ ಸೇವೆ ಸಮತೆ ಪ್ರೇಮ ತ್ಯಾಗಗಳ ರಸದಲ್ಲಿ ಮೊದಲೇ ಪುಡಿಪುಡಿಯಾದ ಜನಾಂಗವು ಕರಗಿ ಕೂಡಿ ಹೋಗುತ್ತಲಿದೆ. ಈ ಮಾತು ನಿರೀಕ್ಷಕರಿಗೇನೂ ಹೊಸದಲ್ಲ

ಉದಾಹರಣಾರ್ಥವಾಗಿ ನಮ್ಮ ದೇಶದಲ್ಲಿ ಕ್ರೈಸ್ತ ಮಿಶನರಿಗಳು ನಡೆಸಿರುವ ಆಂದೋಲನವನ್ನು ನೋಡಿದರೆ ಬೆಟ್ಟು ಕಚ್ಚಬಹುದು. ಸಮತೆ, ಸೇವೆ, ಸ್ವಾರ್ಥತ್ಯಾಗಗಳಿಂದ ಇವರು ಪ್ರಚಾರ ಮಾಡುತ್ತಲಿರುವ ಕ್ರಿಸ್ತೀ ಧರ್ಮವು ಕೆಲವು ವರುಷಗಳಲ್ಲಿಯೇ ಹಿಂದು ಧರ್ಮವನ್ನೆಲ್ಲವನ್ನೂ ಎಲ್ಲಿ ಕರಗಿಸುವದೋ ಎಂದು ಅನಿಸದೆ ಇರದು.

ರಾಂಚಿ ಪಟ್ಟಣವು ಹಿಂದೀಯರಿಗೆ ಅಪರಿಚಿತವಾದುದೇನೂ ಅಲ್ಲ. ದೇಶಪ್ರಿಯ ಸೇನಗುಪ್ತರು ಇಲ್ಲಿಯೇ ಸ್ವರ್ಗವಾಸಿಗಳಾದುದರಿಂದ ಇದಕ್ಕೊಂದು ಮಹತ್ವವುಂಟಾಗಿದೆ. ಇದಲ್ಲದೆ ಇಲ್ಲಿ ಈಗ ಅನೇಕ ರಾಷ್ಟ್ರೀಯ ಕಾರ್ಯಕಲಾಪಗಳೂ ನಡೆದಿರುತ್ತವೆ. ಈ ಪಟ್ಟಣದಲ್ಲಿ ೩॥ ಲಕ್ಷ ಕ್ರೈಸ್ತರ ವಸತಿಯುಂಟು. ಈ ಪಟ್ಟಣವಿರುವ ಛೋಟಾ ನಾಗಪುರ ಪ್ರಾಂತವು ಅತ್ಯಂತ ಗುಡ್ಡಗಾಡು. ಭೀಕರವಾದ ಅರಣ್ಯಗಳು ಎಲ್ಲ ಕಡೆಯಲ್ಲಿಯೂ. ನಿವಾಸಿಗಳು ಪಶು ಬೇಟೆಯಾಡುತ್ತ ವಾಸಿಸುವವರು. ಇಂಥಲ್ಲಿ ರೋಮನ್ ಕ್ಯಾಥೊಲಿಕ ಪಾದ್ರಿಗಳು ಪ್ರವೇಶಿಸಿ ಅರಣ್ಯವನ್ನು ಕಡಿದರು. ಸ್ವತಃ ಗುಡಿಸಲುಗಳನ್ನು ಕಟ್ಟಿದರು. ಜಳಿ ನಾಡುಗಳಲ್ಲಿ ವಾಸಿಸುವ ಬೆಲ್ಜಮದ ಪಾದ್ರಿಗಳು ಧರ್ಮ ಪ್ರಸಾರಣೆಯ ಸಲುವಾಗಿ ಪ್ರಖರವಾದ ಬಿಸಿಲಿಗೆ ಮೈಕೊಟ್ಟು ಆ ಜನರ ಸೇವೆ ಮಾಡಿದರು. ಅವರಿಗೆ ವಿಶ್ವಾಸವಾಗುವಂತೆ ಅಲ್ಲಲ್ಲಿ ಚಿಕ್ಕ ಚಿಕ್ಕ ಔಷಧಾಲಯಗಳನ್ನೂ ಪಾಠ ಶಾಲೆಗಳನ್ನೂ ತೆರೆದರು. ಬೆಲ್ಜಮದ ರಾಜವಂಶಿಕನಾದ ಒಬ್ಬ ತರುಣನು ತನ್ನ ವೈಭವವನ್ನೆಲ್ಲ ತೊರೆದು ಆ ಜನರ ಸಂಗಡ ವನವಾಸಿಯಾಗಿದ್ದುಕೊಂಡು ಧರ್ಮಪ್ರಸಾರಣೆ ಮಾಡಿದನು. ೫ ವರುಷಗಳವರೆಗೆ ಮೂಲ ನಿವಾಸಿಗಳು ಆಗಂತುಕರನ್ನು ನಂಬಲಿಲ್ಲ. ಬರಬರುತ್ತ ಪಾದ್ರಿಗಳ ಸೌಮ್ಯಾಚರಣೆಯೂ ಸವಿಮಾತುಗಳೂ ಅವರ ಮನವನ್ನು ಸೆಳೆದವು. ಅವರ ಔಷಧೋಪಚಾರದಿಂದ ಅನೇಕರು ಗುಣಪಟ್ಟ ಪಾದ್ರಿಗಳನ್ನು ಸ್ತ್ರೀತಿಸಹತ್ತಿದರು. ಆ ಮೇಲೆ ಪಾದ್ರಿಗಳ ಶಿಕ್ಷಣದಿಂದ ಕ್ರೈಸ್ತ ಧರ್ಮವನ್ನು ನಾಮುಂದೆ ನೀಮುಂದೆ ಎಂದು ಸ್ವೀಕರಿಸಹತ್ತಿದರು. ನಮ್ಯಕ್ಕೆ ರಾಂಚಿ ಜಿಲ್ಲೆಯೊಂದರಲ್ಲೇ ೩ ಲಕ್ಷ ಕ್ರೈಸ್ತರಿದ್ದಾರೆ. ಬೆಲ್ಜಮದ ಪಾದ್ರಿಗಳಂತೆಯೇ ಅಲ್ಲಿ ಜರ್ಮನ್ ಮತ್ತು ಇಂಗ್ಲೀಶ ಮಿಶನರಿಗಳೂ ಪ್ರವೇಶಿಸಿ ಬಹು ಸಂಖ್ಯಾಕರನ್ನು ಧರ್ಮಾಂತರ ಮಾಡಿರುತ್ತಾರೆ. ನಮ್ಯಕ್ಕೆ ಅಲ್ಲಿ ಯುರೋಪಿಯನ್ ಪಾದ್ರಿಗಳ ಅವಶ್ಯಕತೆಯೇ ಇಲ್ಲ. ಧರ್ಮಾಂತರ ಹೊಂದಿದ ಮೂಲ ನಿವಾಸಿಗಳೇ ಕ್ರಿಸ್ತೀ ಧರ್ಮವನ್ನು ಪ್ರಸಾರ ಮಾಡುತ್ತಲಿರುವರು.

ಧರ್ಮವು ಅಸ್ತಿತ್ವದಲ್ಲಿದ್ದ ಮಾತ್ರಕ್ಕೆ ಅದರಲ್ಲಿ ಶಕ್ತಿಯಿರುವುದೆಂದು ಹೇಳಲಿಕ್ಕಾಗದು. ಅದು ಬೆಳೆಯುತ್ತಿದ್ದರೇನೇ ಅದಕ್ಕೆ ಶಕ್ತಿಯಿದೆಯೆಂದೆನ್ನಬಹುದು. ಆವ ಕಾಲದಲ್ಲಿಯಾದರೂ ಧರ್ಮದ ಬೆಳವಣಿಗೆಗೆ ಸೇವೆ, ಸಮತ್ವಗಳೇ ನಿಜವಾದ ಕಾರಣಗಳಾಗಿವೆ. ಯುರೋಪಿಯನ್ ಪುರುಷರಂತಿರಲಿ; ಅನೇಕ ಜನ ಸ್ತ್ರೀಯರು ಆ ಛೋಟಾ ನಾಗಪುರದ ಅರಣ್ಯಗಳಲ್ಲಿ ವಾಸವಾಗಿದ್ದುಕೊಂಡು ಅಲ್ಲಿಯ ಸ್ತ್ರೀಯರಲ್ಲಿ ಶಿಕ್ಷಣಾಭಿರುಚಿಯನ್ನು ಹುಟ್ಟಿಸಿ ಧರ್ಮ ಪ್ರಸಾರಣೆ ಮಾಡುತ್ತಿರುವರು. ಈ ಪ್ರಕಾರವಾಗಿ ಕ್ರೈಸ್ತ ಪಾದ್ರಿಗಳು ಹಿಂದುಸ್ಥಾನದ ಪ್ರತಿಯೊಂದು ಪ್ರಾಂತದಲ್ಲಿಯೂ ಪ್ರಯತ್ನಿಸುತ್ತಿರುವರು. ನಮ್ಮ ಧರ್ಮ ಬಾಂಧವರ ಉದ್ಧಾರಕ್ಕಾಗಿ ನಾವೂ ಅವರಂತೆ ಹಗಲಿರುಳೂ ಪ್ರಯತ್ನಿಸದೆ ಸುಮ್ಮನೆ ಪರಧರ್ಮದವರನ್ನು ನಿಂದಿಸುತ್ತ ಕುಳಿತರೆ ಅದು ನಮ್ಮ ಹೇಡಿತನವೇ ಸರಿ. ನಮ್ಮ ಸಮಾಜವಲ್ಲಿಯೂ ಜಗದ್ಗುರುಗಳೆಂದೆನಿಸಿಕೊಳ್ಳುವವರಿಗೇನೂ ಕಡಿಮೆಯಿಲ್ಲ. ಆದರೆ ಪರಧರ್ಮದವರು ಯಾವ ಪ್ರಕಾರವಾಗಿ ಕಾರ್ಯ ಮಾಡುತ್ತಿರುವರೆಂಬುದನ್ನು ಕಂಡುಕೊಂಡು ತಾವೂ ಅದರಂತೆ ಪ್ರಯತ್ನಿಸಬೇಕೆಂಬುದು ಇವರ ಕನಸು ಮನಸಿನಲ್ಲಿಯೂ ಸಹ ಬಾರದು. ಜೆನ್ನಾಗಿ ನಾಲ್ಕೈರಡು ವೇದಾಂತದ ಮಾತನಾಡಿದರೆ ತಮ್ಮ ಕೆಲಸವಾಯಿತೆಂದು ಇವರು ತಿಳಿದಿರಬಹುದು. ಆದರೆ ಈಗಿನ ವಿಚಾರ ಕ್ರಾಂತಿಯ ಕಾಲದಲ್ಲಿ ಇವರು ಸಮಾಜ ಹಿತಕಾರ್ಯ ಮಾಡದೆ ಸುಮ್ಮನೆ ಕುಳಿತಿದ್ದಾದರೆ ಕೂಡಲೆ ಪರಧರ್ಮಿಯರು ಆಕ್ರಮಿಸಿ ಹಿಂದುಸ್ಥಾನದಲ್ಲಿ ಹಿಂದು ಧರ್ಮವೆಂಬುದು ಇದ್ದಿತೋ ಇಲ್ಲವೊ ಎಂಬುವಂತೆ ಮಾಡದೆ ಬಿಡರು. ಸ್ವಾರ್ಥದ ದುರಾಶೆಯಿಂದ ಧರ್ಮ ಗುರುಗಳು ತಮ್ಮ ಜಾತಿಯ ಶ್ರೀಷ್ಠತೆಯನ್ನೇ ಹಿಡಿದದ್ದಾದರೆ ಪರಧರ್ಮಿಯರು ಹಿಂದು ಸಂಸ್ಕೃತಿಯನ್ನು ಕೂಡಲೆ ಗೊತ್ತು ಹಚ್ಚಿ ಬಿಡುವರು. ಸಾವಿರಾರು ವರುಷಗಳಿಂದ ನಡೆದುಬಂದ ತತ್ವಜ್ಞಾನವೂ ಮತ್ತು ಅತುಲ ಕೀರ್ತಿಯುತರಾದ ಧರ್ಮವೀರರೂ ಮನಕ್ಕೆ ಮರೆಯಾಗಬಹುದು. ಯಾಕಂದರೆ ಅವರ ಅನುಯಾಯಿಗಳೇ ಪರಧರ್ಮಿಗಳಾದರೆ ಅವರನ್ನು ನೆನಿಸುವವರಾರು? ಅಂಥ ಹೀನಾವಸ್ಥೆಯು ಒಂದು ವೇಳೆ ಒದಗಿದರೆ ಅದರ ದೋಷವು ಪರಧರ್ಮಿಯರ ಕಡೆಗಿರದೆ ಸ್ವಾರ್ಥ ಸಾಧಕ ಧರ್ಮಾನುಯಾಯಿಗಳ ಕಡೆಗೇ ಇರುವದು.

ಯುಕ್ತವಿರಬೇಕು (೨) ಸಂಪೂರ್ಣವಾಗಿ ಈ ದೇಶದಲ್ಲಿಯೇ ಸಿದ್ಧವಾದದ್ದಿರಬೇಕು. (೩) ಆ ವಸ್ತುವನ್ನು ಸಿದ್ಧಪಡಿಸುವ ಕಾರ್ಯಾಲಯವು ಸಣ್ಣದಿರಬೇಕು. (೪) ಆ ಕಾರ್ಯಾಲಯವನ್ನು ಜಾಗ್ರತವಾಗಿರಿಸಲು ಜನತೆಯ ಮನಸನ್ನು ಪೊರಳಿಸುವ ಅವಶ್ಯಕತೆಯಿರಬೇಕು. (೫) ಆ ಕಾರ್ಯಾಲಯದ ಒಡೆಯನು ತನ್ನ ಒಡವೆಯನ್ನು ಸ್ವದೇಶೀ ಸಂಘದ ಅಡಳಿತೆಗಾರರು ಹೇಳಿದ ಬೆಲೆಗೆ ಮಾರಲು ಸಿದ್ಧನಿರಬೇಕು. (೬) ಮತ್ತು ಕಾರ್ಯಾಲಯದ ಒಡೆಯನು ತನ್ನ ಕೈಕೆಳಗಿನ ಕಾರ್ಯಕರ್ತರಿಗೆ ಎಲ್ಲಕ್ಕಿಂತ ಕಡಿಮೆಯೆಂದರೆ ಎಷ್ಟು ವೇತನ ಕೊಡಬೇಕೆಂಬುದನ್ನೂ ಮತ್ತು ಅವರಿಗೆ ಯಾವ ಯಾವ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬುದನ್ನೂ ಸ್ವದೇಶೀ ಸಂಘದ ಅಡಳಿತೆಗಾರರು ಹೇಳಿದಂತೆ ಕೇಳಲು ಸಿದ್ಧನಿರಬೇಕು.

ಪ್ಲೇಗ ಸಂಜೀವಿನಿಯ ಡಂಗುರ!

ಪ್ಲೇಗಿನ ಭಯವೇ ಇಲ್ಲ! ಹೊಸ ಶೋಧ!! ಮರಣಭಯವೇ ಇಲ್ಲ!!!

ಪ್ಲೇಗ ಬೇನೆಯ ಪೂರ್ವ ಲಕ್ಷಣಗಳು.

ದೇಹದ ಯಾವದಾದರೊಂದು ಭಾಗದಲ್ಲಿ (ಕೊರಳು, ಬಗಲು, ಗೆಜ್ಜೆಗಳಲ್ಲಿ) ಚಟ್ ಎಂದು ಗಡ್ಡಿಯು (ಗಂಟು) ಏಳಲಿಕ್ಕೆ ಪ್ರಾರಂಭವಾದರೆ ಅಥವಾ ತಲೆಯು ನೋಯುತ್ತಲೇ, ಕಣ್ಣುಗಳು ಕೆಂಪಾಗಲಿಕ್ಕೆ ಹತ್ತಿದರೆ ಇದಕ್ಕೆ ಪ್ಲೇಗ ರೋಗದ ಪ್ರಾರಂಭ ಲಕ್ಷಣಗಳೆಂದು ತಿಳಿದು ಕೂಡಲೇ ಪ್ಲೇಗ ಸಂಜೀವನಿಯ ಉಪಯೋಗ ಮಾಡಬೇಕು.

ಸಂಜೀವಿನಿಯನ್ನು ಸೇವಿಸುವ ಕಾಲ.

ಪ್ಲೇಗ ತಗಲಿದ ೬ ತಾಸುಗಳ ಮೇಲೆ ಸಂಜೀವಿನಿಯನ್ನು ಕೊಟ್ಟರೆ ಗುಣವಾಗುವುದಿಲ್ಲ. ಗ್ರಾಮದಲ್ಲಿ ಪ್ಲೇಗವು ಪ್ರಾರಂಭವಾಗುವುದಕ್ಕಿಂತಲೂ ಮೊದಲೇ (ಇಲಿಗಳು ಬೀಳಲಿಕ್ಕೆ ಹತ್ತಿದ ಕೂಡಲೇ) ಸಂಜೀವಿನಿಯ ಬಾಟ್ಲಿಗಳನ್ನೂ ಮಲಾಮ ಡಬ್ಬಿಗಳನ್ನೂ ಮನೆಯಲ್ಲಿಟ್ಟುಕೊಂಡಿರಬೇಕು. ಪ್ಲೇಗ ರೋಗದ ಸದರೀ ಪೂರ್ವ ಲಕ್ಷಣಗಳು ಕಂಡ ಕೆಲವು ಮಿನಿಟುಗಳಲ್ಲಿಯೇ ಸಂಜೀವಿನಿಯನ್ನು ಉಪಯೋಗಿಸಬೇಕು. ಆದರೆ ಮೊದಲು ಅಲಕ್ಷ ಮಾಡಿ ಯಾರಿಗೂ ಹೇಳದೆ ೪-೬ ತಾಸುಗಳನ್ನು ಹಾಗೂ ಹೀಗೂ ಕಳೆದ ಮೇಲೆ ರೋಗಾಧಿಕ್ಯದಿಂದ ಹಾಸಿಗೆಯನ್ನು ಹಿಡಿದು ಆ ಮೇಲೆ ಸಂಜೀವಿನಿಯನ್ನು ಉಪಯೋಗಿಸಿದರೆ ನಿಜವಾಗಿಯೂ ಗುಣವಾಗುವದಿಲ್ಲವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಯಾಕಂದರೆ ಹಾವು ಕಚ್ಚಿದ ಕೂಡಲೇ ವಿಷವು ಹ್ಯಾಗೆ ಶೀಘ್ರವಾಗಿ ದೇಹದಲ್ಲಿ ವ್ಯಾಪಿಸಿ ಅವನನ್ನು ಕೊಲ್ಲುವದೊ? ಹಾಗೆಯೇ ಪ್ಲೇಗ ತಗಲಿದ ಕೂಡಲೇ ಮನುಷ್ಯನ ದೇಹದಲ್ಲಿ ಪ್ಲೇಗಿನ ವಿಷಕ್ರಿಮಿಗಳು ಭಯಂಕರ ಸ್ವರೂಪದಿಂದ ಬೆಳೆದು ಪ್ರಾಣಘಾತಕವಾಗುವುದು. ಆದ್ದರಿಂದ ಹಾವು ಕಚ್ಚಿದ ಮನುಷ್ಯನನ್ನು ಉಳಿಸಿಕೊಳ್ಳಲು ಎಷ್ಟು ಆತುರತೆಯಿಂದ ಓಡಾಡಿ ಪ್ರಯತ್ನ ಮಾಡುವರೊ, ಹಾಗೆಯೇ ಪ್ಲೇಗ ತಗಲಿದವರಿಗಾದರೂ ಅದಕ್ಕೂ ಹೆಚ್ಚಿನ ಆತುರತೆಯಿಂದ ಸಂಜೀವಿನಿಯನ್ನು ಹೊಟ್ಟೆಯಲ್ಲಿ ಹಾಕುವ ಪ್ರಯತ್ನ ಮಾಡಬೇಕು. ಈ ದಿವ್ಯೌಷಧದ ಉಪಯೋಗ ಮಾಡಿ ನೋಡಬೇಕೆನ್ನುವವರು ಮೊದಲು ಸದರಿ ಮಹತ್ವದ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ಉಪಯೋಗಿಸುತ್ತ ನಡೆದರೆ ಆ ಊರಲ್ಲಿ ಯಾರೂ ಪ್ಲೇಗ ರೋಗದಿಂದ ಸಾಯುವುದೇ ಇಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.

ಪ್ರಚಾರ ಕಾರ್ಯ.

ಲಕ್ಷದಲ್ಲಿಡುವ ಸದರಿ ಸಂಗತಿಗಳು ಸರ್ವ ಜನರಿಗೆ ತಿಳಿಯಬೇಕಾಗಿದ್ದುದು ಅವಶ್ಯವಿದ್ದಕಾರಣ ಗ್ರಾಮ ಹಿತ ಚಿಂತಕ ತರುಣರು ಮನೆ ಮನೆಗೆ ಹೋಗಿ ಈ ವಿಷಯಗಳನ್ನು ಚೆನ್ನಾಗಿ ತಿಳಿಸಿ ಹೇಳಿ, ಅವರ ನೆನಪಿನಲ್ಲಿ ಉಳಿಯುವಂತೆ ಮಾಡಬೇಕು. ಗ್ರಾಮಾಧಿಕಾರಿಗಳು ಡಂಗುರಜೋಡಿಸಿ ಜನಜಾಗೃತಿಯನ್ನುಂಟುಮಾಡಬೇಕಲ್ಲದೆ ಸಕಾಲಕ್ಕೆ ಸಂಜೀವಿನಿಯು ಎಲ್ಲ ಕಡಿಗೂ ದೊರಿಯುವಂತೆ ವ್ಯವಸ್ಥೆಯನ್ನಿಡಬೇಕು.

ಪ್ಲೇಗ ಸಂಜೀವಿನಿಯು ಇತರ ರೋಗಗಳಿಗೂ ಬರುವದು.

ಅಕಸ್ಮಾತ್ತಾಗಿ ಸಣ್ಣವರಿಗೂ ದೊಡ್ಡವರಿಗೂ ಆಗುವ ಹೊಟ್ಟೆಬೇನೆಗೂ ಧಡೆದ ಬೇನೆಗೂ ಪಕ್ಕೆ ಶೂಲೆಗೂ ಶೀತಜ್ವರಕ್ಕೂ ವಾತ ಮತ್ತು ಶೀತದಿಂದಾದ ರೋಗಗಳಿಗೂ ಬಹು ಉಪಯೋಗವಾಗುವದು. ಪ್ಲೇಗ ರೋಗಿಗಳಿಗೆ ಕೊಡುವಂತೆಯೇ ಇವರಿಗೂ ಕೊಡಬೇಕು. ಅನುವಾನ ಪತ್ರಿಕೆಯು ಔಷಧದ ಸಂಗಡಿರುತ್ತದೆ.

ಇಂಥ ಅಮೂಲ್ಯವಾದ ಔಷಧದ ಕಿಮ್ಮತ್ ಒಬ್ಬ ಮನುಷ್ಯನಿಗೆ ಸಾಲುವಷ್ಟಕ್ಕೆ ರೂ ೧-೪-೦ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಮೀಶನ್ ಏಜಂಟರು ಬೇಕಾಗಿದ್ದಾರೆ. ಅಪೇಕ್ಷಿಸುವವರು ವಿಶೇಷ ಸಂಗತಿಗಳ ಬಗ್ಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ,

ಪ್ಲೇಗ ಸಂಜೀವಿನಿ ಆಫೀಸ,

ಮಹಬೂಬ ಬಜಾರ ಗುಲಬರ್ಗಾ ಶರೀಫ.

ಗೌರೀಶಂಕರ ನಿವಾಸ.
ಮುಂಬಯಿ

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಹೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬು (ಚರಬಿ) ಅಥವಾ ಅಕ್ಷೇಸಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಚ್ಯೂ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಪ್ರಾಪ್ತಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮು ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳಿವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮು ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೊಂ ಆಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಜಿಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ

ಎಲ್ಲ ನಮೂನೆಗಳು ಬರೀ ೧ ರೂಪಾಯಿ!

--೧೦೦೦--

ನೀಲೀ ಮಶಿಜೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. **ಹಂಚಲಿ.**
ತಾ. ನಿಪ್ಪಾಣಿ.

ಈ ಪತ್ರಿಕೆಯು ಅಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಅಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The

Sharana Sandesh.

...ನಿಷ್ಠೆಯಿಂದ ಬಾಳ್ವೆಯನ್ನಮಾಡಿ ಮೋಕ್ಷವಿಯಾಗಿ| ಶರಣನಾಥಾರಿಗೂ ಅಂಕುವವನ
ಕೂಡಲಸಂಗಮದೇವರ ರಾಜಧಾನಿಯಲ್ಲಿ ಸ್ಥಾನಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಬಿ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೧೧ ನೆಯ ಜೂನ ೧೯೩೪. | ಸಂಚಿಕೆ ೪೧

ಜನಸೇವೆಯೇ ದೇವರಸೇವೆ.

ಕಾಂಗ್ರೆಸ ಕಮಿಟಿಗಳು ಉದಯವಾದವು.

ಕಾಂಗ್ರೆಸ್ ಕಮಿಟಿಗಳು ಶಾಸನವಿರೋಧಕ ಸಂಸ್ಥೆಗಳೆಂದು ಸರಕಾರದವರು ಈ ಮುಂಚೆ ಗೊತ್ತುಪಡಿಸಿದ್ದರಿಂದ ಅವು ಅಡಗಿದ್ದವಷ್ಟೆ. ಪಾಟ್ಣಾದಲ್ಲಿ ಕೂಡಿದ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಶಾಸನಭಂಗದ ಚಟುವಟಿಕೆಯನ್ನು ತಡೆದದ್ದರಿಂದ ಹಿಂದುಸ್ಥಾನ ಸರಕಾರದವರು ಕಳೆದ ೩ ನೆಯ ತಾರೀಖಿನ ದಿನ ಒಂದು ಪ್ರಕಟನೆಯ ಮೂಲಕ ಈ ಪ್ರಕಾರ ತಿಳಿಸಿದ್ದಾರೆ.

"ಕಾಂಗ್ರೆಸ್ ಕಮಿಟಿಗಳು ಶಾಸನ ವಿರೋಧಕ ಸಂಸ್ಥೆಗಳೆಂದು ಈ ಮುಂಚೆ ಗೊತ್ತುಮಾಡಿದುದನ್ನು ತಿರುಗಿ ತೆಗೆದುಕೊಂಡದ್ದಾಗಿದೆ. ಆದರೆ ಬೇರೆ ಆರ್ಡಿನೆನ್ಸ್‌ಗಳನ್ನು ಮಾತ್ರ ಹಾಗೇ ಇಟ್ಟಿದೆ. ರಾಜಕೀಯ ಕೈದಿಗಳನ್ನು ಬಿಡುವ ವಿಷಯವಾಗಿ ಈ ಮುಂಚೆಯೇ ಪ್ರಾಂತಿಕ ಸರಕಾರದವರು ಅನುಸರಿಸಿದ ಪದ್ಧತಿಯನ್ನೇ ಮುಂದರಿಸಲಾಗುವುದು."

ದೇವರೇ ಕೇಳಬೇಡ.

SANGAM CLOTH STORES
Prop: M. S. Hundekar & Sons,
P.O: TERDAL - 587 315

ಕೇಳಲಾರದು.

ಕಳಕೊಳ್ಳುವ ಮುದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಗ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಸಿ. ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲನೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ನೂರುವರು ಬಾಳ ಆಗಿ ಅಗ್ಗ ಮಾರಾಕ ಹೆತ್ತ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾಪಸ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹಿಂಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹೆತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾಂ ನೋಡಿವ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಟ್ಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜೂನ್ ತಾರೀಖು ೧೧ ನೆಯ ಸೋಮವಾರ | ಸಂಚಿಕೆ ೪೧.

ಸರಕಾರದವರ
ಅಸಮಾಧಾನಕಾರಕ ಧೋರಣ.
ಮುಂದಾಳುಗಳ ಅಭಿಪ್ರಾಯ.

ಸರ ಚಿಮಣಲಾಲ ಶೆಟಲವಾಡ—ಈ ಪತ್ರಕವು ಚನ್ನಾ ಇದ್ದರೂ ಅಷ್ಟು ವ್ಯಾಪಕವಾಗಿಲ್ಲ. ಅನೈತ್ಯಾಚಾರಿ ರಾಜಕೀಯ ಖೈದಿಗಳಿಗೆ ಮುಕ್ತತೆಯನ್ನು ಪ್ರಾಂತಿಕ ಸರಕಾರಗಳ ಅವಕಾಶದ ಕಡೆಗೆ ಒಪ್ಪಿಸದೆ ಸ್ವತಃ ಹಿಂದುಸ್ಥಾನ ಸರಕಾರದವರೇ ಏಕೆ ಮಾಡಲಿಲ್ಲೆಂಬುದು ತಿಳಿಯದಾಗಿದೆ. ಶ್ರೀ. ವಲ್ಲಭಭಾಯಿ ಪಟೇಲ ಅಂತಹ ಕಾರಾಗೃಹಿಗಳನ್ನು ಏಕೆ ಮುಕ್ತಮಾಡಲಿಲ್ಲವೆಂಬುದು ಖೇದ ಜನಕವು. ಸರಕಾರದವರು ಈ ಪ್ರಕಾರ ಅಪೂರ್ಣ ಧೋರಣವನ್ನು ಸ್ವೀಕರಿಸಿದುದು ಇಷ್ಟವಲ್ಲ.

ಶ್ರೀ ಕನ್ಹಯ್ಯಲಾಲ ಮುನಶಿ— ರಾಷ್ಟ್ರೀಯ ಸಭೆಯ ವಿಷಯಕ ಸರಕಾರದವರ ಧೋರಣವು ಸರ್ವಸಾಧಾರಣ ಸಮಾಧಾನ ಕಾರಕವಿದ್ದರೂ ಎಷ್ಟೋ ರಾಷ್ಟ್ರೀಯ ಮುಂದಾಳುಗಳಿಗೆ ನಿರಾಶೆ ಮತ್ತು ಅಸಮಾಧಾನವೆನಿಸಿದೆ. ನೂತನ ಧೋರಣೆಯನ್ನು ಪ್ರಾರಂಭಿಸುವ ಸುವರ್ಣ ಸಂಧಿಯನ್ನು ಸರಕಾರದವರು ಕಳೆದುಕೊಂಡರೆಂದು ನನಗೆ ತೋರುತ್ತದೆ. ಅ. ಭಾ. ರಾಷ್ಟ್ರೀಯ ಸಮಿತಿಯ ನಿರ್ಣಯದ ವಿಷಯಕ್ಕೆ ಸರಕಾರದವರು ವ್ಯಕ್ತಪಡಿಸಿದ ಪ್ರತಿಕೂಲ ಧೋರಣದಿಂದ ಮುತ್ಸದ್ದಿತನದ ಅಭಾವವು ಕಂಡುಬರುತ್ತದೆ.

ಶ್ರೀ. ಕೆ. ಎಫ್. ನರೀಮನ್—ಈ ಪತ್ರವು ವಿಲಂಬವಾಗಿ ಬಂದರೂ ಕೆಲವಂಶದಲ್ಲಿ ಆಪೂರ್ಣವೂ ಅವ್ಯಕ್ತವೂ ಆಗಿದೆ. ಹೆಚ್ಚಿನ ಬಿಡುಗಡೆಗಳನ್ನು ಹಾಗೆಯೇ ಸಾಗಿಸುತ್ತಿರುವುದರಿಂದ ಮೂಲಧ್ಯೇಯವು ಸಾಧ್ಯವಾಗದು. ಶಾಸನಭಂಗದಿಂದ ಶಿಕ್ಷಿತರಾದ ಸೆರೆಮನೆಯವರನ್ನು ಇನ್ನು ಮುಂದೆ ಕಾರಾಗೃಹದಲ್ಲಿಯೇ ಇಡುವದಕ್ಕೆ ಯಾವ ಆಧಾರವಿಲ್ಲ. ಸರದಾರ ವಲ್ಲಭಭಾಯಿ ಪಟೇಲ, ಖಾನ್ ಅಬ್ದುಲ್ ಗಫಾರ ಖಾನ, ಪಂ. ಜವಾಹರಲಾಲ ನೆಹರು ಇವರನ್ನು ಬಿಡುಗಡೆ ಅನಿರ್ಬಂಧವಾಗಿ ಮುಕ್ತಮಾಡುವವರೆಗೆ ಪೂರ್ಣದ ತೃಪ್ತಿಯು ಪ್ರಾಪ್ತವಾಗುವದು ಶಕ್ಯವಿಲ್ಲ.

ಡಾ. ಬಿ ಸಿ. ರಾಯ—ರಾಷ್ಟ್ರೀಯ ಸಭೆಯ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿಗಳಾದ ಡಾ. ಬಿ. ಸಿ. ರಾಯ ಇವರ "ರಾಷ್ಟ್ರೀಯ ಸಭೆ ಮತ್ತು ಅದರ ಸಮಿತಿಗಳು ಪುನಃ ಪ್ರಾರಂಭವಾಗುವುದಕ್ಕೆ ಮತ್ತು ಪಾರ್ಲಿಮೆಂಟರಿ ಬೋರ್ಡಿನ ಕಾರ್ಯಕ್ಕೆ ಸರಕಾರದವರ ಪತ್ರಿಕೆಯಿಂದ ಬಹಳೇ ಸಹಾಯವಾಗುವದು, ಮತ್ತು ನಾಳಿನೇ ತಾರೀಖಿನ ನಮ್ಮ ಸಭೆಯಾಗುವ ಪೂರ್ವದಲ್ಲಿಯೇ ಇದು ಪ್ರಕಟವಾದುದು ಸಮಾಧಾನಕಾರಕವಾದುದು. ಸರಕಾರದವರು ಈ ಮೊದಲೇ ಇದಕ್ಕೂ ಉದಾರವಾದ ಧೋರಣವನ್ನು ಸ್ವೀಕರಿಸಬೇಕಾಗಿದ್ದಿತು. ಕೆಂಪಂಗಿಯವರ ಮೇಲಿನ ನಿರ್ಬಂಧವು ದೂರವಾಗದಿದ್ದುದು ಖೇದದ ಸಂಗತಿಯು. ಅತ್ಯಾಚಾರದ ವಿಷಯದಲ್ಲಿ ಅವರ ಸಂಬಂಧವಿದ್ದುದಕ್ಕೆ ಸಾಕ್ಷಿಯೇನೂ ಇಲ್ಲ ಎಂದರು."

ರಾಮದುರ್ಗದಲ್ಲಿ ಜಾಹೀರ ವ್ಯಾಖ್ಯಾನ.

ಬೆಂಗಳೂರು ಶ್ರೀ ಸರ್ವಭೂಷಣ ಮಠಾಧ್ಯಕ್ಷರಾದ ಶ್ರೀ ಮಹಾದೇವ ಸ್ವಾಮಿಗಳು ನಮ್ಮಲ್ಲಿಗೆ ದಯಮಾಡಿಸಿದಂದಿನಿಂದ ದಿನಾಲು ಸಾಯಂಕಾಲ ಬಸವಾದಿ ಪ್ರಮಥರ ವಚನಗಳ ವಿಷಯದಲ್ಲಿ ಪ್ರವಚನ ನಡೆಸಿರುವದಲ್ಲದೆ ತಾ. ೬-೬-೩೪ನೆಯ ಬುಧವಾರ ಸಾಯಂಕಾಲ ಹೊಸಮಠದಲ್ಲಿ "ಮಾನವ ಜೀವನ ರಹಸ್ಯವೆಂಬ" ವಿಷಯದಲ್ಲಿ ಎಲ್ಲರಿಗೂ ಸರಸವಾಗಿ ಬೋಧವಾಗುವಂತೆ ಶಿವಶರಣರ ವಚನ ಪ್ರಮಾಣಗಳಿಂದ ೨ ಘಂಟೆಯವರೆಗೂ ಉಪನ್ಯಾಸ ಮಾಡಿದರು. ಶ್ರೀಗಳವರ ಉಪನ್ಯಾಸವು ಪ್ರತಿಯೊಬ್ಬ ಸ್ತ್ರೀ ಪುರುಷರಲ್ಲಿ ಹೊಸ ಜೀವಕಳೆಯನ್ನು ಹುಟ್ಟಿಸುವಂಥಾದ್ದಿದ್ದಿತು. ಇಂಥ ಉದಾರ ಭಾಷಣದಿಂದ ನಮ್ಮ ಜನಾಂಗದಲ್ಲಿ ಬಹು ದಿನಗಳಿಂದ ನೆಲೆಗೊಂಡಿರುವ ದ್ವೇಷ ಭಾವವು ಸಮೂಲ ನಾಶವಾಗಿ ಪರಸ್ಪರರಲ್ಲಿ ಪ್ರೇಮವು ನೆಲೆಗೊಳ್ಳುವದರಲ್ಲಿ ಸಂದೇಹವಿಲ್ಲ.

ರಾಮದುರ್ಗ. ತಾ. ೭-೬-೩೪. } ವಿರಭದ್ರಪ್ಪ ಬಸಪ್ಪ ಉಮೇಶಾರ.

೬೩ ಪುರಾತನರ ಪೂಜಾ ಸಮಾರಂಭ ಇಂಗಳೇಶ್ವರ.

ವಿಜಾಪುರ ಜಿಲ್ಲಾ ಬಾಗೇವಾಡಿ ತಾಲೂಕು ಇಂಗಳೇಶ್ವರದಲ್ಲಿ ಅಲ್ಲಿಯ ವಿರಕ್ತ ಮಠದ ಶ್ರೀಮನ್ನಿರಂಜನ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಇಷ್ಟದಂತೆ ಕಳೆದ ಶನಿವಾರ (ತಾ. ೨-೬-೪೪) ೬೩ ಪುರಾತನರ ಪೂಜೆಯು ಜರುಗಿತು. ಸುತ್ತಲಿನ ಸ್ಥಳಗಳಿಂದ ೪-೫೦ ಸಾವಿರ ಜನರು ಈ ಸಮಾರಂಭಕ್ಕೆ ಬಂದಿದ್ದರು.

ಪೂಜಾ ಸಮಾರಂಭ ಜರುಗಿದ ನಂತರ ಆದಿನ ಸಾಯಂಕಾಲ ವೀರಶೈವ ಧಾರ್ಮಿಕ ಸಭೆಯು ಕೂಡಿದ್ದಿತು. ಮೊದಲು ಶ್ರೀಮನ್ನಿರಂಜನ ಶ್ರೀ ಮಹಾದೇವ ಸ್ವಾಮಿಗಳು ಬೆಂಗಳೂರು ಶ್ರೀ ಸರ್ವಭೂಷಣ ಶಿವಯೋಗಿ ಮಠ ಇವರು ಆಧ್ಯಾತ್ಮಿಕ ಜೀವನ ಎಂಬ ವಿಷಯದ ಮೇಲೆ ವಿಚಾರಾತ್ಮಕವಾದ ಭಾಷಣವನ್ನು ಬಹು ಸ್ವಾರಸ್ಯವಾಗಿ ಮಾಡಿದರು. ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—

"ಮನುಷ್ಯನಿಗೆ ದೇಹರಕ್ಷಣೆಯ ಆಹಾರವೊಂದೇ ಸಾಲದು. ಇದೊಂದನ್ನೇ ಸೇವಿಸಿದರೆ ಆತನು ಮನುಷ್ಯತ್ವವನ್ನು ಹೊಂದುವುದಿಲ್ಲ. ಪಶುಗಳಿಗಿಂತ ಕೀಳಾಗಿ ಜೀವಿಸಬೇಕಾಗುತ್ತದೆ. ದೇಹರಕ್ಷಣೆಯಂತೆಯೇ ಮನಬುದ್ಧಿಗಳನ್ನೂ ಪುಷ್ಟಗೊಳಿಸಿ ಆತ್ಮತೇಜವುಳ್ಳವರಾಗಬೇಕು. ಸರ್ವರಲ್ಲಿ ಸಮಭಾವನೆಯುಳ್ಳವರಾಗಬೇಕು. ಮೂಢತ್ವದಿಂದ ಅನ್ಯರ ಕಾಲ ಕೆಳಗೆ ಉರುಳಾಡಿ ಹೀನ ದೀನ ಸ್ಥಿತಿಗಳನ್ನು ಹೊಂದದೆ ಆತ್ಮಬಲಶಾಲಿಗಳಾಗಿ ಇಹಪರ ಸುಖಶಾಂತಿಗಳನ್ನು ಹೊಂದಬೇಕು."

ಅನಂತರ ಶ್ರೀ ಹರ್ಡೇಕರ ಮಂಜಪ್ಪನವರು ೬೩ ಪುರಾತನರ ಪೂಜೆಯ ಉದ್ದೇಶವನ್ನು ಕುರಿತು ಬಹು ಸ್ಫೂರ್ತಿದಾಯಕ ಭಾಷಣ ಮಾಡಿದರು. ಅವರು ಹೀಗೆ ಹೇಳಿದರು—

"ಆಧ್ಯಾತ್ಮಿಕ ಜೀವನಕ್ಕೆ ಈ ೬೩ ಪುರಾತನರ ಪೂಜೆಯೂ ಒಂದು ಸಾಧನವಾಗಿದೆ. ಆದರೆ ಅದರ ಉದ್ದೇಶವನ್ನು ಸರಿಯಾಗಿ ತಿಳಿದುಕೊಂಡು ಹಾಗೆ ಆಚರಿಸಬೇಕು. ಹಾಗೆ ನಡೆಯುವುದಾದರೆ ಈ ಪೂಜೆಯು ಸಾರ್ಥಕವಾದುದು. ಇಲ್ಲದಿದ್ದರೆ ವೃಥಾ ಧನ ಶ್ರಮ ವ್ಯಯವೇ ಸರಿ. ಈ ೬೩ ಪುರಾತನರು ಶಿವಭಕ್ತಿ ಸದ್ಗುಣ ಸದಾಚಾರಗಳಿಂದಲೇ ಇಷ್ಟು ಪೂಜ್ಯರಾಗಿದ್ದಾರೆಯೇ ವಿನಾ ಹೆಚ್ಚಿನ ಕುಲಜಾತಿಗಳಲ್ಲಿ ಹುಟ್ಟಿದ್ದರೆಂದು ಪೂಜ್ಯರಲ್ಲ. ಇವರಲ್ಲಿ ಜನ್ಮದಿಂದ ಕಡೆಯ ಕುಲದವರು ಕೂಡಾ ಇದ್ದಾರೆ. ಸ್ತ್ರೀಯರಿದ್ದಾರೆ. ಈ ದಿನ ಆಯಾಯ ಮಂಟಪಗಳಲ್ಲಿ ಕುಳಿತ ವಿರಕ್ತ ಸ್ವಾಮಿಗಳಾಗಲಿ ಅಥವಾ ಪಟ್ಟದ ದೇವರಾಗಲಿ ಆಯಾಯ ಪುರಾತನರ ಹೆಸರಿನಿಂದಲೇ ಪೂಜಿಸಲ್ಪಟ್ಟಿದ್ದಾರೆ. ಎಂದಮೇಲೆ ಜನ್ಮದಿಂದಲೇ ಮೇಲುಕೀಳುಗಳನ್ನು ಹೇಳುವವರಿಗೆ ಈ ಮಂಟಪಗಳಲ್ಲಿ ಕುಳಿತು ಪೂಜೆಗೊಳ್ಳುವ ಅಧಿಕಾರವೆಲ್ಲಿದೆ?

ಜನ್ಮವಿಶಿಷ್ಟವಾದ ವರ್ಣದ ಮೇಲುಕೀಳುಗಳ ಸಂಕೋಲೆಯನ್ನು ಬಸವಾದಿ ಪ್ರಮಥರು ಕಡಿದು ಹಾಕಿದ್ದಾರಷ್ಟೆ. ನಮ್ಮಲ್ಲಿರುವ ಘಾತಕವಾದ ಕುಲಮದದ ದುರ್ಭಾವನೆಯನ್ನು ತೆಗೆದುಹಾಕಿ ಶಿವಭಕ್ತಿ ಸದ್ಗುಣ ಸದಾಚಾರಗಳುಳ್ಳವರಲ್ಲಿ ಸಮಭಾವನೆಯನ್ನುಂಟುಮಾಡಲು ಈ ಪುರಾತನರ ಪೂಜೆಯು ಒಂದು ವಸ್ತುಪಾಠದಂತಿದೆ. ಅವರಂತೆ ನಾವೂ ಆಚರಿಸಬೇಕೆಂದೇ ಪೂಜ್ಯರು ಆಗಾಗ್ಗೆ ಈ ಪೂಜೆಯ ಮೂಲಕ ಆ ದಿವ್ಯ ಪುರುಷರ ಚಾರಿತ್ರ್ಯವನ್ನು ನಮ್ಮ ಮುಂದೆ ಪ್ರದರ್ಶಿಸುತ್ತಿದ್ದಾರೆ. ಈ ರಹಸ್ಯವನ್ನು ತಿಳಿದುಕೊಳ್ಳದೆ ಶಿವಭಕ್ತರಲ್ಲಿ ಮೇಲುಕೀಳುಗಳ ಕುಕಲ್ಪನೆಯನ್ನಿಟ್ಟುಕೊಂಡು ಇಂಥ ಪೂಜೆಗಳನ್ನು ಮಾಡಿದ್ದಾದರೆ ಕಣ್ಣು ಕಟ್ಟಿ ಕನ್ನಡಿಯ ತೋರಿದಂತೆಯೇ ಸರಿ. ಈ ಪೂಜೆಗೆ ಬಂದಿದ್ದ ಶ್ರೀ ವಿರಕ್ತ ಸ್ವಾಮಿಗಳು ಮತ್ತು ಶ್ರೀ ಪಟ್ಟಾಧ್ಯಕ್ಷರು ಈಗ ವೀರಶೈವ ಸಮಾಜದಲ್ಲಿ ನಡೆದಿರುವ ಅನರ್ಥಕರವಾದ ಧಾರ್ಮಿಕ ಕಲಹವನ್ನು ಶಮನ ಮಾಡಲು ಒಂದು ಪ್ರಕಟನೆಯನ್ನು ಪ್ರಸಿದ್ಧಿಸುವುದಾಗಿ ಗೊತ್ತು ಮಾಡಿರುವುದು ಅತ್ಯಂತ ಸಂತೋಷಕರವಾಗಿದೆ.

ಅದನ್ನು ಸಭೆಯಲ್ಲಿ ಓದಿ ಹೇಳಿ ಸಹಿ ಮಾಡಿದವರ ಹೆಸರನ್ನೂ ಓದಿತು. ಯಾರಿಗಾದರೂ ಒಪ್ಪಿಗೆ ಇಲ್ಲದಿದ್ದರೆ ತಮ್ಮ ಹೆಸರನ್ನು ತೆಗೆದುಕೊಳ್ಳಬಹುದು. ಯಾರಾದರೂ ತಮ್ಮ ಹೆಸರನ್ನು ಇದರಲ್ಲಿ ಹಾಕಬೇಕೆಂದು ತಿಳಿಸಿದ್ದಾದರೆ ಹಾಗೆ ಹಾಕಲ್ಪಡುವುದೆಂತಲೂ ತಿಳಿಸಿದರು. ಯಾರೂ ವ್ಯತ್ಯಾಸಗಳನ್ನು ಸೂಚಿಸಲಿಲ್ಲ. ೫೨ ಮೂರ್ತಿಗಳ ಸಹಿ ಇದ್ದ ಆ ಪ್ರಕಟನೆಯು ಸಭೆಯಲ್ಲಿಯೂ ಸರ್ವಾನುಮತದಿಂದ ತೀರ್ಮಾನವಾಯಿತು.

ಆ ಮೇಲೆ ಪಡಗಾನೂರು ಶ್ರೀ. ಶಂಕರಗೌಡರು ನಿರ್ದಾಕ್ಷಿಣ್ಯವಾಗಿ ಹೀಗೆ ಹೇಳಿದರು—

"ಇದು ೭೦ನೆಯ ಶತಮಾನ. ವಿರಕ್ತರಾದರೇನು? ಪಟ್ಟದ ದೇವರಾದರೇನು? ಸದ್ಗುಣ ಸದಾಚಾರ ಶೀಲರಾಗಿ ಸಮಾಜ ಸೇವೆ ಮಾಡಿದರೇನೇ ಜನರು ಅವರಿಗೆ ಮಾನಕೊಡುತ್ತಾರೆ. ಹಾಗೇ ತಾವು ದೊಡ್ಡವರೆಂದು ಹೇಳಿದರೆ ಕೇಳುವವರಾರು? ಆ ದಡ್ಡತನದ ಕಾಲ ಹೋಯಿತು. ಇವರು ಮಠಗಳನ್ನು ಬಿಟ್ಟು ದೇಶ ಸಂಚಾರ ಮಾಡುತ್ತ ಧರ್ಮವನ್ನು ಬೋಧಿಸಬೇಕು. ಮೊದಲು ತಾವು ಧರ್ಮದಂತೆ ನಡೆಯುವದನ್ನು ಕಲಿಯಬೇಕು. ಬಸವಾದಿ ಪ್ರಮಥರ ದಿವ್ಯ ತತ್ವಗಳನ್ನು ಪರಧರ್ಮದವರು ಕೂಡಾ ಕೊಂಡಾಡಹತ್ತಿದ್ದಾರೆ. ಅಂಥ ದಿವ್ಯ ತತ್ವಗಳನ್ನು ತಾವೂ ಆಚರಿಸುತ್ತ ಜನರಿಗೂ ಬೋಧಿಸುತ್ತ ನಮ್ಮ ಗುರುಗಳು ಸಮಾಜಸೇವೆ ಮಾಡದಿದ್ದರೆ ಇನ್ನು ೫೦ ವರುಷಗಳಲ್ಲಿ ಇವರು ನಾಮಶೇಷರಾಗುವರು."

ಆ ಮೇಲೆ ಜನಗಳ ಅತ್ಯಾಗ್ರಹದಿಂದ ಶ್ರೀಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳು ಸ್ವಲ್ಪ ಹೊತ್ತು ಭಾಷಣ ಮಾಡಿದರು. ಅದರ ಮುಖ್ಯಾಂಶ ಹೀಗಿತ್ತು.

"೬೩ ಪುರಾತನರು ಶಿವನಿಗಾಗಿ ಸರ್ವಸ್ವವನ್ನೂ ಸೂರೆಮಾಡಿದ್ದರಿಂದ ಪೂಜ್ಯರಾದರು. ನಾವಾದರೂ ಸಮಾಜವೆಂಬ ಶಿವನಿಗೆ ಸರ್ವವನ್ನೂ ತ್ಯಾಗಮಾಡಬೇಕು." ಅನಂತರ ಸಭೆ ಮುಕ್ತಾಯವಾಯಿತು.

ವೀರಶೈವ ಮತಾಚಾರ್ಯರ ಕಾಲ ನಿರ್ಣಯ.

ಈ ಪುಸ್ತಕವನ್ನು ಬೆಂಗಳೂರಲ್ಲಿರುವ ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರು ಮಾಗಡಿ ಇವರು ಬರೆದಿದ್ದಾರೆ. ಇದು ಎಳ ಪುಟಗಳುಳ್ಳದ್ದಾಗಿದೆ. ಇದರಲ್ಲಿ ಶ್ರೀ ರೇವಣ ಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ ಏಕೋರಾಮ, ವಿಶ್ವಾರಾಧ್ಯ ಮತ್ತು ಬಸವಣ್ಣ ಈ ಆರು ವೀರಶೈವ ಮಹಾಪುರುಷರ ಕಾಲಮಾನವನ್ನು ಕ-ರಿತು ಐತಿಹಾಸಿಕ ದೃಷ್ಟಿಯಿಂದ ವಿವೇಚಿಸಿದ್ದಾರೆ.

ವೀರಶೈವರಿಗೆ ಪರಮಪೂಜ್ಯವಾಗಿರತಕ್ಕ ಈ ಮಹಾ ವಿಭೂತಿಗಳ ಕಾಲಮಾನವನ್ನು ಕುರಿತು ಅನ್ಯಮತೀಯರಾದ ಈ ಲೇಖಕರು ಬಹು ಶ್ರದ್ಧೆಯಿಂದ ಅನೇಕ ಸಂಗತಿಗಳನ್ನು ಸಂಗ್ರಹಿಸಿ ಐತಿಹಾಸಿಕ ಆಧಾರವೆಂಬ ಒರೆಗಲ್ಲಿಗೆ ಹಚ್ಚಿ ನಿಷ್ಪಕ್ಷಪಾತ ದೃಷ್ಟಿಯಿಂದ ಪರೀಕ್ಷಿಸಿ ಬರೆದುದು ಅತ್ಯಂತ ಅಭಿನಂದನೀಯವಾದುದು. ಮಹಾನುಭಾವರಾದ ಬಸವಣ್ಣನವರ ಕಾಲಮಾನದ ವಿಷಯವೇನೂ ತೊಡಕಿನದಾಗಿರಲಿಲ್ಲ. ಏಕೆಂದರೆ ಅತನು ಐತಿಹಾಸಿಕ ಮಹಾ ಪುರುಷನು. ಈ ಮುಂಚೆಯೇ ಅತನ ಸಂಬಂಧವಾಗಿ ಐತಿಹಾಸಿಕ ದೃಷ್ಟಿಯಿಂದ ಬರೆಯಲ್ಪಟ್ಟ ಪುಸ್ತಕಗಳು ಪ್ರಕಟವಾಗಿವೆ.

ಆದರೆ ಶ್ರೀ ರೇವಣಸಿದ್ಧಾದಿ ಮಹಾಪುರುಷರ ಸಂಬಂಧವಾಗಿ ಮಾತ್ರ ಈ ಪ್ರಕಾರ ಐತಿಹಾಸಿಕ ದೃಷ್ಟಿಯಿಂದ ಬರೆದ ಪುಸ್ತಕಗಳು ವಿರಳ. ಶ್ರೀ. ಜೀರಿಗೆ ಬಸವಲಿಂಗಪ್ಪನವರು ಮಾತ್ರ ಈ ಸ್ತುತ್ಯ ಕಾರ್ಯವನ್ನು ಮಾಡಿದ್ದಾರೆ. ಅವರು ಸಂಗ್ರಹಿಸಿದ ಸಂಗತಿಗಳನ್ನೂ ಈ ಲೇಖಕರು ಆಧಾರವಾಗಿಟ್ಟುಕೊಂಡು ಬೇರೆ ಅನೇಕ ವಿಷಯಗಳನ್ನು ಕೂಡಿಸಿ ಬಹು ತೃಪ್ತಿಕರವಾಗಿ ವಿವೇಚಿಸಿದ್ದಾರೆ. ಶ್ರೀ ರೇಣುಕಾಚಾರ್ಯರೇ ಮೊದಲಾದ ಪಂಚಾಚಾರ್ಯರ ಉತ್ಪತ್ತಿ, ಕಾಲಮಾನ, ಮೊದಲಾದವುಗಳ ಸಂಬಂಧವಾಗಿ ಅನೇಕರಲ್ಲಿರುವ ತಪ್ಪು ಅಭಿಪ್ರಾಯಗಳು ಈ ಪುಸ್ತಕವನ್ನು ಓದುವುದರಿಂದ ನಿವಾರಣೆಯಾಗಿ ಆ ಮಹಾ ವಿಭೂತಿಗಳ ವಿಷಯದಲ್ಲಿ ನಿಜವಾದ ಆದರಾಭಿಮಾನಗಳುಂಟಾಗದಿರಲಾರವು.

ಈ ಪಂಚಾಚಾರ್ಯರಲ್ಲಿ ಶ್ರೀ ರೇವಣಸಿದ್ಧರ ಕಾಲವನ್ನು ಕಂಡು ಹಿಡಿಯುವುದೇ ಮುಖ್ಯವಾದುದು. ಆದುದರಿಂದ ಲೇಖಕರು ಇವರ ವಿಷಯವಾಗಿಯೇ ಬಹಳ ಪುಟಗಳಲ್ಲಿ ವಿಸ್ತಾರವಾಗಿ ವಿವೇಚಿಸಿ ನಿಷ್ಪಕ್ಷಪಾತಿಗಳು ಒಪ್ಪುವಂತೆ ಮಾಡಿದ್ದಾರೆ. ಶ್ರೀ ರೇವಣಸಿದ್ಧರ ವಿಷಯಕವಾದ ಶಿರಿವಾಳದ ಶಿಲಾ ಶಾಸನವನ್ನೇ ಲೇಖಕರು ಮುಖ್ಯವಾಗಿಟ್ಟುಕೊಂಡಿರುವುದರಿಂದ ಭಿನ್ನಾಭಿಪ್ರಾಯಕ್ಕೆ ಆವಕಾಶವಿಲ್ಲದಾಗಿದೆ.

ಶ್ರೀ ರೇವಣಸಿದ್ಧ ಅಥವಾ **ರೇಣುಕಾಚಾರ್ಯನು** ಸರ್ವಯೋಗಿ ಶಾಂತಿಮಯ್ಯನ ಮಗನು. ಈತನು ಕ್ರಿ. ಶ. ೧೧೩೬ರಿಂದ ೧೧೯೦ ವರೆಗಿದ್ದನು.

ಶ್ರೀ ಮರುಳಸಿದ್ಧನು ಕಗ್ಗಲ್ಲ ಗೌಡನಿಗೆ ಮಗುವಾಗಿ ದೊರೆತನು. ಈತನು ಕ್ರಿ. ಶ. ೧೧೮೭ರಲ್ಲಿದ್ದನು. **ಶ್ರೀ ಪಂಡಿತಾರಾಧ್ಯನು** ಕ್ರಿ. ಶ. ೧೧೬೦ರಲ್ಲಿದ್ದನು. ಈತನ ತಂದೆ ಶ್ರೀಶೈಲದ ಮಲ್ಲಿಕಾರ್ಜುನ ಲಿಂಗದ ಅರ್ಚಕನಾದ ಭೀಮನ ಪಂಡಿತ. ತಾಯಿ ಗೌರಾಂದೆ. **ಶ್ರೀ ಏಕೋರಾಮನು** ದೇವದಾಸನ ಮಗನು. ಈತನು ಕ್ರಿ. ಶ. ೧೧೬೦ರಲ್ಲಿದ್ದನು. ಶ್ರೀ ವಿಶ್ವೇಶ್ವರಾಚಾರ್ಯನನ್ನು ರೇವಣನು ಕಾಶಿಗೆ ಹೋದಾಗ ಕಂಡಿದ್ದನಾದುದರಿಂದ ಈತನು ಕ್ರಿ. ಶ. ೧೧೬೦ರಲ್ಲಿದ್ದನು.

ಈ ಪ್ರಕಾರ ಲೇಖಕರು ವೀರಶೈವರಿಗೆ ಪರಮಪೂಜ್ಯರಾಗಿರತಕ್ಕ ರೇಣುಕಾದಿ ಪಂಚಾಚಾರ್ಯರ ಉತ್ಪತ್ತಿ ಮತ್ತು ಕಾಲಮಾನಗಳನ್ನು ಅನೇಕ ಆಧಾರಗಳಿಂದ ಪ್ರತಿಪಾದಿಸಿದ್ದಾರೆ. ಈ ಮಹಾ ಪುರುಷರು ಲಿಂಗೋದ್ಭವರೆಂದು ಕವಿಗಳು ವರ್ಣಿಸಿರುವುದರ ಕಾರಣವನ್ನು ಲೇಖಕರು ಹೀಗೆ ಹೇಳಿದ್ದಾರೆ.

"ಆಯಾಯ ಲಿಂಗಗಳನ್ನು ಇವರ ತಾಯಿತಂದೆಗಳು ಪೂಜಿಸುತ್ತಿರಬೇಕು. ಆ ತಮ್ಮ ಇಷ್ಟದೇವರ ಕೃಪೆಯಿಂದ ಹುಟ್ಟಿದವರೆಂದು ತಿಳಿದ ಕಾರಣ ಲಿಂಗೋದ್ಭವರೆಂದು ಹೇಳಿರಬೇಕು."

ವೀರಶೈವರಲ್ಲಿ ಲಿಂಗೈಕ್ಯರೆಂಬ ಶಬ್ದ ವಾಡಿಕೆಯಲ್ಲಿದೆಯಷ್ಟೆ. ಹಾಗೆಂದರೆ ಸ್ಥಾವರ ಲಿಂಗದಲ್ಲಿ ಐಕ್ಯರಾದರೆಂದಲ್ಲ ಪರಮಾತ್ಮನಲ್ಲಿ ಬೆರೆದರೆಂಬರ್ಥ. ಬಸವೇಶನು ಸಂಗಮೇಶನಲ್ಲಿ ಐಕ್ಯನಾದನೆಂದರೆ ಸ್ಥಾವರ ಲಿಂಗದಲ್ಲಿ ಸೇರಿದನೆಂಬುದು ಹೇಗೆ ಅನುಚಿತವಾದ ತಿಳುವಳಿಕೆಯೋ ಹಾಗೆಯೇ ರೇಣುಕಾದಿಗಳು ಲಿಂಗೋದ್ಭವರೆಂದರೆ ಸ್ಥಾವರ ಲಿಂಗದಲ್ಲಿ ಹುಟ್ಟಿದರೆಂಬುದೂ ಅಪಾರ್ಥವು.

ಕ್ರೈಸ್ತ, ಚೆನ್ನಬಸವ ಮೊದಲಾದವರು ಅಯೋನಿಜರೆಂದು ಹೇಳಿಲ್ಲವೆ? ಆದರೆ ಅರ್ಥವಾದರೋ ಸಂಸಾರ ಗುಣ ವಿಶಿಷ್ಟರಲ್ಲ, ಪರಮಾತ್ಮನ ಗುಣ ಪರಿಪೂರ್ಣರೆಂದೇ ತಿಳಿಯಬೇಕು. ಬಸವ ಮಹಾತ್ಮನು "**ಕರ್ಣದಲ್ಲಿ ಜನಿಸಿದವರುಂಟೆ?**" ಎಂದು ಪ್ರಶ್ನೆ ಮಾಡಿದುದನ್ನಾದರೂ ಲಕ್ಷಿಸಿ ಕಲ್ಲು ಮಣ್ಣು ಮೊದಲಾದವುಗಳಲ್ಲಿ ಮನುಷ್ಯರು ಹುಟ್ಟಿದರೆಂಬ ಹುಚ್ಚು ಕಲ್ಪನೆಯನ್ನು ತೆಗೆದು ಹಾಕಿ ಆ ಮಹಾ ಪುರುಷರ ನಿಜವಾದ ಘನತೆಯನ್ನರಿತುಕೊಳ್ಳಲು ಪ್ರಯತ್ನಿಸಬೇಕು.

ಕಾಶಿಯ ವಿಶ್ವಾರಾಧ್ಯರು ಲೇಖಕರು ಹೇಳುವಂತೆ ರೇಣುಕರ ಕಾಲದಲ್ಲಿದ್ದರೆಂದು ಹೇಳಲಿಕ್ಕಾಗುವುದೆ? ಆದಯ್ಯನು "ರೇವಣ ಸಿದ್ಧೇಶ್ವರನೆನ್ನ ನೇತ್ರ, ಮರುಳ ಸಿದ್ಧೇಶ್ವರ ದೇವರೆನ್ನ ಶ್ರೋತ್ರ, ಪಂಡಿತಾರಾಧ್ಯರೆನ್ನ ಜಿಹ್ವೆ, ಏಕೋರಾಮ ತಂದೆಗಳೆನ್ನ ನಾಸಿಕ" ಎಂದು ಹೇಳಿರುವ ವಚನದಲ್ಲಿ ವಿಶ್ವಾರಾಧ್ಯರ ಹೆಸರನ್ನು ಹೇಳಿಲ್ಲ. ಮೇಲಿನ ನಾಲ್ವರ ಹೆಸರನ್ನು ಹೇಳಿದ್ದಾನೆ. ಆದುದರಿಂದ ಇವರೆಲ್ಲ ಬಸವೇಶನ ಕಾಲದಲ್ಲಿಯೇ ಇದ್ದಂತೆ ವಿಶ್ವಾರಾಧ್ಯರು ಆ ಕಾಲದಲ್ಲಿರಲಿಲ್ಲವೆಂದು ತೋರುತ್ತದೆ.

ಹೀಗೆ ಇತಿಹಾಸ ದೃಷ್ಟಿಯಿಂದ ಆ ಮಹಾಪುರುಷರ ಉತ್ಪತ್ತಿ, ಕಾಲಮಾನ, ತತ್ತ್ವೋಪದೇಶ ಮೊದಲಾದವುಗಳನ್ನು ನಿಷ್ಪಕ್ಷಪಾತವಾಗಿ ತಿಳಿದುಕೊಂಡರೆ ಆಗ ಆ ಮಹಾತ್ಮರ ಅದ್ಭುತ ಶಕ್ತಿಗೊತ್ತಾಗಿ ನಾವೂ ಅವರ ಆಚಾರವಿಚಾರಗಳಂತೆ ನಡೆಯುವ ಉತ್ಸಾಹವುಂಟಾಗುವುದು. ಹಾಗಿಲ್ಲದೆ ರವಿಕಾಣದುದ ಕವಿಕಂಡನೆಂಬ ನುಡಿಯಂತೆ ಕವಿಗಳ ಕಲ್ಪನಾ ಸೃಷ್ಟಿಯಲ್ಲಿ ಸೇರಿ ತಪ್ಪು ತಿಳುವಳಿಕೆಗಳನ್ನೆಲ್ಲಾ ತಲೆಯಲ್ಲಿ ತುಂಬಿಕೊಂಡರೆ ನಿಜಸ್ಥಿತಿಯ ಜ್ಞಾನವಾಗಿ ಅತ್ಯುನ್ನತಿಯಾಗುವುದು ಶಕ್ಯವೇ ಇಲ್ಲ.

ಲೇಖಕರು **ಅಲ್ಲಮನ** ವಿಷಯವಾಗಿ ವಿವರಿಸಿರುವುದೂ ಯುಕ್ತವಾಗಿದೆ. ಅಲ್ಲಮ ಶಬ್ದವು ಮುಸಲ್ಮಾನರಿಂದ ಬಂದು

ದೆಂದೂ ಅಲ್ಲಮನು ಪ್ರಭು "ಮಹಮ್ಮಡನ್ ಕನ್ವರ್ಟ್" ಎಂದು ಅನೇಕ ಸುಶಿಕ್ಷಿತರು ಕೂಡಾ ತಪ್ಪಾಗಿ ತಿಳಿದಿದ್ದಾರೆ. ಈ ವಿಷಯವಾಗಿ ಲೇಖಕರು ಹೀಗೆ ಹೇಳಿದ್ದಾರೆ.

"ಕ್ರಿ. ಶ. ೬೮೭ರಲ್ಲಿ ಹುಟ್ಟಿದ ವೀರವೆಂಬ ಗ್ರಾಮದ ಒಂದು ದಾನ ಶಾಸನದಲ್ಲಿ ಕೌಂಡಿಣ್ಯ ಗೋತ್ರದ ದುಗ್ಗಶರ್ಮನ ಮೊಮ್ಮಗನೂ ಪಾಂಚಾಲ ಶರ್ಮನ ಮಗನೂ ಆದ **ಅಲ್ಲಶರ್ಮನಿಗೆ** ಈ ವೀರಗ್ರಾಮವು ದತ್ತವಾಗಿದೆ ಎಂದು ಬರೆದಿದೆ. ಆದಕಾರಣ ೭ನೆಯ ಶತಮಾನದಲ್ಲಿಯೇ **ಅಲ್ಲಮ** ಎಂಬ ಹೆಸರನ್ನು ಪ್ರಸಿದ್ಧ ಬ್ರಾಹ್ಮಣರೂ ದಕ್ಷಿಣ ದೇಶದಲ್ಲಿ ಇಟ್ಟುಕೊಳ್ಳುತ್ತಿದ್ದರೆಂದು ತಿಳಿಯಬರುತ್ತದೆ."

ಬಸವೇಶನು ಕಲ್ಯಾಣದಲ್ಲಿ ಶೂನ್ಯ ಸಿಂಹಾಸನವನ್ನು ಸ್ಥಾಪಿಸಿ ಅಲ್ಲಮ ಪ್ರಭುವನ್ನು ಅದರ ಮೇಲೆ ಕೂಡಿಸಿ ಗೌರವಿಸಿದನು. ಇದು ಕ್ರಿ. ಶ. ೧೧೬೬ರ ಸುಮಾರಿನಲ್ಲಾಯಿತು. ಈ ಪೀಠದ ೨ನೆಯ ಗುರುಗಳೇ ಚಿತ್ರದುರ್ಗದ ಮುರುಘಾ ಮಠ ಸ್ಥಾಪಕರು. ಬಸವೇಶನ ಕಾಲದಲ್ಲಿ ಇದೊಂದೇ ಜಂಗಮ ಪೀಠವು ಸ್ಥಾಪನೆಯಾಯಿತು. ಅನಂತರ ಪಂಚ ಗುರುಪೀಠಗಳು ಸ್ಥಾಪನೆಯಾದವೆಂದು ಲೇಖಕರು ಹೀಗೆ ವಿವರಿಸಿದ್ದಾರೆ—

"ರೇಷಣನ ಮಗ ಅಥವಾ ಶಿಷ್ಯನಾದ ರುದ್ರ ಮುನಿಗೆ ಮುಕ್ತಿ ಮುನಿಯೆಂಬ ಶಿಷ್ಯನಿದ್ದನು. ಈತನೇ ಶ್ರೀಶೈಲದಲ್ಲಿ ಗುರು ಪೀಠವನ್ನು ಕ್ರಿ. ಶ. ೧೩೧೮ರಿಂದ ೧೩೬೦ ರೊಳಗಾಗಿ ಸ್ಥಾಪಿಸಿದನು. ಈ ಮುಕ್ತಿಮುನಿಯ ಶಿಷ್ಯನಾದ ದಿಗಂಬರ ಮುಕ್ತಿ ಮುನಿಯು ಈಗಿನ ಬಾಳೆಹಳ್ಳಿ ಗುರು ಪೀಠವನ್ನು ಸ್ಥಾಪಿಸಿದನು. ಇದು ಕೂಡಾ ಕ್ರಿ. ಶ. ೧೩೬೦ನೆಯ ಇಸವಿಯ ಕಾಲಕ್ಕೆ ಸಂಭವಿಸಿರಬೇಕು. ಉಜ್ಜಿನಿ ಪೀಠವು ಕ್ರಿ. ಶ. ೧೧೫೫ರ ಇತ್ತಲಾಗಿ ಉಂಟಾದುದು.

ಆದ್ಯ ಜಗದ್ಗುರು ಪ್ರಭುದೇವನ ಆಜ್ಞೆಯ ಪ್ರಕಾರ ಕಲಿಕೇತ ಬ್ರಹ್ಮಯ್ಯ ಅಥವಾ ಶೀಲವಂತ ನಾಯಿಕನೆಂಬಾತನು ಮತ ಪ್ರಸಾರಕ್ಕಾಗಿ ಮಠಗಳನ್ನು ಸ್ಥಾಪಿಸಲು ಉತ್ತರ ದೇಶಕ್ಕೆ ಹೋಗಿ ಕಾಶಿಯಲ್ಲಿ ಜಯಚಂದ್ರನೆಂಬ ರಾಜನನ್ನು ಮೆಚ್ಚಿಸಿ ಅಲ್ಲಿ ಸ್ಥಳವನ್ನು ಹೊಂದಿ ಮಠ ಕಟ್ಟಿಸಿ ಮಲ್ಲಿಕಾರ್ಜುನ ಎಂಬ ಒಬ್ಬ ಜಂಗಮನಿಗೆ ಪಟ್ಟಕಟ್ಟಿದನು. ಕ್ರಿ. ಶ. ೧೧೯೪ರಲ್ಲಿ ಜಯಚಂದ್ರನು ಮಹಮ್ಮದೀಯರಿಂದ ಕೊಲ್ಲಲ್ಪಟ್ಟ ಮೇಲೆ ಕಾಶಿಯು ಮುಸಲ್ಮಾನರ ಪಾಲಾಯಿತು. ಆ ಮೇಲೆ ಕೆಳದಿಯ ವೀರಶೈವ ಶೂರ ಪ್ರಭು ದೊಡ್ಡ ಸಂಕಣ್ಣ ನಾಯಿಕನು ದೇಶ ಸಂಚಾರ ಮಾಡುತ್ತ ದಿಲ್ಲಿಗೆ ಹೋಗಿ ಹುಮಾಯೂನನ ಬಳಿಯಲ್ಲಿದ್ದ ಅಂಕುಶಖಾನನನ್ನು ಗೆದ್ದು ರಾಜನಿಂದ ಮಠಸ್ಥಾಪನೆಗೆ ಅಪ್ಪಣೆ ಸೌಲಭ್ಯಗಳನ್ನು ಹೊಂದಿ ದಿಲ್ಲಿ, ಆಗ್ರಾ, ಪ್ರಯಾಗ ಈ ಸ್ಥಳಗಳಲ್ಲಿ ಮಠಗಳನ್ನು ಕಟ್ಟಿಸಿ ಕಾಶಿಗೆ ಬಂದು ಅಲ್ಲಿಯೂ ಸುಂದರವಾದ ಮಠವನ್ನು ಕಟ್ಟಿಸಿ ಜಂಗಮವಾಟೆಯೆಂದು ಹೆಸರಿಟ್ಟನು.

ಈ ದೊಡ್ಡ ಸಂಕಣ್ಣ ನಾಯಿಕನೇ ನೇಪಾಳ, ಹರದ್ವಾರ, ಕಾಶ್ಮೀರ ಮೊದಲಾದ ಉತ್ತರ ಭಾರತದ ಅನೇಕ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿದನು. ಕೇದಾರದಲ್ಲಿ ಏಕೋರಾಮ ಪೀಠವನ್ನು ಸ್ಥಾಪಿಸಿದಾತನೂ ಈತನೇ ಸರಿ. ಆದಕಾರಣ ಕಾಶೀ ಪೀಠವು ಕ್ರಿ. ಶ. ೧೧೬೬ರಲ್ಲಿ ಮತ್ತು ಕೇದಾರ ಪೀಠವು ೧೩೫೬ರಲ್ಲಿ ಸ್ಥಾಪನೆಯಾದವು."

ಬಸವೇಶನ ಪೂರ್ವದಲ್ಲಿದ್ದ ದಾಸಿಮಯ್ಯನೇ ಬೇರೆ. ಮತ್ತು "ರಾಮನಾಥಾ" ಎಂಬ ಅಂಕಿತವುಳ್ಳ ವಚನಗಳನ್ನು ಹೇಳಿದ ದಾಸಿಮಯ್ಯನೇ ಬೇರೆ. ಈತನು ಬಸವನ ಕಾಲದಲ್ಲಿದ್ದನು. ಕೀಳು ಡೋಹರ ಕಕ್ಕಯ್ಯ, ಕೀಳು ಮಾದರ ಚೆನ್ನಯ್ಯ ಎಂಬ ದೇವರ ದಾಸಿಮಯ್ಯನ ವಚನವಿಂದ ಈತನು ಬಸವನ ಕಾಲದವನೆಂದು ಲೇಖಕರು ಹೇಳಿದ್ದಾರೆ. ಈ ಪ್ರಕಾರ ಈ ಪುಸ್ತಕದಲ್ಲಿ ಅನೇಕ ಮಹತ್ವದ ಸಂಗತಿಗಳು ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಲ್ಪಟ್ಟಿರುವ ಕಾರಣ ವೀರಶೈವರಂತೂ ಅತ್ಯಾವಶ್ಯಕವಾಗಿ ಈ ಪುಸ್ತಕವನ್ನು ಓದಲೇಬೇಕು. ಕ್ರಯ ೧೨ ಆಣೆ.

ರೇವಣಸಿದ್ಧನು ಬಸವನಿಗಿಂತ ನಾಲ್ಕಾರು ವರುಷಗಳ ಪೂರ್ವದಲ್ಲಿ ಹುಟ್ಟಿದ್ದನೆಂದು ಲೇಖಕರು ಹೇಳುತ್ತಾರೆ. ಬಸವೇಶನು ವೀರಶೈವ ಮತವನ್ನಂಗೀಕರಿಸಿದನೆಂದು ಆತನ ವಚನದಿಂದಲೇ ಸ್ಪಷ್ಟವಾಗುತ್ತದೆ. ರೇವಣಸಿದ್ಧನು ಶೈವ ಮತದವನಾಗಿದ್ದು ಲಿಂಗ ಧಾರಿಯಾದನೆಂದು ಲೇಖಕರು ಹೇಳಿದ್ದಾರೆ. ಎಂದಮೇಲೆ ರೇವಣಸಿದ್ಧ, ಬಸವ ಮೊದಲಾದ ಪ್ರಮಥರ ಮುಂಚೆಯೂ ವೀರಶೈವ ಮತವಿದ್ದಿತೆಂದೇ ಸ್ಪಷ್ಟವಾಗುವುದಿಲ್ಲವೇ? ಅದರೆ ಆ ಮುಂಚೆ ಯಾವ ಲಕ್ಷಣಗಳುಳ್ಳದ್ದಾಗಿದ್ದಿತು? ಪ್ರಮಥರು ಆ ಹಿಂದಿನ ಮತವನ್ನೇ ಪ್ರಸಾರಗೊಳಿಸಿದರೇ? ಅಥವಾ ವ್ಯತ್ಯಾಸಗಳನ್ನೇನಾದರೂ ಮಾಡಿದರೇ? ಹಾಗೆ ವ್ಯತ್ಯಾಸ ಮಾಡಿದ್ದರೆ ಯಾವ ಸಂಗತಿಗಳಲ್ಲಿ ವ್ಯತ್ಯಾಸ ಗೊಳಿಸಿದರು? ಈ ಪ್ರಕಾರ ಬಸವ ಅಲ್ಲಮ ರೇವಣ ಮುಂತಾದ ೭ ಮಹಾಪುರುಷರಿಗೂ ವೀರಶೈವ ಮತಸ್ಥಾಪಕರು, ಅಥವಾ ಉದ್ಧಾರಕರು, ಇಲ್ಲವೆ ಆಚಾರ್ಯರೆಂದು ಹೇಳಿದುದೇಕೆ? ಇವೆಲ್ಲ ಮಹತ್ವದ ಸಂಗತಿಗಳಾದುದರಿಂದ ಇತಿಹಾಸ ದೃಷ್ಟಿಯಿಂದಲೇ ಈ ಸಂಗತಿಗಳನ್ನು ಚರ್ಚಿಸಿದ್ದಾದರೆ ಬಹು ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಧನಂಜಯ.

ಇದೊಂದು ಉತ್ತಮ ತರದ ಮಾಸಪತ್ರಿಕೆ. ಇದೇ ಜೂನ್ ತಿಂಗಳಿಂದ ಪ್ರಕಟವಾಗಲುಪಕ್ರಮಿಸಿದೆ ಅಖಿಲ ಕರ್ನಾಟಕ ಸ್ವದೇಶಿ ಸಭೆಯ ಪರವಾಗಿ ಧಾರವಾಡದಿಂದ ಪ್ರಸಿದ್ಧವಾಗುತ್ತಲಿದೆ. ವಾರ್ಷಿಕ ಚಂದಾ ೩-೪-೦

ಸ್ವದೇಶಿ ಉದ್ಯೋಗ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪ್ರಯತ್ನಿಸುವುದೇ ಇದರ ಮುಖ್ಯ ಗುರಿ. ಶ್ರೀಮಾನ್ ಹುಕ್ಕೇರಿಕರ್, ವಾಳವೇಕರ್, ಡಾ. ತುಮ್ಮಿನಕಟ್ಟಿ ಮೊದಲಾದ ಪ್ರಸಿದ್ಧ ಉದ್ಯೋಗ ವಿದ್ಯಾ ವಿಶಾರದರು ಈ ಪತ್ರಿಕೆಯ ಸಂಪಾದಕರಾಗಿರುವುದರಿಂದ ಸಕಲರೂ ಈ ಪತ್ರಿಕೆಯನ್ನು ಅವಶ್ಯಕವಾಗಿ ಓದಿ ಪ್ರಯೋಜನವನ್ನು ಹೊಂದಬೇಕು.

ಪುನಃ ಭೂಕಂಪ.

ಉತ್ತರ ಹಿಂದುಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪುನಃ ಭೂಕಂಪವಾಗಹತ್ತಿದೆ. ಬನಾರಸದಲ್ಲಿಯೂ ಬಾಗಲಪುರದಲ್ಲಿಯೂ ಕೆಲವು ನಿಮಿಷಗಳವರೆಗೆ ಭೂಮಿ ನಡುಗಿದ್ದರಿಂದ ಜನರು ತಮ್ಮ ತಮ್ಮ ಮನೆಗಳೊಳಗಿಂದ ಧಾವಿಸಿ ಹೊರಗೆ ಬಂದರು. ಮುಝಫರಪುರದಲ್ಲಿ ೫ ನಿಮಿಷಗಳವರೆಗೆ ಭೂಮಿ ನಡುಗಿತು. ಜನರೆಲ್ಲ ಹೊರಗೆ ಓಡಿ ಹೋದರು. ಹಳೆಯ ಕಟ್ಟಡಗಳೂ ಗೋಡೆಗಳೂ ಬಿದ್ದವು. ಪ್ರಾಣಾಪಾಯವೇನೂ ಆಗಲಿಲ್ಲ. ಸಿಮ್ಲಾದಲ್ಲಿ ತಾ. ೬ನೇ ಮಧ್ಯಾಹ್ನದ ನಾಲ್ಕು ಗಂಟೆಗೆ ಒಮ್ಮೆಲೇ ಬಲವಾಗಿ ಭೂಮಿ ನಡುಗಿತು. ಇದರಿಂದ ಸೆಸಿಲ್ ಹೊಟೆಲಿನ ಮಾಳಿಗೆಯ ಮೇಲೆ ಕುಳಿತಿದ್ದ ಮಂಗಗಳು ಕೆಳಕ್ಕುರುಳಿ ಗತ ಪ್ರಾಣವಾದವು.

ವೀರಶೈವ ಸಮಾಜದ ಸಕಲ ಮಹಾಶಯರಿಗೆ

ಈ ಕೆಳಗೆ ಸಹಿಮಾಡಿರತಕ್ಕ ನಾವು ಈ ಮೂಲಕ ತಿಳಿಸುವದೇನಂದರೆ-

ಕಳೆದ ೧೯೧೯ನೇ ಇಸವಿಯಿಂದ ಗುರುವರ್ಗ ಮತ್ತು ವಿರಕ್ತ ವರ್ಗಗಳಲ್ಲಿ ಕಲಹವುಂಟಾಗಿ ಸಮಾಜದಲ್ಲಿ ಅನೈಕ್ಯವುಂಟಾಗಿ ದೆಯಸ್ಪೈ. ಈ ಶೋಚನೀಯ ಸ್ಥಿತಿಯನ್ನು ನಿವಾರಣೆ ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ.

ಆದಕಾರಣ ವಿಜಾಪುರ ಜಿಲ್ಲಾ ಬಾಗೇವಾಡಿ ತಾಲೂಕು ಇಂಗಳೇಶ್ವರದಲ್ಲಿ ತಾರೀಖು ೨-೬-೩೪ನೆಯ ದಿವಸ ಜರುಗಿದ ಶ್ರೀ ಅರವತ್ತುಮೂರು ಪುರಾತನರ ಪೂಜೆಯ ಕಾಲದಲ್ಲಿ ಸೇರಿದ ನಾವು ಈ ಪ್ರಕಾರ ಪ್ರಸಿದ್ಧಗೊಳಿಸುತ್ತೇವೆ.

"ಶ್ರೀ ಬಸವಾದಿ ಪ್ರಮಥರ ಮತ್ತು ಶ್ರೀ ರೇಣುಕಾದಿ ಆಚಾರ್ಯರ ಹಾಗು ವಿರಕ್ತವರ್ಗದ ಮತ್ತು ಗುರುವರ್ಗದ ಸಂಬಂಧವಾಗಿ ಈಗ ನಡೆದಿರುವ ದೂಷಣೆಯು ನಮಗೆ ಮಾನ್ಯವಿಲ್ಲ ಶ್ರೀ ಬಸವಾದಿ ಪ್ರಮಥರು ಮತ್ತು ಶ್ರೀ ರೇಣುಕಾದಿ ಆಚಾರ್ಯರು ಆಚರಿಸಿ ಬೋಧಿಸಿದ ವೀರಶೈವ ಮತತತ್ವಗಳು ನಮಗೆ ಮಾನ್ಯವಾಗಿವೆ. ಈ ಮತತತ್ವಗಳು ಸನ್ ೧೯೧೯ನೇ ಇಸವಿ ಪೂರ್ವದಲ್ಲಿ ಹೇಗೆ ಆಚರಣೆಯಲ್ಲಿದ್ದವೋ ಹಾಗೆಯೇ ಈಗಲೂ ಆಚರಿಸುವವರಾಗಿದ್ದೇವೆ." ತಾ. ೨-೬-೩೪.

೧ ಸಂಗನಬಸವ ಸ್ವಾಮಿ ಬಂಥನಾಳ
೨ ಶಿವಾನಂದ ಸ್ವಾಮಿ ಸೊನ್ನ
೩ ಮಹದೇವ ಸ್ವಾಮಿ ಶ್ರೀ ಸರ್ವಭೂಷಣ ಮಠ ಬೆಂಗಳೂರು
೪ ಮಲ್ಲಿಕಾರ್ಜುನ ಸ್ವಾಮಿ ಟೇಕಿನಮಠ ಬಾಗಲಕೋಟೆ
೫ ಸಿದ್ಧಲಿಂಗದೇವರು ವಿರಕ್ತಮಠ ಸಿಂದಗಿ
೬ ಗುರುಶಾಂತಸ್ವಾಮಿ ಮುರಘಾಮಠ ಹುಮನಾಬಾದ
೭ ಮಹಾಂತದೇವರು ವಿರಕ್ತಮಠ ಧಾರವಾಡ
೮ ಬಸವಲಿಂಗದೇವರು ವಿರಕ್ತಮಠ ವಿಜಾಪುರ
೯ ವೀರಭದ್ರ ಮರಿದೇವರು ವಿರಕ್ತಮಠ ಮಾಡ್ಯಾಳ
೧೦ ಮಳಿಸ್ವಾಮಿ ಗದ್ದಗಿ ಮಠ ದೇವರ ಹಿಪ್ಪರಗಿ
೧೧ ಮರುಳಸಿದ್ಧ ಸ್ವಾಮಿ ವಿರಕ್ತಮಠ ಆಲಮೇಲ
೧೨ ಮುರಘಾಸ್ವಾಮಿ ವಿರಕ್ತಮಠ ಮುದ್ದೇಬಿಹಾಳ.
೧೩ ಶಿವಾನಂದ ಸ್ವಾಮಿ ವಿರಕ್ತಮಠ ಅಂಗರಗುಂಡಿಗಿ
೧೪ ಶಿದ್ಧರಾಮಯ್ಯ ಸ್ವಾಮಿ ವಿರಕ್ತಮಠ ಮುದ್ದೇಬಿಹಾಳ
೧೫ ವೀರಭದ್ರಯ್ಯ ಸ್ವಾಮಿ ದೇವಣಗಾವಿ
೧೬ ಸಿದ್ಧರಾಮಯ್ಯ ವಿರಕ್ತಮಠ ಗೋಲಗೇರಿ
೧೭ ವೀರಭದ್ರ ದೇವರು ಮಾಡ್ಯಾಳ
೧೮ ಮಹಂತಸ್ವಾಮಿ ವಿರಕ್ತಮಠ ನರಬೋಳಿ
೧೯ ಸಿದ್ಧರಾಮದೇವರು ವಿರಕ್ತಮಠ ಆಲಮೇಲ
೨೦ ಅದಿನಾಥ ದೇಶಿಕರು ಗುಲಬರ್ಗಾ
೨೧ ಮಳಸ್ವಾಮಿ ಗದ್ದಗಿಮಠ ಗುಲಬರ್ಗಾ
೨೨ ದುಧನಿ ಗುರುಶಾಂತಲಿಂಗ ಸ್ವಾಮಿ
೨೩ ವೀರಭದ್ರಯ್ಯ ಸ್ವಾಮಿ ವಿರಕ್ತಮಠ ದೇವಣಗಾವಿ
೨೪ ಮರುಳಸಿದ್ಧ ಸ್ವಾಮಿ ವಿರಕ್ತಮಠ ಆಲಮೆಲ
೨೫ ಶಿವಲಿಂಗ ಸ್ವಾಮಿ ವಿರಕ್ತಮಠ ಹುಣಚಿಗಿ
೨೬ ಸಿದ್ಧಲಿಂಗಸ್ವಾಮಿ ಕೊಕಟನೂರು ಗದ್ದಗಿ ಮಠ

೧ ರುದ್ರಸ್ವಾಮಿ ಪಟ್ಟದ ದೇವರು ಮುತ್ತಗಿ
೨ ಪಟ್ಟದದೇವರು ಹಿರೇಮಠ ಮುಗಳೊಳ್ಳಿ
೩ ಮಹಂತಸ್ವಾಮಿ ಚರ ಪಟ್ಟಾಧ್ಯಕ್ಷ ಮುತ್ತತ್ತಿ
೪ ಶಾಂತಲಿಂಗಪ್ಪನವರು ಹಿರೇಮಠ ಹುಮನಾಬಾದ
೫ ಜಿ. ಪಿ. ಹಿರೇಮಠ ನಾಲತವಾಡ
೬ ಎಂ. ಜಿ. ಪಟ್ಟದದೇವರು ತೊರವಿ
೭ ಶಿವಶಂಕರ ಸ್ವಾಮಿ ಪಂಚಾಕ್ಷರಿಮಠ ಅಂಬಲಗಿ
೮ ಚನ್ನ ವೃಷಭ ಶಿವಾಚಾರ್ಯ ನಾಲತವಾಡ
೯ ಚರಮೂರ್ತಿ ಶಾಂತವೀರಸ್ವಾಮಿ ತೆಲಸಂಗ
೧೦ ಚನ್ನಸಂಗ ಸ್ವಾಮಿ ಮಠ ಹರನಾಳ
೧೧ ಗುರುಪಾದೇಶ್ವರ ಪಟ್ಟದದೇವರು ಹತ್ತಳ್ಳಿ
೧೨ ಗಂಗಾಧರ ಪಟ್ಟದ ದೇವರು ಚಿತ್ತರಗಿ
೧೩ ಮಹಾಂತೇಶ ಚರಮೂರ್ತಿ ಹಾವಿನಾಳ
೧೪ ಚರಮೂರ್ತಿ ಪಟ್ಟದದೇವರು ತೆಲಗಿ
೧೫ ಆಂದಾನಯ್ಯ ಪಟ್ಟದ ದೇವರು ನಿಡಗುಂದಿ
೧೬ ಬಸವಲಿಂಗಸ್ವಾಮಿ ಹಿರೇಮಠ ಪಟ್ಟದದೇವರು ಕಲಕೇರಿ
೧೭ ದೊಡ್ಡ ಬಸವಪ್ಪ ಸ್ವಾಮಿ ಪಟ್ಟದ ದೇವರು ಅಸ್ಕಿ
೧೮ ಬಸಯ್ಯ ಸ್ವಾಮಿ ಪಟ್ಟದ ದೇವರು ಕೊಡಗಾನೂರು
೧೯ ಮಡಿವಾಳ ಸ್ವಾಮಿ ಪಟ್ಟದದೇವರು ತುಂಬಿಗಿ
೨೦ ಮಹಂತ ಸ್ವಾಮಿ ಪಟ್ಟದ ದೇವರು ಆಲಮಟ್ಟಿ
೨೧ ಶಂಭುಲಿಂಗಸ್ವಾಮಿ ಪಟ್ಟದ ದೇವರು ಹುಮನಾಬಾದ
೨೨ ಚನ್ನಮಲ್ಲಯ್ಯಸ್ವಾಮಿ ಪಟ್ಟದ ದೇವರು ಮೌಜೆ ಮದರಿನಂದ
೨೩ ಗುರುಬಸವ ಪಟ್ಟದ ದೇವರು ಹಿರೂರು
೨೪ ಶಿವಯ್ಯ ಸ್ವಾಮಿ ಪಟ್ಟದ ದೇವರು ತಡವಲಗಿ
೨೫ ದುಂಡಯ್ಯ ಸ್ವಾಮಿ ಪಟ್ಟದ ದೇವರು ಮಲಘಾಣ
೨೬ ಬಸವಲಿಂಗಸ್ವಾಮಿ ಪಟ್ಟದದೇವರು ನಾವದಗಿ

ಈ ಪ್ರಕಾರ ಎಲ್ಲ ವಿರಕ್ತ ಸ್ವಾಮಿಗಳು ಮತ್ತು ಪಟ್ಟಾಧ್ಯಕ್ಷರು ಸೇರಿ ಇತ್ತೀಚೆಗುಂಟಾದ ಅಧರ್ಮದ ದುಷ್ಟ ಕೃತ್ಯವಟಕೆಯನ್ನು ಶಾಂತಗೊಳಿಸಲು ಪ್ರಯತ್ನಿಸಬಾರದೆ? ಪೂರ್ವಕಾಲದಿಂದ ನಡೆದುಕೊಂಡು ಬಂದ ಬಸವಾದಿ ಪ್ರಮಥರ ಮತ್ತು ರೇಣುಕಾದಿ ಗುರುಗಳ ಒಂದೇ ವಿಧವಾದ ಆಚಾರ ವಿಚಾರಗಳನ್ನು ಪ್ರಸಾರಗೊಳಿಸಿ ಸಮಾಜದಲ್ಲಿ ಈಗ ಕೆಲವು ಸ್ವಾರ್ಥಿಗಳೂ ದುರಭಿಮಾನಿಗಳೂ ಉಂಟುಮಾಡಿರುವ ಅಧರ್ಮದ ಘಾತಕ ಕೋಲಾಹಲವನ್ನು ನಿಲ್ಲಿಸಬಾರದೆ?

ಹಾಗಾದ ವಿನಾ ವೀರಶೈವ ಸಮಾಜದಲ್ಲಿ ಧಾರ್ಮಿಕ ಐಕಮತ್ಯವುಂಟಾಗುವುದಿಲ್ಲ. ಮತ್ತು ಗುರುಜಂಗಮ ವರ್ಗಗಳ ಕಾರ್ಯಗಳು ಶಾಸ್ತ್ರಿಕರವಾಗಿ ಜರುಗಿ ಸಮಾಜವು ಅಭಿವೃದ್ಧಿಯನ್ನು ಹೊಂದುವುದಿಲ್ಲ. [ಸಂಪಾದಕ.]





ಶಾ. ಶ. ೧೮೫೬ ನೆಯ ನಿ. ವೈಶಾಖ ಬ. ೩೦ ಸೋಮವಾರ.

ಉತ್ಸವವಾಯಿತು, ಮುಂದೇನು?

ಮಹಾನುಭಾವನಾದ ಆ ಬಸವೇಶನ ಜಯಂತ್ಯುತ್ಸವವೇನೋ ಈ ಸಾರೆ ಎಲ್ಲ ಕಡೆಗಳಲ್ಲಿಯೂ ಬಹು ಸಂಭ್ರಮದಿಂದ ಜರುಗಿತು. ಕಳೆದ ೭೦ ವರುಷಗಳಿಂದಲೂ ಈ ಉತ್ಸವವು ಹೀಗೆ ಜರುಗುತ್ತಲೇ ಬಂದಿದೆ. ಇಷ್ಟು ಮಾತ್ರದಿಂದ ಬಸವ ಮಹಾನುಭಾವನ ವಿಷಯದಲ್ಲಿದ್ದ ವೀರಶೈವರ ಕರ್ತವ್ಯವು ಪೂರ್ತಿಯಾಯಿತೆ? ವರುಷದಲ್ಲಿ ಒಂದು ದಿನ ಆ ಬಸವ ಮಹಾತ್ಮನ ಭಾವಚಿತ್ರವನ್ನು ಮೆರೆಯಿಸಿ ಆತನನ್ನು ಕೊಂಡಾಡಿ ಲೇಖನ ಭಾಷಣಗಳಿಂದ ಆತನ ತತ್ವಗಳ ಮಹತ್ವವನ್ನು ಹೊಗಳಿದ ಮಾತ್ರದಲ್ಲಿ ಸಮಾಜದ ಉದ್ಧಾರವಾಗುವುದೇ?

ಇಂತಹ ಕಲ್ಯಾಣಕರವಾದ ಕಾರ್ಯಗಳಲ್ಲಿ ವರುಷದ ಒಂದು ದಿನವನ್ನಾದರೂ ಕಳೆಯದಿರುವುದಕ್ಕಿಂತ ಇದು ಎಷ್ಟೋ ಮೇಲು. ಆದರೆ ಇಷ್ಟರಿಂದಲೇ ಜಯಂತಿಯ ಉದ್ದೇಶ ಸಾರ್ಥಕವಾಯಿತೆಂತಲೂ ಬಸವೇಶನ ಋಣದಿಂದ ನಾವು ಮುಕ್ತರಾದೆವೆಂತಲೂ ತಿಳಿಯುವುದು ಮಾತ್ರ ತಪ್ಪು. ಆ ಬಸವ ಮಹಾತ್ಮನು ಮಾಡಿರುವ ಪರ್ವತಪ್ರಾಯವಾದ ಲೋಕೋಪಕಾರವನ್ನು ಲಕ್ಷಿಸಿ ನಮ್ಮ ಉದ್ಧಾರದ ಮೂಲಕ ಆತನ ಋಣದಿಂದ ಮುಕ್ತರಾಗಬೇಕಾದರೆ ನಾವು ಮಾಡಬೇಕಾಗಿರುವ ಕಾರ್ಯಗಳು ಅನೇಕವಾಗಿವೆ. ಅವುಗಳನ್ನು ಮಾಡಿದ ವಿನಾ ಇಂಥ ಒಂದು ದಿನದ ಉತ್ಸವವೇನೂ ಜನಾಂಗವನ್ನು ಉದ್ಧಾರ ಮಾಡಲಾರದು.

ಜಯಂತಿಯ ದಿನ ಬಸವೇಶನು ನಮ್ಮ ಕಣ್ಣಮುಂದಿರುವಂತೆ ನಿತ್ಯದಲ್ಲು ಇರಬೇಕು. ಆ ದಿನ ಆತನ ದಿವ್ಯ ತತ್ವಗಳು ನಮಗೆ ತೋರುತ್ತಿದ್ದಂತೆ ನಿತ್ಯದಲ್ಲೂ ಕೇಳಿಸಬೇಕು. ಇಷ್ಟೇ ಅಲ್ಲ; ಆ ಮಹಾತ್ಮನು ಬೋಧಿಸಿರುವ ಮಹಾ ತತ್ವಗಳನ್ನು ನಮ್ಮ ಆಚರಣೆಯಲ್ಲಿ ತರಲು ನಾವು ಪ್ರತಿನಿತ್ಯ ಪ್ರಯತ್ನಿಸಬೇಕು. ಹೀಗೆ ಬಸವೇಶನ ಸಂಬಂಧವಾಗಿ ನಾವು ಪ್ರತಿನಿತ್ಯ ಯೋಚಿಸಿ ಆತನ ಉಪದೇಶಗಳಂತೆ ನಡೆದು ನಮ್ಮ ಸ್ವಾಪಂಚಿಕ ಮತ್ತು ಪಾರಮಾರ್ಥಿಕ ಉನ್ನತಿಗಳನ್ನು ಸಾಧಿಸಿಕೊಳ್ಳಲು ಈ ಬಸವ ಜಯಂತಿಯು ಮಾರ್ಗದರ್ಶಿಯಾಗಿಲ್ಲವೆ?

ಆದಕಾರಣ ಬಸವ ಜಯಂತ್ಯುತ್ಸವವನ್ನು ಮಾಡಿದ ಮಹಾಶಯರು ಮುಂದೆ ತಾವು ಮಾಡಬೇಕಾದುದನ್ನು ಈಗ ಮಾಡಲು ಪಕ್ರಮಿಸುವುದು ಯುಕ್ತವಲ್ಲವೆ? ಬಸವ ಜಯಂತ್ಯುತ್ಸವವು ಜರುಗಿದ ಸ್ಥಳಗಳಲ್ಲೆಲ್ಲಾ **ಶಿವಾನುಭವ ಮಂಟಪ** ಸ್ಥಾಪನೆಯಾಗಬೇಕಾದುದೇ ಈಗ ಮಾಡುವ ಮೊದಲನೆಯ ಕಾರ್ಯವು. ಶಿವಾನುಭವ ಮಂಟಪದ ಫಲ ಪ್ರಯೋಜನಗಳನ್ನು ನಾವು ಅನೇಕ ಸಾರಿ ವಿವರಿಸಿದ್ದೇವಷ್ಟೆ. ಆ ವಿಷಯದಲ್ಲಿ ಬಸವ ಜಯಂತ್ಯುತ್ಸವವನ್ನು ಮಾಡುವವರಾದರೂ ಲಕ್ಷಿಸಿ ಆಚರಣೆಯಲ್ಲಿ ತರದಿದ್ದುದು ವಿಷಾದಸಂಗತಿಯು.

ವೀರಶೈವ ಮತತತ್ವಗಳು ತಿಳಿಯಲಿಕ್ಕೂ ಪ್ರಸಾರವಾಗಲಿಕ್ಕೂ ಶಿವಾನುಭವ ಮಂಟಪವನ್ನು ಆ ಬಸವೇಶನೇ ಸ್ಥಾಪಿಸಿದ್ದನು. ಆತನು ತಾನಿರುವಾಗಲೇ ಈ ಸಂಸ್ಥೆಯನ್ನು ಸ್ಥಾಪಿಸಿರುವಾಗ ಈಗ ಅವುಗಳ ಅಗತ್ಯವೆಷ್ಟಿದೆಯೆಂಬುದನ್ನು ವಿವರಿಸಿ ಹೇಳಬೇಕಾದುದಿಲ್ಲ.

ಶಿವಾನುಭವ ಮಂಟಪಗಳು ವಿಫಲ್ಯಟ್ಟು ಎಲ್ಲಿಯವರೆಗೆ ಬಸವಾದಿ ಪ್ರಮಥರ ವಚನಗಳ ಮರ್ಮವು ತಿಳಿಯುವುದಿಲ್ಲವೋ ಅಲ್ಲಿಯವರೆಗೂ ವೀರಶೈವರ ನಿಜಾಚರಣೆಗಳು ಬಳಕೆಯಲ್ಲಿ ಬರುವುದು ಸಾಧ್ಯವಿಲ್ಲ.

ವೀರಶೈವರಿಗೆ ಗುಡಿಗುಂಡಾರಗಳ ಗೋಜಿಲ್ಲ. ಕಂಡಕಂಡ ದೇವರುಗಳಿಗೆ ಕೈಮುಗಿಯಲು ಅಲೆದಾಡಬೇಕಾಗಿಲ್ಲ. ಮಹಮ್ಮದೀಯರಿಗೆ ಹೇಗೆ ಮಸೀದಿಗಳೋ, ಕ್ರೈಸ್ತರಿಗೆ ಹೇಗೆ ಚರ್ಚ್‌ಗಳೋ ಹಾಗೆಯೇ ವೀರಶೈವರಿಗೆ ಶಿವಾನುಭವ ಮಂಟಪಗಳು. ಮಸೀದಿ ಮತ್ತು ಚರ್ಚ್ ಇವು ಹೇಗೆ ಆಯಾಯ ಸಮಾಜಗಳ ಜೀವಾಳವೋ ಹಾಗೆಯೇ ವೀರಶೈವರಿಗೆ ಶಿವಾನುಭವ ಮಂಟಪವೇ ಜೀವಾಳ. ಇವು ಲೋಪವಾದುದರಿಂದಲೇ ವೀರಶೈವ ಸಮಾಜವು ಶಿಥಿಲವಾಗಿ ತನ್ನ ಶಕ್ತಿಯನ್ನು ಕಳೆದುಕೊಂಡಿದೆ.

ಮಠಗಳು ಶಿವಾನುಭವ ಮಂಟಪಗಳಾಗಿಯೇ ಇದ್ದವು. ಬಸವಾದಿ ಪ್ರಮಥರ ವಚನ ಪ್ರವಚನಗಳು ಜರುಗಲೆಂಬುದೇ ಮಠ ಸ್ಥಾಪನೆಯ ಉದ್ದೇಶದಲ್ಲಿ ಮುಖ್ಯವಾಗಿದ್ದಿತು. ಅನೇಕ ಪೂಜ್ಯರು ಹಾಗೆ ಮಠಗಳಲ್ಲಿ ಶಿವಾನುಭವವನ್ನು ಹಿಂದಕ್ಕೆ ನಡೆಸುತ್ತಲೂ ಇದ್ದರು. ಅಂತಹ ಶ್ರೇಯಸ್ಕರವಾದ ಪದ್ಧತಿಯು ಇತ್ತೀಚೆಗೆ ಲೋಪವಾಯಿತು.

ಅಸಂಖ್ಯ ಮಠಗಳು ಮನೆಗೆಳಾಗಿ ಪರಿಣಮಿಸಿದವು. ಅವು ಅಲ್ಲಿರುವವರ ಸ್ವಂತ ಸೊತ್ತುಗಳಾದವು. ಗೃಹಸ್ಥರಿಗಿಂತಲೂ ಅವರು ಹೆಚ್ಚಾದ ಪ್ರಾಪಂಚಿಕ ತೊಡಕುಗಳಿಗೆ ಸಿಕ್ಕಿಕೊಂಡರು' ಎಂದಮೇಲೆ ಶಿವಾನುಭವವು ಅಲ್ಲೆಲ್ಲಿ? ಈ ದುರವಸ್ಥೆ ನಿವಾರಣೆಯಾಗಬೇಕು. ಇಲ್ಲವೆ ಅಂತಹ ಅನುಚಿತವಾದ ರೀತಿಯಲ್ಲಿರುವ ಮಠಗಳು ಸಮಾಜದವರ ಅಧೀನವಾಗಬೇಕು. ಇಂತಹ ಪುಣ್ಯಕಾಲ ಮುಂದೆ ಬಂದೇ ಬರುವದು.

ಆ ವರೆಗೆ ಜನಾಂಗವು ತಟಸ್ಥನಾಗಿರಬೇಕೆ? ಯಾವ ಸ್ಥಳದ ಮಠವು ಶಿವಾನುಭವ ಗೋಷ್ಠಿಗೆ ಅನುಕೂಲವಾಗಿಲ್ಲವೋ ಆ ಸ್ಥಳದವರು ಬೇರೊಂದು ಸ್ಥಳವನ್ನೇರ್ಪಡಿಸಿಕೊಳ್ಳಬೇಕು. ವಾರದಲ್ಲಿ ಒಂದು ದಿನವಾದರೂ ಅಲ್ಲಿ ಸೇರಿ ಬಸವಾದಿ ಪ್ರಮಥರ ವಚನ ಪ್ರವಚನ ಮತ್ತು ಚರ್ಚೆಗಳನ್ನು ನಡೆಯಿಸಿ ಮತದ ಉದಾತ್ತ ತತ್ವಗಳನ್ನು ತಿಳಿದುಕೊಳ್ಳಬೇಕು.

ಬಸವ ಜಯಂತ್ಯುತ್ಸವವನ್ನು ಮಾಡಿದ ಸ್ಥಳದವರು ಈ ಪ್ರಕಾರ ಈ ಸಾರೆಯಾದರೂ ಮಾಡುವರೆ? ವೀರಶೈವ ತತ್ವ ಪ್ರಚಾ

ರಕ ಸಂಘದ ಹೆಚ್ಚು ಸದಸ್ಯರುಳ್ಳ ಸ್ಥಳಗಳಿಗೆ ಈ ಮುಂಚೆಯೇ ಪ್ರತ್ಯೇಕವಾಗಿ ತಿಳಿಸಿದ್ದೇವೆ. ಅವರಾದರೂ ಈ ಮಹತ್ಕಾರ್ಯಕ್ಕೆ ಮುಂದಾಗುವರೇ?

ಬಾಳೇಹಳ್ಳಿ ಶ್ರೀಗಳ ಸಲ್ಲದ ರೀತಿ.

ವೀರಶೈವ ಸಮಾಜಕ್ಕೆ ಒಂದು ಮುಖ್ಯವಾದ ಗುರುಪೀಠದ ಮೇಲಿರುವ ಈಗಿನ ಬಾಳೇಹಳ್ಳಿ ಶ್ರೀಗಳವರು ತಮ್ಮ ಮೇಲಿರುವ ಮಹತ್ವವಾದ ಹೊಣೆಗಾರಿಕೆಯನ್ನು ಲಕ್ಷಿಸಿ ಅದಕ್ಕೆ ಸಲ್ಲುವ ರೀತಿಯಲ್ಲಿ ತಮ್ಮ ವಿಷಯವಾಗಿ ಸಮಾಜದಲ್ಲುಂಟಾದ ಅಭಿಪ್ರಾಯದ ಸತ್ಯಾಸತ್ಯತೆಗಳನ್ನು ಈಗಲು ಕೂಡಾ ಪ್ರಕಟಿಸದಿದ್ದುದು ಅತ್ಯಂತ ವಿಷಾದಕರವಾದುದು.

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರ ಮನೆಯಲ್ಲಿ ಅವರ ಹತ್ತಿರ ಹೀಗೆ ಹೇಳಿದರೆಂದು ಒಬ್ಬರು ಪ್ರಕಟಿಸುತ್ತಾರೆ. ಶ್ರೀ. ಪುಟ್ಟ ಸ್ವಾಮಿಯವರ ಹತ್ತಿರ ಹೀಗೆ ಹೇಳಿದರೆಂದು ಪ್ರಕಟವಾದುದು ಇದೇ ಸಂಚಿಕೆಯಲ್ಲಿ ಬೇರೊಂದು ಕಡೆಗಿದೆ. ಹೀಗೆ ಶ್ರೀಗಳು ಅನ್ಯರ ಮುಖದಿಂದ ಮಾತನಾಡುವುದು ಅವರ ಮೇಲಿರುವ ಗುರುತ್ವದ ಹೊಣೆಗಾರಿಕೆಗೆ ಸರ್ವಥಾ ಸಲ್ಲತಕ್ಕುದಲ್ಲ.

ಹೀಗೇಕೆ ಮಾಡುವರೋ ತಿಳಿಯದು. ಇದರಿಂದ ಇವರ ವಿಷಯದಲ್ಲಿರುವ ಜನಗಳ ಸಂದೇಹವು ದೃಢಪಡುವುದಿಲ್ಲವೆ? ಬಸವಾದಿ ಪ್ರಮಥರು ಬೋಧಿಸಿರುವ ವೀರಶೈವ ಮತತತ್ವಗಳು ತಮಗೆ ಮಾನ್ಯವಿಲ್ಲದಿದ್ದರೆ ಹಾಗೆ ತಾವೇಕೆ ಅಧಿಕಾರಯುಕ್ತ ವಾಣಿಯಿಂದ ಪ್ರಕಟಿಸಬಾರದು? ಬಸವ, ಚೆನ್ನಬಸವ, ಅಲ್ಲಮಾದಿ ಪ್ರಮಥರು ತಮಗೆ ಪೂಜ್ಯರಲ್ಲವೆ? ಹಾಗಿದ್ದರೆ ಅದನ್ನು ಸ್ಪಷ್ಟವಾಗಿ ಏಕೆ ಪ್ರಕಟಿಸಬಾರದು?

ತಮ್ಮ ಪೂರ್ವದ ಗುರುಗಳೆಲ್ಲಾ ಈ ವಿಷಯವಾಗಿ ನಡೆದುಕೊಂಡು ಬಂದ ರೀತಿನೀತಿಗಳು ತಮಗೆ ಮಾನ್ಯವಿಲ್ಲವೆ? ಹಾಗಿದ್ದರೆ ಧೈರ್ಯದಿಂದ ಏಕೆ ಆ ಹಿಂದಣ ಪದ್ಧತಿಗಳನ್ನು ಕಿತ್ತೊಗೆದಿದ್ದೇವೆಂದು ಪ್ರಕಟಿಸಬಾರದು? ಹೀಗೆ ಗುರು ಪರಂಪರೆಯನ್ನೂ ಧರ್ಮತತ್ವಗಳನ್ನೂ ಉಲ್ಲಂಘಿಸಿದ್ದಾದರೆ ಗುರುಪೀಠದಿಂದ ಕೆಳಗಿಳಿಯಬೇಕಾದೀತೆಂಬ ಭಯವೆ?

ಬಸವಾದಿ ಪ್ರಮಥರು ತಮಗೆ ಪೂಜ್ಯರು. ಮತ್ತು ಅವರು ಬೋಧಿಸಿದ ಮತತತ್ವಗಳು ತಮಗೆ ಮಾನ್ಯವು ಆಗಿದ್ದರೆ ಸ್ಪಷ್ಟವಾಗಿ ತಿಳಿಸಿ ಅಶೇಷ ವೀರಶೈವರಿಂದ ಯೋಗ್ಯವಾದ ಮನ್ನಣೆಗಳನ್ನು ಹೊಂದಿ ಅದೇಕೆ ಸಮಾಜೋನ್ನತಿಯ ಕಾರ್ಯದಲ್ಲಿ ತತ್ಪರರಾಗಬಾರದು? ಈ ಪ್ರಕಾರ ಎರಡೇ ಮಾರ್ಗಗಳಿವೆ. ಇವುಗಳಲ್ಲಿ ಯಾವುದನ್ನು ಶ್ರೀಗಳು ಅನುಸರಿಸುತ್ತಾರೆಂಬುದನ್ನೇ ಸಮಾಜವು ನಿರೀಕ್ಷಿಸುತ್ತಲಿದೆ. ಆದಕಾರಣ ಅನ್ಯರ ಬಾಯಿಯಿಂದ ಮಾತನಾಡುವುದನ್ನು ಇನ್ನಾದರೂ ಬಿಟ್ಟು ಸ್ಪಷ್ಟವಾಗಿ ತಾವೇ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದೇ ವಿಹಿತ. ಅದೇ ಗುರುಪೀಠದವರಿಗೆ ಸಲ್ಲುವ ರೀತಿ.

ಶ್ರೀಮಾನ್ ಪಾವಟಿ ಸಿದ್ಧರಾಮಪ್ಪನವರು ಹೊಡುವ ವ್ಯಾಜ್ಯಕ್ಕೆ ಜನಬಲ ಮತ್ತು ಧನಬಲ ದೊರೆಯುವುದರಲ್ಲಿ ಅಳ್ಯಂತರವೇ ಇಲ್ಲ. ಅದರ ಫಲಿತಾಂಶ ಹೇಗೇ ಆಗಲಿ. ಆ ಪ್ರಕಾರ ವ್ಯಾಜ್ಯವಾಗುವ ಪ್ರಸಂಗವನ್ನು ತಂದುಕೊಳ್ಳುವುದೇ ಅತ್ಯಂತ ದುಃಖಕರವಾದುದಲ್ಲವೆ? ತಮ್ಮ ಪ್ರತಿನಿಧಿಗಳಾದ ಅನೇಕ ಶ್ರೀ ಪಟ್ಟಾಧ್ಯಕ್ಷರೇ ಪ್ರಕಟಿಸುರುವುದನ್ನು ಶ್ರೀಗಳು ಲಕ್ಷಿಸಿಯಾದರೂ ಪೀಠಕ್ಕೂ ಸಮಾಜಕ್ಕೂ ಭೂಷಣಪ್ರದವಾದ ಪೂರ್ವಪದ್ಧತಿಗನುಸರಿಸಿಯೇ ತಮ್ಮ ಅಭಿಪ್ರಾಯವನ್ನು ಜಾಗ್ರತೆ ಪ್ರಕಟಿಸಿ ಮುಂದಣ ಅನರ್ಥಕ್ಕೆ ಅವಕಾಶವಾಗದಂತೆ ಮಾಡುವುದು ಅತ್ಯಾವಶ್ಯಕವಲ್ಲವೆ?

ಬಸವಣ್ಣನು ಪೂಜ್ಯನಲ್ಲ.

ರಂಭಾಪುರಿಗಳೊಡನೆ ಸಂಭಾಷಣೆ.

[ಬೆಂಗಳೂರು "ತಾಯಿನಾಡು" ಎಂಬ ಪತ್ರಿಕೆಯ ತಾ. ೪-೬-೩೪ನೆಯ ಸಂಚಿಕೆಯಿಂದ]

"ಶ್ರೀಮದ್ರಂಭಾಪುರೀ ಮಠದ ಶ್ರೀಗಳವರಿಂದ ಅಹ್ವಾನಿಕರಾಗಿದ್ದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರವರಾದ ಶ್ರೀ. ಬಿ. ಎಸ್ ಪುಟ್ಟ ಸ್ವಾಮಿಯವರು ನಿನ್ನೆ ದಿನ ಸಾಯಂಕಾಲ ೪ ಘಂಟೆಯಲ್ಲಿ ಎಡತೊರೆ ಸಾಹುಕಾರ್ ಬಿ. ಶಿದ್ಧಲಿಂಗ ಶೆಟ್ಟಿರು ಮತ್ತು ಕೆಲ ಪ್ರಮುಖ ವೀರಶೈವರೊಡನೆ ಶ್ರೀಗಳವರನ್ನು ಸಂದರ್ಶಿಸಿ ಸುಮಾರು ೧| ಘಂಟೆಯ ಕಾಲ ಸಂಭಾಷಿಸಿದರು. ಈ ಭೇಟಿಯಲ್ಲಿ ಮತಕ್ಕೆ ಸಮ್ಬಂಧಪಟ್ಟ ಅನೇಕ ವಿಷಯಗಳು ತಾತ್ವಿಕ, ಸಾಮಾಜಿಕ, ಐತಿಹಾಸಿಕ ದೃಷ್ಟಿಯಿಂದ ಚರ್ಚೆಯಾಗಿ, ಶ್ರೀಗಳವರು ಶ್ರೀ ಬಸವೇಶ್ವರನು ವೀರಶೈವ ಮತೋದ್ಧಾರಕನೆಂದೂ, ಮಹಾ ಮಹಿಮನೆಂದೂ, ನಿರ್ದೋಷಿಯೆಂದೂ ಅನೇಕ ಪವಾಡಗಳನ್ನು ಮಾಡಿ ಮೆರೆದವನೆಂದೂ, ಅವನಂತೆ, ತಾವೂ ಶ್ರೀ ಮುರಿಗಿ ಮಠದವರೂ ಅಲಿಂಗಿಗಳಿಗೆ ಲಿಂಗಧಾರಣ ಮಾಡುತ್ತಿರುವರೆಂದೂ ಒಪ್ಪಿಕೊಳ್ಳುವೆವಾದರೂ, ತಾವು ಮಾತ್ರ ಅವನನ್ನು ಪೂಜ್ಯನೆಂದು ಪುರಸ್ಕರಿಸುವುದಿಲ್ಲವೆಂದೂ ಘಂಟಾಘೋಷವಾಗಿ ಅಪ್ಪಣೆ ಕೊಡಿಸಿದರು. ಪ್ರಕೃತದಲ್ಲಿ ವೀರಶೈವ ಮತದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಸರ್ವ ಪ್ರಯತ್ನವನ್ನು ಮಾಡಬೇಕೆಂದು ಕುತೂಹಲಿಗಳಾಗಿ ಬಂದಿದ್ದ ಶ್ರೀ. ಪುಟ್ಟಸ್ವಾಮಿಯವರು ಸ್ವಾಮಿಗಳು ಸೂಚಿಸಿದ ಅಭಿಪ್ರಾಯದಿಂದ ಹತಾಶರಾಗಿ ಮೈಸೂರಿಗೆ ಹಿಂತಿರುಗುವವರಾಗಿರುತ್ತಾರೆ.

ಭಗವಂತನೇ ಭಕ್ತ ಪರಾಧೀನನಾಗಿಯೂ ಭಕ್ತ ವತ್ಸಲನಾಗಿಯೂ ಇದ್ದು ಬಾಣಾಸುರನಂಥ ರಾಕ್ಷಸನ ಮನೆಯ ಬಾಗಿಲು ಕಾಯಿದವನಾಗಿರುವಾಗ ಶ್ರೀಗಳವರು ಪರಮ ಭಕ್ತಾಗ್ರೇಸರನೂ, ಮತೋದ್ಧಾರಕನೂ, ಲೋಕವಂದ್ಯನಾದ ಭಕ್ತಿ ಭಂಡಾರಿ ಬಸವಣ್ಣನವರನ್ನು ಪೂಜ್ಯನೆಂದು ಪುರಸ್ಕರಿಸುವುದರಿಂದ ಶ್ರೀಗಳವರ ಗೌರವ ಸ್ಥಾನಕ್ಕೆ ಚ್ಯುತಿಯುಂಟಾಗುವುದಿಲ್ಲ. ಅದಕ್ಕೆ ಬದಲಾಗಿ ಅವರ ಯಶಸ್ಸೂ ಮಹಿಮೆಯೂ ಅಧಿಕವಾಗುತ್ತದೆ. ಎಂಬ ಅಂಶವನ್ನು ಶ್ರೀಗಳವರು ದೂರಾಲೋಚಿಸಿ ಶ್ರೀಗಳವರು "ಶ್ರೀ ಬಸವೇಶ್ವರನು ನಮ್ಮಿಂದಲೂ ಪೂಜಾರ್ಹನು" ಎಂಬುವದನ್ನು ಒಪ್ಪುವುದಾದರೆ ವೀರಶೈವ ಮಂಡಲಿಯ ಪ್ರತಿಯೊಬ್ಬ ವೀರಶೈವನೂ ತನ್ನ ತನುಮನ ಧನವನ್ನು ಗುರುಪೀಠಕ್ಕೆ ಸವೆಸಲು ಸಿದ್ಧನಿರುತ್ತಾನೆಂತಲೂ ಅಲ್ಲದೆ ಹೋದರೆ ತಿಷ್ಟಾಚಾರ ಸಂಪನ್ನನಾದ ವೀರಶೈವನು ಬಸವಾದಿ ಪ್ರಮಥರನ್ನು ಪೂಜ್ಯರಲ್ಲವೆಂದೂ ತಿರಸ್ಕರಿಸುವವರನ್ನು ಪುರಸ್ಕರಿಸಲಾಗದ ಕಾರಣ ಈಗ ಉಂಟಾಗಿರುವ ಅನೈಕಮತ್ಯವು ವೃದ್ಧಿಯಾಗಿ ಸಮಾಜದ ಮತ್ತು ಪೀಠದ ಕ್ಷೇಮಗಳಿಗೂ ಯಶಸ್ಸಿಗೂ ಹಾನಿಯುಂಟಾಗುವ ಸನ್ನಿವೇಶವು ಒದಗುವುದರಿಂದ ಬಹಳ ವಿಷಾದಕರವಾದ ಸಂಗತಿಯಾಗಿದೆ ಎಂದೂ ಶ್ರೀ ಪುಟ್ಟಸ್ವಾಮಿಯವರು ಅಭಿಪ್ರಾಯ ಪಡುತ್ತಾರೆ."

ಶ್ರೀಮಾನ್ ಪುಟ್ಟ ಸ್ವಾಮಿಯವರು ಈ ವಿಷಯವಾಗಿ ನಡೆದ ಸಂಗತಿಗಳನ್ನೆಲ್ಲಾ ತಾವೇ ಸವಿಸ್ತಾರ ಪ್ರಕಟಿಸಬೇಕಾಗಿ ಪ್ರಾರ್ಥನೆ.

[ಸಂಪಾದಕ.]

ವಿವಿಧ ವಿಷಯ.

ಹೆಣ್ಣು ಹುಣ್ಣಾಯಿತು!

ಮಹಮ್ಮದ ಸುಲ್ತಾನನೆಂಬ ಹೆಸರಿನ ಮುಸಲ್ಮಾನನೊಬ್ಬನು ಫಸಿ ಎಂಬವಳನ್ನು ಲಗ್ನವಾಗಬೇಕೆಂದು ಪ್ರೀತಿಸುತ್ತಿದ್ದನು. ದೈವ ವಶಾತ್ ಅವಳು ಮತ್ತೊಬ್ಬನನ್ನು ಲಗ್ನವಾದಳು. ಇದನ್ನು ಕಂಡು ಅವನು ಅವಳನ್ನು ಶರಲಿಕ್ಕೆಂದು ಅವಳು ವಾಸಿಸುವ ಮನೆಯನ್ನು ಮಧ್ಯರಾತ್ರಿಯಲ್ಲಿ ಸೇರಿದನು; ಮತ್ತು ಮಲಗಿಕೊಂಡವಳನ್ನು ಹೊತ್ತುಕೊಂಡನು. ಅಷ್ಟರಲ್ಲಿ ಅವಳು ಗಾಬರಿಯಾಗಿ ಚೀರಲು ಅವಳ ತಾಯಿತಂದೆಗಳಿಗೆ ಎಚ್ಚರವಾಗಲು ಅವರಿಗೆ ಕೋಲಿನ ಬಿದರಿಕೆ ಹಾಕಿ ಎತ್ತಿಕೊಂಡು ನಡೆದನು. ಪೋಲೀಸರು ಅವನನ್ನು ಬೆನ್ನಟ್ಟಲು ಅವನು ಅವರಿಗೆ ಸಿಗದೆ ಪಾರಾದನು. ಆದರೆ ೩೬ ಗಂಟೆಗಳ ನಂತರ ಪೋಲೀಸರು ಅವನನ್ನು ಹಿಡಿದರು. ಮತ್ತು ನ್ಯಾಯಾಧೀಶರ ಮುಂದೆ ನಿಲ್ಲಿಸಿದರು. ಅವನು ತನ್ನ ಹೇಳಿಕೆಯಲ್ಲಿ ಫಸಿ ಇವಳು ನಿಜವಾಗಿಯೇ ತನ್ನ ಲಗ್ನದ ಹೆಂಡತಿಯಿರುವಳೆಂದೂ ಆ ಕಾರಣದಿಂದಲೇ ನನ್ನ ತಂಗಿಯನ್ನು ಫಸಿಯ ಅಣ್ಣನಿಗೆ ಲಗ್ನ ಮಾಡಿಕೊಟ್ಟಿದ್ದಿತೆಂತಲೂ ವಾದಿಸಿದನು. ತನ್ನ ಹೇಳಿಕೆಯನ್ನು ಸಮರ್ಥಿಸಲಿಕ್ಕೆ ಅವನು ಸಾಕ್ಷಿದಾರರನ್ನು ಸಹ ತಂದಿದ್ದನು. ಕಡೆಗೆ ಅವನ ಹೇಳಿಕೆಯು ಸುಳ್ಳಾಗಿ ನ್ಯಾಯಾಧೀಶರು ಅವನಿಗೆ ೩ ವರ್ಷದ ಶಿಕ್ಷೆ ವಿಧಿಸಿದರು. ಮನಸ್ಸಿಗೆ ಬಂದ ಹೆಣ್ಣು ಮೈಗೆ ಹುಣ್ಣಾಯಿತು. ನಗೆಯು ಹೊಗೆಯಾಯಿತು.

ಪ್ರಸಿದ್ಧ ಬೇಟೆಗಾರ.

ಹೈದರಾಬಾದ ಸಂಸ್ಥಾನದ ನಲಗುಂಡಾ ಜಿಲ್ಲೆಯಲ್ಲಿಯ ಕೋಠಾಪಲ್ಲಿ ಎಂಬಲ್ಲಿ ಮುಮತಾಝ್ ಅಲಿ ಎಂಬ ೨೫ ವರ್ಷ ವಯಸ್ಸಿನ ಲಷ್ಕರದ ಕ್ಯಾಪ್ಟನ್ನನು ಒಬ್ಬನೇ ಬೇಟೆಯಾಡುತ್ತ ಒಂದು ಹುಲಿಯ ಗವಿಯನ್ನು ಕಂಡು ಗುಂಡು ಹಾರಿಸಿದನು. ಹುಲಿಯು ಕೆರಳಿ ಹೊರಗೆ ಬಂದಿತು. ಆಲ್ಲಿಯ ಒಂದು ದೊಡ್ಡ ಬಂಡೆಗಲ್ಲಿನ ಮರೆಗೆ ನಿಲ್ಲಲು ಗಾಯ ಹೊಂದಿದ ಆ ಹುಲಿಯು ಬಂಡೆ ಗಲ್ಲಿನ ಮೇಲೆ ಹಾರಿಬಂದು ಸಂಜರದಿಂದ ಅಲಿಯ ತಲೆಗೆ ಬಡಿಯ ಹತ್ತಿತು. ಸುದೈವದಿಂದ ಅಲಿಯ ಟೊಪ್ಪಿಗೆಯು ಅವನ ತಲೆಯನ್ನು ಸಂರಕ್ಷಿಸಿತು, ಅವನು ಬಂದೂಕಿನ ಕೊಳವೆಯನ್ನು ಹುಲಿಯ ಬಾಯಿಯೊಳಗೆ ತುರುಕಿ ಗುಂಡು ಹಾರಿಸಿದನು. ಆದು ಹುಲಿಯ ದವಡೆಯೊಳಗಿಂದ ಪಾರಾಯಿತು. ಹುಲಿಯು ಬಂದೂಕವನ್ನು ಕಸಿದು ಒಗೆದು ಅಲಿಗೆ ತೆಕ್ಕೆಬಿದ್ದಿತು. ಅವನು ಕಸುವಿನಿಂದ ಹುಲಿಯನ್ನು ಬಂಡೆಗಲ್ಲಿನ ಮೇಲಿಂದ ದೂಡಿದನು. ಆದರೆ ಪಾಪ ಅವನೂ ಮುಂಜೋಲಿಯಾಗಿ ಬಂಡೆಗಲ್ಲಿನ ಕೆಳಗೆ ಹುಲಿಯ ಮೇಲೆಯೇ ಬಿದ್ದನು. ಅವನ ಎಡಗೈಯು ಹುಲಿಯ ಬಾಯೊಳಗೆ ಬಿದ್ದುದರಿಂದ ಅದನ್ನು ಕಚ್ಚಿ ಛಿದ್ರಿತವಾಗಿ ಮಾಡಿತು. ಪುನಃ ಕುಸ್ತಿಗೆ ಪ್ರಾರಂಭವಾಯಿತು. ಅಲಿಯು ಬಲಗೈಯಿಂದ ಹುಲಿಯ ಕುತ್ತಿಗೆಗೆ ಉರ್ಲು ಹಾಕಿ ಎಡಗೈಯನ್ನು ಹಿರಕೊಂಡನು. ಆ ಕೈಯೊಳಗಿನ ರಕ್ತವೆಲ್ಲ ಸೋರಿ ಹೋದದ್ದರಿಂದ ಅವನಿಗೆ ಆದರಿಂದ ಟೊಂಕದೊಳಗಿನ ಕತಾರಿಯನ್ನು ಹಿರಿಯುವದಾಗಲಿಲ್ಲ. ಇಷ್ಟರಲ್ಲಿ ಹುಲಿಯೂ ನಿಃಶಕ್ತವಾಗಿತ್ತು. ಆ ಮೇಲೆ ಅವನು ಕಸುವಿನಿಂದ ಹುಲಿಯನ್ನು ಮುಂದೂಡಿ ಹಿಂದಕ್ಕೆ ತನ್ನ ಬಂದೂಕಿನ ಕಡೆಗೆ ಓಡಿದನು. ಹುಲಿಯು ಸಾವರಿಸಿ ಎದ್ದು ಅವನ ಮೇಲೆ ಹಾರುವಷ್ಟರಲ್ಲಿಯೇ ಎದೆಗೆ ಗುಂಡುಬಡಿದು ಸತ್ತು ಬಿದ್ದಿತು. ಅವನು ಕೊಂದ ಹುಲಿಯು ೭ ಫೂಟು ೪ ಇಂಚು ಇದ್ದಿತು. ಅಷ್ಟರಲ್ಲಿ ಅವನ ಮಿತ್ರರು ಬಂದು ಹೈದರಾಬಾದದ ಆಸ್ಪತ್ರಿಗೆ ಸಾಗಿಸಿದರು. ಈತನ ಗಟ್ಟಿಗ ತನಕ್ಕೆ ಎಣೆಯುಂಟೆ?

ಮೌ. ಶೌಕತ ಅಲ್ಲಿಯವರ ಧರ್ಮ ಬಾಂಧವ್ಯ.

ಮೌ. ಶೌಕತ ಅಲ್ಲಿಯವರು ಕಟ್ಟಿನ ಮುಸಲ್ಮಾನರೆಂಬುದು ಎಲ್ಲರಿಗೂ ವಿದಿತವಾದ ವಿಷಯವಾಗಿದೆ. ಆದರೆ ಇವರ ಧರ್ಮಾಭಿಮಾನಕ್ಕೆ ಅನುರೂಪವಾದ ಧರ್ಮಬಾಂಧವ್ಯವೂ ಇದೆ. ಮುಸಲ್ಮಾನರ ಹಿತಾರ್ಥವಾಗಿ ಬೇಕಾದ ಸ್ವಾರ್ಥತ್ಯಾಗವನ್ನೂ ಮಾಡಬಲ್ಲರು. ಮತ್ತು ಮುಸಲ್ಮಾನರನ್ನೆಲ್ಲ ಸ್ವಂತ ಅಣ್ಣತಮ್ಮಂದಿರಂತೆ ಕಾಣುತ್ತಾರೆ. ಉದಾಹರಣಾರ್ಥವಾಗಿ ಮೊನ್ನೆಮೊನ್ನೆ ಅವರು ದಕ್ಷಿಣ ಹಿಂದುಸ್ಥಾನದಲ್ಲಿ ಪ್ರವಾಸ ಮಾಡುತ್ತಿರುವಾಗ್ಗೆ ಮದುರೆಯ ಮುಸಲ್ಮಾನರು ಅವರನ್ನು ಬರಮಾಡಿಕೊಂಡರು. ಆ ಕಾಲಕ್ಕೆ ಅವರು ತಮ್ಮ ಅಂಜುಮನ್ ಸಂಸ್ಥೆಯವರು ೪-೫ ಸಾವಿರ ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡಿರುವೆನೆಂದು ಹೇಳಿದರು, ಮತ್ತು ಶೌಕತ ಅಲ್ಲಿಯವರ ಮುಂದೆಯೇ ಒಬ್ಬ ಹಿಂದುವಿಗೆ ಮುಸಲ್ಮಾನನ್ನಾಗಿ ಮಾಡಿದರು. ಈತನಿಗೆ ಮೌಲಾನರು ತನ್ನ ಅತ್ಯಂತ ಪ್ರೀತಿಯ ಬಂಧುವಾದ ಮಹಮ್ಮದ ಅಲ್ಲಿಯವರ ಹೆಸರನ್ನಿಟ್ಟರು. ಮತ್ತು ಅವನನ್ನು ತಮ್ಮ ಬಂಧುವಿನಂತೆ ಕಂಡರು. ಬರುವ ಅಸೆಂಬ್ಲಿಯ ಆಯ್ಕೆಗೆ ಶೌಕತ ಅಲ್ಲಿಯವರನ್ನು ನಿಲ್ಲಿಸಬೇಕೆಂದು ಮುಸಲ್ಮಾನರು ಸಂಕಲ್ಪಿಸಿದ್ದರು. ಆದಕ್ಕೆ ಶೌಕತ ಅಲ್ಲಿಯವರು— ಸರ್. ಮಹಮ್ಮದ್ ಯಾಕೂಬರವರು ಆಯ್ಕೆಗೆ ಸಿದ್ಧರಾಗಿ ನಿಂತಿದ್ದಾರೆ. ಅವರ ಪ್ರತಿಸ್ಪರ್ಧಿಯಾಗಿ ನಾನು ನಿಲ್ಲಲಾರೆನು ಎಂದು ಹೇಳಿದರು.

ಹಿಂದುಗಳು ಮೌಲಾನರ ವರ್ತನದಿಂದ ತಮ್ಮ ಧರ್ಮಬಾಂಧವ್ಯವನ್ನು ಅರಿತುಕೊಳ್ಳುವರೇ? ಎಲ್ಲಿಯವರೆಗೆ ಮನುಷ್ಯನು ತನ್ನ ಧರ್ಮ ಬಾಂಧವರನ್ನು ಪರಮಬಂಧುಗಳೆಂದು ತಿಳಿಯುತ್ತಾನೆಯೋ ಮತ್ತು ಅವರ ಸಲುವಾಗಿ ಬೇಕಾದುದನ್ನು ತ್ಯಾಗ ಮಾಡಲು ಸಿದ್ಧನಾಗುತ್ತಾನೆಯೋ ಅಲ್ಲಿಯವರೆಗೆ ಅವನು ಆ ಧರ್ಮದವರಿಗೆ ಪೂಜ್ಯನಾಗುವದರಲ್ಲಿ ಆಶ್ಚರ್ಯವೇನು?

ಕರಾಚಿಯಲ್ಲಿ ಬಾಲಾ ಜರಠ ವಿವಾಹ.

ಕರಾಚಿಯಲ್ಲಿ ನಸರಪುರಿ ಹಿಂದು ಜಾತಿಯಲ್ಲಿ ಒಬ್ಬ ೬೦ ವರುಷ ವಯಸ್ಸಿನ ಮುದುಕನಿಗೆ ೧೨ ವರುಷ ವಯಸ್ಸಿನ ಬಾಲಿಕೆಯನ್ನು ಕೊಟ್ಟು ಲಗ್ನಮಾಡಲಾಯಿತು, ವಧುವಿನ ತಂದೆಯು ಈ ಲಗ್ನಕ್ಕೆ ವಿರೋಧಿಸಿದನು. ಆದರೆ ತಾಯಿಗದು ಸಮ್ಮತವಿದ್ದುದರಿಂದ ತಂದೆಯ ವಿರೋಧವನ್ನು ಲೆಕ್ಕಿಸದೆ ಲಗ್ನವು ನಡೆಯಿತು. ವರನು ಕುದುರೆಯ ಮೇಲೆ ಕುಳಿತುಕೊಂಡು ತನ್ನ ಮನೆಯ ಕಡೆಗೆ ಬರುತ್ತಿರುವುದನ್ನು ನೋಡಿ ಸಂತಾಪದಿಂದ ವಧೂವಿನ ತಂದೆಯು ಕೋಲು ತೆಗೆದುಕೊಂಡು ಭಾವೀ ಅಳಿಯನ ಮೇಲೆ ಏರಿಹೋದನು. ಅವ್ವಾಗ್ಗೆ ಮೆರವಣಿಗೆಯೊಳಗಿನ ಜನರು ಅವನನ್ನು ಹಿಡಿದುಕೊಂಡು ಅವನ ಹೆಂಡತಿಯ ಹೇಳಿಕೆಯಂತೆ ಅವನನ್ನು ಒಂದು ಕೋಣೆಯಲ್ಲಿ ಹಿಡಿದು ಹಾಕಿ ಲಗ್ನವನ್ನು ಸಾಗಿಸಿದರು. ಲಗ್ನವಿಧಿಯು ಪೂರ್ತಿಸಿದ ಮೇಲೆ ಅವನನ್ನು ಹೊರಗೆ ಬಿಟ್ಟರು. ಹೇಗಿದೆ ಹಿಂದು ಸಮಾಜ?

—ಕೊಲ್ಲಾಪುರದಲ್ಲಿ ವ್ಹಿಕ್ಟೋರಿಯಾ ಮರಾಠಾ ಬೋರ್ಡಿಂಗದ ಹತ್ತಿರ ಒಬ್ಬ ಮನುಷ್ಯನ ಅಮಾನುಷ ಕೊಲೆಯಾಗಿದೆ. ಕೊಲೆಗಡಕರು ಅವನ ಕಣ್ಣುಗಳನ್ನು ಕಿತ್ತು ಮೂಗು ಕೊಯ್ದಿದ್ದಾರೆ.

ಸಮಾಚಾರ ಸಂಗ್ರಹ.

—ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಲಿಲ್ಲವೆಂದು ಮುಂಬಯಿಯಲ್ಲಿ ಒಬ್ಬ ಇರಾಣಿ ವಿದ್ಯಾರ್ಥಿಯು ಆಟ್ಟಿಪ ಮೇಲಿಂದ ಹಾರಿ ಆತ್ಮಹತ್ಯ ಮಾಡಿಕೊಂಡನು.

—ಬಾಬು ರಾಜೇಂದ್ರ ಪ್ರಸಾದರ ಅಣ್ಣಂದಿರಾದ ಬಾಬು ಮಹೇಂದ್ರಪ್ರಸಾದರವರು ನಿಧನ ಹೊಂದಿದರು. ಇವರು ಸ್ಟೇಟ್ ಕೌನ್ಸಿಲಿನ ಮುಂದಾಳುಗಳೂ ರಾಷ್ಟ್ರಭಕ್ತರೂ ಆಗಿದ್ದರು.

—ಮುಂಬಯಿ ಗವ್ಹರ್ನರರ ಪತ್ನಿಯವರ ಕಳವಾಗಿ ಹೋದ ಕಂಠಾಭರಣವು ಸಿಕ್ಕಿತು. ಇದನ್ನು ಕಳವು ಮಾಡಿದ ಜಾರ್ತೋ ಲೋಮನೆಂಬವನು ಆ ಆಭರಣದ ವಜ್ರಗಳನ್ನು ಮದ್ರಾಸಿನ ವರ್ತಕರಿಗೆ ಮಾರಿದ್ದನಂತೆ.

—ಮಹಾತ್ಮಾಜಿಯವರು ಸ್ರೀಮ್ಮತಿ ಲೀಲಾ ಬಾಯಿ ಠಾಕರಸಿ ಯವರಿಗೆ ಒಂದು ಪತ್ರ ಬರೆದು ಪುಣೆಗೆ ಬಂದಾಗ್ಗೆ ಅವರ ಪರ್ಣ ಕುಟಿಯಲ್ಲಿಯೇ ಇಳಿಯುವ ಇಚ್ಛೆಯನ್ನು ನಿವೇದಿಸಿದ್ದಾರೆ.

—ಬೆಂಗಳೂರಿನಲ್ಲಿ ಅಬ್ದುಲ್ಲಾ ಎಂಬವನು ಫೌಂಟನ್‌ಪೆನ್ ಕದ್ದದ್ದರಿಂದ ಅವನಿಗೆ ನಗರ ನ್ಯಾಯಾಧೀಶರು ೯ ತಿಂಗಳ ಶಿಕ್ಷೆ ವಿಧಿಸಿದರು.

—ಕುರುನೇಗಲ ಜಿಲ್ಲಾ ನ್ಯಾಯಸ್ಥಾನದಲ್ಲಿ ಪ್ರತಿವಾದಿಯು ತನ್ನೆಯ ಹೆಸರು ಲಚಿಮಿ ಎಂದಿರುವುದೆಂದೂ ಸೀದೇವಿ ಎಂದಲ್ಲ ನೆಂದೂ ವಾದಿಯು ವಾದಿಸಿದನು. ಆನೆಯನ್ನು ಕೋರ್ಟಿಗೆ ತರಲು ಪ್ರತಿವಾದಿಯು ಸೀದೇವಿ ಎಂದು ಕರೆಯಲು ಆನೆಯು ಓಡುತ್ತ ಕೋರ್ಟಿನಲ್ಲಿ ಬಂದು ತನ್ನ ಯಜಮಾನನ ಹೆಗಲ ಮೇಲೆ ಕೊಂಡಿಯನ್ನಿಟ್ಟು ನಿಂತಿತು. ಹೀಗೆ ಆನೆಯು ಸಾಕ್ಷೀ ಹೇಳಿ ದೋಷಮುಕ್ತ ಮಾಡಿತು.

—ಬೆಂಗಳೂರಿನ ಲಾಲಬಾಗದಲ್ಲಿ ಸುಮಾರು ೨೦೦ ನಾಯಿ ಗಳ ಪ್ರದರ್ಶನವು ನಡೆಯಿತು. ಇದರಲ್ಲಿ ಆಸ್ಟ್ರೇಲಿಯನ್, ಇಂಗ್ಲಿಶ್, ಬುಲ್‌ಡಾಗ್, ಜೂಲು ನಾಯಿ ಮೊದಲಾದವುಗಳೆಲ್ಲವು ಇದ್ದವು.

—ಸ್ಪೇನದಲ್ಲಿ ನಾಲ್ಕು ಹುಡುಗರು ಒಬ್ಬರಿಗೊಬ್ಬರು ಅಚ್ಚಳಿ ಯದೆ ಹೋಲುತ್ತಾರೆ. ಶಾಲೆಯ ಮಾಸ್ತರರಿಗೆ ಅವರಲ್ಲಿ ಯಾರು ಯಾವ ಹೆಸರಿನವರು ಎಂಬ ಗುರುತೇ ಹತ್ತುವದಿಲ್ಲ. ಆದುದರಿಂದ ಅವರು ತಮ್ಮ ಹೆಸರನ್ನು ಅಂಗಿಯ ಮೇಲೆ ಬರೆದುಕೊಂಡು ಬರ ಬೇಕೆಂದು ತಿಳಿಸಿರುವರು.

—"ವಿಶ್ವಭಾರತಿ" ಎಂಬ ಮಾಸಿಕ ಪತ್ರಿಕೆಯು ಜೂನ ೧೫ ರಿಂದ ಬೆಂಗಳೂರಿನಲ್ಲಿ ಮಿ. ಜಿ. ಎಸ್. ಸಿದ್ಧಲಿಂಗಪ್ಪನವರ ಸಂಪಾದ ಕತ್ವದಲ್ಲಿ ಹೊರಡುವದು.

—ಉಮರಾವತಿಯಲ್ಲಿ ಒಬ್ಬ ಒಕ್ಕಲಿಗನು ಅಡಗಿಕೊಂಡು ಕುಳಿತಿದ್ದು ಹುಲಿಯು ಬಂದ ಕೂಡಲೆ ಅದರ ಬಾಲವನ್ನು ಹಿಡಿದು ಜಗ್ಗಿದನು. ಅದೇ ಕಾಲಕ್ಕೆ ಮತ್ತೊಬ್ಬನು ಕೊಡಲಿಯಿಂದ ಅದನ್ನು ಕಡಿದು ಹಾಕಿದನು.

—ಬೆಳಗಾವಿ ಕಲೆಕ್ಟರರಾದ ಹಿರೇಮಠ ಸಾಹೇಬರಿಗೆ ಅಪೆಂಡಿಸಾಯಿಟ್ಸಿದ ಕಾರಣದಿಂದ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯು ಮಾಡಲ್ಪಟ್ಟಿತು. ಪ್ರಕೃತಿಯು ಈಗ ಸುಧಾರಿಸುತ್ತಲಿದೆ.

—ಎಲ್ಲೋರದಲ್ಲಿ ಮೈಲೀ ಬೇನೆಯ ನಿವಾರಣೆಗೆ ಪಶು ಗಳು, ಕೋಳಿಗಳು, ಬಾತಗೋಳಿಗಳು ಮೊ ಲಾಂ ಪ್ರಾಣಿಗಳನ್ನು ಸನಾತನಿಗಳು ಬಲಿ ಮುಂಬಯಿ ಜೀವದಯಾ ಮಂಡಲದ ಅಧ್ ಜಹ್ಮೇರಿಯವರು ಮದ್ರಾಸ ಗವ್ಹರ್ನರರಿಗೆ ಪುನಃ ಇಂಥ ವುಂಟಾಗದಂತೆ ವ್ಯವಸ್ಥೆಯಾಗಬೇಕೆಂದು ತಂತೀ ಮೂಲಕ ತಿಳಿಸಿ ರುವರು.

—ಮುಂಬಯಿ ಕೂಲಿಕಾರರ ಕಟ್ಟನ್ನು ಸಡಲಿಸಲು ಮಹಾ ತ್ಮಾಜಿಯವರು ಮಿ. ಮೋದಿ ಇವರೊಡನೆ ಸ್ನೇಹಾಲಾಪ ನಡೆಸಿ ರುವರು.

—ಬಿಹಾರದ ಭುಜಾವರ ಎಂಬ ಗ ತ್ಮಾಜಿಯವರಿದ್ದಾಗ ಮಳೆಯು ವಿಶೇಷ ಒಂದು ಮುರಕು ಗುಡಿಸಲನ್ನು ಆಶ್ರಯಿಸ ಯಿಲ್ಲ ಮಳೆಯಾದುದರಿಂದ ಅವರ ಸಂಗಡ ಹತ್ತದಿದ್ದರೂ ಗಾಂಧೀಜಿಯವರು ಗಾಢವಾ

—ಚಾಂದಪುರದಿಂದ ೧೪ ಮೈಲು ಎಂಬ ನಿಲ್ದಾಣಕ್ಕೆ ಶಸ್ತ್ರಧಾರಿಗಳಾದ ಮುತ್ತಿಗೆ ಹಾಕಿ ೪೦ ಸಾವಿರ ರೂಪಾಯಿ ಪತ್ರಗಳನ್ನು ಒಯ್ದರು. ಕತ್ತಲೆಯ ಮತ್ತು ಅವರು ಗುಂಡು ಹಾರಿಸಿದುದರಿಂದ

—ಬಿಹಾರಿನ ಚಂಪಾರಣ್ಯದಲ್ಲಿ ಭಯಂಕರ ಬೆಂ ಹೊಡೆತಕ್ಕೆ ಗಿಡಗಳೆಲ್ಲ ಉರುಳಿದವು. ಮಳೆಯ ಗಳೆಲ್ಲ ಬಿದ್ದವು. ನಂತರ ಉಂಟಾದ ಅಗ್ನಿ ಪ್ರಕೋಪದಲ್ಲಿ ಅನೇಕ ನುನೆಗಳು ಆಹುತಿಯಾದವು.

—ತಾಸಗಾಂವದಲ್ಲಿ ವಿವಾಹ ಸುಧಾರಣಾ ಮಂಡಲದ ವತ ಯಿಂದ ಒಂದೇ ಒಂದು ರೂಪಾಯಿ ವಚ್ಚದಿಂದ ವಧೂವರರ ಒಂದು ಲಗ್ನವು ಮಾಡಲ್ಪಟ್ಟಿತು. ಆ ಕಾಲಕ್ಕೆ ಶ್ರೀ ಕ್ವಾಡ ಜಗ ದ್ಗುರುಗಳು ವಿವಾಹಕ್ಕಾಗಿ ಬಹು ಧನವನ್ನು ವೆಚ್ಚವಾಡುವದ ಕ್ಕಿಂತ ಒಂದೆರಡು ರೂಪಾಯಿಗಳಲ್ಲಿ ಮಾಡುವದೇ ಶ್ರೇಯಸ್ಕರ ವೆಂದು ಹೇಳಿದರು.

—ದಿಲ್ಲಿಯ ಕಾರ್ಯಾಲಯಗಳಲ್ಲಿ ಕಟ್ಟು ಉಂಟಾಗಿ ಕೂಲಿ ಕಾರರ ಸ್ತ್ರೀಯರು ಕಾರ್ಯಾಲಯಗಳ ಮುಂದೆ ಪಿಕೆಟಿಂಗ ಮಾಡು ತ್ತಿರುವರು.

—ಲಾಹೋರ ಮಧ್ಯವರ್ತಿ ಕಾರಾಗೃಹದಿಂದ ಚೆಂದ್ರಿಕಾ ಎಂಬವನು ವಾರ್ಡರರ ಕಣ್ಣುತಪ್ಪಿಸಿ ೧೪ ಅಡಿ ಎತ್ತರನಾದ ಗಿಡ ವನ್ನು ಕೊಯಿದು ಗೋಡೆಗೆ ಆನಿಸಿ ಹತ್ತಿ ಪಾರಾಗಿ ಹೋದನು. ಅಲ್ಲಿಂದ ೧೪ ಮೈಲಿನ ಮೇಲೆ ಇತನ್ನಜ್ ಎಂಬಲ್ಲಿ ಅವನನ್ನು ಪೋಲೀಸರು ಪುನಃ ಬಂಧಿಸಿದರು.

—ರಾಮಪುರ ನವಾಬರ ಬಂಧುವಿನ ಅರ್ಧ ಲಕ್ಷ ಬೆಲೆಯ ಮುತ್ತು ರತ್ನಾಭರಣಗಳು ಕಳವಾಗಿವೆ.

—ಡಾಕಾದಲ್ಲಿಯ ೩೦ ತರುಣರ ಭಾವಚಿತ್ರಗಳನ್ನು ತೆಗೆದು ಕೊಂಡು ಅವರ ಕ್ರಾಂತಿಕಾರಕ ಚಲನವಲನದ ವಿಷಯಕವಾಗಿ ಎಚ್ಚರಿಕೆಯಿಂದಿರಬೇಕೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಪೋಲೀಸ ಸುಪರಿಂಟೆಂಡೆಂಟರು ಅವರ ಪಾಲಕರಿಗೆ ತಿಳಿಸಿದರು.

ಪತ್ರಗಳ ಸಾರಾಂಶ.

ಕರ್ನಾಟಕ ಹಿಂದೀ ಮಹಾ ವಿದ್ಯಾಲಯ ಬೆಂಗಳೂರುಸಿಟಿ.

ಮೇಲ್ಕಂಡ ಕಾಲೇಜ ಬೇಸಿಗೆ ರಜೆ ಮುಗಿದ ಮೇಲೆ ತಾ. [illegible] ಜುಲೈಗೆ ತೆರೆಯಲಾಗುವುದು. ರಾಷ್ಟ್ರ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿದೆ. ಜೂನ್ ತಾ. ೨೦ ರೊಳಗೆ ಉಮೇದವಾರರು ತಮ್ಮ ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಬರಕೊಳ್ಳಬೇಕು. ಸ್ಥಳೀಕ ಹಿಂದೀ ಪ್ರಚಾರಕರಿಂದ ಅಥವಾ ಹಿಂದೀ ಪ್ರಚಾರಕ ಮಂಡಳಿಯಿಂದ ಶಿಫಾರಸ ಮಾಡಲ್ಪಟ್ಟ ಅರ್ಜಿಗಳ ಕಡೆಗೆ ವಿಶೇಷ ಗಮನ ಕೊಡಲಾಗುವುದು. ಈ ವರುಷ ಕಾಲೇಜು ಅಧ್ಯಾಪಕ ಮಂಡಲಿಗೆ ಇನ್ನೂ ಕೆಲವು ಯೋಗ್ಯ ಶಿಕ್ಷಕರನ್ನು ಸೇರಿಸಿಕೊಂಡಿರುವುದರಿಂದ ಪಾಠಪ್ರವಚನಗಳಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.

ರಾ. ಬ. ಡಾ. ಸಿ. ಬಿ. ರಾಮರಾವ್
ಅಧ್ಯಕ್ಷರು
ಕರ್ನಾಟಕ ಹಿಂದೀ ಕಾಲೇಜ ವ್ಯವಸ್ಥಾಪಕ ಮಂಡಳಿ,
ಬೆಂಗಳೂರುಸಿಟಿ.

ಬಸವೇಶ್ವರ ಹಾಯಸ್ಕೂಲ ಬಾಗಲಕೋಟಿ.

ಈ ಶಾಲೆಯಿಂದ ಈ ವರುಷ ಮ್ಯಾಟ್ರಿಕ ಪರೀಕ್ಷೆಗೆ ಕುಳಿತ (೮೮) ವಿದ್ಯಾರ್ಥಿಗಳಲ್ಲಿ (೪೩) ಮಂದಿ ಪಾಸಾಗಿರುತ್ತಾರೆ. (೩೨) ವಿದ್ಯಾರ್ಥಿಗಳು ೧೦೦ಕ್ಕೆ ೪೫ರಂತೆ ಗುಣಗಳನ್ನು ಪಡೆದಿರುತ್ತಾರೆ. ಒಟ್ಟನಮೇಲೆ ಈ ಶಾಲೆಯ ಮ್ಯಾಟ್ರಿಕ ರಿಸ್ಲ್ಟ ಸುಮಾರು ೧೦೦ಕ್ಕೆ ೫೦ರಂತೆ ಆಗಿರುತ್ತದೆ. ಶಾಲೆಯು ೯-೬-೩೪ ದಿವಸ ಪ್ರಾರಂಭವಾಗಿದೆ. ಹೊಸದಾಗಿ ಶಾಲೆಯಲ್ಲಿ ಶೇರಲಿಚ್ಛಿಸುವ ವಿದ್ಯಾರ್ಥಿಗಳು ತಾ. ೩೦-೬-೩೪ ಳಗಾಗಿ ತಮ್ಮ ಹೆಸರು ದಾಖಲ ಮಾಡಿಸಬೇಕು.

ಬಾಗಲಕೋಟೆ
ತಾ. ೪-೬-೩೪.

C. S. Bagi,
ಹೆಡ್‌ಮಾಸ್ತರ,
ಬಸವೇಶ್ವರ ಹಾಯಸ್ಕೂಲ

ಶಿವದೀಕ್ಷಾ ಸಂಸ್ಕಾರ.

ಇದೆ ನಿಜ ವೈಶಾಖ ಶುದ್ಧ ಏಕಾದಶಿ ಶುಕ್ರವಾರ, ಜಿಲ್ಲಾ ವಿಜಾಪೂರ ಪೈಕಿ ಮಮದಾಪೂರ ವಿರಕ್ತ ಮಠದಲ್ಲಿ ಶ್ರೀಮನ್ನಿರಂಜನ ಮಹಾದೇವ ಸ್ವಾಮಿಗಳವರ ನೇತೃತ್ವದಲ್ಲಿ ಹೊಸದಾಗಿ ಕಟ್ಟಿಸಿದ ಮುರುಗೇಂದ್ರ ಸ್ವಾಮಿಗಳವರ ಗದ್ದಿಗೆ ರುದ್ರಾಭಿಷೇಕವು, ಅಯ್ಯಾಚಾರ, ಶಿವದೀಕ್ಷಾ ಸಂಸ್ಕಾರ ಜರುಗಿಸಲ್ಪಟ್ಟವು. ಮತ್ತು ತಾ. ೨೫-೫-೩೪ರಸೆಯ ಶುಕ್ರವಾರ ಮಹಾ ಗಣಾರಾಧನೆಯು ನಡೆಯಿತು. ತಾ. ೨೯-೫-೩೪ ಸೋಮವಾರದಿಂದ ದಿನಾಲು ಸಾಯಂಕಾಲ ೪ರಿ ಶ್ರೀಗಳಿಂದ ತಾ. ೩೦-೫-೩೪ರವರೆಗೂ ಶಿವಸಮಯ ಪ್ರತಿಷ್ಠಾಪನಾಚಾರ್ಯರಾದ ಬಸವಣ್ಣನವರ ಉದಾತ್ತ ತತ್ವಗಳು ಸರ್ವರಿಗೂ ಸಮಂಜಸವಾಗಿ ತಿಳಿಯುವಂತೆ ಬೋಧಿಸಲ್ಪಟ್ಟವು.

ಪ್ರತ್ಯಕ್ಷದರ್ಶಿ.

ವೀರಶೈವ ಏಕೀಕರಣ.

ಬಾಗೇವಾಡಿ ತಾಲೂಕು ಮಸಬಿನಾಳ ಗ್ರಾಮದ ವೀರಶೈವರೆಲ್ಲ ಬಸವ ಜಯಂತಿಯ ಸಮಯಕ್ಕೆ ತಮ್ಮ ತಮ್ಮೊಳಗಿನ ಉಪಪಂಗಡಗಳಲ್ಲಿ ಐಕ್ಯತ್ವವನ್ನು ನೆಲೆಗೊಳಿಸುವದಕ್ಕಾಗಿ ಎಲ್ಲ ಪಂಗಡದವರೂ ಸೇರಿ ಸಹಭೋಜನ ಏರ್ಪಡಿಸಿ ಬಸವಜಯಂತಿಯ ದಿವಸ ಈ ಪ್ರಗತಿ ಪರ ಮಾರ್ಗವನ್ನು ಸ್ತುತ್ಯ ರೀತಿಯಿಂದ ಪ್ರಚಾರ ಮಾಡಿದರೆಂದು ಒಬ್ಬರು ತಿಳಿಸುತ್ತಾರೆ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ವೆಸ್ಟ್‌ಮೆಂಟ್ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

ತಿಂಗಳು	ಪಾಲಿಯ ಒಟ್ಟು ಕಿಮ್ಮತ್ತು.
ಜನವರಿ ೧೯೩೪	೩೫೦೦ ರೂ.
ಫೆಬ್ರುವರಿ ,,	೧೨೦೦೦ ರೂ.
ಮಾರ್ಚ ,,	೩೦೫೦೦ ರೂ.
	ಒಟ್ಟು. ೪೬೦೦೦ ರೂ.

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮದುವೆ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ; ತಿಂಗಳಿಗೆ ೧೦೦ರಿಂದ ೧೫೦ರವರೆಗೆ ಕಮಿಶನ್ ಶಿಗುವದು.

Managing Agents.



ಅಲ್ಲಲ್ಲಿಯ ಬಸವ ಜಯಂತಿಗಳು.

ಶಿರೋಳ— ನರಗುಂದ ಪೇರಾಪೈಕಿ, ಶಿರೋಳ ಗ್ರಾಮದ ಶ್ರೀ ವಿರಕ್ತ ಮಹಾ ಮಠದಲ್ಲಿ ಪ್ರತಿವರುಷದಂತೆ ವೀರಶೈವ ಮತ ಸ್ಥಾಪನಾಚಾರ್ಯನಾದ ಪೂಜ್ಯಪಾದ ಭಗವಾನ್ ಬಸವೇಶ್ವರನ ಭಾವ ಚಿತ್ರವನ್ನು ದಿವ್ಯಾಲಂಕೃತವಾದ ಸಿಂಹಾಸನದ ಮೇಲೆ ಮೂರ್ತ ಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ ಸ್ತೋತ್ರ ಭಜನ ಮಂಗಲಾದಿಗಳನ್ನು ಮಾಡಿ ಆ ಪೂಜ್ಯ ಪುರುಷನಲ್ಲಿದ್ದ ತಮ್ಮ ಭಕ್ತಿಯನ್ನು ಸರ್ವರೂ ವ್ಯಕ್ತಗೊಳಿಸಿದ್ದಲ್ಲದೆ ಸಾಯಂಕಾಲ ೬ ಗಂಟೆಗೆ ಆಂದೋಲಿಕೋತ್ಸವವು ಮಂಗಲ ವಾದ್ಯಾದಿಗಳಿಂದೊಡಗೂಡಿ ಶ್ರೀ ಕಲ್ಲಿನಾಥೇಶ್ವರನ ದೇವಾಲಯಕ್ಕೆ ಜನಸಂದಣಿಯಿಂದ ಹೋಗಿ ಪುನಃ ವಿರಕ್ತ ಮಠಕ್ಕೆ ತಲುಪಿದ ನಂತರ ಶ್ರೀವಸ್ತ್ರಿರಂಜನ ಶಿವಾನುಭವ ಚಿರವರ್ಯ ತೋಂಟದಾರ್ಯ ದೇಶಿಕೇಂದ್ರ ಮಹಾ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೆಲವರ ಭಾಷಣಗಳಾದ ನಂತರ ಮಹಾ ಸ್ವಾಮಿಗಳು ಭಕ್ತಿಯೋಗಿ ಬಸವೇಶ್ವರನ ಜೀವನ ಚರಿತ್ರೆ ಹಾಗೂ ಬಸವ ಜಯಂತಿಯನ್ನು ಯಾವ ರೀತಿಯಿಂದ ಆಚರಿಸಬೇಕೆಂಬುದನ್ನು ಸರ್ವರಿಗೂ ಸುಗಮವಾಗಿ ತಿಳಿಯುವಂತೆ ಉಪದೇಶಿಸಿದರು. ಕೊನೆಗೆ ಬಸವೇಶ್ವರನ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ತುಮ್ಮಿನಕಟ್ಟಿ— ರಾಣೇಬೆನ್ನೂರು ತಾಲೂಕು ತುಮ್ಮಿನಕಟ್ಟಿಯ ಕೆಳಗೆ ಕಾಣಿಸಿದ ನಾವುಗಳು ಅರಿಕೆಮಾಡಿಕೊಳ್ಳುವುದೇನಂದರೆ— ಶ್ರೀ ಬಸವ ಜಯಂತಿಯ ದಿವಸ ಮುಂಜಾನೆ ಈಶ್ವರ ಬಸವೇಶ್ವರರ ಸಂಯುಕ್ತ ರಥೋತ್ಸವವು ವೈಭವದಿಂದ ಜರುಗಿ ಪಾದಗಟ್ಟಿಗೆ ಮುಟ್ಟತು. ಮಧ್ಯಾಹ್ನದಲ್ಲಿ ತೇರಿನ ಮುಂದೆ ೩೦೦ ಉಕ್ಕೃಷ್ಟ ಶೃಂಗರಿಸಿದ ಬಸವಣ್ಣಗಳು ನಿಲ್ಲಿಸಲ್ಪಟ್ಟವು. ತೇರು ಸಾಗುವ ಕಾಲಕ್ಕೆ ಶ್ರೀ. ಹನುಮಂತಪ್ಪ ಬೆಂಕಿ, ಶ್ರೀ. ಸಿದ್ರಾಮಪ್ಪ ಹೊಸಮನಿ, ಶ್ರೀ. ರಾಮಚಂದ್ರಪ್ಪ ಶೆಟ್ರು ಮುಂತಾದ ಪ್ರಮುಖರು ವ್ಯವಸ್ಥೆ ಮಾಡಿದರು. ಆ ಹೊತ್ತು ನಡೆದ ಮಹತ್ವದ ಪ್ರಸಂಗವೆಂದರೆ ಅದಕ್ಕೂ ಮೊದಲು ದರದಿವಸ ಬರುತ್ತಿದ್ದ ಮಳೆಯು ಆ ಹೊತ್ತು ಸ್ವಲ್ಪಾದರೂ ಬರದೆ ಮುಂಜಾನೆಯಿಂದ ಸಂಜೆಯವರೆಗೆ ಉತ್ಸವಕ್ಕೆ ಯಾವ ತರದಿಂದಲೂ ಅಡ್ಡಿಯಾಗದೆ ಉತ್ಸವವು ತೀರಿದ ಕೂಡಲೇ ವಿಶೇಷ ಮಳೆಯಾಯಿತು!

ಉತ್ಸವವು ತೀರಿದ ನಂತರ ಮಾ! ರಾ! ಶರಭಣ್ಣನವರು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಉಪನ್ಯಾಸವನ್ನು ಮಾಡಿದ್ದಲ್ಲದೆ ಸ್ವತಃ ಅಸ್ಪೃಶ್ಯತಾ ನಿವಾರಣೆಯನ್ನು ಮಾಡಿ ತೋರಿಸಿದರು. ನಂತರ ಸ್ಥಳೀಯ, ಪರಸ್ಥಳೀಯರೆಲ್ಲರಿಗೂ ಎರಡೂ ಹೊತ್ತು ಸುಗ್ರಾಸ ಭೋಜನವು ಮಾಡಿಸಲ್ಪಟ್ಟತು.

ವರುಷ ವರುಷಕ್ಕೆ ಉತ್ಸವವು ಹೆಚ್ಚಾಗುತ್ತಲೇ ಹೋಗುವುದನ್ನು ನೋಡಿದರೆ ಇದು ಶ್ರೀ ಬಸವೇಶ್ವರನ ಪ್ರಭಾವವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ವ್ಯವಸ್ಥಾಪಕರು,
ಸಿದ್ಧಯ್ಯಸ್ವಾಮಿಗಳವರು ಕಬ್ಬಿಣಕಂತಿಮಠ
ಸಿದ್ರಾಮಪ್ಪ ಹೊಸಮನಿ
ಹಾಲಪ್ಪ ಗೌಡನ ಕಟ್ಟಿ

ಕಾರ್ಯದರ್ಶಿಗಳು,
ಶರಭಣ್ಣ ಹಾದೀಮನಿ
ಬಸವಲಿಂಗಪ್ಪ ನವಾತಿ

ಇಟಗಿ— ಭಗವಾನ್ ಬಸವಮಹಿಮನ ಜಯಂತಿಯ ಕಾಲಕ್ಕೆ ಶ್ರೀ. ಮ. ಪ್ರ. ಹಾವೇರಿ ಸ್ವಾಮಿಗಳೂ, ಹಾಳಕೇರಿ ಅನ್ನದಾನ ಮಹಾ ಸ್ವಾಮಿಗಳೂ ಕಲ್ಯಾಣ ಪ್ರಭು ಪೀಠದ ಶ್ರೀ ಜಡೆ ಮಹಾ ಸ್ವಾಮಿಗಳೂ ದಯಮಾಡಿಸಿದ್ದರು. ಆ ಬಸವ ಮಹಿಮನ ಪುರಾಣವನ್ನು ೩ ವರುಷ ಲಾಗಾಯಿತು ಶ್ರಾವಣ ಮಾಸದಲ್ಲಿ ಅವಿಚ್ಛಿನ್ನವಾಗಿ ನಡೆಯಿಸುತ್ತ ಬಂದ ಶ್ರೀಮಂತ [illegible] ಗೌಡರು ಪೋಲೀಸ ಪಾಟೀಲ ಇವರ ಮನೆಗೆ ವ್ರಾತಃ [illegible] ಬಸವೇಶ್ವರ ಉತ್ಸವ ಮಂಡಲವು ಒಂದಿತು. ಆ ವೇಲೆ ಗಣಾರಾಧನೆಯು ಶ್ರೀ ಪಾಟೀಲರ ಮನೆಯಲ್ಲಿಯೇ ಸಾಯಂಕಾಲದವರೆಗೆ ನಡೆಯಿತು. ತರುವಾಯ ಲಿಂಗಪ್ಪ ಮಾಸ್ತರರ ಸೂಚನೆಯ ಮೇರೆಗೆ ನೇ! ಅನ್ನದಾನ ಶಾಸ್ತ್ರಿಗಳು ಪ್ರಸ್ತುತ ವಿಷಯವಾದ ಬಸವಾವತಾರದ ಉದ್ದೇಶ ಆ ಮಹಿಮನಿಂದ ವೀರಶೈವ ಸಮಾಜಕ್ಕಾವ ಮಹದುಪಕಾರ ಬಸವಣ್ಣನವರ ವಚನದಲ್ಲಿರತಕ್ಕ ವೇದಾಗಮಾದಿಗಳ ಸಾರ ಇನೇ ಮೊದಲಾದ ವಿಷಯಗಳನ್ನು ಒಳ್ಳೇ ಪುರಾಣ ಪೂರ್ವಕವಾಗಿಯೂ ತುಲನಾತ್ಮಕ ದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ಸರ್ವರಿಗೂ ಹೃದಯಂಗಮವಾಗುವಂತೆ ವ್ಯಾಖ್ಯಾನ ಮಾಡಿದರು. ಆ ಮೇಲೆ ಶ್ರೀ ಲಿಂಗಪ್ಪ ಮಾಸ್ತರರು ಉಪಸಂಹಾರ ರೀತಿಯಲ್ಲಿ ಮಹಿಮಾಶಾಲಿಯಾದ ಬಸವಣ್ಣನವರ ಉದಾತ್ತ ವಿಚಾರಗಳನ್ನು ಸಭಿಕರಿಗೆ ಪ್ರದರ್ಶಿಸಿ ಈ ಮಹಾ ಕಾರ್ಯಕ್ಕೆ ಕಾರಣೀಭೂತರಾದ ಶ್ರೀಮಂತ ಅನ್ನದಾನ ಗೌಡರನ್ನು ಅವರ ಬಂಧುವರ್ಗದವರನ್ನು, ಈ ಕಾರ್ಯಕ್ಕೆ ಸಹಾಯಭೂತರಾದ ನೆರೆಹೊರೆಯ ಗ್ರಾಮಸ್ಥರನ್ನು ಆ ಕರುಣಾ ಸಾಗರ ಬಸವೇಶ್ವರನು ಅನುಗ್ರಹಿಸಲೆಂದು ಜಯಘೋಷದೊಡನೆ ಸಭಾಕಾರ್ಯ ಮುಗಿಸಿದರು

ಓರ್ವ ಉತ್ಸವ ಭಾಗಿ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರು ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—
ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಆರಳೇ ಪೇಟೆ,
ತುಮಕೂರು (ಮೈಸೂರು ಸ್ಟೇಟ್.)

ಪ್ಲೇಗ ಸಂಜೀವಿನಿಯ ಡಂಗುರ!

ಪ್ಲೇಗಿನ ಭಯವೇ ಇಲ್ಲ! ಹೊಸ ಶೋಧ!! ಮರಣಭಯವೇ ಇಲ್ಲ!!!

ಪ್ಲೇಗ ಬೇನೆಯ ಪೂರ್ವ ಲಕ್ಷಣಗಳು.

ದೇಹದ ಯಾವದಾದರೊಂದು ಭಾಗದಲ್ಲಿ (ಕೊರಳು, ಬಗಲು, ಗೆಜ್ಜೆಗಳಲ್ಲಿ) ಚಟ್ ಎಂದು ಗಡ್ಡೆಯು (ಗಂಟು) ಏಳಲಿಕ್ಕೆ ಪ್ರಾರಂಭವಾದರೆ ಅಥವಾ ತಲೆಯು ನೋಯುತ್ತಲೇ, ಕಣ್ಣುಗಳು ಕೆಂಪಾಗಲಿಕ್ಕೆ ಹತ್ತಿದರೆ ಇದಕ್ಕೆ ಪ್ಲೇಗ ರೋಗದ ಪ್ರಾರಂಭ ಲಕ್ಷಣಗಳೆಂದು ತಿಳಿದು ಕೂಡಲೇ ಪ್ಲೇಗ ಸಂಜೀವಿನಿಯ ಉಪಯೋಗ ಮಾಡಬೇಕು.

ಸಂಜೀವಿನಿಯನ್ನು ಸೇವಿಸುವ ಕಾಲ.

ಪ್ಲೇಗ ತಗಲಿದ ೬ ತಾಸುಗಳ ಮೇಲೆ ಸಂಜೀವಿನಿಯನ್ನು ಕೊಟ್ಟರೆ ಗುಣವಾಗುವುದಿಲ್ಲ. ಗ್ರಾಮದಲ್ಲಿ ಪ್ಲೇಗವು ಪ್ರಾರಂಭವಾಗುವುದಕ್ಕಿಂತಲೂ ಮೊದಲೇ (ಇಲಿಗಳು ಬೀಳಲಿಕ್ಕೆ ಹತ್ತಿದ ಕೂಡಲೇ) ಸಂಜೀವಿನಿಯ ಬಾಟ್ಲಿಗಳನ್ನೂ ಮಲಾಮು ಡಬ್ಬಿಗಳನ್ನೂ ಮನೆಯಲ್ಲಿಟ್ಟುಕೊಂಡಿರಬೇಕು. ಪ್ಲೇಗ ರೋಗದ ಸದರೀ ಪೂರ್ವ ಲಕ್ಷಣಗಳು ಕಂಡ ಕೆಲವು ಮಿನಿಟುಗಳಲ್ಲಿಯೇ ಸಂಜೀವಿನಿಯನ್ನು ಉಪಯೋಗಿಸಬೇಕು. ಅದರೆ ಮೊದಲು ಅಲಕ್ಷ ಮಾಡಿ ಯಾರಿಗೂ ಹೇಳದೆ ೪-೬ ತಾಸುಗಳನ್ನು ಹಾಗೂ ಹೀಗೂ ಕಳೆದ ಮೇಲೆ ರೋಗಾಧಿಕ್ಯದಿಂದ ಹಾಸಿಗೆಯನ್ನು ಹಿಡಿದು ಆ ಮೇಲೆ ಸಂಜೀವಿನಿಯನ್ನು ಉಪಯೋಗಿಸಿದರೆ ನಿಜವಾಗಿಯೂ ಗುಣವಾಗುವದಿಲ್ಲವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಯಾಕಂದರೆ ಹಾವು ಕಚ್ಚಿದ ಕೂಡಲೇ ವಿಷವು ಹ್ಯಾಗೆ ಶೀಘ್ರವಾಗಿ ದೇಹದಲ್ಲಿ ವ್ಯಾಪಿಸಿ ಅವನನ್ನು ಕೊಲ್ಲುವದೊ? ಹಾಗೆಯೇ ಪ್ಲೇಗ ತಗಲಿದ ಕೂಡಲೇ ಮನುಷ್ಯನ ದೇಹದಲ್ಲಿ ಪ್ಲೇಗಿನ ವಿಷಕ್ರಿಮಿಗಳು ಭಯಂಕರ ಸ್ವರೂಪದಿಂದ ಬೆಳೆದು ಪ್ರಾಣಘಾತಕವಾಗುವುದು. ಆದ್ದರಿಂದ ಹಾವು ಕಚ್ಚಿದ ಮನುಷ್ಯನನ್ನು ಉಳಿಸಿಕೊಳ್ಳಲು ಎಷ್ಟು ಅತುರತೆಯಿಂದ ಓಡಾಡಿ ಪ್ರಯತ್ನ ಮಾಡುವರೊ, ಹಾಗೆಯೇ ಪ್ಲೇಗ ತಗಲಿದವರಿಗಾದರೂ ಅದಕ್ಕೂ ಹೆಚ್ಚಿನ ಅತುರತೆಯಿಂದ ಸಂಜೀವಿನಿಯನ್ನು ಹೊಟ್ಟೆಯಲ್ಲಿ ಹಾಕುವ ಪ್ರಯತ್ನ ಮಾಡಬೇಕು. ಈ ದಿವ್ಯೌಷಧದ ಉಪಯೋಗ ಮಾಡಿ ನೋಡಬೇಕೆನ್ನುವವರು ಮೊದಲು ಸದರಿ ಮಹತ್ವದ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ಉಪಯೋಗಿಸುತ್ತ ನಡೆದರೆ ಆ ಊರಲ್ಲಿ ಯಾರೂ ಪ್ಲೇಗ ರೋಗದಿಂದ ಸಾಯುವುದೇ ಇಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.

ಪ್ರಚಾರ ಕಾರ್ಯ.

ಲಕ್ಷದಲ್ಲಿಡುವ ಸದರಿ ಸಂಗತಿಗಳು ಸರ್ವ ಜನರಿಗೆ ತಿಳಿಯಬೇಕಾಗಿದ್ದುದು ಅವಶ್ಯವಿದ್ದಕಾರಣ ಗ್ರಾಮ ಹಿತ ಚಿಂತಕ ತರುಣರು ಮನೆ ಮನೆಗೆ ಹೋಗಿ ಈ ವಿಷಯಗಳನ್ನು ಚೆನ್ನಾಗಿ ತಿಳಿಸಿ ಹೇಳಿ, ಅವರ ನೆನಪಿನಲ್ಲಿ ಉಳಿಯುವಂತೆ ಮಾಡಬೇಕು. ಗ್ರಾಮಾಧಿಕಾರಿಗಳು ಡಂಗುರಹೊಡೆಸಿ ಜನಜಾಗೃತೆಯನ್ನುಂಟುಮಾಡಬೇಕಲ್ಲದೆ ಸಕಾಲಕ್ಕೆ ಸಂಜೀವಿನಿಯು ಎಲ್ಲ ಕಡೆಗೂ ದೊರೆಯುವಂತೆ ವ್ಯವಸ್ಥೆಯನ್ನಿಡಬೇಕು.

ಪ್ಲೇಗ ಸಂಜೀವಿನಿಯು ಇತರ ರೋಗಗಳಿಗೂ ಬರುವದು.

ಅಕಸ್ಮಾತ್ತಾಗಿ ಸಣ್ಣವರಿಗೂ ದೊಡ್ಡವರಿಗೂ ಆಗುವ ಹೊಟ್ಟೆಬೇನೆಗೂ ಧಡೆದ ಬೇನೆಗೂ ಪಕ್ಕೆ ಶೂಲೆಗೂ ಶೀತಜ್ವರಕ್ಕೂ ವಾತ ಮತ್ತು ಶೀತದಿಂದಾದ ರೋಗಗಳಿಗೂ ಬಹು ಉಪಯೋಗವಾಗುವದು. ಪ್ಲೇಗ ರೋಗಿಗಳಿಗೆ ಕೊಡುವಂತೆಯೇ ಇವರಿಗೂ ಕೊಡಬೇಕು. ಅನುಪಾನ ಪತ್ರಿಕೆಯು ಔಷಧದ ಸಂಗಡಿರುತ್ತದೆ.

ಇಂಥ ಅಮೂಲ್ಯವಾದ ಔಷಧದ ಕಿಮ್ಮತ್ ಒಬ್ಬ ಮನುಷ್ಯನಿಗೆ ಸಾಲುವಷ್ಟಕ್ಕೆ ರೂ. ೧-೫-೦ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಮಿಶನ್ ಏಜಂಟರು ಬೇಕಾಗಿದ್ದಾರೆ. ಅಪೇಕ್ಷಿಸುವವರು ವಿಶೇಷ ಸಂಗತಿಗಳ ಬಗ್ಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ,

ಪ್ಲೇಗ ಸಂಜೀವಿನಿ ಆಫೀಸ,

ಮಹಬೂಬ ಬಜಾರ ಗುಲಬರ್ಗಾ ತರೀಫ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಹೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೨೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬರಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದವಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಯೂ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸತ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಆನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಚಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಕಶ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.

ಪೋ. ಹಂಚಳಿ.

ತಾ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶೀ ಹರ್ಡೀಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The

Sharana Sandesh.

ಲ್ಲಿ ಕೋಳುರೋಧಿ ಶರಣಸಾರಾಂಗ ಅಂಜುವವನಲ್ಲ।
ಚತೇಜದಲ್ಲಿ ಪ್ಪಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು

ಸಂಪಾದ
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ ಸೋಮವಾರ ತಾರೀಖು ೧೪ ನೆಯ ಜೂನ ೧೯೩೪. | ಸಂಚಿಕೆ ೪೨

ಜನಸೇವೆಯೇ ದೇವರಸೇ

ಮುಂಬಯಿಗೆ
ಮಹಾತ್ಮಾಜಿಯವರ ಆಗಮನ.

ಬೋರೀಬಂದರ ನಿಲ್ದಾಣದಲ್ಲಿ ಪ್ರಚಂಡ ಸ್ವಾಗತ.



ತಾರೀಖು ೧೪ನೆಯ ದಿವಸ ಮುಂಜಾನೆ ಮಹಾತ್ಮಾಜಿಯವರು ನಾಗಪುರದಿಂದ ಮುಂಬೈಗೆ ಆಗಮಿಸಿದರು.

ಅವರ ಸ್ವಾಗತಕ್ಕಾಗಿ ನೆರೆದ ಸಾವಿರಾರು ಜನರು ಗಾಂಧೀಜಿಯವರ ಜಯಜಯಕಾರ ಮಾಡಿದರು. ಶ್ರೀ. ಮಥುರಾದಾಸ ವಸನಜಿ ಮತ್ತು ಧರ್ಮಾತ್ಮಾ ಮಾಲವೀಜಿಯವರು ಹಾರಗಳನ್ನು ಅರ್ಪಿಸಿದರು. ನೆರೆದ ಜನರ ಅಭಿನಂದನಗಳನ್ನು ಮಹಾತ್ಮರು ಹಸನ್ಮುಖರಾಗಿ ಸ್ವೀಕರಿಸುತ್ತ ಮಣಿ ಭವನಕ್ಕೆ ತೆರಳಿದರು. ಮಣಿಭವನದಲ್ಲಿ ಮಹಾತ್ಮರು ಮತ್ತು ಮಾಲವೀಜಿಯ ವರು ಪಾರ್ಲಿಮೆಂಟರಿ ಬೋರ್ಡಿನ ವಿಷಯಕವಾಗಿ ಸಂಭಾಷಿಸಿದ ನಂತರ ಶ್ರೀ. ಮಥುರಾದಾಸ ತ್ರಿಕಮಜಿಯವರು ಕೂಲಿಕಾರರ ಕಷ್ಟವನ್ನು ಪರಿಹರಿ ಸಲು ಪ್ರಯತ್ನಿಸಬೇಕೆಂದು ಬಿನ್ನವಿಸಿಕೊಂಡರು.

ಶೇವೆಯೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL – 587 318

ಕಳಕುಂಟ್ಯುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಠಿ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಠಿ ಚೆನಬಸವಪ್ಪಾ
ಶ್ರೀಕೈಬಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಶಬಿಲ್ಡಿಂಗ್
ನಾದ (ಡೆಕ್ಕ)

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹೆಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿವ್ವಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಆಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಸೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ 'ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಅತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

ಶರಣ ಸಂದೇಶ.

ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲನುಟ್ಟ ಜೂನ್ ತಾರೀಖು ೧೪ ನೆಯ ಸೋಮುವಾರ | ಸಂಚಿಕೆ ೪೨.

ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧಿವೇಶನ.

ವಿಧಾಯಕ ಕಾರ್ಯಕ್ರಮದ ಯೋಜನೆ.

ಕೆಂಪಂಗಿಯವರ ವಿಷಯಕವಾದ ಪತ್ರಕ ಪ್ರಕಟನೆ.

ಕಳೆದ ೧೨ನೆಯ ತಾರೀಖಿನ ದಿವಸ ವರ್ಧಾದಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಕೂಡಿದ್ದಿತು. ಸರಕಾರದವರು ರಾಷ್ಟ್ರೀಯ ಸಮಿತಿಗಳ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದುದರಿಂದ ಅವುಗಳ ಪುನರ್ಘಟನೆಯ ಕಾರ್ಯವನ್ನು ಹೇಗೆ ಮಾಡಬೇಕೆಂಬ ವಿಷಯವಾಗಿ ಅಂದು ಮುಂಜಾನೆ ಚರ್ಚೆಯಾಯಿತು. ಸಾಯಂಕಾಲ ಪುನಃ ಕೂಡಿ ಕೆಳಗಿನ ೩ ಗೊತ್ತುವಳಿಗಳು ಮಾಡಲ್ಪಟ್ಟವು.

(೧) ಶ್ರೀ. ಮಹೇಂದ್ರ ಪ್ರಸಾದರ ನಿಧನಕ್ಕಾಗಿ ದುಃಖ ಪ್ರದರ್ಶನ.

(೨) ಎಲ್ಲ ಪ್ರಾಂತಿಕ ಮತ್ತು ಸ್ಥಾನಿಕ ರಾಷ್ಟ್ರೀಯ ಸಮಿತಿಗಳು ಆಗಸ್ಟದ ಅಂತ್ಯದೊಳಗೆ ಹೊಸ ಆಯ್ಕೆಯಾಗಿ ಅ. ಭಾ. ರಾಷ್ಟ್ರೀಯ ಸಮಿತಿಯ ಪ್ರತಿನಿಧಿಗಳನ್ನಾರಿಸತಕ್ಕದ್ದು.

(೩) ಮೇ ೩೦ನೆಯ ತಾ. ದಿವಸದ ಗೊತ್ತುವಳಿಯ ಪ್ರಕಾರ ಕಾರ್ಯಕಾರಿ ಸಮಿತಿಯು ಪ್ರಾಂತಿಕ ಅರ್ಗನಾಯಿಝರನನ್ನು ನಿಯಮಿಸಿದುದು ಪ್ರಾಂತಿಕ ಸಮಿತಿಯ ಅಧಿಕಾರವನ್ನತಿಕ್ರಮಿಸುವ ಉದ್ದೇಶದಿಂದಲ್ಲ. ಆದರೆ ಪ್ರಾ. ಸಮಿತಿಗಳಿಗೆ ಅವಶ್ಯಕವಾದ ಸಹಾಯವನ್ನು ಮಾಡಲಿಕ್ಕಾಗಿ ನಿಯಮಿಸಲ್ಪಟ್ಟಿದೆ. ಇದಲ್ಲದೆ ಈ ಮುಂದಿನ ವಿಷಯವಾಗಿ ವಿಚಾರಿಸಲ್ಪಟ್ಟಿತು.

(೧) ವಿವಿಧ ರಾಷ್ಟ್ರೀಯ ಸಮಿತಿಗಳ ಪುನರ್ಘಟನೆ.

(೨) ವಿಧಾಯಕ ಕಾರ್ಯಕ್ರಮ.

(೩) ರಾಷ್ಟ್ರೀಯ ಸಭೆಯ ವಿಷಯಕ ಹಿಂದುಸ್ಥಾನದ ಧೋರಣವನ್ನು ವಿಶೇಷತಃ ಸರಹದ್ದ ಪ್ರಾಂತದ ಕೆಂಪಂಗಿಯವರ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕದಿದ್ದುದಕ್ಕಾಗಿ ಉಂಟಾದ ಪರಿಸ್ಥಿತಿಯ ವಿಚಾರ.

ಸರಹದ್ದ ಪ್ರಾಂತದ 'ಖುದಾ ಇ- ಖಿದ್‌ಮತ್‌ಗಾರ್' ಅಥವಾ ಕೆಂಪಂಗಿಯವರು ರಾಷ್ಟ್ರೀಯ ಸ್ವಯಂಸೇವಕರ ಒಂದು ಘಟಕ ವಾಗಿರುವರೆಂದು ೧೯೩೧ನೆಯ ಇಸವಿಯಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಮಾಡಿದ ಗೊತ್ತುವಳಿಯನ್ನು ಸಭೆಯಲ್ಲಿ ಓದಲಾಯಿತು. ಮತ್ತು ಆ ಪ್ರಾಂತದ ಜಿರಗಾ ಸಮಿತಿಯು ಪ್ರಾಂತಿಕ ರಾಷ್ಟ್ರೀಯ ಸಭೆಯೊಡನೆ ಕೂಡಿ ರಾಷ್ಟ್ರೀಯ ಧೋರಣೆಯ ಅನುಸಾರವಾಗಿಯೇ ಕಾರ್ಯ ಮಾಡುತ್ತಿರುವುದರಿಂದ ಅವೆಲ್ಲ ಸಮಿತಿಗಳು ಮತ್ತು ಸ್ವಯಂಸೇವಕರು ರಾಷ್ಟ್ರೀಯ ಸಭೆಯಿಂದ ಅಭಿನ್ನರಿರುವರೆಂಬುದನ್ನು ತೋರಿಸುವದಕ್ಕಾಗಿ ಒಂದು ಪತ್ರಕವು ಪ್ರಕಟಿಸಲ್ಪಟ್ಟಿತು.

ಮಹಾತ್ಮಾಜಿಯವರಿಗೆ ಮಾನಪತ್ರ.

ಪುಣೆ ನಗರಸಭೆಯವರು ತಮ್ಮಲ್ಲಿ ಮಹಾತ್ಮಾ ಗಾಂಧೀಜಿಯವರು ಅದಿಜನ ಸೇವಾ ಕಾರ್ಯದ ನಿಮಿತ್ತವಾಗಿ ಆಗಮಿಸುವಾಗ ಮಾನಪತ್ರ ಕೊಡಬೇಕೆಂದು ಬಹುಮತದಿಂದ ನಿರ್ಣಯಿಸಿದರು.

೫೦,೦೦೦ ರೂಪಾಯಿಗಳ ನಿಧಿ.

ಅದಿಜನ ಸೇವಾಕಾರ್ಯಕ್ಕೋಸ್ಕರ ಮುಂಬೈ ಪಟ್ಟಣದ ಪರವಾಗಿ ಮಹಾತ್ಮಾ ಗಾಂಧೀಜಿಯವರಿಗೆ ೫೦ ಸಾವಿರ ರೂಪಾಯಿಗಳ ನಿಧಿಯನ್ನು ಕೊಡುವುದು ಗೊತ್ತಾಗಿದೆ.

ಹಿಂದು ಸಮಾಜದ ದುರವಸ್ಥೆ.

ಈಗ ಜಗತ್ತಿನಲ್ಲಿರುವ ನಾಲ್ಕು ಮುಖ್ಯ ಸಮಾಜಗಳಲ್ಲಿ ಹಿಂದು ಸಮಾಜವೂ ಒಂದಾಗಿದೆ. ಆದರೆ ಇನ್ನುಳಿದ ಬೌದ್ಧ, ಕ್ರೈಸ್ತ ಮತ್ತು ಮುಸಲ್ಮಾನ್ ಸಮಾಜಗಳ ಅಭಿವೃದ್ಧಿಗೆ ಹೇಗೆ ಆಯಾಯ ಸಮಾಜಗಳಿಗೆ ಸ್ವತಂತ್ರವಾದ ರಾಜಕೀಯ ಸೌಲಭ್ಯಗಳುಂಟೋ ಹಾಗೆ ಈ ಸಮಾಜಕ್ಕೆ ಮಾತ್ರ ಇಲ್ಲ.

ಬೌದ್ಧ ಸಮಾಜವು ಕಾಲಮಾನಕ್ಕನುಗುಣವಾದ ಸುಧಾರಣೆಯನ್ನು ಮಾಡಿಕೊಳ್ಳಲು ಚೀನ ಜಪಾನ ದೇಶಗಳಲ್ಲಿ ಅದು ಸಂಪೂರ್ಣ ರಾಜಕೀಯ ಸ್ವಾತಂತ್ರ್ಯ ಸೌಲಭ್ಯಗಳುಳ್ಳದ್ದಾಗಿದೆ. ಆವಕಾರಣ ರಾಜಕೀಯ ಅಧಿಕಾರದಿಂದ ತನ್ನಲ್ಲಿರುವ ಯಾವ ದೋಷಗಳನ್ನಾದರೂ ಜಾಗ್ರತೆ ತೆಗೆದು ಹಾಕಿ ಗುಣಕಾರಿಯಾದ ನಿಯಮನಿರ್ಬಂಧಗಳನ್ನುಂಟುಮಾಡಿಕೊಂಡು ಪ್ರಪಂಚದ ಹೋರಾಟದಲ್ಲಿ ಕಾಲಕ್ಕೆ ತಕ್ಕಂತಹ ಶಕ್ತಿಯನ್ನು ಸಂಪಾದಿಸಿ ಮುಂದೆ ಬರುತ್ತಿದೆ.

ಇದೇ ಪ್ರಕಾರ ಕ್ರೈಸ್ತ ಮತ್ತು ಮುಸಲ್ಮಾನ್ ಸಮಾಜಗಳೂ ಸ್ವತಂತ್ರ ರಾಜ್ಯಗಳಿರುವುದರಿಂದ ಅವು ಕಾಲವಾನಕ್ಕೆ ತಕ್ಕ ಸುಧಾರಣೆಗಳನ್ನು ರಾಜ್ಯಾಧಿಕಾರದಿಂದಲೇ ಹೊಂದಿ ಅಭಿವೃದ್ಧಿಯನ್ನು ಹೊಂದುತ್ತಲಿವೆ.

ಆದರೆ ೩೫ ಕೋಟಿ ಜನಸಂಖ್ಯೆಯುಳ್ಳ ಈ ಘನವಾದ ಹಿಂದು ಸಮಾಜಕ್ಕೆ ಪ್ರಪಂಚದಲ್ಲಿ ಒಂದು ಗೇಣು ಸ್ಥಳವಾದರೂ ತನ್ನ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟದ್ದಿದೆಯೇ? ಇದು ಅನ್ಯ ಸಮಾಜದ ಕೈಯಿಂದ ತೆಗೆದುಕೊಂಡು ಪರಸನಮಾಜದ ಬಾಯಿಯಿಂದ ಊಟ ಮಾಡಿ ಜೀವಿಸುವಂತಹ ಶೋಚನೀಯವಾದ ಪಾರತಂತ್ರ್ಯದಲ್ಲಿಲ್ಲವೆ? ಎಂದಮೇಲೆ ಇದು ಬೌದ್ಧ, ಕ್ರೈಸ್ತ ಮತ್ತು ಮುಸಲ್ಮಾನ್ ಸಮಾಜಗಳಂತೆ ಅಭಿವೃದ್ಧಿಯನ್ನು ಹೊಂದುವುದು ಹೇಗೆ ಶಕ್ಯ?

ಈ ದಿನ ಜನಾಂಗಕ್ಕೆ ಶ್ರೇಯಸ್ಕರವಾದ ಯಾವುದಾದರೊಂದು ಹೊಸ ವಿಚಾರವು ಪ್ರಪಂಚದ ಯಾವ ದೇಶದಲ್ಲಿ ಉದಯವಾದರೂ ಅದನ್ನು ಆಯಾಯ ಸಮಾಜಗಳು ನಾಳೆಯೇ ಅನುಸರಿಸಿ ಸುಖಶಾಂತಿಗಳನ್ನು ಹೊಂದಲು ಅವುಗಳಿಗೆ ರಾಜಕೀಯ ಸೌಲಭ್ಯಗಳಿವೆ. ಹಾಗೆ ಹಿಂದು ಸಮಾಜಕ್ಕಿದೆಯೆ? ಇದು ಸಾವಿರಾರು ವರುಷಗಳ ಹಿಂದೆ ಸ್ವಾತಂತ್ರ್ಯವಿದ್ದಾಗ ಮಾಡಿಕೊಂಡ ನಿಯಮನಿರ್ಬಂಧನೆಗಳಂತೆಯೇ ಈಗಲೂ ನಡೆಯುತ್ತಿರುವುದೇ ಹೆಚ್ಚು. ಕಳೆದೊಂದು ಶತಮಾನದಲ್ಲಿ ಮನುಷ್ಯ ಜಾತಿಗೆ ಬಹು ಪ್ರಯೋಜನಕಾರಿಯಾದ ಅನೇಕ ಹೊಸ ವಿಚಾರಗಳು ಕ್ರೈಸ್ತ, ಬೌದ್ಧ, ಮುಸಲ್ಮಾನ್ ಸಮಾಜಗಳಲ್ಲಿ ಪ್ರಸಾರವಾಗುತ್ತಿದ್ದರೂ ಹಿಂದು ಸಮಾಜಕ್ಕೆ ಅವುಗಳ ಸುದ್ದಿಯೇ ಇಲ್ಲ. ಈ ಸಮಾಜವು ಅನ್ಯ ಸಮಾಜಗಳ ಸುಖ ಸೌಲಭ್ಯಗಳಿಗೆ ಒಂದು ಉಪಕರಣವಾಗಿ ಜೀವಿಸುತ್ತಿದೆ.

ಹಿಂದು ಸಮಾಜವು ೨೦ನೆಯ ಶತಮಾನದ ಆಚಾರಗಳುಳ್ಳದ್ದಾಗಿದ್ದರೂ ಹತ್ತನೆಯ ಶತಮಾನದ ವಿಚಾರಗಳುಳ್ಳದ್ದಾಗಿದೆ. ಒಂದು ವ್ಯಕ್ತಿಯು ಪಾಟ್ಲನ್, ಕಸಿ ಅಂಗಿ, ಕಾಲರ್ ನೆಕ್ಟಾಯ್, ರುಮಾಲು ಹಾಕಿಕೊಂಡು ಬರಿಗಾಲಲ್ಲಿ ನಡೆಯುತ್ತ ಕೈಗಳಲ್ಲಿ ರುದ್ರಾಕ್ಷಿ ಮಾಲೆಯನ್ನು ಹಿಡಿದುಕೊಂಡು ಬಂದರೆ ಜನರು ನೋಡಿ ನಗಲಿಕ್ಕಿಲ್ಲವೆ? ಈ ವ್ಯಕ್ತಿಗೆ ಹುಚ್ಚು ಹಿಡಿದಿರಬೇಕೆಂದು ಯೋಚಿಸಲಿಕ್ಕಿಲ್ಲ [illegible] ಸ್ಥಿತಿಯಾದರೂ ಈಗ ಹಾಗೆಯೆ [illegible]ಂದ ನೋಡುವ ನಿಷ್ಪಕ್ಷಪಾತಿಗಳ [illegible]

[illegible]ವುದು ಪ್ರತಿಷ್ಠೆಯ ಲಕ್ಷಣವೆಂದು ಹಿಂದು ಜನಾಂಗವು ತಿಳಿದು ಅದನ್ನುಪಯೋಗಿಸಲಾರಂಭಿಸಿದೆ. ಆದರೆ ಬೂಟು ಮಾಡುವ ಕೆಲಸ ಹೀನವಾದುದೆಂದು ತಿಳಿದುಕೊಂಡಿದೆ. ಕೈಯಲ್ಲಿ ವಾಚ್ ಹಾಕಿಕೊಳ್ಳುವುದು ಅಗತ್ಯವೆಂದು ಭಾವಿಸಿದೆ. ಆದರೆ ತಾಸು ಗಟ್ಟಲೆಯಲ್ಲ; ದಿನಗಟ್ಟಲೆ ಕಾಲವನ್ನು ನಿರುದ್ಯೋಗದಲ್ಲಿ ಕಳೆಯುತ್ತಲಿದೆ. ಸ್ಟೋವ್ಹ, ಕುಕ್ಕರ್‌ಗಳಲ್ಲಿ ಅಡಿಗೆ ಮಾಡುತ್ತದೆ. ಆದರೆ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂದು ಹೇಳುತ್ತಿದೆ. ಪ್ರಜಾ ಪ್ರಭುತ್ವ ಬೇಕೆಂದು ಪ್ರಯತ್ನಿಸುತ್ತಿದೆ. ಆದರೆ ಜನ್ಮವಿಶಿಷ್ಟವಾದ ಚಾತುರ್ವರ್ಣಗಳಿರಬೇಕೆಂದು ಪ್ರತಿಪಾದಿಸುತ್ತದೆ.

ಈ ಪ್ರಕಾರ ಒಂದಲ್ಲ, ಎರಡಲ್ಲ, ಅನೇಕ ರೀತಿಗಳಲ್ಲಿ ಇದರ ಬಾಹ್ಯ ಸ್ವರೂಪಕ್ಕೂ ಆಂತರ್ಯ ವಿಚಾರಕ್ಕೂ ಮೇಳವಿಲ್ಲದೆ ಇಂಗ್ಲಿಷ್ ಔಷಧಿ ಆಯುರ್ವೇದದ ಪಥ್ಯಗಳಿಂದ ಬಳಲುವ ರೋಗಿಯಂತೆ ಇದರ ಸ್ಥಿತಿಯಾಗಿದೆ. ಇದು ಹಿಂದು ಸಮಾಜಕ್ಕೆ ಸಂಕ್ರಮಣ ಕಾಲವು. ಈ ದುರವಸ್ಥೆಯಿಂದ ಇದು ಜಾಗ್ರತೆ ಪಾರಾಗಬೇಕು. ಕಳೆದ ೪೦-೫೦ ವರುಷಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉಂಟಾದ ಅದ್ಭುತ ವಿಚಾರ ಕ್ರಾಂತಿಯ ಕಲ್ಪನೆಯೇ ಹಿಂದು ಜನಾಂಗಕ್ಕಿಲ್ಲದಿದ್ದುದರಿಂದ ಮೇಲಣ ದೃಷ್ಟಾಂತಗಳು ಸಮಾಜ ಸುಧಾರಣೆಗೆ ಹೇಗೆ ಸಂಬಂಧಪಡುತ್ತವೆಂದು ಅನೇಕರು ಯೋಚಿಸಿದರೂ ಯೋಚಿಸಬಹುದು.

ಕಾರ್ಲಮಾರ್ಕ್ಸ್ ಎಂಬ ಪ್ರಸಿದ್ಧ ಸಮಾಜ ಶಾಸ್ತ್ರಜ್ಞನು ಹೀಗೆ ಹೇಳುತ್ತಾನೆ—"ಸಮಾಜದ ಸಕಲ ಹಿತಾಹಿತಗಳೂ ಮುಖ್ಯವಾಗಿ ಅದರ ಸಾಂಪತ್ತಿಕ ಸ್ಥಿತಿಯ ಮೇಲೆಯೇ ಅವಲಂಬಿಸಿವೆ." ಫ್ರಾಯಿಡ್ ಎಂಬ ಸಮಾಜ ಶಾಸ್ತ್ರಜ್ಞನಾದರೋ "ಸಮಾಜ ಸ್ಥಿತಿಗೆ ಕಾಮ ವಾಸನಾ ತೃಪ್ತಿಯ ರೀತಿ ಅಥವಾ ಕೌಟುಂಬಿಕ ರೀತಿಯೇ ಮೂಲವೆಂದು ಸಾರಿದ್ದಾನೆ." ಈ ತತ್ವಗಳ ಪ್ರಯೋಗಗಳೂ ನಡೆದು ಮನುಷ್ಯ ಜಾತಿಯ ಈವರೆಗಿನ ಆಚಾರ ವಿಚಾರಗಳಲ್ಲಿ ಅದ್ಭುತ ಸುಧಾರಣೆಗಳಾಗಿವೆ.

ವರ್ಣಗಳ ಮೇಲು ಕೀಳಿನ ಕೊಳೆಯು ನಿವಾರಣೆಯಾಗಬೇಕು. ಎಲ್ಲ ಕಸಬುಗಳೂ ಪವಿತ್ರ ಕಾರ್ಯಗಳೆಂದೇ ತಿಳಿಯಬೇಕು. ಸ್ತ್ರೀ ಸ್ವಾತಂತ್ರ್ಯ, ಲಗ್ನ ಸುಧಾರಣೆ, ಸಂತಾನ ನಿರೋಧ, ಸುಪ್ರಜಾ ಜನನ ಮುಂತಾದ ಸಮಾಜಕ್ಕೆ ಆತ್ಯಾವಶ್ಯಕವಾಗಿರುವ ಅನೇಕ ಹೊಸ ವಿಚಾರಗಳ ಪರಿಜ್ಞಾನವಾಗಬೇಕು. ಅನೇಕ ಮಠ ಆಚಾರ ವಿಚಾರಗಳು ಲಯವಾಗಬೇಕು. ಈ ವಿಷಯಗಳಲ್ಲಿ ಜನ ಜಾಗೃತಿಯಾಗುವ ಪ್ರಚಂಡ ಪ್ರಯತ್ನಗಳು ನಡೆದು ಇಪ್ಪತ್ತನೆಯ ಶತಮಾನದ ಆಚರಣೆಗೆ ತಕ್ಕಂತೆ ಒಳ್ಳೆಯ ವಿಚಾರಗಳೂ ಉಂಟಾದಾಗಲೇ ಹಿಂದು ಸಮಾಜವು ಸುಸ್ಥಿತಿಯನ್ನು ಹೊಂದುವುದು.

ಬಾಳೇಹಳ್ಳಿ ಶ್ರೀಗಳ ಗುಟ್ಟು ರಟ್ಟಾದ ಸಾರಾಂಶ.

ತಾ|| ೪-೬-೩೪ರ 'ತಾಯಿನಾಡು' 'ವೀರಕೇಸರೀ' ಪತ್ರಿಕೆಗಳಲ್ಲಿ ಪ್ರಕಟವಾದಂತೆ ಮೈಸೂರು ಅಡ್ವೋಕೇಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಪುಟ್ಟ ಶಾಮಯ್ಯ ಬಿ. ಎ. ಎಲ್. ಎಲ್. ಬಿ. ಯವರು ಇಲ್ಲಿಗೆ [illegible] ರಾ. ಶ್ರೀ. ರಾಮಭದ್ರ ಗೌಡರವರೂ, [illegible] ಶಿವಲಿಂಗಪ್ಪ ಶೆಟ್ಟರು ಮತ್ತು [illegible] ಳ್. ರವರು ತಾ. ೨-೬-೩೪ನೆಯ ದಿವಸ ರಂಭಾಪುರಿಯವರನ್ನು ನೋಡಲು ಸಮಯ ತೆಗೆದುಕೊಂಡು ಧರ್ಮಪ್ರವರ್ತಕ ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಸೇರಿದ್ದ ವಿಷಯವು ಎಲ್ಲರಿಗೂ ಗೊತ್ತಿರಬಹುದು.

ಆ ಮಹನೀಯರು ಸಮಯ ತೆಗೆದುಕೊಂಡು ಬಂದಾಗ್ಯೂ ಸ್ವಾಮಿಗಳ ಕೂಡ ಸಂಭಾಷಣೆ ಮಾಡಲು ಅರ್ಧಗಂಟೆಯ ಕಾಲ ಕಾಯಬೇಕಾದ ಪ್ರಸಂಗ ಒದಗಿತು. ಅವರು ವಿಚಾರಿಸುವಲ್ಲಿ ಸ್ವಾಮಿಗಳ ಜನರಲ್ಲೊಬ್ಬರು ಸ್ವಾಮಿಗಳು ಶಿವಪೂಜೆಯಲ್ಲಿದ್ದಾರೆಂದು ತಿಳಿಸಿದರು. ಹಾಗೆ ಸ್ವಲ್ಪ ಹೊತ್ತು ಕಾದು ಕೂತಿರುವಲ್ಲಿ ಸ್ವಾಮಿಗಳ ಸವಾರಿಯು ಬಿಜಯಿಸಿತು. ಸ್ವಲ್ಪ ಮಾತುಕತೆಗಳು ನಡೆಯುವ ಸಮಯಕ್ಕೆ ಸ್ವಾಮಿಗಳ ಜನಗಳಲ್ಲೊಬ್ಬರು ನಡುವೆ ನುಗ್ಗಿ ಅಡ್ಡಬಿದ್ದು ಶಿವಪೂಜೆಗೆ ಹೊರಡಬೇಕು. ಬಹಳ ಹೊತ್ತಾಯಿತೆಂದರು. ಹಾಗೂ ಸ್ವಲ್ಪ ಮಾತಾಡುತ್ತಿರುವಾಗಲೇ ಪಕ್ಕದಲ್ಲಿ ಘಂಟಾ ಜಾಂಗಟೆಗಳು ಏಕ ಕಾಲದಲ್ಲಿ ಬಾರಿಸಲ್ಪಟ್ಟು ಅವುಗಳ ಭೋರ್ಗರೆಯುವ ಧ್ವನಿಯಿಂದ ಒಬ್ಬರ ಮಾತು ಒಬ್ಬರಿಗೆ ಕೇಳದಂತಾಯಿತು. ಕೊನೆಯಲ್ಲಿ ಶ್ರೀಗಳು ಉಗ್ರಕೋಪವನ್ನು ತಾಳಿ ತಮ್ಮನ್ನೆಷ್ಟು ಮಾತ್ರಕ್ಕೂ ಬೊಂಬೆಯಂತೆ ತಿಳಿಯಬೇಡಿ, ನಿಮ್ಮ ಮಾತುಗಳಿಗೆ ನಾವು ಕಿವಿಗೊಡುವವರಲ್ಲ. ಸಾವಿರಾರು ಜನಗಳಲ್ಲ ಕೋಟ್ಯಾಂತರ ಜನರು ನಮಗೆ ವಿರೋಧಿಗಳಾದರೂ ನಾವು ಮಾತ್ರ ಎಂದಿಗೂ ಪ್ರಮಥ ಶ್ರೇಣಿಗೆ ಪೂಜ್ಯಭಾವವನ್ನು ತೋರಿಸುವವರಲ್ಲ. ಎಂದು ಹೇಳಿ ಛಟ್ಟನೆ ಒಳಕ್ಕೆ ಬಿಜಯಿಸಿದರು. ಸಮಾಜದಲ್ಲುಂಟಾಗಿರುವ ನ್ಯೂನಾತಿರೇಕಗಳನ್ನು ತೆಗೆದುಹಾಕಿ ಶಾಂತಿ ಸಮಾಧಾನಗಳನ್ನುಂಟುಮಾಡಬೇಕೆಂಬುದಾಗಿ ಮಾತುಕತೆ ನಡೆಸಲು ಹೋಗಿದ್ದ ಮಹನೀಯರು ಆಶಾಭಂಗ ಪೂರ್ಣರಾಗಿ ಹಿಂತಿರುಗಿದರು. ಇದಲ್ಲವೆ ಒಂದು ಪೀಠಕ್ಕೆ ಅಧ್ಯಕ್ಷರಾಗಿ ಆ ಪೀಠದ ಶಿಷ್ಯ ವರ್ಗದವರಿಗೆ ಮಾಡುವ ಉಪದೇಶ. ಎಲ್ಲರು ಅವರು ಹೇಳಿದಂತೆ ಕೇಳಿದರೆ ಕೇಳಬೇಕು. ಅದಲ್ಲದೆ ಎಲ್ಲರೂ ವಿರೋಧಿಗಳಾದರೂ ಇವರಿಗೆ ವ್ಯಸನವಿದ್ದಂತಿಲ್ಲ. ಯಾರೊಬ್ಬರು ಒಂದು ಪೀಠದ ಅಧ್ಯಕ್ಷರಾಗಿ ಸಮಾಜದ ಧಾರ್ಮಿಕ ಸುಧಾರಣೆಯನ್ನು ಮೂಲೆಗೊರಗಿಸಿ ಆ ಪೀಠದ ಅಸಂಖ್ಯಾತ ಶಿಷ್ಯರಿಗೆ ವಿರೋಧಿಯೆಂದೆನಿಸಿಕೊಂಡ ಮೇಲೆ ಅವರು ಆ ಪೀಠದಲ್ಲಿರುವ ಅವಶ್ಯಕತೆಯಾದರೂ ಯಾವುದು? ನಾವು ಶಿಷ್ಯ ವರ್ಗದಿಂದ ಆ ಸ್ಥಾನಕ್ಕೆ ನಿಯಮಿಸಲ್ಪಟ್ಟವರೆಂಬುದನ್ನು ಮರೆತು ಆ ಸ್ಥಾನವು ತಮ್ಮ ಪಿತ್ರಾರ್ಜಿತ ಸೊತ್ತೆಂಬಂತೆಯೂ, ಎಲ್ಲವೆ ಶ್ರೀ ಭಗವದನುಜ್ಞೆಯಂತೆ ಕೈಲಾಸದಿಂದಿಳಿದುಬಂದು ಆ ಸ್ಥಾನವನ್ನು ಆಶ್ರಮಿಸಿಕೊಂಡಂತೆ ಶಿಷ್ಯರಲ್ಲಿ ಅಪ್ಪಣೆ ಕೊಡಿಸುತ್ತಿರುವರು. ಶಿಷ್ಯರು ಛಟ್ಟಿಯಾದ ಮತಗಳನ್ನು ಕಟ್ಟಿಕೊಟ್ಟು ಅವರ ಪರಿತಾರ್ಥವು ಸಮಾಜ ಕಲ್ಯಾಣವಲ್ಲಿ ಸುಸೂತ್ರವಾಗಿ ಜರುಗಲೆಂದು ಮಾನ್ಯ ಹಾಕಿಸಿಕೊಟ್ಟಿರುವುದು ಮತದಯ್ಯನವರ ವಿಷಯ ಸುಖಕ್ಕಲ್ಲ. ಜನಾಂಗದ ಹಿತಕ್ಕೆ, ಮೇಲ್ಮೆಗೆ, ಮತ್ತು ಧಾರ್ಮಿಕ ಸುಧಾರಣೆಗೆ. ಇನ್ನೊಂದು ವಿಷಯ. ಹಿಂದೆ ಮ|| ರಾ|| ತೂಬಗೆರೆ ನಂಜಪ್ಪನವರು ಇದೇ ವಿಚಾರ ಮಾತನಾಡಲು ಅವರಲ್ಲಿ ಹೋಗಿದ್ದಾಗ್ಗೆ ಸ್ವಲ್ಪ ಮಾತುಕತೆ ನಡೆಯಲು ಪ್ರಾರಂಭವಾಗುವ ಸಮಯಕ್ಕೆ ಸ್ವಾಮಿಗಳ ಜನರಲ್ಲೊಬ್ಬರು ಅಡ್ಡಬಂದು ನುಹಾಸ್ವಾಮಿಗಳ ದರ್ಶನಕ್ಕೆಂದು ಹೊರಗೆ ಬಹಳ ಜನ ಕಾದಿರುವರೆಂದು ಹೇಳಿ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ಕೊನೆಗೆ ಶ್ರೀಯುತರು ಹೊರಗೆ ಬಂದು ನೋಡುವಲ್ಲಿ ಒಬ್ಬರೂ ಇಲ್ಲದಿರುವುದನ್ನು ನೋಡಿ ಆಶಾಭಂಗರಾಗಿ ಹಿಂತಿರುಗಿದರು. ಹೀಗೆ ಇವರ ಹತ್ತಿರ ಹೋಗಿ ಮಾತನಾಡುವವರಿಗೂ ಅವಕಾಶ ಕೊಡುವುದಿಲ್ಲ. ಆದ ಕಾರಣ ಇನ್ನು ಮುಂದೆ ಪತ್ರಿಕೆಗಳ ಮೂಲಕ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲ. ಆದಕಾರಣ ಇನ್ನು ಮುಂದೆ ಪತ್ರಿಕೆಗಳ ಮೂಲಕ ಪ್ರಶ್ನೆಗಳು ಕೇಳುವುದೂ ಬೇಡ. ಹತ್ತಿರ ಹೋಗಿ ಉಪದೇಶ ಕೇಳುವುದೂ ಬೇಡವೆಂದು ಮಹಾಜನರಲ್ಲಿ ನನ್ನ ಚಿಕ್ಕ ದೊಂದು ಅರಿಕೆ. ಪಾತ್ರೆಯಲ್ಲಿ ಬೇಯುವ ಒಂದಗುಳನ್ನು ಪರೀಕ್ಷಿಸಿದ ಮೇಲೆ ಬಾಕಿ ಉಳಿದಗಳುಗಳನ್ನು ನೋಡುವ ಅವಶ್ಯಕವಿರುವುದಿಲ್ಲ. ಅದರಂತೆ ಈ ಸ್ವಾಮಿಗಳವರಲ್ಲಿ ಪ್ರಶ್ನಿಸುವುದರ ಫಲ ತಾಂಶ.

ಇತಿ ಸಮಾಜಾಭಿಮಾನಿ,
ಓರ್ವ ಪ್ರತ್ಯಕ್ಷದರ್ಶಿ.

ಮುಂಬಯಿಯಲ್ಲಿ ಪಂ. ಮಾಲವೀಜಿಯವರು.

ಪಂ. ಮಾಲವೀಜಿಯವರು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಉಪಸ್ಥಿತರಾಗಲು ಮುಂಬಯಿಗೆ ಗಾಳಿನೆಯ ತಾರೀಖಿನೆ ಬಂದರು. ಅವರು ತಮ್ಮ ಸಂದರ್ಶನೆಯ ಕಾಲಕ್ಕೆ "ದೇಶಕ್ಕೆ ಈಗ ಐಕ್ಯತೆಯ ಅವಶ್ಯಕತೆಯು ವಿಶೇಷವಾಗಿದ್ದು ಅದನ್ನುಂಟುಮಾಡಲು ಶಕ್ಯವಿದ್ದಷ್ಟು ಪ್ರಯತ್ನಿಸುವೆನು. ಐಕ್ಯವುಂಟಾಗುವ ವಿಷಯದಲ್ಲಿ ನನಗೆ ಸ್ವಲ್ಪವೂ ಸಂಶಯವು ತೋರುವದಿಲ್ಲ." ಎಂದರು.

ಸರದಾರ ವಲ್ಲಭಭಾಯಿಯವರ ಮುಕ್ತತೆಗೆ ವಿರೋಧ.

ಸರದಾರ ಪಟೇಲರ ಮುಕ್ತತೆಯ ವಿಷಯವಾಗಿ ವಿರೋಧಾಭಿಪ್ರಾಯವನ್ನು ಜೆಲ್ಲಾಧಿಕಾರಿಗಳು ವರಿಷ್ಠರಿಗೆ ತಿಳಿಸಿದ್ದಾರೆ. ಸರದಾರರು ಮಹಾತ್ಮರಿಗಿಂತಲೂ ಭಯಂಕರರೆಂದೂ ಅವರನ್ನು ಬಿಟ್ಟರೆ ಜನಸಂಘಟನೆ ಮಾಡಿ ಬಹಿರಂಗವಾದ ಚಟುವಟಿಕೆಯನ್ನು ಪ್ರಾರಂಭಿಸಲು ಮಹಾತ್ಮಾಜಿಯವರಿಗಿಂತ ಅವರಲ್ಲಿ ಹೆಚ್ಚು ಸಾಮರ್ಥ್ಯವಿದೆಯೆಂದೂ ಇವರಿಗೆ ತೋರಿದೆ. ಬಿಟ್ಟರೆ ಏನು ಮಾಡುವರೆಂದು ಸರಕಾರದವರು ಕೇಳಲು ಸರದಾರರು— "ನಾನೊಬ್ಬ ರಾಷ್ಟ್ರೀಯ ಸೇವಕನು. ರಾಷ್ಟ್ರೀಯ ಸಭೆಯು ಆಜ್ಞಾಪಿಸಿದಂತೆ ನಡೆಯುವೆನು" ಎಂದರಂತೆ.

—ಚಿಕ್ಕೋಡಿಯಲ್ಲಿಯ ಶೀಲ ಬಲಸಂವರ್ಧಕ ವ್ಯಾಯಾಮ ಮಂಡಲಿಯವರು ಮೆ ತಿಂಗಳಿನಲ್ಲಿ ಒಂದು ಲಕ್ಷ ಸೂರ್ಯ ನಮಸ್ಕಾರ ಹಾಕುವ ಸಂಕಲ್ಪ ಮಾಡಿ ಆ ಪ್ರಕಾರ ಪೂರ್ಣ ಮಾಡಿದರು.

ಹುಬ್ಬಳ್ಳಿ ವೀರಶೈವ ಮಡಿವಾಳರ ಸಭೆ.

ತರುಣ ಕರ್ನಾಟಕ ತಾ. ೧೧-೬-೩೪.

ನಿನ್ನೆ ಇಲ್ಲಿಯ ಓಲೀಮಠದಲ್ಲಿ ಹುಬ್ಬಳ್ಳಿಯ ವೀರಶೈವ ಮಡಿವಾಳರು ತಮ್ಮ ಧಾರ್ಮಿಕ ಸಾಮಾಜಿಕ ಸಮುನ್ನತಿಗಾಗಿ ಕೈಕೊಳ್ಳ ತಕ್ಕ ಉಪಾಯಗಳ ಆಲೋಚನೆಗಾಗಿ ಶ್ರೀ ಬಿಳೆ ಅಂಗಡಿ ವಕೀಲರ ಅಧ್ಯಕ್ಷತೆಯಲ್ಲಿ ಸಭೆಗೂಡಿಸಿದ್ದರು. ಈ ಸಭೆಗೆ ಮಡಿವಾಳರಲ್ಲಿಯ ಪ್ರಮುಖ ಸದ್ಗೃಹಸ್ಥರಾದ ೧ ಸಿದ್ಧಪ್ಪ ನಿಂಗಪ್ಪ ಬೆಳಗಲಿ, ೨ ರಾಮಪ್ಪ ಮಡಿವಾಳರ, ೩ ಚನಬಸಪ್ಪ ಸತ್ತೂರು, ೪ ನುಲ್ಲಪ್ಪ ಸತ್ತೂರು, ೫ ತಿಪ್ಪಣ್ಣ ಮಡಿವಾಳರ, ೬ ಯಲ್ಲಪ್ಪ ಸತ್ತೂರ, ೭ ಯಲ್ಲಪ್ಪ ಮಡಿವಾಳರ, ೮ ಮುದಕಪ್ಪ ಮಡಿವಾಳರ ೯ ಬಸಪ್ಪ ಮಡಿವಾಳರ, ೧೦ ಕಲ್ಲಪ್ಪ ಮಡಿವಾಳರ, ೧೧ ಪ್ರಭಣ್ಣ ಮ.ಳಗುಂದ, ೧೨ ಶಿಡ್ಲಿಂಗಪ್ಪ ಕುಂದಗೋಳ, ೧೩ ಅಡಿವೆಪ್ಪ ಮಡಿವಾಳರ ೧೪ ನೀಲಕಂಠಪ್ಪ ಬನ್ನೆ ಮೊದಲಾದವರು ಬಂದಿದ್ದರು.

ಇದಲ್ಲದೆ ವೀರಶೈವ ಸದ್ಗೃಹಸ್ಥರಾದ ಶ್ರೀಮಾನ್ ಸಿದ್ಧರಾಮಪ್ಪನವರು ವಾಪಟೆ, ಶ್ರೀ. ನಿ. ಬ. ಬಿಳೆಅಂಗಡಿ, ಶ್ರೀ. ಚಂದ್ರಶೇಖರ ಶಾಸ್ತ್ರಿಗಳು, ಶ್ರೀ. ಗುರುಶಾಂತಪ್ಪನವರು ಗೊಬ್ಬಣ್ಣನವರ ಶ್ರೀ. ಎಲ್. ಎಸ್, ವಾಟೇಲ ಮೊದಲಾದವರು ಬಂದಿದ್ದರು.

ಶ್ರೀ. ನೀಲಕಂಠಪ್ಪ ಬನ್ನೆ ಇವರು— "ನಾವು ವೀರಶೈವರೇ ಇದ್ದು ನಮ್ಮ ಹೀನ ಉದ್ಯೋಗದ ಸಲುವಾಗಿ ಇವರನ್ನು ವೀರಶೈವರು ಬದಿಗಿರಿಸುತ್ತ ಬಂದಿದ್ದಾರೆ. ನಮ್ಮ ಮನೆಗೆ ಜಂಗಮರು ಬರುವದಿಲ್ಲ. ನಮ್ಮ ವಿದ್ಯಾರ್ಥಿಗಳಿಗೆ ಲಿಂಗಾಯತ ಫಂಡು ಸಿಗುವದಿಲ್ಲ. ಕಳೆದ ವರುಷ ಕೂಡಿದ ವೀರಶೈವ ಮಹಾ ಸಭೆಯಲ್ಲಿ ನಮಗೆ ಸ್ಕಾಲರಸಿಪ್ಪು ಫಂಡು ಕೊಡಬೇಕೆಂದು ನಿರ್ಣಯವಾಗಿದೆ. ಆದರೂ ನಮಗೆ ಇನ್ನೂ ಫಂಡು ಸಿಗುವದಿಲ್ಲ ನಮ್ಮ ಸ್ಥಿತಿಗತಿಯನ್ನು ಸುಧಾರಿಸಲಿಕ್ಕೆ ಯಾರೂ ಪ್ರಯತ್ನಿಸುವದಿಲ್ಲ. ಈ ಎಲ್ಲ ತೊಂದರೆಗಳನ್ನು ದೂರಮಾಡಿ ನಮಗೆ ದೀಕ್ಷೆ ಕೊಟ್ಟು ನಮ್ಮ ಮನೆಗೆ ಜಂಗಮರು ಬರುವಂತೆ ಮಾಡಿರಿ, ಹಾಗು ನಮ್ಮ ಸಮಾಜವು ಊರ್ಜಿತಾವಸ್ಥೆಗೆ ಬರುವಂತೆ ಮಾಡಬೇಕೆಂದು ನಮ್ಮ ವಿನಂತಿ ಅದೆ. ಅಲ್ಲದೆ ನಮ್ಮ ಆರ್ಥಿಕ ಸ್ಥಿತಿಯು ಹೀನವಾದ್ದರಿಂದ ನಾವು ಭವಿಗಳ ಬಟ್ಟೆಯನ್ನು ಒಗೆಯುತ್ತ ಬಂದೆವು. ನೀವು (ವೀರಶೈವರು) ಭವಿಗಳಿಂದ ನಿಮ್ಮ ಮಡಿ ಮಾಡಿಸದೆ ನಿಮ್ಮಿಂದ ಮಾಡಿಸಹತ್ತಿದರೆ ನಾವು ನಮ್ಮ ಧರ್ಮದ ನಿಯಮಗಳಂತೆ ಭವಿಗಳ ಬಟ್ಟೆಗಳನ್ನು ಒಗೆಯುವುದಿಲ್ಲವೆಂದು" ಮುಂತಾಗಿ ಭಾಷಣ ಮಾಡಿದರು.

ಆ ಮೇಲೆ ಶ್ರೀ. ವಾಪಟೆ ವಕೀಲರು ತಮ್ಮ ಭಾಷಣದಲ್ಲಿ— "ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಧರ್ಮಗಳು ಶಿಥಿಲವಾಗಿವೆ. ನಿಜವಾದ ವೀರಶೈವರ ಧರ್ಮದಂತೆ ಆಚರಿಸುವಂತಿದ್ದರೆ ನೀವು ಭವಿಗಳ ಬಟ್ಟೆಗಳನ್ನು ಒಗೆಯಕೂಡದು ಹಾಗು ದೀಕ್ಷೆಯನ್ನು ಹೊಂದಬೇಕು. ಅಂದರೆ ನಿಮ್ಮ ಮನೆಗೆ ಜಂಗಮರು ಊಟಕ್ಕೆ ಬರುತ್ತಾರೆ. ಆದರಂತೆ ಉಳಿದ ವೀರಶೈವರೂ ಬರುತ್ತಾರೆ. ನೀವು ವೀರಶೈವ ಧರ್ಮದ ಕಟ್ಟಳೆಯನ್ನು ಪಾಲಿಸಲೇ ಬೇಕಾಗುವದು. ನಮ್ಮ ಮಡಿವಾಳ ಮಾಚಯ್ಯನು ಶ್ರೀ ಬಸವಣ್ಣನವರಿಗೆ ಸಹ ಬುದ್ಧಿ ಹೇಳುವಂಥವನಾಗಿದ್ದು ಭವಿಗಳ ಮುಖವನ್ನು ಸಹ ನೋಡುತ್ತಿದ್ದಿಲ್ಲ. ಅಂಥ ಮಹಿಮಾಶಾಲಿಯಾದ ಮಡಿವಾಳ ಮಾಚಯ್ಯನ ವಂಶಜರಾದ ನೀವು ಭವಿಗಳ ಬಟ್ಟೆಗಳನ್ನು ಒಗೆದು ಅವರ ಸೇವೆ ಮಾಡುವದು ಶೋಚನೀಯವು. ನಿಮ್ಮ ಆರ್ಥಿಕ ಸ್ಥಿತಿಯು ನೆಟ್ಟಗಿಲ್ಲದ್ದೇನೋ ನಿಜ. ಆದನ್ನು ಸುಧಾರಿಸಲಿಕ್ಕೆ ನಾವೂ ನೀವೂ ಕೂಡೇ ಪ್ರಯತ್ನಿಸಬೇಕು. ನಿಮಗೆ ಲಿಂಗಾಯತ ಫಂಡಿನಿಂದ ಸ್ಕಾಲರಸಿಪ್ಪು ಕೊಡುವ ಅವರ ಮನಸ್ಸೊಪ್ಪುವಂ

ವೀರಶೈವ ಮಡಿವಾಳರ ಪಂಗಡದವರು ಕೆಲವು ಸಾಮಾಜಿಕ ಕಾರಣಗಳಿಂದ ಇದೇ ಕಾಯಕವನ್ನು ಮಾಡಿ ಬಸವಾದಿ ಪ್ರಮಥರಿಗೂ ವಂದ್ಯನೆನಿಸಿದ ಶ್ರೀ ಮಡಿವಾಳ ಮಾಚಿದೇವನ ಉಚ್ಚ ಸ್ಥಾನದಿಂದ ಜರಿದಿರುವರು. ಈ ದುಃಸ್ಥಿತಿಗೆ ಇಡೀ ವೀರಶೈವ ಸಮಾಜವು ಅಪರಾಧಿಯಿದೆ. ಈ ಅಪರಾಧವನ್ನು ತೊಳೆದು ಈ ಬಾಂಧವರನ್ನು ವೀರಶೈವ ಸಮಾಜದ ಸಮಗ್ರತೆಯಲ್ಲಿ ಸೇರಿಸಲಿಕ್ಕಾಗಿ ಈ ಹುಬ್ಬಳ್ಳಿಯ ವೀರಶೈವ ನಾಗರಿಕರ ಸಭೆಯನ್ನು ಆದಷ್ಟು ತೀವ್ರವೇ ಆಂದರೆ ಇನ್ನು ೭ ದಿವಸಗಳು ಮೀರದಂತೆ ಕರೆಯಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಇದಕ್ಕೆ ಶ್ರೀ. ಗುರುಶಾಂತಪ್ಪನವರು ಗೊಬ್ಬಣ್ಣನವರ ಇವರು ಅನುಮೋದಿಸಿದರು. ಈ ಠರಾವು ಸರ್ವಾನುಮತದಿಂದ ಪಾಸಾಯಿತು.

ಈ ಕಾರ್ಯಕ್ಕಾಗಿ ಒಂದು ಉಪ ಮಂಡಲವನ್ನು ಗೊತ್ತು ಮಾಡಲಿಕ್ಕೆ ಈ ವಿಷಯದಲ್ಲಿ ಮುನಃಪೂರ್ವಕವಾಗಿ ಕೆಲಸ ಮಾಡುವ ವೀರಶೈವರದೊಂದು ಸಭೆಯನ್ನು ಕೂಡಿಸಲಿಕ್ಕೆ ಇದೇ ರವಿವಾರ ೧೭ನೇ ತಾರೀಖಿನ ದಿವಸ ಸಾಯಂಕಾಲ ೬ ಗಂಟೆಗೆ ಓಲೀಮಠದಲ್ಲಿ ಎಲ್ಲರೂ ಬರಬೇಕೆಂದು ಗೊತ್ತಾಯಿತು.



ಅರಬಿ ಸಂಸ್ಕೃತಿಯನ್ನು ತಳ್ಳಿದ ತುರ್ಕಿಸ್ಥಾನ.

ಈಗ ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳು ಕಾಲಮಾನಕ್ಕನು ಗುಣವಾದ ಸುಧಾರಣೆಗಳನ್ನು ಮಾಡಿಕೊಳ್ಳುತ್ತ ಬಹು ಮುಂದರಿದು ಸುಖಸೌಲಭ್ಯಗಳನ್ನು ಹೊಂದುತ್ತಿವೆ. ಜಗತ್ತಿನಲ್ಲಾಗುತ್ತಿರುವ ಈ ಅದ್ಭುತ ಸುಧಾರಣೆ [illegible] ತಾಳಿಯ ಮರವೆಂಬ ಅಭಿಮಾನದ [illegible] ನೇಕ ರಾಷ್ಟ್ರಗಳು ಅಧೋಗತಿಗೀಡಾ[illegible]

ಅನೇಕ ಸಮಾಜಗಳಿಗೆ ಪ್ರಪಂಚದಲ್ಲಿ ಎಂತಹ ಸುಧಾರಣೆಗಳಾಗುತ್ತಲಿವೆಯೆಂಬ ಸುದ್ದಿಯು ಕೂಡಾ ಗೊತ್ತಿಲ್ಲ. ಅವು ಅಜ್ಞಾನದ ಕಗ್ಗತ್ತಲೆಯಲ್ಲಿ ಕಣ್ಣುಮುಚ್ಚಿಕೊಂಡು ಕುಳಿತು ನಾನಾ ಕಷ್ಟನಷ್ಟಗಳಿಂದ ಬಳಲುತ್ತಲಿವೆ. ಪ್ರಪಂಚದಲ್ಲಿರುವ ಈ ಇಪ್ಪತ್ತನೆಯ ಶತಮಾನದ ಮಹಾ ವಿಭೂತಿಗಳಲ್ಲಿ ಒಬ್ಬ ಪ್ರಮುಖರಾದ ಕೆಮಲ ಪಾಶಾರವರು ಮಾಡಿದ ಅದ್ಭುತ ಕಾರ್ಯಗಳು ಪ್ರಪಂಚವನ್ನೇ ಬೆರಗುಗೊಳಿಸತಕ್ಕವುಗಳಾಗಿವೆ.

ಮುಸಲ್ಮಾನ್ ಜನಾಂಗಕ್ಕೂ, ರಾಷ್ಟ್ರಗಳಿಗೂ ಅರಬಸ್ಥಾನವೇ ಪುಣ್ಯಭೂಮಿ. ಅರಬಿ ಸಂಸ್ಕೃತಿಯೇ ಅವುಗಳಿಗೆ ಪ್ರಾಧಾನ್ಯ. ಯುರೋಪಖಂಡದಲ್ಲಿರುವ ತುರ್ಕಿಸ್ಥಾನವು ಕೂಡಾ ಕ್ರಿ. ಶ. ೧೯೧೯ರವರೆಗೆ ಅರಬಿ ಸಂಸ್ಕೃತಿಯನ್ನೇ ಅನುಸರಿಸಿದ್ದಿತು. ಯುರೋಪದ ಮಹಾಯುದ್ಧದ ಕಾಲಕ್ಕೆ ತುರ್ಕಿಸ್ಥಾನವು ಜರ್ಮನಿಯ ಕಡೆಗಾಯಿತಷ್ಟೆ. ಆಗ ಅರಬಸ್ಥಾನವು ತುರ್ಕಿಗೆ ವಿರೋಧವಾದ ಮಿತ್ರ ಮಂಡಲಿಯ ಕಡೆಗೆ ಸೇರಿತು.

ಇದು ತುರ್ಕಿಸ್ಥಾನಕ್ಕೆ ಸರಿದೋರಲಿಲ್ಲ. ಯುದ್ಧವು ಶಾಂತವಾದ ನಂತರ ತರುಣ ತುರ್ಕ ಪಂಗಡವುಂಟಾಯಿತು. ಇದಕ್ಕೆ ಕೆಮಲ್ ಪಾಶಾರವರು ಪ್ರಮುಖರಾದರು. ತಮ್ಮ ಅದ್ಭುತ ಶಕ್ತಿ ಸಾಹಸಗಳಿಂದ ತುರ್ಕಿಸ್ಥಾನದಲ್ಲಿ ಹೊಸ ಜೈತನ್ಯವನ್ನುಂಟುಮಾಡಿ ತಮ್ಮ ರಾಜಕೀಯ ಅಪಜಯದಿಂದಾದ ಅನರ್ಥವನ್ನು ನಿವಾರಣೆ ಮಾಡಿಕೊಂಡರು.

ಆ ಮೇಲೆ ತಮ್ಮ ನೇಲಿದ್ದ ಅರಬಿಸ್ಥಾನದ ಧಾರ್ಮಿಕ ಮತ್ತು ಸಂಸ್ಕೃತಿಯ ಸ್ವಾಮಿತ್ವವನ್ನು ತಳ್ಳಲು ಪ್ರಾರಂಭಿಸಿದರು. ಮೊದಲು ಧಾರ್ಮಿಕ ಗುರುಪೀಠಕ್ಕಿದ್ದ ತಮ್ಮಲ್ಲಿಯ ಅಧಿಕಾರವನ್ನು ಕಿತ್ತೊಗೆದರು. ಖಿಲಾಪತ್‌ದ ಸ್ವಾಮಿತ್ವವು ತಮ್ಮ ನೇಲಿಲ್ಲವೆಂದು ಪ್ರಸಿದ್ಧ ಗೊಳಿಸಿದರು. ಅರಬರು ತಮ್ಮ ವಂಶವೇ ಶ್ರೇಷ್ಠವಾದುದು, ತಾವೇ ಗುರುಪೀಠಾಧಿಕಾರಕ್ಕೆ ಯೋಗ್ಯರು. ತುರ್ಕಿ ವಂಶಜರಿಗೆ ಈ ಅಧಿಕಾರವಿಲ್ಲವೆಂದು ತಿಳಿದಿದ್ದುದು ತುರ್ಕಿಯವರಿಗೆ ಅಪಮಾನಕಾರಕವಾಗಿದ್ದಿತು. ಅದಕಾರಣ ಮೊದಲು ಈ ಧರ್ಮಾಧಿಕಾರಿಗಳ ಸ್ವಾಮಿತ್ವವನ್ನು ತಮ್ಮಲ್ಲಿ ನಾಶಗೊಳಿಸಿದರು.

ಅರಬಿ ಲಿಪಿಯನ್ನು ತೆಗೆದುಹಾಕಿ ರೋಮನ್ ಲಿಪಿಯನ್ನು ಪ್ರಾರಂಭಿಸಿದರು. ಅರಬಿ ಭಾಷೆಯನ್ನು ತೆಗೆದು ಹಾಕಿ ತುರ್ಕಿ ಭಾಷೆಗೇನೇ ಪ್ರಾಮುಖ್ಯತೆಯನ್ನು ಕೊಟ್ಟರು. ಖುರಾನ್ ಗ್ರಂಥದಲ್ಲಿರುವ ದೇವಮೊಶರ ಸಂಬಂಧವಾದ ಪವಾಡಗಳ ಸಂಗತಿಗಳನ್ನು ಬಿಟ್ಟು ಐತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಅದನ್ನು ತುರ್ಕಿಭಾಷೆಯಲ್ಲಿ ಬರೆಯಿಸಿದರು. ದೇವರಿಗೆ ಎಲ್ಲಾ ಭಾಷೆಗಳೂ ತಿಳಿಯುವದರಿಂದ ನಮಾಜ್ ಮಾಡುವಾಗ ಮತ್ತು ದೇವರ ಸಂಬಂಧವಾಗಿ ನಡೆಸುವ ಕಾರ್ಯಗಳಲ್ಲಿರುವ ಅರಬಿ ಶಬ್ದಗಳನ್ನು ತೆಗೆದು ಹಾಕಿ ತುರ್ಕಿ ಭಾಷೆಯಲ್ಲಿಯೇ ಉಪಯೋಗಿಸಲಾರಂಭಿಸಿದರು. 'ಅಲ್ಲಾಹೋ' ಎಂಬ ಪ್ರಾರ್ಥನೆಯ ಶಬ್ದವನ್ನು ತೆಗೆದು ಹಾಕಿ 'ತಾರೊ' ಎಂಬ ತುರ್ಕಿ ಶಬ್ದವನ್ನುಪಯೋಗಿಸಿದರು.

ಸಾವಿರಾರು ವರುಷಗಳ ಪೂರ್ವದಲ್ಲಿ ಒಂದು ದೇಶದವರಿಗೆ ಯುಕ್ತ ಕಂಡ ಆಗಿಹ ಆಚಾರವಿಚಾರಗಳಿಗೇನೇ ನಾವೇಕೆ ಕಟ್ಟಬೀಳಬೇಕು? ಈಗ ನಮಗಿರುವ ಅನಾನುಕೂಲಗಳಾವುವು? ನಮ್ಮ ಈಗಿನ ಜೀವನವು ಹಿಂದಿನ ಗ್ರಂಥಗಳನ್ನು ನೋಡಿ ನಡೆದರೆ ಸಾಗುವದೇ? ತಾತನ ಮಾತ್ರೆಯಾದರೇನು? ಮೊಮ್ಮಗನ ರೋಗವನ್ನು ಕಡೆಯುವದಾಗಿರಬೇಕಲ್ಲವೆ? ಎಂದು ತರುಣ ತುರ್ಕರು ಯೋಚಿಸಿ ಸ್ತ್ರೀಯರಿಗಿದ್ದ ಪಾರತಂತ್ರ್ಯವನ್ನು ಮೊದಲು ತೆಗೆದುಹಾಕಿದರು. ಪರದೆಯಲ್ಲಿರುವ ಸ್ತ್ರೀಯರು ಹೊರಗೆ ಬಂದು ಶಸ್ತ್ರಗಳನ್ನು ಕೂಡಾ ಹಿಡಿಯಲು ಸಮರ್ಥರಾದರು. ರಾಜಕಾರಣದ ಸೂತ್ರವನ್ನು ಹಿಡಿದರು.

ಸ್ತ್ರೀಯರ ಮುಖವನ್ನು ಪರಪುರುಷರು ನೋಡಲೇಬಾರದೆಂದಿದ್ದ ಆ ಹಳೆ ರೂಢಿಯನ್ನು ಕಿತ್ತೊಗೆದು ಅಲ್ಲಲ್ಲಿ ಸ್ತ್ರೀಯರ ನೃತ್ಯ ಶಾಲೆಗಳನ್ನು ಏರ್ಪಡಿಸಿದರು. ಕೆಮಲ್ ಪಾಶಾರವರು ಈ ನಾಟ್ಯ ಸಮ್ಮೇಲನದಲ್ಲಿ ಸ್ವಂತ ಸೇರಿ ಐರೋಪ್ಯರ ಪದ್ಧತಿಗಳನ್ನನುಸರಿಸಿದರು. ಖುರಾನದಲ್ಲಿದ್ದ ಅನೇಕ ಸಾಮಾಜಿಕ ನಿಯಮ ನಿರ್ಬಂಧಗಳು ತಮಗೆ ಈಗ ಸರಿಯಲ್ಲವೆಂದು ಅವುಗಳನ್ನು ತೆಗೆದು ಹಾಕಿ ಸ್ವಿತ್ಸರ್ಲಾಂಡ್, ಇಟಾಲಿ, ಜರ್ಮನ್ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿರುವ ಶಾಸನಗಳನ್ನು ತಮ್ಮಲ್ಲಿ ಆಚರಣೆಗೆ ತಂದರು.

ಹಿಂದುಗಳ ವೇದಗಳನ್ನು ಓದುವುದು ಅನೇಕ ಮಹಮ್ಮದೀಯರಿಗೆ ಅಧರ್ಮವೆಂದು ತೋರುತ್ತಿದೆಯಷ್ಟೆ. ಆದರೆ ತುರ್ಕಿಸ್ಥಾನದ ವಿಶ್ವವಿದ್ಯಾಲಯದಲ್ಲಿ ವೇದಗಳ ಅಭ್ಯಾಸ ನಡೆದಿದೆ. ಅಲ್ಲಿ ಧಾರ್ಮಿಕ ವಿಷಯವು ಇಷ್ಟು ಸ್ವಾತಂತ್ರ್ಯವುಳ್ಳದ್ದಾಗಿದೆ. ಧರ್ಮವು ವ್ಯಕ್ತಿಯ ಮನೋವೃತ್ತಿಗನುಗುಣವಾಗಿರಬೇಕೆಂಬುದು ತುರ್ಕಿಗೂ ಮಾನ್ಯವಾಗಿದೆ.

ಈ ಪ್ರಕಾರ ತರುಣ ತುರ್ಕಿಯು ರಾಜಪ್ರಭುತ್ವವನ್ನು ಕಿತ್ತೊಗೆದು, ಧರ್ಮಾಧಿಕಾರಿಗಳ ಸ್ವಾಮಿತ್ವವನ್ನು ತಳ್ಳಿ, ಸಾಮಾಜಿಕ ಸ್ವಾತಂತ್ರ್ಯವನ್ನು ಸಕಲರಿಗೂ ಉಂಟುಮಾಡಿ ಕೊಟ್ಟು ತುರ್ಕಿಯ ಸಂಸ್ಕೃತಿಯನ್ನು ಜೀರ್ಣೋದ್ಧಾರ ಮಾಡಿರುವುದರಿಂದ ಈಗ ಇದು ಪ್ರಬಲ ರಾಷ್ಟ್ರವಾಗಿದೆ. ಇಷ್ಟೆಲ್ಲ ಮಹತ್ಕಾರ್ಯಗಳನ್ನು ಕೇವಲ ೧೫ ವರುಷಗಳಲ್ಲಿಯೇ ಕೆಮಲ್ ಪಾಶಾರವರು ಮಾಡಿರುವುದರಿಂದ ಇವರು ಜಗತ್ತಿನ ಮಹಾ ವಿಭೂತಿಗಳಲ್ಲೊಬ್ಬರಾಗಿದ್ದಾರೆ.

ಮೊದಲು ಯಾರಿಗೆ ಧರ್ಮ ಬೇಡರೆಂದು ಹೇಳುತ್ತಿದ್ದರೋ ಅಂಥ ಕೆಮಲ್ ಪಾಶಾರವರಿಗೇನೇ ಈಗ ರಾಷ್ಟ್ರ ಸಂವರ್ಧಕನೆಂದೂ ಮಹಾವಿಭೂತಿಯೆಂದೂ ಹೇಳುತ್ತಿದ್ದಾರೆ. ರೂಢಿಯ ಕೊಳಚೆಯಲ್ಲಿ ಬಿದ್ದು ಬಳಲುತ್ತಿರುವ ಜನಾಂಗವನ್ನು ಮೇಲಕ್ಕೆತ್ತಿದ ಬುದ್ಧ, ಕ್ರೈಸ್ತ, ಬಸವ ಮೊದಲಾದ ಪ್ರಾಚೀನ ವಿಭೂತಿಗಳಾಗಲಿ ಲೆನಿನ್, ಮುಸೋಲಿನಿ, ಕೆಮಲ್ ಪಾಶಾ, ಗಾಂಧಿ ಮೊದಲಾದ ಈಗಿನ ಮಹಾ ಪುರುಷರಾಗಲಿ ಮೊದಲು ಅಜ್ಞರಿಂದ ಅಲ್ಲಗಳೆಯಲ್ಪಟ್ಟೇ ಅನಂತರ ಪೂಜಿಸಲ್ಪಡುತ್ತಿದ್ದಾರೆ.

ಹಿಂದು ಸಮಾಜವು ತನ್ನ ನಾಶಕ್ಕೆ ಕಾರಣವಾಗಿರುವ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ದೋಷಗಳನ್ನು ಈಗಲಾದರೂ ದೂರಮಾಡುವುದೆ? [ಸಂಪಾದಕ.]



ಶಾ. ಶ. ೧೮೫೬ ನೆಯ ಜ್ಯೇಷ್ಠ ಶು|| ೬ ಸೋಮವಾರ.

ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲ.

ಬಾಳೆಹಳ್ಳಿಯ ಈಗಿನ ಶ್ರೀಗಳು ಬೆಂಗಳೂರಿಗೆ ಬಂದ ನಂತರ ಶ್ರೀ ಬಸವಾದಿ ಪ್ರಮಥರ ವಿಷಯದಲ್ಲಿರುವ ಅವರ ಅಭಿಪ್ರಾಯವನ್ನು ಅವರ ಪ್ರಕಟನೆಯಿಂದಲೇ ತಿಳಿದುಕೊಳ್ಳಲು ಅನೇಕರು ನಾನಾ ರೀತಿಗಳಲ್ಲಿ ಪ್ರಯತ್ನಿಸಿದುದು ಫಲಕಾರಿಯಾಗದಿದ್ದರೂ ಅವರ ಅಭಿಪ್ರಾಯವೇನೆಂಬುದನ್ನು ಗೊತ್ತುಮಾಡುವಷ್ಟಾದರೂ ಸಂಭಾಷಣೆಗಳು ಶ್ರೀಗಳಲ್ಲಿ ಜರುಗಿ ಅನ್ಯರ ಪ್ರಕಟನೆಗಳು ಪ್ರಕಟವಾದುದು ಎಷ್ಟೋ ಅನುಕೂಲವೆಂದೇ ಹೇಳಬೇಕು. ಆದುದರಿಂದ ಶ್ರೀಗಳ ಅಭಿಪ್ರಾಯ ಇಷ್ಟು ಮಟ್ಟಿಗಾದರೂ ಬಹಿರಂಗವಾಗಲು ಕಾರಣರಾದ ಈ ಸಂಭಾಷಣೆಗಾರರನ್ನು ಅಭಿನಂದಿಸದಿರಲಾರೆವು.

ಮೈಸೂರಿನ ಶ್ರೇಯುತ ಪುಟ್ಟಸ್ವಾಮಿಯವರು ತಾ. ೨೨-೬-೫೪ ನೆಯ ದಿವಸ ಶ್ರೀಗಳಲ್ಲಿ ಸಂಭಾಷಣೆ ಮಾಡಿದ ಸಂಗತಿಯೆಂದು ತಾರೀಖು ೪-೭-೫೪ನೆಯ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾದುದನ್ನು ನಾವು ಕಳೆದವಾರದ ಸಂಚಿಕೆಯಲ್ಲಿ ಪ್ರಕಟಿಸಿದ್ದೇವಷ್ಟೆ. ಆ ವಿಷಯವಾಗಿ ಬೆಂಗಳೂರಿನ ಪ್ರಜಾಬಂಧು ಪತ್ರಿಕೆಯ ಸಂಪಾದಕರಾದ ಶ್ರೀ ವೈ. ಕೃಷ್ಣಪ್ಪನವರು ಶ್ರೀಗಳ ಸಂಗಡ ಸಂಭಾಷಣೆ ಮಾಡಿದುದನ್ನು ಇದೇ ಪತ್ರಿಕೆಯ ಬೇರೊಂದು ಕಡೆ ಕೊಟ್ಟಿದೆ. ಮತ್ತು ಅದೇ ವಿಚಾರವಾಗಿ ಬೆಂಗಳೂರಿನ ವೀರಕೇಸರಿ ಪತ್ರಿಕೆಯಲ್ಲಿ ಪ್ರಕಟವಾದ ಪ್ರತ್ಯಕ್ಷದರ್ಶಿಯ ಲೇಖನಾಂಶವನ್ನೂ ಇದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಗಿದೆ. ಈ ಪ್ರಕಾರ ಪ್ರಕಟವಾದ ಮೂರು ಲೇಖನಗಳಿಂದ ಶ್ರೀಗಳು ಶ್ರೀ ಬಸವಾದಿ ಪ್ರಮಥರನ್ನು ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲವೆಂದೇ ಗೊತ್ತಾಗುತ್ತದೆನ್ನಬಹುದು.

ಶ್ರೀ ಬಸವೇಶನು ಮಹಾ ಶಿವಭಕ್ತನೂ, ಮಹಿಮನೂ ವೀರಶೈವ ಮತೋದ್ಧಾರಕನೂ ಆಗಿದ್ದಾನೆಂಬುದು ಶ್ರೀಗಳಿಗೆ ಮಾನ್ಯವಿದೆಯೆಂದು ಶ್ರೀ. ಪುಟ್ಟ ಸ್ವಾಮಿಯವರ ಮತ್ತು ಶ್ರೀ. ಕೃಷ್ಣಪ್ಪನವರ ಸಂಗಡ ನಡೆದ ಶ್ರೀಗಳ ಸಂಭಾಷಣೆಯಿಂದ ಸ್ಪಷ್ಟವಾಗುತ್ತದೆ. ಆದರೆ ಬಸವೇಶನು ಅಲಿಂಗಿಗಳಿಗೆ ಲಿಂಗಧಾರಣೆ ಮಾಡಿದಂತೆ ಬಾಳೆಹಳ್ಳಿ ಶ್ರೀಗಳು ತಾವೂ ಮಾಡುತ್ತೇವೆಂದು ಒಪ್ಪಿರುವುದಾಗಿ ಶ್ರೀ ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿದೆ. ಈ ಸಂಗತಿಯು ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿಲ್ಲ. ಇದನ್ನು ಇವರು ಕೇಳಿಲಿಲ್ಲವೋ ಅಥವಾ ಶ್ರೀ. ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿ ಹೊಸದಾಗಿ ಸೇರಿಸಿದ್ದಾಗಿದೆಯೋ ತಿಳಿಯದು.

ಇದರಂತೆಯೇ ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿ ಇನ್ನೊಂದು ಮುಖ್ಯ ಸಂಗತಿಯೇ ಇಲ್ಲದಾಗಿದೆ. ಬಸವೇಶನು ತಮಗೆ ಪೂಜ್ಯನೆಂದು ಆತನನ್ನು ಪುರಸ್ಕರಿಸುವುದಿಲ್ಲವಾಗಿ ಶ್ರೀಗಳು ಹೇಳಿದರೆಂದು ಶ್ರೀ. ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿದೆ. ಈ ಸಂಚಿಕೆಯ [illegible] ಸಂಯಲ್ಲಿಯ ಲೇಖನದಿಂದಲೂ ಈ ಅಭಿಪ್ರಾಯ [illegible]. ಆದರೆ ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿ. ಈ ಪ್ರಸಂಗವೇ ಇಲ್ಲದಿದ್ದುದರಿಂದ ಸಂಶಯಕ್ಕೆ ಆಸ್ಪದವಾಗುವುದು.

ಆದುದರಿಂದಲೇ ನಾವು ಕಳೆದ ವಾರವೇ ಶ್ರೀ. ಪುಟ್ಟಸ್ವಾಮಿಯವರು ತಾನೇ ತಮ್ಮ ಸಂಗಡ ನಡೆದ ಸಂಭಾಷಣೆಯನ್ನು ಪ್ರಕಟಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದೆವು. ಈಗಲಾದರೂ ಪುನಃ ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ಆ ತಮ್ಮ ಪ್ರಕಟನೆಯನ್ನು ಶ್ರೀಗಳವರಿಗೆ ರಜಿಸ್ಟರ್ ಮೂಲಕ ಕಳುಹಿಸಿಕೊಡಬೇಕಾಗಿಯೂ ನಮ್ಮ ಕೋರಿಕೆ. ಏಕೆಂದರೆ, ಶ್ರೀಗಳಿಗೆ ಯಾವ ವರ್ತಮಾನ ಪತ್ರಿಕೆಗಳನ್ನು ಓದುವ ಅಭ್ಯಾಸವಿಲ್ಲವಂತೆ. ಅವರು ಪತ್ರಿಕೆಗಳನ್ನು ಓದುವುದಿಲ್ಲವಂತೆ. ಎಂದಮೇಲೆ ಪುಟ್ಟಸ್ವಾಮಿಯವರು ಪ್ರಕಟಿಸಿದ ಸಂಭಾಷಣೆಯು ಸತ್ಯವೋ ಮಿಥ್ಯವೋ ಎಂಬುದು ಶ್ರೀಗಳಿಗೆ ಗೊತ್ತಾಗುವದೆಂತು?

ಶ್ರೀಗಳು ಈ ಕಾಲದಲ್ಲಿ ಅದರಲ್ಲಿಯೂ ತಾವು ಗುರುಗಳೆಂದು ಸಂಚರಿಸುತ್ತ ಒಂದು ಮತದಲ್ಲಿ ಕೋಲಾಹಲವನ್ನುಂಟುಮಾಡಲು ಕಾರಣರಾಗಿರುವಾಗ ಪತ್ರಿಕೆಗಳನ್ನು ಓದದಿರುವುದು ತುಂಬಾ ಅನುಚಿತವು. ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಬಸವಾದಿ ಪ್ರಮಥರ ಸಂಬಂಧವಾಗಿ ಅತಿ ನಿಂದ್ಯವಾದ ಲೇಖನಗಳು ಪ್ರಕಟವಾಗುತ್ತಿರುವುದನ್ನು ಶ್ರೀಗಳು ಓದಿಲ್ಲವಷ್ಟೆ! ತಮ್ಮಿಂದ ಪೋಷಿತವಾದ ಮತ್ತು ತಮ್ಮ ಆಚಾರ್ಯವರ್ಗದ ಹೆಸರಿನಿಂದ ಮೆರೆಯುವ ಪತ್ರಿಕೆಯನ್ನು ಕೂಡಾ ಓದದೆ ಹೀಗೆ ಕಣ್ಣುಮುಚ್ಚಿಕೊಂಡು ಅನ್ಯರ ಹೇಳಿಕೆಯಂತೆ ನಡೆಯುತ್ತ ಬಂದುದರಿಂದಲೇ ಇಷ್ಟೆಲ್ಲಾ ಅನರ್ಥಕ್ಕೆ ಗುರಿಯಾಗಿರಬೇಕು. ಇಲ್ಲವೆ ನಾವು ಯಾವ ಪತ್ರಿಕೆಯನ್ನೂ ಓದುವುದಿಲ್ಲವೆಂದು ಹೇಳುವುದಾದರೂ ಸುಳ್ಳಿರಬೇಕಲ್ಲವೆ?

ಶ್ರೀ ಬಸವೇಶನು ವೀರಶೈವ ಮತಸ್ಥಾಪನಾಚಾರ್ಯನಲ್ಲವೆಂದೇ ಶ್ರೀಗಳು ಶ್ರೀ. ಕೃಷ್ಣಪ್ಪನವರ ಸಂಗಡ ಮಾಡಿದ ಸಂಭಾಷಣೆಯಲ್ಲಿ ಹೇಳಿದ್ದಾರೆ. ಆದುದರಿಂದಲೇ ಮತಾಚಾರ್ಯರಾದ ತಾವು ಬಸವಾದಿ ಪ್ರಮಥರನ್ನು ಪೂಜ್ಯರನ್ನಾಗಿ ಪುರಸ್ಕರಿಸುವುದಿಲ್ಲವೆಂದು ಶ್ರೀ. ಪುಟ್ಟಸ್ವಾಮಿಯವರ ಸಂಗಡ ಮಾಡಿದ ಭಾಷಣದಲ್ಲಿ ಹೇಳಿರಬೇಕು. ಬಸವೇಶನು ಎಷ್ಟಾದರೂ ಭಕ್ತ. ನಾವು ಹೇಗೆದ್ದರೂ ಗುರುಗಳು. ಎಂದಮೇಲೆ ಆ ಭಕ್ತನನ್ನು ಗುರುಗಳಾದ ನಾವು ಪೂಜ್ಯನೆಂದು ಪುರಸ್ಕರಿಸುವುದು ಹೇಗೆ? ಎಂಬುದೇ ಶ್ರೀಗಳ ಅಭಿಪ್ರಾಯವೆಂದು ತಿಳಿಯಲು ಅಡ್ಡಿಯಿಲ್ಲ.

ವೀರಶೈವರಲ್ಲಿ ಬಸವೇಶನನ್ನು ಯಾರು ಹೀಗೆ ತಮಗೆ ಪೂಜ್ಯನಲ್ಲವೆಂದು ತಿಳಿಯುತ್ತಾರೆಯೋ ಅವರು ನಿಜವಾದ ವೀರಶೈವ ಮತೀಯರೇ ಅಲ್ಲ. ಅದುದರಿಂದ ಅಂಥವರು ವೀರಶೈವ ಮತದ ಗುರುಪೀಠವನ್ನೇರಲಿಕ್ಕಾಗಲಿ, ಅಥವಾ ವೀರಶೈವರ ಗುರುಗಳೆಂದು ಹೇಳಿಕೊಳ್ಳುತ್ತ ಸಂಚರಿಸಲಿಕ್ಕಾಗಲಿ ಅರ್ಹರಲ್ಲ. ನಿಜವಾದ ವೀರಶೈವರು ಇಂಥವರನ್ನು ಹೇಗೆ ತಾನೆ ಪೂಜ್ಯರೆಂದು ತಿಳಿಯುವರು?

ವೀರಶೈವರ ಕರ್ತವ್ಯ.

ಶ್ರೀ ಬಸವಾದಿ ಪ್ರಮಥರ ವಿಷಯದಲ್ಲಿರುವ ತಮ್ಮ ಅಭಿಪ್ರಾಯವನ್ನು ಬಾಳೆಹಳ್ಳಿ ಶ್ರೀಗಳು ಹೇಳಿದಂತಾಯಿತಷ್ಟೆ. ಶ್ರೀ ಬಸವಾದಿ ಪ್ರಮಥರನ್ನು ತಾವು ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲ. ಎಂಬುದೇ ಅವರ ಅಭಿಪ್ರಾಯದ ಮುಖ್ಯಾಂಶ. ಇಂತಹ ಶ್ರೀಗಳ ವಿಚಾರವಾಗಿ ವೀರಶೈವರು ಮುಂದಿನ್ನೇನು ಮಾಡಬೇಕಾದುದೇನು?

ಪ್ರಮಥರನ್ನು ನಿಂದಿಸುವದಿಲ್ಲವೆಂದು ತಿಳಿಸಿದ್ದೇ ಸಾಕು. ಪೂಜಿಸಲಿ, ಪೂಜಿಸದಿರಲಿ, ಅವರ ಪಾಪ ಪುಣ್ಯಗಳಿಗೆ ಅವರೇ ಭಾಗಿಗಳು, ನಾವು ಹಿಂದಿನಿಂದ ನಡೆದುಕೊಂಡು ಬಂದಂತೆ ಅವರನ್ನು ಗುರುಗಳೆಂದೇ ಭಾವಿಸಿ ಪೂಜಿಸದಿರಾಯಿತು ಎಂದು ಕೆಲವರು ಯೋಚಿಸಬಹುದು. ಕೆಲವರಾದರೋ, ಶ್ರೀಗಳ ಈ ಅಭಿಪ್ರಾಯ ಸರಿಯಲ್ಲ ಬಸವೇಶನನ್ನು ಇವರೇಕೆ? ಅನ್ಯ ಮತೀಯರು ಕೂಡಾ ಮಹಾ ಶಿವ ಭಕ್ತ, ಮಹಿಮ, ಎಂಬುದಾಗಿ ಅನೇಕ ರೀತಿಗಳಿಂದ ಇವರಿಗಿಂತಲೂ ಹೆಚ್ಚಾಗಿ ಗೌರವಿಸುತ್ತಾರೆ. ಹಾಗೆ ಇವರೂ ಗೌರವಿಸಿ ಪೂಜಿಸದಿದ್ದರೆ ಇವರನ್ನು ಅನ್ಯಮತೀಯರೆಂದೇ ತಿಳಿದು ನಮ್ಮ ಗುರುಗಳಲ್ಲವೆಂದೇ ಅವರಿಗೆ ಸ್ಪಷ್ಟ ತಿಳಿಸೋಣವೆಂದು ಯೋಚಿಸಬಹುದು. ಮತ್ತೆ ಕೆಲವರು ಬಸವೇಶನನ್ನು ಪೂಜ್ಯನನ್ನಾಗಿ ತಿಳಿಯದವರು ಅನ್ಯಮತೀಯರಾಗುವ ಕಾರಣ ನಮ್ಮ ಗುರುಪೀಠದ ಮೇಲೆ ಇವರಿರಲು ಅರ್ಹರಲ್ಲವೆಂದು ನ್ಯಾಯಸ್ಥಾನದಲ್ಲಿ ವ್ಯಾಜ್ಯವನ್ನು ಹೂಡಬಹುದು. ಈ ಸುದ್ದಿಯನ್ನೇ ಕವಿಯಲ್ಲಿ ಹಾಕಿಕೊಳ್ಳದವರೂ ಕೆಲವರಿರಬಹುದು.

ಈ ಪ್ರಕಾರ ನಾಲ್ಕು ವಿಧ ಅಭಿಪ್ರಾಯಗಳಲ್ಲಿ ಯಾವುದು ವಿಹಿತ? ಹೇಗೆ ನಡೆಯುವುದು ವೀರಶೈವ ರಕ್ಷಣೆಗೆ ಅವಶ್ಯಕ? ಈಗಿನ ಶ್ರೀ ಬಾಳೆಹಳ್ಳಿ ಸ್ವಾಮಿಗಳು ವೀರಶೈವ ಸಮಾಜದಿಂದ ಆರಿಸಲ್ಪಟ್ಟವರು. ಹಾಗೆ ಆರಿಸಲು ಮೈಸೂರು ಮಹಾರಾಜಾ ಸರಕಾರದವರು ಅಪ್ಪಣೆಯನ್ನು ಕೊಟ್ಟದ್ದಾರೆ. ಆದಕಾರಣ ಇವರ ಗುರುತ್ವವು ರಾಜ ಶಾಸನ ಪದ್ಧತಿಯಿಂದಲೂ ಸಾರ್ವಜನಿಕವಾಗಿಯೇ ನಿರ್ದೇಶಗೊಳಿಸಲ್ಪಟ್ಟಿದೆ. ಶ್ರೀಗಳು ಹಲಸೂರಿನ ತಮ್ಮ ಭಾಷಣದಲ್ಲಿ ಕೂಡಾ ಈ ಸಂಗತಿಯನ್ನು ಹೇಳಿದ್ದಾರೆ. ಆದ ಕಾರಣ ಬಸವೇಶನನ್ನು ಪೂಜ್ಯನನ್ನಾಗಿ ಪುರಸ್ಕರಿಸದವರು ವೀರಶೈವರೇ ಆಗುವುದಿಲ್ಲವಾದುದರಿಂದ ಈಗಿನ ಬಾಳೆಹಳ್ಳಿ ಶ್ರೀಗಳವರನ್ನು ನಾವು ಗುರುಗಳೆಂದು ಪುರಸ್ಕರಿಸುವುದಿಲ್ಲವಾಗಿ ಮೈಸೂರು ಮಹಾರಾಜಾ ಸರಕಾರಕ್ಕೂ, ಶ್ರೀಗಳಿಗೂ ಅಲ್ಲಲ್ಲಿ ಸಭೆಸೇರಿ ಸ್ಪಷ್ಟವಾಗಿ ತಿಳಿಸಬೇಕು. ಇದೇ ವೀರಶೈವ ಮತಾಭಿಮಾನಿಗಳ ಪ್ರಥಮ ಕರ್ತವ್ಯವು.

ಬಾಳೆಹಳ್ಳಿ ಶ್ರೀಗಳು ಬೆಂಗಳೂರಿಗೆ ಬರುವಾಗ ಅಲ್ಲಿಯ ವೀರಶೈವ ಮತಾಭಿಮಾನಿಗಳು ಅಸಹಕಾರದ ಮೂಲಕ ಅವರ ಗುರುತ್ವವನ್ನು ನಿರಾಕರಣ ಮಾಡಿಲ್ಲವೆ? ಬಾಳೆಹಳ್ಳಿ ಶ್ರೀಗಳ ಅಭಿಪ್ರಾಯ ದಂತೆಯಾದರೂ ಬಸವೇಶನು ವೀರಶೈವ ಮತೋದ್ಧಾರಕನಷ್ಟೆ. ಅಂತಹ ಮತೋದ್ಧಾರಕನೇ ಇವರಿಗೆ ಪೂಜ್ಯನಲ್ಲದ ಮೇಲೆ ಮತ ವಿರೂಪಗೊಳಿಸುವ ಇವರು ನನಗೆ ಹೇಗೆ ತಾನೆ ಪೂಜ್ಯರಾಗುವರು? ಇವರನ್ನು ನಿಜವೀರಶೈವ ಮತಾಭಿಮಾನಿಗಳು ಹೇಗೆ ತಾನೆ ಗುರುವೆಂದು ಪುರಸ್ಕರಿಸುವರು?

ಶ್ರೀಮದ್ರಂಭಾಪುರಿ ಜಗದ್ಗುರುಗಳೊಡನೆ ಸಂಭಾಷಣೆ.

ಬೆಂಗಳೂರಲ್ಲಿ ಪ್ರಕಟವಾಗುವ 'ಪ್ರಜಾಬಂಧು' ಎಂಬ ದಿನ ಪತ್ರಿಕೆಯ ಜೂನ್ ೧೧ನೆಯ ತಾರೀಖಿನ ಸಂಚಿಕೆಯಲ್ಲಿ ಈ ಪತ್ರಿಕೆಯ ಸಂಪಾದಕರಾದ ಶ್ರೀ. ವೈ. ಕೃಷ್ಣಪ್ಪನವರು ತಾವು ಬಾಳೆಹಳ್ಳಿ ಶ್ರೀಗಳನ್ನು ತಾ. ೯ನೆಯ ರವಿವಾರ ಸಾಯಂಕಾಲ ಶ್ರೀ. ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಸಂದರ್ಶಿಸಿ ಸಂಭಾಷಣೆ ಮಾಡಿದ ಸಂಗತಿಯನ್ನು ಮೇಲಿನ ಶಿರೋಲೇಖನದಲ್ಲಿ ಈ ಪ್ರಕಾರ ಪ್ರಕಟಿಸಿದ್ದಾರೆ.

"ಈ ತಿಂಗಳು ೪ನೇ ತಾರೀಖಿನ ಸೋಮವಾರ ಸ್ಥಳೀಯ ಪತ್ರಿಕೆಗಳಲ್ಲಿ ವೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಮ. ಬಿ. ಎಸ್. ಪುಟ್ಟ ಸ್ವಾಮಿಯವರು ಪ್ರಕಟಿಸಿದ್ದರ ವಿಷಯವಾಗಿ ಶ್ರೀಗಳು ಹೀಗೆ ಅಪ್ಪಣೆ ಕೊಡಿಸಿದರು—ನಾವು ಯಾವ ವರ್ತಮಾನ ಪತ್ರಿಕೆಗಳನ್ನೂ ಓದುವ ಅಭ್ಯಾಸವುಳ್ಳವರಾಗಿಲ್ಲ. ಆದರೆ ನಮ್ಮ ಸಂಬಂಧವಾಗಿ ಮ. ಪುಟ್ಟಸ್ವಾಮಿಯವರು ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಗತಿ ನಮ್ಮ ದರ್ಶನಕ್ಕೆ ಬಂದಿದ್ದ ಭಕ್ತರು ಅರಿಕೆಮಾಡಿಕೊಂಡರು.

ಈ ಪುಟ್ಟಸ್ವಾಮಿಯವರೇ ಮೊದಲಾದವರು ಈ ತಿಂಗಳು ೨ನೆಯ ತಾರೀಖಿನ ದಿನ ಆಗಮಿಸಿದಾಗ ಶ್ರೀ ಬಸವೇಶ್ವರನು ಮಹಾ ಭಕ್ತನೆಂದೂ, ಶರಣನೆಂದೂ, ಮತೋದ್ಧಾರಕನೆಂದೂ, ಅನೇಕ ಪವಾಡಗಳಿಂದ ಮೆರೆದವನೆಂದೂ ಅಪ್ಪಣೆ ಕೊಡಿಸಿದ್ದು ನಿಜ.

ಕಳೆದ ಮೇ ತಿಂಗಳು ೧೫ನೆಯ ತಾರೀಖು ಶುಕ್ರವಾರ ನಡೆಯಿಸಿದ ವಿದ್ವತ್ಸಭೆಯಲ್ಲಿ ಶ್ರೀ ಬಸವೇಶ್ವರನ ವಿಚಾರವನ್ನೆತ್ತಕೂಡದೆಂಬ ಉದ್ದೇಶವೇನೂ ಇರಲಿಲ್ಲವೆಂದೂ ಅಂದಿನ ಭಾಷಣದಲ್ಲಿ ಮತ ಸ್ಥಾಪನಾಚಾರ್ಯರ ವಿಚಾರವಾಗಿ ಮಾತನಾಡಬೇಕಾದ ಸಂಭವವು ಬಂದುದರಿಂದ ಶ್ರೀ ಶಂಕರಾಚಾರ್ಯರು, ಶ್ರೀ ರೇಣುಕಾಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಏಸು ಕ್ರಿಸ್ತ ಮತ್ತು ಮಹಮ್ಮದ ಪೈಗಂಬರ್. ಈ ಮತಸ್ಥಾಪನಾಚಾರ್ಯರ ವಿಷಯವಾಗಿ ಪ್ರತಿಪಾದಿಸಲಾಯಿತು.

ಶ್ರೀ ಬಸವೇಶ್ವರನ ವಿಚಾರವಾಗಿ ಬಹಿರಂಗವಾದ ಪ್ರಕಟಣೆಯನ್ನು ಹೊರಡಿಸುವ ಪ್ರಶ್ನೆಗೆ ಶ್ರೀಗಳು ಹೀಗೆ ಅಪ್ಪಣೆ ಕೊಡಿಸಿದರು— ನಾವು ಅನೇಕ ಸಾರ್ವಜನಿಕ ಸಭೆಗಳಲ್ಲಿ ಮಾಡಿದ ಭಾಷಣಗಳಲ್ಲಿ ಬಹಿರಂಗವಾಗಿಯೂ ಮತ್ತು ಪ್ರಕಟನೆಯ ಮೂಲಕವೂ ಶ್ರೀ ಬಸವೇಶ್ವರನ ವಿಚಾರದಲ್ಲಿ ನಮಗಿರುವ ಪ್ರೀತಿ ಗೌರವಗಳನ್ನು ಹೊರಪಡಿಸಿದ್ದಾಗಿದೆ. ಗುರುಗಳಲ್ಲಿ ಭಕ್ತಿಯೂ ಗುರುಗಳ ಪ್ರಗತಿಯಲ್ಲಿ ನಂಬಿಕೆಯೂ ಇಲ್ಲದವರಿಗೆ ಬಹಿರಂಗವಾಗಿ ಸಾರ್ವಜನಿಕ ಭಾಷಣಗಳಲ್ಲಿಯಾಗಲಿ ಪ್ರಕಟನೆಯ ಮೂಲಕವಾಗಿಯಾಗಲಿ ತಿಳಿಸುವುದರಿಂದ ಫಲವೇನು? ಆಕ್ಷೇಪಣೆ ಮಾಡಬೇಕೆಂದಿರುವವರು ಬೇರೆ ಯಾವುದಾದರೂ ವಿಷಯಗಳನ್ನು ಎತ್ತದೇ ಇರುವುದಿಲ್ಲ. ಇದಕ್ಕೆ ನಾವೇನು ಮಾಡಲಿಕ್ಕೆ ಬರುತ್ತದೆ?

ಶ್ರೀ. ವೈ. ಕೃಷ್ಣಪ್ಪನವರು ಸಂಭಾಷಣೆ ಮಾಡಿದ್ದರಿಂದ ಗೊತ್ತಾದುದು ಮೇಲಿನ ಸಂಗತಿ. ಶ್ರೀಗಳು ತಾ. ೧೦ನೆಯ ದಿನದಂದು ಹಲಸೂರಿನ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರೆಂದು ಈ ಸಂಪಾದಕರು ಅದೇ ಲೇಖನದಲ್ಲಿ ಈ ಪ್ರಕಾರ ತಿಳಿಸಿದ್ದಾರೆ.

"ಶ್ರೀ ಬಸವೇಶ್ವರನು ಭಕ್ತಿ ಭಂಡಾರಿ, ತನ್ನ ತನುಮನಧನಗಳನ್ನು ಗುರುಲಿಂಗ ಜಂಗಮ ಸೇವೆಯಲ್ಲಿ ಸವೆಯಿಸಿ ಶಿವ ಸಾಯುಜ್ಯ ಪದವಿಯನ್ನು ಹೊಂದಿ ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯನ್ನು ಹೊಂದಿರುತ್ತಾನೆ. ಇದಕ್ಕೆಲ್ಲಾ ಗುರುಹರರಲ್ಲಿ ಆತನಿಗಿದ್ದ ಭಕ್ತಿ ಭಂಡಾರವೇ ಕಾರಣ. ರಾಮ, ಕೃಷ್ಣ, ಶಿವ, ಬಸವ ನಾಮಗಳೆಲ್ಲಾ ಒಂದೇ."

ವಿ ವಿ ಧ ವಿ ಷ ಯ .

ಕೃತ್ರಿಮ ಕಾಲುಗಳು.

ಕೃತ್ರಿಮ ಕಣ್ಣುಗಳು ಮತ್ತು ಕೃತ್ರಿಮ ಕೆನಿಗಳಾದನೇಲೆ ಕೃತ್ರಿಮ ಕಾಲುಗಳೂ ಏರ್ಪಾಗಬಾರದು? ಹಾಗಾದರೆ ಇಗೊಳ್ಳಿ. ಕ್ಯಾಲಿಫೋರ್ನಿಯಾದಲ್ಲಿ ಒಬ್ಬ ಶೋಧಕನು ಮುರುಕು ಸಾಯಕಲ್ಲಿನ ವಸ್ತುಗಳನ್ನೆಲ್ಲ ತೆಗೆದುಕೊಂಡು ಅವುಗಳಿಂದ ಕೃತ್ರಿಮ ಕಟ್ಟಿಗೆಯ ಕಾಲುಗಳನ್ನು ಉಂಟುಮಾಡಿದ್ದಾನೆ. ಸಾಯಕಲ್ಲಿನಂತೆಯೇ ನೆಟ್ಟಗೆ ಕುಳಿತುಕೊಳ್ಳಲು ಆಸನ (ಸೀಟು) ಉಂಟು. ಆದರೆ ಮೇಲೆ ಕುಳಿತು ಕಾಲುಗಳಿಂದ ಪೆಡ್ಲುಗಳನ್ನು ಒತ್ತಬೇಕು. ಈ ಪೆಡ್ಲುಗಳಿಗೂ ಕೃತ್ರಿಮ ಕಾಲುಗಳಿಗೂ ಸಾಯಕಲ್ಲಿನ ಗಾಲಿಗಳಂತೆ ಸರಪಳಿಯಿಂದ ಬದ್ಧವಾದ ಸಂಬಂಧವಿರುವುದರಿಂದ ಗಾಲಿಗಳು ತಿರುಗುವ ಹಾಗೆಯೇ ಕಾಲುಗಳು ಒಂದೊಂದು ಹೆಜ್ಜೆಯನ್ನು ಇಡುತ್ತ ಹೋಗುತ್ತವೆ. ಯಂತ್ರದ ರಚನೆಯೇನೂ ಅಂಥಹೊಂಕವಿಲ್ಲ. ಇದರಮೇಲೆ ಕುಳಿತು ನಡೆಯಹತ್ತಿದರೆ ಅವನೊಬ್ಬ ಮರಗಾಲಿನ ಮನುಷ್ಯನು ನಡೆಯುತ್ತಿರುವನೆಂಬಂತೆ ಭಾಸವಾಗುತ್ತಿದೆ. ಬಿದ್ದು ಹೋದ ವಸ್ತುಗಳಿಂದಲೇ ಈ ಪ್ರಕಾರ ಮನೋರಂಜಕ ಶೋಧ ಮಾಡಿದ್ದು ಅಮೇರಿಕನ್ನರ ಬುದ್ಧಿಮತ್ತೆಯ ನಿದರ್ಶಕವಾಗಿಲ್ಲವೇ?

ಶಿಕ್ಷಣದಿಂದ ಧರ್ಮಪರಿವರ್ತನದ ಮೇಲಾದ ಪರಿಣಾಮ.

ತ್ರಿಚನಾಪಲ್ಲಿ ಜಿಲ್ಲೆಯಲ್ಲಿಯ ೩೦೦೦ ಕುಟುಂಬಗಳು ರೋಮನ್ ಕ್ಯಾಥೋಲಿಕ್ ಸಂಧವನ್ನು ತ್ಯಜಿಸಿ ಪ್ರಾಟೆಸ್ಟಂಟ್ ಮತವನ್ನು ಸ್ವೀಕರಿಸಿದ್ದವು. ಇವರೆಲ್ಲ ಪೂರ್ವದ ಹಿಂದು ದಲಿತ ವರ್ಗದವರೇ ಆಗಿದ್ದರು. ಇವರು ಕ್ರಿಸ್ತೀ ಧರ್ಮವನ್ನು ಸ್ವೀಕರಿಸಿದ್ದರೂ ರೋಮನ್ ಕ್ಯಾಥೋಲಿಕಮತದಲ್ಲಿಯೂ ಇವರಿಗೆ ಕ್ರಿಸ್ತೀ ಅಸ್ಪೃಶ್ಯನೆಂಬ ಕಲಂಕವು ಹೋಗಲಿಲ್ಲ. ತಾವು ಕ್ರೈಸ್ತಗಳಾಗಿದ್ದರೂ ತಮ್ಮ ಪೂರ್ವದ ಹಿಂದು ಸಮಾಜದಲ್ಲಿ ತಮಗೆ ಯಾವ ಘನತೆ ಇದ್ದಿತೊ ಅದು ಇನ್ನೂ ತಮ್ಮ ಬೆನ್ನು ಬಿಡದಿರುವುದನ್ನು ಕಂಡು ಸರ್ವ ಸಮಾನತೆಯ ಸಲುವಾಗಿ ಅವರು ಪ್ರಾಟೆಸ್ಟಂಟ ಮತವನ್ನು ಸ್ವೀಕರಿಸಿದರು. ಆ ಕಾಲಕ್ಕಂಟಾದ ಸಭೆಯನ್ನು ದಾಸ ಮಾಣಿಕಮ್ ಎಂಬವರು ತಮ್ಮ ಭಾಷಣದಲ್ಲಿ—ರೋಮನ್ ಕ್ಯಾಥೋಲಿಕರಲ್ಲಿ ಜಾತಿಭೇದವಿದೆ. ಸದ್ಯದ ಶಿಕ್ಷಣ ಪ್ರಸಾರವು ಜನರಲ್ಲಿ ಸಮಾನತೆಯ ಭಾವನೆಯನ್ನು ತಂದು ಕೊಡಹತ್ತಿರುವುದರಿಂದ ಜಾತಿಭೇದವನ್ನವಲಂಬಿಸಲು ಶಕ್ಯವಿಲ್ಲ. ಸಾಮುದಾಯಿಕ ಶಿಕ್ಷಣದಿಂದಲೇ ಮತಪರಿವರ್ತನೆಯು ವಿಪುಲವಾಗಿ ಆಗುತ್ತದೆ. ೧೦೦ಕ್ಕೆ ೯೦ರಷ್ಟು ಜನರು ಶಿಕ್ಷಣದಿಂದಲೇ ಮತ ಪರಿವರ್ತನೆ ಮಾಡುತ್ತಾರೆ. ಆದುದರಿಂದ ಮೊದಲು ಶಿಕ್ಷಣ ಕೊಡಿರಿ. ಆಂದರೆ ನಿಮ್ಮ ಧರ್ಮವು ತಾನೇ ಪ್ರಸಾರವಾಗುವದು.

ಹಿಂದುಗಳು ಇನ್ನಾದರೂ ಜಾತಿವಿಶಿಷ್ಟ ಉಚ್ಚ ನೀಚ ಕಲ್ಪನೆಯನ್ನು ಬಿಡುವರೇ? ಆಂದರೆ ಹಿಂದು ಸಮಾಜವು ಇನ್ನೂ ಬಹು ಕಾಲ ಬಾಳೀತು.

ಹಸ್ತಾಕ್ಷರದಿಂದ ಸ್ವಭಾವ ಪರೀಕ್ಷೆ.

ಮನುಷ್ಯನ ಹಸ್ತಾಕ್ಷರದ ಮೇಲಿಂದ ಅವನ ಸ್ವಭಾವವನ್ನು ಪರೀಕ್ಷಿಸುವುದು ಸರ್ವಸಾಮಾನ್ಯವಾದ ವಿಷಯವಾಗಿದ್ದರೂ ಅದನ್ನು ಹೇಗೆ ಪರೀಕ್ಷಿಸಬೇಕೆಂಬುದು ಯಾರಿಗೂ ಗೊತ್ತಿರಲಿಲ್ಲ. ಸದ್ಯಕ್ಕೆ ಹಂಗೇರಿ ದೇಶದ ಒಬ್ಬ ಸಂಶೋಧಕನು ಒಂದು ವಿದ್ಯುತ್ತಿನ ಲೇಖನಿಯನ್ನು ಸಿದ್ಧಪಡಿಸಿದ್ದಾನೆ. ಆ ಲೇಖನಿಯು ಒಂದು ವಿದ್ಯುತ್ತಿನ ಯಂತ್ರಕ್ಕೆ ಜೋಡಿಸಲ್ಪಟ್ಟಿರುವುದರಿಂದ ಆ ಲೇಖನಿಯನ್ನು ತೆಗೆದುಕೊಂಡು ಬರೆಯುವವನ ಸ್ವಭಾವವು ಅವನ ಅಕ್ಷರಗಳ ಹೊಳವು, ಲೇಖನಿಯ ಮೇಲೆ ಉಂಟಾಗುವ ಆಘಾತ ಮತ್ತು ಎಳತಗಳು ಆ ಯಂತ್ರದಲ್ಲಿ ಒಡಮೂಡಿ ಆ ಮನುಷ್ಯನ ಸ್ವಭಾವವು ಕಂಡುಬರುತ್ತದೆ. ಈ ಯಂತ್ರದಲ್ಲಿ ಹಸ್ತಾಕ್ಷರಗಳ ಅತಿ ಸೂಕ್ಷ್ಮ ಪೃಥಕ್ಕರಣವಾ[illegible]ದಲ್ಲಿ ಬರೆಯುವವನ ಭಾವನೆಗಳೆಲ್ಲ ಸ್ಪಷ್ಟವಾಗಿ ಆದ

ಇದಕ್ಕಿಂತಲೂ ಆವುಗಂಡು ಕಾಗದದ ಮೇಲೆ ಅವುದೊಂದು ಲೇಖನಿಯಿಂದ ಒರೆದರೂ ಅದನ್ನು ಸಶಾಸ್ತ್ರೀಯವಾಗಿ ತಿಳಿದು ಕೊಳ್ಳುವ ಯುಕ್ತಿಯು ಕಂಡುಹಿಡಿಯಲ್ಪಟ್ಟರೆ ಹೆಜ್ಜು ಹಿತವಾಗಲಿಕ್ಕಿಲ್ಲವೇ?

ಬೇಸಿಗೆಯ ಪ್ರಚಂಡ ತಾಪ.

ಈ ಸಾರೆಯ ಬೇಸಿಗೆಯು ಮದ್ರಾಸ ಪ್ರಾಂತದಲ್ಲಿ ಹಾಹಾಕಾರವನ್ನೇ ಉಂಟುಮಾಡಿದೆ. ಎಷ್ಟೋ ಗ್ರಾಮಗಳಿಗೆ ಬೆಂಕಿ ಹತ್ತಿ ಗ್ರಾಮಗಳ ಒಂದೊಂದು ಭಾಗಗಳೇ ಸುಟ್ಟುಹೋಗಿವೆ. ಬಿಝವಾಡದಲ್ಲಿ ನೂರಾರು ಮನೆಗಳು ಸುಟ್ಟು ೧೫-೨೦ ಸಾವಿರ ರೂಪಾಯಿಗಳ ಹಾನಿಯಾಗಿದೆ. ನೀರಿನ ಪುರವಠೆಯು ಸಾಕಷ್ಟು ಇಲ್ಲದ ಮೂಲಕ ಬೆಂಕಿಯನ್ನು ನೊಂದಿಸುವುದು ಕಠಿಣವಾಗಿದೆ. ಕೆಲ ಕೆಲವು ಹಳ್ಳಿಗಳಲ್ಲಿಯಂತೂ ಎಲ್ಲಾ ಮನೆಗಳು ಸುಟ್ಟು ಹೋಗಿವೆ. ಉಷ್ಣತೆಯ ಪ್ರಬಲತೆಯನ್ನು ತಡೆಯಲಾರದೆ ಅನೇಕ ಜನ ಮುದುಕರು ಮತ್ತು ತರುಣರು ಸತ್ತರು. ಮಛಲಿ ಪಟ್ಟಣದಲ್ಲಿ ಪಕ್ಷಿಗಳು, ದನಗಳು, ನಾಯಿ, ಬೆಕ್ಕುಗಳು ರಸ್ತೆಗಳ ಮೇಲೆ ಉಷ್ಣತೆಯ ತಾಪಕ್ಕೆ ಬೆಂದು ಸತ್ತು ಬೀಳುತ್ತಿದ್ದವು. ಎಲ್ಲಿ ಪ್ರತಿವರ್ಷ ಬಹಳ ವೆಂದರೆ ೧೧೫ ಅಂಶಗಳವರೆಗೆ ಉಷ್ಣತೆಯು ಇರುತ್ತಿದ್ದಿತೊ ಅಲ್ಲಿ ಈ ವರುಷ ೧೨೦ ಅಂಶ ಉಷ್ಣಮಾನವಿದ್ದಿತು. ಸ್ವತಃ ಮದ್ರಾಸ ಪಟ್ಟಣದಲ್ಲಿ ಬಿಸಿಲಿನ ಬೆಚ್ಚನ್ನು ಗಾಳಿಯಿಂದ ೧೧೦ ಅಂಶಗಳವರೆಗೆ ಮಾಪಕ ಯಂತ್ರವು ತೋರಿಸಿತು. ಮತ್ತು ೧೧೦ ಅಂಶ ಉಷ್ಣವಿದ್ದದ್ದು ಒಮ್ಮೆಲೆ ೪ ಅಂಶ ಉಷ್ಣಕ್ಕೆ ಇಂದಿತು.

ಪಶು ಪಕ್ಷಿಗಳ ನೀತಿ ಶಾಸ್ತ್ರ.

ಅರಣ್ಯ ಪಶುಗಳಲ್ಲಿಯೂ ಮತ್ತು ಉಳಿದ ಪಶುಪಕ್ಷಿಗಳಲ್ಲಿಯೂ ನೈತಿಕ ಸ್ವಭಾವವಿರುವುದನ್ನೂ ಇಷ್ಟೇ ಅಲ್ಲದೆ ಅವುಗಳ ನೀತಿ ಧರ್ಮವು ಮನುಷ್ಯನ ನೀತಿ ಧರ್ಮಕ್ಕಿಂತ ಅಭಿನ್ನವಾಗಿರುವದನ್ನೂ ಕೇಳಿ ಕೆಲವರಿಗೆ ಆಶ್ಚರ್ಯವೆನಿಸಬಹುದು. ವಿಶ್ವಾಸ, ಪ್ರಾಮಾಣಿಕತೆ, ಭೂತದಯೆ, ಸ್ವಾರ್ಥತ್ಯಾಗ, ಬಂಧುತ್ವ, ಐಕ್ಯ ಮೊದಲಾದ ಗುಣಗಳಲ್ಲಿ ಮನುಷ್ಯ ಪ್ರಾಣಿಗಿಂತ ಅವು ಎಂದೂ ಕಡಿಮೆಯಾಗಲಾರವು. ಅವುಗಳ ನೀತಿಶಾಸ್ತ್ರವನ್ನು ಉಲ್ಲಂಘಿಸುವ ಪ್ರಾಣಿಗಳಿಗೆ ಅವು ಶಿಕ್ಷೆ ಮಾಡದೆ ಬಿಡುವದಿಲ್ಲ. ಬಹುಶಃ ಎಲ್ಲ ಪ್ರಾಣಿಗಳೂ ಹಿಂಡುಗಟ್ಟಿಕೊಂಡು ಬರುತ್ತವೆ. ಅವು ಆವುದೊಂದು ಖಾದ್ಯ ಪದಾರ್ಥದ ಮೇಲೆ ಮುತ್ತಿಗೆ ಹಾಕುವಾಗ ತಮ್ಮೊಳಗಿನ ಒಂದೆರಡು ಪ್ರಾಣಿಗಳನ್ನು ಕಾವಲು ಇಡುತ್ತವೆ. ಕಾವಲಿದ್ದ ಪ್ರಾಣಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅವೆಲ್ಲ ಕೂಡಿ ಕಾವಲಿದ್ದವನ್ನು ಕೊಂದು ಬಿಡುತ್ತವೆ.

ಶತ್ರುಗಳ ಅಲ್ಪ ಸ್ವಲ್ಪ ಸುಳುವು ಹತ್ತಿದ ಕೂಡಲೆ ಕಾವಲಿದ್ದವು ಸನ್ನೆಮಾಡಬೇಕಾಗುತ್ತದೆ. ಮತ್ತು ಈ ಸನ್ನೆಯನ್ನು ಕೇಳಿದಕೂಡಲೆ ಹಿಂಡೆಲ್ಲ ಎದ್ದು ಹೋಗುತ್ತದೆ. ಹಿಂಡಿನ ಸಂಘಟನೆ, ಜಾಗ್ರತೆ ಮತ್ತು ಕ್ರಮವು ಹೊಗಳತಕ್ಕಂಥವಿರುತ್ತವೆ. ಒಮ್ಮೆ ಒಂದು ನರಿಯು ಒಂದು ಚಿಗರಿಯನ್ನು ಕೊಂದು ಒಯ್ಯಲುಪಕ್ರಮಿಸಿತು. ಆದರೆ ಅದು ಬಹು ಭಾರವಿದ್ದು ಒಯ್ಯಲಾರದೆ ಅದನ್ನು ಅಲ್ಲೇ ಚಲ್ಲಿ ತನ್ನ ಸಂಗಡಿಗನನ್ನು ಕರೆತರಲು ಹೋಯಿತು. ಅಷ್ಟರಲ್ಲಿ ಒಬ್ಬ ಬೇಟೆಗಾರನು ಬಂದು ಆ ಸತ್ತ ಚಿಗರೆಯನ್ನು ಹೊತ್ತುಕೊಂಡು ಹೋದನು. ಅಷ್ಟರಲ್ಲಿ ಆ ನರಿಗಳೆರಡು ಅಲ್ಲಿಗೆ ಬಂದು ನೋಡಲು ಚಿಗರೆಯು ಇದ್ದಿಲ್ಲ. ಇದನ್ನು [illegible] ಸ್ವರದಿಂದ ನರಿಯು ನನಗೆ ಸುಮ್ಮನೆ ಚಿಗರೆ ಮಾಂಸದ ಆಶೆ ತೋರಿಸಿ ಮೋಸ ಮಾಡಿದಿಯೆಂದು ಇನ್ನೊಂದರ ಕೂಡ ಜಗಳಾಡಹತ್ತಿತು.

ಹಿಂಡುಗಟ್ಟಿ ತಿರುಗಾಡುವ ಪ್ರಾಣಿಗಳೆಲ್ಲ ತಮ್ಮ ಮುಂದಾಳುವಿನ ಮೇಲೆಯೇ ಅವಲಂಬಿಸಿರುತ್ತವೆ. ಮುಂದಾಳು ತನ್ನ ಮೇಲಿನ ಕರ್ತವ್ಯದ ಹೊರೆಯನ್ನು ಲಕ್ಷಿಸದೆ ಸ್ವೇಚ್ಛೆಯಿಂದ ನಡೆದರೆ ಅದರ ನೂರು ವರುಷಗಳು ತುಂಬಿದವೆಂದೇ ತಿಳಿಯತಕ್ಕದ್ದು. ಎಲ್ಲ ಪ್ರಾಣಿಗಳಿಗಿಂತ ಚಿಗರೆಯಲ್ಲಿ ಏಕನಿಷ್ಠೆಯ ಗುಣವು ವಿಶೇಷವಾಗಿರುತ್ತದೆ. ಪ್ರಾಣ ಹೋದರೂ ತನ್ನ ಸಂಗಡಿಗರನ್ನು ಬಿಟ್ಟು ಹೋಗದಷ್ಟು ಆಜಲವಾದ ನಿಗ್ರಹವು ಅದರಲ್ಲಿರುತ್ತದೆ. ಪಶುಪಕ್ಷಿಗಳು ಒಮ್ಮೊಮ್ಮೆ ಕಲಹ ಮಾಡುತ್ತವೆ. ಆದರೆ ಪುನಃ ಕೂಡಿ ಐಕ್ಯದಿಂದಿರುತ್ತವೆ. ಅನ್ಯರ ಗೋಜಿಗೆ ಹೋಗದಂತೆಯೇ ಅವುಗಳ ವರ್ತನೆಯಿರುವುದರಿಂದ ತಮ್ಮ ಸ್ವಾಮಿತ್ವಕ್ಕಾಗಿ ಹೊಡೆದಾಟ, ದ್ವೇಷ, ಮತ್ಸರ, ಮುತ್ತಿಗೆ ಮೊದಲಾದ ಸಂಗತಿಗಳಿಂದ ಅವು ಅಲಿಪ್ತನಾಗಿರುತ್ತವೆ. ಅವುಗಳಲ್ಲಿರುವ ಎಲ್ಲಕ್ಕೂ ಶ್ರೇಷ್ಠವಾದ ಗುಣವೆಂದರೆ ಐಕ್ಯದಿಂದಿರುವುದು. ಯಾವ ತೊಂದರೆಯನ್ನು ಹಚ್ಚಿಕೊಳ್ಳದೆ ಆನಂದ ವೃತ್ತಿಯಿಂದಿರುವುದನ್ನು ಇವುಗಳಿಂದ ಮನುಷ್ಯನು ಕಲಿಯುವಂತಿದೆ. ಸೌಖ್ಯ ಜೀವನದ ಮಾರ್ಗವನ್ನು ಅವು ಯಾವ ಪ್ರಕಾರ ಕಂಡುಕೊಂಡಿರುವವೋ ಆ ಪ್ರಕಾರ ಮನುಷ್ಯ ಪ್ರಾಣಿಯು ಎಂದು ಕಂಡುಕೊಳ್ಳಬಹುದೋ ಯಾರು ಬಲ್ಲರು?

(American Forests,)

ಬೆಂಗಳೂರು ರಾ. ಬ. ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ

ಸ್ಟೂಡೆಂಟ್ಸ್ ಫ್ರೀ ಬೋರ್ಡಿಂಗ್ ಹೋಂ.

ಮೈಸೂರು ದೇಶದ ಎಲ್ಲ ವೀರಶೈವ ವಿದ್ಯಾರ್ಥಿಗಳ (Old & New) ಸೀಟಗೋಸ್ಕರ ತಾ. ೨೦-೬-೩೪ರೊಳಗಾಗಿ ಗೊತ್ತಾದ ಫಾರಂದಲ್ಲಿ ಅಪ್ಲಿಕೇಶನ್ ಹಾಕಿಕೊಳ್ಳತಕ್ಕದ್ದು ಅರ್ಜದಾರರು ಕಡೇ ಪಕ್ಷ S. S. L. C. ಪರೀಕ್ಷೆಯಲ್ಲಿ (E. & P. S.) ತೇರ್ಗಡೆ ಹೊಂದಿದವರಾಗಿರಬೇಕು.

ಕಾಲೇಜುಗಳಲ್ಲಿಯೂ, ಟೆಕ್ನಿಕಲ್ ಸ್ಕೂಲುಗಳಲ್ಲಿಯೂ, ಮತ್ತು ಸಂಸ್ಕೃತ ಕಾಲೇಜಗಳಲ್ಲಿ ಓದತಕ್ಕ ವಿದ್ಯಾರ್ಥಿಗಳೂ ಸಹ ಸೀಟಗೋಸ್ಕರ ಅಪ್ಲಿಕೇಶನ್ ಹಾಕಿಕೊಳ್ಳಬಹುದು.

ಅಪ್ಲಿಕೇಷನ್ ಜೊತೆಯಲ್ಲಿ ಅಪ್ಲಿಕೇಷನ್ ಫೀ ೧ ರೂ. ಅಡ್ಮಿಷನ್ ಫೀ ೫ ರೂ. ಒಟ್ಟು ೬ ರೂ. ಗಳನ್ನು ಕಳುಹಿಸತಕ್ಕದ್ದು. ಅಲ್ಲದೆ ಫೈನಲ್ (Final) ಪರೀಕ್ಷೆಯಲ್ಲಿ ಪಡೆದ ಪ್ರತಿಯೊಂದು Subject ನ, ನಂಬರುಗಳನ್ನೂ ಸಹ ಕಳುಹಿಸತಕ್ಕದ್ದು.

ಸ್ಥಳ ದೊರೆಯದವರಿಗೆ ಅಡ್ಮಿಷನ್ ಫೀ ೫ ರೂ. ಮಾತ್ರ ಪಾರ್ಸೆಲ್ ಮಾಡಲಾಗುತ್ತೆ. ತಾ. ೨೪, ೨೫-೬-೧೯೩೪ನೆ ದಿವಸಗಳಲ್ಲಿ Interview ಗೆ ಬರತಕ್ಕದ್ದು.

ಪ್ರತಿಯೊಬ್ಬರೂ ಹಾಸ್ಟಲಿನ ರೂಲ್ಸಿಗೆ ಬದ್ಧರಾಗಬೇಕು. ಸ್ಟ್ಯಾಂಪು ಕಳುಹಿಸಿದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗತ್ತೆ. ಸ್ಟ್ಯಾಂಪು ಕಳುಹಿಸದೆ ಇದ್ದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗುವುದಿಲ್ಲ. ಮೇಲ್ಕಂಡ ಅಂಶಗಳನ್ನು ಮೀರಿ ಬರತಕ್ಕ ಅಪ್ಲಿಕೇಷನ್‌ಗಳನ್ನು ಅಂಗೀಕಾರ ಮಾಡುವುದಿಲ್ಲ.

Note—ಬೋರ್ಡಿಂಗ್ ಹೊಮಿನಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಫರ್ನೀಚರ್ಸ್ (Furnitures) ತಟ್ಟೆ, ತಂಬಿಗೆ, ಬಕೀಟ್, ಕಪ್, ವಗೈರೆ ಸಾಮಾನುಗಳು ಕೊಡಲ್ಪಡುತ್ತೆ,

ವಿದ್ಯಾರ್ಥಿಗಳು ಜೊತೆಯಲ್ಲಿ ತೆಳುವಾದ ಒಂದು ಹಾಸಿಗೆಯೊಂದನ್ನು ತರತಕ್ಕದ್ದು.

ಸೀಟು ದೊರೆತ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಕ್ಲಾಸಿಗೆ ಸಂಬಂಧಪಟ್ಟ ಎಲ್ಲಾ ಪುಸ್ತಕಗಳನ್ನೂ ಪಡೆದುಕೊಂಡಿರಬೇಕು. ಇಲ್ಲದ ಪಕ್ಷಕ್ಕೆ ಸೀಟು ನಿರಾಕರಿಸಲ್ಪಡುವದು.

(Sd) S. ಶಿವಪ್ಪ,
ಆನರರಿ ಸೆಕ್ರೆಟರಿ.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯ ಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

ತಿಂಗಳು	ಪಾಲಿಯ ಒಟ್ಟು ಕಿಮ್ಮತ್ತು.
ಜನವರಿ ೧೯೩೪	೫೫೦೦ ರೂ.
ಫೆಬ್ರುವರಿ ,,	೧೨೦೦೦ ರೂ.
ಮಾರ್ಚ ,,	೩೦೫೦೦ ರೂ.
ಒಟ್ಟು.	೪೮೦೦೦ ರೂ.

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮರಣದ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳೆಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಕಂಡಿಶನ್: ತಿಂಗಳಿಗೆ ೧೦೦ರಿಂದ ೧೫೦ರವರೆಗೆ ಕಮಿಶನ್ ಸಿಗುವದು.

Managing Agents.

ಸಮಾಚಾರ ಸಂಗ್ರಹ.

—ಸಂಯುಕ್ತ ಪ್ರಾಂತದ ನ್ಯಾಯಾಧೀಶರನ್ನು ಒಬ್ಬ ಸುಲಿಗೆಗಾರನು ಚೂರಿಯಿಂದ ಇರಿದನು. ನ್ಯಾಯಾಧೀಶರು ಉಪಚಾರ ಹೊಂದುತ್ತಿದ್ದಾರೆ.

—ಅಮೇರಿಕೆಗೆ ಕೊಡತಕ್ಕ ಜೂನ ೧೫ರ ಸಾಲದ ಕಂತನ್ನು ಕೊಡಲಾಗುವದಿಲ್ಲನೆಂದು ಇಂಗ್ಲೆಂಡವು ಪ್ರಕಟಿಸಿದೆ.

—ದೇವಾಸ ಸಂಸ್ಥಾನಿಕರಿಗೆ ಹಿಂದುಸ್ಥಾನ ಸರಕಾರದವರು ತಿಂಗಳಿಗೆ ೩೫೦೦ ರೂ. ಕೊಡುವರು. ಮತ್ತು ಅವರ ಸಂಸ್ಥಾನದ ಆಡಳಿತವನ್ನು ತಾವೇ ಭೋಪಾಳದ ಏಜಂಟರ ಮುಖಾಂತರ ಮಾಡಿಸುವರು.

—ಕೈಲಾಸ ಪರ್ವತವನ್ನು ಏರಬೇಕೆಂದು ಮಿ. ಜಿ. ಡಿ. ಹೋಶಿಯವರು ಸರಕಾರದವರ ಅಪ್ಪಣೆಯನ್ನು ಕೇಳಿದ್ದರು. ಆದರೆ ಸರಕಾರದವರು ಅಪ್ಪಣೆ ಕೊಡಲಿಲ್ಲ.

—ಫ್ರಾನ್ಸದ ಜಗದ್ವಿಖ್ಯಾತ ನಟಯಾದ ಮಿಸ್ ಜೆನೀಡಾಲಿ ಎಂಬಾಕೆಯು ಏಳು ಸಾವಿರ ರೂ. ಬೆಲೆ ಬಾಳುವ ಒಂದು ವಜ್ರದ ಉಂಗುರವನ್ನು ಅಪಹರಿಸಿದುದಕ್ಕಾಗಿ ಸರಕಾರದವರು ಅವಳಿಗೆ ಗರ್ಜಂಂಂ ರೂ. ದಂಡ ವಿಧಿಸಿದ್ದಾರೆ. ಇವಳು ಫ್ರಾನ್ಸ ದೇಶದ ಪ್ರಸಿದ್ಧ ಶ್ರೀಮಂತರಲ್ಲೊಬ್ಬಳು.

—ಹೈದರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯದ ಕಟ್ಟಡಕ್ಕೆ ಬೆಂಕಿ ಹತ್ತಿದ್ದಿತು. ಆದರೆ ಸಕಾಲಕ್ಕೆ ಬೆಂಕಿ ನೊಂದಿಸುವ ಕೊಳವೆಗಳು ಬಂದು ಬೆಂಕಿಯನ್ನಾರಿಸಿದವು.

—ಅಸಫಾಬಾದ ಜಿಲ್ಲೆಯಲ್ಲಿ ಕಾಮಡುಗ ಎಂಬಲ್ಲಿ ಮಧ್ಯಾಹ್ನ ದಲ್ಲಿಯೇ ಒಂದು ಮನೆಗೆ ಬೆಂಕಿಹತ್ತಿತು. ಬೆಂಕಿ ಆರಿಸುವದಾಗದ್ದರಿಂದ ನೆರೆಮನೆಯವರೆಲ್ಲ ತಮ್ಮ ತಮ್ಮ ಮನೆ ಬಿಟ್ಟು ಓಡಿ ಹೋದರು. ಅಲ್ಲಿ ಒಟ್ಟಿಗೆ ೬೫ ಮನೆಗಳು ಸುಟ್ಟವು.

—ವರಂಗಲ ಜಿಲ್ಲೆಯ ಬೋರಗಮ್ ಪಹಾಡಿ ಎಂಬಲ್ಲಿ ಒಟ್ಟಿಗೆ ೩೦೦ ಮನೆಗಳು ಸುಟ್ಟವು.

—ಹಿಂದುಸ್ಥಾನವಲ್ಲೆಲ್ಲ ಆಟವಾಡಿದ ಮಿ. ಜಾರ್ಡಿನ್ನರ ಕ್ರಿಕೆಟ್ ಆಟಗಾರರು ಇಂಗ್ಲೆಂಡದಲ್ಲಿ ಆಸ್ಟ್ರೇಲಿಯನ್ ಆಟಕೂಟದೊಡನೆ ಆಡಿ ಸೋತರು.

—ಶಕ್ಯಾ ಎಂಬಲ್ಲಿ ಹಾಜಿ ಮೆಹಮ್ಮದ ಎಂಬ ಶ್ರೀಮಂತ ಭೂಮಿಯೊಡೆಯನು ಗಂಗುಮಲ್ಲ ಎಂಬವನ ಇಬ್ಬರು ಹೆಣ್ಣುಮಕ್ಕಳನ್ನು ಕುಲಗೆಡಿಸುವದಕ್ಕಾಗಿ ಬಂಧನದಲ್ಲಿರಿಸಿದನೆಂದು ಸರಕಾರದವರು ಅವನನ್ನು ಹಿಡಿಯಲು ವಾರಂಟು ಹೊರಡಿಸಿದ್ದಾರೆ.

—ನಾಗಪುರ ನಿಲ್ದಾಣದಲ್ಲಿ ಮಹಾತ್ಮಾಜಿಯವರಿಗೆ ಸ್ವಾಗತ ಮಾಡಲು ಒಂದು ಲಕ್ಷ ಜನರು ಹೂ ಹಣ್ಣುಗಳನ್ನು ಹಿಡಿದುಕೊಂಡು ನಿಂತಿದ್ದರು.

—ಮಹಾತ್ಮಾಜಿಯವರು ಪುಣೆಯಲ್ಲಿ ಬಾಂಬುರ್ಡಾ ಸ್ಟೇಶನದ ಹತ್ತರವಿರುವ ಕರ್ಸನಜಿ ಮೂಳಜಿ ಧರಮಸಿಯವರ ಭವನದಲ್ಲಿ ಳಿಯುವರು. ಕೇವಲ ವಿಶ್ರಾಂತಿಗಾಗಿ ಪೆರ್ಣಕುಟಿಗೆ ಹೋಗುವರು.

—ಹಿಂದಕ್ಕೆ ಪಂಜಾಬದಲ್ಲಿಯ ಒಬ್ಬ ಮೋಟಾರ ಡ್ರಾಯವ್ವರನು ಸ್ವಾಮಿಯು ಪರಮೇಶ್ವರನನ್ನು ತೋರಿಸದೆ ತನ್ನ ೪ ಸಾವಿರ ರೂ. ಗಳನ್ನು ಎತ್ತಿಹಾಕಿದನೆಂದು ನ್ಯಾಯಸ್ಥಾನದಲ್ಲಿ ಅರಿಕೆ ಮಾಡಿಕೊಂಡಿದ್ದನಷ್ಟೆ. ನ್ಯಾಯಾಧೀಶರು ಅವನ ಅರ್ಜಿಯನ್ನು ಕೆತ್ತುಹಾಕಿದ್ದಲ್ಲದೆ ಸ್ವಾಮಿಗಾದ ೨೦ರೂ. ಹಾನಿಯನ್ನು ಕೊಡಲಿಕ್ಕೆ ತಿಳಿಸಿದರು.

—ಇರಾಣದ ಶಹರು ಅಂಗೋರಾಕ್ಕೆ ಕೇಮಾಲ ಪಾಶಾರವರನ್ನು ಭೆಟ್ಟಿಯಾಗುವದಕ್ಕಾಗಿ ತಮ್ಮ ಆಡಂಬರದಿಂದ ಹೋಗಿದ್ದಾರೆ.

—ಬಿಹಾರ ಪ್ರಾಂತದ ಭಾಗಲಪುರ ಜಿಲ್ಲೆಯಲ್ಲಿ ಭಯಂಕರ ಬರಗಾಲ ಬಿದ್ದುದರಿಂದ ಸಾವಿರಾರು ಜನರು ಅನ್ನಾನ್ನಗತಿಕರಾಗಿದ್ದಾರೆ.

—ದರ್ಭಂಗಾ ಮಹಾರಾಜರು ದರ್ಭಂಗಾ ಪಟ್ಟಣವನ್ನು ಪುನ: ಕಟ್ಟಿಸುವದಕ್ಕಾಗಿ ೫ ಲಕ್ಷ ರೂಪಾಯಿ ಕೊಟ್ಟುದಲ್ಲದೆ ೯ ಲಕ್ಷ ರೂ. ಗಳನ್ನು ಸಾಲವಾಗಿ ಕೊಡಲು ಒಪ್ಪಿರುವರು.

—[redacted] ರನೋದ ಎಂಬ ಹೆಸರಿನ ಹಳ್ಳಿಯ ಸುತ್ತ [redacted] ಮಳೆಯಾಯಿತು. ಈ ಮಳೆಯು ಅಜಮಾಸು ೩ ಗಂಟೆಗಳವರೆಗಾಯಿತು.

—ಮುಖ್ಯ ಪ್ರಧಾನರ ಜಾತೀಯ ನಿರ್ಣಯದ ವಿರುದ್ಧವಾಗಿ ಚಟುವಟಿಕೆ ಮಾಡುವದಕ್ಕಾಗಿ ಒಂದು ಲಕ್ಷ ಸ್ವಯಂಸೇವಕರನ್ನು ಕೂಡಿಸುವ ಪ್ರಯತ್ನವು ಪಂಜಾಬದಲ್ಲಿ ನಡೆದಿದೆ. ಈಗ ೩೫ ಸಾವಿರ ಜನರನ್ನು ಕೂಡಿಸಿರುವರು.

—ಚಿತಗಾಂಗದ ಪೋ. ಸುಪರಿಂಟೆಂಡೆಂಟ ಮಿ. ಸಿಮರಿ ಇವರನ್ನು ಕೊಲೆಮಾಡುವ ಪ್ರಯತ್ನ ಮಾಡಿದ್ದಕ್ಕಾಗಿ ಹರೇಂದ್ರ ಚಕ್ರವರ್ತಿ ಮತ್ತು ಕೃಷ್ಣ ಚೌಧರಿ ಇವರಿಗೆ ದೇಹಾಂತವು ವಿಧಿಸಲಾಯಿತು.

—ಆಸಾಮ ಬಂಗಾಲದ ಮೇಲ ಗಾಡಿಯನ್ನು ನಿಲ್ಲಿಸಿ ಸಶಸ್ತ್ರ ಸುಲಿಗೆಗಾರರು ಅಂಚೆಯ ಡಬ್ಬಿಯಲ್ಲಿರುವವರಿಗೆ ಪಿಸ್ತೂಲು ತೋರಿಸಿ ೪ ಸಾವಿರ ರೂ. ಇನ್ಶೂರ ಪಾಕೀಟು ಒಯ್ದರು.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವ್ಯೆಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರು ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,

ತುಮಕೂರು (ಮೈಸೂರು ಸ್ಟೇಟ್.)

ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
ರಾಮದುರ್ಗ.

ಆಯುಃ ಜ್ಞಾನಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

ಸುಕುಮಾರ ಲೇಹ್ಯವು— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಗೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

ಜೀವಾಮೃತ ಲೇಹ್ಯವು— ಶಾಸ್ತ್ರಜ್ಞರಿಗೆ ಕಪ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

ಕಾಡುಳವಡಿಕಾಯಿ (ಇಂದ್ರವಾರುಣಿ) ತೈಲವು—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕಟ್ಟಿ ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

ನಾರಿನ ವೈರಿಯು—ಕಾಲಿಗೆ ಅರಿವೆ ಕಟ್ಟಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಷಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾಃ—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

ಹರ್ಡೀಕರ ಮಂಜಪ್ಪನವರು ಬರೆದ
ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸಃ- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜರ ಗುರುಮಠಕಲ್ಲು ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟ ಬೇನೆಯು (**ಪ್ಲೇಗ ಮಾರಿಕಾ,**) ಖಜ್ಜುಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ ವಗೈರೆ ರೋಗಗಳ ಮೇಲೆ ಆಶ್ಚರ್ಯ** ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಪಡಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅವರಿಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ವ್ಯಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಪೋಸ್ಟ— **ಕಮಲಾಪೂರ ಜಿ. ಗುಲ್ಬರ್ಗಾ.**

ನಾರ ಸಂಹಾರಿ.

ಹೊಸ ಶೋಧ! ಅದ್ಭುತ ಚಮತ್ಕಾರ!!

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು, ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವ ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ,
ಗುಲಬರ್ಗಾ.

ಮಾರಿಕಾ ಸಂಜೀವಿನಿ.

ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!

ಇದು ಮಾನವ ಚಿಕಿತ್ಸೆಗೆ ವಿಂಧಿ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧ ವಾಗಿದೆ. **ಈ ಸಂಜೀವಿನಿ ಚೂರ್ಣವನ್ನು** ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು. ಆಗ ನಿಮಗೆ ಖಂಡಿತವಾಗಿಯೂ ಅತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರೆಮ್ಮನ ಕಾಟವಿಲ್ಲ ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

ಪ್ಲೇಗ್ ಸಂಜೀವಿನಿ ಆಫೀಸ್
ಗುಲಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಉದ್ಯೋಗ ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಅಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆನ್ನುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚರ್ಮ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಪಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಆಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸತ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೬೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೀ ೦ ರೂಪಾಯಿ!

--೧೦೦೦--

ನೀಲೀ ಮುಶಿಜೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಚೀಳಿನ ನಾಶ— ೧೧ ,,
೧೩ ತಗಣಿ ತಪ್ಪು ಬಾಟ್ಲಿ— ೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. ಹಂಚಿಲಿ.
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 28

ಕನ್ನಡ

The

Karnataka Sandesha.

ನ್ಯಾಯನಿಷ್ಠುರ| ದಾಕ್ಷಿಣ್ಯಕ್ಕಪರನಾನಲ್ಲ| ಲೋಕವಿರೋಧಿ| ಶರಣನಾರ್ಥಿರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ಪಡಿತೀಜದಲ್ಲಿಪ್ಪನಾಗಿ ॥ ಪ. ವಚನ ॥ ಮುಪ್ಪಾನುಭವಿ ಬಸವಣ್ಣ ಸವರು.

ಸಂಪಾದಕರು:-
ಶೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೪. | ಸಂಚಿಕೆ ೪೨.

ಜಪಸೇವೆಯೇ ದೇವರಸೇವೆ.

ಮುಂಬಯಿಗೆ ಮಹಾತ್ಮಾಜಿಯವರ ಆಗಮನ.

ಬೋರೀಬಂದರ ನಿಲ್ದಾಣದಲ್ಲಿ ಪ್ರಚಂಡ ಸ್ವಾಗತ.

ತಾರೀಖು ೧೪ನೆಯ ದಿವಸ ಮುಂಜಾನೆ ಮಹಾತ್ಮಾಜಿಯವರು ನಾಗಪುರದಿಂದ ಮುಂಬೈಗೆ ಆಗಮಿಸಿದರು.

ಅವರ ಸ್ವಾಗತಕ್ಕಾಗಿ ನೆರೆದ ಸಾವಿರಾರು ಜನರು ಗಾಂಧೀಜಿಯವರ ಜಯಜಯಕಾರ ಮಾಡಿದರು. ಶ್ರೀ. ಮಥುರಾದಾಸ ವಸನಜಿ ಮತ್ತು ಧರ್ಮಾತ್ಮಾ ಮಾಲವೀಜಿಯವರು ಹಾರಗಳನ್ನು ಅರ್ಪಿಸಿದರು. ನೆರೆದ ಜನರ ಅಭಿನಂದನಗಳನ್ನು ಮಹಾತ್ಮರು ಹಸನ್ಮುಖರಾಗಿ ಸ್ವೀಕರಿಸುತ್ತ ಮಣಿ ಭವನಕ್ಕೆ ತೆರಳಿದರು. ಮಣಿಭವನದಲ್ಲಿ ಮಹಾತ್ಮರು ಮತ್ತು ಮಾಲವೀಜಿಯವರು ಪಾರ್ಲಿಮೆಂಟರಿ ಬೋರ್ಡಿನ ವಿಷಯಕವಾಗಿ ಸಂಭಾಷಿಸಿದ ನಂತರ ಶ್ರೀ. ಮಥುರಾದಾಸ ತ್ರಿಕಮಜಿಯವರು ಕೂಲಿಕಾರರ ಕಷ್ಟವನ್ನು ಪರಿಹರಿಸಲು ಪ್ರಯತ್ನಿಸಬೇಕೆಂದು ವಿನ್ನವಿಸಿಕೊಂಡರು.

ಕೀರ್ತನೆ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL – [illegible]
Dt. Bijapur [illegible]

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಇವರಿಂದ ಖರೀದಿಸಿರಿ:-

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

೩ ಚೆನಬಸನಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿವೆ. ಈ ಸುತಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆವ್ವಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಅಗಿ ಆಗ್ಗ ಮಾರಾಕ ಪೆಟ್ಟಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದೆ ಈಗ ಹತ್ತ ಹನ್ನೆರಡ್ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತವ್ವಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ

ಇವರಿಂದ

ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ

ಶ್ರೀ ಹೂಲಿ (ಪೂವಲ್ಲಿ)

ಸಿದ್ಧಾಂತ ಪಂಚಾಂಗವನ್ನೇ

ಕೊಳ್ಳಿರಿ.

ಶ್ರೀ ಲಕ್ಷ್ಮೀನಿಲಾಸ ಪುಸ್ತಕಾಲಯ

ಗದಗ

ಬಾಳೇಹಳ್ಳಿ ಶ್ರೀಗಳ ಗುಟ್ಟು ರಟ್ಟಾದ ಸಾರಾಂಶ.

ತಾ|| ೪-೬-೩೪ರ 'ತಾಯಿನಾಡು' 'ವೀರಕೇಸರೀ' ಪತ್ರಿಕೆಗಳಲ್ಲಿ ಪ್ರಕಟವಾದಂತೆ ಮೈಸೂರು ಅಡ್ವೋಕೇಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಪುಟ್ಟ ಶಾಮಯ್ಯ ಬಿ ಎ. ಎಲ್. ಎಲ್. ಬಿ. ಯವರು ಇಲೆಕ್ಟ್ರಿಕ್ ಸೂಪರಿಂಟಿಂಡೆಂಟ್ ಮಿ. ರಾ. ಶ್ರೀ. ರಾಮಭದ್ರ ಗೌಡರವರೂ, ಎಡತೊರೆ ಸಾಹುಕಾರ್ ಸಿದ್ಧಲಿಂಗಪ್ಪ ಶೆಟ್ಟರು ಮತ್ತು ಡಾ. ಸಿ. ಮಲ್ಲಪ್ಪ ಎಂ. ಬಿ. ಬಿ. ಎಸ್. ರವರು ತಾ. ೨-೬-೩೪ನೆಯ ದಿನಸ ರಂಭಾಪುರಿಯವರನ್ನು ನೋಡಲು ಸಮಯ ತೆಗೆದುಕೊಂಡು ಧರ್ಮಪ್ರವರ್ತಕ ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಸೇರಿದ್ದ ವಿಷಯವು ಎಲ್ಲರಿಗೂ ಗೊತ್ತಿರಬಹುದು.

ಆ ಮಹನೀಯರು ಸಮಯ ತೆಗೆದುಕೊಂಡು ಬಂದಾಗ್ಯೂ ಸ್ವಾಮಿಗಳ ಕೂಡ ಸಂಭಾಷಣೆ ಮಾಡಲು ಅರ್ಧಗಂಟೆಯ ಕಾಲ ಕಾಯಬೇಕಾದ ಪ್ರಸಂಗ ಒದಗಿತು. ಅವರು ವಿಚಾರಿಸುವಲ್ಲಿ ಸ್ವಾಮಿಗಳ ಜನರಲ್ಲೊಬ್ಬರು ಸ್ವಾಮಿಗಳು ಶಿವಪೂಜೆಯಲ್ಲಿದ್ದಾರೆಂದು ತಿಳಿಸಿದರು. ಹಾಗೆ ಸ್ವಲ್ಪ ಹೊತ್ತು ಕಾದು ಕೂತಿರುವಲ್ಲಿ ಸ್ವಾಮಿಗಳ ಸವಾರಿಯು ಬಿಜಯಿಸಿತು. ಸ್ವಲ್ಪ ಮಾತುಕತೆಗಳು ನಡೆಯುವ ಸಮಯಕ್ಕೆ ಸ್ವಾಮಿಗಳ ಜನರಲ್ಲೊಬ್ಬರು ನಡುವೆ ಸುಗ್ಗಿ ಅಡ್ಡಬಿದ್ದು ಶಿವಪೂಜೆಗೆ ಹೊರಡಬೇಕು. ಬಹಳ ಹೊತ್ತಾಯಿತೆಂದರು. ಹಾಗೂ ಸ್ವಲ್ಪ ಮಾತಾಡುತ್ತಿರುವಾಗಲೇ ಪಕ್ಕದಲ್ಲಿ ಘಂಟಾ ಜಾಂಗಟೆಗಳು ಏಕಕಾಲದಲ್ಲಿ ಬಾರಿಸಲ್ಪಟ್ಟು ಅವುಗಳ ಬೋರ್ಗರೆಯುವ ಧ್ವನಿಯಿಂದ ಒಬ್ಬರ ಮಾತು ಒಬ್ಬರಿಗೆ ಕೇಳದಂತಾಯಿತು. ಕೊನೆಯಲ್ಲಿ ಶ್ರೀಗಳು ಉಗ್ರಕೋಪವನ್ನು ತಾಳಿ ತಮ್ಮನ್ನೆಷ್ಟು ಮಾತ್ರಕ್ಕೂ ಬೊಂಬೆಯಂತೆ ತಿಳಿಯಬೇಡಿ, ನಿಮ್ಮ ಮಾತುಗಳಿಗೆ ನಾವು ಕಿವಿಗೊಡುವವರಲ್ಲ. ಸಾವಿರಾರು ಜನಗಳಲ್ಲ ಕೋಟ್ಯಾಂತರ ಜನರು ನಮಗೆ ವಿರೋಧಿಗಳಾದರೂ ನಾವು ಮಾತ್ರ ಎಂದಿಗೂ ಪ್ರಮುಥ ಶ್ರೇಣಿಗೆ ಪೂಜ್ಯಭಾವವನ್ನು ತೋರಿಸುವವರಲ್ಲ. ಎಂದು ಹೇಳಿ ಥಟ್ಟನೆ ಒಳಕ್ಕೆ ಬಿಜಯಗೈದರು. ಸಮಾಜದಲ್ಲುಂಟಾಗಿರುವ ನ್ಯೂನಾತಿರೇಕಗಳನ್ನು ತೆಗೆದುಹಾಕಿ ಶಾಂತಿ ಸಮಾಧಾನಗಳನ್ನುಂಟುಮಾಡಬೇಕೆಂಬುದಾಗಿ ಮಾತುಕತೆ ನಡೆಸಲು ಹೋಗಿದ್ದ ಮಹನೀಯರು ಅಶಾಭಂಗ ಪೂರ್ಣರಾಗಿ ಹಿಂತಿರುಗಿದರು. ಇದಲ್ಲವೆ ಒಂದು ಪೀಠಕ್ಕೆ ಅಧ್ಯಕ್ಷರಾಗಿ ಆ ಪೀಠದ ಶಿಷ್ಯವರ್ಗದವರಿಗೆ ಮಾಡುವ ಉಪದೇಶ. ಎಲ್ಲರು ಅವರು ಹೇಳಿದಂತೆ ಕೇಳಿದರೆ ಕೇಳಬೇಕು. ಅದಲ್ಲದೆ ಎಲ್ಲರೂ ವಿರೋಧಿಗಳಾದರೂ ಅವರಿಗೆ ವ್ಯಸನವಿದ್ದಂತಿಲ್ಲ. ಯಾರೊಬ್ಬರು ಒಂದು ಪೀಠದ ಅಧ್ಯಕ್ಷರಾಗಿ ಸಮಾಜದ ಧಾರ್ಮಿಕ ಸುಧಾರಣೆಯನ್ನು ಮೂಲೆಗೊರಗಿಸಿ ಆ ಪೀಠದ ಅಸಂಖ್ಯಾತ ಶಿಷ್ಯರಿಗೆ ವಿರೋಧಿಯೆಂದೆನಿಸಿಕೊಂಡ ಮೇಲೆ ಅವರು ಆ ಪೀಠದಲ್ಲಿರುವ ಅವಶ್ಯಕತೆಯಾದರೂ ಯಾವುದು? ತಾವು ಶಿಷ್ಯ ವರ್ಗದಿಂದ ಆ. ಸ್ಥಾನಕ್ಕೆ ನಿಯಮಿಸಲ್ಪಟ್ಟವರೆಂಬುದನ್ನು ಮರೆತು ಆ ಸ್ಥಾನವು ತಮ್ಮ ಪಿತ್ರಾರ್ಜಿತ ಸೊತ್ತೆಂಬಂತೆಯೂ, ಇಲ್ಲವೆ ಶ್ರೀ ಭಗವದನುಜ್ಞೆಯಂತೆ ಕೈಲಾಸದಿಂದಿಳಿದುಬಂದು ಆ ಸ್ಥಾನವನ್ನು ಆಕ್ರಮಿಸಿಕೊಂಡಂತೆ ಶಿಷ್ಯರಲ್ಲಿ ಅಪ್ಪಣೆ ಕೊಡಿಸುತ್ತಿರುವರು. ಶಿಷ್ಯರು ಫಟ್ಟೆಯಾದ ಮಠಗಳನ್ನು ಕಟ್ಟಕೊಟ್ಟು ಅವರ ಜನ್ಮ ಚರಿತಾರ್ಥವು ಸಮಾಜ ಕಲ್ಯಾಣದಲ್ಲಿ ಸುಸೂತ್ರವಾಗಿ ಜರುಗಿಸಿಕೊಂಡು ಬರುತ್ತ, ಸಾಗಿಸಿಕೊಟ್ಟಿರುವುದು ಮಠದಯ್ಯನವರ ವಿಷಯವು ಸುಖಕ್ಕಲ್ಲ. ಜನಾಂಗದ ಹಿತಕ್ಕೆ, ಮೇಲ್ಮೆಗೆ, ಮತ್ತು ಧಾರ್ಮಿಕ ಸುಧಾರಣೆಗೆ. ಇನ್ನೊಂದು ವಿಷಯ. ಹಿಂದೆ ಮ|| ರಾ|| ತೂಬಗೆರೆ ನಂಜಪ್ಪನವರು ಇದೇ ವಿಚಾರ ಮಾತನಾಡಲು ಅವರಲ್ಲಿ ಹೋಗಿದ್ದಾಗ್ಗೆ ಸ್ವಲ್ಪ ಮಾತುಕತೆ ನಡೆಯಲು ಪ್ರಾರಂಭವಾಗುವ ಸಮಯಕ್ಕೆ ಸ್ವಾಮಿಗಳ ಜನರಲ್ಲೊಬ್ಬರು ಅಡ್ಡಬಂದು ನುಹಾಸ್ವಾಮಿಗಳ ದರ್ಶನಕ್ಕೆಂದು ಹೊರಗೆ ಬಹಳ ಜನ ಕಾದಿರುವರೆಂದು ಹೇಳಿ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ಕೊನೆಗೆ ಶ್ರೀಯುತರು ಹೊರಗೆ ಬಂದು ನೋಡುವಲ್ಲಿ ಒಬ್ಬರೂ ಇಲ್ಲದಿರುವುದನ್ನು ನೋಡಿ ಆಶಾಭಂಗರಾಗಿ ಹಿಂತಿರುಗಿದರು. ಹೀಗೆ ಇವರ ಹತ್ತಿರ ಹೋಗಿ ಮಾತನಾಡುವವರಿಗೂ ಅವಕಾಶ ಕೊಡುವುದಿಲ್ಲ. ಆದ ಕಾರಣ ಇನ್ನು ಮುಂದೆ ಪತ್ರಿಕೆಗಳ ಮೂಲಕ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲ. ಆದಕಾರಣ ಇನ್ನು ಮುಂದೆ ಪತ್ರಿಕೆಗಳ ಮೂಲಕ ಪ್ರಶ್ನೆಗಳು ಕೇಳುವುದೂ ಬೇಡ. ಪತ್ರಿರ ಹೋಗಿ ಉಪದೇಶ ಕೇಳುವುದೂ ಬೇಡವೆಂದು ಮಹಾಜನರಲ್ಲಿ ನನ್ನ ಚಿಕ್ಕ ದೊಂದು ಅರಿಕೆ. ಪಾತ್ರೆಯಲ್ಲಿ ಬೇಯುವ ಒಂದಗುಳನ್ನು ಪರೀಕ್ಷಿಸಿದ ಮೇಲೆ ಬಾಕಿ ಉಳಿದಗಳುಗಳನ್ನು ನೋಡುವ ಅವಶ್ಯಕವಿರುವುದಿಲ್ಲ. ಆದರಂತೆ ಈ ಸ್ವಾಮಿಗಳವರಲ್ಲಿ ಪ್ರಶ್ನಿಸುವವರ ಫಲಿತಾಂಶ.

ಇತಿ ಸಮಾಜಾಭಿಮಾನಿ,
ಓರ್ವ ಪ್ರತ್ಯಕ್ಷದರ್ಶಿ.

ಮುಂಬಯಿಯಲ್ಲಿ ಪಂ. ಮಾಲವೀಜಿಯವರು.

ಪಂ. ಮಾಲವೀಜಿಯವರು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಉಪಸ್ಥಿತರಾಗಲು ಮುಂಬಯಿಗೆ ೧೪ನೆಯ ತಾರೀಖಿಗೆ ಬಂದರು. ಅವರು ತಮ್ಮ ಸಂದರ್ಶನೆಯ ಕಾಲಕ್ಕೆ "ದೇಶಕ್ಕೆ ಈಗ ಐಕ್ಯತೆಯ ಅವಶ್ಯಕತೆಯು ವಿಶೇಷವಾಗಿದ್ದು ಅದನ್ನುಂಟುಮಾಡಲು ಶಕ್ಯವಿದ್ದಷ್ಟು ಪ್ರಯತ್ನಿಸುವೆನು. ಐಕ್ಯವುಂಟಾಗುವ ವಿಷಯದಲ್ಲಿ ನನಗೆ ಸ್ವಲ್ಪವೂ ಸಂಶಯವು ತೋರುವದಿಲ್ಲ." ಎಂದರು.

ಸರದಾರ ವಲ್ಲಭಭಾಯಿಯವರ ಮುಕ್ತತೆಗೆ ವಿರೋಧ.

ಸರದಾರ ಪಟೇಲರ ಮುಕ್ತತೆಯ ವಿಷಯವಾಗಿ ವಿರೋಧಾಭಿಪ್ರಾಯವನ್ನು ಜಿಲ್ಲಾಧಿಕಾರಿಗಳು ವರಿಷ್ಠರಿಗೆ ತಿಳಿಸಿದ್ದಾರೆ. ಸರದಾರರು ಮಹಾತ್ಮರಿಗಿಂತಲೂ ಭಯಂಕರರೆಂದೂ ಅವರನ್ನು ಬಿಟ್ಟರೆ ಜನಸಂಘಟನೆ ಮಾಡಿ ಬಹಿರಂಗವಾದ ಚಟುವಟಿಕೆಯನ್ನು ಪ್ರಾರಂಭಿಸಲು ಮಹಾತ್ಮಾಜಿಯವರಿಗಿಂತ ಅವರಲ್ಲಿ ಹೆಚ್ಚು ಸಾಮರ್ಥ್ಯವಿದೆಯೆಂದೂ ಇವರಿಗೆ ತೋರಿದೆ. ಬಿಟ್ಟರೆ ಏನು ಮಾಡುವರೆಂದು ಸರಕಾರದವರು ಕೇಳಲು ಸರದಾರರು— "ನಾನೊಬ್ಬ ರಾಷ್ಟ್ರೀಯ ಸೇವಕನು. ರಾಷ್ಟ್ರೀಯ ಸಭೆಯು ಆಜ್ಞಾಪಿಸಿದಂತೆ ನಡೆಯುವೆನು" ಎಂದರಂತೆ.

—ಚಿಕ್ಕೋಡಿಯಲ್ಲಿಯ ಶೀಲ ಬಲಸಂವರ್ಧಕ ವ್ಯಾಯಾಮ ಮಂಡಲಿಯವರು ಮೆ ತಿಂಗಳಿನಲ್ಲಿ ಒಂದು ಲಕ್ಷ ಸೂರ್ಯ ನಮಸ್ಕಾರ ಹಾಕುವ ಸಂಕಲ್ಪ ಮಾಡಿ ಆ ಪ್ರಕಾರ ಪೂರ್ಣ ಮಾಡಿದರು.

ಹುಬ್ಬಳ್ಳಿ ವೀರಶೈವ ಮಡಿವಾಳರ ಸಭೆ.

ಶರಣ ಕರ್ನಾಟಕ ತಾ. ೧೧-೬-೩೪.

ನಿನ್ನೆ ಇಲ್ಲಿಯ ಓಲೀಮಠದಲ್ಲಿ ಹುಬ್ಬಳ್ಳಿಯ ವೀರಶೈವ ಮಡಿವಾಳರು ತಮ್ಮ ಧಾರ್ಮಿಕ ಸಾಮಾಜಿಕ ಸಮುನ್ನತಿಗಾಗಿ ಕೈಕೊಳ್ಳಬೇಕ್ಕ ಉಪಾಯಗಳ ಆಲೋಚನೆಗಾಗಿ ಶ್ರೀ ಬಿಳೆ ಅಂಗಡಿ ವಕೀಲರ ಅಧ್ಯಕ್ಷತೆಯಲ್ಲಿ ಸಭೆಗೂಡಿಸಿದ್ದರು. ಈ ಸಭೆಗೆ ಮಡಿವಾಳರಲ್ಲಿಯ ಪ್ರಮುಖ ಸದ್ಗೃಹಸ್ಥರಾದ ೧ ಸಿದ್ಧಪ್ಪ ನಿಂಗಪ್ಪ ಬೆಳಗಲಿ, ೨ ಭೀಮಪ್ಪ ಮಡಿವಾಳರ, ೩ ಚನಬಸಪ್ಪ ಸತ್ತೂರು, ೪ ಮಲ್ಲಪ್ಪ ಸತ್ತೂರು, ೫ ತಿಪ್ಪಣ್ಣ ಮಡಿವಾಳರ, ೬ ಯಲ್ಲಪ್ಪ ಸತ್ತೂರ, ೭ ಮಲ್ಲಪ್ಪ ಮಡಿವಾಳರ, ೮ ಮುದಕಪ್ಪ ಮಡಿವಾಳರ ೯ ಬಸಪ್ಪ ಮಡಿವಾಳರ, ೧೦ ಕಲ್ಲಪ್ಪ ಮಡಿವಾಳರ, ೧೧ ಪ್ರಭಣ್ಣ ಮುಳಗುಂದ, ೧೨ ಶಿದ್ಲಿಂಗಪ್ಪ ಕುಂದಗೋಳ, ೧೩ ಅಡಿವೆಪ್ಪ ಮಡಿವಾಳರ ೧೪ ನೀಲಕಂಠಪ್ಪ ಬನ್ನೆ ಮೊದಲಾದವರು ಬಂದಿದ್ದರು.

ಇದಲ್ಲದೆ ವೀರಶೈವ ಸದ್ಗೃಹಸ್ಥರಾದ ಶ್ರೀಮಾನ್ ಸಿದ್ಧರಾಮಪ್ಪನವರು ಪಾವಟೆ, ಶ್ರೀ. ವಿ. ಬ ಬಿಳೆಅಂಗಡಿ, ಶ್ರೀ. ಚಂದ್ರಶೇಖರ ಶಾಸ್ತ್ರಿಗಳು, ಶ್ರೀ. ಗುರುಶಾಂತಪ್ಪನವರು ಗೊಬ್ಬಣ್ಣನವರ ಶ್ರೀ. ಎಲ್. ಎಸ್, ಪಾಟೀಲ ಮೊದಲಾದವರು ಬಂದಿದ್ದರು.

ಶ್ರೀ. ನೀಲಕಂಠಪ್ಪ ಬನ್ನೆ ಇವರು— "ನಾವು ವೀರಶೈವರೇ ಇದ್ದು ನಮ್ಮ ಹೀನ ಉದ್ಯೋಗದ ಸಲುವಾಗಿ ಇವರನ್ನು ವೀರಶೈವರು ಬದಿಗಿರಿಸುತ್ತ ಬಂದಿದ್ದಾರೆ. ನಮ್ಮ ಮನೆಗೆ ಜಂಗಮರು ಬರುವದಿಲ್ಲ. ನಮ್ಮ ವಿದ್ಯಾರ್ಥಿಗಳಿಗೆ ಲಿಂಗಾಯತ ಫಂಡು ಸಿಗುವದಿಲ್ಲ. ಕಳೆದ ವರುಷ ಕೂಡಿದ ವೀರಶೈವ ಮಹಾ ಸಭೆಯಲ್ಲಿ ನಮಗೆ ಸ್ಕಾಲರಸಿಪ್ಪು ಫಂಡು ಕೊಡಬೇಕೆಂದು ನಿರ್ಣಯವಾಗಿದೆ. ಆದರೂ ನಮಗೆ ಇನ್ನೂ ಫಂಡು ಸಿಗುವದಿಲ್ಲ. ನಮ್ಮ ಸ್ಥಿತಿಗತಿಯನ್ನು ಸುಧಾರಿಸಲಿಕ್ಕೆ ಯಾರೂ ಪ್ರಯತ್ನಿಸುವದಿಲ್ಲ. ಈ ಎಲ್ಲ ತೊಂದರೆಗಳನ್ನು ದೂರಮಾಡಿ ನಮಗೆ ದೀಕ್ಷೆ ಕೊಟ್ಟು ನಮ್ಮ ಮನೆಗೆ ಜಂಗಮರು ಬರುವಂತೆ ಮಾಡಿರಿ. ಹಾಗು ನಮ್ಮ ಸಮಾಜವು ಊರ್ಜಿತಾವಸ್ಥೆಗೆ ಬರುವಂತೆ ಮಾಡಬೇಕೆಂದು ನಮ್ಮ ವಿನಂತಿ ಅದೆ. ಅಲ್ಲದೆ ನಮ್ಮ ಆರ್ಥಿಕ ಸ್ಥಿತಿಯು ಹೀನವಾದ್ದರಿಂದ ನಾವು ಭವಿಗಳ ಬಟ್ಟೆಯನ್ನು ಒಗೆಯುತ್ತ ಬಂದೆವು. ನೀವು (ವೀರಶೈವರು) ಭವಿಗಳಿಂದ ನಿಮ್ಮ ಮಡಿ ಮಾಡಿಸದೆ ನಮ್ಮಿಂದ ಮಾಡಿಸಹತ್ತಿದರೆ ನಾವು ನಮ್ಮ ಧರ್ಮದ ನಿಯಮಗಳಂತೆ ಭವಿಗಳ ಬಟ್ಟೆಗಳನ್ನು ಒಗೆಯುವುದಿಲ್ಲವೆಂದು" ಮುಂತಾಗಿ ಭಾಷಣ ಮಾಡಿದರು.

ಆ ಮೇಲೆ ಶ್ರೀ. ಪಾವಟೆ ವಕೀಲರು ತಮ್ಮ ಭಾಷಣದಲ್ಲಿ— "ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಧರ್ಮಗಳು ಶಿಥಿಲವಾಗಿವೆ. ನಿಜವಾದ ವೀರಶೈವರ ಧರ್ಮದಂತೆ ಆಚರಿಸುವಂತಿದ್ದರೆ ನೀವು ಭವಿಗಳ ಬಟ್ಟೆಗಳನ್ನು ಒಗೆಯಕೂಡದು ಹಾಗು ದೀಕ್ಷೆಯನ್ನು ಹೊಂದಬೇಕು. ಆಂದರೆ ನಿಮ್ಮ ಮನೆಗೆ ಜಂಗಮರು ಊಟಕ್ಕೆ ಬರುತ್ತಾರೆ. ಆದರಂತೆ ಉಳಿದ ವೀರಶೈವರೂ ಬರುತ್ತಾರೆ. ನೀವು ವೀರಶೈವ ಧರ್ಮದ ಕಟ್ಟಳೆಯನ್ನು ಪಾಲಿಸಲೇ ಬೇಕಾಗುವದು. ನಮ್ಮ ಮಡಿವಾಳ ಮಾಚಯ್ಯನು ಶ್ರೀ ಬಸವಣ್ಣನವರಿಗೆ ಸಹ ಬುದ್ಧಿ ಹೇಳುವಂಥವನಾಗಿದ್ದು ಭವಿಗಳ ಮುಖವನ್ನು ಸಹ ನೋಡುತ್ತಿದ್ದಿಲ್ಲ. ಅಂಥ ಮಹಿಮಾಶಾಲಿಯಾದ ಮಡಿವಾಳ ಮಾಚಯ್ಯನ ವಂಶಜರಾದ ನೀವು ಭವಿಗಳ ಬಟ್ಟೆಗಳನ್ನು ಒಗೆದು ಅವರ ಸೇವೆ ಮಾಡುವದು ಶೋಚನೀಯವು. ನಿಮ್ಮ ಆರ್ಥಿಕ ಸ್ಥಿತಿಯು ನೆಟ್ಟಗಿಲ್ಲದ್ದೇನೋ ನಿಜ. ಆದನ್ನು ಸುಧಾರಿಸಲಿಕ್ಕೆ ನಾವೂ ನೀವೂ ಕೂಡೇ ಪ್ರಯತ್ನಿಸಬೇಕು. ನಿಮ್ಮಗೆ ಲಿಂಗಾಯತ ಫಂಡಿನಿಂದ ಸ್ಕಾಲರಸಿಪ್ಪು ಕೊಡುವಂತೆ ವ್ಯವಸ್ಥೆ ಮಾಡುವೆವು." ಮುಂತಾಗಿ ಅವರ ಮನಸ್ಸೊಪ್ಪುವಂತೆ ಹೇಳಿ ಕೆಳಗಿನಂತೆ ಠರಾವು ತಂದರು—

ಠರಾವು

ವೀರಶೈವ ಮಡಿವಾಳರ ಸಂಗಡದವರು ಕೆಲವು ಸಾಮಾಜಿಕ ಕಾರಣಗಳಿಂದ ಇದೇ ಕಾರಯಕವನ್ನು ಮಾಡಿ ಬಸವಾದಿ ಪ್ರಮಥರಿಗೂ ವಂದ್ಯನೆನಿಸಿದ ಶ್ರೀ ಮಡಿವಾಳ ಮಾಚಿದೇವನ ಉಚ್ಚ ಸ್ಥಾನದಿಂದ ಜರಿದಿರುವರು. ಈ ದುಃಸ್ಥಿತಿಗೆ ಇಡೀ ವೀರಶೈವ ಸಮಾಜವು ಅಪರಾಧಿಯಿದೆ. ಈ ಅಪರಾಧವನ್ನು ತೊಳೆದು ಈ ಬಾಂಧವರನ್ನು ವೀರಶೈವ ಸಮಾಜದ ಸಮಗ್ರತೆಯಲ್ಲಿ ಸೇರಿಸಲಿಕ್ಕಾಗಿ ಈ ಹುಬ್ಬಳ್ಳಿಯ ವೀರಶೈವ ನಾಗರಿಕರ ಸಭೆಯನ್ನು ಆದಷ್ಟು ತೀವ್ರವೇ ಅಂದರೆ ಇನ್ನು ೭ ದಿವಸಗಳು ಮೀರದಂತೆ ಕರೆಯಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಇದಕ್ಕೆ ಶ್ರೀ. ಗುರುಶಾಂತಪ್ಪನವರು ಗೊಬ್ಬಣ್ಣನವರ ಇವರು ಅನುಮೋದಿಸಿದರು. ಈ ಠರಾವು ಸರ್ವಾನುಮತದಿಂದ ಪಾಸಾಯಿತು.

ಈ ಕಾರ್ಯಕ್ಕಾಗಿ ಒಂದು ಉಪ ಮಂಡಲವನ್ನು ಗೊತ್ತು ಮಾಡಲಿಕ್ಕೆ ಈ ವಿಷಯದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡುವ ವೀರಶೈವರದೊಂದು ಸಭೆಯನ್ನು ಕೂಡಿಸಲಿಕ್ಕೆ ಇದೇ ರವಿವಾರ ೧೦ನೇ ತಾರೀಖಿನ ದಿವಸ ಸಾಯಂಕಾಲ ೭ ಗಂಟೆಗೆ ಓಲೀಮಠದಲ್ಲಿ ಎಲ್ಲರೂ ಬರಬೇಕೆಂದು ಗೊತ್ತಾಯಿತು.



ಅರಬಿ ಸಂಸ್ಕೃತಿಯನ್ನು ತಳ್ಳಿದ ತುರ್ಕಿಸ್ಥಾನ.

ಈಗ ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳು ಕಾಲಮಾನಕ್ಕನುಗುಣವಾದ ಸುಧಾರಣೆಗಳನ್ನು ಮಾಡಿಕೊಳ್ಳುತ್ತ ಬಹು ಮುಂದರಿದು ಸುಖಸೌಲಭ್ಯಗಳನ್ನು ಹೊಂದುತ್ತಿವೆ. ಜಗತ್ತಿನಲ್ಲಾಗುತ್ತಿರುವ ಈ ಅದ್ಭುತ ಸುಧಾರಣೆಗಳ ಅರುವೇ ಇಲ್ಲದೆ ತಾತನೆಟ್ಟ ತಾಳೆಯ ಮರವೆಂಬ ಅಭಿಮಾನದಿಂದ ನೇಣು ಹಾಕಿಕೊಂಡು ಅನೇಕ ರಾಷ್ಟ್ರಗಳು ಅಧೋಗತಿಗೀಡಾಗುತ್ತಲಿವೆ.

ಅನೇಕ ಸಮಾಜಗಳಿಗೆ ಪ್ರಪಂಚದಲ್ಲಿ ಎಂತಹ ಸುಧಾರಣೆಗಳಾಗುತ್ತಲಿವೆಯೆಂಬ ಸುದ್ದಿಯು ಕೂಡಾ ಸೋಕಿಲ್ಲ. ಅವು ಅಜ್ಞಾನದ ಕಗ್ಗತ್ತಲೆಯಲ್ಲಿ ಕಣ್ಣುಮುಚ್ಚಿಕೊಂಡು ಕುಳಿತು ನಾನಾ ಕಷ್ಟನಷ್ಟಗಳಿಂದ ಬಳಲುತ್ತಲಿವೆ. ಪ್ರಪಂಚದಲ್ಲಿರುವ ಈ ಇಪ್ಪತ್ತೆನೆಯ ಶತಮಾನದ ಮಹಾ ವಿಭೂತಿಗಳಲ್ಲಿ ಒಬ್ಬ ಪ್ರಮುಖರಾದ ಕೆಮಲ ಪಾಶಾರವರು ಮಾಡಿದ ಅದ್ಭುತ ಕಾರ್ಯಗಳು ಪ್ರಪಂಚವನ್ನೇ ಬೆರಗುಗೊಳಿಸತಕ್ಕವುಗಳಾಗಿವೆ.

ಮುಸಲ್ಮಾನ್ ಜನಾಂಗಕ್ಕೂ, ರಾಷ್ಟ್ರಗಳಿಗೂ ಅರಬಸ್ಥಾನವೇ ಪುಣ್ಯಭೂಮಿ. ಅರಬಿ ಸಂಸ್ಕೃತಿಯೇ ಅವುಗಳಿಗೆ ಪ್ರಾಧಾನ್ಯ. ಯುರೋಪಖಂಡದಲ್ಲಿರುವ ತುರ್ಕಿಸ್ಥಾನವು ಕೂಡಾ ಕ್ರಿ. ಶ. ೧೯೧೯ರವರೆಗೆ ಅರಬಿ ಸಂಸ್ಕೃತಿಯನ್ನೇ ಅನುಸರಿಸಿದ್ದಿತು. ಯುರೋಪದ ಮಹಾಯುದ್ಧದ ಕಾಲಕ್ಕೆ ತುರ್ಕಿಸ್ಥಾನವು ಜರ್ಮನಿಯ ಕಡೆಗಾಯಿ ತಸ್ಯೆ. ಆಗ ಅರಬಸ್ಥಾನವು ತುರ್ಕಿಗ ವಿರೋಧವಾದ ಮಿತ್ರ ಮಂಡಲಿಯ ಕಡೆಗೆ ಸೇರಿತು.

ಇದು ತುರ್ಕಿಸ್ಥಾನಕ್ಕೆ ಸರಿದೋರಲಿಲ್ಲ. ಯುದ್ಧವು ಶಾಂತವಾದ ನಂತರ ತರುಣ ತುರ್ಕ ಪಂಗಡವುಂಟಾಯಿತು. ಇದಕ್ಕೆ ಕೆಮಲ್ ಪಾಶಾರವರು ಪ್ರಮುಖರಾದರು. ತಮ್ಮ ಅದ್ಭುತ ಶಕ್ತಿ ಸಾಹಸಗಳಿಂದ ತುರ್ಕಿಸ್ಥಾನದಲ್ಲಿ ಹೊಸ ಚೈತನ್ಯವನ್ನುಂಟುಮಾಡಿ ತಮ್ಮ ರಾಜಕೀಯ ಅಪಜಯದಿಂದಾದ ಅನರ್ಥವನ್ನು ನಿವಾರಣೆ ಮಾಡಿಕೊಂಡರು.

ಆ ಮೇಲೆ ತಮ್ಮ ಮೇಲಿದ್ದ ಅರಬಿಸ್ಥಾನದ ಧಾರ್ಮಿಕ ಮತ್ತು ಸಂಸ್ಕೃತಿಯ ಸ್ವಾಮಿತ್ವವನ್ನು ತಳ್ಳಲು ಪ್ರಾರಂಭಿಸಿದರು. ಮೊದಲು ಧಾರ್ಮಿಕ ಗುರುಸೀಶಕ್ಕಿದ್ದ ತಮ್ಮಲ್ಲಿಯ ಅಧಿಕಾರವನ್ನು ಕಿತ್ತೊಗೆದರು. ಖಿಲಾಪತ್‌ದ ಸ್ವಾಮಿತ್ವವು ತಮ್ಮ ಮೇಲಿಲ್ಲವೆಂದು ಪ್ರಸಿದ್ಧಗೊಳಿಸಿದರು. ಅರಬರು ತಮ್ಮ ವಂಶವೇ ಶ್ರೇಷ್ಠವಾದುದು, ತಾವೇ ಗುರುಸೀರಾಧಿಕಾರಕ್ಕೆ ಯೋಗ್ಯರು. ತುರ್ಕಿ ವಂಶಜರಿಗೆ ಈ ಅಧಿಕಾರವಿಲ್ಲವೆಂದು ತಿಳಿದಿದ್ದುದು ತುರ್ಕಿಯವರಿಗೆ ಅಪಮಾನಕಾರಕವಾಗಿದ್ದಿತು. ಅದಕಾರಣ ಮೊದಲು ಈ ಧರ್ಮಾಧಿಕಾರಿಗಳ ಸ್ವಾಮಿತ್ವವನ್ನು ತಮ್ಮಲ್ಲಿ ನಾಶಗೊಳಿಸಿದರು.

ಅರಬಿ ಲಿಪಿಯನ್ನು ತೆಗೆದುಹಾಕಿ ರೋಮನ್ ಲಿಪಿಯನ್ನು ಪ್ರಾರಂಭಿಸಿದರು. ಅರಬಿ ಭಾಷೆಯನ್ನು ತೆಗೆದು ಹಾಕಿ ತುರ್ಕಿ ಭಾಷೆಗೇನೇ ಪ್ರಾಮುಖ್ಯತೆಯನ್ನು ಕೊಟ್ಟರು. ಖುರಾನ್ ಗ್ರಂಥದಲ್ಲಿರುವ ದೇವರೊತರ ಸಂಬಂಧವಾದ ಪವಾಡಗಳ ಸಂಗತಿಗಳನ್ನು ಬಿಟ್ಟು ಏತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಅದನ್ನು ತುರ್ಕಿಭಾಷೆಯಲ್ಲಿ ಬರೆಯಿಸಿದರು. ದೇವರಿಗೆ ಎಲ್ಲಾ ಭಾಷೆಗಳೂ ತಿಳಿಯುವದರಿಂದ ನಮಾಜ್ ಮಾಡುವಾಗಮತ್ತು ದೇವರ ಸಂಬಂಧವಾಗಿ ನಡೆಸುವ ಕಾರ್ಯಗಳಲ್ಲಿರುವ ಅರಬಿ ಶಬ್ದಗಳನ್ನು ತೆಗೆದು ಹಾಕಿ ತುರ್ಕಿ ಭಾಷೆಯಲ್ಲಿಯೇ ಉಪಯೋಗಿಸಲಾರಂಭಿಸಿದರು. 'ಅಲ್ಲಾಹೋ' ಎಂಬ ಪ್ರಾರ್ಥನೆಯ ಶಬ್ದವನ್ನು ತೆಗೆದು ಯಾ 'ತಾರೊ' ಎಂಬ ತುರ್ಕಿ ಶಬ್ದವನ್ನು ಪಯೋಗಿಸಿದರು.

ಸಾವಿರಾರು ವರುಷಗಳ ಪೂರ್ವದಲ್ಲಿ ಬೆಳೆದು ದೇಶದವರಿಯುಕ್ತ ಕಂಡ ಆಗಿನ ಆಚಾರವಿಚಾರಗಳಿಗೇನೇ ನಾವೇಕೆ ಕಟ್ಟಬೀಳಬೇಕು? ಈಗ ನಮಗಿರುವ ಅನಾನುಕೂಲಗಳಾವುವು? ನಮ್ಮ ಈಗಿನ ಜೀವನವು ಹಿಂದಿನ ಗ್ರಂಥಗಳನ್ನು ನೋಡಿ ನಡೆದರೆ ಸಾಗುವುದೇ? ತಾತನ ಮಾತ್ರೆಯಾದರೇನು? ಮೊಮ್ಮಗನ ರೋಗವನ್ನು ಕಡೆಯವದಾಗಿರಬೇಕಲ್ಲವೆ? ಎಂದು ತರುಣ ತುರ್ಕರು ಯೋಚಿಸಿ ಸ್ತ್ರೀಯರಿಗಿದ್ದ ಪಾರತಂತ್ರ್ಯವನ್ನು ಮೊದಲು ತೆಗೆದುಹಾಕಿದರು. ಪರದೆಯಲ್ಲಿರುವ ಸ್ತ್ರೀಯರು ಹೊರಗೆ ಬಂದು ಶಸ್ತ್ರಗಳನ್ನು ಕೂಡಾ ಹಿಡಿಯಲು ಸಮರ್ಥರಾದರು. ರಾಜಕಾರಣದ ಸೂತ್ರವನ್ನು ಹಿಡಿದರು.

ಸ್ತ್ರೀಯರ ಮುಖವನ್ನು ಪರಪುರುಷರು ನೋಡಲೇಬಾರದೆಂದಿದ್ದ ಆ ಹಳೆ ರೂಢಿಯನ್ನು ಕಿತ್ತೊಗೆದು ಅಲ್ಲಲ್ಲಿ ಸ್ತ್ರೀಯರ ನೃತ್ಯ ಶಾಲೆಗಳನ್ನು ಏರ್ಪಡಿಸಿದರು. ಕೆಮಲ್ ಪಾಶಾರವರು ಈ ನಾಟ್ಯ ಸಮ್ಮೇಲನದಲ್ಲಿ ಸ್ವಂತ ಸೇರಿ ಐರೋಪ್ಯರ ಪದ್ಧತಿಗಳನ್ನನುಸರಿಸಿದರು. ಖುರಾನದಲ್ಲಿದ್ದ ಅನೇಕ ಸಾಮಾಜಿಕ ನಿಯಮ ನಿರ್ಬಂಧಗಳು ತಮಗೆ ಈಗ ಸರಿಯಲ್ಲವೆಂದು ಅವುಗಳನ್ನು ತೆಗೆದುಹಾಕಿ ಸ್ವಿಟ್ಸರ್ಲಂಡ್, ಇಟಾಲಿ, ಜರ್ಮನ್ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿರುವ ಶಾಸನಗಳನ್ನು ತಮ್ಮಲ್ಲಿ ಆಚರಣೆಗೆ ತಂದರು.

ಹಿಂದುಗಳ ವೇದಗಳನ್ನು ಓದುವುದು ಅನೇಕ ಮಹಮ್ಮದಿಯರಿಗೆ ಅಧರ್ಮವೆಂದು ತೋರುತ್ತಿದೆಯಷ್ಟೆ. ಆದರೆ ತುರ್ಕಿಸ್ಥಾನದ ವಿಶ್ವವಿದ್ಯಾಲಯದಲ್ಲಿ ವೇದಗಳ ಅಭ್ಯಾಸ ನಡೆದಿದೆ. ಆ ಧಾರ್ಮಿಕ ವಿಷಯವು ಇಷ್ಟು ಸ್ವಾತಂತ್ರ್ಯವುಳ್ಳದ್ದಾಗಿದೆ. ಧರ್ಮವು ವ್ಯಕ್ತಿಯ ಮನೋವೃತ್ತಿಗನುಗುಣವಾಗಿರಬೇಕೆಂಬುದು ತುರ್ಕಿಗೂ ಮಾನ್ಯವಾಗಿದೆ.

ಈ ಪ್ರಕಾರ ತರುಣ ತುರ್ಕಿಯು ರಾಜಪ್ರಭುತ್ವವನ್ನು ಕಿತ್ತೊಗೆದು, ಧರ್ಮಾಧಿಕಾರಿಗಳ ಸ್ವಾಮಿತ್ವವನ್ನು ತಳ್ಳಿ, ಸಾಮಾಜಿಕ ಸ್ವಾತಂತ್ರ್ಯವನ್ನು ಸಕಲರಿಗೂ ಉಂಟುಮಾಡಿ ಕೊಟ್ಟು ತುರ್ಕಿಯ ಸಂಸ್ಕೃತಿಯನ್ನು ಜೀರ್ಣೋದ್ಧಾರ ಮಾಡಿರುವುದರಿಂದ ಈಗ ಇದು ಪ್ರಬಲ ರಾಷ್ಟ್ರವಾಗಿದೆ. ಇಷ್ಟೆಲ್ಲ ಮಹತ್ಕಾರ್ಯಗಳನ್ನು ಕೇವಲ ೧೫ ವರುಷಗಳಲ್ಲಿಯೇ ಕೆಮಲ್ ಪಾಶಾರವರು ಮಾಡಿರುವುದರಿಂದ ಇವರು ಜಗತ್ತಿನ ಮಹಾ ವಿಭೂತಿಗಳಲ್ಲೊಬ್ಬರಾಗಿದ್ದಾರೆ.

ಮೊದಲು ಯಾರಿಗೆ ಧರ್ಮ ಲಂಡರೆಂದು ಹೇಳುತ್ತಿದ್ದರೋ ಅಂಥ ಕೆಮಲ್ ಪಾಶಾರವರಿಗೇನೇ ಈಗ ರಾಷ್ಟ್ರ ಸಂವರ್ಧಕನೆಂದೂ ಮಹಾವಿಭೂತಿಯೆಂದೂ ಹೇಳುತ್ತಿದ್ದಾರೆ. ರೂಢಿಯ ಕೊಳಚೆಯಲ್ಲಿ ಬಿದ್ದು ಬಳಲುತ್ತಿರುವ ಜನಾಂಗವನ್ನು ಮೇಲಕ್ಕೆತ್ತಿದ ಬುದ್ಧ, ಕ್ರೈಸ್ತ, ಬಸವ ಮೊದಲಾದ ಪ್ರಾಚೀನ ವಿಭೂತಿಗಳಾಗಲಿ ಲೆನಿನ್, ಮುಸೋಲಿನಿ, ಕೆಮಲ್ ಪಾಶಾ, ಗಾಂಧಿ ಮೊದಲಾದ ಈಗಿನ ಮಹಾ ಪುರುಸರಾಗಲಿ ಮೊದಲು ಅಜ್ಞರಿಂದ ಅಸ್ಪೃಶ್ಯಗಳೆಯಲ್ಪಟ್ಟೇ ಅನಂತರ ಪೂಜಿಸಲ್ಪಡುತ್ತಿದ್ದಾರೆ.

ಹಿಂದು ಸಮಾಜವು ತನ್ನ ನಾಶಕ್ಕೆ ಕಾರಣವಾಗಿರುವ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ದೋಷಗಳನ್ನು ಈಗಲಾದರೂ ದೂರವಾಡುವುದೆ? [ಸಂಪಾದಕ.]

ಶಾ. ಶ. ೧೮೫೬ ನೆಯ ಜ್ಯೇಷ್ಠ ಶು|| ೬ ಸೋಮವಾರ.

ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲ.

ಬಾಳೆಹಳ್ಳಿಯ ಈಗಿನ ಶ್ರೀಗಳು ಬೆಂಗಳೂರಿಗೆ ಬಂದ ನಂತರ ಶ್ರೀ ಬಸವಾದಿ ಪ್ರಮಥರ ವಿಷಯದಲ್ಲಿರುವ ಅವರ ಅಭಿಪ್ರಾಯವನ್ನು ಅವರ ಪ್ರಕಟನೆಯಿಂದಲೇ ತಿಳಿದುಕೊಳ್ಳಲು ಅನೇಕರು ನಾನಾ ರೀತಿಗಳಲ್ಲಿ ಪ್ರಯತ್ನಿಸಿದುದು ಫಲಕಾರಿಯಾಗದಿದ್ದರೂ ಅವರ ಅಭಿಪ್ರಾಯವೇನೆಂಬುದನ್ನು ಗೊತ್ತುಮಾಡುವಷ್ಟಾದರೂ ಸಂಭಾಷಣೆಗಳು ಶ್ರೀಗಳಲ್ಲಿ ಜರುಗಿ ಅನ್ಯರ ಪ್ರಕಟನೆಗಳು ಪ್ರಕಟವಾದುದು ಎಷ್ಟೋ ಅನುಕೂಲವೆಂದೇ ಹೇಳಬೇಕು. ಆದುದರಿಂದ ಶ್ರೀಗಳ ಅಭಿಪ್ರಾಯ ಇಷ್ಟು ಮಟ್ಟಿಗಾದರೂ ಬಹಿರಂಗವಾಗಲು ಕಾರಣರಾದ ಈ ಸಂಭಾಷಣೆಗಾರರನ್ನು ಅಭಿನಂದಿಸದಿರಲಾರೆವು.

ಮೈಸೂರಿನ ಶ್ರೀಯುತ ಪುಟ್ಟಸ್ವಾಮಿಯವರು ತಾ. ೨-೬-೩೪ ನೆಯ ದಿವಸ ಶ್ರೀಗಳಲ್ಲಿ ಸಂಭಾಷಣೆ ಮಾಡಿದ ಸಂಗತಿಯೆಂದು ತಾರೀಖು ೪-೬-೩೪ನೆಯ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾದುದನ್ನು ನಾವು ಕಳೆದವಾರದ ಸಂಚಿಕೆಯಲ್ಲಿ ಪ್ರಕಟಿಸಿದ್ದೇವಷ್ಟೆ. ಆ ವಿಷಯವಾಗಿ ಬೆಂಗಳೂರಿನ ಪ್ರಜಾಬಂಧು ಪತ್ರಿಕೆಯ ಸಂಪಾದಕರಾದ ಶ್ರೀ ವೈ. ಕೃಷ್ಣಪ್ಪನವರು ಶ್ರೀಗಳ ಸಂಗಡ ಸಂಭಾಷಣೆ ಮಾಡಿದುದನ್ನು ಇದೇ ಪತ್ರಿಕೆಯ ಬೇರೊಂದು ಕಡೆ ಕೊಟ್ಟಿದೆ. ಮತ್ತು ಅದೇ ವಿಚಾರವಾಗಿ ಬೆಂಗಳೂರಿನ ವೀರಕೇಸರಿ ಪತ್ರಿಕೆಯಲ್ಲಿ ಪ್ರಕಟವಾದ ಪ್ರತ್ಯಕ್ಷದರ್ಶಿಯ ಲೇಖನಾಂಶವನ್ನೂ ಇದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಗಿದೆ. ಈ ಪ್ರಕಾರ ಪ್ರಕಟವಾದ ಮೂರು ಲೇಖನಗಳಿಂದ ಶ್ರೀಗಳು ಶ್ರೀ ಬಸವಾದಿ ಪ್ರಮಥರನ್ನು ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲವೆಂದೇ ಗೊತ್ತಾಗುತ್ತದೆನ್ನಬಹುದು.

ಶ್ರೀ ಬಸವೇಶನು ಮಹಾ ಶಿವಭಕ್ತನೂ, ಮಹಿಮನೂ ವೀರಶೈವ ಮತೋದ್ಧಾರಕನೂ ಆಗಿದ್ದಾನೆಂಬುದು ಶ್ರೀಗಳಿಗೆ ಮಾನ್ಯವಿದೆಯೆಂದು ಶ್ರೀ. ಪುಟ್ಟ ಸ್ವಾಮಿಯವರ ಮತ್ತು ಶ್ರೀ. ಕೃಷ್ಣಪ್ಪನವರ ಸಂಗಡ ನಡೆದ ಶ್ರೀಗಳ ಸಂಭಾಷಣೆಯಿಂದ ಸ್ಪಷ್ಟವಾಗುತ್ತದೆ. ಆದರೆ ಬಸವೇಶನು ಅಲಿಂಗಿಗಳಿಗೆ ಲಿಂಗಧಾರಣೆ ಮಾಡಿದಂತೆ ಬಾಳೆಹಳ್ಳಿ ಶ್ರೀಗಳು ತಾವೂ ಮಾಡುತ್ತೇವೆಂದು ಒಪ್ಪಿರುವುದಾಗಿ ಶ್ರೀ ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿದೆ. ಈ ಸಂಗತಿಯು ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿಲ್ಲ. ಇದನ್ನು ಇವರು ಕೇಳಲಿಲ್ಲವೋ ಅಥವಾ ಶ್ರೀ. ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿ ಹೊಸದಾಗಿ ಸೇರಿಸಿದ್ದಾಗಿದೆಯೋ ತಿಳಿಯದು.

ಇದರಂತೆಯೇ ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿ ಇನ್ನೊಂದು ಮುಖ್ಯ ಸಂಗತಿಯೇ ಇಲ್ಲದಾಗಿದೆ. ಬಸವೇಶನು ತಮಗೆ ಪೂಜ್ಯನೆಂದು ಆತನನ್ನು ಪುರಸ್ಕರಿಸುವುದಿಲ್ಲವಾಗಿ ಶ್ರೀಗಳು ಹೇಳದರೆಂದು ಶ್ರೀ. ಪುಟ್ಟಸ್ವಾಮಿಯವರ ಸಂಭಾಷಣೆಯಲ್ಲಿದೆ. ಈ ಸಂಚಿಕೆಯಲ್ಲಿ ಪ್ರಕಟವಾದ ವೀರಕೇಸರಿಯಲ್ಲಿಯ ಲೇಖನದಿಂದಲೂ ಈ ಅಭಿಪ್ರಾಯವು ದೃಢವಾಗುತ್ತದೆ. ಆದರೆ ಶ್ರೀ. ಕೃಷ್ಣಪ್ಪನವರ ಸಂಭಾಷಣೆಯಲ್ಲಿ ಈ ಪ್ರಸಂಗವೇ ಇಲ್ಲದಿದ್ದುದರಿಂದ ಸಂಶಯಕ್ಕೆ ಆಸ್ಪದವಾಗುವುದು.

ಆದುದರಿಂದಲೇ ನಾವು ಕಳೆದ ವಾರವೇ ಶ್ರೀ. ಪುಟ್ಟಸ್ವಾಮಿಯವರು ತಾವೇ ತಮ್ಮ ಸಂಗಡ ನಡೆದ ಸಂಭಾಷಣೆಯನ್ನು ಪ್ರಕಟಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದೆವು. ಈಗಲಾದರೂ ಪುನಃ ಪ್ರಾರ್ಥಿಸಿಕೊಳ್ಳುತ್ತೇವೆ. ಮತ್ತು ಆ ತಮ್ಮ ಪ್ರಕಟನೆಯನ್ನು ಶ್ರೀಗಳವರಿಗೆ ರಜಿಸ್ಟರ್ ಮೂಲಕ ಕಳುಹಿಸಿಕೊಡಬೇಕಾಗಿಯೂ ನಮ್ಮ ಕೋರಿಕೆ. ಏಕೆಂದರೆ, ಶ್ರೀಗಳಿಗೆ ಯಾವ ವರ್ತಮಾನ ಪತ್ರಿಕೆಗಳನ್ನು ಓದುವ ಅಭ್ಯಾಸವಿಲ್ಲವಂತೆ. ಅವರು ಪತ್ರಿಕೆಗಳನ್ನು ಓದುವುದಿಲ್ಲವಂತೆ. ಎಂದಮೇಲೆ ಪುಟ್ಟಸ್ವಾಮಿಯವರು ಪ್ರಕಟಿಸಿದ ಸಂಭಾಷಣೆಯು ಸತ್ಯವೋ ಮಿಥ್ಯವೋ ಎಂಬುದು ಶ್ರೀಗಳಿಗೆ ಗೊತ್ತಾಗುವದೆಂತು?

ಶ್ರೀಗಳು ಈ ಕಾಲದಲ್ಲಿ ಅದರಲ್ಲಿಯೂ ತಾವು ಗುರುಗಳೆಂದು ಸಂಚರಿಸುತ್ತ ಒಂದು ಮತದಲ್ಲಿ ಕೋಲಾಹಲವನ್ನುಂಟುಮಾಡಲು ಕಾರಣರಾಗಿರುವಾಗ ಪತ್ರಿಕೆಗಳನ್ನು ಓದದಿರುವುದು ಶುಂಬಾ ಅನುಚಿತವು. ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಬಸವಾದಿ ಪ್ರಮಥರ ಸಂಬಂಧವಾಗಿ ಅತಿ ನಿಂದ್ಯವಾದ ಲೇಖನಗಳು ಪ್ರಕಟವಾಗುತ್ತಿರುವುದನ್ನು ಶ್ರೀಗಳು ಓದಿಲ್ಲವಷ್ಟೆ! ತಮ್ಮಿಂದ ಪೋಷಿತವಾದ ಮತ್ತು ತಮ್ಮ ಆಚಾರ್ಯವರ್ಗದ ಹೆಸರಿನಿಂದ ಮೆರೆಯುವ ಪತ್ರಿಕೆಯನ್ನು ಕೂಡಾ ಓದದೆ ಹೀಗೆ ಕಣ್ಣುಮುಚ್ಚಿಕೊಂಡು ಅನ್ಯರ ಹೇಳಿಕೆಯಂತೆ ನಡೆಯುತ್ತ ಬಂದುದರಿಂದಲೇ ಇಷ್ಟೆಲ್ಲಾ ಅನರ್ಥಕ್ಕೆ ಗುರಿಯಾಗಿರಬೇಕು. ಇಲ್ಲವೆ ನಾವು ಯಾವ ಪತ್ರಿಕೆಯನ್ನೂ ಓದುವುದಿಲ್ಲವೆಂದು ಹೇಳುವುದಾದರೂ ಸುಳ್ಳಿರಬೇಕಲ್ಲವೆ?

ಶ್ರೀ ಬಸವೇಶನು ವೀರಶೈವ ಮತಸ್ಥಾಪನಾಚಾರ್ಯನಲ್ಲವೆಂದೇ ಶ್ರೀಗಳು ಶ್ರೀ. ಕೃಷ್ಣಪ್ಪನವರ ಸಂಗಡ ಮಾಡಿದ ಸಂಭಾಷಣೆಯಲ್ಲಿ ಹೇಳಿದ್ದಾರೆ. ಆದುದರಿಂದಲೇ ಮತಾಚಾರ್ಯರಾದ ತಾವು ಬಸವಾದಿ ಪ್ರಮಥರನ್ನು ಪೂಜ್ಯರನ್ನಾಗಿ ಪುರಸ್ಕರಿಸುವುದಿಲ್ಲವೆಂದು ಶ್ರೀ. ಪುಟ್ಟಸ್ವಾಮಿಯವರ ಸಂಗಡ ಮಾಡಿದ ಭಾಷಣದಲ್ಲಿ ಹೇಳಿರಬೇಕು. ಬಸವೇಶನು ಎಷ್ಟಾದರೂ ಭಕ್ತ. ನಾವು ಹೇಗಿದ್ದರೂ ಗುರುಗಳು. ಎಂದಮೇಲೆ ಆ ಭಕ್ತನನ್ನು ಗುರುಗಳಾದ ನಾವು ಪೂಜ್ಯನೆಂದು ಪುರಸ್ಕರಿಸುವುದು ಹೇಗೆ? ಎಂಬುದೇ ಶ್ರೀಗಳ ಅಭಿಪ್ರಾಯವೆಂದು ತಿಳಿಯಲು ಆಡ್ಡಿಯಿಲ್ಲ.

ವೀರಶೈವರಲ್ಲಿ ಬಸವೇಶನನ್ನು ಯಾರು ಹೀಗೆ ತಮಗೆ ಪೂಜ್ಯನಲ್ಲವೆಂದು ತಿಳಿಯುತ್ತಾರೆಯೋ ಅವರು ನಿಜವಾದ ವೀರಶೈವ ಮತೀಯರೇ ಅಲ್ಲ. ಆದುದರಿಂದ ಅಂಥವರು ವೀರಶೈವ ಮತದ ಗುರುಪೀಠವನ್ನೇರಲಿಕ್ಕಾಗಲಿ, ಅಥವಾ ವೀರಶೈವರ ಗುರುಗಳೆಂದು ಹೇಳಿಕೊಳ್ಳುತ್ತ ಸಂಚರಿಸಲಿಕ್ಕಾಗಲಿ ಅರ್ಹರಲ್ಲ. ನಿಜವಾದ ವೀರಶೈವರು ಇಂಥವರನ್ನು ಹೇಗೆ ತಾನೆ ಪೂಜ್ಯರೆಂದು ತಿಳಿಯುವರು?

ವೀರಶೈವರ ಕರ್ತವ್ಯ.

ಶ್ರೀ ಬಸವಾದಿ ಪ್ರಮಥರ ವಿಷಯದಲ್ಲಿರುವ ತಮ್ಮ ಅಭಿಪ್ರಾಯವನ್ನು ಬಾಳೆಹಳ್ಳಿ ಶ್ರೀಗಳು ಹೇಳಿದಂತಾಯಿತಷ್ಟೆ. ಶ್ರೀ ಬಸವಾದಿ ಪ್ರಮಥರನ್ನು ತಾವು ನಿಂದಿಸುವುದೂ ಇಲ್ಲ; ಪೂಜಿಸುವುದೂ ಇಲ್ಲ. ಎಂಬುದೇ ಅವರ ಅಭಿಪ್ರಾಯದ ಮುಖ್ಯಾಂಶ. ಇಂತಹ ಶ್ರೀಗಳ ವಿಚಾರವಾಗಿ ವೀರಶೈವರು ಮುಂದೆ ಮಾಡಬೇಕಾದು ದೇನು?

ಪ್ರಮಥರನ್ನು ನಿಂದಿಸುವದಿಲ್ಲವಷ್ಟೆ. ಅಷ್ಟೇ ಸಾಕು. ಪೂಜಿಸಲಿ, ಪೂಜಿಸದಿರಲಿ, ಅವರ ಪಾಪ ಪುಣ್ಯಗಳಿಗೆ ಅವರೇ ಭಾಗಿಗಳು, ನಾವು ಹಿಂದಿನಿಂದ ನಡೆದುಕೊಂಡು ಬಂದಂತೆ ಅವರನ್ನು ಗುರುಗಳೆಂದೇ ಭಾವಿಸಿ ಪೂಜಿಸಿದರಾಯಿತು ಎಂದು ಕೆಲವರು ಯೋಚಿಸಬಹುದು. ಕೆಲವರಾದರೋ, ಶ್ರೀಗಳ ಈ ಅಭಿಪ್ರಾಯ ಸರಿಯಲ್ಲ ಬಸವೇಶನನ್ನು ಇವರೇಕೆ? ಅನ್ಯ ಮತೀಯರು ಕೂಡಾ ಮಹಾ ಶಿವ ಭಕ್ತ, ಮಹಿಮ, ಎಂಬುದಾಗಿ ಅನೇಕ ರೀತಿಗಳಿಂದ ಇವರಿಗಿಂತಲೂ ಹೆಚ್ಚಾಗಿ ಗೌರವಿಸುತ್ತಾರೆ. ಹಾಗೆ ಇವರೂ ಗೌರವಿಸಿ ಪೂಜಿಸದಿದ್ದರೆ ಇವರನ್ನು ಅನ್ಯಮತೀಯರೆಂದೇ ತಿಳಿದು ನಮ್ಮ ಗುರುಗಳಲ್ಲವೆಂದೇ ಅವರಿಗೆ ಸ್ಪಷ್ಟ ತಿಳಿಸೋಣವೆಂದು ಯೋಚಿಸಬಹುದು. ಮತ್ತೆ ಕೆಲವರು ಬಸವೇಶನನ್ನು ಪೂಜ್ಯನೆನ್ನಾಗಿ ತಿಳಿಯದವರು ಅನ್ಯಮತೀಯರಾಗುವ ಕಾರಣ ನಮ್ಮ ಗುರುಪೀಠದ ಮೇಲೆ ಇವರಿರಲು ಅರ್ಹರಲ್ಲವೆಂದು ನ್ಯಾಯಸ್ಥಾನದಲ್ಲಿ ವ್ಯಾಜ್ಯವನ್ನು ಹೂಡಬಹುದು. ಈ ಸುದ್ದಿಯನ್ನೇ ಕಿವಿಯಲ್ಲಿ ಹಾಕಿಕೊಳ್ಳದವರೂ ಕೆಲವರಿರಬಹುದು.

ಈ ಪ್ರಕಾರ ನಾಲ್ಕು ವಿಧ ಅಭಿಪ್ರಾಯಗಳಲ್ಲಿ ಯಾವುದು ವಿಹಿತ? ಹೇಗೆ ನಡೆಯುವುದು ವೀರಶೈವ ರಕ್ಷಣೆಗೆ ಅವಶ್ಯಕ? ಈಗಿನ ಶ್ರೀ ಬಾಳೆಹಳ್ಳಿ ಸ್ವಾಮಿಗಳು ವೀರಶೈವ ಸಮಾಜದಿಂದ ಆರಿಸಲ್ಪಟ್ಟವರು. ಹಾಗೆ ಆರಿಸಲು ಮೈಸೂರು ಮಹಾರಾಜಾ ಸರಕಾರದವರು ಅಪ್ಪಣೆಯನ್ನು ಕೊಟ್ಟಿದ್ದಾರೆ. ಆದಕಾರಣ ಇವರ ಗುರುತ್ವವು ರಾಜ ಶಾಸನ ಪದ್ಧತಿಯಿಂದಲೂ ಸಾರ್ವಜನಿಕವಾಗಿಯೇ ನಿರ್ದೇಶಗೊಳಿಸಲ್ಪಟ್ಟಿದೆ. ಶ್ರೀಗಳು ಹಲಸೂರಿನ ತಮ್ಮ ಭಾಷಣದಲ್ಲಿ ಕೂಡಾ ಈ ಸಂಗತಿಯನ್ನು ಹೇಳಿದ್ದಾರೆ. ಆದ ಕಾರಣ ಬಸವೇಶನನ್ನು ಪೂಜ್ಯನೆನ್ನಾಗಿ ಪುರಸ್ಕರಿಸದವರು ವೀರಶೈವರೇ ಆಗುವುದಿಲ್ಲವಾದುದರಿಂದ ಈಗಿನ ಬಾಳೆಹಳ್ಳಿ ಶ್ರೀಗಳವರನ್ನು ನಾವು ಗುರುಗಳೆಂದು ಪುರಸ್ಕರಿಸುವುದಿಲ್ಲವಾಗಿ ಮೈಸೂರು ಮಹಾರಾಜಾ ಸರಕಾರಕ್ಕೂ, ಶ್ರೀಗಳಿಗೂ ಅಲ್ಲಲ್ಲಿ ಸಭೆಸೇರಿ ಸ್ಪಷ್ಟವಾಗಿ ತಿಳಿಸಬೇಕು. ಇದೇ ವೀರಶೈವ ಮತಾಭಿಮಾನಿಗಳ ಪ್ರಥಮ ಕರ್ತವ್ಯವು.

ಬಾಳೆಹಳ್ಳಿ ಶ್ರೀಗಳು ಬೆಂಗಳೂರಿಗೆ ಬರುವಾಗ ಅಲ್ಲಿಯ ವೀರಶೈವ ಮತಾಭಿಮಾನಿಗಳು ಅಸಹಕಾರದ ಮೂಲಕ ಅವರ ಗುರುತ್ವವನ್ನು ನಿರಾಕರಣ ಮಾಡಿಲ್ಲವೆ? ಬಾಳೆಹಳ್ಳಿ ಶ್ರೀಗಳ ಅಭಿಪ್ರಾಯದಂತೆಯಾದರೂ ಬಸವೇಶನು ವೀರಶೈವ ಮತೋದ್ಧಾರಕನಷ್ಟೆ. ಅಂತಹ ಮತೋದ್ಧಾರಕನೇ ಇವರಿಗೆ ಪೂಜ್ಯನಲ್ಲದ ಮೇಲೆ ಮತ ವಿರೂಪಗೊಳಿಸುವ ಇವರು ನನಗೆ ಹೇಗೆ ತಾನೆ ಪೂಜ್ಯರಾಗುವರು? ಇವರನ್ನು ನಿಜವೀರಶೈವ ಮತಾಭಿಮಾನಿಗಳು ಹೇಗೆ ತಾನೆ ಗುರುವೆಂದು ಪುರಸ್ಕರಿಸುವರು?

ತೀವುದ್ರಂಥಾಪುರಿ ಜಗದ್ಗುರುಗಳೊಡನೆ ಸಂಭಾಷಣೆ.

ಬೆಂಗಳೂರಲ್ಲಿ ಪ್ರಕಟವಾಗುವ 'ಪ್ರಜಾಬಂಧು' ಎಂಬ ದಿನಪತ್ರಿಕೆಯ ಜೂನ್ ೧೧ನೆಯ ತಾರೀಖಿನ ಸಂಚಿಕೆಯಲ್ಲಿ ಈ ಪತ್ರಿಕೆಯ ಸಂಪಾದಕರಾದ ಶ್ರೀ. ವೈ. ಕೃಷ್ಣಪ್ಪನವರು ತಾವು ಬಾಳೆಹಳ್ಳಿ ಶ್ರೀಗಳನ್ನು ತಾ. ೯ನೆಯ ರವಿವಾರ ಸಾಯಂಕಾಲ ಶ್ರೀ. ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಸಂದರ್ಶಿಸಿ ಸಂಭಾಷಣೆ ಮಾಡಿದ ಸಂಗತಿಯನ್ನು ಮೇಲಿನ ಶಿರೋಲೇಖನದಲ್ಲಿ ಈ ಪ್ರಕಾರ ಪ್ರಕಟಿಸಿದ್ದಾರೆ.

"ಈ ತಿಂಗಳು ೪ನೇ ತಾರೀಖಿನ ಸೋಮವಾರ ಸ್ಥಳೀಯ ಪತ್ರಿಕೆಗಳಲ್ಲಿ ವೈಸೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಮೆ. ಬಿ. ಎಸ್. ಪುಟ್ಟ ಸ್ವಾಮಿಯವರು ಪ್ರಕಟಿಸಿದ್ದರ ವಿಷಯವಾಗಿ ಶ್ರೀಗಳು ಹೀಗೆ ಅಪ್ಪಣೆ ಕೊಡಿಸಿದರು—ನಾವು ಯಾವ ವರ್ತಮಾನ ಪತ್ರಿಕೆಗಳನ್ನೂ ಓದುವ ಅಭ್ಯಾಸವುಳ್ಳವರಾಗಿಲ್ಲ. ಆದರೆ ನಮ್ಮ ಸಂಬಂಧವಾಗಿ ಮಿ. ಪುಟ್ಟಸ್ವಾಮಿಯವರು ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಗತಿ ನಮ್ಮ ದರ್ಶನಕ್ಕೆ ಬಂದಿದ್ದ ಭಕ್ತರು ಅರಿಕೆಮಾಡಿಕೊಂಡರು.

ಈ ಪುಟ್ಟಸ್ವಾಮಿಯವರೇ ಮೊದಲಾದವರು ಈ ತಿಂಗಳು ೨ನೆಯ ತಾರೀಖಿನ ದಿನ ಆಗಮಿಸಿದಾಗ ಶ್ರೀ ಬಸವೇಶ್ವರನು ಮಹಾ ಭಕ್ತನೆಂದೂ, ಶರಣನೆಂದೂ, ಮತೋದ್ಧಾರಕನೆಂದೂ, ಅನೇಕ ಪವಾಡಗಳಿಂದ ಮೆರೆದವನೆಂದೂ ಅಪ್ಪಣೆ ಕೊಡಿಸಿದ್ದು ನಿಜ.

ಕಳೆದ ಮೇ ತಿಂಗಳು ೧೧ನೆಯ ತಾರೀಖು ಶುಕ್ರವಾರ ನಡೆಯಿಸಿದ ವಿದ್ವತ್ಸಭೆಯಲ್ಲಿ ಶ್ರೀ ಬಸವೇಶ್ವರನ ವಿಚಾರವನ್ನೆತ್ತಕೂಡದೆಂಬ ಉದ್ದೇಶವೇನೂ ಇರಲಿಲ್ಲವೆಂದೂ ಅಂದಿನ ಭಾಷಣದಲ್ಲಿ ಮತ ಸ್ಥಾಪನಾಚಾರ್ಯರ ವಿಚಾರವಾಗಿ ಮಾತನಾಡಬೇಕಾದ ಸಂಭವವು ಬಂದುದರಿಂದ ಶ್ರೀ ಶಂಕರಾಚಾರ್ಯರು, ಶ್ರೀ ರೇಣುಕಾಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಎಸು ಶ್ರಿಸ್ತ ಮತ್ತು ಮಹಮ್ಮದ ಪೈಗಂಬರ್, ಈ ಮತಸ್ಥಾಪನಾಚಾರ್ಯರ ವಿಷಯವಾಗಿ ಪ್ರತಿಪಾದಿಸಲಾಯಿತು.

ಶ್ರೀ ಬಸವೇಶ್ವರನ ವಿಚಾರವಾಗಿ ಬಹಿರಂಗವಾದ ಪ್ರಕಟನೆಯನ್ನು ಹೊರಡಿಸುವ ಪ್ರಶ್ನೆಗೆ ಶ್ರೀಗಳು ಹೀಗೆ ಅಪ್ಪಣೆ ಕೊಡಿಸಿದರು— ನಾವು ಅನೇಕ ಸಾರ್ವಜನಿಕ ಸಭೆಗಳಲ್ಲಿ ಮಾಡಿದ ಭಾಷಣಗಳಲ್ಲಿ ಬಹಿರಂಗವಾಗಿಯೂ ಮತ್ತು ಪ್ರಕಟನೆಯ ಮೂಲಕವೂ ಶ್ರೀ ಬಸವೇಶ್ವರನ ವಿಚಾರದಲ್ಲಿ ನಮಗಿರುವ ಪ್ರೀತಿ ಗೌರವಗಳನ್ನು ಹೊರಪಡಿಸಿದ್ದಾಗಿದೆ. ಗುರುಗಳಲ್ಲಿ ಭಕ್ತಿಯೂ ಗುರುಗಳ ಮಾತಿನಲ್ಲಿ ನಂಬಿಕೆಯೂ ಇಲ್ಲದವರಿಗೆ ಬಹಿರಂಗವಾಗಿ ಸಾರ್ವಜನಿಕ ಭಾಷಣಗಳಲ್ಲಿಯಾಗಲಿ ಪ್ರಕಟನೆಯ ಮೂಲಕವಾಗಿಯಾಗಲಿ ತಿಳಿಸುವುದರಿಂದ ಫಲವೇನು? ಅಕ್ಷೇಪಣೆ ಮಾಡಬೇಕೆಂದಿರತಕ್ಕವರು ಬೇರೆ ಯಾವುದಾದರೂ ವಿಷಯಗಳನ್ನು ಎತ್ತದೇ ಇರುವುದಿಲ್ಲ. ಇದಕ್ಕೆ ನಾವೇನು ಮಾಡಲಿಕ್ಕೆ ಬರುತ್ತದೆ?

ಶ್ರೀ. ವೈ. ಕೃಷ್ಣಪ್ಪನವರು ಸಂಭಾಷಣೆ ಮಾಡಿದ್ದರಿಂದ ಗೊತ್ತಾದುದು ಮೇಲಿನ ಸಂಗತಿ. ಶ್ರೀಗಳು ತಾ. ೧೧ನೆಯ ದಿನ ದಂಡು ಹಲಸೂರಿನ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರೆಂದು ಈ ಸಂಪಾದಕರು ಅದೇ ಲೇಖನದಲ್ಲಿ ಈ ಪ್ರಕಾರ ತಿಳಿಸಿದ್ದಾರೆ.

"ಶ್ರೀ ಬಸವೇಶ್ವರನು ಭಕ್ತಿ ಭಂಡಾರಿ, ತನ್ನ ತನುಮನಧನಗಳನ್ನು ಗುರುಲಿಂಗ ಜಂಗಮ ಸೇವೆಯಲ್ಲಿ ಸವೆಯಿಸಿ ಶಿವ ಸಾಯುಜ್ಯ ಪದವಿಯನ್ನು ಹೊಂದಿ ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯನ್ನು ಹೊಂದಿರುತ್ತಾನೆ. ಇದಕ್ಕೆಲ್ಲಾ ಗುರುಹಿರಿಯರಲ್ಲಿ ಅತನಿಗಿದ್ದ ಭಕ್ತಿ ಭಂಡಾರವೇ ಕಾರಣ. ರಾಮ, ಕೃಷ್ಣ, ಶಿವ, ಬಸವ ನಾಮಗಳೆಲ್ಲಾ ಒಂದೇ."

ವಿ ವಿ ಧ ವಿ ಷ ಯ .

ಕೃತ್ರಿಮ ಕಾಲುಗಳು.

ಕೃತ್ರಿಮ ಕಣ್ಣುಗಳು ಮತ್ತು ಕೃತ್ರಿಮ ಕಿವಿಗಳಾದಮೇಲೆ ಕೃತ್ರಿಮ ಕಾಲುಗಳೂ ಏಕಾಗಬಾರದು? ಹಾಗಾದರೆ ಇಗೊಳ್ಳಿ. ಕ್ಯಾಲಿಫೋರ್ನಿಯಾದಲ್ಲಿ ಒಬ್ಬ ಶೋಧಕನು ಮುರುಕು ಸಾಯಕಲ್ಲಿನ ವಸ್ತುಗಳನ್ನೆಲ್ಲ ತೆಗೆದುಕೊಂಡು ಅವುಗಳಿಂದ ಕೃತ್ರಿಮ ಕಟ್ಟಿಗೆಯ ಕಾಲುಗಳನ್ನು ಉಂಟುಮಾಡಿದ್ದಾನೆ. ಸಾಯಕಲ್ಲಿನಂತೆಯೇ ನೆಟ್ಟಗೆ ಕುಳಿತುಕೊಳ್ಳಲು ಆಸನ (ಸೀಟ) ಉಂಟು. ಅದರ ಮೇಲೆ ಕುಳಿತು ಕಾಲುಗಳಿಂದ ಪೆಡ್ಲುಗಳನ್ನು ಒತ್ತಬೇಕು. ಈ ಪೆಡ್ಲುಗಳಿಗೂ ಕೃತ್ರಿಮ ಕಾಲುಗಳಿಗೂ ಸಾಯಕಲ್ಲಿನ ಗಾಲಿಗಳಂತೆ ಸರಪಳಿಯಿಂದ ಬದ್ಧವಾದ ಸಂಬಂಧವಿರುವುದರಿಂದ ಗಾಲಿಗಳು ತಿರುಗುವ ಹಾಗೆಯೇ ಕಾಲುಗಳು ಒಂದೊಂದು ಹೆಜ್ಜೆಯನ್ನು ಹಿಡಿಇಡುತ್ತ ಹೋಗುತ್ತವೆ. ಯಂತ್ರದ ರಚನೆಯೇನೂ ಅಂಥಹೊಂಕವಿಲ್ಲ. ಇದರಮೇಲೆ ಕುಳಿತು ನಡೆಯಹತ್ತಿದರೆ ಅವನೊಬ್ಬ ಮರಗಾಲಿನ ಮನುಷ್ಯನು ನಡೆಯುತ್ತಿರುವನೆಂಬಂತೆ ಭಾಸವಾಗುತ್ತಿದೆ. ಬಿದ್ದು ಹೋದ ವಸ್ತುಗಳಿಂದಲೇ ಈ ಪ್ರಕಾರ ಮನೋರಂಜಕ ಶೋಧ ಮಾಡಿದುದು ಅಮೇರಿಕನ್ನರ ಬುದ್ಧಿಮತ್ತೆಯ ನಿದರ್ಶಕವಾಗಿ ಲ್ಲವೇ?

ಶಿಕ್ಷಣದಿಂದ ಧರ್ಮಪರಿವರ್ತನದ ಮೇಲಾದ ಪರಿಣಾಮ.

ತ್ರಿಚನಾಪಲ್ಲಿ ಜಿಲ್ಲೆಯಲ್ಲಿಯ ೩೦೦೦ ಕುಟುಂಬಗಳು ರೋಮ್ಯ ಕ್ಯಾಥೋಲಿಕ್ ಸಂಧವನ್ನು ತ್ಯಜಿಸಿ ಪ್ರಾಟೆಸ್ಟಂಟ್ ಮತವನ್ನು ಸ್ವೀಕರಿಸಿದವು. ಇವರೆಲ್ಲ ಪೂರ್ವದ ಹಿಂದು ದಲಿತ ವರ್ಗದವರೇ ಆಗಿದ್ದರು. ಇವರು ಕ್ರೈಸ್ತೀ ಧರ್ಮವನ್ನು ಸ್ವೀಕರಿಸಿದ್ದರೂ ರೋಮನ್ ಕ್ಯಾಥೊಲಿಕಮತದಲ್ಲಿಯೂ ಇವರಿಗೆ ಕ್ರೈಸ್ತೀ ಅಸ್ಪೃಶ್ಯನೆಂಬ ಕಲಂಕವು ಹೋಗಲಿಲ್ಲ. ತಾವು ಕ್ರೈಸ್ತಿಗಳಾಗಿದ್ದರೂ ತಮ್ಮ ಪೂರ್ವದ ಹಿಂದು ಸಮಾಜದಲ್ಲಿ ತಮಗೆ ಯಾವ ಅವನತಿ ಇದ್ದಿತೊ ಅದು ಇನ್ನೂ ತಮ್ಮ ಬೆನ್ನು ಬಿಡದಿರುವುದನ್ನು ಕಂಡು ಸರ್ವ ಸಮಾನತೆಯ ಸಲುವಾಗಿ ಇವರು ಪ್ರಾಟೆಸ್ಟಂಟ ಮತವನ್ನು ಸ್ವೀಕರಿಸಿದರು. ಆ ಕಾಲಕ್ಕುಂಟಾದ ಸಭೆಯಲ್ಲಿ ದಾಸ ಮಾಣಿಕಮ್ ಎಂಬವರು ತಮ್ಮ ಭಾಷಣದಲ್ಲಿ—ರೋಮನ್ ಕ್ಯಾಥೊಲಿಕರಲ್ಲಿ ಜಾತಿಭೇದವಿದೆ. ಸದ್ಯದ ಶಿಕ್ಷಣ ಪ್ರಸಾರವು ಜನರಲ್ಲಿ ಸಮಾನತೆಯ ಭಾವನೆಯನ್ನು ತಂದು ಕೊಡಹತ್ತಿರುವುದರಿಂದ ಜಾತಿಭೇದವನ್ನವಲಂಬಿಸಲು ಶಕ್ಯವಿಲ್ಲ. ಸಾಮುದಾಯಿಕ ಶಿಕ್ಷಣದಿಂದಲೇ ಮತಪರಿವರ್ತನೆಯು ವಿಪುಲವಾಗಿ ಆಗುತ್ತದೆ. ಗಂಂಕ್ಯೆ ಅಂಂಷ್ಟ ಜನರು ಶಿಕ್ಷಣದಿಂದಲೇ ಮತ ಪರಿವರ್ತನೆ ಮಾಡುತ್ತಾರೆ. ಅದುದರಿಂದ ಮೊದಲು ಶಿಕ್ಷಣ ಕೊಡಿರಿ. ಅಂದರೆ ನಿಮ್ಮ ಧರ್ಮವು ತಾನೇ ಪ್ರಸಾರವಾಗುವದು.

ಹಿಂದುಗಳು ಇನ್ನಾದರೂ ಜಾತಿವಿಶಿಷ್ಟ ಉಚ್ಚ ನೀಚ ಕಲ್ಪನೆಯನ್ನು ಬಿಡುವರೇ? ಅಂದರೆ ಹಿಂದು ಸಮಾಜವು ಇನ್ನೂ ಬಹು ಕಾಲ ಬಾಳೀತು.

ಹಸ್ತಾಕ್ಷರದಿಂದ ಸ್ವಭಾವ ಪರೀಕ್ಷೆ.

ಮನುಷ್ಯನ ಹಸ್ತಾಕ್ಷರದ ಮೇಲಿಂದ ಅವನ ಸ್ವಭಾವವನ್ನು ಪರೀಕ್ಷಿಸುವುದು ಸರ್ವಸಾಮಾನ್ಯವಾದ ವಿಷಯವಾಗಿದ್ದರೂ ಅದನ್ನು ಹೇಗೆ ಪರೀಕ್ಷಿಸಬೇಕೆಂಬುದು ಯಾರಿಗೂ ಗೊತ್ತಿರಲಿಲ್ಲ. ಸದ್ಯಕ್ಕೆ ಹಂಗೇರಿ ದೇಶದ ಒಬ್ಬ ಸಂಶೋಧಕನು ಒಂದು ವಿದ್ಯುತ್ತಿನ ಲೇಖನಿಯನ್ನು ಸಿದ್ಧಪಡಿಸಿದ್ದಾನೆ. ಆ ಲೇಖನಿಯು ಒಂದು ವಿದ್ಯುತ್ತಿನ ಯಂತ್ರಕ್ಕೆ ಜೋಡಿಸಲ್ಪಟ್ಟಿರುವುದರಿಂದ ಆ ಲೇಖನಿಯನ್ನು ತೆಗೆದುಕೊಂಡು ಬರೆಯುವವನ ಸ್ವಭಾವವು ಅವನ ಅಕ್ಷರಗಳ ಹೊಳವು, ಲೇಖನಿಯ ಮೇಲೆ ಉಂಟಾಗುವ ಆಘಾತ ಮತ್ತು ಎಳತಗಳು ಆ ಯಂತ್ರದಲ್ಲಿ ಒಡಮೂಡಿ ಆ ಮನುಷ್ಯನ ಸ್ವಭಾವವು ಕಂಡುಬರುತ್ತದೆ. ಈ ಯಂತ್ರದಲ್ಲಿ ಹಸ್ತಾಕ್ಷರಗಳ ಅತಿ ಸೂಕ್ಷ್ಮ ಪೃಥಕ್ಕರಣವಾಗುತ್ತಿರುವುದರಿಂದ ಬರೆಯುವವನ ಭಾವನೆಗಳೆಲ್ಲ ಸ್ಪಷ್ಟವಾಗಿ ಅದರಲ್ಲಿ ಪ್ರಕಟವಾಗುತ್ತವೆ.

ಇದಕ್ಕಿಂತಲೂ ಆವುದೊಂದು ಕಾಗದದ ಮೇಲೆ ಆವುದೊಂದು ಲೇಖನಿಯಿಂದ ಬರೆದರೂ ಅದನ್ನು ಸಶಾಸ್ತ್ರೀಯವಾಗಿ ತಿಳಿದುಕೊಳ್ಳುವ ಯುಕ್ತಿಯು ಕಂಡುಹಿಡಿಯಲ್ಪಟ್ಟರೆ ಹೆಚ್ಚು ಹಿತವಾಗಲಿಕ್ಕಿಲ್ಲವೇ?

ಬೇಸಿಗೆಯ ಪ್ರಚಂಡ ತಾಪ.

ಈ ಸಾರೆಯ ಬೇಸಿಗೆಯು ಮದ್ರಾಸ ಪ್ರಾಂತದಲ್ಲಿ ಹಾಹಾಕಾರವನ್ನೇ ಉಂಟುಮಾಡಿದೆ. ಎಷ್ಟೋ ಗ್ರಾಮಗಳಿಗೆ ಬೆಂಕಿ ಹತ್ತಿ ಗ್ರಾಮಗಳ ಒಂದೊಂದು ಭಾಗಗಳೇ ಸುಟ್ಟುಹೋಗಿವೆ. ಬಿಝುವಾಡದಲ್ಲಿ ನೂರಾರು ಮನೆಗಳು ಸುಟ್ಟು ೧೫-೨೦ ಸಾವಿರ ರೂಪಾಯಿಗಳ ಹಾನಿಯಾಗಿದೆ. ನೀರಿನ ಪುರವಠೆಯು ಸಾಕಷ್ಟು ಇಲ್ಲದ ಮೂಲಕ ಬೆಂಕಿಯನ್ನು ನೊಂದಿಸುವುದು ಕಠಿಣವಾಗಿದೆ. ಕೆಲ ಕೆಲವು ಹಳ್ಳಿಗಳಲ್ಲಿಯಂತೂ ಎಲ್ಲಾ ಮನೆಗಳು ಸುಟ್ಟು ಹೋಗಿವೆ. ಉಷ್ಣತೆಯ ಪ್ರಬಲತೆಯನ್ನು ತಡೆಯಲಾರದೆ ಅನೇಕ ಜನ ಮುದುಕರು ಮತ್ತು ತರುಣರು ಸತ್ತರು. ಮಳಲಿ ಪಟ್ಟಣದಲ್ಲಿ ಪಕ್ಷಿಗಳು, ದನಗಳು, ನಾಯಿ, ಬೆಕ್ಕುಗಳು ರಸ್ತೆಗಳ ಮೇಲೆ ಉಷ್ಣತೆಯ ತಾಪಕ್ಕೆ ಬೆಂದು ಸತ್ತು ಬೀಳುತ್ತಿದ್ದವು. ಎಲ್ಲಿ ಪ್ರತಿವರ್ಷ ಬಹಳವೆಂದರೆ ೧೧೫ ಅಂಶಗಳವರೆಗೆ ಉಷ್ಣತೆಯು ಇರುತ್ತಿದ್ದಿತೊ ಅಲ್ಲಿ ಈ ವರುಷ ೧೨೦ ಅಂಶ ಉಷ್ಣಮಾನವಿದ್ದಿತು. ಸ್ವತಃ ಮದ್ರಾಸ ಪಟ್ಟಣದಲ್ಲಿ ಬಿಸಿಲಿನ ಬೆಚ್ಚನ್ನ ಗಾಳಿಯಿಂದ ೧೧೦ ಅಂಶಗಳವರೆಗೆ ಮಾಪಕ ಯಂತ್ರವು ತೋರಿಸಿತು. ಮತ್ತು ೧೧೦ ಅಂಶ ಉಷ್ಣವಿದ್ದದ್ದು ಒಮ್ಮೆಲ್ಲೆಳ ಅಂಶ ಉಷ್ಣಕ್ಕೆ ಬಂದಿತು.

ಪಶು ಪಕ್ಷಿಗಳ ನೀತಿ ಶಾಸ್ತ್ರ.

ಅರಣ್ಯ ಪಶುಗಳಲ್ಲಿಯೂ ಮತ್ತು ಉಳಿದ ಪಶುಪಕ್ಷಿಗಳಲ್ಲಿಯೂ ನೈತಿಕ ಸ್ವಭಾವವಿರುವುದನ್ನೂ ಇಷ್ಟೇ ಅಲ್ಲದೆ ಅವುಗಳ ನೀತಿ ಧರ್ಮವು ಮನುಷ್ಯನ ನೀತಿ ಧರ್ಮಕ್ಕಿಂತ ಅಭಿನ್ನವಾಗಿರುವದನ್ನೂ ಕೇಳಿ ಕೆಲವರಿಗೆ ಆಶ್ಚರ್ಯವೆನಿಸಬಹುದು. ವಿಶ್ವಾಸ, ಪ್ರಾಮಾಣಿಕತೆ, ಭೂತದಯೆ, ಸ್ವಾರ್ಥತ್ಯಾಗ, ಬಂಧುತ್ವ, ಐಕ್ಯ ಮೊದಲಾದ ಗುಣಗಳಲ್ಲಿ ಮನುಷ್ಯ ಪ್ರಾಣಿಗಿಂತ ಅವು ಎಂದೂ ಕಡಿಮೆಯಾಗಲಾರವು. ಅವುಗಳ ನೀತಿಶಾಸ್ತ್ರವನ್ನು ಉಲ್ಲಂಘಿಸುವ ಪ್ರಾಣಿಗಳಿಗೆ ಅವು ಶಿಕ್ಷೆ ಮಾಡದೆ ಬಿಡುವದಿಲ್ಲ. ಬಹುಶಃ ಎಲ್ಲ ಪ್ರಾಣಿಗಳೂ ಹಿಂಡುಗಟ್ಟಿಕೊಂಡು ಬರುತ್ತವೆ. ಅವು ಅವುದೊಂದು ಖಾದ್ಯ ಪದಾರ್ಥದ ಮೇಲೆ ಮುತ್ತಿಗೆ ಹಾಕುವಾಗ ತಮ್ಮೊಳಗಿನ ಒಂದೆರಡು ಪ್ರಾಣಿಗಳನ್ನು ಕಾವಲು ಇಡುತ್ತವೆ. ಕಾವಲಿದ್ದ ಪ್ರಾಣಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅವೆಲ್ಲ ಕೂಡಿ ಕಾವಲಿದ್ದವನ್ನು ಕೊಂದು ಬಿಡುತ್ತವೆ.